ಜನಪದ ಸಾಹಿತ್ಯದಲ್ಲಿ ವರ್ಗ ಸಂಘರ್ಷದ ನೆಲೆಗಳು

(ಲಾವಣಿ, ಕಥನಗೀತೆಗಳನ್ನು ಅನುಲಕ್ಷಿಸಿ)

(ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ರಿಯಾಝ್ ಪಾಷ

ಮಾರ್ಗದರ್ಶಕರು
ಡಾ. ಮಂಜುನಾಥ ಬೇವಿನಕಟ್ಟಿ
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩೨೭೬

೨೦೧೨

486

486

ಜನಪದ ಸಾಹಿತ್ಯದಲ್ಲಿ ವರ್ಗ ಸಂಘರ್ಷದ ನೆಲೆಗಳು

(ಲಾವಣಿ, ಕಥನಗೀತೆಗಳನ್ನು ಅನುಲಕ್ಷಿಸಿ)

ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು
ರಿಯಾಜ್ ಪಾಷ

ಮಾರ್ಗದರ್ಶಕರು
ಡಾ. ಮಂಜುನಾಥ ಬೇವಿನಕಟ್ಟಿ
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩೨೭೬

೨೦೧೨

ಪ್ರಮಾಣ ಪತ್ರ

'ಜನಪದ ಸಾಹಿತ್ಯದಲ್ಲಿ ವರ್ಗಸಂಘರ್ಷದ ನೆಲೆಗಳು' ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ ಪದವಿಗಾಗಿ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು **ಡಾ. ಮಂಜುನಾಥ ಬೇವಿನಕಟ್ಟಿ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಸಂಶೋಧನ ಮಹಾಪ್ರಬಂಧವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಅಥವಾ ಇತರೆ ಯಾವುದೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ
ದಿನಾಂಕ: 15-9-2012

ಸಂಶೋಧಕ
ರಿಯಾಝ್ ಪಾಷ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–583276

ದೃಢೀಕರಣ ಪತ್ರ

ಶ್ರೀ **ರಿಯಾಜ್ ಪಾಷ** ಅವರು **'ಜನಪದ ಸಾಹಿತ್ಯದಲ್ಲಿ ವರ್ಗಸಂಘರ್ಷದ ನೆಲೆಗಳು'** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸಲೆಂದು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಈ ಮಹಾಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಉದ್ದೇಶಗಳಿಗಾಗಲಿ ಇವರು ಬಳಸಿಕೊಂಡಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ
ದಿನಾಂಕ:

ಮಾರ್ಗದರ್ಶಕರು
ಡಾ. ಮಂಜುನಾಥ ಬೇವಿನಕಟ್ಟಿ
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–583276

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಈವರೆಗಿನ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ವಿಧಾನ, ಈವರೆಗಿನ ಅಧ್ಯಯನಗಳ ಸಮೀಕ್ಷೆ

ಪೀಠಿಕೆ:

ಜಾನಪದ ಇಂದು ನಿನ್ನೆಯದಲ್ಲ: ಅದು ಮಾನವನಷ್ಟೇ ಹಳೆಯದು. ಮನುಷ್ಯ ಬದುಕಿಗೆ ಸಂಬಂಧಿಸಿದ ಸಮಸ್ತ ಚಟುವಟಿಕೆಗಳನ್ನು ಒಳಗೊಳ್ಳುವ ಈ ಜಾನಪದ ಬಹುಸುದೀರ್ಘವಾದ ಪರಂಪರೆಯನ್ನು ಹೊಂದಿದ್ದು ಆದಿಯಿಂದ ಇಂದಿನವರೆಗೆ ಸಾಕಷ್ಟು ದಾರಿಯನ್ನು ಕ್ರಮಿಸಿದೆ. ಕನ್ನಡ ಸಾಹಿತ್ಯದಲ್ಲಿ ಲಿಖಿತ–ಅಲಿಖಿತ ಅಥವಾ ಗ್ರಂಥಸ್ಥ–ಕಂಠಸ್ಥವೆಂದು ವಿಭಜಿಸಿ ನೋಡಿದಾಗ ಅಲಿಖಿತ ಪರಂಪರೆಯಿಂದ, ಕಂಠಸ್ಥ ಸಂಪ್ರದಾಯದಿಂದ ಬೆಳೆದು ಬಂದಿರುವುದೇ ಜಾನಪದ. ಈ ಜಾನಪದವನ್ನು ಕಲಾಸಂಪ್ರದಾಯ, ಸಾಹಿತ್ಯಸಂಪ್ರದಾಯವೆಂದು ವಿಭಜಿಸಿ, ಸಾಹಿತ್ಯಸಂಪ್ರದಾಯದಲ್ಲಿ ಶ್ರವ್ಯ ಮತ್ತು ದೃಶ್ಯವೆಂದು ವಿಭಜಿಸಿ, ಶ್ರವ್ಯದಲ್ಲಿ ಗದ್ಯ ಮತ್ತು ಪದ್ಯಗಳೆಂದು ವಿಭಜಿಸಬಹುದು. ಈ ಗದ್ಯಭಾಗದಲ್ಲಿ ಕಥೆ, ಗಾದೆ, ಒಗಟು, ಒಡಪು, ಮುಂತಾದವು. ಪದ್ಯಭಾಗದಲ್ಲಿ ಗೀತೆ, ಗಂಡಸರ ಹಾಡು, ಹೆಣ್ಣುಮಕ್ಕಳ ಹಾಡು ಮತ್ತು ಮಕ್ಕಳ ಹಾಡು ಬರುತ್ತವೆ. ಜನಪದ ಸಾಹಿತ್ಯದ ಪ್ರಮುಖ ಪ್ರಕಾರವಾದ ಈ ಪದ್ಯಗಳು ಗೀತೆಗಳೇ ಆಗಿವೆ. "ಗೀತೆಗಳಿಗೆ ಜನಪದ ಸಾಹಿತ್ಯದಲ್ಲಿ ಸಿಂಹಪಾಲು ಸಲ್ಲುತ್ತದೆ. ಪ್ರಾದೇಶಿಕ ಭಿನ್ನತೆ ಕಂಡುಬರುವುದು ಅವುಗಳಿಗಿರುವ ವಿಶೇಷತೆ. ಅವುಗಳಲ್ಲಿ ಪ್ರಮುಖವಾಗಿ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಮತ್ತು ಕರಾವಳಿ ಕರ್ನಾಟಕವೆಂದು ಮೂರು ಭಾಗ ಮಾಡುತ್ತಾರೆ. ವಿಶಿಷ್ಟ ಅಂಶಗಳನ್ನು ಒಂದಕ್ಕೊಂದು ಭಿನ್ನವಾಗಿ ಕಾಣುತ್ತೇವೆ. ಜೊತೆಗೆ ಅವು ಆಯಾ ಪ್ರದೇಶ, ವ್ಯಕ್ತಿ, ಸಮಾಜದ ಪ್ರತಿನಿಧಿಗಳಾಗಿ ನಿಲ್ಲುತ್ತವೆ."[೧] ಸಮಾಜದಲ್ಲಿ ಧರ್ಮಆಧಾರಿತ ಜೀವನದೃಷ್ಟಿ, ಜಾತಿಪದ್ಧತಿ, ಊಳಿಗಮಾನ್ಯ ವ್ಯವಸ್ಥೆಗಳು ಹಾಸುಹೊಕ್ಕಾಗಿರುವ ವಿಚಾರ ಜಾನಪದ ಅಧ್ಯಯನದಿಂದಾಗಿ ತಿಳಿದು ಬರುತ್ತದೆ.

ಆಯಾ ಶತಮಾನದಲ್ಲಿನ ಸಂಘರ್ಷಯುತವಾದ ಜನಜೀವನದಲ್ಲಿದ್ದಂತಹ ಹೋರಾಟದ ಮನೋಭಾವನೆ, ಆಧ್ಯಾತ್ಮಿಕ ಹಾಗೂ ವಿಚಾರಶೀಲತೆಯಲ್ಲಿನ ಭಿನ್ನತೆ, ಮತಗಳ ನಡುವೆ ನಡೆಯುವ ಘರ್ಷಣೆ, ಚಿಂತನೆ, ಆಶಯ, ಧೋರಣೆ, ಪ್ರತಿಭಟನೆ, ಪ್ರತಿಕ್ರಿಯೆ, ಬದುಕುವಕ್ರಮ, ಕಂಡುಕೊಂಡ ಮಾರ್ಗ, ಭಿನ್ನಾಚರಣೆ, ಭಿನ್ನನಂಬಿಕೆ, ಭಿನ್ನ-ಕಾಲಮಾನದ ಜನರ ಸಂಪ್ರದಾಯ, ಎರಡು ವಿರುದ್ಧ ಬಣಗಳು, ವರ್ಗ,ವರ್ಣ, ಉಳ್ಳವ-ಇಲ್ಲದವ, ಶ್ರೇಷ್ಠ-ಕನಿಷ್ಠ, ಸ್ತ್ರೀ-ಪುರುಷ, ಹೀಗೆ ಜಾನಪದ ಸಾಹಿತ್ಯದ ಯಾವುದೇ ಪ್ರಕಾರವನ್ನು ತೆಗೆದುಕೊಂಡರೂ ವರ್ಗಸಂಘರ್ಷ ಬೇರುಬಿಟ್ಟಿರುವುದು ಗೋಚರಿಸುತ್ತದೆ.

ಸಮಾಜದಲ್ಲಿ ಪ್ರಾರಂಭದಿಂದಲೂ ಜಮೀನ್ದಾರಿ ವ್ಯವಸ್ಥೆಯ ಸ್ವಾರ್ಥಿಗಳು ದುಡಿಯುವ ವರ್ಗದ ಮೇಲೆ ದೌರ್ಜನ್ಯವನ್ನು ಎಸಗಿಕೊಂಡು ಬಂದಿದ್ದಾರೆ. ಇದರ ವಿರುದ್ಧವಾಗಿ ದಲಿತರು, ಕೆಳವರ್ಗದವರು ನಿರ್ಜೀವಗೊಂಬೆಗಳಾಗದೆ, ತಮಗಾದ ಅನ್ಯಾಯದ ವಿರುದ್ಧವಾಗಿ ಪ್ರತಿಕ್ರಿಯಿಸುವ, ರಾಗದ್ವೇಷಗಳ ಪ್ರತಿಮೆಗಳಾಗುವ, ಬದಲಾವಣೆಗೂ ಹಂಬಲಿಸುವ ಮತ್ತು ಹಾತೊರೆಯುವ ವಿಚಾರ ಜಾನಪದ ಅಧ್ಯಯನದಿಂದ ತಿಳಿದು ಬರುತ್ತದೆ. ಆದರೂ ತಮ್ಮನ್ನು ಸುತ್ತುವರಿದ ವಿಷವರ್ತುಲದಿಂದ ಶೋಷಿತ ಜನಾಂಗ ಹೊರಬರಲು ಎಷ್ಟೇ ಬಾರಿ ಪ್ರಯತ್ನಿಸಿದರೂ ಅದು ಕೇವಲ ಕನಸು ಮಾತ್ರವಾಗಿದೆ. ಬಲಗೊಳ್ಳಬೇಕೆಂಬ ಜೀವನ ತೀವ್ರತೆಯು ಬಿಡುಗಡೆಗಾಗಿ ದಲಿತರನ್ನು, ಅಥವಾ ಕೆಳವರ್ಗದವರನ್ನು ಪ್ರಚೋದಿಸುತ್ತದೆಯಾದರೂ ಬೇರುಬಿಟ್ಟ ಅಸಹಾಯಕತೆ ಪ್ರತಿಯೊಂದಕ್ಕೂ ಅಡ್ಡಿಯುಂಟಾಗುತ್ತದೆ.

ಸಂಘರ್ಷವಿರದ ಸಮಾಜವನ್ನು ಕಲ್ಪಿಸಿಕೊಳ್ಳಲೂ ಕೂಡ ಸಾಧ್ಯವಿಲ್ಲ. ಏಕೆಂದರೆ ಸಂಘರ್ಷವೂ ವೇದಗಳ ಕಾಲದಿಂದಲೂ ಇದೆ. ವೇದಗಳ ಕಾಲಘಟ್ಟದಲ್ಲಿ ಕೆಳವರ್ಣಗಳು ಶಿಕ್ಷಣಾವಕಾಶದಿಂದ ವಂಚಿತವಾಗಿದ್ದವು. ತಾತ್ವಿಕವಾಗಿ ಶಿಕ್ಷಣವು ಎಲ್ಲ ದ್ವಿಜರಿಗೂ ಮುಕ್ತವಾಗಿದ್ದರೂ ವೇದಾಧ್ಯಯನ ಬ್ರಾಹ್ಮಣರಿಗೆ ಮಾತ್ರ ಮೀಸಲಾಗಿತ್ತು. ಇದು ಸಹಜವಾಗಿ ಕೆಲವೊಮ್ಮೆ ವರ್ಗಸಂಘರ್ಷಕ್ಕೆ ಎಡೆಮಾಡಿಕೊಡುವಂತಿತ್ತು. ಎಲ್ಲಾ ಕಾಲಘಟ್ಟದಲ್ಲೂ ವರ್ಗಸಂಘರ್ಷ ಒಂದಲ್ಲೊಂದು ರೂಪದಲ್ಲಿ ಪ್ರಕಟಗೊಂಡಿದೆ. ಮೇಲ್ವರ್ಗಕ್ಕೆ ಸೇರಿದ ಜನರು ಕೆಳವರ್ಗದ ಜನರನ್ನು ಎಲ್ಲಾ ರೀತಿಯಲ್ಲೂ ಸಮಾಜದಲ್ಲಿ ಶೋಷಿಸುತ್ತಿರುವುದು ಕಂಡುಬರುತ್ತದೆ. ವಿಪರ್ಯಾಸವೆಂದರೆ ಈ ಸಮಾಜದಲ್ಲಿ ಕೆಳವರ್ಗದ ಜನರಿಗೆ ಸಿಗಬೇಕಾದ ಕನಿಷ್ಠ ಸವಲತ್ತು ಕೂಡ ಲಭಿಸುತ್ತಿಲ್ಲ.

ಶ್ರೀಮಂತವರ್ಗ ಅಥವಾ ಉಳ್ಳವರು, ಸಮಾಜದಲ್ಲಿ ಸಿಗುವ ಎಲ್ಲಾ ಸವಲತ್ತುಗಳನ್ನು ಅನುಭವಿಸುತ್ತಾ ಕೆಳವರ್ಗ ಅವಕಾಶ ವಂಚಿತವಾಗುವಂತೆ ನೋಡಿಕೊಳ್ಳುತ್ತಿದೆ. ಶ್ರಮಕ್ಕೆ ತಕ್ಕ ಪ್ರತಿಫಲ ಸಿಗದೇ ಕೆಳವರ್ಗದ ಜನಾಂಗ ಎಲ್ಲಾ ಕಾಲಘಟ್ಟದಲ್ಲೂ ದಿನನಿತ್ಯದ ಬದುಕಿಗೆ ತಿಕ್ಕಾಟ ನಡೆಸಬೇಕಾದ ಅನಿವಾರ್ಯತೆಗೆ ಸಿಕ್ಕಿಹಾಕಿಕೊಂಡಿದೆ. ಸಮಾಜದಲ್ಲಿ ಕನಿಷ್ಠ ಸವಲತ್ತುಗಳಾಗಿರುವ ಉದ್ಯೋಗ, ಆಹಾರ, ಸಾಮಾಜಿಕ ಸ್ಥಾನಮಾನ, ಇದು ಯಾವುದು ಕೆಳವರ್ಗದ ಜನರಿಗೆ ಸಿಗದಿರುವುದು ಸಮಾಜದಲ್ಲಿರುವ

ವರ್ಗತಾರತಮ್ಯವನ್ನು ಎತ್ತಿ ತೋರಿಸುತ್ತದೆ. ಇಂತಹ ತಾರತಮ್ಯ ಸಮಾಜದಲ್ಲಿ ಎಷ್ಟರಮಟ್ಟಿಗೆ ಬೇರೂರಿತ್ತೆಂದರೆ ಪ್ರಾರಂಭದಲ್ಲಿ ಗ್ರಾಮಾಂತರ ಪ್ರದೇಶದ ಜಾತಿಸಮೂಹಗಳಲ್ಲಿ ಪರಸ್ಪರ ಆಹಾರವನ್ನು ಕೊಟ್ಟು ತೆಗೆದುಕೊಳ್ಳುವುದು ಕೂಡ ನಿಷಿದ್ಧವಾಗಿತ್ತು.

ವರ್ಗಸಂಘರ್ಷಕ್ಕೆ ಪ್ರಮುಖವಾದ ಕಾರಣಗಳನ್ನು ವಿಶ್ಲೇಷಿಸಿದಾಗ ಸಮಾಜದಲ್ಲಿ ಎಲ್ಲಾ ವರ್ಗಗಳಿಗೂ ಸಮಾನವಾದ ಅವಕಾಶ ಸಿಗದೇ ಇರುವುದು. ಆರ್ಥಿಕ ಅಸಮಾನತೆ, ಸಮಾನವಾದ ಸಾಮಾಜಿಕ ಸ್ಥಾನಮಾನ ಸಿಗದಿರುವುದು. ಈ ಮೇಲಿನ ಎಲ್ಲಾ ಅಂಶಗಳನ್ನು ಕೆಳವರ್ಗದ ಜನ ಹಿಂದಿನಿಂದಲೂ ಸಹಿಸಿಕೊಂಡು ಬರುತ್ತಿದ್ದರೂ ಅಪ್ರಕಟಿತ ಆಕ್ರೋಶ ಒಮ್ಮೊಮ್ಮೆ ಪ್ರಕಟಗೊಂಡು ವರ್ಗಸಂಘರ್ಷಕ್ಕೆ ಕಾರಣವಾಗಿದೆ. ಸಮಾಜದಲ್ಲಿ ವರ್ಗಪ್ರಜ್ಞೆ ಗೊತ್ತಿದ್ದೋ, ಗೊತ್ತಿಲ್ಲದೆಯೋ ಮನೆಮಾಡಿದೆ. ಉಳ್ಳವರೆನಿಸಿಕೊಳ್ಳುವ ಮೇಲ್ವರ್ಗದವರೆಲ್ಲರೂ ಭೂಮಿಯ ಒಡೆಯರಾಗಿದ್ದುಕೊಂಡು ಕೆಳವರ್ಗದವರನ್ನು ತಮ್ಮ ಮನೆಯ ಕೆಲಸಕ್ಕೆ ಜೀತದಾಳಾಗಿ ಇಟ್ಟುಕೊಳ್ಳುತ್ತಿದ್ದರು. ಇಂತಹ ಬಂಧನದಿಂದ ಬಿಡಿಸಿಕೊಳ್ಳುವ ಪ್ರಯತ್ನವನ್ನೂ ಕೆಳವರ್ಗದ ಜನ ಮಾಡುತ್ತಿರಲಿಲ್ಲ. ಬಿಡಿಸಿಕೊಳ್ಳಬೇಕೆಂಬ ಪ್ರಜ್ಞೆಯು ಅವರಲ್ಲಿ ಮೂಡುತ್ತಿರಲಿಲ್ಲ. ಜೀತದಾಳಾಗಿ ಜೀವನಪರ್ಯಂತ ತನ್ನ ಒಡೆಯನ ಮನೆಯಲ್ಲಿ ಕೆಲಸ ಮಾಡುತ್ತಿದ್ದ ವ್ಯಕ್ತಿ ತನ್ನ ಸ್ವಂತಕ್ಕೆ ಸಾಲ ಮಾಡಬೇಕೆಂದಿರಲಿಲ್ಲ. ತನ್ನ ತಂದೆ ತಾಯಿ ಮಾಡಿರುವ ಸಾಲಕ್ಕೂ ಮಗನಾಗಿ ಋಣ ತೀರಿಸಬೇಕಾಗಿತ್ತು. ಇಂತಹ ಒಪ್ಪಿಕೊಂಡ ಶೋಷಣೆ ನಿರಂತರವಾಗಿ ನಡೆಯುತ್ತಲೇ ಬಂದಿದೆ.

ಜನಪದರು ಇಂತಹದ್ದನ್ನೆಲ್ಲಾ ಬಹಳ ಚೆನ್ನಾಗಿ ಜನಪದ ಸಾಹಿತ್ಯದಲ್ಲಿ ಕಟ್ಟಿಕೊಡುತ್ತಾರೆ. ಸಮಾಜದಲ್ಲಿ ಆರ್ಥಿಕ ಅಸಮಾನತೆ ಹಿಂದಿನಿಂದಲೂ ಇದೆ. ಶ್ರಮಿಕವರ್ಗಕ್ಕೆ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗದೇ ಬಂಡವಾಳಶಾಹಿವರ್ಗ ಕೊಡುವುದನ್ನೇ ಸ್ವೀಕರಿಸಬೇಕಾದ ಅನಿವಾರ್ಯ ಪರಿಸ್ಥಿತಿ ಇದೆ. ಇಂತಹ ಸಂದರ್ಭದಲ್ಲಿ ದೈನಂದಿನ ಬದುಕನ್ನು ನಿರ್ವಹಿಸಲು ಸಾಧ್ಯವಾಗದ ಬಡವ ಮೂಲಭೂತವಾದ ಸವಲತ್ತುಗಳನ್ನು ತನ್ನ ಕುಟುಂಬಕ್ಕೆ ಒದಗಿಸಲು ಅನಿವಾರ್ಯವಾಗಿ ಸಾಲ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಸಾಲ ಕೊಡುವವರು ಕೂಡ ಸಮಾಜದ ಮೇಲ್ವರ್ಗದ ಶ್ರೀಮಂತ ಜನ. ಸುಧಾರಿಸಿಕೊಳ್ಳುವ ಸ್ಥಿತಿಯನ್ನು ತಲುಪದ ಬಡವ ದಿನೇದಿನೇ ಸಾಲವನ್ನು ಹೆಚ್ಚಿಸಿಕೊಳ್ಳುತ್ತಾ ತನ್ನ ನೆಮ್ಮದಿಯನ್ನು ಕಳೆದುಕೊಳ್ಳುತ್ತಾನೆ. ಹೀಗೆ ಆರ್ಥಿಕವಾಗಿ ಅಧೋಗತಿಗೆ ಇಳಿದಿರುವ ಬಡವ ಸಾಮಾಜಿಕವಾಗಿಯೂ ತುಳಿಯಲ್ಪಡುತ್ತಾನೆ. ಮಡಿಮೈಲಿಗೆಯ ಹೆಸರಿನಲ್ಲಿ ಕೆಳವರ್ಗದವರು ಮೇಲ್ವರ್ಗದ ಜನ ಓಡಾಡುವ ಜಾಗಗಳಲ್ಲಿ ಕಾಣಿಸಿಕೊಳ್ಳುವ ಹಾಗಿಲ್ಲ. ಹಾಗೆಯೇ ವಿದ್ಯಾಭ್ಯಾಸ, ಶಾಸ್ತ್ರ, ಪುರಾಣಗಳನ್ನು, ಧಾರ್ಮಿಕ ಗ್ರಂಥಗಳನ್ನು ಓದುವುದು ಕೇವಲ ಮೇಲ್ಜಾತಿಯವರಿಗೆ ಮಾತ್ರ ಸೀಮಿತವಾಗಿತ್ತು. 'ಸತಿಸಹಗಮನ' ಪದ್ಧತಿ ಸಮಾಜದಲ್ಲಿ ಹಾಸುಹೊಕ್ಕಾಗಿತ್ತು. ಗಂಡಸತ್ತರೆ ಹೆಂಡತಿಯು ಬೆಂಕಿಗೆ ಹಾರಿ ಸಾಯಬೇಕಾಗಿತ್ತು. ಇಂತಹ ಅನಿಷ್ಟ ಪದ್ಧತಿಗಳು, ವರ್ಗತಾರತಮ್ಯನೀತಿ, ಸಮಾಜದ ಅವಿಭಾಜ್ಯ ಅಂಗದ ಹಾಗೆ ಕೆಲಸ ಮಾಡುತ್ತಿದ್ದವು.

ಅಧ್ಯಯನದ ಉದ್ದೇಶ:

ಜನಪದ ಸಾಹಿತ್ಯದಲ್ಲಿ ವರ್ಗಸಂಘರ್ಷದ ನೆಲೆಗಟ್ಟನ್ನು ಹುಡುಕುವಂತಹ ಪ್ರಯತ್ನ ಇಲ್ಲಿಯವರೆಗೆ ಆಗಿಲ್ಲ. ಆದ್ದರಿಂದ 'ಜನಪದ ಸಾಹಿತ್ಯದಲ್ಲಿ ವರ್ಗಸಂಘರ್ಷ' ವಿದೆಯೇ? ಇದ್ದರೆ ಅದು ಯಾವ ಸ್ವರೂಪದಲ್ಲಿದೆ? ಎಂಬ ವಿಷಯದ ಕುರಿತು ಸಂಶೋಧಿಸುವ ಅಗತ್ಯವಿದೆ. ಜನಪದ ಸಾಹಿತ್ಯವನ್ನು ಜನಪದಕಾರರು ಕೇವಲ ಮನರಂಜನೆಯ ಸಮಯದಲ್ಲಿ ಮಾತ್ರ ಹೆಚ್ಚಾಗಿ ರಚಿಸುತ್ತಿದ್ದರು ಎಂಬ ಮಾತಿದೆ. ಆದರೆ ಜನಪದಕಾರರಿಗೆ ದುಃಖ, ಕ್ರೋಧ, ದುಮ್ಮಾನ ಗಳುಂಟಾದಾಗಲೂ ಕೂಡ ಸಾಹಿತ್ಯ ರಚನೆ ಮಾಡುತ್ತಿದ್ದರು ಎಂಬಂಶವನ್ನು ಈ ಪ್ರಬಂಧದಲ್ಲಿ ಕೆಲವು ಲಾವಣಿ ಮತ್ತು ಕಥನಗೀತೆಗಳನ್ನು ಪ್ರಾತಿನಿಧಿಕವಾಗಿ ತೆಗೆದುಕೊಂಡು ಅದರ ಅಧ್ಯಯನ ಮಾಡಿ ಸಾಬೀತು ಮಾಡಲಾಗಿದೆ. ಆ ನಿಟ್ಟಿನಲ್ಲಿ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸಂಶೋಧನೆ ಮಾಡಲು ಹೊರಟಿದ್ದೇನೆ. ಹಾಗೆಯೇ ಜನಜೀವನದ ಸ್ವರೂಪ ದರ್ಶನಗಳ ಮುಖಾಮುಖಿಯನ್ನು ಸಿಂಹಾವಲೋಕನ ಮಾಡುವುದರೊಂದಿಗೆ ವರ್ಗಸಂಘರ್ಷವನ್ನು ಹುಡುಕುವ ಉದ್ದೇಶ ನನ್ನದು. ನನ್ನ ಅಧ್ಯಯನದ ಉದ್ದೇಶವನ್ನು ಆರು ಅಧ್ಯಾಯಗಳಲ್ಲಿ ವರ್ಗೀಕರಣ ಮಾಡಿಕೊಂಡು ಅಧ್ಯಯನ ಮಾಡಲಾಗುವುದು.

ಪ್ರಸ್ತುತ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ, ಒಂದನೇಯ ಅಧ್ಯಯನದಲ್ಲಿಯೇ ಬರುತ್ತದೆ. ಇಲ್ಲಿ ನನ್ನ ವಿಷಯ ಕುರಿತ ಈ ಹಿಂದೆ ನಡೆದ ಅಧ್ಯಯನವನ್ನು ಸಮೀಕ್ಷಿಸುತ್ತ ನಾನು ಹಾಕಿಕೊಂಡ ಉದ್ದೇಶಗಳನ್ನು ಮತ್ತು ನನ್ನ ಅಧ್ಯಯನಕ್ಕಿರುವ ಮಿತಿಯನ್ನು ಸೂಚಿಸಲಾಗಿದೆ.

ಪ್ರಬಂಧದ ಎರಡನೆಯ ಅಧ್ಯಾಯದಲ್ಲಿ ವರ್ಗದ ಪರಿಕಲ್ಪನೆಯನ್ನು ವಿಸ್ತೃತವಾಗಿ ಚರ್ಚಿಸಲಾಗುವುದು. ವರ್ಗದ ಪರಿಕಲ್ಪನೆ ಎಂದರೆ ಅದು ಮೂಲತಃ ಆರ್ಥಿಕ ಮೂಲವಾದುದು. ವರ್ಗವನ್ನು ಸಿದ್ಧಗೊಳಿಸುವುದು ಆಯಾ ಉದ್ಯೋಗ ಮಾಡುವವರ ಆರ್ಥಿಕ ಸ್ಥಿತಿ, ಉತ್ಪಾದನೆಯಲ್ಲಿ ವಹಿಸುವ ಸ್ಥಾನದಿಂದ. ನಮ್ಮ ನಮ್ಮ ಆರ್ಥಿಕ ಸ್ಥಿತಿಯ ಮೇಲಿಂದ ನಮ್ಮ ಜೀವನದ ರೀತಿ ಉಂಟಾಗುತ್ತದೆ. ನಮ್ಮ ನಂಬಿಕೆ, ವ್ಯವಹಾರಿಕತೆ–ಆರಾಧನೆ ಇತ್ಯಾದಿ ಉಂಟಾಗುತ್ತದೆ. ಆದ್ದರಿಂದ ನಮ್ಮೆಲ್ಲ ಚಟುವಟಿಕೆ, ರೀತಿನೀತಿ, ಹವ್ಯಾಸ, ಅಭ್ಯಾಸ, ಇತ್ಯಾದಿಗಳಿಗೆಲ್ಲ ನಮ್ಮ ಆರ್ಥಿಕ ಚಟುವಟಿಕೆ–ಗಳಿಕೆ ಕಾರಣವಾಗಿರುವುದರಿಂದ ಆರ್ಥಿಕತೆಯು ವರ್ಗ ಅಡಿರಚನೆಯಾಗಿದೆ. ಇದರಿಂದುಂಟಾಗುವ ಧರ್ಮ, ಸಂಸ್ಕೃತಿ, ಸಾಹಿತ್ಯ, ಇತ್ಯಾದಿಗಳೆಲ್ಲ ಮೇಲ್ ರಚನೆಯಾಗಿದೆ. ಆದ್ದರಿಂದ ಸಮಾಜ ಪರಿವರ್ತನೆಯಲ್ಲಿ ಅಡಿರಚನೆಯನ್ನು ಭಂಗಪಡಿಸುವುದೇ ಮುಖ್ಯವಾಗುತ್ತದೆ.

ಹಿಂದಿನ ಕಾಲದಲ್ಲಂತೂ ಪೂರ್ತಿಯಾಗಿ ವರ್ಣ ಮತ್ತು ಜಾತಿಯ ಶ್ರೇಣೀಕರಣಕ್ಕೆ ಒಳಗಾದ ಸಮಾಜವೇ ಇತ್ತು. ಈಗಲೂ ಅದೇ ಮುಂದುವರಿದಿದೆ. ಜಾತಿಯ ಪ್ರಭಾವ ಕಡಿಮೆ ಯಾಗಿರಬಹುದಾದರೂ ಮೂಲಭೂತವಾದ ಜಾತಿಯ ಭಿನ್ನತೆ ಅಳಿಸಿಹೋಗಿಲ್ಲ. ಮುಸ್ಲಿಂ ಮತ್ತು

ಕ್ರಿಶ್ಚಿಯನ್ ಕೂಡ ಭಾರತೀಯ ಸಮಾಜವೇ ಆಗಿವೆ. ಆದರೆ ಆ ಸಮಾಜ ಹಿಂದುಗಳಲ್ಲಿದ್ದಂತೆ ಜಾತಿಯ ಶ್ರೇಣೀಕರಣಕ್ಕೆ ಒಳಗಾದದ್ದಲ್ಲ. ಆದರೂ ಅಲ್ಲಿ ಧರ್ಮವೇ ವರ್ಗಸಂಘರ್ಷವನ್ನು ಆ ಮುಖಾಂತರ ಸಾಂಸ್ಕೃತಿಕ ಸಂಘರ್ಷವನ್ನು ತಡೆಯುವಲ್ಲಿ ಶಕ್ತವಾಗಿದೆ. ಭಾರತದಲ್ಲಿ ಜಾತಿ ಒಂದೇ ವರ್ಗವನ್ನು ನೂರಾರು ಹೋಳುಮಾಡಿದೆ. ಇಂತಹ ವರ್ಗಗಳ ನಡುವಿನ ಸಂಘರ್ಷವನ್ನು ಹುಡುಕುವ ಪ್ರಯತ್ನವನ್ನು ಮಾಡಬೇಕಾಗಿದೆ.

ಮೂಲತಃ ಸಮಾಜದಲ್ಲಿ ಬೇರೂರಿದ್ದ ವರ್ಗಸಂಘರ್ಷಕ್ಕೆ ಸಿದ್ಧಾಂತದ ರೂಪ ಕೊಟ್ಟವನು ಕಾರ್ಲ್‌ಮಾರ್ಕ್ಸ್. ಈತನ ಪ್ರಕಾರ "ವರ್ಗವೆಂಬುದು ಆರ್ಥಿಕ ವಿಷಮತೆಯ ಪ್ರಕಟಿತ ರೂಪವಾಗಿದೆ. ಆರ್ಥಿಕ ವಿಷಮತೆಯ ಕಾರಣದಿಂದ ಶ್ರೀಮಂತರು ಮತ್ತು ಬಡವರು ಎರಡು ವಿಭಿನ್ನ ವರ್ಗಗಳನ್ನು ಪ್ರತಿನಿಧಿಸುವವರು ಆಗುತ್ತಾರೆ. ಅವರ ನಡುವಿನ ಅಂತರವು ಕೂಡ ಹೆಚ್ಚುತ್ತಲೇ ಹೋಗುವುದು. ವಾಸ್ತವವಾಗಿ ಮಾರ್ಕ್ಸ್‌ನ ವರ್ಗಕಲ್ಪನೆ ಎಂದರೆ ಈ ಎರಡು ವರ್ಗಗಳ ಕಲ್ಪನೆಯೇ ಆಗಿರುತ್ತದೆ. ಈ ವರ್ಗಗಳನ್ನು ಉಳ್ಳವರು ಮತ್ತು ಇಲ್ಲದವರು, ಬಂಡವಾಳಶಾಹಿಗಳು ಮತ್ತು ಕಾರ್ಮಿಕರೆಂದು ಆತ ಕರೆದಿದ್ದಾನೆ. ಮಾರ್ಕ್ಸ್‌ನ ಪ್ರಕಾರ ಯಾವಾಗ ವ್ಯಕ್ತಿಗಳ ಮತ್ತು ಸಮೂಹ ಅಥವಾ ವರ್ಗಗಳ ಹಿತಾಸಕ್ತಿಗಳು ಪರಸ್ಪರ ವಿರುದ್ಧವಾಗಿರುತ್ತವೆಯೋ ಆಗ ಅವುಗಳ ನಡುವೆ ಸಂಘರ್ಷ ಅನಿವಾರ್ಯವಾಗುವುದು. ಕಾರ್ಮಿಕವರ್ಗ ಮತ್ತು ಬಂಡವಾಳಶಾಹಿವರ್ಗಗಳು ಪರಸ್ಪರ ವಿರುದ್ಧಾತ್ಮಕವಾದ ಆಸಕ್ತಿಗಳನ್ನು ಸಂಪೋಷಿಸುವುದರಿಂದ ಅವುಗಳ ನಡುವಿನ ತಿಕ್ಕಾಟವು ಅಪರಿಹಾರವಾದುದು. ಇತಿಹಾಸದ ಆರಂಭದಿಂದಲೂ ಇಂತಹ ವರ್ಗಗಳು ಅಸ್ತಿತ್ವದಲ್ಲಿದ್ದು ಅವುಗಳ ನಡುವೆ ಸಂಘರ್ಷವು ನಡೆಯುತ್ತಲೇ ಬಂದಿದೆ.

ಕಾರ್ಲ್‌ಮಾರ್ಕ್ಸ್‌ನ ಪರಿಕಲ್ಪನೆ, ವರ್ಗಸಂಘರ್ಷದ ವ್ಯಾಖ್ಯಾನ ಜನಪದರ ದೃಷ್ಟಿಯಲ್ಲಿ ಅದೇ ರೀತಿಯಾಗಿರುತ್ತದೆಯೇ? ಅಥವಾ ಸಾಮಾಜಿಕ ಹಿನ್ನೆಲೆಯ ಮತ್ತು ಆರ್ಥಿಕ ಹಿನ್ನೆಲೆಯ ವರ್ಗ ಸಂಘರ್ಷವನ್ನು ಜನಪದ ಸಾಹಿತ್ಯದಲ್ಲಿ ನೋಡಬೇಕಾಗಿದೆಯೇ? ಎಂಬುದನ್ನು ಲಾವಣಿ ಮತ್ತು ಕಥನಗೀತೆ ಸಾಹಿತ್ಯದ ಆಳವಾದ ಅಧ್ಯಯನದಿಂದ ತಿಳಿದುಕೊಳ್ಳಬೇಕಾಗಿದೆ.

ಕಾರ್ಲ್‌ಮಾರ್ಕ್ಸ್ ದೃಷ್ಟಿಯಲ್ಲಿ ವರ್ಗಸಂಘರ್ಷದ ಪರಿಕಲ್ಪನೆ ಏನು ಎನ್ನುವ ವಿಷಯಕ್ಕೆ ಹೆಚ್ಚು ಒತ್ತು ಕೊಡಲಾಗಿದೆ. ಏಕೆಂದರೆ "ಜಗತ್ತಿನ ಸೈದ್ಧಾಂತಿಕ ವಿಚಾರಧಾರೆಯಲ್ಲೇ ಮಾರ್ಕ್ಸ್‌ವಾದ ಬಹಳ ಪ್ರಮುಖವಾದುದು. ಇದುವರೆಗೆ ಸಾಧ್ಯವಾಗದ ಒಂದು ಐತಿಹಾಸಿಕ ಸಂಘರ್ಷದ, ಚಲನೆಯ ಪ್ರಗತಿಯ ಒಳನೋಟವನ್ನು ವೈಜ್ಞಾನಿಕ ವಿಶ್ಲೇಷಣೆಯ ಶಿಸ್ತಿನಲ್ಲೇ ಅದು ಕೊಟ್ಟಿತು. ಚರಿತ್ರೆಯನ್ನು ನೋಡುವ ಅಭ್ಯಸಿಸುವ ಕ್ರಮದಲ್ಲೇ ಒಂದು ಹೊಸ ಆಯಾಮವನ್ನು ತೆರೆಯಿತು. ಈ ವಿಚಾರಧಾರೆ ಜಾಗತಿಕ ಗ್ರಹಿಕೆ ಉಳ್ಳದ್ದಾದ್ದರಿಂದ ಅದು ದೇಶಿ, ವಿದೇಶಿ ಅನ್ನುವಂತಿಲ್ಲ. ತನ್ನೆಲ್ಲ ಭೌತಿಕ ಸಂಗತಿಗಳೊಡನೆ

ವಿಶ್ಲೇಷಣೆಗೆ ಒಳಗಾದಾಗ ಆಯಾ ಸ್ಥಾನಿಕ ಪರಿಸ್ಥಿತಿಯಲ್ಲೇ ಹೊಸ ಜೀವನದ ಪ್ರೇರಣೆಗೆ, ಹೊಸ ಸಂಸ್ಕೃತಿಯ ನಿರ್ಮಾಣ–ಮುನ್ನಡೆಗೆ ಪ್ರೇರಣೆ ಇತ್ತಿತು. ಆ ಕಾರಣದಿಂದ ಅದು ಭಾರತದಲ್ಲಿಯೂ, ಕರ್ನಾಟಕದಲ್ಲಿಯೂ ತನ್ನ ತಾಜಾತನವನ್ನು ಕಳೆದುಕೊಳ್ಳದೆ ಪ್ರಭಾವ–ಪರಿಣಾಮವನ್ನು ಉಂಟು ಮಾಡಿತು."[೨] ಈ ಹಿನ್ನೆಲೆಯಲ್ಲಿ ಮಾರ್ಕ್ಸ್‌ನ ವರ್ಗಸಂಘರ್ಷದ ವ್ಯಾಖ್ಯಾನ, ಹನ್ನೆರಡನೆಯ ಶತಮಾನದ ಸಮಾಜಸುಧಾರಕ ಬಸವಣ್ಣನ ವ್ಯಾಖ್ಯಾನ, ಕೆಳವರ್ಗದ ಆಶಾಕಿರಣ ಅಂಬೇಡ್ಕರ್‌ರವರ ವ್ಯಾಖ್ಯಾನಗಳನ್ನು ವಿಶ್ಲೇಷಿಸಲಾಗಿದೆ. ಹಾಗೆಯೇ ಜನಪದರ ದೃಷ್ಟಿಯಲ್ಲಿ ವರ್ಗಸಂಘರ್ಷದ ನೆಲೆ ಎಂತಹದ್ದೆನ್ನುವುದರ ಬಗ್ಗೆ ವಿಶ್ಲೇಷಿಸಲಾಗಿದೆ.

ಅಧ್ಯಾಯ ಮೂರು ಬಹಳ ಮುಖ್ಯವಾದ ಅಧ್ಯಾಯವಾಗಿದ್ದು ಇದರಲ್ಲಿ ಜನಪದ ಸಾಹಿತ್ಯದ ಪ್ರಕಾರಗಳಾಗಿರುವ ಲಾವಣಿ ಮತ್ತು ಕಥನಗೀತೆಗಳ ಕೆಲವು ಗೀತೆಗಳನ್ನು ಪ್ರಾತಿನಿಧಿಕವಾಗಿ ತೆಗೆದುಕೊಂಡು ಅದರಲ್ಲಿ ವರ್ಗಸಂಘರ್ಷವನ್ನು ಹುಡುಕಲಾಗಿದೆ. ಲಾವಣಿಗಳಲ್ಲಿ ಐತಿಹಾಸಿಕ ಲಾವಣಿಗಳು, ಪೌರಾಣಿಕ ಲಾವಣಿಗಳು, ಮತ್ತು ಸಾಮಾಜಿಕ ಲಾವಣಿಗಳೆಂದು ವಿಂಗಡಿಸಲಾಗಿದೆ.

ಐತಿಹಾಸಿಕ ಲಾವಣಿಗಳಲ್ಲಿ ಪ್ರಾತಿನಿಧಿಕವಾಗಿ 'ಹಲಗಲಿಯ ಬೇಡರು' ಮಾಗಡಿ ಕೆಂಪೇಗೌಡ' ಸಂಗೊಳ್ಳಿ ರಾಯಣ್ಣ' 'ಸಿಂಧೂರ ಲಕ್ಷ್ಮಣ' ಆದಾಯ ತೆರಿಗೆ'

ಪೌರಾಣಿಕ ಲಾವಣಿಗಳಲ್ಲಿ ಪ್ರಾತಿನಿಧಿಕವಾಗಿ 'ಗಂಗೆ–ಗೌರಿ', 'ಗೌರಮ್ಮನ ಮದುವೆ' 'ಹುಟ್ಟಿದಾಳೆ ಗೌರಮ್ಮ' 'ಶ್ರೀಗೌರಿಯ ಮದುವೆ', 'ಅಂಬಿಗರಗಂಗ' 'ಏಕಲವ್ಯ' 'ಕೊಂತ್ಯಮ್ಮ', 'ರುಕ್ಮಿಣಿ ಗರ್ವಭಂಗ'

ಸಾಮಾಜಿಕ ಲಾವಣಿಗಳಲ್ಲಿ ಪ್ರಾತಿನಿಧಿಕವಾಗಿ 'ಸಂಗ್ಯನಅಪರಾಧ ಮತ್ತು ಸಾವು' 'ಬಪ್ಪಿಂಗ–ಬಮ್ಮಿಂಗ' 'ಬಯಲುಸೀಮೆಯ ಗೌಡನ ಮಗಳು' 'ಕೂಪನ' 'ಕಬೀರದಾಸ ಲಾವಣಿ' 'ಲಾಲಾಗುಜ್ಜನ ಹಾಡು' 'ಕಡ್ಲಿಮಟ್ಟಿ ಕಾಶೀಬಾಯಿ'

ಹಾಗೆಯೇ ಜನಪದ ಕಥನಗೀತೆಗಳಲ್ಲಿ ಪ್ರಾತಿನಿಧಿಕವಾಗಿ 'ಹಾರುವಯ್ಯ ಮಾದಗಿತ್ತಿ ಹಾಡು' 'ವೀರದಿಮ್ಮವ್ವ' ' ಬತಿಗೇಡಿ ರಾಜ' ಗೀತೆಗಳನ್ನು ತೆಗೆದುಕೊಂಡು ಈ ಗೀತೆಗಳಲ್ಲಿ ವರ್ಗಸಂಘರ್ಷದ ನೆಲೆಗಳನ್ನು ಹುಡುಕಲಾಗುವುದು.

ಅಧ್ಯಾಯ ನಾಲ್ಕರಲ್ಲಿ 'ಮೌನಸಂಘರ್ಷ' ದಲ್ಲಿಯ ವರ್ಗ ಸಂಘರ್ಷವನ್ನು ಪ್ರಾತಿನಿಧಿಕವಾಗಿ 'ಕೆರೆಗೆಹಾರ' ಮತ್ತು 'ಪತಿವ್ರತಾ ನೀಲಾವತಿ ಲಾವಣಿ' ಲಾವಣಿಗಳನ್ನು ತೆಗೆದುಕೊಳ್ಳುವುದರ ಮೂಲಕ ಹುಡುಕಲಾಗುವುದು. ವ್ಯಕ್ತಸಂಘರ್ಷದಷ್ಟೇ ಮಹತ್ವವಾದದ್ದು ಅವ್ಯಕ್ತಸಂಘರ್ಷ. ಎಷ್ಟೋ ಸಂದರ್ಭಗಳಲ್ಲಿ ಸಂಘರ್ಷ ಅವ್ಯಕ್ತವಾಗಿಯೇ ಉಳಿದುಬಿಡುತ್ತದೆ. ಮೌನದ ಮೂಲಕ ಅಸಹಾಯಕವಾಗಿ ಸಂಘರ್ಷವನ್ನು ನುಂಗಿಕೊಳ್ಳಬೇಕಾದ ಸ್ಥಿತಿ ಎಷ್ಟೋ ಸಂದರ್ಭಗಳಲ್ಲಿ ಒದಗಿಬರುತ್ತದೆ. ಇಂತಹ ಮೌನಸಂಘರ್ಷವನ್ನು ವರ್ಗದ ಹಿನ್ನಲೆಯಲ್ಲಿ ಲಾವಣಿಗಳಲ್ಲಿ ಕಾಣಬೇಕಾಗಿದೆ.

ಅಧ್ಯಾಯ ಐದರಲ್ಲಿ ಸಮಕಾಲೀನ ಸಂದರ್ಭದಲ್ಲಿ ವರ್ಗಸಂಘರ್ಷದ ನೆಲೆಗಳನ್ನು ಪ್ರಸ್ತುತ ಕೆಲವು ಕ್ಷೇತ್ರಗಳ ಉದಾಹರಣೆಗಳನ್ನು ತೆಗೆದುಕೊಳ್ಳುವುದರ ಮೂಲಕ ಗುರುತಿಸಲಾಗುವುದು. ಜನಪದ ಸಾಹಿತ್ಯದ ವರ್ಗಸಂಘರ್ಷಕ್ಕೂ ಸಮಕಾಲೀನ ಸಂದರ್ಭದ ವರ್ಗಸಂಘರ್ಷಕ್ಕೂ ಏನಾದರೂ ವ್ಯತ್ಯಾಸವಾಗಿದೆಯೇ ಎನ್ನುವುದರ ಬಗ್ಗೆ ಗಮನಹರಿಸಲಾಗುವುದು. ಇತಿಹಾಸದ ಪುಟಗಳನ್ನು ತಿರುವಿಹಾಕಿದರೆ ವೇದದ ಕಾಲದಿಂದ ಹಿಡಿದು ಸ್ವಾತಂತ್ರ್ಯೋತ್ತರ ಕಾಲದವರೆಗೂ ಸಮಾಜದಲ್ಲಿ ವರ್ಗಸಂಘರ್ಷವಿದೆ. ಇದು ಹೇಗೆ ಹಾಸುಹೊಕ್ಕಾಗಿದೆ ಎನ್ನುವುದನ್ನು ಜನಪದ ಸಾಹಿತ್ಯದ ಹಿನ್ನಲೆಯಲ್ಲಿ ಅದರಲ್ಲೂ ಲಾವಣಿ ಹಾಗೂ ಕಥನಗೀತೆಗಳ ಮೂಲಕ ಕಾಣುವ ಪ್ರಯತ್ನ ಮಾಡಲಾಗುತ್ತದೆ. ಹಾಗೆಯೇ ಸಮಕಾಲೀನ ಸಂದರ್ಭದಲ್ಲಿ ವರ್ಗಸಂಘರ್ಷ ಹೇಗಿದೆಯೆನ್ನುವುದನ್ನು ಕೂಡ ಗೊತ್ತು ಮಾಡಿಕೊಳ್ಳುವುದು ಬಹಳ ಮುಖ್ಯವಾದ ಕೆಲಸವೆಂದು ನಾನು ಭಾವಿಸುತ್ತೇನೆ. ಸಮಕಾಲೀನ ಸಂದರ್ಭದಲ್ಲಿ ಜನಪದರು ಅನುಭವಿಸಿದ ವರ್ಗಸಂಘರ್ಷವೇ ಇದೆಯೇ? ಅಥವಾ ಅದು ಅನ್ಯ ರೂಪವನ್ನು ಪಡೆದುಕೊಂಡಿದೆಯೇ? ವರ್ಗ ಸಂಘರ್ಷದ ಪರಿಕಲ್ಪನೆಯೇ ಬದಲಾಗಿದೆಯೇ? ಎಂಬುದನ್ನು ಲಾವಣಿ ಸಾಹಿತ್ಯವನ್ನು ಅಧ್ಯಯನ ಮಾಡಿದ ನಂತರ ಪ್ರಸ್ತುತ ಸ್ಥಿತಿಯ ಜೊತೆಗೆ ಹೋಲಿಸಿಕೊಳ್ಳಲಾಗುವುದು.

ಅಧ್ಯಾಯ ಆರರಲ್ಲಿ ಈ ಮೇಲಿನ ಎಲ್ಲಾ ಅಧ್ಯಯನದ ನಂತರ ತಳೆದ ನಿಲುವುಗಳೇನು? ಸಮಾಜದ ಸ್ಥಿತಿಗತಿಗಳೇನು? ಸಮಾಜದ ಬದಲಾವಣೆಯ ಅಗತ್ಯತೆ ಇದೆಯೇ? ಬದಲಾವಣೆಯಾಗುವುದಾದರೆ ಎಂತಹ ಬದಲಾವಣೆಯಾಗಬೇಕು? ಎಂಬ ವಿಷಯದ ಬಗ್ಗೆ ಚರ್ಚಿಸಲಿದ್ದೇನೆ. ವರ್ಗಹೋರಾಟದ ವಿಷಯಕ್ಕೆ ಬಂದರೆ "ಇದುವರೆವಿಗೂ ಆಗಿಹೋಗಿರುವ ಎಲ್ಲ ಸಮಾಜದ ಇತಿಹಾಸವು ವರ್ಗಹೋರಾಟಗಳ ಇತಿಹಾಸವೇ" ಇದು ಕಮ್ಯುನಿಸ್ಟ್ ಮೆನಿಫೆಸ್ಟೋದ ಮೊದಲ ವಾಕ್ಯ. "ಭಾರತ–ಮುಸ್ಲೀಮರು ಮತ್ತು ಹಿಂದೂಗಳ ನಡುವೆಯಷ್ಟೇ ಅಲ್ಲದೆ ಕುಲ–ಕುಲದ ನಡುವೆ ಜಾತಿ–ಜಾತಿಯ ನಡುವೆ ವಿಭಜಿತವಾದ ದೇಶ... ಇಂತಹ ದೇಶ ಸುಲಿಗೆದಾರರಿಗೆ ಸುಲಭವಾದ ಬಲಿಯಲ್ಲವೇ?"

ಇದು ೧೮೫೩ ರ ಜುಲೈ ೨೨ ರಂದು ಕಾರ್ಲ್‌ಮಾರ್ಕ್ಸ್ ಹೇಳಿದ ಮಾತು. ಈ ಹಿನ್ನಲೆಯಲ್ಲಿ ವರ್ಗಸಂಘರ್ಷವನ್ನು ಹುಡುಕಲಾಗುವುದು. ಅಧ್ಯಯನದಿಂದ ಕಂಡುಕೊಂಡ ಪ್ರಮುಖ ಅಂಶಗಳು ಮತ್ತು ಅದಕ್ಕೆ ನನ್ನ ಪ್ರತಿಕ್ರಿಯೆ ಹಾಗೂ ಸಮಾಜದಲ್ಲಿ ಹಾಸುಹೊಕ್ಕಾಗಿರುವ ವರ್ಗಸಂಘರ್ಷವನ್ನು ಹೋಗಲಾಡಿಸಲು ತೆಗೆದುಕೊಳ್ಳಬೇಕಾದ ಕ್ರಮಗಳು. ಈ ಬಗ್ಗೆ ಚರ್ಚಿಸಿ ಕೊನೆಗೆ ಸಮಾರೋಪವನ್ನು ಮಾಡಲಾಗುವುದು.

ಅಧ್ಯಯನದ ವ್ಯಾಪ್ತಿ:

'ಜನಪದ ಸಾಹಿತ್ಯ' ಮತ್ತು 'ವರ್ಗಸಂಘರ್ಷ' ಈ ಎರಡು ಕ್ಷೇತ್ರಗಳು ಬಹಳ ಆಳವನ್ನು ಹೊಂದಿರುವಂತಹವು. ಆದ್ದರಿಂದ ಸಮಗ್ರವಾಗಿ ಜನಪದ ಸಾಹಿತ್ಯವನ್ನು ಅಧ್ಯಯನದ ವ್ಯಾಪ್ತಿಗೆ

ಒಳಪಡಿಸಿ ವರ್ಗಸಂಘರ್ಷವನ್ನು ಹುಡುಕುವ ಪ್ರಯತ್ನ ಮಾಡಲು ಸಾಧ್ಯವಾಗುವುದಿಲ್ಲ. ಆ ರೀತಿ ಹುಡುಕಲು ಹೊರಟರೆ ಅದು ಹಿಡಿತಕ್ಕೆ ಸಿಗದೆ ಹೇಳಬೇಕಾದ್ದನ್ನು ಹೇಳಲು ಸಾಧ್ಯವಾಗದಿರಬಹುದು. ಆದ್ದರಿಂದ ಕೇವಲ 'ಲಾವಣಿ ಸಾಹಿತ್ಯ' ಮತ್ತು ಕಥನಗೀತೆಗಳಲ್ಲಿ ಪ್ರಾತಿನಿಧಿಕವಾಗಿ ಕೆಲವು ಗೀತೆಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಂಡು ತನ್ಮೂಲಕ ವರ್ಗಸಂಘರ್ಷವನ್ನು ಹುಡುಕುವ ಪ್ರಯತ್ನವನ್ನು ಮಾಡಲಾಗುವುದು.

ಅಧ್ಯಯನದ ವಿಧಾನ:

ಜನಪದ ಸಾಹಿತ್ಯದಲ್ಲಿ ವರ್ಗಸಂಘರ್ಷದ ಅಧ್ಯಯನಕ್ಕೆ ಲಾವಣಿ, ಕಥನಗೀತೆಗಳು, ವರ್ಗದಪರಿಕಲ್ಪನೆ, ಆ ಕುರಿತ ಪುಸ್ತಕಗಳು, ಅದೇರೀತಿ ಪ್ರವಾಸಿಗರ ಬರವಣಿಗೆ, ಕಾರ್ಲ್‌ಮಾರ್ಕ್ಸ್, ಅಂಬೇಡ್ಕರ್, ಬಸವಣ್ಣ, ಗಾಧೀಜಿರಂತಹವರ ವರ್ಗಸಂಘರ್ಷ ಕುರಿತ ವ್ಯಾಖ್ಯಾನಗಳು, ಈ ಆಕರಗಳನ್ನೆಲ್ಲ ಸೂಕ್ಷ್ಮವಾಗಿ ಸಮೀಕ್ಷಿಸುವ ಮತ್ತು ಅದರ ಮೂಲಕ ವರ್ಗಸಂಘರ್ಷವನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗುತ್ತದೆ.

ಈವರೆಗಿನ ಅಧ್ಯಯನಗಳ ಸಮೀಕ್ಷೆ:

ಜನಪದಸಾಹಿತ್ಯದಲ್ಲಿ ವರ್ಗಸಂಘರ್ಷದ ವಿಷಯ ಕುರಿತು ಇಲ್ಲಿಯವರೆಗೆ ಸಂಶೋಧನೆ ನಡೆದಿಲ್ಲ. ಜನಪದಕಥನಗೀತೆಗಳು, ಮತ್ತು ಲಾವಣಿಗಳಲ್ಲಿ ಬೇರೆ ಬೇರೆ ರೀತಿಯ ಸಂಶೋಧನೆಗಳು ಆಗಿವೆ ಲಾವಣಿಗಳನ್ನು ಕುರಿತಂತೆ ಡಾ. ಬಿ.ಎಸ್. ಭಜಂತ್ರಿರವರ "ಹುಲಕುಂದದ ಲಾವಣಿ ಸಂಪ್ರದಾಯ ಒಂದು ಅಧ್ಯಯನ", ಡಾ.ನಿಜಲಿಂಗಪ್ಪ ಮಟ್ಟಿಹಾಳರವರ "ವಿಜಾಪುರ ಜಿಲ್ಲೆಯ ಲಾವಣಿ ಮೇಳಗಳು", ಕಥನಗೀತೆಗಳನ್ನು ಕುರಿತಂತೆ ಡಾ.ದೇವೇಂದ್ರಕುಮಾರ್ ಹಕಾರಿಯವರ "ಜನಪದ ಕಥನಗೀತೆಗಳಲ್ಲಿ ದುಃಖಾಂತ್ಯ ನಿರೂಪಣೆ", ಡಾ.ಎಂ.ಕೆ. ರುಕ್ಮಿಣಿಯವರ "ಜನಪದ ಕಥನಗೀತೆಗಳಲ್ಲಿ ಮಹಿಳೆ ಒಂದು ಸಾಂಸ್ಕೃತಿಕ ಅದ್ಯಯನ", ಹಾಗೆಯೇ ಇನ್ನು ಅನೇಕ ಸಂಶೋಧನೆಗಳು ಜನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ನಡೆದಿದ್ದರೂ ಜನಪದ ಸಾಹಿತ್ಯದಲ್ಲಿ ವರ್ಗಸಂಘರ್ಷದ ಬಗ್ಗೆ ಈವರೆಗೆ ಸಂಶೋಧನೆ ನಡೆದಿರುವುದಿಲ್ಲ. ಆದರೆ ಶಿಷ್ಟ ಸಾಹಿತ್ಯದಲ್ಲಿ ವರ್ಗಸಂಘರ್ಷಕ್ಕೆ ಸಂಬಂಧಿಸಿದಂತೆ ಸಂಶೋಧನೆಗಳು ಮತ್ತು ಪುಸ್ತಕಗಳು ಬಂದಿವೆ. ಅವುಗಳಲ್ಲಿ ಆರ್.ವಿ. ಭಂಡಾರಿಯವರ "ಕನ್ನಡ ಕಾದಂಬರಿಗಳಲ್ಲಿ ವರ್ಗ ಮತ್ತು ವರ್ಣಸಂಘರ್ಷ" ಬಹಳ ಮುಖ್ಯವಾದ ಸಂಶೋಧನಾಕೃತಿ. ಹಾಗೆಯೇ ಕರ್ನಾಟಕ ಸಾಹಿತ್ಯ ಅಕಾಡಮಿ ಹೊರತಂದಿರುವ ವಿವಿಧ ಲೇಖಕರು ಬರೆದಿರುವ "ವಚನ ಸಾಹಿತ್ಯದಲ್ಲಿ ಕೆಳವರ್ಗದ ಆಶಯ ಮತ್ತು ಅಭಿವ್ಯಕ್ತಿ", ಆರ್.ವಿ.ಭಂಡಾರಿಯವರ "ವರ್ಣದಿಂದ ವರ್ಗದ ಕಡೆಗೆ", ಆನಂದ ತೇಲ್ ತುಂಬ್ಡೆಯವರ "ಅಂಬೇಡ್ಕರೋತ್ತರ ದಲಿತ ಸಂಘರ್ಷ", ದಾಸನೂರು ಕೂಸಣ್ಣನವರ "ಬಹಿಷ್ಕೃತರ ಸಂಘರ್ಷ

ಹಾಗೂ ಪರಿವರ್ತನೆ" ಪ್ರಮುಖವಾದವು. ಹೀಗೆ ಶಿಷ್ಟ ಸಾಹಿತ್ಯದಲ್ಲಿ ಕೆಲವೊಂದು ಅಧ್ಯಯನಗಳು ನಡೆದಿದ್ದರೂ ಜನಪದ ಸಾಹಿತ್ಯದಲ್ಲಿ ಇದರ ಕೊರತೆ ಇದೆ. ಈ ಕೊರತೆಯನ್ನು ಮನಗೊಂಡು "ಜನಪದಸಾಹಿತ್ಯದಲ್ಲಿ ವರ್ಗಸಂಘರ್ಷದ ನೆಲೆಗಳು" ವಿಷಯವನ್ನು ಆಯ್ದುಕೊಂಡು ಅಧ್ಯಯನಕ್ಕೆ ತೊಡಗಿಸಲಾಗಿದೆ.

ಅಡಿಟಿಪ್ಪಣಿ:

೧. ಹುಲಕುಂದದ ಲಾವಣಿ ಸಂಪ್ರದಾಯ ಒಂದು ಅಧ್ಯಯನ, ಡಾ.ಬಿ.ಎಸ್.ಭಜಂತ್ರಿ ಚೈತನ್ಯ ಪ್ರಕಾಶನ, ಪಂಚಂಗಾಂವ, ೨೦೦೨ ಪು. ೧–೨

೨. ಕನ್ನಡ ಕಾದಂಬರಿಗಳಲ್ಲಿ ವರ್ಗ ಮತ್ತು ವರ್ಣ ಸಂಘರ್ಷ, ಆರ್.ವಿ ಭಂಡಾರಿ, ಮಂಗಳೂರು ವಿಶ್ವವಿದ್ಯಾಲಯ, ೧೯೯೩ ಪು.೭

ಅಧ್ಯಾಯ ೨

ವರ್ಗದ ಪರಿಕಲ್ಪನೆ

೨.೧ ಸಾಮಾಜಿಕ ವರ್ಗಪರಿಕಲ್ಪನೆ

೨.೨ ಆರ್ಥಿಕ ವರ್ಗಪರಿಕಲ್ಪನೆ

೨.೩ ಜಾತಿ ಮತ್ತು ವರ್ಗ

೨.೪ ಭಾರತದಲ್ಲಿ ವರ್ಗದ ಪರಿಕಲ್ಪನೆ

೨.೫ ಅಂಬೇಡ್ಕರ್ ದೃಷ್ಟಿಯಲ್ಲಿ ವರ್ಗಪರಿಕಲ್ಪನೆ

೨.೬ ಕಾರ್ಲ್‌ಮಾರ್ಕ್ಸ್ ದೃಷ್ಟಿಯಲ್ಲಿ ವರ್ಗಪರಿಕಲ್ಪನೆ ಮತ್ತು ವರ್ಗಸಂಘರ್ಷ

೨.೭ ಬಸವಣ್ಣ ಮತ್ತು ಕಾರ್ಲ್‌ಮಾರ್ಕ್ಸ್

೨.೮ ಜನಪದರ ದೃಷ್ಟಿಯಲ್ಲಿ ವರ್ಗಪರಿಕಲ್ಪನೆ

ಅಧ್ಯಾಯ ೨

ವರ್ಗದ ಪರಿಕಲ್ಪನೆ

ವರ್ಗ ಪರಿಕಲ್ಪನೆಯನ್ನು ಹೆಚ್ಚು ಸೂಕ್ಷ್ಮರೀತಿಯಲ್ಲಿ ಪರಿಶೀಲಿಸುವ ಅಗತ್ಯ ಕಂಡುಬಂದಿದೆ. ಜಾನಪದ ಸಾಹಿತ್ಯದಲ್ಲಿ ವರ್ಗಸಂಘರ್ಷ ವಿಷಯ ಪ್ರವೇಶ ಮಾಡುವ ಮೊದಲು ಅಂತರ್-ಶಿಸ್ತೀಯ ನೆಲೆಗಟ್ಟಿನಲ್ಲಿ ವರ್ಗದ ಪರಿಕಲ್ಪನೆಯನ್ನು ತಿಳಿದುಕೊಳ್ಳುವ ಅಗತ್ಯವಿದೆ. ಈ ವಿಷಯದ ಕುರಿತು ದಾರ್ಶನಿಕರು, ವಿದ್ವಾಂಸರ ಅಭಿಪ್ರಾಯಗಳನ್ನು ಅವಲೋಕಿಸಬೇಕಾಗುತ್ತದೆ. ಆದ್ದರಿಂದ ಸಾಮಾಜಿಕ, ಆರ್ಥಿಕ ಹಿನ್ನಲೆ, ಭಾರತದಲ್ಲಿ ವರ್ಗಪರಿಕಲ್ಪನೆ, ಕಾರ್ಲ್‌ಮಾರ್ಕ್ಸ್, ಅಂಬೇಡ್ಕರ್, ಬಸವಣ್ಣ, ಮತ್ತು ಇನ್ನಿತರೆ ಸಮತಾವಾದದ ಪ್ರತಿಪಾದಕರ ಅಭಿಪ್ರಾಯಗಳನ್ನು ಈ ಮಹಾಪ್ರಬಂಧದಲ್ಲಿ ಕ್ರೋಢೀಕರಿಸಲಾಗಿದೆ. ಸಮಾಜದಲ್ಲಿ ವ್ಯಕ್ತಿಗಳು ಯಾವ ಒಂದು ವರ್ಗಪ್ರಜ್ಞೆ ಮತ್ತು ವರ್ಗದ ಲಕ್ಷಣ ಸ್ಥಾಪನೆ ಮಾಡಿಕೊಂಡು ವರ್ಗೀಕರಿಸಿಕೊಳ್ಳುವರೋ ಆ ರೀತಿಗಳನ್ನು ವರ್ಗಗಳೆಂದು ಕರೆಯಬಹುದು. ಅಥವಾ ಉದ್ಯೋಗ, ವರಮಾನಗಳಂಥ ಯಾವುದಾದರೂ ವಸ್ತುನಿಷ್ಠ ಪ್ರಮಾಣಗಳ ದೃಷ್ಟಿಯಿಂದ ವರ್ಗಗಳ ಲಕ್ಷಣ ರೂಪಿಸಬಹುದು. ಹೆಚ್ಚು ತೃಪ್ತಿಕರವಾದ ಒಂದು ಮಾರ್ಗ ಯಾವುದೆಂದರೆ, ಯಾವುದಾದರೊಂದು ಉತ್ಕೃಷ್ಟ ಸ್ಥಾನದ ದೃಷ್ಟಿಯಲ್ಲಿ, ಸಾಮಾನ್ಯವಾಗಿ ವರಮಾನ, ವೃತ್ತಿ ಅಥವಾ ಸಂಪತ್ತುಗಳಂಥ ಆರ್ಥಿಕ ಪ್ರಮಾಣಗಳ ದೃಷ್ಟಿಯಲ್ಲಿ ವರ್ಗವನ್ನು ವಿವರಿಸುವುದು. ಕಾರ್ಲ್ ಮಾರ್ಕ್ಸ್ ಎಂಬುವರು ಉತ್ಪನ್ನಕಾರಕ ಸಂಪನ್ಮೂಲಗಳ ಮಾಲಿಕತ್ವ ಪಡೆದ ಮಧ್ಯಮ ತರಗತಿಯ ಪ್ರಜಾವರ್ಗ ಮತ್ತು ಅವನ್ನು ಹೊಂದದ ಶ್ರಮಜೀವಿಗಳ ಮಧ್ಯೆ ಭಿನ್ನತೆ ಮೂಡಿಸಿದರು. ಹಾಗೆಯೇ **ಮ್ಯಾಕ್ಸ್ ವೇಬರ್**[೧] **'ವರ್ಗ** ಮತ್ತು **ಅಂತಸ್ತು'** ಇವುಗಳ ನಡುವೆ ಭಿನ್ನತೆ ಕಲ್ಪಿಸಿದರು. ಇವರ ಪ್ರಕಾರ ಅಂತಸ್ತು ಎಂದರೆ ಸಾಮಾಜಿಕ ಮನ್ನಣೆ ಅಥವಾ ಸಾಮಾಜಿಕ ಮರ್ಯಾದೆ. ಅವರು ಇನ್ನು ಮುಂದುವರೆದು ತಿಳಿಸುವುದೆಂದರೆ 'ಅಂತಸ್ತು

ಎಂಬುದು ಸಹಜವಾಗಿ ಕೇವಲ ಆಸ್ತಿಯನ್ನು ಕುರಿತ, ನ್ಯಾಯವಾದ ಹಕ್ಕುಗಳಿಗೆ ಸ್ಪಷ್ಟವಾಗಿ ವಿರುದ್ಧವಾಗಿರುತ್ತದೆ' ಈ ಪ್ರಕಾರ ಶ್ರೀಮಂತ ಪ್ರಭುತ್ವದಂಥ ಉನ್ನತ ಅಂತಸ್ತನ್ನುಳ್ಳ ಸಮೂಹವನ್ನು ಪ್ರವೇಶಿಸಲು ಐಶ್ವರ್ಯದ ಅರ್ಜನೆಯೇ ತೃಪ್ತಿಕರವಾದೊಂದು ಆಧಾರವಾಗಿಲ್ಲ. ಆಧುನಿಕ ಔದ್ಯೋಗಿಕ ಸಮಾಜಗಳಲ್ಲಿನ ಸ್ತರವಿನ್ಯಾಸದ ವಿಶ್ಲೇಷಣೆಗೆ **ವೇಬರ್** ನೀಡಿರುವ ಭಿನ್ನತೆಯ ಮೌಲ್ಯವನ್ನು **ಡಾ.ಲಾಕ್‌ವುಡ್**[೨] ಅವರು ಬ್ರಿಟನ್ನಿನ ಗುಮಾಸ್ತೆ ಕೆಲಸಗಾರನ ಬಗ್ಗೆ ನಡೆಸಲಾದ ತಮ್ಮ ಅಧ್ಯಯನದಲ್ಲಿ ಉದಾಹರಣೆಗಳಿಂದ ಸ್ಪಷ್ಟಪಡಿಸಿದ್ದಾರೆ.

ಮಾರುಕಟ್ಟೆಯ ಪರಿಸ್ಥಿತಿಯ ದೃಷ್ಟಿಯಿಂದ ತೀರ್ಮಾನಿಸುವುದಾದರೆ, ಶ್ರಮಜೀವಿ ಮತ್ತು ಗುಮಾಸ್ತರ ನಡುವೆ ಅಂತರ ಕಲ್ಪಿಸುವುದು ಕಷ್ಟವಾಗುತ್ತದೆ. ಅವರೀರ್ವರೂ ಹಣದ ಒಂದು ವರಮಾನಕ್ಕಾಗಿ ತಮ್ಮ ಶ್ರಮವನ್ನು ಮಾರಿಕೊಳ್ಳುತ್ತಾರೆ. ಆದರೆ ಅಧಿಕ ಸಂಖ್ಯೆಯ ಗುಮಾಸ್ತರಲ್ಲಿ ಎಂದಿಗೂ ಕಂಡುಬರದ ವರಮಾನದಲ್ಲಿನ ವ್ಯತ್ಯಾಸಗಳನ್ನು ಇತ್ತೀಚೆಗೆ ಕಡಿಮೆ ಮಾಡಲಾಗಿದೆ. ಆರ್ಥಿಕ ವರ್ಗದ ದೃಷ್ಟಿಯಲ್ಲಿ ಭಿನ್ನತೆ ಕಲ್ಪಿಸುವುದು ಕಷ್ಟಸಾಧ್ಯವಾದುದು. ಆದರೆ ಗುಮಾಸ್ತನು ಶ್ರಮಜೀವಿಯು ಹೊಂದಿರುವುದಕ್ಕಿಂತಲೂ ಶ್ರೇಷ್ಠವಾದೊಂದು ಸಾಮಾಜಿಕ ಅಂತಸ್ತನ್ನು ಹೊಂದಿರುತ್ತಾನೆ. ಕುಲೀನರೊಂದಿಗೆ ಎಡೆಬಿಡದೆ ಹೊಂದಿಕೊಂಡಿರುತ್ತಾನೆ. ಹೀಗೆ **ವೇಬರ್** ಮತ್ತು **ಡಾ.ಲಾಕ್‌ವುಡ್** ರವರ ಪ್ರಕಾರ ಶ್ರಮಜೀವಿ ಮತ್ತು ಗುಮಾಸ್ತ ಆರ್ಥಿಕ ವರ್ಗದ ಹಿನ್ನಲೆಯಲ್ಲಿ ಒಂದೇಯಾಗಿದ್ದರೂ ಸಾಮಾಜಿಕ ಅಂತಸ್ತಿನ ಹಿನ್ನಲೆಯಲ್ಲಿ ಬೇರೆ ಬೇರೆಯಾಗಿ ಕಾಣುತ್ತಾರೆ. ಆದರೆ ವರ್ಗ ಮತ್ತು ಅಂತಸ್ತುಗಳು ಪರಸ್ಪರ ಸಂಬಂಧ ಪಡೆದಿವೆ ಎಂಬುದು ನಿಜ. ಗತಕಾಲದಲ್ಲಿ ಗುಮಾಸ್ತನು ಹೊಂದಿದ್ದ ಆರ್ಥಿಕ ಮೇಲ್ಮೆಯು ಒಂದು ಭಾಗದಲ್ಲಿ ಅವನ ಉಚ್ಚ ಅಂತಸ್ತಿನ ಒಂದು ಪ್ರತಿಬಿಂಬವಾಗಿದೆಯೆಂದು **ಲಾಕ್‌ವುಡ್** ತರ್ಕಿಸುತ್ತಾರೆ.[೩]

ಆದಾಗ್ಯೂ ವರ್ಗ ಮತ್ತು ಅಂತಸ್ತುಗಳ ನಡುವಣ ಭಿನ್ನತೆಯು ಅಸ್ತಿತ್ವದಲ್ಲಿ ಉಳಿದು ಅದು ವರಮಾನ ಮತ್ತು ಘನತೆಗಳನ್ನು ಕುರಿತ ಏಣಿಶ್ರೇಣಿಗಳ ನಡುವಣ ವ್ಯತ್ಯಾಸಗಳಲ್ಲಿ ಪ್ರತಿಬಿಂಬಿತವಾಗಿದೆ. ಒಬ್ಬ ವ್ಯಕ್ತಿಯು ಎಷ್ಟು ಸಮೂಹಗಳ ಸಂಬಂಧವನ್ನು ಹೊಂದಿರುವನೋ ಅಷ್ಟೇ ಸಂಖ್ಯೆಯ ಅಂತಸ್ತುಗಳನ್ನು ಹೊಂದಿರುತ್ತಾನೆ. ಉದಾಹರಣೆಗೆ ಹರೀಶ ಎಂಬುವವನು ಒಬ್ಬ ಪುರುಷನಾಗಿ, ಒಬ್ಬ ಪ್ರೌಢನಾಗಿ, ಒಬ್ಬ ಗಂಡನಾಗಿ, ಮತ್ತು ಒಬ್ಬ ತಂದೆಯಾಗಿ, ಅಂತಸ್ತನ್ನು ಹೊಂದಿರುತ್ತಾನೆ. ಹರೀಶ ಸ್ಥಳೀಯ ದೇವಸ್ಥಾನದಲ್ಲಿ ಪೂಜಾರಿಯಾಗಿಯೂ ಹಿರಿಯ ಅಂತಸ್ತನ್ನು ಅಲಂಕರಿಸಿರುತ್ತಾನೆ. ಚಿಕ್ಕ ಕಾಲೇಜಿನಲ್ಲಿ ಉಪನ್ಯಾಸಕನಾಗಿಯೂ ಸಹ ಅಂತಸ್ತನ್ನು ಪಡೆದಿರುತ್ತಾನೆ. ಹರೀಶನ ಮನೆತನದವರು ಬೇಕಾದಷ್ಟು ಖಾಸಗಿ ಸಾಧನಗಳನ್ನೂ ಹೊಂದಿರುತ್ತಾರೆ. ಅತ್ಯುತ್ತಮ ಕ್ಲಬ್ಬುಗಳ ಸದಸ್ಯರಾಗಿರುತ್ತಾರೆ ಮತ್ತು ಅತ್ಯುತ್ತಮ ಪ್ರಭಾವ ಕ್ಷೇತ್ರಗಳಲ್ಲಿ ಓಡಾಡುತ್ತಾರೆ. ಒಬ್ಬ ವ್ಯಕ್ತಿಯ ಸಾಮಾಜಿಕ ಅಂತಸ್ತನ್ನು ಕುರಿತು ಮಾತನಾಡುವಾಗ ನಾವು ರೂಢಿಯ ಪ್ರಕಾರ ಒಂದು ಸಾಮಾನ್ಯೀಕರಣವನ್ನು ಮಾಡದೆ ಒಂದು ಆಯ್ಕೆಯನ್ನು ಮಾಡುತ್ತೇವೆ. ನಾವು ಮನಸ್ಸಿನಲ್ಲಿ ನಿರ್ದಿಷ್ಟವಾಗಿ ಒಂದೇ ಅಂತಸ್ತನ್ನು ಇಟ್ಟುಕೊಂಡಿರುತ್ತೇವೆ. ಅವನ ಸಾಮಾಜಿಕ

ವರ್ಗದ ಅಂತಸ್ತೇ ಅದು. ಅವನ ಕುಟುಂಬ, ಅವನ ಸಂಪತ್ತಿನ ಪ್ರಮಾಣ, ಅವನು ವ್ಯವಹರಿಸುವ ಪ್ರಭಾವ ಕ್ಷೇತ್ರಗಳು ಇವನ್ನ ನಾವು ಪರಿಗಣಿಸುತ್ತೇವೆ. ಹರೀಶನ ಅಂತಸ್ತನ್ನು ಕುರಿತು ಆಲೋಚಿಸುವಲ್ಲಿ ದೇವಾಲಯದಲ್ಲಿ ಹೊಂದಿರುವ ಅವನ ತಟಸ್ಥ ಅಂತಸ್ತನ್ನೂ ನಾವು ಗಮನಿಸದೆ, ಸಾಮಾಜಿಕ ವರ್ಗದಲ್ಲಿನ ಅವನ ಅಂತಸ್ತಿನ ಮೇಲೆ ಹೆಚ್ಚಾದ ಗಮನ ಹಾಯಿಸುತ್ತೇವೆ.

ವರ್ಗ ಅಂತಸ್ತು ಉಳಿದ ಎಲ್ಲ ಬಗೆಯ ಅಂತಸ್ತುಗಳನ್ನೂ ಮೀರಿಸುವುದೆಂದೂ ತೋರುತ್ತದೆ. ಒಬ್ಬ ವಿಜ್ಞಾನಿಯು ಸಂಶೋಧನ ಕಾರ್ಯಕರ್ತನಾಗಿ ತನ್ನ ಅಂತಸ್ತಿನ ಬಗ್ಗೆಯಾಗಲಿ ಅಥವಾ ಒಬ್ಬ ಪಂಡಿತನು ತನ್ನ ಉದ್ಯೋಗವನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುವ ಬಗ್ಗೆಯಾಗಲಿ ಎಚ್ಚರಿಕೆ ವಹಿಸಬಹುದಾದರೂ, ಅಂತಸ್ತು ಅಧಿಕಾರದೊಂದಿಗೂ, ಉನ್ನತ ಜೀವನಮಟ್ಟದೊಂದಿಗೂ ಮತ್ತು ಸಾಮಾಜಿಕ ಮೆಚ್ಚಿಗೆಯೊಂದಿಗೂ ಸಹಸಂಬಂಧಿಸಿರುವ ಕಾರಣದಿಂದ ನಮ್ಮ ಸಂಸ್ಕೃತಿಯಲ್ಲಿ ಅತ್ಯಧಿಕ ಜನರು ಮೇಲಣ ವರ್ಗದೊಂದಿಗೆ ಅನನ್ಯ ಸಂಬಂಧವನ್ನಿಟ್ಟು ಕೊಳ್ಳಲು ಆಶಿಸುತ್ತಾರೆ.

೨.೧ ಸಾಮಾಜಿಕ ವರ್ಗಪರಿಕಲ್ಪನೆ:

ಪ್ರತಿಯೊಬ್ಬ ವ್ಯಕ್ತಿಯೂ ವಯೋಬೇಧದ ಮೇಲಿಂದ ರಚಿತವಾದ ಒಂದು ವರ್ಗಕ್ಕೂ ಮತ್ತು ಲಿಂಗಭೇದದ ಮೇಲಿಂದ ರಚಿತವಾದ ಒಂದು ವರ್ಗಕ್ಕೂ ಸೇರಿರುತ್ತಾನೆ. ಇದರ ಜೊತೆಗೆ ಅವನಿಗೆ ಹುಟ್ಟುವಾಗಲೇ ವಿಶಿಷ್ಟವಾದ ಒಂದು ಸಾಮಾಜಿಕ ವರ್ಗವನ್ನು ಗೊತ್ತು ಮಾಡಲಾಗಿರುತ್ತದೆ. "ಸಾಮಾಜಿಕವಾಗಿ ಶ್ರೇಷ್ಠ ಮತ್ತು ಕನಿಷ್ಠ ಸ್ಥಾನಗಳಲ್ಲಿ ಸಮುದಾಯದ ಸದಸ್ಯರು ವರ್ಗೀಕರಿಸುವ ವ್ಯಕ್ತಿಗಳ ವಿಶಾಲವಾದ ಎರಡು ಅಥವಾ ಅಧಿಕ ಸಮೂಹಗಳಲ್ಲಿ ಒಂದನ್ನು ನಾವು ಸಾಮಾಜಿಕ ವರ್ಗ"[೪] ಎಂದು ಕರೆಯುತ್ತೇವೆ.

ಒಂದು ಸಾಮಾಜಿಕ ವರ್ಗದಲ್ಲಿ ಸ್ತ್ರೀ–ಪುರುಷರೀರ್ವರೂ ಮತ್ತು ಎಲ್ಲ ವಯಸ್ಸಿನ ಜನರೂ ಇರುತ್ತಾರೆ. ಒಂದು ಸಾಮಾಜಿಕ ವರ್ಗದ ಮೂಲಭೂತ ಲಕ್ಷಣ ಯಾವುದೆಂದರೆ ಇತರ ಸಾಮಾಜಿಕ ವರ್ಗಗಳೊಡನೆ ಪರಸ್ಪರ ಹೋಲಿಸಿ ನೋಡಿದಾಗ ಕಂಡುಬರುವ ತೌಲನಿಕವಾದ ಶ್ರೇಷ್ಠವಾದ ಅಥವಾ ಕನಿಷ್ಠವಾದ ಸಾಮಾಜಿಕಸ್ಥಾನ, ಅಧಿಕಾರಿಗಳು, ಸನ್ನದಿನ ಅಧಿಕಾರಿಗಳು ಮತ್ತು ಸಾಮಾನ್ಯ ಸೈನಿಕರನ್ನೊಳಗೊಂಡ ಸೇನೆಯಂತೆ ವ್ಯವಸ್ಥೆ ಇರುತ್ತದೆ. ಉದಾಹರಣೆಗೆ ಪುರಾತನ ರೋಮ್ ದೇಶದಲ್ಲಿ ಗುಲಾಮರು, ಸಾಮಾನ್ಯ ಪ್ರಜೆಗಳಿಂದ ಕೂಡಿದ ವಿಶಾಲವಾದ ಸಾಮಾನ್ಯವರ್ಗ ಮತ್ತು ಐದು ಶ್ರೇಷ್ಠ ವರ್ಗಗಳಿದ್ದವು. ಮಧ್ಯ ಯುಗದ ಯೂರೋಪಿನ ಥೂ ಎಂಬ ವರ್ಗವು ಸಾಮಾಜಿಕ ಪಿರಮಿಡ್ಡಿನ ತಳದಲ್ಲಿತ್ತು. ಅನುಕ್ರಮವಾಗಿ ಸ್ಥಾನದಲ್ಲಿ ಉನ್ನತ ರೈತರು, ನಿಕೃಷ್ಟರು, ಸ್ವತಂತ್ರ ಬಾಡಿಗೆದಾರರು ಮತ್ತು ಕೀಳ್ಮಟ್ಟದ ಕುಲೀನರೂ ಮತ್ತು ಉಚ್ಚ ಸ್ಥಾನದಲ್ಲಿ ಶ್ರೀಮಂತ ವರ್ಗದವರು, ರಾಜಮನೆತನದವರು ಮತ್ತು ಧರ್ಮಾಧಿಕಾರಿಗಳೂ ಇದ್ದರು. ಥೂ ಎಂಬ ವರ್ಗದ ಸದಸ್ಯರು ಗುಲಾಮರಾಗಿದ್ದುದರಿಂದ

ಇಷ್ಟ ಪ್ರಕಾರ ಅವರನ್ನು ಕೊಳ್ಳುವವರು ಯಾರೇ ಇದ್ದರೂ ಅವರಿಗೆ ಮಾರಿಬಿಡಬಹುದಾಗಿತ್ತು. ಸರ್ಕಾರಿ ಅಧಿಕಾರವೆಲ್ಲವೂ ಶ್ರೀಮಂತರ ಧರ್ಮಾಧಿಕಾರಿಗಳ ಮತ್ತು ದೊರೆಗಳ ಕೈಯಲ್ಲಿತ್ತು.

ವ್ಯಾವಹಾರಿಕವಾಗಿ ಒಂದು ವರ್ಗವ್ಯವಸ್ಥೆಯು ಜನತೆಯ ಸಾಮಾಜಿಕ ಪ್ರತಿಫಲಗಳ ಮೇಲೆ ಬಹಳವಾಗಿ ಪರಿಣಾಮವನ್ನುಂಟು ಮಾಡುತ್ತದೆಂಬುದರಲ್ಲಿ ಅದರ ಸಾಮಾಜಿಕ ಮಹತ್ವವಡಗಿದೆ. ಒಂದು ನಿರ್ದಿಷ್ಟ ವರ್ಗದ ಸದಸ್ಯರು ಹೆಚ್ಚು ಕಡಿಮೆ ಒಂದೇ ಜೀವನಾವಕಾಶಗಳನ್ನು ಹೊಂದಿರುತ್ತಾರೆ. ಎಂದರೆ ಸ್ವಾತಂತ್ರ್ಯ, ಉನ್ನತ ಜೀವನ ಮಟ್ಟ, ವಿಶ್ರಾಂತಿ, ಮರ್ಯಾದೆ, ಇಂಥ ಜೀವನದ ಒಳ್ಳೆಯ ವಿಷಯಗಳನ್ನಾಗಲಿ, ಅಥವಾ ಒಂದು ಗೊತ್ತಾದ ಸಮಾಜದಲ್ಲಿ ಹೆಚ್ಚಿನ ಮೌಲ್ಯವನ್ನುಳ್ಳ ಯಾವುದಾದರೂ ವಸ್ತುವನ್ನಾಗಲಿ ಸಂಪಾದಿಸುವ ಸಂಭಾವ್ಯತೆ ಒಂದೇ ಆಗಿರುತ್ತದೆ. ಒಂದು ಸಾಮಾಜಿಕ ವರ್ಗವನ್ನು ಅದರ ಸದಸ್ಯರ ಕೆಲವೊಂದು ಸಾಮ್ಯಗಳನ್ನು ಆಧರಿಸಿದ ಒಂದು ಸಮೂಹವೆಂದು ನಾವು ಪರಿಗಣಿಸುವುದಾದರೆ ಆಗ ಅದನ್ನು ಒಂದೇ ಸಾಮಾಜಿಕ ಸದವಕಾಶಗಳನ್ನುಳ್ಳ ಸದಸ್ಯರ ಒಂದು ಸಮೂಹವೆಂದು ನಾವು ಭಾವಿಸಬೇಕಾಗುತ್ತದೆ.

೨.೨ ಆರ್ಥಿಕ ವರ್ಗಪರಿಕಲ್ಪನೆ:

ಸಮಾಜದಲ್ಲಿ ಅನೇಕ ವರ್ಗಗಳಿದ್ದರೂ ಆರ್ಥಿಕ ಹಿನ್ನೆಲೆಯಲ್ಲಿ ಮುಖ್ಯವಾಗಿ ಎರಡು ಹೋರಾಟದ ಬಣಗಳಾಗಿ ಏರ್ಪಡುತ್ತವೆ. ಅವು ತಮ್ಮ ತಮ್ಮ ಹಿತಾಸಕ್ತಿಗಾಗಿ ಸಂಘರ್ಷಕ್ಕೆ ಇಳಿಯುತ್ತವೆ. ಈ ಸಂಘರ್ಷ ಅಸ್ತಿತ್ವದಲ್ಲಿರುವ ಉತ್ಪಾದನಾ ವ್ಯವಸ್ಥೆಯನ್ನು ಬದಲಿಸುತ್ತದೆ. ಆಗ ಮತ್ತೊಂದು ಹೊಸ ವ್ಯವಸ್ಥೆ ಮೂಡಿ ಬರುತ್ತದೆ. ಹೀಗೆ ಗುಲಾಮಗಿರಿ ವ್ಯವಸ್ಥೆ ಸಂಘರ್ಷಗೊಳಗಾದಾಗ, ಜಮೀನುದಾರಿ ವ್ಯವಸ್ಥೆಯೂ, ಜಮೀನುದಾರಿ ವ್ಯವಸ್ಥೆಯಿಂದ ಬಂಡವಾಳಶಾಹಿ ವ್ಯವಸ್ಥೆಯೂ, ರೂಪು ತಳೆಯುತ್ತ ಬಂದಿದೆ. ಈ ಸಂಘರ್ಷದ ಒಳ ನೆಲಲಾಗಿ ಆರ್ಥಿಕ ವ್ಯವಸ್ಥೆ ಇರುತ್ತದೆ ಎಂಬುದೇ ಮೂಲ ಸಿದ್ಧಾಂತ.

ಹತ್ತೊಂಬನೇಯ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ದೊಡ್ಡ ಕೈಗಾರಿಕಾ ಕ್ರಾಂತಿ ಸಂಭವಿಸಿತು. ಹಬೆ ಇಂಜಿನ್, ನೂಲು ಯಂತ್ರ ಹೀಗೆ ಭಾರಿ ಭಾರಿ ವೈಜ್ಞಾನಿಕ ಸಂಶೋಧನೆಗಳು ನಡೆದವು. ಇದರ ಫಲವಾಗಿ ಉದ್ಯೋಗದಲ್ಲೇ ಯಾಂತ್ರೀಕರಣ ನಡೆಯಿತು. ಈ ಯಾಂತ್ರೀಕರಣದಿಂದ ಉತ್ಪತ್ತಿ ಹೆಚ್ಚಿತು. ಕಡಿಮೆ ವೇಳೆಯಲ್ಲೇ ಅತಿ ಹೆಚ್ಚು ಸಾಮಗ್ರಿಗಳು ಉತ್ಪತ್ತಿಯಾಯಿತು. ಹೀಗೆ ಉತ್ಪತ್ತಿಯಾದ ಸಾಮಗ್ರಿಗಳು ಚಿಕ್ಕ ಕೈಗಾರಿಕೆಗಳೊಡನೆ ಮಾರುಕಟ್ಟೆಯಲ್ಲಿ ಸ್ಪರ್ಧೆಗೆ ಇಳಿದವು. ಇದರಲ್ಲಿ ಸಣ್ಣ ಕೈಗಾರಿಕೆಗಳು ನಾಶವಾದವು.

ಭಾರಿ ಯಂತ್ರವನ್ನು ಪಡೆಯುವುದು ಬಡವರಿಂದ ಸಾಧ್ಯವಿರಲಿಲ್ಲ. ಅದಕ್ಕೆ ದೊಡ್ಡ ಬಂಡವಾಳವೇ ಬೇಕಾಯಿತು. ಅಂಥ ಭಾರೀ ಉದ್ಯಮವನ್ನು ಧನವಂತರೇ ಮಾಡಿದರು. ನಿರುದ್ಯೋಗಿ ಬಡವರು ಹಳ್ಳಿಯ ಕೂಲಿಕಾರರು ಈ ದೊಡ್ಡ ಕಾರಖಾನೆಯಲ್ಲಿ ಕೂಲಿಗಳಾದರು. ಇದರಿಂದ ಉತ್ಪಾದನೆಗೆ

ಹೆಚ್ಚಿನ ಚಲನೆ ದೊರಕಿತು. ಹೀಗೆ ಸಿಕ್ಕ ಚಾಲನೆಯಿಂದ ಶ್ರಮ ವಿಭಜನೆಯೂ ಹೆಚ್ಚಿ ಉತ್ಪತ್ತಿಯಲ್ಲಿ ಕುಶಲತೆ ಮತ್ತು ಗಾತ್ರ ಎರಡೂ ಹೆಚ್ಚಾಯಿತು. ಕಾರಖಾನೆ ಬೆಳೆದಂತೆ ಅದರ ಶ್ರಮ ಜೀವಿಗಳ ಅಥವಾ ಕಾರ್ಮಿಕರ ಸಂಖ್ಯೆ ಹೆಚ್ಚಾಯಿತು. ಒಂದು ಪ್ರಕ್ರಿಯೆಯಲ್ಲಿ ಬಂಡವಾಳಶಾಹಿ ವರ್ಗ ಮತ್ತು ಕಾರ್ಮಿಕ ವರ್ಗ ಎಂಬ ಎರಡು ಶಿಬಿರಗಳು ಉಂಟಾದವು.

೨.೩ ಜಾತಿ ಮತ್ತು ವರ್ಗ:

ಭಾರತದ ಸಾಮಾಜಿಕ ಪದ್ಧತಿಯ ಪ್ರಧಾನ ಲಕ್ಷಣ ಎಂದರೆ ಜಾತಿ. ಇದು ಸಾಮಾಜಿಕ ವ್ಯವಸ್ಥೆಗೆ ಅಡಿಪಾಯವಷ್ಟೇ ಅಲ್ಲ, ಸಾಮಾಜಿಕ ಸಂಸ್ಥೆಯಾಗಿ ಬಲಗೊಂಡು ಪ್ರಾಚೀನ ಕಾಲದಿಂದ ಇಂದಿನ ಆಧುನಿಕ ಕಾಲದವರೆಗೂ ಮುಂದುವರೆಯುತ್ತಿದೆ. ಜಾತಿ ಎಂದರೆ ಆಳುವ ವರ್ಗಗಳು ಶ್ರಮ, ಶೋಷಣೆಗೆ ನಿರ್ಮಿಸಿಕೊಂಡ ಕೆಟ್ಟ ವ್ಯವಸ್ಥೆ. ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿ ಪ್ರಾಚೀನ ಕಾಲದಿಂದ ಇಂದಿನ ಆಧುನಿಕ ಕಾಲದವರೆಗೂ ದುಡಿಯುವ ಸಮೂಹಗಳನ್ನು ಶೋಷಿಸುವ ಹಾಗೂ ದಮನಿಸುವ ವಿಧಾನಗಳಲ್ಲಿ ಪ್ರಧಾನ ಪಾತ್ರವಹಿಸುತ್ತದೆ. ಭಾರತೀಯ ಹಿಂದೂ ಸಮಾಜದಲ್ಲಿ ಜಾತಿ ಎನ್ನುವುದು ಒಂದು ಕೋಟೆ. ಜಾತಿ ಎನ್ನುವುದು ಒಂದು ಪರಿವೇಷ್ಟಿತ ವರ್ಗ, ಜಾತಿ ಎನ್ನುವುದು ಒಂದು ಪೂರ್ವ ನಿಶ್ಚಿತ ಬದುಕಿನ ವಿಧಾನ. ಭಾರತದಲ್ಲಿ ಜಾತಿ ಇರುವವರೆಗೂ ಹಿಂದೂಗಳೂ ಅಂತರ್ಜಾತಿ ವಿವಾಹವಾಗಲು ಅಥವಾ ಹೊರಗಿನವರೊಂದಿಗೆ ಸಾಮಾಜಿಕ ಸಂಬಂಧ ಹೊಂದಲು ಅಥವಾ ಹಿಂದೂಗಳೂ ಪ್ರಪಂಚದ ಬೇರೆ ಭಾಗಗಳಿಗೆ ವಲಸೆ ಹೋಗಲು ಸಾಧ್ಯವಿಲ್ಲ. ಭಾರತದ ಜಾತಿಯು ಒಂದು ಲೋಕ ಸಮಸ್ಯೆಯಾಗಿ ಪರಿಣಮಿಸುತ್ತದೆ. ಏಕೆಂದರೆ ಈ ಹಂತದಲ್ಲಿ ಜಾತಿ ಸಮಸ್ಯೆಯೆನ್ನುವುದು ಜಗತ್ತಿನ ಯಾವ ದೇಶಗಳಲ್ಲೂ ಕಾಣದೆ ಭಾರತಕ್ಕೆ ವಿಶೇಷವಾಗಿ ತಗುಲಿರುವ ಪಾಪವೆಂದು ನಿಖರವಾಗಿ ಹೇಳಬಹುದು. ಜಾತಿ ಎನ್ನುವುದು ಪ್ರತ್ಯೇಕಗೊಂಡ ವಿಭಿನ್ನವಾದ ವಿಶೇಷ ಘಟಕ. ಅದು ಇನ್ನೊಂದು ಘಟಕದೊಂದಿಗೆ ಯಾವುದೇ ಸಂಬಂಧವನ್ನು ನಿರಾಕರಿಸುತ್ತದೆ. ಒಟ್ಟಿಗೆ ಊಟ ಮಾಡುವಂತಿಲ್ಲ, ವಿವಾಹವಾಗುವಂತಿಲ್ಲ, ಕಸುಬನ್ನು ಜೊತೆಯಲ್ಲಿ ಮಾಡುವಂತಿಲ್ಲ. ಹೀಗೆ ಅಡ್ಡ ಗೋಡೆಗಳು ನಿರ್ಮಾಣವಾಗಿ ಬಿಟ್ಟಿವೆ. 'ಕ್ಯಾಸ್ಟ್' ಎನ್ನುವುದು ಗೊಂದಲ ಉಂಟುಮಾಡುವ ಪದ. ಬೇರೆ ಬೇರೆ ಸಂದರ್ಭಗಳಲ್ಲಿ ಅದನ್ನು ಬೇರೆ ಬೇರೆ ಅರ್ಥಕೊಡುವಂತೆ ಉಪಯೋಗಿಸಲಾಗಿದೆ. ಬೇರೆ ಬೇರೆ ಸಾಮಾಜಿಕ ಅಂತಸ್ತುಗಳನ್ನು ಅದು ಸೂಚಿಸುತ್ತದೆ. ಧಾರ್ಮಿಕಾಚರಣೆಗಳನ್ನು ಹೆಚ್ಚು ಕಡಿಮೆ ಸ್ಪಷ್ಟವಾಗಿ ನಿರ್ದಿಷ್ಟಪಡಿಸಿರುವ, ಸಂಪ್ರದಾಯದಿಂದ ಅಂಟಿಕೊಂಡು ಬಂದ ಯಾವುದೇ ಒಂದು ವೃತ್ತಿಯಿರುವ, ಸ್ವಗೋತ್ರ ವಿವಾಹಪದ್ಧತಿಯಿರುವ ಒಂದು ಸಮುದಾಯ ಅರ್ಥದಲ್ಲಿ ಜಾತಿ ಎಂಬ ಪದವನ್ನು ಬಳಸುವುದು ಸೂಕ್ತವೆಂದು ತೋರುತ್ತದೆ.

ಮಾನವ ಮೊದಲು ಬೇಸಾಯವೇ ಮೊದಲಾದ ಯಾವ ಉತ್ಪಾದನೆಯೂ ಇಲ್ಲದಾಗ ಅಂದರೆ ಕೇವಲ ಬೇಟೆಯಾಡಿಯೋ, ಗೆಡ್ಡೆಗೆಣಸುಗಳನ್ನು ಅರಸಿಯೋ ತಿನ್ನಬೇಕಾದ ಸಂದರ್ಭದಲ್ಲಿ ಎಲ್ಲರೂ

ಗುಂಪು ಅನುಸರಿಸಬೇಕಿತ್ತು. ಆದರೆ ಮುಂದೆ ಒಕ್ಕಲುತನ ಗೊತ್ತಾದ ಮೇಲೆ ಒಕ್ಕಲುತನಕ್ಕೆ ಅವಲಂಬಿಸಿ ಅನೇಕ ಆಯಗಾರರು ಉಂಟಾದರು. ನೇಗಿಲು ಮಾಡಲು ಬಡಿಗೇರು, ಕಬ್ಬಿಣದ ಕೆಲಸ ಮಾಡಲು ಕಮ್ಮಾರ, ಎಲ್ಲದಕ್ಕಿಂತ ಮೊದಲು ಆರಂಭವಾದ ಕೆಲಸ ಮಡಿಕೆ ಮಾಡುವುದು. ಮಡಿಕೆ ಮಾಡಲು ಕುಂಬಾರ, ತೊಗಲಿನ ಕೆಲಸ ಮಾಡಲು ಚಮ್ಮಾರ, ಮುಂತಾದ ಉದ್ಯೋಗಕ್ಕೆ ಸಂಬಂಧಿಸಿದ ಉದ್ಯೋಗ ಪ್ರಾರಂಭವಾಗಿ ಕೆಲವೊಂದು ಜನ ಅದರಲ್ಲಿಯೇ ವೈಶಿಷ್ಟ್ಯವನ್ನು ಪಡೆದರು. ಅಲ್ಲದೆ ಬೇರೆ ಬೇರೆ ಪ್ರದೇಶದಲ್ಲಿ ಅದೇ ಉದ್ಯೋಗ ಮಾಡುವವರು ತಮ್ಮದೇ ಒಂದು ವರ್ಗ, ಜಾತಿ ಎಂದುಕೊಂಡರು. ದನಕರುಗಳನ್ನು ಸಾಕುತ್ತ ಸಂಚಾರಿಯಾಗಿರುವ ಜನ ಗೌಳಿಗರ ಜಾತಿಯಾಯಿತು. ನಾಗರಿಕತೆ ಬೆಳೆದರೂ ಇನ್ನೂ ಕಾಡಿನಲ್ಲೇ ಇರುವ ಇವರು ಕಿರಾತರಾಗಿಯೋ, ಇನ್ನಾವುದೊಂದು ಜಾತಿಯಾಗಿಯೋ ಬೆಳೆದರು.

ಇದರ ಒಟ್ಟೊಟ್ಟಿಗೆ ಸಂಭವಿಸಿದ ಸಂಗತಿಯೆಂದರೆ ಚಾತುರ್ವರ್ಣದ ಪ್ರಸ್ತಾಪ. ಸಮಾಜವೊಂದರ ಚಲನಶೀಲತೆ ಎನ್ನುವುದು ಅದರ ಶಕ್ತಿಗಳು. ಪ್ರಮುಖವಾಗಿ ಜನಶಕ್ತಿ, ಜವಾಬ್ದಾರಿಗಳು, ಉತ್ಪಾದನೆ, ವಿತರಣೆ ಮುಂತಾದ ಅಂಶಗಳನ್ನು ಅವಲಂಬಿಸಿರುತ್ತದೆ. ಸಮಾಜದ ಕ್ರಿಯಾಶೀಲತೆಗೆ ಬೇಕಾದ ಶಕ್ತಿಗಳನ್ನು, ಜವಾಬ್ದಾರಿಗಳನ್ನು ಹಂಚಿಕೊಟ್ಟು ಉತ್ಪಾದನೆ ಹಾಗೂ ವಿತರಣೆಗಳಿಗೆ ಒಂದು ಸಾಮಾಜಿಕ ಆಕಾರ ನೀಡುವ ಉದ್ದೇಶದಿಂದ ವರ್ಣವ್ಯವಸ್ಥೆ ಹಿಂದೂಧರ್ಮದ ದ್ರಾವಿಡರಲ್ಲಿ ಮೊದಲು ಹುಟ್ಟಿಕೊಂಡಿತು. ಇದನ್ನು ಸರಳೀಕರಿಸಿ ಹೇಳಬೇಕೆಂದರೆ ಸಮಾಜದ ಪ್ರತಿಯೊಬ್ಬರೂ ಉತ್ಪಾದನೆಯಲ್ಲಿ ಭಾಗವಹಿಸುತ್ತಾ, ಹಂಚಿಕೆಯಲ್ಲಿ ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಾ ಸಮಾಜದ ಜನತೆಯೆಲ್ಲಾ ಸಮಾನತೆ ಮತ್ತು ಸಹಕಾರ ತತ್ವಗಳ ಅಡಿಯಲ್ಲಿ ಕ್ರಿಯಾಶೀಲರಾಗಿದ್ದುಕೊಂಡು ಸಮಾಜದ ಚಲನಶೀಲತೆಗೆ ಕಾರಣವಾಗುವುದು ಎಂದು. ಹೀಗೆ ಹಿಂದೂ ದ್ರಾವಿಡರಲ್ಲಿ ಜವಾಬ್ದಾರಿಯ ಹಂಚಿಕೆಯಾಗಿತ್ತು. ಜನತೆ ಚಿಕ್ಕಚಿಕ್ಕ ಸಮಾಜಗಳಲ್ಲಿ ಜೀವಿಸುತ್ತಾ ಉತ್ಪಾದನೆ ಮತ್ತು ಹಂಚಿಕೆಯಲ್ಲಿ ಭಾಗವಹಿಸುತ್ತಿತ್ತು. ಆಗಲೇ ದ್ರಾವಿಡರ ಚಿಕ್ಕ ಚಿಕ್ಕ ಸಮಾಜಗಳಲ್ಲಿ ವ್ಯವಸಾಯ ಮಾಡುವುದು, ದನ ಕೊಯ್ಯುವುದು, ಕೆರ ಹೊಲಿಯುವುದು, ವ್ಯಾಪಾರ ಮಾಡುವುದು, ಬಟ್ಟೆ ಹೊಲಿಯುವುದು, ಬಳೆ ತೊಡಿಸುವುದು, ಬಟ್ಟೆ ತೊಳೆಯುವುದು, ಹೀಗೆ ಯಾವ ಕೆಲಸವನ್ನಾದರೂ ಯಾರು ಬೇಕಾದರೂ ಮಾಡಬಹುದಿತ್ತು. ಒಬ್ಬನು ಅಥವಾ ಸಮೂಹ ಪ್ರಾರಂಭದಿಂದ ಜೀವಿತದ ಕೊನೆಯವರೆವಿಗೂ ಒಂದೇ ವಿಧದ ಕೆಲಸವನ್ನೇ ಮಾಡುತ್ತಿದ್ದರೆ ಅಂತಹ ಕೆಲಸ ವೃತ್ತಿ ಅಥವಾ ಕಸುಬು ಎಂದು ಕರೆಸಿಕೊಳ್ಳುತ್ತದೆ. ಹೀಗೆ ಸಾಮಾಜಿಕ ಜವಾಬ್ದಾರಿಗಳಾದ ಉತ್ಪಾದನೆ ಮತ್ತು ವಿತರಣೆ ಕೆಲಸಗಳು ಬರುಬರುತ್ತಾ ವೃತ್ತಿಗಳು ಅನುವಂಶಿಕವಾಗಿ ಕೊನೆಗೆ ಜಾತಿ ಸೂಚಕಗಳಾಗಲು ಕಾರಣವಾಯಿತು. ಉದಾಹರಣೆಗೆ: ಬೇರೆ ಬೇರೆ ಸಮಾಜಗಳಲ್ಲಿನ ಎಲ್ಲಾ ಬಟ್ಟೆ ತೊಳೆಯುವವರು ಅಗಸರಾದರು, ಮಡಿಕೆ-ಕುಡಿಕೆ ಮಾಡುವವರು ಕುಂಬಾರರಾದರು, ಚರ್ಮದ ಕೆಲಸಮಾಡುವವರು ಚಮ್ಮಾರರಾದರು, ಬಳೆ ತೊಡಿಸುವವರು ಬಳೆಗಾರರಾದರು, ವ್ಯಾಪಾರ ಮಾಡುವವರು ಕೋಮಟಿಗರಾದರು. ಹೀಗೆ ಜವಾಬ್ದಾರಿ ಹಂಚಿಕೆಯ ರೂಪಗಳಾದ ವೃತ್ತಿಗಳು ಜಾತಿ ಮತ್ತು ವರ್ಣಗಳ ಹುಟ್ಟಿಗೆ ಕಾರಣವಾದವು.

ಹಂಚಿಕೆಯಾದ ಕೆಲವು ವೃತ್ತಿಗಳು ಬೆವರಿನ ಕಮಟು ವಾಸನೆಯ ಅಸಹ್ಯ ಹಾಗೂ ಕೊಳಕಿನ ವೃತ್ತಿಗಳಾಗಿದ್ದವು. ಈ ವೃತ್ತಿಗಳು ಸಾಮಾಜಿಕ, ಆರ್ಥಿಕ, ರಾಜಕೀಯ ಅವಶ್ಯಕತೆಗಳನ್ನು ಪೂರೈಸಿಕೊಡುವ ವೃತ್ತಿಗಳಾಗಿರಲಿಲ್ಲ. ಅಂದರೆ ಇವು ಯಾವುದೇ ಆಳ್ವಿಕೆ, ಆಲೋಚನೆ, ವ್ಯವಹಾರ ಮುಂತಾದವನ್ನು ಒಳಗೊಂಡಿರಲಿಲ್ಲ. ಆದುದರಿಂದ ಇವೆಲ್ಲವೂ ಕ್ಷುಲ್ಲಕವಾದವು; ನಿರುಪಯುಕ್ತವಾದವು ಎಂದು ಮುಂತಾಗಿ ಇತರ ವೃತ್ತಿಗಳವರು ಪರಿಗಣಿಸಲು ಅವಕಾಶವಾದ್ದರಿಂದ; ಮೇಲು ವೃತ್ತಿಗಳು ಅಥವಾ ಉತ್ತಮ ವೃತ್ತಿಗಳು ಮತ್ತು ಕೀಳುವೃತ್ತಿಗಳು ಎಂಬುದಾಗಿ ವರ್ಗೀಕರಣಗೊಂಡು; ಮೇಲುವೃತ್ತಿಯ ಜನರನ್ನು ಮೇಲ್ವರ್ಣದವರು ಹಾಗೂ ಕೀಳುವೃತ್ತಿಯ ಜನರನ್ನು ಕೆಳವರ್ಣದವರೆಂದು ವಿಭಾಗಿಸಲು ಕಾರಣವಾಯಿತು. ಇದು ಉಚ್ಚ-ಮಧ್ಯಮ-ನೀಚ ಎನ್ನುವ ಸ್ತರಗಳ ಸೃಷ್ಟಿಗೆ ಅವಕಾಶ ಮಾಡಿಕೊಟ್ಟಿತು. ಆಯಾಯ ವೃತ್ತಿಗಳಿಗೆ ಬೇಕಾದ ಅರ್ಹತಾ ಗುಣಗಳು, ಅವಕಾಶಗಳು ಆಯಾಯ ವರ್ಣಗಳಿಗೆ ಮಾತ್ರ ಸೀಮಿತವಾದವು. ಆದುದರಿಂದ ಅಕ್ಕಸಾಲಿಗನ ವೃತ್ತಿ ನೈಪುಣ್ಯತೆ ಕಮ್ಮಾರನಿಗೆ ಸಿಗಲಿಲ್ಲ. ನೇಕಾರನ ನೈಪುಣ್ಯತೆ ಕುಂಬಾರನಿಗೆ ಸಿಗಲಿಲ್ಲ, ಆಳ್ವಿಕೆಯ ನೈಪುಣ್ಯತೆ ವ್ಯಾಪಾರಗಾರನಿಗೆ ಸಿಗಲಿಲ್ಲ ಹಾಗೂ ಆಲೋಚನೆಯ ನೈಪುಣ್ಯತೆ ಇವರಾರಿಗೂ ಸಿಗಲಿಲ್ಲ. ಹೀಗೆ ಒಂದು ವರ್ಣಕ್ಕಿದ್ದ ಸೌಲಭ್ಯ ಸವಲತ್ತುಗಳು ಮತ್ತೊಂದು ವರ್ಣಕ್ಕೆ ಸಿಗದಂಥಾ ಸಂದರ್ಭ ಉಂಟಾಯಿತು. ಕೆಳವರ್ಣದ ವೃತ್ತಿಗಳು ಉತ್ಪತ್ತಿ ಇಲ್ಲದ ಸೇವೆಗಳಾಗಿದ್ದರಿಂದ ದಾಸ್ಯತ್ವ ಪಡೆಯಲು ಕಾರಣವಾಯಿತು. ಆದುದರಿಂದ ಕೆಳವರ್ಣಗಳು ಆರ್ಥಿಕ ಪರಾವಲಂಬಿಗಳಾಗುವುದರ ಜೊತೆಗೆ ಬಡತನ ಅವರಿಗೆ ಅನಿವಾರ್ಯವಾಯಿತು. ಹಿಂದೂ ದ್ರಾವಿಡರು ಸಮಾಜದ ಚಲನಶೀಲತೆಗಾಗಿ ಸಾಮಾಜಿಕ ಜವಾಬ್ದಾರಿಗಳನ್ನು ಹಂಚಿಕೊಟ್ಟರೂ ಜೊತೆಯಲ್ಲೇ ಅದರಲ್ಲಿನ ಅವರೋಹಣ ಕ್ರಮವು ಅಸಮಾನತೆಯ ಹುಟ್ಟಿಗೂ ಕಾರಣವಾಯಿತು. ಇಂತಹ ಸಂದರ್ಭದಲ್ಲಿ ಮಧ್ಯ ಏಶಿಯಾದಿಂದ ಅತಿಕ್ರಮಿಸಿ ಆರ್ಯರು ಭಾರತಕ್ಕೆ ಬಂದ ಮೇಲೆ ಇಲ್ಲಿನ ಮೂಲನಿವಾಸಿಗಳ ಜೊತೆ ಸೆಣಸಾಡಬೇಕಾಯಿತು. ಅವರಿಗೆ ಕೆಂಪು ಹಾಸಿಗೆಯ ಸ್ವಾಗತವೇನೂ ಇಲ್ಲಿ ಕಾದಿರಲಿಲ್ಲ. ದ್ರಾವಿಡ ಜನಾಂಗದೊಡನೆ ಹೋರಾಡಿ, ದ್ರಾವಿಡರನ್ನು ಸೆರೆಯಾಳಾಗಿರಿಕೊಂಡರು. ಸಹಜವಾಗಿ ಎರಡು ಬಣಗಳ ನಡುವೆ ಸಂಘರ್ಷವೇರ್ಪಟ್ಟಿತು. ಆದರೆ ಆರ್ಯರಿಗೆ ಶ್ರೇಣೀಕೃತ ವರ್ಣವ್ಯವಸ್ಥೆಯ ಮೇಲಿನ ಸ್ಥರದಲ್ಲಿ ಸುಲಭವಾಗಿ ನಿಲ್ಲಲು ಹಾಗೂ ಇಡೀ ವ್ಯವಸ್ಥೆಯನ್ನು ತುಳಿದುಕೊಳ್ಳಲು ಅವಕಾಶವಾಯಿತು. ಈ ಜನಾಂಗೀಯ ಉದ್ದೇಶ ಕೂಡ ಚಾತುರ್ವರ್ಣದ ಉದ್ಭವದಲ್ಲಿ ಪಾತ್ರವಹಿಸದೇ ಹೋಗಲಿಲ್ಲ. ಪ್ರಾರಂಭದಲ್ಲಿ ಆರ್ಯರು ಕೂಡ ಅನಾಗರೀಕ ಜನಾಂಗವೇ ಆಗಿದ್ದರು. ನಂತರ ಅವರಲ್ಲಿ ಬ್ರಾಹ್ಮಣ, ಕ್ಷತ್ರಿಯ ಪಂಗಡ ಉಂಟಾಯಿತು. ನಂತರ ವೈಶ್ಯರು, ತಾವುಗೆದ್ದ ಜನ ಅಂದರೆ ಇಲ್ಲಿಯ ಮೂಲನಿವಾಸಿಗಳು ಶೂದ್ರರಾದರು. ಶೂದ್ರರೆಂದರೆ ಪೂರ್ಣವಾಗಿ ಕಾರ್ಮಿಕ ವರ್ಗವೇ. ಈ ಕಾರ್ಮಿಕ ವರ್ಗದ ಸಂಖ್ಯೆ ಅಧಿಕವಾಗಿತ್ತು. ಋಗ್ವೇದದ ಮೊದಲ ಕಾಲದಲ್ಲಿ ಸಂಘಜೀವನವಿತ್ತೇ ಹೊರತು ಜಾತಿ ಅಥವಾ ವರ್ಣ ಇದ್ದಿರಲಿಲ್ಲ. ವರ್ಣವ್ಯವಸ್ಥೆ ಅಸ್ತಿತ್ವಕ್ಕೆ ಬಂದ ಮೇಲೆ ಕೂಡ ಒಂದು ವರ್ಣದಿಂದ ಇನ್ನೊಂದು ವರ್ಣಕ್ಕೆ ಮಾರ್ಪಾಟು ಹೊಂದಬಹುದಿತ್ತು. ಆದರೆ ಮುಂದೆ ಹಾಗಾಗಲಿಲ್ಲ.

ಚಾತುರ್ವರ್ಣವೇ ಮೂಲವಾಗಿ ಅದಕ್ಕೆ ಪುರುಷ ಸೂಕ್ತದಲ್ಲಿ ಒಂದು ಅಧಿಕೃತ ವ್ಯವಸ್ಥೆ ಸಿಕ್ಕಿತು. ಮುಂದೆ ಈ ನಾಲ್ಕು ವರ್ಣಗಳೇ ನೂರಾರು ಜಾತಿಗಳ ಕಟ್ಟುಪಾಡನ್ನು ನಿರ್ದೇಶಿಸಿದವು.

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಅನಾರ್ಯರು ಮಾತ್ರ ಶೂದ್ರವರ್ಣಕ್ಕೆ ಸೇರಿರಲಿಲ್ಲ. ಆದರೆ ಅವರ ಸಂಖ್ಯೆ ಅಧಿಕವಾಗೇ ಇದ್ದು, ಆರ್ಯರ ಸಂಖ್ಯೆ ಕಡಿಮೆ ಪ್ರಮಾಣದಲ್ಲಿತ್ತು. ಎಲ್ಲ ವರ್ಣಗಳಲ್ಲಿ ಅದರಲ್ಲೂ ಶೂದ್ರವರ್ಣದಲ್ಲಿ ಸಾವಿರಾರು ಜಾತಿಗಳಾದವು.ಇವು ಉದ್ಯೋಗಕ್ಕನುಸರಿಸಿ ತಮ್ಮ ತಮ್ಮ ಜಾತಿಗಳನ್ನು ನಿರ್ಮಾಣಮಾಡಿಕೊಂಡವು.

ಮುಂದೆ ಮೇಲುವರ್ಣದವರು ತಮ್ಮ ವರ್ಣದಲ್ಲಿ ಬೇರೆಯವರು ಹೊಕ್ಕದಂತೆ ವ್ಯವಸ್ಥೆ ಮಾಡಿಕೊಂಡರು. ಯಾಕೆಂದರೆ ಅವರಿಗೆ ಸಾಮಾಜಿಕವಾದ ಲಾಭವಾಗುತ್ತಿದ್ದರಿಂದ ಉಳಿದವುಗಳೂ ಅದನ್ನೇ ಅನುಸರಿಸಿದವು. ಅಧಿಕಾರವನ್ನು ಆಸ್ತಿಯನ್ನು ದಕ್ಕಿಸಿಕೊಳ್ಳುವಲ್ಲಿ ಬ್ರಾಹ್ಮಣ ಮತ್ತು ಕ್ಷತ್ರಿಯವರ್ಣ ಪೈಪೋಟಿ ನಡೆಸಿದರಾದರೂ ಅವರು ಬೇಗ ರಾಜಿ ಆದರು. ವೈಶ್ಯರಿಗೂ ಸಂಪತ್ತಿನ ಬೆಳವಣಿಗೆಯಲ್ಲಿ ಮೇಲಿನ ಸ್ಥಾನಮಾನ ಸಿಕ್ಕಿತು. ಆದರೆ ಈ ಮೂರು ವರ್ಣಗಳ ಸುಲಿಗೆಗೆ ಒಳಗಾದವರು ಶೂದ್ರವರ್ಣದವರು.

ಚರಿತ್ರೆಯಲ್ಲಿ ಮುಂದೆ ಕ್ಷತ್ರಿಯ ವರ್ಣದವರೇ ಇಲ್ಲವಾದುದು ಮತ್ತು ಅನೇಕ ಶೂದ್ರವರ್ಗದವರು ರಾಜರಾದುದನ್ನು ನೋಡುತ್ತೇವೆ. ಆದರೆ ಈ ಶೂದ್ರ ಮನೆತನದವರು ರಾಜರಾದರೂ ಶೂದ್ರರಿಗೆ ಶಿಕ್ಷಣವಾಗಲಿ, ಸಂಪತ್ತಾಗಲಿ ದೊರಕದಂತಾದುದು ಒಂದು ಚಾರಿತ್ರಿಕ ವಾದ ವ್ಯಂಗ್ಯವೇ ಎಂದು ಹೇಳಬೇಕು. ಇಲ್ಲಿ ನಾವು ಗಮನಿಸಬೇಕಾದ ಒಂದು ಸಂಗತಿಯೆಂದರೆ ಶೂದ್ರರೇ ಆದರೂ ಅವರು ಮೇಲಿನ ಸ್ಥಾನಕ್ಕೆ ಏರಿದರೆ ಅವರು ತಮ್ಮ ಜನಾಂಗ ತಮ್ಮ ಸ್ಥಾನಕ್ಕೆ ಬರದ ಹಾಗೆ ನೋಡಿಕೊಳ್ಳುತ್ತಿದ್ದರು. ಈ ಶೂದ್ರ ಜನಾಂಗದ ರಾಜರುಗಳ ಕುಲವನ್ನು ಯಾವುದೋ ದೇವರ ಮೂಲಕ್ಕೋ, ಸೂರ್ಯ ಚಂದ್ರರಿಗೋ ಹೋಲಿಸಿ, ಬ್ರಾಹ್ಮಣರು ಕಾವ್ಯ ಪುರಾಣಗಳನ್ನು ಹೆಣೆದು ಅವರನ್ನು ಪ್ರತ್ಯೇಕಗೊಳಿಸಿ ತಾವು ತಮ್ಮ ಪಾಲಿಗೆ ಸಂಪತ್ತನ್ನು ಗಳಿಸಿ ಸುಖವಾಗಿರುತ್ತಿದ್ದರು.

ತಮ್ಮ ಆರ್ಥಿಕ ಆದಾಯವನ್ನೇ ಗಟ್ಟಿಯಾಗಿಸಿಕೊಂಡ ಪ್ರತಿಯೊಂದು ಜಾತಿಯೂ ಸಾವಿರ ಜಾತಿಗಳಾಗಿ ಹೋಳಾದವು. ಹೀಗೆ ಉಂಟಾದ ಜಾತಿ ವಿಂಗಡನೆಯಲ್ಲಿ ಅತಿಹೆಚ್ಚು ಹೋಳಾದುದು ಶೂದ್ರವರ್ಣದಲ್ಲಿ ಮಾತ್ರ ಎಂಬುದು ಗಮನಾರ್ಹ. ಹಾಗೆ ಬೇರ್ಪಟ್ಟ ಜಾತಿಗಳು ಒಂದು ಮತ್ತೊಂದರಿಂದ ಬೇರೆಯಾಗಿ ಕಂಡಿತು. ಇವುಗಳಲ್ಲಿ ಯಾವ, ಯಾವುದು ಆರ್ಥಿಕವಾಗಿ ಕಡಿಮೆ ಗಳಿಕೆಯದೊ, ಅದು ಕ್ರಮೇಣ ಕಡಿಮೆ ಜಾತಿಯಾಗುತ್ತಾ ಹೋಯಿತು. ಅತ್ಯಂತ ಕಡಿಮೆ ಗಳಿಕೆಯಿರುವ ಜಾತಿ ಅತ್ಯಂತ ಕೀಳೂ, ಮುಟ್ಟಿಸಿಕೊಳ್ಳಲು ಆಗದ ಅಸ್ಪೃಶ್ಯರಾದರು. ಈ ರೀತಿಯ ಸಾಮಾಜಿಕ ನಡವಳಿಕೆಗೆ ಧರ್ಮಶಾಸ್ತ್ರಗಳ ಅಧಿಕಾರಯುಕ್ತ ಕಟ್ಟುಪಾಡು ಅನುಕೂಲವನ್ನಷ್ಟೇ ಅಲ್ಲ, ನಿರ್ಬಂಧವನ್ನೂ ವಿಧಿಸಿದವು. ಹೀಗೆ

ಜಾತಿಯ ಕಟ್ಟುಪಾಡುಗಳನ್ನು ಕಾದುಕೊಳ್ಳುವುದರಿಂದ ಮೇಲಿನ ಜಾತಿಗೆ ಅತ್ಯಧಿಕ ಅನುಕೂಲತೆ, ಅಧಿಕಾರ, ಸಂಪತ್ತು ಲಭ್ಯವಾಗುತ್ತಿತ್ತು. ಹೀಗೆ "ಜಾತಿವಿಭಜನೆ ಮತ್ತು ಬ್ರಾಹ್ಮಣರ ಧೂರ್ತ ಆಲೋಚನೆ ಭಾರತ ದೇಶದ ತುಂಬೆಲ್ಲ ಮೂಢನಂಬಿಕೆಗಳನ್ನು ಹುಟ್ಟಿಸಿದವು ಮಾತ್ರವಲ್ಲ. ವಿದೇಶಿಯರ ಆಕ್ರಮಣವನ್ನು ತಡೆಯಲಾರ ಹೀನಸ್ಥಿತಿಗೆ ದೇಶವನ್ನು ಇಳಿಸಿತು" ಎಂದು ಡಿ.ಡಿ. ಕೋಸಂಬಿಯವರು ನಿಖರವಾಗಿ ಹೇಳುವ ಮಾತು ಈಗಲಾದರೂ ನಮ್ಮನ್ನು ಎಚ್ಚರಿಸಬೇಕು.[3] ಈ ಜಾತಿ ಆಧಾರಿತ ಸುಲಿಗೆಗಳಿಗೆ ಪ್ರತಿಭಟನೆಯೇ ಆಗಲಿಲ್ಲ ಎಂದು ತಿಳಿಯಬೇಕಿಲ್ಲ. ಚರಿತ್ರೆಯುದ್ದಕ್ಕೂ ಈ ಪಟ್ಟಭದ್ರ ಹಿತಾಸಕ್ತಿಗೆ ಎದುರಾಗಿ ನಿಂತ ವೈಚಾರಿಕ ಚಳುವಳಿಯನ್ನು ನೋಡಬಹುದು. ಚರಿತ್ರೆಯಲ್ಲಿ ಇದು ಧಾರ್ಮಿಕ ಆಂದೋಲನವಾಗಿಯೇ ಪ್ರಕಟವಾಗಿದೆ. ಚರಿತ್ರೆಯಲ್ಲಿ ಮೊದಲ ಬಾರಿಗೆ ಇದಕ್ಕೆ ಪ್ರತಿಭಟನೆ ಬಂದುದು ಗೌತಮ ಬುದ್ಧನಿಂದ. ಬೌದ್ಧಧರ್ಮ ಹಿಂದೂಧರ್ಮದ ಮೇಲೆ ಮರ್ಮಾಘಾತವನ್ನುಂಟು ಮಾಡಿತು.

ಬೌದ್ಧಧರ್ಮ ವೇದಗಳ ಅಪೌರುಷತೆಯನ್ನು ಅಲ್ಲಗಳೆಯಿತು. ಇದಕ್ಕೂ ಮೊದಲು ಮತ್ತು ಇದೇ ಸುಮಾರಿಗೆ ಲೋಕಾಯತರಿಂದ ಪ್ರತಿಭಟನೆ ಬಂತು. ಆದರೆ ಇವೆಲ್ಲ ಒಂದು ಚಳುವಳಿಯಾಗಿ ಹೊರಹೊಮ್ಮಿದ್ದು ಬೌದ್ಧಧರ್ಮ ಮತ್ತು ಜೈನಧರ್ಮದಲ್ಲಿ. ಬೌದ್ಧಧರ್ಮವಂತೂ ದೇವರ ಮತ್ತು ಆತ್ಮದ ಅಸ್ತಿತ್ವವನ್ನೇ ಅಲ್ಲಗಳೆಯಿತು. ನಂತರ ರಾಮಾನುಜಾಚಾರ್ಯರು ಮೇಲು ಕೀಳೆಂಬ ಇಲ್ಲವೇ ಗಂಡು ಹೆಣ್ಣೆಂಬ ಭೇದಭಾವವಿಲ್ಲದೇ ಎಲ್ಲ ಜಾತಿ ವರ್ಗದವರಿಗೂ ತಮ್ಮ ಮತಪ್ರವೇಶದ ದ್ವಾರವನ್ನು ತೆರೆದರು. ಪ್ರಚಲಿತವಾದ ವಿಶಿಷ್ಟಾದ್ವೈತ ಅಸ್ಪೃಶ್ಯರಿಗೂ ಜನಿವಾರ ತೊಡಿಸಿ ಜಾತಿ ವಿಂಗಡನೆಯನ್ನು ವಿರೋಧಿಸಿತು. ಈ ಮಧ್ಯೆ ಬಸವಣ್ಣನವರಿಂದ ಉಂಟಾದ ವೀರಶೈವ ಚಳವಳಿ ಜಾತಿ ಕಟ್ಟಳೆಯನ್ನು ನುಚ್ಚುನೂರು ಮಾಡಿತು. ಮುಂದೆ ದಾಸ ಪಂಥದವರ ಪ್ರತಿಭಟನೆ ಕೂಡ ಈ ಜಾತಿ ವ್ಯವಸ್ಥೆಗೆ ಪ್ರತಿರೋಧವಾಗೇ ಬಂದುದು. ಇಷ್ಟಾದರೂ ಸಹ ಜಾತಿ ನಿರ್ಮೂಲನವಾಗಲಿಲ್ಲ.

ಅದಕ್ಕೆ ಸರಂಜಾಮು ರಾಜಕೀಯ ವ್ಯವಸ್ಥೆ ಪೂರಕವಾಗಿಯೇ ಇತ್ತು ಎನ್ನುವುದನ್ನು ಗಮನಿಸಬೇಕು. ಆಮೇಲೆ ಈ ಜಾತಿ ವರ್ಣವ್ಯವಸ್ಥೆಯ ಮೇಲೆ ಬಲವಾದ ಆಘಾತ ಮಾಡಿದ್ದು ಬಂಡವಾಳಶಾಹಿ. ಇಂಗ್ಲೀಷರ ಆಗಮನದಿಂದ ಆದ ಬಂಡವಾಳಶಾಹಿಯ ಬೆಳವಣಿಗೆ. ಇಂಗ್ಲೀಷ್ ಶಿಕ್ಷಣದ ಪ್ರಸಾರ ಅದರ ಬಾಲವಿಡಿದು ಬಂದ ವೈಜ್ಞಾನಿಕ ವಿಚಾರ ಭಾರತೀಯರ ಜೀವನದಲ್ಲಿ ಒಂದು ಹೊಸ ಯುಗವನ್ನೇ ತೆರೆಯಿತು. ಬ್ರಹ್ಮ ಸಮಾಜ, ಆರ್ಯ ಸಮಾಜ, ರಾಮಕೃಷ್ಣ ಮಿಶನ್, ಎಲ್ಲಾ ಇದರ ಪ್ರತಿಫಲ, ಪ್ರತಿಭಟನೆಯೇ ಆಗಿದೆ.

ಮುಂದೆ ಇದು ಶುದ್ಧ ಜಾತಿ ಹೋರಾಟವೇ ಆಗಿ ಪರಿಣಮಿಸಿತು. ಮಹಾರಾಷ್ಟ್ರದಲ್ಲಿ ಮಹಾತ್ಮಾ ಫುಲೆ ಶೂದ್ರ ಚಳುವಳಿಯನ್ನು ಪ್ರಾರಂಭಿಸಿದರು. ಶೂದ್ರರಿಗೂ ಅಸ್ಪೃಶ್ಯರಿಗೂ ಮತ್ತು ಹೆಣ್ಣು ಮಕ್ಕಳಿಗೂ ಶಿಕ್ಷಣ ಒದಗಿಸಲು ಶಾಲೆಗಳನ್ನು ಅವರು ತೆರೆದರು. ಜಾತಿ ಮತ್ತು ಅಸ್ಪೃಶ್ಯತೆಯ

ವಿರುದ್ಧ ಪ್ರಬಲವಾದ ಆಂದೋಲನ ಶುರು ಮಾಡಿದರು. ಪುಲೆಯವರು ಪ್ರಾರಂಭಿಸಿದ ಚಳವಳಿಗೆ ಮಾನವೀಯವಾದ ಒಂದು ವಿಶಾಲವಾದ ವಿಸ್ತಾರವಿತ್ತು. ಅವರು ಸತ್ತ ನಂತರ ಅದರ ಸ್ಫೂರ್ತಿ ಸತ್ತು, ಅದು ಕೇವಲ ಬ್ರಾಹ್ಮಣ ವಿರೋಧಿ ಚಳವಳಿಯಾಗಿ ಪರಿಣಮಿಸಿತು. ದಕ್ಷಿಣದಲ್ಲಿ ರಾಮಸ್ವಾಮಿ ಪೆರಿಯಾರ್ ಶುರುಮಾಡಿದ ಉಗ್ರ ಚಳವಳಿ ಮರೆಯಲಾರದ್ದು. ಆದರೂ ಸಹ ನಂತರ ಅದು ಇಡೀ ಜಾತಿ ವ್ಯವಸ್ಥೆಯ ವಿರುದ್ಧ ಆಗುವ ಬದಲು ಬ್ರಾಹ್ಮಣ ವಿರೋಧಿ ಚಳವಳಿಯೇ ಆಯಿತು.

ಇಲ್ಲಿಯವರೆಗೂ ಅದಕ್ಕೊಂದು ರಾಜಕೀಯ ಆಯಾಮವಿದ್ದಿರಲಿಲ್ಲ. ರಾಜಕೀಯ ಆಂಶಿಕವಾಗಿತ್ತೇ ಹೊರತು ಆರ್ಥಿಕ ಮೂಲ ಬಿಂದು ಅದಾಗಿರಲಿಲ್ಲ. ಆ ಕಾರಣವೋ ಎಂಬಂತೆ ಅವೆಲ್ಲ ತಮ್ಮ ಪೂರ್ಣ ಗುರಿ ಸೇರಲಾಗಲಿಲ್ಲ. ಅದಕ್ಕೆ ರಾಜಕೀಯದ ಉಗ್ರದೀಕ್ಷೆ ಕೊಟ್ಟವರೆಂದರೆ ಡಾ.ಬಿ.ಆರ್. ಅಂಬೇಡ್ಕರ್. ಅವರ ಚಳವಳಿ ಚಿರಸ್ಮರಣೀಯ.

ಸ್ವಾತಂತ್ರ್ಯಾನಂತರ ಅದಕ್ಕೊಂದು ರಾಜಕೀಯ ಸ್ವರೂಪ ಕೊಟ್ಟವರು ಸಮಾಜವಾದಿಗಳು. ಅದರಲ್ಲೂ ಲೋಹಿಯಾವಾದಿಗಳು. ಅವರು ಜಾತಿ, ಹಣ ಮತ್ತು ಇಂಗ್ಲೀಷ್ ವಿದ್ಯೆ ಇವುಗಳಲ್ಲಿ ಯಾವುದಾದರೂ ಎರಡು ಲಭ್ಯವಿದ್ದವರು ಭಾರತವನ್ನು ಆಳುತ್ತಾರೆ ಎಂದರು. ಮುಂದುವರಿದು ಭಾರತವನ್ನು ಬ್ರಾಹ್ಮಣ ಮತ್ತು ಬನಿಯಾ ಕೂಟವೇ ಆಳುತ್ತಿದೆ ಎಂದರು. ಇದನ್ನು ಹೋಗಲಾಡಿಸುವಾಗ ಶೂದ್ರ ವರ್ಗದವರು ಹೆಚ್ಚಿನ ಸಂಖ್ಯೆಯಲ್ಲಿ ಆಡಳಿತದಲ್ಲಿ ಸೇರಬೇಕೆಂದರು. ಇದು ಸಕಾಲಿಕವಾಗಿತ್ತು. ಆ ಕಾರಣದಿಂದ ಭಾರತದಲ್ಲಿ ಹಿಂದುಳಿದ ಜಾತಿಗಳಲ್ಲಿ ಒಗ್ಗಟ್ಟಿನ ಹಾಗೂ ರಾಜಕೀಯ ಪ್ರಜ್ಞೆ ಉಜ್ವಲವಾಗಿ ಮೂಡಿತು.

ಅದೇ ಹೊತ್ತಿಗೆ ಭಾರತದಲ್ಲಿ ಕಮ್ಯೂನಿಷ್ಟರ ಚಳವಳಿ ವರ್ಗಹೋರಾಟದ ನೆಲೆಯನ್ನು ವಿಸ್ತಾರಗೊಳಿಸಿತು. ಆದರೂ ಕಮ್ಯೂನಿಷ್ಟರ ವರ್ಗಹೋರಾಟಕ್ಕಿಂತ ಜಾತಿ ಆಧಾರಿತ ಹಿಂದುಳಿದ ವರ್ಗಗಳ ಚಳುವಳಿಯೇ ಹೆಚ್ಚು ಪ್ರಚಾರಕ್ಕೆ ಬಂತು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಹಿಂದುಳಿದವರು ಮುಂದುವರಿಯಬೇಕಾದರೆ ಅವರು ರಾಜಕೀಯವಾಗಿ ಜಾಗೃತಗೊಂಡಿರಬೇಕು. ಆ ರಾಜಕೀಯದ ಮುಖಾಂತರ ಸಂಪತ್ತಿನ ವಿಕೇಂದ್ರೀಕರಣ, ಸಾಧಿಸಬೇಕು. ಹಾಗೂ ಇಂಥ ಚಳುವಳಿ ಸಾಧ್ಯವಾಗಬೇಕಾದರೆ ಜಾತಿ–ಜಾತಿಗಳಲ್ಲಿ ಒಗ್ಗಟ್ಟು ಉಂಟಾಗಬೇಕು ಎಂಬುದು.

ಈ ಕಾರಣದಿಂದಾಗಿ ಬಹುಸಂಖ್ಯಾತರಾದ ಜಾತಿಯ ಶೂದ್ರರು ತಮ್ಮ ತಮ್ಮ ಜಾತಿ ಸಂಘಗಳನ್ನು ಮಾಡಿಕೊಂಡು ಒಗ್ಗಟ್ಟನ್ನು ಸಾಧಿಸಲು ಯತ್ನಿಸಿದರು. ಕೆಲ ಅಂಶ ಅದರಿಂದ ಲಾಭವೂ ಆಯಿತು. ಹಿಂದುಳಿದ ವರ್ಗವನ್ನು ಗುರುತಿಸಿ ಅದಕ್ಕೆ ವಿಶೇಷವಾದ ಸೌಲತ್ತುಗಳನ್ನು ಒದಗಿಸುವುದು ಸರಕಾರದ ಧೋರಣೆಯಾಯಿತು. ಇದು ಅವಶ್ಯಕವೂ ಹೌದು. ಈ ಕ್ರಮದಿಂದ ಶೂದ್ರ ಜಾತಿಗಳಲ್ಲಿ ಒಂದು ರೀತಿಯ ಚಲನಶೀಲತೆ ಒದಗಿತು. ಈಗಾಗಲೇ ಒಗ್ಗಟ್ಟಾಗಿ ಹೋರಾಡಿದ ಜಾತಿ ಕೆಲ ಅಂಶಗಳಲ್ಲಿ

ಮುಂದುವರೆಯಿತು. ಇದು ಸ್ವಾಗತವೂ ಹೌದು. ಆದರೆ ಇದರಿಂದ ಇಡೀ ಹಿಂದುಳಿದ ವರ್ಗವೇ ಮುಂದುವರಿಯುವಂತಾಗಲಿಲ್ಲ. ತಮ್ಮ ತಮ್ಮ ಜಾತಿಯ ಬಲದಿಂದ ಮತ್ತು ಹೆಸರಿನಿಂದ ಕೆಲಮುಖಂಡರು ಸ್ಥಾನಮಾನ ಗಳಿಸಿದರು. ಇದೊಂದು ಚಾರಿತ್ರಿಕ ಪರಿಣಾಮ. ಆದರೆ ಯಾವುದೇ ಜಾತಿಯ ಎಲ್ಲಾ ಬಡವರು ಇದರಿಂದ ಪೂರ್ಣ ಲಾಭ ಹೊಂದುವಂತಾಗಲಿಲ್ಲ.

ಈಗ ಎರಡು ಸಮಸ್ಯೆಗಳು ಎದುರಾಗುತ್ತವೆ. ಒಂದು ಪ್ರಬಲ ಜಾತಿಗಳು ತಮ್ಮ ಸ್ಥಾನಮಾನ ಗಳಿಸಲು ಸೆಣಸುತ್ತವೆಯೇ ಹೊರತು ಒಟ್ಟಾರೆಯಾಗಿ ಹಿಂದುಳಿದವರ ಉನ್ನತಿ ಸಾಧಿಸಲು ಸೆಣಸಾಡುವುದಿಲ್ಲ. ಎರಡು ಅಲ್ಪಸಂಖ್ಯೆಯಲ್ಲಿರುವ ಜಾತಿಗಳು ಯಾರ ಲಕ್ಷ್ಯಕ್ಕೂ ಬರದೆ ಹೋಗುತ್ತವೆ. ಅಂದರೆ ಅಧಿಕ ಸಂಖ್ಯೆಯಲ್ಲಿರುವ ಜಾತಿಗಳು ಕಡಿಮೆ ಸಂಖ್ಯೆಯಲ್ಲಿರುವ ಜಾತಿಗಳ ಸುಲಿಗೆಯನ್ನು ಮಾಡುವಲ್ಲಿ ಹಿಂದೆ ಮುಂದೆ ನೋಡುವುದಿಲ್ಲ. ಅಲ್ಲದೇ ಹೀಗೆ ಬಹುಸಂಖ್ಯೆ ಹೊಂದಿದ ಜಾತಿಗಳೇ ಆದರೂ ತಮ್ಮಲ್ಲಿರುವ ಬಡವರ ಕುರಿತು ಏನೂ ಮಾಡುವುದಿಲ್ಲ. ಬದಲಾಗಿ ಚುನಾವಣೆಯ ಸಂದರ್ಭಕ್ಕೆ ಬೇಕಾಗಿ ಅವರಲ್ಲಿ ಜಾತಿಯ ಅಂದಾಭಿಮಾನವನ್ನು ತುಂಬುತ್ತವೆ.

ತಮ್ಮ ಜಾತಿಯ ಪ್ರತ್ಯೇಕತೆಯನ್ನು ಕಾದುಕೊಳ್ಳುವುದು ಈ ರಾಜಕೀಯ ಮುಖಂಡರಿಗೆ ಒಂದು ಅವಶ್ಯಕ ತಂತ್ರವಾಗುತ್ತದೆ. ಅಂದರೆ ಇವರು ಸುಲಿಗೆಯ ಎಲ್ಲ ಸಾಧನಗಳನ್ನು ಮುಂದುವರಿಸುತ್ತಾರೆಯೇ ಹೊರತು ವೈಜ್ಞಾನಿಕ ಮತ್ತು ಮಾನವೀಯ ವಿಧಾನವಲ್ಲ. ಹಾಗಾದರೆ ನಾವು ಮನುಷ್ಯ ಮನುಷ್ಯರಲ್ಲಿ ಸಮಾನತೆ ಸೋದರತೆಯನ್ನು ಸ್ಥಾಪಿಸಬೇಕೆಂದರೆ ಸಂಪತ್ತಿನ ವಿಕೇಂದ್ರೀಕರಣ, ಸರ್ವರಿಗೆ ವಿದ್ಯಾಭ್ಯಾಸ, ಮತ್ತು ಸರ್ವರಿಗೆ ಉದ್ಯೋಗ ಒದಗಿಸುವ ವ್ಯವಸ್ಥೆಯನ್ನು ಸ್ಥಾಪಿಸಬೇಕು.

ಸರ್ವರಿಗೂ ಶಿಕ್ಷಣ ಸೌಲಭ್ಯಕ್ಕೆ ವಿಶಿಷ್ಟವಾದ ವ್ಯವಸ್ಥೆಯನ್ನು ಹೊಂದುವ ರಾಜಕೀಯ ನೀತಿ ಸಾಧ್ಯವಾಗಬೇಕು. ಎರಡನೇಯದಾಗಿ ಸಂಪತ್ತು ಸಮಸ್ತರಿಗೆ ಹಂಚಿಹೋಗುವಂತೆ ನಿಖರವಾದ ಕಾರ್ಯಕ್ರಮ ಹೊಂದಬೇಕು. ಮೂರನೇಯದಾಗಿ ಎಲ್ಲರಿಗೆ ಉದ್ಯೋಗ ಒದಗುವಂತಾಗಬೇಕು. ಆಗ ಈ ಹಿಂದುಳಿದ ಮುಂದುವರಿದ ಎಂಬ ಪಟ್ಟಿಯ ಅವಶ್ಯಕತೆ ಉಂಟಾಗುವುದಿಲ್ಲ. ಜಾತಿ ವಿನಾಶ ಸಾಧ್ಯವಾಗಬೇಕಾದರೆ, ಆರ್ಥಿಕ ಸಮಾನತೆ ಉಂಟಾಗಬೇಕಾದರೆ ಅದರ ಹೋರಾಟ ಎಲ್ಲ ಜಾತಿಯಲ್ಲಿಯ ಬಡವರನ್ನು ಒಂದೆಡೆ ತರುವ ವ್ಯಾಪಕವಾದ ಕಾರ್ಯಕ್ರಮ ಹೊಂದಿರಬೇಕು. ಅಂದರೆ ಜಾತಿ ಹೋರಾಟದ ಸ್ಥಾನವನ್ನು ವರ್ಗಹೋರಾಟ ಆಕ್ರಮಿಸಬೇಕು.

ವರ್ಗಹೋರಾಟದಲ್ಲಿ ಎಲ್ಲ ಜಾತಿಯ ಬಡವರು ತಾವು ಒಂದೆಂಬ ಭಾವನೆಯಿಂದ ಒಂದು ನೆಲೆಗೆ ಬರಬೇಕಾಗುತ್ತದೆ. ಈ ಹೋರಾಟ ಐತಿಹಾಸಿಕದ ಬೆಳವಣಿಗೆಯ ಮೂರ್ತರೂಪವಾಗುತ್ತದೆ. ಚರಿತ್ರೆಯಲ್ಲಿನ ನಡೆದ ಜಾತಿಹೋರಾಟ ಸಹ ಆಂತರಿಕವಾಗಿ ವರ್ಗಹೋರಾಟವೇ ಆಗಿದೆ. ಆದರೆ ಅದು ಇಲ್ಲಿಯ ತನಕವೂ ವರ್ಗಹೋರಾಟದ ಪೂರ್ಣರೂಪವಾಗಿರಲಿಲ್ಲ.

"ಇದುವರೆಗೂ ಆಗಿಹೋಗಿರುವ ಎಲ್ಲ ಸಮಾಜದ ಇತಿಹಾಸವೂ ವರ್ಗ ಹೋರಾಟಗಳ ಇತಿಹಾಸವೇ ಆಗಿದೆ"[೬] ಎಂಬ ಕಾರ್ಲಮಾರ್ಕ್ಸರ ಮಾತು ಇನ್ನಷ್ಟು ಸ್ಪುಟವಾಗಿದೆ. ಇದನ್ನು ಗಮನಿಸಿದಾಗ ನಾವು ಮಾಡುತ್ತಿರುವ ಹೋರಾಟವೆಲ್ಲವು ಜಾತಿ ಹೋರಾಟ ಎಂದು ಮನದಟ್ಟಾಗುತ್ತದೆ. ಯಾಕೆಂದರೆ ಯಾವ ಜಾತಿಯ ವಿರುದ್ಧ ಯಾವ ಜಾತಿ? ಎಂಬ ಪ್ರಶ್ನೆ ಸಮಾಜದಲ್ಲಿ ಎಲ್ಲ ಕಾಲಕ್ಕೂ ಎಲ್ಲ ಸಂದರ್ಭಗಳಲ್ಲೂ ಪ್ರತಿಧ್ವನಿಸುತ್ತಿರುತ್ತದೆ. ಪ್ರತಿಯೊಂದು ಜಾತಿಯು ತಾನು ಮೇಲೇರಿದಂತೆ ಕೆಳಜಾತಿಯನ್ನು ತುಳಿಯುತ್ತದೆ. ಈ ಜಾತಿಯ ಹೋರಾಟ ವರ್ಗಹೋರಾಟವಾಗಿ ಪರಿಣಾಮ ಹೊಂದಬೇಕಾದುದು ಇಂದಿನ ಅವಶ್ಯಕತೆಯಾಗಿದೆ. ವರ್ಗಹೋರಾಟ ಉಗ್ರವಾದ ರಾಜಕೀಯ ಪ್ರಜ್ಞೆ ಹೊಂದುವಂತವು. ಹಾಗೆ ವರ್ಗಪ್ರಜ್ಞೆಯ ಉಜ್ವಲತೆಯನ್ನು ಹೊಂದಿದ ಒಂದು ರಾಜಕೀಯ ಪ್ರಜ್ಞೆ ಅಂದರೆ ವರ್ಗಹೋರಾಟದ ಉಗ್ರ ಪ್ರಜ್ಞೆ ಉಳ್ಳ ರಾಜಕೀಯ ಪಕ್ಷ ಈ ಹೋರಾಟದ ನಾಯಕನಾಗಬೇಕಾಗುತ್ತದೆ. ತನ್ಮೂಲಕ ಈ ಸಮಾಜದಲ್ಲಿ ಬೇರೂರಿರುವ ವರ್ಗ ತಾರತಮ್ಯವನ್ನು ದೂರ ಮಾಡಿ ಸಾಮಾಜಿಕ ನ್ಯಾಯದಡಿಯಲ್ಲಿ ಎಲ್ಲರಿಗೂ ಸಮಾನವಾದ ಅವಕಾಶ ಸಿಗುವ ಹಾಗೆ ಮಾಡಬೇಕು.

೨.೪ ಭಾರತದಲ್ಲಿ ವರ್ಗದ ಪರಿಕಲ್ಪನೆ:

ಭಾರತದಲ್ಲಿ ಹಿಂದಿನ ಕಾಲದಲ್ಲಂತೂ ಪೂರ್ತಿಯಾಗಿ ವರ್ಣ ಮತ್ತು ಜಾತಿಯ ಶ್ರೇಣೀಕರಣಕ್ಕೆ ಒಳಗಾದ ಸವಮಾಜವೇ ಇತ್ತು. ಈಗಲೂ ಅದೇ ಮುಂದುವರೆದಿದೆ. ಜಾತಿಯ ಪ್ರಭಾವ ಕಡಿಮೆಯಾಗಿರಬಹುದಾದರೂ ಮೂಲಭೂತವಾದ ಜಾತಿಯ ಭಿನ್ನತೆ ಅಳಿಸಿ ಹೋಗಿಲ್ಲ. ಮುಸ್ಲಿಮ್ ಮತ್ತು ಕ್ರಿಶ್ಚಿಯನ್ ಕೂಡ ಭಾರತೀಯ ಸಮಾಜವೇ ಆಗಿವೆ. ಆದರೆ ಆ ಸಮಾಜ ಹಿಂದೂಗಳಲ್ಲಿದ್ದಂತೆ ಜಾತಿಯ ಶ್ರೇಣೀಕರಣಕ್ಕೆ ಒಳಗಾದದ್ದಲ್ಲ. ಆದರೂ ಅಲ್ಲಿ ಧರ್ಮವೇ ವರ್ಗಸಂಘರ್ಷವನ್ನು ಆ ಮುಖಾಂತರ ಸಾಂಸ್ಕೃತಿಕ ಸಂಘರ್ಷವನ್ನು ತಡೆಯುವಲ್ಲಿ ಶಕ್ತವಾಗಿದೆ. ಆದರೆ ಅದು 'ಜಾತಿ' ಯಷ್ಟು ಅಭೇದ್ಯವಾದುದಲ್ಲ. ಅದು 'ಜಾತಿ' ಸಮಾಜವಲ್ಲ. 'ಜಾತಿ' ಯಲ್ಲಿ ಜಾತಿಯೂ ಧರ್ಮವೂ ಕೂಡಿಕೊಂಡು ಇಮ್ಮಡಿ ಶಕ್ತಿಶಾಲಿಯಾಗಿದೆ. ಪಾಶ್ಚ್ಯಾತ್ಯರಲ್ಲಿ ವರ್ಗಪಲ್ಲಟ ಸಾಧ್ಯ. ಉದ್ಯೋಗ ಪಲ್ಲಟ ಸಾಧ್ಯ. ಹಿಂದೂ ಸಮಾಜದಲ್ಲಿ ವರ್ಗಪಲ್ಲಟ ಕಠಿಣ. ಯಾಕೆಂದರೆ 'ಜಾತಿ' ವರ್ಗವನ್ನು ತಡೆಹಿಡಿಯುತ್ತದೆ. 'ಜಾತಿ' ಒಂದೇ ವರ್ಗವನ್ನು ನೂರಾರು ಹೋಳುಮಾಡಿದೆ. ಇಲ್ಲಿ ಜಾತಿ ಪಲ್ಲಟವೂ ಅಸಾಧ್ಯ. ಆದ್ದರಿಂದ ವರ್ಗಸಮಾಜ ಅಸಾಧ್ಯವಾಗಿದೆ. ಜಾತಿಗೆ ಇಲ್ಲಿ ಧಾರ್ಮಿಕ ಸ್ವರೂಪವಿದೆ. ಹಿಂದೂ ಧರ್ಮದ ಮುಖ್ಯ ಧಾರ್ಮಿಕ ಗ್ರಂಥವಾದ 'ಭಗವದ್ಗೀತೆ'ಯಲ್ಲಿ ಅದನ್ನು ರಚಿಸಿದನೆಂದುಕೊಳ್ಳುವ ಪರಮಾತ್ಮನೇ "ಗುಣಕರ್ಮಕ್ಕೆ ಅನುಸಾರಿಯಾಗಿ ವರ್ಣವನ್ನು ಸೃಷ್ಟಿಸಿದ್ದಾನೆ" ವರ್ಣಸಮಾಜವೆಂದರೆ ಬ್ರಾಹ್ಮಣ ಶ್ರೇಷ್ಠತೆಯನ್ನು, ಶೂದ್ರ ಕನಿಷ್ಠತೆಯನ್ನು ಸಾರುವ ರಚನೆ. ನಿಜದ ಅರ್ಥದಲ್ಲಿ ಕೃಷ್ಣನಿಂದ ಹೇಳಿಸಿದಂತೆ ಇದೇನೂ ಗುಣಕರ್ಮ ವಿಭಾಗವಲ್ಲ. ಗುಣಕರ್ಮವಿಭಾಗ ಪಾಶ್ಚ್ಯಾತ್ಯ ಸಮಾಜದ್ದು. ಅಲ್ಲಿ ಆಯಾ ಒಲವಿಗೆ

ಉಂಟಾದ ಕುಶಲತೆಗೆ ಅಂದರೆ 'ಗುಣ'ಕ್ಕೆ ತಕ್ಕ ಉದ್ಯೋಗ (ಕರ್ಮ) ಇರುತ್ತದೆ. ಅದು ಹುಟ್ಟಿದ ಮೇಲೆ ಕಲಿಕೆಯೊ, ಪರಿಸರವೊ, ಉಂಟುಮಾಡುವ ರೀತಿ. ಆದರೆ ಹಿಂದೂ ಸಮಾಜ ಜನರ 'ಗುಣಕರ್ಮ' ಹುಟ್ಟುವ ಮೊದಲೇ ನಿರ್ಧಾರವಾಗಿರುತ್ತದೆ.

'ಜಾತಿಪದ್ಧತಿ' ಇಡಿಯ ಸಮಾಜವನ್ನು ಹೋಳುಹೋಳು ಮಾಡಿದೆ. ಇದು ಕೇವಲ ಉದ್ಯೋಗ ವಿಭಜನೆಯಲ್ಲ; ಉದ್ಯೋಗಿಗಳ ವಿಭಜನೆ ಎಂದು ಅಂಬೇಡ್ಕರ್ ಹೇಳುತ್ತಾರೆ. ವರ್ಣವಿಭಜನೆ ಶೂದ್ರ ಸಮಾಜವನ್ನು ಇಡಿಯಾಗಿ ತಂದಿತ್ತು. ಆದರೆ ಈ ವರ್ಣದಲ್ಲೇ ಉಂಟಾದ ಸಾವಿರಾರು ಜಾತಿ ಒಂದು ಕಡೆಯಾದರೆ, ದಲಿತರೆಂಬ ಒಂದು ದೊಡ್ಡ ಸಮೂಹವನ್ನೇ 'ಮುಟ್ಟಬಾರದ' ಜಾತಿಯನ್ನಾಗಿ ಮಾಡಿತು. ಅದರೊಳಗೂ ಎಡಗೈ, ಬಲಗೈ ಭೇದಗಳಿವೆ. ಹಾಗಾದರೆ ಈ ಜಾತಿ ವಿಭಜನೆಯ ಮೂಲದಲ್ಲೂ ಅರ್ಥಮೂಲ ಇಲ್ಲವೇ? ಇದನ್ನು ಅಲ್ಲಗಳೆಯಲಾಗುವುದಿಲ್ಲ. ಅಂಬೇಡ್ಕರರು ಸ್ಪಷ್ಟವಾಗಿ ಹೇಳುತ್ತಾರೆ. "ಶೂದ್ರರಿಗೆ ಆಸ್ತಿ ಸಂಪಾದಿಸುವ ಹಕ್ಕು ಇದ್ದಿರಲಿಲ್ಲ. ಹಾಗೆಯೇ ವಿದ್ಯೆ ಕಲಿಯುವ ಹಕ್ಕಿನಿಂದ ದೂರ ಮಾಡಲಾಯಿತು. ಅವರಿಗೆ ಮೇಲು ವರ್ಣ(ಜಾತಿ) ದವರ ಸೇವೆ ಮಾಡುವುದೇ ಕರ್ತವ್ಯ ಎಂದು ನಿಶ್ಚಯಿಸಲಾಯಿತು"[೭] ಆದರೆ ಯಾವ ಯಾವ ಜಾತಿ ಹೆಚ್ಚು ಸಂಪತ್ತನ್ನು ಗಳಿಸಬಲ್ಲದೊ ಆ ಜಾತಿ ಸಮಾಜದಲ್ಲಿ ಹೆಚ್ಚು ಸ್ಥಾನ-ಮಾನ ಗಳಿಸುತ್ತದೆ. ಅದರಲ್ಲಿ ಅತ್ಯಂತ ಹೀನಾಯಮಾನವಾದ ಬದುಕನ್ನು ಸಾಗಿಸುವವರು ದಲಿತರು (ಅಸ್ಪೃಶ್ಯರು) ಅಂದ ಮೇಲೆ ಜಾತಿಯ ಸಾಂಸ್ಥಿಕ ಸ್ವರೂಪದ ಅಡಿಯಲ್ಲೂ ಆರ್ಥಿಕತೆಯ ಪ್ರಬಲವಾದ ಶಕ್ತಿ ಇದ್ದೇ ಇದೆ. ಹೀಗೆ ವರ್ಗಹೋರಾಟದ ತತ್ವಜ್ಞಾನ ಇಡೀ ಜಗತ್ತಿಗೇ ಅನ್ವಯಿಸುವಂತಹದು ಎನ್ನುವುದು ಒಂದು ವರ್ಗವಾದರೆ, ಭಾರತದ 'ಜಾತಿಸಮಾಜ' ಕ್ಕೆ ಇದು ಅನ್ವಯಿಸಲಾರದು ಎಂಬುದು ಇನ್ನೊಂದು ವರ್ಗ. ಅಂದರೆ ಜಾತಿ ಎನ್ನುವುದು ಮೇಲ್ ರಚನೆ ಎನ್ನುವುದು ಒಂದಾದರೆ ಅದು ಅಡಿರಚನೆಯೇ ಎಂಬುದು ಮತ್ತೊಂದು. "ಜಾತಿ ಎನ್ನುವುದು ಮಾರ್ಕ್ಸ್‌ವಾದಿ ದೃಷ್ಟಿಯಿಂದ ಮೇಲ್ ರಚನೆಯಾದರೂ ಭಾರತದಲ್ಲಿ ಜಾತಿಮೂಲವಾದ ಅದರ ಉತ್ಪಾದಕ ಸಂಬಂಧ ಅಡಿ ರಚನಾತ್ಮಕವಾದುದು. ಆದ್ದರಿಂದ ಬೇರೆ ಮಾತಿನಿಂದ ಹೇಳುವುದಾದರೆ ಭಾರತೀಯ ಸಮಾಜದಲ್ಲಿ ತನ್ನ ಚಾರಿತ್ರಿಕ ಪ್ರಕ್ರಿಯೆಯಲ್ಲಿ ಜಾತಿಯ ಒಳಗಡೆ ವರ್ಗವು ಕಾಣಿಸಿಕೊಳ್ಳುವ ಸ್ವರೂಪದ್ದಾಗಿದೆ" ಎಂದು ಪಾರ್ಥ ಚಟರ್ಜಿ ಅವರು ಹೇಳಿರುವುದು ಸಮಂಜಸವಾಗೇ ಇದೆ.[೮] (ಈ ಸೂಕ್ಷ್ಮವನ್ನು ಗ್ರಹಿಸಿಯೇ ಡಾ. ಅಂಬೇಡ್ಕರ್ ಕೂಡ "ಜಾತಿ ಎಂಬುದು ಪರಿವೇಷ್ಟಿತವಾದ ವರ್ಗ"[೯] ಎಂದಿದ್ದಾರೆ. ಇದಕ್ಕೆ ಉದಾಹರಣೆಯಾಗಿ "ಉಳ್ಳವರು ಶಿವಾಲಯವ ಮಾಡುವರು" ಎಂಬ ವಚನವನ್ನು ನೋಡಬಹುದು. ಇಲ್ಲಿನ ಪ್ರತಿಭಟನೆಯ ಸ್ವರೂಪ ಸಂಕೀರ್ಣವಾದುದು: ಶಕ್ತಿಶಾಲಿಯಾದುದು. ಆದರೆ ಅದು ವ್ಯಕ್ತಗೊಂಡ ಸ್ವರೂಪ ಧಾರ್ಮಿಕ(ಸಾಂಸ್ಕೃತಿಕ)ವಾದುದಾಗಿದೆ. ಪ್ರತಿಭಟನೆಯ ಮೂಲ ಆರ್ಥಿಕ ಸಂಬಂಧದಿಂದಲೇ ಪ್ರೇರಿತ. ಆದರೂ ಅದು ಸ್ಪಷ್ಟವಾದ ವರ್ಗಸ್ವರೂಪದ್ದಲ್ಲ. ಅಂದರೆ ಪ್ರತಿಭಟನೆ ಸಾಂಸ್ಕೃತಿಕ ರೂಪದಲ್ಲಿ ಪ್ರಕಟಗೊಂಡ ವರ್ಗದ ಪ್ರಕ್ರಿಯೆಯೇ ಆಗಿದೆ ಅಥವಾ ವರ್ಗ ಸಾಂಸ್ಕೃತಿಕ ಸ್ವರೂಪದಲ್ಲಿ ಪ್ರಕಟವಾಗಿದೆ. ಆದ್ದರಿಂದ ಭಾರತೀಯ ಸಮಾಜದ ಮುನ್ನಡೆ ಸಾಂಸ್ಕೃತಿಕ ಸ್ವರೂಪದ್ದಾಗಿದೆ.

ಅವೈದಿಕರಲ್ಲಿ ಕೂಡ ಒಳಸಂಘರ್ಷ ನಡೆದಿದೆ. ಇದು ಕೂಡ ಆರಾಧನೆಯಲ್ಲಿ ದಾಖಲಾಗುತ್ತದೆ. ಅಂದರೆ ಪ್ರತ್ಯಕ್ಷ ಉಂಟಾಗುವ ಸಂಘರ್ಷ ಸಾಮರಸ್ಯದ ಕಡೆಗೆ ಸಾಗುತ್ತದೆ. ಅದು ಆರಾಧನೆಯಲ್ಲಿ ಪುರಾಣದಲ್ಲಿ ದಾಖಲಾಗುತ್ತದೆ. ಅದು ಪ್ರತಿಭಟನೆಯ ದಾಖಲೆಯೇ ಆಗಿದ್ದು ಹೋರಾಟದ ಚರಿತ್ರೆಯನ್ನು ತೆರೆದು ತೋರುತ್ತದೆ. ಇಂಥ ಒಂದು ಅವೈದಿಕದೊಳಗಿನ ಜನಾಂಗೀಯ ಸಂಘರ್ಷವನ್ನು "ಮೈಲಾರಲಿಂಗನ ಮದುವೆ" ಜಾತ್ರೆಯಲ್ಲಿ ಡಾ. ಪುರುಷೋತ್ತಮ ಬಿಳಿಮಲೆ ಕಟ್ಟಿಕೊಡುತ್ತಾರೆ. ಹಿಂದೂ ಧರ್ಮದಲ್ಲಿ ಮಾತ್ರವಲ್ಲದೆ ಇಸ್ಲಾಂಧರ್ಮದಲ್ಲಿ ಸಹ ಯಜಮಾನ ಸಂಸ್ಕೃತಿಯ ವಿರುದ್ಧ ಅಧೀನ ಸಂಸ್ಕೃತಿಯ ಪ್ರತಿಭಟನೆ ನಡೆದಿದ್ದಿದೆ. ಇದರ ಒಂದು ರೂಪವೇ ಸೂಫಿಪಂಥ, ಸೂಫಿಪಂಥ ಮೂಲಭೂತವಾಗಿ ಇಸ್ಲಾಮಿಗೆ ಭಿನ್ನವಾದುದು.[೧೦] ಕರ್ನಾಟಕದ ಭಕ್ತಿಪಂಥದಂತೆ ಇದು ತನ್ನಲ್ಲಿಯ ಯಜಮಾನ ಸಂಸ್ಕೃತಿಯನ್ನು ಅಂದರೆ ಅದರ ಹೆಜಿಮನಿಯನ್ನು ಪ್ರತಿಭಟಿಸುತ್ತದೆ. ಇದು ಇಷ್ಟಕ್ಕೆ ನಿಲ್ಲುವುದಿಲ್ಲ. ಮುಂದುವರಿದು ಹಿಂದೂ ಮುಸ್ಲಿಮರಲ್ಲಿ ಗುರು ಶಿಷ್ಯ ಪರಂಪರೆಯನ್ನು ಬೆಳೆಸುತ್ತದೆ. ಅಂದರೆ ಧರ್ಮವೆಂಬ ಮೇಲ್ ರಚನೆಯನ್ನು ವಿಚ್ಛೇಧಿಸಿ ವರ್ಗದ ಸ್ವಭಾವವನ್ನು ಹೊಂದುತ್ತದೆ. ಇದು ಚರಿತ್ರೆಯಲ್ಲಿ ಆಗಾಗ ಕಾಣಿಸಿಕೊಂಡಿದ್ದಿದೆ. ಒಂದರ್ಥದಲ್ಲಿ ಇದು ಸಾಂಸ್ಕೃತಿಕ ರೂಪದಲ್ಲಿ ನಡೆದ ವರ್ಗಸಮರ ಎಂದರೆ ತಪ್ಪಾಗಲಾರದು. ಇದು ಭಾರತದ ಚರಿತ್ರೆ ತೆರೆದು ತೋರುವ ಕುತೂಹಲಕಾರಿಯಾದ ಅಂಶವಾಗಿದೆ. ಆದರೆ ಈ ಎಲ್ಲ ಸಂಘರ್ಷಗಳೂ ವರ್ಗಸಮಾಜದಲ್ಲಿ ಬೇರೆ ಬೇರೆ ಸಂದರ್ಭದಲ್ಲಿ ಏರ್ಪಡುವ ಉಪಸಂಘರ್ಷದಂತಿರುತ್ತವೆಯೇ ಹೊರತು ಮುಖ್ಯಸಂಘರ್ಷವಾಗಿರುವುದಿಲ್ಲ. ಆದರೆ ವೈದಿಕ ಮತ್ತು ಅವೈದಿಕದ ಮಧ್ಯೆ ನಡೆಯುವ ಸಂಘರ್ಷ 'ಜಾತಿಸಮಾಜ' ದ ಮುಖ್ಯವಾದ ಸಾಂಸ್ಕೃತಿಕ ಸಂಘರ್ಷವಾಗಿರುತ್ತದೆ. ಇದೂ ಕೂಡ ಕಾವ್ಯ, ಪುರಾಣ, ಆರಾಧನೆಯ ರೂಪದಲ್ಲಿ ತಲೆಮರೆಸಿಕೊಂಡಿರುತ್ತದೆ. ಇದು ಚರಿತ್ರೆ ನಮಗೆ ಕೊಡುವ ಒಳನೋಟವಾಗಿರುತ್ತದೆ. ಇಂಥ ಒಂದು ವೈದಿಕ ಮತ್ತು ಅವೈದಿಕ ಸಾಂಸ್ಕೃತಿಕ ಮುಖಾಮುಖಿಯನ್ನು ರಾಜಾರಾಮ ಹೆಗಡೆ ತಮ್ಮ 'ಬಲಿ-ವಾಮನ-ವಿಕ್ರಮ' ಎಂಬ ಬರಹದಲ್ಲಿ ವಿವರಿಸುತ್ತಾರೆ.[೧೧] ವೇದಕಾಲವೇನೂ ಸ್ಥಗಿತ ಭೂಖಂಡದ್ದಾಗಿರಲಿಲ್ಲ. ಕಾಲಕಳೆದಂತೆ ಆರ್ಯಾವರ್ತದ ವಿಸ್ತೀರ್ಣವೂ ನಡೆಯುತ್ತದೆ. ಹಾಗೆ ಆಗುವಾಗ ಅನೇಕ ಸಂಘರ್ಷಗಳೂ ಎದುರಾಗುವುದು ಸಹಜ. ಅದು ಕ್ಷುಲ್ಲಕವಾದಾಗ ನಾಶಮಾಡಲಾಗುತ್ತದೆ. ಅಮೃತವೆಂದರೆ ಈ ಧೀರ್ಘಕಾಲದಲ್ಲಿ ಹರಿದುಬಂದ, ಹೊರೆದುಬಂದ ಸಂಘರ್ಷ ತಂದುಕೊಟ್ಟ ಅರಿವೇ ಆಗಿದೆ. ಈ ಅರಿವು ಯಾವುದು? ಇಲ್ಲಿಯ ತನಕವೂ ನಡೆದ ಕೆಳವರ್ಗದ ಸಂಘರ್ಷ ಅನೇಕ ಗುಣಾತ್ಮಕ ಫಲವನ್ನು ತಂದುಕೊಟ್ಟಿದೆ ಎನ್ನುವುದರಲ್ಲಿ ಸಂದೇಹವಿಲ್ಲ. ಆದರೆ ಅದರೊಟ್ಟಿಗೆ ಆಯಾ ಕಾಲದ ಸಂಘರ್ಷ ಒಂದು ನಡುಗಡ್ಡೆಯಾಗಿ, ಮತ್ತೊಂದು ಜಾತಿಯೋ ಮೌಢ್ಯವೋ ಆಗಿ ಪರಿವರ್ತನೆಯಾದುದು. ಮಹಾಕ್ರಾಂತಿಕಾರಕ ಸತ್ವವನ್ನು ಹೊಂದಿದ್ದ ವೀರಶೈವ ಚಳುವಳಿ ಕೂಡ ಒಂದು ಪ್ರತ್ಯೇಕ ಧರ್ಮವಾಗಿ ಸಂಪ್ರದಾಯ ಶರಣತೆಯಲ್ಲಿ ಬಿದ್ದು ಹೋದುದು ನಮ್ಮೆದುರು ಇದೆ. ಮೇಲಿನ ವರ್ಣದವರ ಸೇವೆಗಾಗಿ, ಅವರಿಗೆ ಸಂಪತ್ತು ಒದಗಿಸಿಕೊಡುವ ಈ ಶೂದ್ರ ಮತ್ತು ಸ್ತ್ರೀ ಸಮೂಹ ಪರಮಾತ್ಮನಿಂದ

ವಂಚಿತವಾದವೆಂದು ತಿಳಿಯದೇ ಸಮಾಧಾನದಿಂದ ಭಕ್ತಮೂಢವಾಗಿ ಹಾಗೆಯೇ ಇರಬೇಕು. ವಿದ್ಯೆಗಾಗಿ, ಆಧ್ಯಾತ್ಮಕ್ಕಾಗಿ, ಸಂಪತ್ತಿಗಾಗಿ ಹಾರೈಸುವ ಮತ್ತು ಅದಕ್ಕಾಗಿ ಬಂಡಾಯವೇಳುವ ಅವಶ್ಯಕತೆಯಿಲ್ಲ. ಈ ಎಲ್ಲದರ ಮನೋವೈಜ್ಞಾನಿಕ ತಳಹದಿಯಲ್ಲಿ ಎಂದೆಂದೂ ಈ ವಂಚಿತ ಸಮೂಹ ಬಂಡಾಯವೇಳಬಾರದೆಂಬ ಬಹುಧೂರ್ತ ರಾಜಕೀಯ ಇದರಲ್ಲಿ ಅಡಗಿದೆ. ಅಂದಿಗೂ, ಇಂದಿಗೂ ಭಕ್ತಿಪಂಥವನ್ನು ಅರಸಿ ಹೊರಟಾಗ ಅದರ ಮೂಲಕ್ಕೆ ಎಂದರೆ ಭಗವದ್ಗೀತೆಯ ಬಳಿಗೆ ಹೋಗಬೇಕಲ್ಲ? ಕೃಷ್ಣದರ್ಶನದ ರಾಜಕೀಯ ಹೀಗಿದೆ ಎಂದು ತಿಳಿದುಕೊಂಡಾಗಲೂ ಚರಿತ್ರೆಯಲ್ಲಿ ಅಷ್ಟೇ ಆಗಿ ನಿಂತಿರದೆ ಅದನ್ನು ಮೀರುವ ಪ್ರಯತ್ನವೊಂದು ನಡೆದೂ ಇದೆ ಎನ್ನುವ ಒಂದು ವಿಚಾರದ ಎಳೆ ಹೊರಡಲು ಆಗಿದ್ದು ಕಾರಣವಾಯಿತು. ಸಮಾಜರಚನೆಯ ಮೂಲಶಕ್ತಿಯ ಅಂದರೆ ವರ್ಗಹೋರಾಟದ ಸ್ವರೂಪವನ್ನು ಅದು ಹೊಂದಿರಲಿಲ್ಲವೇ? ಎಂಬ ಸಮಸ್ಯೆ ಬಹು ಸಂಕೀರ್ಣವಾದುದು. ಯಾಕೆಂದರೆ ಇದು ವರ್ಣ (ಜಾತಿ) ಹೋರಾಟವೊ ವರ್ಗಹೋರಾಟವೊ ಅಥವಾ ಕೇವಲ ಆಧ್ಯಾತ್ಮಿಕ ಸ್ವರೂಪದ್ದೋ ಎಂದು ಕೇಳಿದರೆ ಉತ್ತರ ಸರಳವಾಗುವುದಿಲ್ಲ. ಇದಕ್ಕೆ ಕಾರಣ ನಮ್ಮಲ್ಲಿ ಒಂದೇ ವರ್ಗದ ಮಧ್ಯೆಯೂ ಬಂದು ನಿಲ್ಲುವ ಜಾತಿಯ ಗೋಡೆಗಳು. ಆದರೆ ಭಕ್ತಿಪಂಥದ ಹೆಚ್ಚಳ ಮತ್ತು ಕ್ರಾಂತಿಕಾರಕತೆ ಬಂದುದು ಕೆಳವರ್ಗ ಮತ್ತು ಜಾತಿಗಳಿಂದಲೇ. ಆದ್ದರಿಂದ ಜಾತಿಯನ್ನು ಸಾಮಾಜಿಕ ಹೋರಾಟದಲ್ಲಿ ಕಡೆಗಣಿಸುವಂತಿಲ್ಲ. ವರ್ಗ ಮತ್ತು ಜಾತಿಯ ಸ್ವರೂಪ ಭಾರತದ ಸಂದರ್ಭದಲ್ಲಿ ಬಹಳ ಸಂಕೀರ್ಣವಾಗಿದೆ. ಅದನ್ನು ಡಾ. ಅಂಬೇಡ್ಕರ್ ರವರು ಜಾತಿ ಎಂದರೆ "ಬಾಗಿಲು ಮುಚ್ಚಿದ ವರ್ಗ" ಎಂದಿದ್ದಾರೆ.

"ಭಾರತದ ಸಂದರ್ಭದಲ್ಲಿ ನಿಜವಾಗಿ ಜಾತಿ ತನ್ನ ಚಾರಿತ್ರಿಕ ಆಯಾಮದಿಂದಾಗಿ ಅಡಿರಚನೆಯಲ್ಲಿ ಒಂದು ವಿಶೇಷವಾದ ಸಂಬಂಧ ಹೊಂದಿದೆ. ಬೇರೆ ಮಾತಿನಲ್ಲಿ ಹೇಳುವುದಾದರೆ ಜಾತಿ ಎಂಬುದು ಭಾರತದ ಚರಿತ್ರೆಯಲ್ಲಿ ಕಾಣಿಸಿಕೊಳ್ಳುವ ವರ್ಗಸ್ವರೂಪವೇ ಆಗಿದೆ ಎಂದೂ ಹೇಳುವ ವಾದವಿದೆ. ಹೀಗೆ ಹೇಳುವ ಪಾರ್ಥಚಟರ್ಜಿಯವರ ಮಾತಿಗೆ ಮೇಲಿನ ಉದಾಹರಣೆಗಳೆಲ್ಲ ಸಾಕ್ಷಿಯಂತಿವೆ.[೨] "ಹಿಂದೂ ಧರ್ಮದಲ್ಲಿಯ ಅಸ್ಪೃಶತೆ ಮತ್ತು ಜಾತಿಜಾತಿಯ ಮಧ್ಯೆಯ ಹೊಕ್ಕು ಬಳಕೆಯನ್ನು ಕಳೆದುಬಿಟ್ಟರೆ ಚಾತುರ್ವರ್ಣ ವೈಜ್ಞಾನಿಕ" ಎಂದೇ ಗಾಂಧೀಜಿ ಹೇಳುತ್ತಾರೆ. ಬರಗೂರು ರಾಮಚಂದ್ರಪ್ಪನವರು "ವಾಸ್ತವದಲ್ಲಿ ದೇವರಿಲ್ಲದ ಧರ್ಮವಿದೆ, ಧರ್ಮವಿಲ್ಲದ ಸಂಸ್ಕೃತಿಯಿದೆ" ಎಂದು ಹೇಳುತ್ತಾರೆ. ವರ್ಣಧರ್ಮಮೂಲವಾದ ಹಿಂದೂ ಸಂಸ್ಕೃತಿಯೆನ್ನುವುದು ದೇಶಕ್ಕೆ ಸ್ವಾತಂತ್ರ್ಯ ಬಂದು ಅರವತ್ತೈದು ವರ್ಷಕಳೆದರೂ ಸಾಂಸ್ಕೃತಿಕ ಯಜಮಾನಕೆ (ಹೆಜಿಮನಿ) ಯನ್ನು ಭದ್ರಪಡಿಸುತ್ತಲೇ ಇದೆ. ಆಳುವವರು ಯಾರೇ ಆದರೂ ಪುರೋಹಿತಶಾಹೀ ಭದ್ರವಾಗೇ ಇದೆ. ಇರುವುದು ಮಾತ್ರವಲ್ಲ, ಪ್ರಜಾಪ್ರಭುತ್ವವನ್ನು ಅದು ಹಾಕಿಕೊಟ್ಟ ಧರ್ಮ ನರಪೇಕ್ಷತೆಯನ್ನು ಕಬಳಿಸುತ್ತದೆ. ಪುರೋಹಿತಶಾಹೀ ಎನ್ನುವುದು ಇರುವಲೆಲ್ಲ ಅಂದರೆ ವೀರಶೈವ, ಕ್ರಿಶ್ಚಿಯನ್, ಮುಸ್ಲಿಮ್, ಸಿಖ್, ಮುಂತಾದಡೆಯಲ್ಲೂ ಸಹ ಅವರ ಯಜಮಾನಿಕೆ ನಡೆದಿರುತ್ತದೆ ಎನ್ನುವುದಕ್ಕೆ ಆಗಾಗ ಸಾಕ್ಷಿ ಸಿಕ್ಕುತ್ತಲೇ ಇರುತ್ತದೆ. ಹಿಂದುಧರ್ಮದಲ್ಲಿ ಚಾತುರ್ವರ್ಣ

ಪದ್ಧತಿಯಿದ್ದು ರಾಜಕೀಯ ಕ್ಷತ್ರಿಯ ವರ್ಣದ ಗುತ್ತಿಗೆಯಾಗಿತ್ತು. ದೇಶದ ವ್ಯಾಖ್ಯಾನಕ್ಕೆ ಇಲ್ಲಿ ಒಂದೇ ಧರ್ಮವಿಲ್ಲ. ಇದು ಬಹುಧರ್ಮಗಳ ನಾಡು. ಅದರಲ್ಲೂ ಮುಸ್ಲಿಂ-ಕ್ರೈಸ್ತ ಧರ್ಮವೂ ಇದೆ. ಇದು ಘರ್ಷಣೆಗೆ ಹಾದಿ ಮಾಡಿಕೊಡುತ್ತದೆ. ಇಂಗ್ಲೀಷರೇನೋ ಸೆಕ್ಯುಲರಿಸಂ ಅನುಸರಿಸುತ್ತಾರೆ. ಇಲ್ಲಿ ಅನೇಕ ಧರ್ಮ ಇರುವುದರಿಂದ ನಮ್ಮದರೊಡನೆ (ಸನಾತನ ಧರ್ಮ ಯಾಕೆಂದರೆ ಭಾರತದ ಧರ್ಮ ಸನಾತನ ಧರ್ಮ) ಸಾಮಾನ್ಯ ಸಹಕಾರ ಬೆಳೆಸುವುದು ಹೇಗೆ? ಅಂಥ ಪರಂಪರೆ ನಮ್ಮದೇ ಎನ್ನುವ ಪ್ರಶ್ನೆ ಕಾಡುವುದು ಅವರಿಗೆ ಸಹಜವಾಗಿತ್ತು.

ಡಾ.ಅಂಬೇಡ್ಕರ್ ಹೇಳುತ್ತಾರೆ "ಹಿಂದೂಧರ್ಮದ ಜಾತಿಯ ವಿಭಜನೆಯಿಂದಾಗಿ ಅದು ಒಂದು ಸಮಾಜವಾಗಿ ಬೆಸೆದುಕೊಳ್ಳಲೇ ಇಲ್ಲ"[೧೩] ಎಂದು ಧರ್ಮದ ಸ್ವಭಾವ ಶೋಷಕರೊಡನೆ ಒಪ್ಪಂದ ಮಾಡಿಕೊಳ್ಳುವುದಾದ್ದರಿಂದ ಈ ಧರ್ಮಗಳೂ ಮುಂದೆ ಅಂದರೆ ಈಗ ಏನಾಗಿವೆ ಎಂದು ಬೇರೆ ಹೇಳಬೇಕಿಲ್ಲ. ಬ್ರಾಹ್ಮಣರಲ್ಲಿ ಅಥವಾ ಅದಕ್ಕೆ ಹತ್ತಿರವಾದ ಶೂದ್ರರಲ್ಲಿ ಒಬ್ಬ ಬಡವನಿದ್ದಾನೆ ಎಂದ ಮಾತ್ರಕ್ಕೆ ಆತ ದಲಿತ ಆಗಲಾರ. ಅವನ ಶೋಷಣೆ ಸಾರ್ವಕಾಲಿಕವೂ ಅಲ್ಲ. ಸಾಮಾಜಿಕವಾದ ಮನ್ನಣೆ ಅಲಭ್ಯವೂ ಅಲ್ಲ. ಆದರೆ ಕಾಲಾಂತರದಿಂದ ಧಾರ್ಮಿಕವಾಗಿ ಆರ್ಥಿಕವಾಗಿ, ಸಾಮಾಜಿಕವಾಗಿ ಶೋಷಣೆಗೊಳಗಾದ ಪಂಗಡ ಅಥವಾ ಜಾತಿ ಇದೆಯೋ ಅದು ಮಾತ್ರ ದಲಿತ ಎಂಬ ಪಟ್ಟಿದಡಿಯಲ್ಲಿ ಬರುತ್ತದೆ. ಅವರೆಲ್ಲ ಹೊಲೆಮಾದಿಗರು, ಭಂಗಿಗಳು, ಮುತ್ತೆ, ಆಗೇರ, ಮುಂತಾದ ಅಸ್ಪೃಶ್ಯರೇ ಆಗಿದ್ದಾರೆ. ಅವರೇ ದಲಿತರು. ಪೌರಾಣಿಕ ಕಾಲದಲ್ಲಿ ದ್ರೋಣಾಚಾರ್ಯರನ್ನು ಅಪ್ರತ್ಯಕ್ಷವಾಗಿಯಾದರೂ ಗುರುವೆಂದು ಸ್ವೀಕರಿಸಿ ಬಿಲ್ಲುವಿದ್ಯೆಯನ್ನು ಕಲಿತ ಏಕಲವ್ಯನಿಗೆ ಈ ಗುರು ದಕ್ಷಿಣೆಯಾಗಿ (ಇಂಥ ಸಂಭಾವಿತ ವಿಧಾನವೂ ಉಂಟೆ) ಹೆಬ್ಬೆರಳನ್ನೇ ಕೊಂಡು ಅವನನ್ನು ಮೂಲೆಗುಂಪು ಮಾಡಿದ ಕತೆ ಕೇವಲ ದ್ರೋಣಾಚಾರ್ಯರ ವೈಯಕ್ತಿಕ ಪ್ರತಿಕ್ರಿಯೆಯಾಗಿರದೆ, ಆಗಿನ ಸಮಾಜದ ಹಿಡಿತ ದಲಿತನ ಮೇಲೆ ಎಷ್ಟು ಇತ್ತು ಎಂಬುದನ್ನು ತೋರಿಸುತ್ತದೆ. ಬಹುಶಃ ಈ ಕಥೆಯನ್ನು ಆಧರಿಸಿ ನಾಟಕ ರಚಿಸಿ ಮಾಡಿದವರಲ್ಲಿ ದಿವಂಗತ ಗೋವಿಂದಪೈಗಳು ಮಾತ್ರ ನ್ಯಾಯಸಲ್ಲಿಸಿ, ಇದು ವರ್ಣಧರ್ಮದ ಅನ್ಯಾಯ ಎಂಬುದನ್ನು ತೋರಿಸಿದ್ದಾರೆ. ಉಳಿದವರೆಲ್ಲ ದ್ರೋಣನನ್ನು ಆದರ್ಶನನ್ನಾಗಿ ಮಾಡಿ ಏಕಲವ್ಯನನ್ನು ಗುರುಭಕ್ತಿಶೀಲನನ್ನಾಗಿಸಿ, ತ್ಯಾಗದ ವರ್ಣನೆಯನ್ನು ಮಾಡಿದ್ದಾರೆ.

ಗಾಂಧಿಯವರಿಗೆ ಈ ಸಾವಿರ ಜಾತಿಗಳ ಮೂಲಸ್ಥಾನವಾದ ವರ್ಣಧರ್ಮದಲ್ಲೇ ಅಪಾರವಾದ ನಂಬಿಕೆ. ಅಸ್ಪೃಶ್ಯನಿಗೆ ಜಮೀನು ಮಾಡುವ ಅಂದರೆ ಬೇಸಾಯ ಮಾಡುವ ಅಧಿಕಾರವಿಲ್ಲ. ಡಾ. ಶಿವರಾಮಕಾರಂತರ 'ಚೋಮನದುಡಿ'ಯ ಸಮಸ್ಯೆ ನಿಂತಿದ್ದೇ ಇದರ ಮೇಲೆ ಅವರು ಸ್ವತಃ ಜಮೀನು ಮಾಡಬಾರದು. ಒಮ್ಮೆ ಜಮೀನು ಮಾಡಿದರೆ ಸವರ್ಣಿಯರ ಕೆಲಸಕ್ಕೆ ಯಾರು ಸಿಕ್ಕುತ್ತಾರೆ? ಮತ್ತೆ ಅವರು ಓಟ ಮಾಡಿದರೆ "ಹೊಟ್ಟೆಗೆ ಹಿಟ್ಟು ಸಿಕ್ಕಿದರೆ ಜುಟ್ಟಿಗೆ ಮಲ್ಲಿಗೆ" ಬೇಕೆನ್ನಿಸುತ್ತದೆ. ಆಗ ಇಂಥ ಜಾತಿಗಳ ಫಜೀತಿ ಪಾವನ ಆದೀತು. ಹಿಂದೂಧರ್ಮದ ಪದ್ಧತಿಯಲ್ಲಿ ಶೂದ್ರನಿಗೂ ಸೇವೆಯೇ

ಧರ್ಮ. ಮೇಲಿನ ಮೂರು ವರ್ಣಗಳ ಸೇವೆ ಅವನ ಸ್ವಧರ್ಮ ಅಸ್ಪೃಶ್ಯ ಅತಿಶೂದ್ರ. ಆತ ಮಾಡಿದ ಸೇವೆಗೆ ಪ್ರತಿಫಲ ಕೇಳಬಾರದು. ಬ್ರಾಹ್ಮಣ ಮತ್ತು ಅಂಥವರು ಕೊಟ್ಟರೆ ಮಾತ್ರ ಸ್ವೀಕರಿಸಬೇಕು. ಯುಗಯುಗದಿಂದ ಯಾವ ಬದಲಾವಣೆ ಬಂದರೂ ದಲಿತನ ಬದುಕಿನಲ್ಲಿ ಬದಲಾವಣೆ ಕಾಣದು. ಬಹುಶಃ ಈ ಮಧ್ಯೆ ಕೆಲವರು ಮುಸ್ಲಿಮರ ಉಚ್ಛ್ರಾಯ ಕಾಲದಲ್ಲಿ ಮತ್ತು ಇಂಗ್ಲೀಷರ ಕಾಲದಲ್ಲಿ ಧರ್ಮಾಂತರ ಹೊಂದಿ (ಈ ಧರ್ಮಾಂತರವನ್ನು ಹಿಂದೂಗಳು ಧರ್ಮಭ್ರಷ್ಟತೆ ಎಂದು ವರ್ಣಿಸುತ್ತಾರೆ) ಈ ನರಕದಿಂದ ಮುಕ್ತರಾಗಿರಬಹುದು. ಅವರೇ ಭಾಗ್ಯಶಾಲಿಗಳು ಆದರೆ ದುರ್ದೈವದಿಂದ ದಲಿತರಲ್ಲಿ ದೈವಪ್ರಜ್ಞೆ, ಧರ್ಮಪ್ರಜ್ಞೆ ಇದೆ. ಅವರು ಮೇಲು ಜಾತಿಯವರಿಗಿಂತ ಹೆಚ್ಚು ನಿಷ್ಠಾವಂತರು. ಅವರು ಹಿಂದು ಧರ್ಮದ ಅವಿಭಾಜ್ಯ ಅಂಗವಾಗೇ ಬೆಳೆದು ಬಂದವರು ಆ ಕಾರಣದಿಂದಲೇ ಹಿಂದು ಸಮಾಜದ ದೌರ್ಜನ್ಯವನ್ನು ಸಹಿಸಿಕೊಳ್ಳುತ್ತಿದ್ದಾರೆ. ಒಂದು ಕಡೆ ಆರ್.ಎಸ್.ಎಸ್ ಸಂಸ್ಥಾಪಕರಲ್ಲಿ ಒಬ್ಬರಾದ ಹೆಡ್ಗೆವಾರ ಅವರು "ಕೆಳಜಾತಿಗಳವರು ಮೇಲು ಜಾತಿಗಳ ವಿರುದ್ಧ ತಿರುಗಿ ಬೀಳುವುದನ್ನು ನೋಡಿದರೆ ಮುಸ್ಲಿಂ ವಿಷಸರ್ಪಗಳನ್ನು ಸವರಿ ಹಾಕಲಿಕ್ಕೆ ಕೆಳಜಾತಿಯವರ ಸಹಕಾರ ನಿರೀಕ್ಷಿಸುವ ಹಾಗಿಲ್ಲ. ಈ ಕಾರಣದಿಂದ ನಾವು ಯಾರನ್ನು ನಂಬಿಕೂರದೆ ಸ್ವಂತದ ತಯಾರಿ ಮಾಡಿಕೊಳ್ಳಬೇಕಿದೆ"[೧೯] ಎಂದಿದ್ದರು. ಈ ರೀತಿಯಲ್ಲಿ ಹಿಂದು ಸಮಾಜದಲ್ಲಿ ಶೋಷಣೆಗೆ ಒಳಗಾದ ಒಂದು ಶೋಷಿತ ಸಮುದಾಯವಿದ್ದು, ಅದು ತಮಗೆ ಸಹಾಯ ಮಾಡುವುದಿಲ್ಲವೆಂದು ಗೊತ್ತು ಮಾಡಿಕೊಂಡ ಮೇಲ್ವರ್ಗದ ನಾಯಕರು ಇಸ್ಲಾಂ ಧರ್ಮದ ಅನುಯಾಯಿಗಳನ್ನು ಸದೆಬಡಿಯಲು ಸ್ವಂತ ತಯಾರಿಯನ್ನು ಮಾಡಿಕೊಂಡರು. ಭಾರತದಲ್ಲಿ ವೇದಕ್ಕಿಂತ ಹಳೆಯದಾದ, ವೇದಕ್ಕಿಂತ ಬೇರೆಯಾದ ವೇದಕ್ಕಿಂತ ಹೆಚ್ಚು ವಿಸ್ತಾರವಾದ ಜನಪದವನ್ನು ಹೊಂದಿರುವ ಸಂಸ್ಕೃತಿ ಇತ್ತು. ಇಷ್ಟು ಮಾತ್ರವಲ್ಲ. ಅದು ವಿಧವಿಧವಾಗಿಯೂ ಇತ್ತು. ಯಾವ ಸಾಮಾಜಿಕ ವ್ಯವಸ್ಥೆ ಮಠಾಧಿಪತ್ಯ ಹೊಂದಿರುತ್ತದೋ ಜಮೀನುದಾರಿ ಮತ್ತು ಬಂಡವಾಳಶಾಹೀ ವಿಧಾನ ಹೊಂದಿರುತ್ತದೋ ಅಲ್ಲಿ ಮೊದಲು ಅಧಿಕಾರ ಹಣ ಮತ್ತು ವಿದ್ಯೆಯನ್ನು ಗಳಿಸುವವರು, ಮೇಲು ಅಂತಸ್ತಿನ ಜನರಾಗಿರುತ್ತಾರೆ. ಭಾರತದಂತಹ ವರ್ಣಾಧಾರಿತ ಜಾತಿ ವ್ಯವಸ್ಥೆಯುಳ್ಳ ಸಮಾಜ ರಚನೆಯಲ್ಲಿ ಇದರ ಮೊದಲ ಲಾಭ ಹೊಂದಿರುವವರು ಬ್ರಾಹ್ಮಣರು, ಬನಿಯಾಗಳು. ಈ ವರ್ಗದಿಂದಲೇ ಯೋಗಿಗಳೂ, ಭೋಗಿಗಳೂ, ಸುಧಾರಣಾವಾದಿಗಳೂ, ರಾಜಕೀಯ ಮುಂದಾಳುಗಳೂ, ಮತ್ತು ಕ್ರಾಂತಿಕಾರಿಗಳೂ, ಬರುತ್ತಾರೆ. ಆದರೆ ಚರಿತ್ರೆಯಲ್ಲಿ ಕ್ರಾಂತಿಕಾರಿಗಳಿಗಿಂತ ಸಂಪ್ರದಾಯವಾದಿಗಳೇ ಹೆಚ್ಚಿರುತ್ತಾರೆ ಎಂಬುದು ಇಲ್ಲಿಯವರೆಗೆ ನಮಗೆ ಗೊತ್ತಿರುವ ಸಂಗತಿಯಾಗಿದೆ. ಭಾರತದಲ್ಲಿ ಸಾಂಸ್ಕೃತಿಕ ಸಂಘರ್ಷ ಸತತವಾಗಿ ನಡೆದೇ ಇದೆ. ಉಳಿದ ದೇಶಗಳ ಈ ಸಂಘರ್ಷಕ್ಕೂ ಭಾರತಕ್ಕೂ ವಿಶೇಷವಾದ ವ್ಯತ್ಯಾಸವೆಂದರೆ ಇಲ್ಲಿಯ ಜನಾಂಗಗಳ ಮಿಶ್ರಣವನ್ನು ಸೇರಿ ಉಂಟಾದ ಜಾತಿಪದ್ಧತಿ, ಜಾತಿಗಳು ಮುಚ್ಚಿದ ವರ್ಗವೇ ಆಗಿ ಇಲ್ಲಿಯ ಸಮುದಾಯ ಸಂಸ್ಕೃತಿಯನ್ನು ಮೇಲ್ವರ್ಣ ಹಾಗೂ ವರ್ಗವನ್ನೊಳಗೊಂಡ ಸಂಸ್ಕೃತಿ ಸದಾ ಕಬಳಿಸುತ್ತಲೇ ಬಂದಿದೆ. ಇಲ್ಲಿ, ಇಲ್ಲಿಯ 'ದುರ್ಗಿ' ಆರ್ಯಾ ದುರ್ಗಾ ಆಗಿ 'ಅಮ್ಮ' ಶಿವೆಯೊ, ಶಾಂತಿಕಾ ಪರಮೇಶ್ವರಿಯೊ, ಆಗಿ ಪರಿವರ್ತನೆ

ಹೊಂದಿಬಿಡುತ್ತವೆ. ಧಾರ್ಮಿಕ-ದೈವಿಕ ಪ್ರಭಾವದಿಂದ ಈ ಮೇಲ್ವರ್ಗದ ಜನ ಕೆಳವರ್ಗದ ಮತ್ತು ದಲಿತ ಜನಾಂಗವನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಎಂಥಾ ಸಂಸ್ಕೃತಿಯನ್ನುಂಟು ಮಾಡುತ್ತಾರೆನ್ನಲು, 'ಮಹಿಷಾಸುರ ಮರ್ದಿನಿ' ಪುರಾಣವೇ ಸಾಕ್ಷಿ. ಆದರೂ ಈ ಎಲ್ಲ ಅಮಾನುಷ ಶೋಷಣೆಯ ಮಧ್ಯದಲ್ಲಿಯೂ ಕೆಳವರ್ಗದ ಮತ್ತು ದಲಿತ ಸಂಸ್ಕೃತಿ ನಾಶವಾಗದೆ ಉಳಿದುಬಂದಿದೆ. ಪ್ರಹ್ಲಾದ ಚರಿತ್ರೆ ಒಳ್ಳೆಯ ಮತ್ತು ಕೆಟ್ಟನಡತೆಯ ಚಿತ್ರವಾಗಿರದೆ ಈಶ್ವರನಿಗಿಂತ ವಿಷ್ಣು ಶ್ರೇಷ್ಠ ಎಂಬಂತೆ ಜಾಣತನದಿಂದ ಚಿತ್ರಿತವಾಗಿದೆ. ಹಿರಣ್ಯಕಶುಪುವಿನ ಬಹಳ ಮುಖ್ಯ ತಪ್ಪೆಂದರೆ ಆತ ತನ್ನ ಮಗನನ್ನು ವೈಷ್ಣವನನ್ನಾಗಲು ಬಿಡದಿರುವುದೇ ಆಗಿದೆ. ಈ ಶೈವ ಮತ್ತು ವೈಷ್ಣವದ ಆಳದಲ್ಲಿ ಈ ಎರಡು ಪಂಥಗಳ ಮಾತ್ರವಲ್ಲ, ಜನಾಂಗೀಯ ಸಂಘರ್ಷ ಕೂಡ ಅಡಕವಾಗಿರಬಹುದಾಗಿದೆ. ಕೌರವ ಪಾಂಡವರ ಮಧ್ಯೆ ನಡೆಯುವ ಕುಟುಂಬ ಜಗಳದಲ್ಲಿ ಗೆಲ್ಲುವುದು ವಿಭಕ್ತಿ ಕುಟುಂಬದ ಪ್ರತಿಪಾದನೆ. ಆದರೆ ಕುಟುಂಬ ಪ್ರೀತಿ ಸಹ ಸಂಘರ್ಷಕ್ಕೆ ಒಳಗಾಗಿದೆ. ಮಹಾಭಾರತದ ಯುದ್ಧ ವರ್ಣಧರ್ಮದ ರಕ್ಷಣೆಗಾಗಿ ಅಂದರೆ ಬ್ರಾಹ್ಮಣ ಮತ್ತು ಕ್ಷತ್ರಿಯರ ಹಿತಾಸಕ್ತಿಯಿಂದಾಗಿ ನಡೆಯಿತೆಂಬುದನ್ನು ಸಾಬೀತುಪಡಿಸಬಹುದು. ಆದ್ದರಿಂದ ಪ್ರಾರಂಭದಿಂದಲೂ ಆರ್ಥಿಕ ಪೈಪೋಟಿಯಿದ್ದು, ಈ ಆರ್ಥಿಕ ಮತ್ತು ಧಾರ್ಮಿಕ ಪೈಪೋಟಿಯನ್ನು ನಿಲ್ಲಿಸುವ ವ್ಯವಸ್ಥೆಯೊಂದಿಗೆ ಮಾತ್ರ ಯುದ್ಧ ಕೊನೆಗೊಳ್ಳಬಹುದೆಂಬುದನ್ನು ಹೇಳಬಹುದು. ಗದಾಪರ್ವದಲ್ಲಿ ಸಹ ಯುದ್ಧದ ಸರ್ವನಾಶವನ್ನು ಬಣ್ಣಿಸಬಹುದಾಗಿದೆ. ನಮ್ಮೊಳಗಿನ ಅನೇಕ ವರ್ಗ, ವರ್ಣಹೋರಾಟವನ್ನು ಅಂತರ್ಗತಗೊಳಿಸಿ ಕೊಂಡಿದ್ದರೂ ಸ್ವಾತಂತ್ರ್ಯ ಹೋರಾಟ ಶಿಥಿಲವಾಗದಂತೆ ಎಲ್ಲವನ್ನು ಮರೆಸಿ ಅಖಂಡವಾದ ವಿರೋಧವನ್ನು ಒಡ್ಡುವುದು. ಆದರೆ ಇದಕ್ಕೆ ಡಾ. ಅಂಬೇಡ್ಕರರು ಹೊರಗಾಗುತ್ತಾರೆ. ಶೋಷಣೆ ಅತ್ಯುಗ್ರತೆಗೆ ತಲ್ಪಿದಾಗೆಲ್ಲ ಪ್ರತಿಭಟನೆಯ ಬೆಂಕಿ ಭುಗಿಲೆನ್ನುವುದನ್ನು ನಾವು ಚರಿತ್ರೆಯುದ್ದಕ್ಕೂ ಕಾಣುತ್ತೇವೆ. ದೊಡ್ಡಮೀನು ಸಣ್ಣ ಮೀನನ್ನು ನುಂಗುವುದೇ ನ್ಯಾಯ; ಶೋಷಣೆ ಎನ್ನುವುದೇ ಮೂಲಪ್ರವೃತ್ತಿ. ಯಂತ್ರನಾಗರಿಕತೆಯ ಅವಿರ್ಭಾವದಿಂದ ಪ್ರಖರಗೊಂಡ ಬಂಡವಾಳಶಾಹೀ ತನ್ನ ವಿರಾಟ ಮತ್ತು ವಿಕಾರ ಸ್ವರೂಪವನ್ನು ಜಗತ್ತಿಗೆ ತೋರಿತು. ಉತ್ಪಾದನೆಯ ವೈವಿಧ್ಯಗಳು, ಸಾಮಾಜಿಕತೆಯ ಜಾಗತಿಕಸ್ವರೂಪ, ವೈಜ್ಞಾನಿಕ ತಾಂತ್ರಿಕ ಬೆಳವಣಿಗೆ ಇವುಗಳಿಂದ ಉಂಟಾದ ಸಮಾಜ ವ್ಯವಸ್ಥೆಯ ಸಂಕೀರ್ಣತೆ ಊಹಿಸಲಸಾಧ್ಯವಾಗಿವೆ. ಈ ಸಂಕೀರ್ಣತೆಯಿಂದ ಶೋಷಣೆಯ ಸ್ವರೂಪವೂ ಸೂಕ್ಷ್ಮವಾಗಿದೆ. ಅದೇನೇ ಇದ್ದರೂ ಆ ಸಾವಿರ, ಸಾವಿರ ರೂಪದ ಶೋಷಣೆ ಆರ್ಥಿಕ ಮೂಲವಾದ ಆಸ್ತಿಮೂಲವಾದುದು ಎನ್ನುವುದು ಮುಖ್ಯ ಸಂಗತಿ. ಪ್ರತಿಭಟನೆ ಸಾಂಘಿಕವಾದಾಗ ಆ ಮೂಲಕ ಅದೊಂದು ತಾತ್ವಿಕತೆಯನ್ನು ಹೊಂದಿ ಜನಪದದ ಮನಸ್ಸನ್ನು ಗಾಢವಾಗಿ ಆವರಿಸಿದಾಗ ಚಾರಿತ್ರಿಕವಾಗಿ ಚರಿತ್ರೆಯ ಚಲನೆಯ ಶಕ್ತಿಯಾಗುತ್ತದೆ. ಆ ಪ್ರತಿಭಟನೆ ಕೂಡ ಎಲ್ಲಾ ಕಾಲದಲ್ಲಿ ಎಲ್ಲಾ ಸಮಾಜದಲ್ಲಿ ಒಂದೇ ವಿಧ, ಒಂದೇ ಹದ ಇರುತ್ತದೆಂದೇನೂ ಇಲ್ಲ. ಜಗತ್ತಿನ ವಿವಿಧ ಧರ್ಮಗಳ ಉದಯ, ವಿವಿಧ ಭಕ್ತಿಪಂಥಗಳ ಉದಯದ ಒಳಗಡೆ ಕೂಡ ಈ ಚಾರಿತ್ರಿಕ ಪ್ರತಿಭಟನೆ ಅಡಗಿದೆ. ಆದರೆ ಈ ಪ್ರತಿಭಟನೆ ಆರ್ಥಿಕ ಮೂಲವಾದ ತಾತ್ವಿಕತೆಯಾಗಿ, ವರ್ಗಹೋರಾಟವಾಗಿ ಪ್ರಕಟವಾದುದು

ಈ ಶತಮಾನದಲ್ಲೇ, ಅಂಥವುಗಳಲ್ಲೇ ರಷ್ಯಾದಲ್ಲಿ ಆದ ಕ್ರಾಂತಿ ಒಂದು ಮೈಲುಗಲ್ಲು; ಈ ಪ್ರತಿಭಟನೆ ಕೂಡ ಒಂದೇಸಲ ಜಯಪಡೆದದ್ದಲ್ಲ. ಇದರ ಹಿಂದೆ ಅನೇಕ ವೈಫಲಿತ ಪ್ರಯತ್ನ ನಡೆದಿದೆ. ಈ ಎಲ್ಲ ಸೋಲಿನಿಂದ ಕಲಿತ ಪಾಠ ಹುರಿಗೊಳಿಸಿದ ತಾತ್ವಿಕತೆ ಮತ್ತು ಕ್ರಿಯೆ ಚರಿತ್ರೆಯನ್ನು ಮುನ್ನಡೆಸುವ ಶಕ್ತಿಯಾಗಬೇಕಾಗುತ್ತದೆ. ನಮ್ಮ ಸ್ವಾತಂತ್ರ್ಯ ಸಂಗ್ರಾಮವಂತೂ ಅಂಥ ಪ್ರಚಂಡ ಪ್ರತಿಭಟನೆಯ ಪ್ರತೀಕವಾಗಿದೆ. ಆದರೆ ನಾವು ಇಲ್ಲಿ ಗಮನಿಸಬೇಕಾದುದೆಂದರೆ ಇದು ಕೇವಲ ಗಾಂಧಿಕಾಲದ ಪ್ರಕ್ರಿಯೆಯಲ್ಲ. ಬದಲಾಗಿ ೧೮೮೫ರಲ್ಲಿ ಸ್ಥಾಪನೆಗೊಂಡ ಅಖಿಲ ಭಾರತ ಕಾಂಗ್ರೆಸ್ ಸ್ಥಾಪನೆಯಲ್ಲಿ ಮೂರ್ತಿಗೊಂಡು, ಅದು ವ್ಯಾಪಕ ವ್ಯಾಪಕವಾಗುತ್ತ ಗಾಂಧಿಕಾಲದಲ್ಲಿ ಸ್ವಾತಂತ್ರ್ಯಗಂಗೆಯ ಸಾವಿರ ತೊರೆಗಳಾಗಿ ಹರಿದು ಬಂತು ಎಂಬುದು. ನಗರ, ಗ್ರಾಮೀಣಪ್ರದೇಶ, ಕಾರ್ಮಿಕವರ್ಗ, ಮಧ್ಯಮವರ್ಗ, ಭೂಮಾಲೀಕ, ರೈತ, ಭಾರತೀಯ ಬಂಡವಾಳಶಾಹಿವರ್ಗ, ಕ್ರಾಂತಿಕಾರಿಗಳು ಹೀಗೆ ಎಲ್ಲ ವಿಭಾಗದ ಜನರ ಹೃದಯದಲ್ಲಿ ಸ್ವಾತಂತ್ರ್ಯಕ್ಕಾಗಿ ಮಾಡಬೇಕು, ಇಲ್ಲ ಮಡಿಯಬೇಕು ಎಂಬ ಪ್ರಜ್ಞೆ ಒಂದು ಸಾಮೂಹಿಕ ಪ್ರಜ್ಞೆಯಾಗಿ, ಪ್ರತಿಭಟನೆಯಾಗಿ ಭುಗಿಲೆದ್ದಾಗ ಅದರ ಫಲವಾಗಿ ಬ್ರಿಟಿಷರು ಭಾರತವನ್ನು ಬಿಟ್ಟು ತೊಲಗಬೇಕಾಯಿತು. ಮಧ್ಯದಲ್ಲೇ ಡಾ.ಅಂಬೇಡ್ಕರರು ಅಸ್ಪೃಶ್ಯರ ಉನ್ನತಿಗಾಗಿ, ಅಸ್ಪೃಶ್ಯತೆಯ ನಿವಾರಣೆಗಾಗಿ ನಡೆಸಿದ ಹೋರಾಟ ಒಂದು ಯುಗಾಂತರ ದಾಖಲೆಯಾಗಿದೆ. ಗಾಂಧಿಯಾದಿಯಾಗಿ ಭಾರತೀಯರ ಮನಸ್ಸು ಅಸ್ಪೃಶ್ಯತೆಯ ನಿವಾರಣೆ ಹಾಗೂ ದಲಿತರ ಪ್ರಗತಿಯ ಪರವಾಗಿ ಚಿಂತಿಸುವಂತಾದುದು, ಭಾರತೀಯ ರಾಜ್ಯ ಘಟನೆಯಲ್ಲಿ ದಲಿತರಿಗಾಗಿ ಸೌಲಭ್ಯಗಳು ಮೀಸಲಾದುದು ಈ ಪ್ರಚಂಡ ಪ್ರತಿಭಟನೆಯ ಪರಿಣಾಮವಾಗಿದೆ.

ಇಲ್ಲಿ ನಾವು ಮುಖ್ಯವಾಗಿ ಗಮನಸಬೇಕಾದುದು ಇವೆರಡೂ ಸಂವಿಧಾನಾತ್ಮಕವಾದ ಪ್ರತಿಭಟನೆಯ ರೀತಿಯದಾಗಿದೆ ಮತ್ತು ಇಂಥ ಪ್ರತಿಭಟನೆಯೇ ಭಾರತೀಯ ಪ್ರಜಾಪ್ರಭುತ್ವಕ್ಕೆ ಭದ್ರವಾದ ಬುನಾದಿಯಾಗಿದೆ. ಇಂದು ಜಗತ್ತಿನಲ್ಲಿ ಬೇಕಾದ ಮತ್ತು ಬೇಡಾದ ಕಾರಣಗಳಿಗೆಲ್ಲ ಪ್ರತಿಭಟನೆ ಹಿಂಸಾತ್ಮಕ ಸ್ವರೂಪ ಪಡೆಯುತ್ತಿರುವಾಗ ಇಂಥ ಸಂವಿಧಾನಾತ್ಮಕ ಹೋರಾಟ ಮಾತ್ರ. ಮಾನವಕುಲಕ್ಕೆ ಶಾಂತಿಯನ್ನು ಶಾಶ್ವತಗೊಳಿಸುವಲ್ಲಿ ಮತ್ತು ಪ್ರಜಾಪ್ರಭುತ್ವಕ್ಕೆ ನೈತಿಕ ಸ್ವರೂಪ ಕೊಡುವಲ್ಲಿ ಮಹತ್ವದ್ದಾಗಿದೆ ಎಂದೆನಿಸುತ್ತದೆ. ಸ್ವತಂತ್ರ ಭಾರತದ ದಿನನಿತ್ಯದ ವ್ಯವಹಾರಗಳಲ್ಲಿಯೂ ಶೋಷಣೆಗೆ ತಕ್ಕ ಪ್ರತಿಭಟನೆ ಹುಟ್ಟಿಕೊಂಡಿರುವುದನ್ನು ಕಾಣುತ್ತೇವೆ. ಅಂಥ ಪ್ರತಿಭಟನೆಗೆ ವೇದಿಕೆಯಾದುದು ಬಳಕೆದಾರರ ವೇದಿಕೆ ಒಂದು. ಇದು ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚಟುವಟಿಕೆಯಲ್ಲಿದೆ. ವ್ಯಾಪಾರಿಗಳಿಂದ ಅಧಿಕಾರಿಗಳಿಂದ ಗ್ರಾಹಕರಿಗೆ ಜನಸಾಮಾನ್ಯರಿಗೆ ಆಗುವ ಅನ್ಯಾಯವನ್ನು ಪ್ರತಿಭಟಿಸುವಲ್ಲಿ ಒಂದು ವೇದಿಕೆಯಾಗಿ ಕೆಲಸಮಾಡುತ್ತಿದೆ. ಪ್ರತಿಭಟನೆಯ ಸೊಲ್ಲು ಸಾಂಸ್ಕೃತಿಕ ರಂಗದಲ್ಲೂ ಕಾಣಿಸಿಕೊಳ್ಳುತ್ತದೆ. ಸಾಂಸ್ಕೃತಿಕ ಸಾಹಿತ್ಯಿಕ ರಂಗದಲ್ಲಿ ತಮಗಾದ ಯುಗಯುಗಾಂತರದ ನಿರ್ಲಕ್ಷ್ಯ, ಅನ್ಯಾಯಗಳನ್ನು ಪ್ರತಿಭಟಿಸಿ, ಅಲ್ಲಿ ತಮ್ಮ ಧ್ವನಿಯನ್ನು ಸ್ಥಾಪಿಸಿಕೊಳ್ಳಲು ಬಯಸಿದ್ದೇ ಬಂಡಾಯ ದಲಿತಸಾಹಿತ್ಯ ಚಳುವಳಿ. ವ್ಯವಸ್ಥೆಯು ಸ್ಥಾಪಿಸಿದ ಲಿಂಗತರತಮತೆ, ಜಾತೀಯತೆ, ಬಂಡವಾಳ ಶಾಹಿಗಳಿಂದಾಗುವ ಶೋಷಣೆ, ಜಮೀನುದಾರಿಯಿಂದಾಗುವ

ಶೋಷಣೆಯನ್ನು ಪ್ರತಿಭಟಿಸುವ ಧ್ವನಿಯಾಗಿ ಇಂದು ಕೆಳವರ್ಗದವರು ಸಾಹಿತ್ಯವನ್ನು ಪ್ರತಿಭಟನೆಯ ವಾಹಕವನ್ನಾಗಿ ಮಾಡಿಕೊಳ್ಳುತ್ತಿದ್ದಾರೆ.

ನಮ್ಮ ಶ್ರೇಣೀಕೃತ ಜಾತಿವ್ಯವಸ್ಥೆ ಮುಖ್ಯ ಅಪಾಯಕಾರಿಯಾದುದು. ಬಹಳ ಕಾಲದಿಂದಲೂ ನಡೆದುಬಂದ ಜಾತಿವ್ಯವಸ್ಥೆ ಎಂಥ ಪ್ರತಿಭಟನೆಯನ್ನು ನುಂಗಿನೀರು ಕುಡಿಯಬಲ್ಲುದಾಗಿದೆ. ಎಂಥ ದೌರ್ಜನ್ಯವನ್ನೂ, ಶೋಷಣೆಯನ್ನು ಒಕ್ಕಟ್ಟಾಗಿ ಪ್ರತಿಭಟಿಸದೇ ದೇವರ ಮೇಲೆ ಭಾರಹಾಕಿ ಸಹಿಸುವ ಅಪಾಯಕಾರಿ ತಾಳ್ಮೆಯನ್ನು ಅದು ನಮಗೆ ಕಲಿಸಿದೆ. ಜಮೀನುದಾರಿ-ರೈತರ ಮಧ್ಯೆ ನಡೆಯುವ ಹೋರಾಟದಲ್ಲಿ ಯಾವುದೇ ಒಂದು ವರ್ಗದಲ್ಲಿ ಒಂದು ತಟ್ಟಿನ ಜನ ಬಹಳವಾಗಿದ್ದರೆ, ಅದು ಕೂಡಲೇ ಕೋಮು ಗಲಭೆಯಾಗಿ ಮಾರ್ಪಾಡುವ ಪವಾಡ ಇಲ್ಲಿಯದು. ಅಸ್ಪೃಶ್ಯರು ತಮ್ಮ ಮೇಲೆ ಆಗುತ್ತಿರುವ ಸಾಮಾಜಿಕ, ರಾಜಕೀಯ, ಶೋಷಣೆಯನ್ನು ಪ್ರತಿಭಟಿಸಿದರೆ ಸವರ್ಣೀಯ ಸಾವುಕಾರ ಕೂಲಿಕಾರಗಳನ್ನೇ ಒಟ್ಟಿಗೆ ಬೆಸೆದು ಜಾತಿ ದಂಗೆಯಾಗಿ ಪ್ರಕಟವಾಗಿಬಿಡುತ್ತದೆ. ಈ ಜಾತಿ ಮತ್ತು ಧರ್ಮದ ಅಂಧತೆ ಎಷ್ಟು ಅಪಾಯಕಾರಿ ಸ್ಥಿತಿಗೆ ತಲುಪಿಸಬಹುದೆಂದರೆ ಅಕ್ಕಪಕ್ಕದಲ್ಲೇ ಬದುಕುತ್ತಿರುವ ನಿತ್ಯ ವ್ಯವಹಾರದಲ್ಲಿ ಸಹಾಯಕ, ಸಹಕಾರಿಗಳಾಗಿರುವ ತಮ್ಮ ಮನುಷ್ಯ ಸೋದರ ಸೋದರಿಯರ ಮಧ್ಯದಲ್ಲೇ ಒಡಕನ್ನು ತಂದು ಹಿಂಸೆಯಲ್ಲಿ ತೊಡಗುವ ವೈರಿಗಳನ್ನಾಗಿ ಮಾರ್ಪಡಿಸಿ ಬಿಡುತ್ತಿರುವ ಉದಾಹರಣೆಗಳು ನಮ್ಮ ಮುಂದಿದೆ. ತನ್ನ ಪ್ರಚಂಡ ಶಕ್ತಿಯಿಂದ ಕ್ರಾಂತಿಯನ್ನೆಸಗಿದ ರಷ್ಯಾ ತನ್ನ ಆರ್ಥಿಕ ಹಿನ್ನಡೆಯಿಂದಾಗಿ ಬಂಡವಾಳಶಾಹಿಗಳ ಸ್ನೇಹ ಹಸ್ತವನ್ನು ಯಾಚಿಸುತ್ತದೆ. ತಾಂತ್ರಿಕ ತಪ್ಪು ಪ್ರಯೋಗದಿಂದ ಮತ್ತು ಪರಿಸ್ಥಿತಿಯ ವಿಷಮ ಒತ್ತಡದಿಂದ ಸಂಬಂಧಿಸಿದ ಸಮಾಜವಾದಿ ರಾಷ್ಟ್ರಗಳ ಆರ್ಥಿಕ ಹಿನ್ನಡೆ ಬಂಡವಾಳ ಶಾಹಿಗಳಿಂದಲೂ ಯಥಾಸ್ಥಿತಿವಾದಿಗಳಿಂದಲೂ ವರ್ಗಹೋರಾಟ ತಾತ್ವಿಕತೆಯ ಸೋಲು ಎಂದು ವ್ಯಾಖ್ಯಾನಿಸಲ್ಪಡುತ್ತದೆ. ಇದರಿಂದಲೂ ಹೋರಾಟದ ವ್ಯೂಹದ ಬಗ್ಗೆ ನಿಂತು ಚಿಂತಿಸುವಂತಾಗಿದೆ. ಭಾರತದ ಶೋಷಣೆಯ ಪೂರ್ಣಸ್ಥಿತಿ ಬದಲಾಗಬೇಕಾದರೆ ಒಂದು ಸಾಮಾಜಿಕ ಕ್ರಾಂತಿಯಾಗಬೇಕು ಎನ್ನುತ್ತಾನೆ ನೋಬಲ್ ಪ್ರಶಸ್ತಿ ಸನ್ಮಾನಿತ ಖ್ಯಾತ ಅರ್ಥಶಾಸ್ತ್ರಜ್ಞ ಗುನ್ನಾರ ಮಿರ್ಡಾಲ್. ಈ ಕ್ರಾಂತಿಯನ್ನು ಯಾರು ಪೂರ್ತಿಮಾಡಬೇಕು? "ಬುದ್ಧಿಜೀವಿವರ್ಗ ಬಡ ಜನರ ಸಂಘಟನೆ ಮಾಡಿ ಕ್ರಾಂತಿಯ ಮುಂದಾಳ್ತನ ವಹಿಸಬೇಕು"[೧೫] ಎನ್ನುತ್ತಾನೆ ಆತ. ಆದರೆ "ರಷಿಯಾದಲ್ಲಿ ಕ್ರಾಂತಿಯಾಗಲು ಕಾರಣ ಅಲ್ಲಿನ ಶ್ರಮಿಕವರ್ಗ, ಬುದ್ಧಿಜೀವಿಗಳು ಶೋಷಕರ ವಿರುದ್ಧ ಸಂಘಟಿತ ಹೋರಾಟ ನಡೆಸಿರುವುದು. ಆದರೆ ಭಾರತದಲ್ಲಿ ಬುದ್ಧಿಜೀವಿಗಳು ವ್ಯವಸ್ಥೆಯ ಪರವಾಗಿ ನಿಂತು ಶ್ರಮಿಕ ವರ್ಗದಿಂದ ದೂರವಾಗಿ ಕ್ರಾಂತಿಯ ಅವಕಾಶವನ್ನೇ ಇಲ್ಲವಾಗಿಸಿದ್ದಾರೆ" ಎಂದು ಮಿರ್ಡಾಲ್ ಮುಂದೆ ವಿವರಿಸುತ್ತಾರೆ. ಧಾರ್ಮಿಕ, ಸಾಂಸ್ಕೃತಿಕ ದೃಷ್ಟಿಯಿಂದ ನೋಡಿದಾಗ ಹಿಂದೂ ಧರ್ಮದಲ್ಲಿ ನಾಲ್ಕು ವರ್ಣಗಳಿವೆ. ಅದರಲ್ಲಿ ನಾಲ್ಕನೆಯದು ಶೂದ್ರವರ್ಣ. ಈ ವರ್ಣಭೇದ ಶ್ರೇಣೀಕರಣಕ್ಕೆ ಒಳಗಾಗಿರುವುದರಿಂದ ಶೂದ್ರರು ಕೊನೆಯವರು. ಸಂಪತ್ತು ಹೀನರು. ಮೇಲಿನ ಮೂರು ವರ್ಗಗಳ

ಸೇವೆ ಮಾಡಿ ಬದುಕ ಬೇಕಾಗುವವರು. ಅವರ ಬಗ್ಗೆ ನ್ಯಾಯ ಎಂದರೆ ಬ್ರಾಹ್ಮಣ ನಿರ್ಣಯವೇ ಆಗಿತ್ತು. 'ಶೂದ್ರ' ವರ್ಣಕ್ಕೆ ಒಂದು ಅನುಬಂಧ ಎಂಬಂತೆ 'ಪಂಚಮವರ್ಣ'ವೊಂದು ಇದೆ. ಅದೇ ಅಸ್ಪೃಶ್ಯವರ್ಗ. ಇದರ ಸ್ಥಿತಿ ಹೇಗೆಂದು ಡಾ.ಅಂಬೇಡ್ಕರ್ ಮಾತಿನಲ್ಲಿ ಹೇಳುವುದಾದರೆ "ಬ್ರಾಹ್ಮಣ್ಯ ಎಂದರೆ ಬೇರೆ ಬೇರೆ ವರ್ಗಗಳಲ್ಲಿ ಶ್ರೇಣೀಕೃತ ತರತಮತೆ. ಶೂದ್ರರ ಮತ್ತು ಅಸ್ಪೃಶ್ಯರ ಸಂಪೂರ್ಣ ಆಯುಧ ರಾಹಿತ್ಯತೆ (ಅಸಹಾಯಕತೆ) ಶೂದ್ರ ಮತ್ತು ಅಸ್ಪೃಶ್ಯರನ್ನು ಶಿಕ್ಷಣದಿಂದ ಸಂಪೂರ್ಣ ಹೊರಗಿಡುವಿಕೆ, ಶೂದ್ರ ಮತ್ತು ಅಸ್ಪೃಶ್ಯರಿಗೆ ಅಧಿಕಾರ ರಾಹಿತ್ಯತೆ ಮತ್ತು ಶೂದ್ರ ದಲಿತರಿಗೆ ಸಂಪತ್ತು ಗಳಿಕೆಯ ಬಹಿಷ್ಕಾರ"[೧೬] ಮುಂದೆ ಶೂದ್ರರೂ ಜಮೀನುದಾರರು: ಆದರೆ ದಲಿತರು? ಆಧುನಿಕ ಕಾಲದ ಪ್ರತಿಭಟನೆಯನ್ನು ಬಿಟ್ಟರೆ, ಅಂದರೆ ಪ್ರಾಚೀನ ಮತ್ತು ಮಧ್ಯಕಾಲೀನದ ಪ್ರತಿಭಟನೆಯೆಲ್ಲ ಧಾರ್ಮಿಕ ಸ್ವರೂಪದ್ದೇ ಆಗಿದೆ. ಆದ್ದರಿಂದ ಅದು ವೈದಿಕ-ಅವೈದಿಕ ಸಂಘರ್ಷವಾಗಿ ಕಂಡಿದೆ. ಇದರಿಂದ ಚರಿತ್ರೆಯ ಮುನ್ನಡೆ ಕೂಡ ನಡೆದಿದೆ. ಆದರೆ ಅದು ಸಮಾಜದಲ್ಲಿ ಮೂಲಭೂತವಾದ ಬದಲಾವಣೆಯನ್ನು ತರಲಿಲ್ಲ. ಅದರ ಬದಲಾಗಿ ಅನಾರೋಗ್ಯಕಾರಕ ಬೆಳವಣಿಗೆಗೆ ಕಾರಣವಾಗಿದೆ. ಯಾವಯಾವ ಪ್ರತಿಭಟನೆ ಧಾರ್ಮಿಕವಾಗಿ ಕಂಡುಬಂದಿದೆಯೋ ಅವೆಲ್ಲ ಒಂದೊಂದು ಜಾತಿಯಾಗಿ ಮಾರ್ಪಟ್ಟಿದೆ. ಬಸವಣ್ಣನವರ ಚಳುವಳಿ ಆ ಕಾಲದ ಚಾರಿತ್ರಿಕ ನಡೆಯಲ್ಲಿ ಕ್ರಾಂತಿಯಲ್ಲದೆ ಬೇರಲ್ಲ. ಆದರೆ ಇಂದು ಅವರು ಸ್ಥಾಪಿಸಿದ ಧರ್ಮ ವೈದಿಕಕ್ಕಿಂತ ಹೆಚ್ಚು ಜಡ್ಡುಗಟ್ಟಿ ಜಾತಿ, ಅಸ್ಪೃಶ್ಯತೆ, ಸ್ತ್ರೀಶೋಷಣೆ ಮುಂತಾದ ಎಲ್ಲದಕ್ಕೂ ಆಶ್ರಯವಾಗಿದೆ. ಇತರದ್ದೂ ಹಾಗೇ. ಅದರಂತೆ 'ಬ್ರಾಹ್ಮಣ' ಎಂದೊಡನೆ ದಲಿತ ವಿರೋಧಿ, ಶೂದ್ರವಿರೋಧಿ ಎಂದೇ ಕಾಣಲಾಗುತ್ತದೆ. ಇದರ ಹಿಂದೆ ನಮಗೆ ಬಸವಣ್ಣ ಬ್ರಾಹ್ಮಣರಾಗಿದ್ದರು. ಈಶ್ವರಚಂದ್ರವಿದ್ಯಾಸಾಗರರಂಥ ಸಮಾಜ ಸುಧಾರಣಾವಾದಿಗಳು ಬ್ರಾಹ್ಮಣ ರಾಗಿದ್ದರು. ಗಾಂಧಿ ವೈಶ್ಯರಾಗಿದ್ದರು ಎಂಬುದು ಮರೆತುಹೋಗುತ್ತದೆ.

ಅದೇನೇ ಇದ್ದರೂ ಅತಿಕೆಳಜಾತಿಯಲ್ಲೂ ಮಹಿಳೆ ಅಲ್ಲಿಯ ಪುರುಷರಿಂದ ಶೋಷಿತಳೇ ಆಗಿದ್ದಾಳೆ. ಆದ್ದರಿಂದ ಮಹಿಳೆ ಯಾವ ಜಾತಿಯವಳಾಗಿದ್ದಿರಲಿ, ಯಾವಧರ್ಮದವಳಾಗಿರಲಿ ಅವಳು ಅಸ್ಪೃಶ್ಯಳೇ. ಬ್ರಾಹ್ಮಣ ಮಹಿಳೆ ಕೂಡ ಹೀಗೆ. ವೈದೇಹಿಯವರ 'ಅಸ್ಪೃಶ್ಯಯ' ಕಾದಂಬರಿಯ ಆತ್ಮವೂ ಕೂಡ ಇದೆ ಆಗಿದೆ. ಶೋಷಿತ ಎಂಬ ಪದಕ್ಕೆ 'ದಲಿತ' ಎಂಬ ಪರಿಕಲ್ಪನೆ ಕೂಡಾ ಉಂಟು. ಇದು ಮಾರ್ಕ್ಸ್‌ವಾದಿ ಪರಿಕಲ್ಪನೆ. ಈ ಪರಿಕಲ್ಪನೆ ದೊಡ್ಡ ಕೈಗಾರಿಕಾ ಸಂದರ್ಭದಲ್ಲಿ ಬೆಳೆದು ಬಂದುದಾಗಿದೆ. ಹಾಗೆಯೇ ಅದು ವರ್ಗ(ಕ್ಲಾಸ್) ಸಂಬಂಧದಲ್ಲಿ ಬೆಳೆದಿದೆ. ಹಾಗಂತ ಭಾರತದ ಸಂದರ್ಭದಲ್ಲಿ ಅದು ನಿಷ್ಪ್ರಯೋಜಕ ಎಂದಲ್ಲ. ಕೆಲವರು ಹಾಗೆ ಪ್ರತಿಪಾದಿಸುತ್ತಾರೆ. ಆಳುವ ವರ್ಗಕ್ಕೆ ಜಾತಿಯಲ್ಲಿ ಒಡೆದುಹೋದ ದುರ್ಬಲ ಸಮಾಜವನ್ನು ಆಳುವುದು ಸುಲಭ. ವರ್ಗಸಂಘರ್ಷ ಬಲವಾಗುತ್ತಾ ಬಂದಂತೆ ಆಳುವವರ ನೆಲೆ ನಡುಗತೊಡಗುತ್ತದೆ. ಮಧ್ಯಮ ಮತ್ತು ಮೇಲುವರ್ಗದವರು ಈ ಪರಿವರ್ತನೆಯನ್ನು ಯಾವಾಗಲೂ ವಿರೋಧಿಸುತ್ತಾರೆ. ತಮ್ಮ ಸ್ಥಾನ ಕಳೆದುಹೋಗಬಹುದೆಂದು ಅವರು ಭಯಪಡುತ್ತಾರೆ.

ವರ್ಗ ಎಂಬ ಪರಿಕಲ್ಪನೆ ಆರ್ಥಿಕ ಹಿನ್ನಲೆಯುಳ್ಳದ್ದು. ಪಶ್ಚಿಮದಲ್ಲಿ ಅಂಥ ಸಮಾಜವಿದೆ. ಅಲ್ಲಿ ನಮ್ಮ ಪಾರಂಪರಿಕ ಕಲ್ಪನೆಯ ಪ್ರಕಾರದ ಬ್ರಾಹ್ಮಣರಿಂದ ಹಿಡಿದು ಅಸ್ಪೃಶ್ಯರ ತನಕ ಸಮಾನ ಆರ್ಥಿಕ ಸ್ಥಿತಿಯವರು ಒಂದು ವರ್ಗವಾಗಿ ಬೆಸೆಯಲು ಅವಕಾಶವಿದೆ ಮತ್ತು ಆಗ ಬೇಕಾದುದೇ ಹಾಗೆ. ಆದರೆ ನಮ್ಮಲ್ಲಿ ಉದ್ಯೋಗದಿಂದಲೇ ಜಾತಿ, ಉದ್ಯೋಗ ಬದಲಾವಣೆಯುಲ್ಲ. ಯಂತ್ರಕೈಗಾರಿಕೆಯಲ್ಲಿ ಪರಿವರ್ತನೆ ಸಾಧ್ಯವೆಂದು ಗ್ರಹಿಸಲಾಗಿತ್ತು. ಆದರೆ ಅದು ಪೂರ್ತಿ ಸಾಧ್ಯವಾಗಲಿಲ್ಲ. ಅಂದರೆ ನಮ್ಮ ಕೂಲಿಕಾರರೂ ಕಾರ್ಖಾನೆಯ ಕಾರ್ಮಿಕರೂ ಕೂಡ ಜಾತಿಯನ್ನು ಮನೆಯೊಳಗೆ ತಪ್ಪದೇ ಪರಿಪಾಲಿಸುತ್ತಾರೆ. ಅವರಿಗೂ ಅಸ್ಪೃಶ್ಯ ಇನ್ನೂ ಸ್ಪೃಶ್ಯ ಆಗಲಿಲ್ಲ. ಶೂದ್ರರಲ್ಲಿ ಪ್ರತಿ ಮೇಲಿನ ಜಾತಿ ಕೆಳಜಾತಿಯನ್ನು ಕೀಳಾಗಿ ಕಾಣುತ್ತದೆ. ಕೆಲವೊಂದು ಶೂದ್ರಜಾತಿ ಈಗ ಜನಿವಾರ ಹಾಕಿಕೊಂಡು 'ಬ್ರಾಹ್ಮಣ' ವಾಗುವ ಭರಭರಾಟೆಯಲ್ಲಿದ್ದಾರೆ. ಅವರು ಅವರ ಜಾತಿಗೆ ಪುರೋಹಿತರಾಗುತ್ತಾರೆ. ಮತ್ತೊಂದು ಜಾತಿಯಾಗುತ್ತದೆ. ಜಾತಿ ಭದ್ರವಾಗುತ್ತಲೇ ಹೋಗುತ್ತದೆ. ಹಿಂದೆ ನಡೆದ ಅವೈದಿಕ ಚಳುವಳಿಯ ಹಿಂದೆ ಇದ್ದದ್ದೂ ಆರ್ಥಿಕ ಕಾರಣವೇ. ಅದು ಸಾಂಸ್ಕೃತಿಕ–ಧಾರ್ಮಿಕವಾಗಿ ಸ್ಫೋಟಗೊಂಡಿದೆ. ಅದು ಮುಂದೆ ಅವೈಜ್ಞಾನಿಕ ದಾರಿ ಹಿಡಿಯಿತು. ಬೌದ್ಧ, ಜೈನ ಮೊದಲಾದವು ತಮ್ಮದೇ ಆದ ತತ್ವಜ್ಞಾನ ನೀಡಿವೆ. ದೇವಿಪ್ರಸಾದ ಚಟ್ಟೋಪಾಧ್ಯಾಯರಂಥ (ಅವರೂ ಬ್ರಾಹ್ಮಣರೇ)ವರು ಲೋಕಾಯುತದಂಥ ಸ್ವತಂತ್ರ ತತ್ವಜ್ಞಾನವನ್ನೇ ಸಂಪಾದಿಸಿಕೊಟ್ಟಿದ್ದಾರೆ. ಇನ್ನೂ ಜನಪದದಲ್ಲೂ ಶಾಕ್ತಸಿದ್ಧ, ನಾಥ, ಸೂಫಿ ಮೊದಲಾದವುಗಳಿಂದ ಸಂಗ್ರಹವಾಗಬೇಕಾದದ್ದಿದೆ. ಮುಖ್ಯವಾಗಿ ಇಲ್ಲಿ ನಾನು ಹೇಳಬಯಸುವುದೇನೆಂದರೆ ಜಾತಿರಹಿತವಾದ, ಧರ್ಮರಹಿತವಾದ ಒಂದು ತತ್ವಜ್ಞಾನ ಮುಂದಿನ ಸಂಘರ್ಷಕ್ಕೆ ಬೆಳಕು ತೋರಬೇಕಾಗಿದೆ. ಅದರ ಹಿಂದಿನ ಪ್ರೇರಕ ಶಕ್ತಿಯಾಗಬೇಕೆಂಬುದು ವರ್ಗಸಂಘರ್ಷ (class struggle)ವೇ ಆಗಬೇಕಾಗಿದೆ. 'ಶೋಷಿತರೇ ಒಗ್ಗಟ್ಟಾಗಿ. ನೀವು ಕಳಕೊಳ್ಳುವುದೇನಿಲ್ಲ. ಹೆಚ್ಚೆಂದರೆ ನಮ್ಮ ಕೈಗೆ ಹಾಕಿದ ಕೋಳವನ್ನು ಮಾತ್ರ' ಎಂಬ ಮಾರ್ಕ್ಸ್‌ವಾದಿ ಮಾತಿನಲ್ಲಿ ಎಲ್ಲಾ ಕಾರ್ಮಿಕರ–ಶೋಷಿತರ ಒಗ್ಗಟ್ಟಿನ ಮಹತ್ವ ಅಡಗಿದೆ. ಕೇವಲ ಕಾರ್ಮಿಕರು ಎಂದಲ್ಲ. ಎಲ್ಲ ಶೋಷಿತರ ಪರವಾದ ಮಾತು ಇದು. ಆದ್ದರಿಂದ ಬ್ರಾಹ್ಮಣರಿಂದ ಹಿಡಿದು ಅಸ್ಪೃಶ್ಯರವರೆಗಿನ ಹಾಗೂ ಮುಸ್ಲಿಂ ಕ್ರಿಶ್ಚಿಯನ್‌ದೊಳಗಿನ ಎಲ್ಲಾ ಶೋಷಿತರೂ ಒಂದಾಗಿ ಬೆಸೆದು ಒಂದು ವರ್ಗವಾಗಿ ಮಾರ್ಪಟ್ಟು ವರ್ಗಸಂಘರ್ಷಕ್ಕೆ ಅಣಿಯಾಗಬೇಕು. ಹೀಗಾದಾಗಲೂ ಬ್ರಾಹ್ಮಣರಿಂದ ಇದು ಪ್ರತಿಶತ ಒಳಗೊಂಡರೆ ದಲಿತರಿಂದ ತೊಂಬತ್ತೈದು ಒಳಗೊಳ್ಳಬೇಕಾದ ವಾಸ್ತವತೆ ನಮ್ಮದು. ವರ್ಗಸಂಘರ್ಷ ಎಂದೊಡನೆ ಕತ್ತಿ ಝಳಪಿಸುವುದೆಂದೇ ಅಲ್ಲ. ಹಾಗೆ ನಮ್ಮ ಪಟ್ಟಭದ್ರ ಹಿತಾಸಕ್ತರು ಪ್ರಚಾರ ಮಾಡುತ್ತಾರೆ. ಸಂಘರ್ಷದ ಸ್ವರೂಪವನ್ನು ಆಯಾ ಕಾಲದ ಭೌತಿಕ ಸಂದರ್ಭ ನಿಶ್ಚಯಿಸುತ್ತದೆ. ಈಗ ಕಾರ್ಮಿಕರೆಂದರೆ ಕೇವಲ ಅಕುಶಲ ಕೆಲಸಗಾರರು ಮಾತ್ರ ಒಂದಾಗಬೇಕೆಂದಲ್ಲ. ಈ ಯಂತ್ರ ನಾಗರೀಕತೆಯಲ್ಲಿ ವೈಟ್‌ಕಾಲರಿನ ಉದ್ಯೋಗಿಗಳೂ ಕಾರ್ಮಿಕರೇ ಆಗಿರುತ್ತಾರೆ. ಸರ್ಕಾರಿ ಮತ್ತಿತರ ಕಚೇರಿಯ ನೌಕರರೆಲ್ಲರೂ ಈ ಕಾಲದ ಶೂದ್ರರು ಎಂದು ಹಿರಿಯ ವಿಚಾರವಾದಿ ಡಾ. ಗೌರೀಶ್ ಕಾಯ್ಕಿಣಿ ಹೇಳುತ್ತಾರೆ.

೨.೫ ಅಂಬೇಡ್ಕರ್ ದೃಷ್ಟಿಯಲ್ಲಿ ವರ್ಗಪರಿಕಲ್ಪನೆ:

ಡಾ. ಅಂಬೇಡ್ಕರ್ "ಒಂದು ವರ್ಗವು ವಿದ್ಯೆಯನ್ನು ಕಲಿಯಲಿ, ಒಂದು ವರ್ಗವು ಶಸ್ತ್ರ ಹಿಡಿಯಲಿ, ಒಂದು ವರ್ಗವು ವ್ಯಾಪಾರ ಮಾಡಲಿ, ಉಳಿದೊಂದು ವರ್ಗ ಬರಿಯ ಸೇವೆಯನ್ನು ಮಾಡಿಕೊಂಡಿರಲಿ ಎಂಬ ಧರ್ಮ ನನಗೆ ಒಪ್ಪಿಗೆಯಾಗದು. ಒಂದು ವರ್ಗಕ್ಕೆ (ಶೂದ್ರ) ವಿದ್ಯೆಯನ್ನೂ, ಸಂಪತ್ತಿನ ಗಳಿಕೆಯ ಹಕ್ಕನ್ನೂ ಶಸ್ತ್ರವನ್ನೂ ನಿರ್ಬಂಧಿಸುವ ಧರ್ಮ ಧರ್ಮವಲ್ಲ. ಅದೊಂದು ಹುಚ್ಚು"[೧೭] ಎಂದು ಆರ್ಭಟಿಸಿದರು. ಅವರು ಹಿಂದೂ ಧರ್ಮದ ವಿರೋಧಿಯಾಗಿರಲಿಲ್ಲ. "ನಾನು ಹಿಂದೂ ಧರ್ಮದಲ್ಲಿ ಹುಟ್ಟಿದ್ದೇನೆ. ಆದರೆ ಹಿಂದೂ ಆಗಿ ಸಾಯಲಾರೆ"[೧೮] ಎಂದು ಹೇಳಿದ್ದರೂ ಕೂಡ ಹಿಂದೂ ಧರ್ಮ ಬದಲಾವಣೆ ಆದೀತು ಎಂದು ಸುಮಾರು ೩೦ ವರ್ಷಗಳ ಕಾಲ ಕಾದರು. ನಂತರ ನಿರಾಶೆಯಿಂದ ಅವರು ಬೌದ್ಧಧರ್ಮಕ್ಕೆ ಮತಾಂತರವಾದರು. ಅವರು ಹಿಂದೂ ಧರ್ಮವನ್ನು ಸಮಾನತೆಯ ತಳಹದಿಯ ಮೇಲೆ ಪುನರ್ ಸಂಘಟಿಸಲು ಬಯಸಿದ್ದರು. ಜಾತಿವರ್ಣಗಳ ಕುರಿತು ಇರುವ ತಾರತಮ್ಯ ಭಾವವನ್ನು ಮುರಿಯಲು ಬಯಸಿದ್ದರು. ಡಾ. ಅಂಬೇಡ್ಕರ್‌ರವರ ಸ್ವಾತಂತ್ರ್ಯ ಹೋರಾಟ, ಸಮಾಜ ಸುಧಾರಣೆ ಮುಖ್ಯವಾಗಿ ಜಾತಿನಾಶ. ಒಟ್ಟೊಟ್ಟಿಗೆ ಹೋಗಬೇಕೆನ್ನುತ್ತಿದ್ದರು. ಆದರೆ ಕಾಂಗ್ರೆಸ್ ಅಥವಾ ಗಾಂಧೀಜಿಗೆ ಸ್ವರಾಜ್ಯವೇ ಮುಖ್ಯವಾಗಿತ್ತು. ಈ ಮೇಲುಜಾತಿ ಮತ್ತು ಬಂಡವಾಳಶಾಹಿಯೊಡನೆ ಸ್ವಾತಂತ್ರ್ಯ ಕೇಂದ್ರಿಕರಣಗೊಂಡರೆ ನಿಶ್ಚಯವಾಗಿ ಅಸ್ಪೃಶ್ಯರ ಧ್ವನಿಗೆ ಸ್ಥಾನ ಸಿಕ್ಕುವುದಿಲ್ಲ ಎಂದು ಅಂಬೇಡ್ಕರ್ ನಂಬಿದ್ದರು. ಇಂಗ್ಲೀಷರು ಹೋದರೂ ಕಾರ್ಮಿಕರು ತಮ್ಮ ಸಮಸ್ಯೆಗಾಗಿ ಹೋರಾಡಲೇಬೇಕಾಗುತ್ತದೆ. ರಾಜಕಾರಣದಲ್ಲಿ ವರ್ಗಪ್ರಜ್ಞೆ ಇರಲೇಬೇಕು. ಇಲ್ಲದಿದ್ದರೆ ಅದು ಕೇವಲ ತೆವಲು ಆದೀತು ಎಂಬುದು ಅವರ ತಾತ್ವಿಕನಿಲುವು. ಡಾ.ಅಂಬೇಡ್ಕರರ ಹೋರಾಟ, ಸಂಘಟನೆ ಮತ್ತು ತಾತ್ವಿಕ ವಿಚಾರವನ್ನು ತಿಳಿದ ಯಾರೂ ಅವರ 'ಮಾರ್ಕ್ಸ್‌ವಾದ'ಕ್ಕೆ ಎಷ್ಟು ಹತ್ತಿರ ಇದ್ದಾರೆ ಎಂದೆಣಿಸದೇ ಇರರು. ಅಂಬೇಡ್ಕರ್ ನಮ್ಮೆದುರು ಇಟ್ಟುಹೋದ ಉದಾಹರಣೆಯೆಂದರೆ ಅಭ್ಯಾಸ ಮತ್ತು ಹೋರಾಟ. ಹಿಂದೂಧರ್ಮ ಶಾಸ್ತ್ರಗಳನ್ನು ಅಮೂಲಾಗ್ರವಾಗಿ ಅಭ್ಯಾಸ ಮಾಡಿದರು. ಜಾತಿ, ಅಸ್ಪೃಶ್ಯತೆಯ ಹುಟ್ಟುಗಳ ಬಗ್ಗೆ ವಿಮರ್ಶಿಸಿ ಬರೆದರು. ಚಾತುರ್ವರ್ಣ್ಯವನ್ನು ಹಿಂಜಿಹಿಂಜಿ ಅದರ ಪರಿಣಾಮದ ಕುರಿತು ಹೇಳಿದರು. ಪುರಾಣಗಳ ಹಿಂದೆ ಇರುವ ವಂಚನೆಗಳನ್ನು ಗುರುತಿಸಿದರು. ಯಾವ ಧರ್ಮ ಕೆಲವೊಂದು ವರ್ಗಕ್ಕೆ ಸಂಪತ್ತು ಸಲಕರಣೆಗಳನ್ನು ಪಡೆಯುವುದನ್ನು ನಿರ್ಬಂಧಿಸುವುದೋ ಅದು ಧರ್ಮವಲ್ಲ: ಬದುಕಿನ ಒಂದು ಅಣಕ. ಯಾವಧರ್ಮ ಕಲಿಯದವರು ಕಲಿಯದೇ ಇರುವಂತೆ ಬಡವರು ಬಡವರಾಗೇ ಇರುವಂತೆ ನೋಡಿಕೊಳ್ಳುತ್ತದೆಯೋ ಅದು ಧರ್ಮವಲ್ಲ. ಅಂಬೇಡ್ಕರ್ ಒಬ್ಬ ಮಹಾಧಾರ್ಮಿಕ ವ್ಯಕ್ತಿಯಾಗಿದ್ದರೂ ವೈಜ್ಞಾನಿಕ ವಸ್ತುನಿಷ್ಠತೆ ಅವರದಾಗಿತ್ತು. ಕಾರ್ಲ್‌ಮಾರ್ಕ್ಸ್ ಸಿದ್ಧಾಂತದ ವರ್ಗಹೋರಾಟದ ಬಗ್ಗೆ ಅವರಿಗೆ ನಿಖರವಾದ ಪರಿಜ್ಞಾನವಿತ್ತು. ಅವರು ಸ್ಪಷ್ಟವಾಗಿ ಸಮಾಜವಾದಿಗಳಾಗಿದ್ದರು. ಆದರೆ ವರ್ಗಹೋರಾಟ ಸಾಧನವನ್ನು ಸರಿಸದೆ ಸಂವಿಧಾನಾತ್ಮಕ ಹೋರಾಟ ಸಮಾನತೆಯನ್ನು ಸಾಧಿಸುವ ಮಾರ್ಗವಾಗಬೇಕೆಂದು ಬಯಸಿದ್ದರು. ಅವರು ಖಾಸಗಿ ಆಸ್ತಿಯ ಹಕ್ಕನ್ನು ನಿರಾಕರಿಸಿದ್ದರು.

ಅಸ್ಪೃಶ್ಯತೆ, ಜಾತೀಯತೆಯ ವಿನಾಶದ ಕುರಿತು ನಡೆದ ಸಾಂಸ್ಕೃತಿಕ ಚಳುವಳಿಗೆ ಇತಿಹಾಸದಲ್ಲಿ ದೀರ್ಘ ದಾಖಲೆಯಿದೆ. ಅದು ಇನ್ನೂ ಮುಂದೆಯೂ ಹೋಗಬೇಕಾದ ಅವಶ್ಯಕತೆಯಿದೆ. ಅದೇ ಹೊತ್ತಿಗೆ ಅದು ವರ್ಗಹೋರಾಟವನ್ನು ಅಳವಡಿಸಿಕೊಳ್ಳುವ ಅವಶ್ಯಕತೆಯ ಕುರಿತು ಚಿಂತಿಸಬೇಕಾಗಿದೆ. ತಮ್ಮ ಜಾತಿಹೋರಾಟದಲ್ಲಿ ವರ್ಗಹೋರಾಟವು ಒಳಗೊಂಡಿದೆ ಎಂದು ಅಂಬೇಡ್ಕರರು ಹೇಳುತ್ತಿದ್ದರು. ಇಂದು ಕಾಲ ಮುಂದುವರಿದಿದೆ. ಜಾತಿ ಹೋರಾಟವನ್ನು ವರ್ಗಹೋರಾಟದ ಕಡೆ ತಿರುಗಿಸಬೇಕಾಗಿದೆ. "ಪ್ರಾಥಮಿಕ ಹಂತದಲ್ಲಿ ಜಾತಿಯೆಂದರೆ ಆರ್ಥಿಕವಾದ ವರ್ಗವೇ ಆಗಿದೆ"[೧೯] ಎಂದು ಪ್ರಸಿದ್ಧ ಚರಿತ್ರಕಾರರಾದ ಮಾನ್ಯ ಡಿ.ಡಿ. ಕೋಸಂಬಿ ಅಭಿಪ್ರಾಯಪಡುತ್ತಾರೆ. ನಮ್ಮಲ್ಲಿಯ ಸಮಾಜ ರಚನೆ ಇತರೆಡೆಗಿಂತ ಬೇರೆ ರೀತಿಯದು. ಏಕೆಂದರೆ ಜಗತ್ತಿನ ಉಳಿದ ಕಡೆ ನಮ್ಮಲ್ಲಿಯ ಥರ ಜಾತಿ ಅನುಸರಿಸಿ ಉದ್ಯೋಗ ಎಂದಿಲ್ಲ. ಆದ್ದರಿಂದ ಅಲ್ಲಿ ಒಂದು ಉದ್ಯೋಗ ಮಾಡುವವರು ಒಂದು ಜಾತಿಯಾಗುವುದಿಲ್ಲ. ಒಂದು ವರ್ಗದವರು ತಂದೆ ಧರ್ಮಗುರು, ತಾಯಿ ಚಮ್ಮಾರನ ಮಗಳು ಆಗಿರುವುದು ಸಹಜವಾಗುತ್ತದೆ. ಆದರೆ ನಮ್ಮಲ್ಲಿ ಕಡಿಮೆ ಹಣ ತರುವ ಉದ್ಯೋಗ ಕಡಿಮೆ ಜಾತಿಯವರದಾಗುತ್ತದೆ. ಸಮಾಜದ ಅತ್ಯಂತ ಕೆಳಸ್ತರದಲ್ಲಿ ಇರುವವರು ದಲಿತರು. ಅವರ ಉದ್ಯೋಗ ಅತ್ಯಂತ ಕಡಿಮೆ ನೈರ್ಮಲ್ಯ ಸಂಬಂಧಿಯಾದುದು. ಆದ್ದರಿಂದ ಅವರು ಮುಟ್ಟಿಸಿಕೊಳ್ಳಲೂ ಅಯೋಗ್ಯರು. ಅಸ್ಪೃಶ್ಯತೆ ಬೇರೆ ದೇಶದ ಗುಲಾಮ ಪದ್ಧತಿಗಿಂತ ಇದು ಹೀನಾಯವಾದುದು. ಹಾಗೆಯೇ ಈ ಶ್ರೇಣೀಕರಣದ ಮೇಲು ತುದಿಯಲ್ಲಿ ಇರುವವರು ಬ್ರಾಹ್ಮಣರು. ಸಾಂಸ್ಕೃತಿಕ ಯಾಜಮಾನ್ಯ ಬ್ರಾಹ್ಮಣ್ಯದ್ದೇ. "ಯಾವಧರ್ಮ ಮನುಷ್ಯರ ಗೌರವವನ್ನು ಕಳೆಯುತ್ತದೆಯೋ ಅದು ಧರ್ಮವಲ್ಲ; ಒಂದು ರೋಗ. ಯಾವ ಧರ್ಮ ಕೊಳಕು ಪ್ರಾಣಿಗಳನ್ನು ಮುಟ್ಟಲು ಮನ್ನಿಸಿ ಮನುಷ್ಯರನ್ನು ಮುಟ್ಟದಂತೆ ಪ್ರತಿಬಿಂಬಿಸುತ್ತದೋ ಅದು ಧರ್ಮವಲ್ಲ. ಅದು ಒಂದು ಹುಚ್ಚು" ಯಾವಧರ್ಮ ಕೆಳಜಾತಿಗಳನ್ನು ಸಂಪತ್ತು ಗಳಿಸಲು ನಿರ್ಬಂಧಿಸುತ್ತವೆಯೋ ಅದು ಧರ್ಮವಲ್ಲ. ಅದೊಂದು ಅಣಕ. 'ಯಾವಧರ್ಮ ಕಲಿಯದವರು ಕಲಿಯದೆ, ಬಡವರು ಬಡವರಾಗೇ ಇರಬೇಕೆಂದು ವಿಧಿಸುತ್ತದೆಯೋ ಅದು ಧರ್ಮವಲ್ಲ. ಅದೊಂದು ಶಿಕ್ಷೆ'[೨೦] ಎಂದು ಹೇಳುತ್ತಾರೆ. ಡಾ. ಅಂಬೇಡ್ಕರರು "ಶ್ರೀಮಂತರ ಸಿರಿತನ ಬಡವರ ದರಿದ್ರತನದಲ್ಲಿದೆ" ಎಂದು ಹೇಳಿದರು. ವರ್ಣಬೇಧ, ಜಾತಿಬೇಧ, ವರ್ಗಬೇಧ ಸಮಾಜ ನಿರ್ಮಾಣವಾಗಬೇಕಾದರೆ, ಸಂಕೋಲೆಗಳನ್ನು ಕಿತ್ತೆಸೆದು ಒಂದಾಗುವಂತೆ ಕರೆಕೊಟ್ಟರು.

೨.೬ ಕಾರ್ಲ್ ಮಾರ್ಕ್ಸ್ ದೃಷ್ಟಿಯಲ್ಲಿ ವರ್ಗಪರಿಕಲ್ಪನೆ ಮತ್ತು ವರ್ಗಸಂಘರ್ಷ:

ವಸ್ತುನಿಷ್ಠವಾದ ಜ್ಞಾನಕ್ಕೆ ಆದ್ಯತೆ ನೀಡಿದ ಮಾರ್ಕ್ಸ್ ಅವರ ಬಗೆಗಿನ ವಸ್ತುನಿಷ್ಠವಾದ ಪರಿಚಯ ದುಡಿಯುವ ಜನತೆಗೆ ಅತ್ಯವಶ್ಯವೆಂದೆನಿಸುತ್ತದೆ. ಹೋರಾಟದ ಕತ್ತಿಯ ಅಲಗು ಮೊನಚಾಗಬೇಕಾದರೆ ಇಂತಹ ವಸ್ತುನಿಷ್ಠ ಪರಿಚಯ ಅನಿವಾರ್ಯ. ಶತಶತಮಾನಗಳ ಕಾಲ ದಾರಿದ್ರ್ಯ, ಅನಕ್ಷರತೆ, ಅಸಮಾನತೆ, ಮತ್ತು ಕೈಂಕರ್ಯಗಳಿಗೆ ತುತ್ತಾಗಿದ್ದು ಬಳಲಿಬೆಂಡಾಗಿರುವ ಮರ್ದಿತ ಜನಾಂಗ ಭಾರತದಲ್ಲಿ ಹೇರಳವಾಗಿದೆ.

ವರ್ಣ–ವರ್ಗಗಳ ವೈವಿಧ್ಯಮಯವಾದ ಬಲತ್ಕಾರಗಳಿಂದ ಬಂಧಿತರಾದ ಭಾರತದ ಜನಕೋಟಿಯ ಬವಣೆಯನ್ನು ನೀಗಿಸಲು ಅನೇಕ ಸುಧಾರಣವಾದಿಗಳು ಭಗೀರಥ ಪ್ರಯತ್ನಗಳನ್ನು ನಡೆಸುತ್ತಲೇ ಬಂದಿದ್ದಾರೆ. ಆದರೆ ಮರ್ದಿತ ಜನಸಮೂಹಕ್ಕೆ ಅದರಿಂದ ಗಂಗೆಯ ಶೀತಲತ್ವ–ಪಾವನತ್ವಗಳ ಅನುಭವ ಉಂಟಾಗಿಲ್ಲ. ಈ ಜನಸಮೂಹದ ಪ್ರಜ್ಞಾಪೂರ್ವಕ ಭಾಗವಹಿಸುವಿಕೆಯ ಅಭಾವದಲ್ಲಿ ಕ್ರಾಂತಿಕಾರಿ ದಾಪುಗಾಲು ನಮಗೆ ಕೇವಲ ಭ್ರಮೆಯಾಗಿಯೇ ಉಳಿಯುತ್ತದೆ. ಅಂತೆಯೇ ಆ ಜನಸಮೂಹದ ವಿಮುಕ್ತಿಯೂ ಭ್ರಾಮಕಲೋಕದ ಹಣ್ಣಲ್ಲದೆ ಬೇರೇನೂ ಆಗಿರಲಾರದು. ಪ್ರಬಲವಾದ ಅಸ್ತ್ರವನ್ನು ಹೊಂದಿರುವವನು ವಿಜಯಿಯಾಗಬೇಕಾದರೆ ಮೊಟ್ಟ ಮೊದಲು ಅವನಿಗೆ ಆ ಅಸ್ತ್ರದ ಬಳಕೆಯ ವಿಧಾನ ತಿಳಿದಿರಬೇಕು. ಸಂದರ್ಭಕ್ಕೆ ಸರಿಹೊಂದುವಂತೆ ಆ ಅಸ್ತ್ರವನ್ನು ಪ್ರಯೋಗಿಸುವ ಕುಶಲತೆ ಇರಬೇಕು. ನಮ್ಮ ಶೋಷಣೆಯ ಮೂಲವನ್ನರಸಿ ಅದನ್ನು ನಿರ್ಮೂಲನಗೊಳಿಸುವ ಸಾಮರ್ಥ್ಯವನ್ನು ಪಡೆಯದಿರುವುದು ನಾವಿನ್ನು ಪಿಡುಗಿನಿಂದ ಪಾರಾಗದಿರಲು ಮೂಲಕಾರಣ. ದಿನನಿತ್ಯದ ಸಂಕಷ್ಟಗಳನ್ನೆದುರಿಸುವಲ್ಲಿ ಅಲ್ಲೊಂದು ಇಲ್ಲೊಂದು ತೇಪೆದಾರಿ ತಂತ್ರವು ಕೆಲವೊಮ್ಮೆ ಸ್ವಲ್ಪಮಟ್ಟಿಗೆ ಫಲಕಾರಿಯಾಗಿ ಕಂಡಿರಬಹುದು. ದಂಗುಬಡಿಸುವ ಪ್ರಚಂಡ ಆಟಟೋಪಗಳ ನಡುವೆ ಇಂತಹ ಝುರಿ ತುಸು ಸಂತಸವನ್ನು ನೀಡಬಹುದು. ಸಹನೆಯನ್ನೂ, ಪರಲೋಕದ ಸೌಂದರ್ಯವನ್ನೂ ವೈಭವೀಕರಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಆಳುವ ಶೋಷಕವರ್ಗಕ್ಕೆ ಇದರಿಂದ ಅತಿ ಹೆಚ್ಚಿನ ಲಾಭವಿದೆ, ಸುಖವಿದೆ, ಭದ್ರತೆಯಿದೆ. ಇದನ್ನು ಆಗುಗೊಡದೆ ಭಾರತದ ಜನತೆ ತನ್ನ ಭವಿಷ್ಯವನ್ನು ತಾನೇ ರೂಪಿಸಿಕೊಳ್ಳಲು ಸಮರ್ಥವಿದೆ. ಆದರೆ ವಿಶ್ಲೇಷಣೆ ಮತ್ತು ಪ್ರಜ್ಞಾಪೂರ್ವಕ ಹೋರಾಟಗಳಿಂದ ಮಾತ್ರ ಆ ಸಾಮರ್ಥ್ಯದ ಅವಿಷ್ಕಾರ ಸಾಧ್ಯ.

ಮಾರ್ಕ್ಸ್‌ರವರನ್ನು ತಿಳಯಬೇಕಾದರೆ ಅವರ ಕಾಲದ ಅವರ ದೇಶದ ಹಾಗೂ ಅವರ ಕಾರ್ಯಕ್ಷೇತ್ರದ ಪರಿಸ್ಥಿತಿಯನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ಹತ್ತೊಂಭತ್ತನೆಯ ಶತಮಾನ ಆರಂಭವಾಗುವಷ್ಟರಲ್ಲಿ ಯೂರೋಪಿನಲ್ಲಿ ಬಂಡವಾಳಶಾಹಿಯು ಪಾಳೆಯಗಾರಿಕೆಯನ್ನು ಅಧಿಪತ್ಯದಿಂದ ಹೊರತಳ್ಳುವ ಹೋರಾಟದಲ್ಲಿ ನಿರತವಾಗಿತ್ತು. ಅದು ಒಂದು ಕಡೆ ಪಾಳೆಯಗಾರಿಕೆಯ ವಿರುದ್ಧವಾಗಿ ಕಾರ್ಮಿಕವರ್ಗವನ್ನು ತನ್ನೊಂದಿಗೆ ರಾಜಕೀಯರಂಗಕ್ಕೆ ಎಳೆಯುತ್ತಿತ್ತು. ಇನ್ನೊಂದು ಕಡೆ ತನ್ನ ಅಧಿಪತ್ಯಕ್ಕೆ ಕಾರ್ಮಿಕವರ್ಗದಿಂದ ಮುಂದೆ ಉದ್ಭವಿಸಬಹುದಾದ ಅಪಾಯವನ್ನಾಗಲೇ ಗುರುತಿಸಿಕೊಂಡಿತ್ತು. ಆದುದರಿಂದ ಬಂಡವಾಳಶಾಹಿಯು ಕಾರ್ಮಿಕ ವರ್ಗದ ಬೆಂಗಾವಲನ್ನು ಬಯಸುತ್ತಿದ್ದಾಗಲೇ, ಕಾರ್ಮಿಕವರ್ಗವು ತನ್ನ ಸ್ವಂತ ಹಿತಾಸಕ್ತಿಗಳಿಗಾಗಿ ಸ್ವತಂತ್ರ ಹೋರಾಟಗಳಿಗೆ ತಯಾರಾಗುವುದನ್ನು ತನ್ನದೇ ಆದ ಸ್ವಂತ ಸಂಘಟನೆಯನ್ನು ರಚಿಸಿಕೊಳ್ಳುವುದನ್ನು ಸರ್ವಥಾ ಸಹಿಸುತ್ತಿರಲಿಲ್ಲ. ಈ ಸಂದರ್ಭದಲ್ಲಿ ಕಾರ್ಮಿಕವರ್ಗವು ಜನತಂತ್ರಕ್ಕಾಗಿಯೂ, ಸಮಾಜಸತ್ತೆಗಾಗಿಯೂ ತನ್ನದೇ ಆದ ಮಾರ್ಗದಲ್ಲಿ ಪಾಳೆಯಗಾರಿಕೆಯ ಸ್ವೇಚ್ಚಾಚಾರವನ್ನೂ ಬಂಡವಾಳಶಾಹಿಯ ಇಬ್ಬಂದಿತನದ ವರ್ತನೆಯನ್ನೂ ಎದುರಿಸಿ

ಹೇಗೆ ಹೋರಾಡಬೇಕೆನ್ನುವುದು ಬಹಳ ಮುಖ್ಯವಾದ ಪ್ರಶ್ನೆಯಾಗಿತ್ತು. ಈ ಪ್ರಶ್ನೆಗೆ ಉತ್ತರವಾಗಿ ಶ್ರಮಜೀವಿವರ್ಗವು ತನ್ನದೇ ಆದ ಕ್ರಾಂತಿಕಾರಿ ರಾಜಕೀಯ ಪಕ್ಷದ ಮೂಲಕ ಎಲ್ಲ ಕ್ರಾಂತಿಕಾರಿ ಮತ್ತು ಪುರೋಗಾಮಿ ಶಕ್ತಿಗಳನ್ನು ಕ್ರೋಢೀಕರಿಸಿ-ಜನತಂತ್ರವಾದಿಗಳನ್ನೂ, ಸಮಾಜವಾದಿಗಳನ್ನೂ ನಿರ್ದಿಷ್ಟ ಕಾರ್ಯಕ್ರಮದ ಆಧಾರದಲ್ಲಿ ಒಂದುಗೂಡಿಸಿ-ಹೋರಾಡಬೇಕಾದ ಮಾರ್ಗವನ್ನು ನಿರೂಪಿಸುವುದು. ಆ ಕಾಲಘಟ್ಟದ ಐತಿಹಾಸಿಕ ಅವಶ್ಯಕತೆಯಾಗಿತ್ತು. ಅದನ್ನು ಮಾರ್ಕ್ಸ್ ಮತ್ತು ಎಂಗೆಲ್ಸ್ ನೆರವೇರಿಸಿದರು.

ಮಾರ್ಕ್ಸ್ ಮತ್ತು ಎಂಗೆಲ್ಸ್ ಜರ್ಮನಿಯ ಅಂದಿನ ಪ್ರಷ್ಯದ ರ್ಹೈನ್ ಪ್ರಾಂತದವರು. ಹತ್ತೊಂಭತ್ತನೆಯ ಶತಮಾನದ ಆರಂಭದಲ್ಲಿ ಜರ್ಮನಿಯ ೩೬ ಸಣ್ಣ ಮತ್ತು ದೊಡ್ಡ ಅರಸೊತ್ತಿಗೆಗಳೊಳಗೆ ಹಾಗೂ ಎರಡು ಚಿಕ್ಕ ನಗರರಾಜ್ಯಗಳೊಳಗೆ ಹರಿದು ಹಂಚಿಹೋಗಿತ್ತು. ಅಲ್ಲಿ ದೊಡ್ಡ ದೊಡ್ಡ ಭೂಪ್ರಭುಗಳು ಯುಂಕರ್ ಪಾಳೆಯಗಾರರು ನಿರಂಕುಶವಾದ ಅರಸೊತ್ತಿಗೆಗಳ ಮೂಲಕ ತಮ್ಮ ಅಧಿಕಾರವನ್ನು ನಡೆಸುತ್ತಿದ್ದರು. ಸ್ವಾಭಾವಿಕವಾಗಿ ಭೂಸ್ವಾಮಿಗಳ ಬಂಧುಬಳಗಗಳ ಒಳಗಿಂದ ಅಣಬೆಗಳಂತೆ ಹುಟ್ಟಿಕೊಳ್ಳುತ್ತಿದ್ದ ಗಣ್ಯರು ಮತ್ತು ಪ್ರಮುಖರು ಅಧಿಕಾರಿಗಳಾಗಿ ಜನರನ್ನು ಹಿಂಡಿ ಹಿಪ್ಪೆ ಮಾಡುತ್ತಿದ್ದರು. ಇವರ ಕಟ್ಟಾಜ್ಞೆಗೆ ಅನುಸಾರವಾಗಿ ಜನರನ್ನು ಪೀಡಿಸುವ ಮತ್ತು ದೋಚುವ ಭ್ರಷ್ಟ ನೌಕರಶಾಹೀ ಯಂತ್ರವೊಂದು ದಯೆದಾಕ್ಷಿಣ್ಯ,ಮಾನಮರ್ಯಾದೆಗಳಿಲ್ಲದೆ, ಅಂಕೆಯಿಲ್ಲದ ಆಡಳಿತ ನಡೆಸುತ್ತಿತ್ತು. ವ್ಯಕ್ತಿಗತ ಮತ್ತು ವಂಶೀಯ ಮಹತ್ವಾಕಾಂಕ್ಷೆ, ಸ್ವಾರ್ಥ, ಹಾಗೂ ಯುದ್ಧೋನ್ಮಾದ ಈ ಆಳುವ ವರ್ಗಗಳ ರಕ್ತಗತ ಸ್ವಭಾವಗಳಾಗಿದ್ದವು. ಈ ಹತ್ತು ಹಲವು ಅರಸೊತ್ತಿಗೆಗಳ ಪೈಕಿ ಪ್ರಷ್ಯವು ಬಹುದೊಡ್ಡ ಹಾಗೂ ಅತಿ ಪ್ರಬಲ ರಾಜ್ಯವಾಗಿತ್ತು.

ಆ ಕಾಲದಲ್ಲಾಗಲೇ ಜರ್ಮನಿಯಲ್ಲಿ ಸಾಮಂತಶಾಹಿಯ ಗರ್ಭದೊಳಗೆ ಬಂಡವಾಳಶಾಹಿಯ ಭ್ರೂಣ ಬೆಳೆಯತೊಡಗಿತು. ಅಲ್ಲಲ್ಲಿ ಕೈಗಾರಿಕೆಗಳ ಬೆಳವಣಿಗೆಯು ಮೆಲ್ಲಮೆಲ್ಲನೆ ಆರಂಭವಾಗಿತ್ತು. ಔದ್ಯಮಿಕ ಕೇಂದ್ರಗಳು ತಲೆಯೆತ್ತುತ್ತಿದ್ದವು. ಹೊಸಹೊಸ ಕಾರ್ಖಾನೆಗಳನ್ನು ಕಟ್ಟಬೇಕು, ಕಚ್ಚಾವಸ್ತುಗಳನ್ನು ಹೊಂದಿಸಬೇಕು, ಕೂಲಿಕೆಲಸಗಾರರನ್ನು ಸೇರಿಸಬೇಕು, ಮಾರುಕಟ್ಟೆಗಳನ್ನು ಸೃಷ್ಟಿಸಬೇಕು. ಸಾರಿಗೆ ಸಂಪರ್ಕಗಳನ್ನು ವೃದ್ಧಿಪಡಿಸಬೇಕು, ಕ್ರಯವಿಕ್ರಯಗಳು ನಿರಂತರವಾಗಿಯೂ ಲಾಭದಾಯಕವಾಗಿಯೂ ನಡೆಯಬೇಕು-ಎಂದೆಲ್ಲ ಬಂಡವಾಳಗಾರರು ಹಾತೊರೆಯುತ್ತಿದ್ದರು, ಆದರೆ ಜರ್ಮನಿಯನ್ನು ಹರಿದು ಹಂಚಿಕೊಂಡು ಅಧಿಕಾರ ನಡೆಸುತ್ತಿದ್ದ ಅರಸೊತ್ತಿಗೆಗಳು ಇವಕ್ಕೆಲ್ಲ ಹಲವು ತರದ ಆತಂಕಗಳನ್ನು ಒಡ್ಡುತ್ತಿದ್ದವು. ಸರಹದ್ದು-ಸರಹದ್ದುಗಳಲ್ಲಿ ಸುಂಕದ ಕಟ್ಟೆಗಳು, ಬಿಗಿಯಾದ ಕಾವಲು, ಬೇರೆ ತರದ ಸುಂಕಗಳು ಮತ್ತು ತೆರಿಗೆಗಳು, ವಿಭಿನ್ನವಾದ ನಾಣ್ಯಗಳ ಚಲಾವಣೆ, ಕೆಲವೊಮ್ಮೆ ಜನರ ಸಂಚಾರಕ್ಕೂ ಅಡ್ಡಿ-ಇವೆಲ್ಲ ಜರ್ಮನಿಯ ಪ್ರಗತಿಯನ್ನು ಕುಂಠಿತಗೊಳಿಸಿದ್ದವು.

ಜರ್ಮನಿಯಲ್ಲಿ ರೈಲುಮಾರ್ಗಗಳ ರಚನೆ ಆರಂಭವಾದದ್ದೇ ೧೮೩೫ರಷ್ಟು ತಡವಾಗಿ, ಕೆಲವು ಮೂಢ "ಮಹಾಪ್ರಭುಗಳು" ಅದನ್ನು ತಮ್ಮ ರಾಜ್ಯದೊಳಗೆ ಬರಗೊಡುತ್ತಿರಲಿಲ್ಲ. "ನನ್ನ ರಾಜ್ಯದೊಳಗೆ ಉಗಿಬಂಡಿ ಓಡಾಡಬಾರದು, ಯಾಕೆಂದರೆ ಒಬ್ಬ ಮೋಚಿಯೋ ದರ್ಜಿಯೋ ನನಗಿಂತ ವೇಗವಾಗಿ ಪ್ರಯಾಣಿಸಬಾರದು"[೨೧] ಎಂದೊಬ್ಬ ಪುಟ್ಟ ರಾಜ ಕಟ್ಟಪ್ಪಣೆ ಮಾಡಿದ್ದ ಇಂಥ ಮುಟ್ಠಾಳರ ಕಪಿಮುಷ್ಟಿಯೊಳಗಿನ ಅಂಕೆಯಿಲ್ಲದ ಅಧಿಕಾರವು ಜರ್ಮನಿಯಲ್ಲಿ ಪಟ್ಟಭದ್ರವಾಗಿತ್ತು. ಇಂಥ ಸಂಕುಚಿತ ಬುದ್ಧಿಯ ಅರಸರ ಕ್ರೂರವಾದ ರಕ್ಷಾಕವಚದೊಳಗೆ ಹುದುಗಿಕೊಂಡಿದ್ದ ಯುಂಕರ್ ಭೂಸ್ವಾಮಿಗಳು ಜಿಗಣೆಗಳಂತೆ ರೈತರ, ಸ್ವತಂತ್ರ ವೃತ್ತಿಪರರ, ಹಾಗೂ ಕಾರ್ಮಿಕರ ರಕ್ತವನ್ನು ಹೀರುತ್ತಿದ್ದರು. ಮೂಢನಂಬಿಕೆಗಳ ಚಿಪ್ಪಿನೊಳಗೆ ಅವಿತುಕೊಂಡಿದ್ದ ಧಾರ್ಮಿಕ ಕಟ್ಟುಪಾಡುಗಳ ಪುರೋಹಿತಶಾಹೀ ಸಂರಕ್ಷಕರು ಎಲ್ಲಾ ವೈಜ್ಞಾನಿಕ ಮತ್ತು ಪ್ರಗತಿಪರ ವಿಚಾರಗಳನ್ನೂ ವಿರೋಧಿಸುತ್ತಿದ್ದರು. ಅವರು ಸ್ವತಂತ್ರ ಚಿಂತನೆಯನ್ನು ಧರ್ಮದ್ರೋಹವೆಂದು ಹಳಿಯುತ್ತಿದ್ದರು. ಒಂದೇ ಮಾತಿನಲ್ಲಿ ಹೇಳುವುದಾದರೆ, ಜರ್ಮನಿಯ ಇತಿಹಾಸದಲ್ಲಿ ಆ ಕಾಲವು ಅತ್ಯಂತ ಕತ್ತಲೆಯ ಕಾಲವಾಗಿತ್ತೆನ್ನಬಹುದು. ಜರ್ಮನಿಯ ರಾಜಕೀಯದಲ್ಲಿ ಸ್ವಾಭಾವಿಕವಾಗಿಯೂ ಪ್ರಷ್ಯದ ಪಾತ್ರವು ಪ್ರಧಾನವಾಗಿತ್ತು. ರ್‍ಹೈನ್ ಪ್ರಾಂತವು ಇತರ ಭಾಗಗಳಿಗಿಂತ ಮುಂದುವರಿದ ಪ್ರದೇಶವಾಗಿತ್ತು. ಅದಕ್ಕೆ ಐತಿಹಾಸಿಕ ಕಾರಣಗಳಿದ್ದುವು. ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ಅರಸೊತ್ತಿಗೆಯನ್ನು ಕಿತ್ತೊಗೆದು ಜನತಂತ್ರವನ್ನು ಸ್ಥಾಪಿಸಿದ್ದ ಫ್ರಾನ್ಸಿನ ಬಂಡವಾಳಶಾಹೀ ಕ್ರಾಂತಿಯಲ್ಲಿ ರ್‍ಹೈನ್‌ಪ್ರದೇಶದ ಜರ್ಮನರೂ ಭಾಗಿಗಳಾಗಿದ್ದರು.

"ಅರಮನೆಗಳ ಮೇಲೆ ಯುದ್ಧ ಗುಡಿಸಲುಗಳಿಗೆ ಶಾಂತಿ" ಎಂಬ ಘೋಷಣೆಗಳೊಂದಿಗೆ ೧೭೮೯ ರಲ್ಲಿ ಭುಗಿಲೆದ್ದ ಫ್ರಾನ್ಸಿನ ಜಕೋಬಿನ್ ಕ್ರಾಂತಿಯು ೧೭೯೩ರಲ್ಲಿ ತುತ್ತತುದಿಗೆ ತಲುಪಿ ಜನತಂತ್ರವು ಪ್ರಾಬಲ್ಯತೆ ಪಡೆದಿತ್ತು. ಕಾರ್ಲ್‌ಮಾರ್ಕ್ಸ್ ಹುಟ್ಟುವ ಮುಂಚೆಯೇ ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧವಾದ ಹೋರಾಟ ಪ್ರಾರಂಭವಾಗಿತ್ತು. ಸಾಮಂತಶಾಹಿಯು ಉಳಿಯಲಾರದ ಸ್ಥಿತಿಗೆ ತಲುಪಿದ್ದರೂ ಅಳಿಯಲೊಲ್ಲದು. ಬಂಡವಾಳಶಾಹಿತ್ವವೂ ಜಯಿಸಬಹುದಾದ ಶಕ್ತಿಯನ್ನು ಪಡೆದಿದ್ದರೂ ಹೋರಾಡುವ ಧೈರ್ಯವನ್ನು ತಳೆಯಲೊಲ್ಲದು: ಇಂತಹ ಪರಿಸ್ಥಿತಿಯ ಮಧ್ಯೆ ಸಿಕ್ಕಿಹಾಕಿಕೊಂಡು ತೊಳಲಾಡುವ ಸ್ಥಿತಿಯಲ್ಲಿ ಬಂಡವಾಳಶಾಹಿ ವರ್ಗವಿತ್ತು.

ಇಂತಹ ಸಂದರ್ಭದಲ್ಲಿಯೇ ಇಂಗ್ಲೆಂಡಿನಲ್ಲೂ ಫ್ರಾನ್ಸ್‌ನಲ್ಲೂ ಕಾರ್ಮಿಕ ವರ್ಗವೂ ಈಗಾಗಲೇ ರಾಜಕೀಯ ರಂಗಕ್ಕೆ ಇಳಿದದ್ದನ್ನು ದೂರದಿಂದ ನೋಡಿಯೇ ದಿಗಿಲುಗೊಂಡಿದ್ದ ಜರ್ಮನಿಯ ಬಂಡವಾಳಗಾರ ವರ್ಗವು ಕಮ್ಯೂನಿಸಮೆಂದರೆ ಹೆದರುತಿತ್ತು.

"ಹೆಗಲ್‌ರ ನ್ಯಾಯದರ್ಶನದ ವಿಮರ್ಶೆಗೊಂದು ಮುನ್ನುಡಿ" ಎಂಬ ಲೇಖನದಲ್ಲಿ ಕಾರ್ಲ್‌ಮಾರ್ಕ್ಸ್ ಅನೇಕ ಸೈದ್ಧಾಂತಿಕ ವಿಷಯಗಳನ್ನು ಕುರಿತು ತಮ್ಮ ದೃಷ್ಟಿಕೋನವನ್ನು ವಿವರಿಸಿದ್ದಾರೆ.

"ಬಂಡವಾಳಶಾಹೀ ಸಮಾಜವನ್ನೊಂದು ಮಾನವ ಸಮುದಾಯವೆಂದು ಪರಿಗಣಿಸಿದರೆ ಸಾಲದು. ಅದರೊಳಗಿನ ವರ್ಗಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಗುರುತಿಸಬೇಕು. ಅವುಗಳೊಳಗಿನ ಪರಸ್ಪರ ಸಂಬಂಧಗಳನ್ನು ಪರೀಕ್ಷಿಸಿ ಅರಿತುಕೊಳ್ಳಬೇಕು. ಸಮಾಜದ ವಿಶಿಷ್ಟ ವ್ಯವಸ್ಥೆಯೊಳಗಿನ ಜೀವನದ ಭೌತಿಕ ಪರಿಸ್ಥಿತಿ–ಅವಶ್ಯಕ ವಸ್ತುಗಳ ಉತ್ಪಾದನೆಯ ಮತ್ತು ವಿತರಣೆಯ ವಿಧಾನ–ಹೇಗಿದೆಯೆಂದೂ ವಿವಿಧ ವರ್ಗಗಳೊಳಗಿನ ಸಂಘರ್ಷದ ಸ್ವರೂಪವೇನೆಂದೂ ತಿಳಿದುಕೊಳ್ಳಬೇಕು. ವರ್ಗಸಂಘರ್ಷವೇ ಸಾಮಾಜಿಕ ಪುರೋಗಮನಕ್ಕೆ ಚಾಲನೆ ನೀಡುವ ಶಕ್ತಿಯಾಗಿದೆ. ಅದೇ ಸಮಯದಲ್ಲಿ ವರ್ಗಸಂಘರ್ಷದ ದಿಕ್ಸೂಚಿಯಾಗಿ ತತ್ವಜ್ಞಾನವು ಪ್ರಾಮುಖ್ಯವಾದ ಪಾತ್ರವನ್ನು ನಿರ್ವಹಿಸುತ್ತದೆ. ಮನುಷ್ಯನೇ (ಪ್ರಕೃತಿಯ) ಅತ್ಯುನ್ನತ ಸೃಷ್ಟಿಯಾಗಿದ್ದಾನೆ. ಆದುದರಿಂದ ಮನುಷ್ಯನನ್ನು ಕೀಳಾಗಿಸುವಂತಹ, ದಾಸ್ಯಕ್ಕೆ ತಳ್ಳುವಂತಹ, ಅಲಕ್ಷ್ಯಕ್ಕೆ ಗುರಿಮಾಡುವಂತಹ, ಹಾಗೂ ಅಪಮಾನಕ್ಕೆ ಒಳಪಡಿಸುವಂತಹ ಅಸ್ತಿತ್ವದಲ್ಲಿರುವ ಎಲ್ಲ ಸಂಬಂಧಗಳನ್ನೂ ಕಿತ್ತೊಗೆಯುವುದು ಅನಿವಾರ್ಯವಾದ ಅವಶ್ಯಕತೆಯಾಗಿದೆ"[೨೨] ಎಂದು ಅಭಿಪ್ರಾಯಪಟ್ಟರು.

"ಆಧುನಿಕ ಬಂಡವಾಳಶಾಹೀ ಸಮಾಜದಲ್ಲಿ ಮಾನವನ ವಿಮೋಚನೆಯೂ ಮಹತ್ಕಾರ್ಯವನ್ನು ಕಾರ್ಮಿಕವರ್ಗವು ನೆರವೇರಿಸಬೇಕಾಗುತ್ತದೆ. ಅದಕ್ಕಾಗಿ ಕಾರ್ಮಿಕವರ್ಗವು ಉತ್ಪಾದನೆಯ ಸಾಧನಗಳನ್ನು ಖಾಸಗಿ ಒಡೆತನದಿಂದ ಬಿಡುಗಡೆಗೊಳಿಸಬೇಕಾಗುತ್ತದೆ. ಹಾಗೆಂದರೆ ಹಿಂದೆ ಆಗಿದ್ದ ತಪ್ಪುಗಳನ್ನು, ಅನ್ಯಾಯಗಳನ್ನೂ, ತೊಡೆದುಹಾಕಿ, ದುಡಿಯುವ ಜನ ಹಿಂದೆ ನಷ್ಟ ಹೊಂದಿದುದನ್ನು ಪುನಃ ವಶಪಡಿಸಿಕೊಳ್ಳಬೇಕಾಗುತ್ತದೆ. ಹಾಗೆ ಕಾರ್ಮಿಕವರ್ಗವು ಚಾರಿತ್ರಿಕ ನ್ಯಾಯವನ್ನು ಕಾರ್ಯಗತಗೊಳಿಸುವ ಶಕ್ತಿಯಾಗಿ ವರ್ತಿಸಬೇಕಾಗುತ್ತದೆ. ಬಂಡವಾಳಶಾಹೀ ಸಮಾಜದಲ್ಲಿ ಕಾರ್ಮಿಕ ವರ್ಗಕ್ಕಿರುವ ವಿಶಿಷ್ಟವಾದ ಸ್ಥಾನದ ಕಾರಣದಿಂದಾಗಿ ಆ ವರ್ಗವು ತನ್ನ ಶೋಷಣೆಯನ್ನು, ಮರ್ದನವನ್ನು ಕೊನೆಗಾಣಿಸುವಾಗ ಶೋಷಣೆ ಮತ್ತು ಮರ್ದನಗಳ ವ್ಯವಸ್ಥೆಯನ್ನೇ ಸಂಪೂರ್ಣವಾಗಿ ಅಳಿಸಬೇಕಾಗುತ್ತದೆ. ಇಡೀ ಮಾನವಕುಲದ ಸ್ವಾತಂತ್ರ್ಯ, ಸಮಾನತೆ, ಸಹೋದರತೆಗಳನ್ನು ಯಥಾರ್ಥವಾಗಿ ಸಾಧಿಸುವಂಥ ಹೊಸ ಸಮಾಜವ್ಯವಸ್ಥೆ ಸಮಾಜವಾದೀ ಸಮಾಜವನ್ನು ನಿರ್ಮಿಸುವ ಕಾರ್ಯಭಾರವನ್ನು ಕೈಗೊಳ್ಳಬೇಕಾಗುತ್ತದೆ. ಈ ವಿಚಾರಗಳನ್ನೆಲ್ಲ ಮೊತ್ತ ಮೊದಲನೆಯದಾಗಿ ಸಮರ್ಪಕವಾಗಿ ಲೇಖನದಲ್ಲಿ ಪ್ರತಿಪಾದನೆ ಮಾಡಿದ್ದು ಕಾರ್ಲ್‌ಮಾರ್ಕ್ಸ್.

ಈ ಲೇಖನದಲ್ಲಿ ಕಾರ್ಲ್‌ಮಾರ್ಕ್ಸ್ ಕಾರ್ಮಿಕ ವರ್ಗದ ಐತಿಹಾಸಿಕವಾದ ಕ್ರಾಂತಿಕಾರಿ ಪಾತ್ರವನ್ನು ಗುರುತಿಸಿ ಸ್ಪಷ್ಟಪಡಿಸಿದ್ದಾರೆ. ಕಾರ್ಲ್‌ಮಾರ್ಕ್ಸ್‌ರ ವಿಚಾರಧಾರೆಗೆ ಸಂಪೂರ್ಣವಾದ ಬೆಂಬಲವನ್ನು ವ್ಯಕ್ತಪಡಿಸುವ ರೀತಿಯಲ್ಲಿ ಯಾರ್‌ಬುಹೆರ್‌ನಲ್ಲಿ ಫ್ರೆಡರಿಕ್ ಎಂಗೆಲ್ಸ್‌ರ ಎರಡು ಲೇಖನಗಳಿದ್ದವು. ಒಂದು "ರಾಜಕೀಯ ಅರ್ಥಶಾಸ್ತ್ರದ ಪರಾಮರ್ಶೆಯ ರೂಪರೇಖೆಗಳು" ಇನ್ನೊಂದು ಥಾಮಸ್ ಕಾರ್ಲಾಯಿಸ್‌ರ ಹಿಂದೆ ಮತ್ತು ಮುಂದೆ ಎಂಬ ಕೃತಿಯನ್ನು ವಿಮರ್ಶಿಸುವ "ಇಂಗ್ಲೆಂಡಿನ ಸ್ಥಿತಿಗತಿಗಳು"

ಈ ಎರಡು ಲೇಖನಗಳಲ್ಲಿ ಎಂಗೆಲ್ಸ್ ಕೂಡ ಕಾರ್ಲ್‌ಮಾರ್ಕ್ಸ್ ತಲುಪಿದ್ದ ತೀರ್ಮಾನಗಳಿಗೇ ತಲುಪಿದ್ದರು. ಆ ಲೇಖನದಲ್ಲಿ ಎಂಗೆಲ್ಸ್‌ರು ಬಂಡವಾಳಶಾಹೀ ರಾಜಕೀಯ ಅರ್ಥಶಾಸ್ತ್ರದ ಹುಳುಕುಗಳನ್ನೆಲ್ಲ ಬಯಲಿಗೆಳೆಯುವ ಪರಾಮರ್ಶೆಗೆ ಅಡಿಗಲ್ಲು ಹಾಕಿ ಎಲ್ಲಾ ಆಗುಹೋಗುಗಳ ಸಹ ಉತ್ಪಾದನೆಯ ಸಾಧನಗಳ ಖಾಸಗಿ ಒಡೆತನದ ಪರಿಣಾಮಗಳೆಂದು ಅವರು ತೋರಿಸಿಕೊಟ್ಟರು. ಉತ್ಪಾದನೆಯ ಸಾಧನಗಳು ಖಾಸಗಿ ಒಡೆತನಕ್ಕೆ ಒಳಪಟ್ಟಿರುವ ತನಕ, ಶ್ರಮಜೀವಿಗಳ ಶೋಷಣೆ, ಮರ್ದನ ಸಂಘರ್ಷಗಳು ಅನಿವಾರ್ಯವೆಂದು ಸ್ಪಷ್ಟಪಡಿಸಿದ್ದರು. ಅಲ್ಲದೆ ಉತ್ಪಾದನಾ ಸಾಧನಗಳ ಮೇಲೆ ಖಾಸಗಿ ಒಡೆತನವಿಲ್ಲದ ಸಮಾಜ ಮಾತ್ರವೇ ಒಡತನವಿಲ್ಲದ ಸಮಾಜವಾಗಲು ಸಾಧ್ಯವೆಂದು ವಿಶದೀಕರಿಸಿದ್ದರು.

ಕ್ರಾಂತಿಯ ಮೂಲಕ ಬಂಡವಾಳಶಾಹೀ ಖಾಸಗೀ ಆಸ್ತಿಯೊಡೆತನವನ್ನು ನಿರ್ಮೂಲನಗೊಳಿಸಿ ಆ ಮೂಲಕ ವರ್ಗಭೇದವನ್ನು ಕೊನೆಗಾಣಿಸುವುದು ಕಾರ್ಮಿಕವರ್ಗದ ಗುರಿಯೆಂದು ಕಾರ್ಲ್‌ಮಾರ್ಕ್ಸ್ ಆ ಕಾಲದಲ್ಲಿ ಮನವರಿಕೆ ಮಾಡಿಕೊಂಡಿದ್ದರು. ಮನುಷ್ಯನ ವ್ಯಕ್ತಿತ್ವವನ್ನು ಸಮಾಜದ ಸ್ವರೂಪವನ್ನೂ ರೂಪಿಸುವುದರಲ್ಲಿ ಜೀವನದ ಭೌತಿಕ ಅವಶ್ಯಕತೆಗಳನ್ನು ಉತ್ಪಾದನೆ ಮಾಡುವ ವಿಧಾನವು ಸರ್ವಪ್ರಧಾನವಾದ ಪಾತ್ರವನ್ನು ನಿರ್ವಹಿಸುತ್ತದೆ. ಉತ್ಪಾದನಾ ವಿಧಾನದ ಸ್ವರೂಪವು ಮುಖ್ಯವಾಗಿ ಉತ್ಪಾದನೆಗಾರನ ಶ್ರಮದ ಸ್ಥಾನಮಾನಗಳಿಂದ ನಿರ್ಧಾರವಾಗುತ್ತದೆಂದು ಕಾರ್ಲ್‌ಮಾರ್ಕ್ಸ್ ಈಗಾಗಲೇ ಗುರುತಿಸಿದ್ದರು.

ಮನುಷ್ಯನ ಪರಕೀಯತೆಯ ಮನೋಸ್ಥಿತಿಯ-ಮನುಷ್ಯನು ಮಾನವೀಯ ಗುಣಗಳಿಗೆ ಪರಕೀಯನಾಗುವ ಪ್ರವೃತ್ತಿಯು ಸಮಾಜದ ಏರುಪೇರುಗಳಿಗೂ ಸಂಘರ್ಷಗಳಿಗೂ ಕಾರಣವಾಗಿದೆಯೆಂದು ಹೆಗಲ್ ಬೋಧಿಸಿದರು. ಇದು ಯಥಾರ್ಥದ ತಲೆಕೆಳಗಾದ ಚಿತ್ರ. ಮಾರ್ಕ್ಸ್ ಅದನ್ನು ತಿರುಗುಮುರುಗು ಮಾಡಿ ಕಾಲ ಮೇಲೆ ನಿಲ್ಲಿಸಿದರು. ಸಮಾಜದ ಏರುಪೇರುಗಳ ಮತ್ತು ಘರ್ಷಣೆಗಳ ಪರಿಸ್ಥಿತಿಯು ಮಾನವನ ಪರಕೀಯತೆಯ ಮನೋಸ್ಥಿತಿಗೆ ಕಾರಣವಾಗಿದೆಯೆಂದು ಮಾರ್ಕ್ಸ್‌ಈಗಾಗಲೇ ಪ್ರತಿಪಾದಿಸಿದ್ದರು. ಖಾಸಗಿ ಸೊತ್ತಿನ ಉಗಮದ ಬಳಿಕ ದುಡಿಮೆಗಾರನ ಶ್ರಮವು ಅವನ ಪಾಲಿಗೆ ನಷ್ಟವಾಗಿ ಜರುಗುತ್ತದೆ. ಶ್ರಮವು ಶ್ರಮಿಕನಿಂದ ಪರಕೀಯವಾಗುತ್ತದೆ ಎಂದು ಮಾರ್ಕ್ಸ್ ಸ್ಪಷ್ಟೀಕರಿಸಿದರು. ಶ್ರಮಜೀವಿ ವ್ಯಯ ಮಾಡುವ ಶ್ರಮವು ಅವನಲ್ಲದ ಖಾಸಗಿ ಸೊತ್ತನ್ನು ಬೆಳೆಸುತ್ತದೆ, ವಿನಾ ಶ್ರಮಜೀವಿಯನ್ನು ಪೋಷಿಸುವುದಿಲ್ಲ ಎಂದು ಮಾರ್ಕ್ಸ್ ವಿವರಿಸಿದರು. ಸಹನೆಗೆ ಮೀರಿದಂಥ ಶೋಷಣೆಯನ್ನೂ ಅತೀ ಕಡಿಮೆ ವೇತನಕ್ಕೆ ದುಡಿಸುವ ಕ್ರಮವನ್ನು ವಿರೋಧಿಸಿ ಸೈಲೇಷಿಯ (ಜರ್ಮನ್ ಒಕ್ಕೂಟದೊಳಗಿನ ಒಂದು ರಾಜ್ಯ)ದ ನೇಕಾರರು ೧೮೪೪ ಜೂನ್ ತಿಂಗಳಲ್ಲಿ ದಂಗೆಯೆದ್ದರು. ಅದು ಜರ್ಮನಿಯ ಕಾರ್ಮಿಕ ವರ್ಗದ ಮೊತ್ತಮೊದಲನೆಯ ನೇರ ಕಾರ್ಯಾಚರಣೆಯಾಗಿತ್ತು. ಅದು ಜರ್ಮನಿಯ ಉದ್ದಗಲಕ್ಕೂ ಹೋರಾಟದ ಅಲೆಯೆಬ್ಬಿಸಿತು. ಖಾಸಗಿ ಆಸ್ತಿಯ ತಳಹದಿಯನ್ನು ಹೊಂದಿರುವ ಸಮಾಜವು ಕಾರ್ಮಿಕರ ಹಿತಾಸಕ್ತಿಗಳಿಗೆ ವಿರೋಧವಾಗಿದೆಯೆಂಬ ತಿಳುವಳಿಕೆಯು ಜರ್ಮನಿಯ ಕಾರ್ಮಿಕ ವರ್ಗದಲ್ಲಿ ಹುಟ್ಟ

ತೊಡಗಿದೆಯೆಂದೂ, ಸಮಾಜದ ಕ್ರಾಂತಿಕಾರಿ ಪರಿವರ್ತನೆಯನ್ನು ಸಾಧಿಸುವ ಕಾರ್ಮಿಕವರ್ಗದ ಚೈತನ್ಯವನ್ನು ಜರ್ಮನಿಯ ಕಾರ್ಮಿಕರ ಹೋರಾಟಗಳ ಅಲೆ ತೋರಿಸುತ್ತಿದೆಯೆಂದೂ ಮಾರ್ಕ್ಸ್ ಆ ಲೇಖನದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದರು. ಕಾರ್ಮಿಕ ವರ್ಗದ ಹೋರಾಟಗಳ ಬಗೆಗೆ ತಾತ್ಸಾರ ಮನೋಭಾವ ತಳೆಯುವುದರಿಂದ ಸಾಮಂತಶಾಹಿಗಿದಿರಾದ ಕ್ರಾಂತಿಯನ್ನು ದುರ್ಬಲಗೊಳಿಸಿ ದಂತಾಗುತ್ತದೆಯೆಂದು ಮಾರ್ಕ್ಸ್ ಅಭಿಪ್ರಾಯಪಟ್ಟರು. ಚರಿತ್ರೆಯು ಕೆಲವು ಮಂದಿ ಮಹಾತ್ಮರಿಂದಲೋ, ವೀರರಿಂದಲೋ, ಸೃಷ್ಟಿಯಾಗುವುದಿಲ್ಲ. ಅದು ಜನರಿಂದ, ಕಾರ್ಮಿಕವರ್ಗದಿಂದ ನಿರ್ಮಾಣವಾಗುತ್ತದೆ. ಚರಿತ್ರೆಯ ಪ್ರತಿಯೊಂದು ಘಟ್ಟದಲ್ಲೂ ಒಂದು ವಿಶಿಷ್ಟವಾದ ಆರ್ಥಿಕ ವ್ಯವಸ್ಥೆ ಹಾಗೂ ಅದಕ್ಕೆ ಹೊಂದಿಕೆಯಾಗುವ ಒಂದು ರಾಜಕೀಯ ವ್ಯವಸ್ಥೆ ಅಸ್ತಿತ್ವದಲ್ಲಿರುತ್ತವೆ. ಬಂಡವಾಳಶಾಹೀ ಸಮಾಜದಲ್ಲಿ ಬಂಡವಾಳಶಾಹೀ ಪ್ರಭುತ್ವವು ಅಧಿಕಾರವನ್ನು ನಿರ್ವಹಿಸುತ್ತದೆ. ಬಂಡವಾಳಶಾಹಿತ್ವವನ್ನು ಅಳಿಸುವುದು ಕಾರ್ಮಿಕವರ್ಗದ ಐತಿಹಾಸಿಕ ಕಾರ್ಯಭಾರವಾಗಿದೆ. ಹಿಂದಿನ ಕ್ರಾಂತಿಗಳೆಲ್ಲ ಅಲ್ಪಸಂಖ್ಯಾಕ ವರ್ಗಗಳ ಹಿತಾಸಕ್ತಿಗಳ ಸಲುವಾಗಿ ನಡೆದಿದ್ದವು. ಆದುದರಿಂದ ಅವುಗಳಲ್ಲಿ ದುಡಿಯುವ ಬಹುಸಂಖ್ಯಾಕ ಜನಸಮುದಾಯದ ಪಾತ್ರವು ಸೀಮಿತವಾಗಿತ್ತು.

ಆದರೆ ಸಮಾಜವು ಪ್ರಗತಿ ಹೊಂದಿದಂತೆಲ್ಲ ಜನಸಮುದಾಯದ ಪ್ರಭಾವ ಹೆಚ್ಚಾಗುತ್ತ ಹೋಗುತ್ತದೆ. ಸಮಾಜವಾದೀ ಕ್ರಾಂತಿಯೊಂದಿಗೆ ಬಹುಸಂಖ್ಯಾತ ಜನರ ನಿರ್ಣಾಯಕ ಕಾರ್ಯಾಚರಣೆಯ ಕಾಲಘಟ್ಟವು ಆರಂಭವಾಗುತ್ತದೆ.ಜನತೆಯು ಚರಿತ್ರೆಯನ್ನು ಪ್ರಜ್ಞಾಪೂರ್ವಕವಾಗಿ ರೂಪಿಸುವ ಯುಗದ ಉದಯವಾಗುತ್ತದೆ ಎಂದು ಸಮಾಜದ ವಿಕಾಸ ಹಾಗೂ ಕ್ರಾಂತಿಕಾರೀ ಪರಿವರ್ತನೆಯನ್ನು ಕುರಿತು "ಪವಿತ್ರ ಕುಟುಂಬದಲ್ಲಿ" ಮಾರ್ಕ್ಸ್ ಮತ್ತು ಎಂಗೆಲ್ಸ್ ನಿರೂಪಣೆ ಮಾಡಿದ್ದಾರೆ. ಬಂಡವಾಳಶಾಹೀ ಸಮಾಜದಲ್ಲಿ ಖಾಸಗಿ ಆಸ್ತಿ ಮತ್ತು ಕಾರ್ಮಿಕವರ್ಗ ಈ ಎರಡು ಶಕ್ತಿಗಳೊಳಗೆ ಸದಾ ಘರ್ಷಣೆ ನಡೆಯುತ್ತಿರುತ್ತದೆ. ಈ ಸಮಾಜ ವ್ಯವಸ್ಥೆಯೊಳಗಿನ ಸಂಬಂಧಗಳನ್ನುಹಾಗೆಯೇ ಉಳಿಸಿಕೊಳ್ಳಬೇಕೆನ್ನುವುದು ಬಂಡವಾಳಗಾರರ ಹಿತಾಸಕ್ತಿಯಿಂದ ಹುಟ್ಟುವ ಆಕಾಂಕ್ಷೆಯಾಗಿರುತ್ತದೆ. ಅದನ್ನು ಅಳಿಸಿಬಿಡಬೇಕೆನ್ನುವುದು ಕಾರ್ಮಿಕ ವರ್ಗದ ಹಿತಾಸಕ್ತಿಯಿಂದ ಹುಟ್ಟುವ ಆಕಾಂಕ್ಷೆಯಾಗಿರುತ್ತದೆ. ಬಂಡವಾಳಶಾಹೀ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಯ ಅನಿವಾರ್ಯ ಪರಿಣಾಮವಾಗಿ, ಕಾರ್ಮಿಕವರ್ಗವು ಅದನ್ನು ಕೊನೆಗಾಣಿಸಿಯೇ ತೀರುತ್ತದೆ. ಒಬ್ಬ ಕಾರ್ಮಿಕ ಏನೇ ಎಣಿಸಲಿ, ಅಥವಾ ಇಡೀ ಕಾರ್ಮಿಕ ವರ್ಗವೇ ತನ್ನ ಗುರಿಯನ್ನು ಸದ್ಯ ಏನೆಂದೇ ತಿಳಿದಿರಲಿ–ಅದು ನಿರ್ಣಾಯಕವಲ್ಲ. ಕಾರ್ಮಿಕವರ್ಗದ ಯಥಾರ್ಥವಾದ ಪರಿಸ್ಥಿತಿಯೇ ಬಂಡವಾಳಶಾಹೀ ವ್ಯವಸ್ಥೆಯನ್ನು ಕೊನೆಗಾಣಿಸುವ ಕಾರ್ಯಭಾರಕ್ಕೆ ಅದನ್ನು ನಿರ್ಬಂಧಿಸಿಯೇ ತೀರುತ್ತದೆ. ಅದೇ ಮುಖ್ಯ. ಕಾರ್ಮಿಕವರ್ಗವು ಕ್ರಮೇಣವಾಗಿ ಬಂಡವಾಳಶಾಹೀ ಶೋಷಣೆಯ ವಿರೋಧವಾಗಿ ಜಾಗೃತವಾಗುತ್ತದೆ. ಒಗ್ಗಟ್ಟಾಗುತ್ತದೆ. ಹೋರಾಟದ ದಾರಿಯಲ್ಲಿ ಮುನ್ನಡೆಯುತ್ತದೆ. ಇದರಿಂದ ಕಾರ್ಮಿಕವರ್ಗದ ಪ್ರಜ್ಞೆಯೂ ಶಕ್ತಿಯೂ ಬೆಳೆದು, ಅಸ್ತಿತ್ವದಲ್ಲಿರುವ ವ್ಯವಸ್ಥೆಯನ್ನೇ ಪರಿವರ್ತನೆಗೊಳಿಸುವ ಸಾಮರ್ಥ್ಯವನ್ನು ಆ ವರ್ಗ ಪಡೆಯುತ್ತದೆ.

ಕಾರ್ಮಿಕವರ್ಗವು ಬಂಡವಾಳಶಾಹೀ ವ್ಯವಸ್ಥೆಯನ್ನು ಕೊನೆಗಾಣಿಸುವುದರೊಂದಿಗೆ ತಾನು ಸ್ವತಃ ಶೋಷಣೆಯಿಂದ ವಿಮೋಚನೆ ಹೊಂದುತ್ತದೆ. ಅದೇ ಸಮಯದಲ್ಲಿ ಇಡೀ ಸಮಾಜವನ್ನು ಸಮಸ್ತ ಶ್ರಮಜೀವಿ ಜನತೆಯನ್ನು ಸುಲಿಗೆಯ ಬಂಧನದಿಂದ ಬಿಡುಗಡೆ ಮಾಡುತ್ತದೆ. ಹೀಗೆ "ಪವಿತ್ರ ಕುಟುಂಬ"ದಲ್ಲಿ "ಕಾರ್ಮಿಕವರ್ಗದ ಕ್ರಾಂತಿಕಾರೀ ಕಾರ್ಯಭಾರಕ್ಕೆ ಸಂಬಂಧಿಸಿ ಮಾರ್ಕ್ಸ್‌ರವರ ವಿಚಾರಗಳು ಬಹಳಮಟ್ಟಿಗೆ ಪೂರ್ತಿಯಾಗಿ ವಿಕಾಸ ಹೊಂದಿದನ್ನು ಕಾಣಬಹುದು. ಸಮಾಜದ ಆರ್ಥಿಕ ಬುನಾದಿಯ ಬದಲಾವಣೆಯಿಂದ ಅದರ ರಾಜಕೀಯ ನೈತಿಕ, ವೈಚಾರಿಕ ರಚನೆಗಳೂ ಬದಲಾವಣೆ ಹೊಂದುತ್ತವೆ. ಹೀಗೆ ಒಂದು ಸಾಮಾಜಿಕ ಆರ್ಥಿಕ ಪದ್ಧತಿಯು ಕ್ರಾಂತಿಕಾರಕವಾಗಿ ಪರಿವರ್ತನೆ ಹೊಂದಿ, ಅದಕ್ಕಿಂತಲೂ ಹೆಚ್ಚು ಮುಂದುವರಿದ ಇನ್ನೊಂದು ಸಾಮಾಜಿಕ–ಆರ್ಥಿಕ ಪದ್ಧತಿ ನೆಲೆಗೊಳ್ಳುವುದು ಇತಿಹಾಸದ ನಿಯಮವಾಗಿದೆ. ವರ್ಗವೈರುದ್ಧ್ಯವಿರುವ ಸಮಾಜವ್ಯವಸ್ಥೆಯಲ್ಲಿ ಬಂಡವಾಳಶಾಹೀ ವ್ಯವಸ್ಥೆಯೇ ಕೊನೆಯದಾಗಿದೆ. ಒಂದು ವರ್ಗದ ಮೇಲೆ ಇನ್ನೊಂದು ವರ್ಗವು ಅಧಿಪತ್ಯ ನಡೆಸುವುದನ್ನು ಸಂಪೂರ್ಣವಾಗಿ ತೊಡೆದುಹಾಕಿ ವರ್ಗವೈರುದ್ಧ್ಯಕ್ಕೆ ಎಡೆಯಿಲ್ಲದ ವರ್ಗಭೇದವಿಲ್ಲದ ಕಮ್ಯೂನಿಷ್ಟ್ ಸಮಾಜವನ್ನು ನಿರ್ಮಾಣ ಮಾಡುವುದಕ್ಕೆ ಅವಶ್ಯವಿರುವ ಉಪಾಧಿಗಳು ಬಂಡವಾಳಶಾಹೀ ವ್ಯವಸ್ಥೆಯಲ್ಲಿ ಪರಿಪಕ್ವವಾಗಿರುತ್ತವೆ. ಕ್ರಾಂತಿಯು ಅಗತ್ಯವಾಗುತ್ತದೆ ಮಾತ್ರವಲ್ಲ. ಕ್ರಾಂತಿಯನ್ನು ಯಶಸ್ವಿಯಾಗಿ ನಡೆಸುವ ಸಾಮರ್ಥ್ಯವಿರುವಂಥ ವರ್ಗವೊಂದು ಸೃಷ್ಟಿಯಾಗಿರುತ್ತದೆ. ಬಂಡವಾಳಶಾಹೀ ಸಮಾಜದಲ್ಲಿ ಅದೇ ಕಾರ್ಮಿಕವರ್ಗ. ಈ ಕಾರ್ಮಿಕವರ್ಗವು ತನ್ನ ಐತಿಹಾಸಿಕ ಕಾರ್ಯಭಾರವೆಂಬ ನೆಲೆಯಲ್ಲಿ "ರಾಜ್ಯ(ಪ್ರಭುತ್ವ) ಎಂಬ ಸಂಘಟಿತ ರಾಜಕೀಯ ಶಕ್ತಿಯನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕೆಂದೂ ಅದರ ಸಹಾಯದಿಂದ ಬಂಡವಾಳಶಾಹೀ ಪ್ರತಿರೋಧವನ್ನು ಕೊನೆಗಾಣಿಸಿ ಸಮಾಜವನ್ನು ಹೊಸ ತಳಹದಿಯಲ್ಲಿ ಪುನರಪಿ ಸಂಘಟಿಸ ಬೇಕೆಂದೂ" ಮಾರ್ಕ್ಸ್ ಮತ್ತು ಎಂಗೆಲ್ಸ್ ಜರ್ಮನ್ ವಿಚಾರಧಾರೆಯಲ್ಲಿ ಪ್ರತಿಪಾದಿಸಿದ್ದಾರೆ.

ಬದುಕುವುದಕ್ಕೆ ಸಾಮಾಜಿಕಜೀವನ ಸಾಗುವುದಕ್ಕೆ, ಬೇಕಾದುದೆಲ್ಲವನ್ನೂ ಸೃಷ್ಟಿಸುವ ಆಧುನಿಕ ಶ್ರಮಜೀವಿ ಜನರನ್ನು ಈ ತನಕ ಸಮಾಜದಲ್ಲಿ ತುಚ್ಛ ಹಾಗೂ ಗೌಣ ಎಂದು ಕಾಣುತ್ತಿದ್ದರು. ಇನ್ನು ಮುಂದೆ ಆ ದುಡಿಮೆಗಾರರ ವರ್ಗವೇ ಇತಿಹಾಸದ ಚಲನೆಯ ಚೈತನ್ಯವೆಂದೂ ಮುಂದಿನ ಹಂತದ ಕೇಂದ್ರಬಿಂದುವೆಂದೂ ಪರಿಗಣಿಸಲು ಮಾರ್ಕ್ಸ್ ಮತ್ತು ಎಂಗೆಲ್ಸ್ ಕಲಿಸಿದರು. ಸಮಸ್ತ ಮಾನವಕುಲಕ್ಕೆ ಸ್ವಾತಂತ್ರ್ಯ ಮತ್ತು ಸಮಾನತೆ ಮತ್ತು ಶಾಂತಿ ಸೌಹಾರ್ದತೆ, ಸುಖ ಮತ್ತು ಸಂತೃಪ್ತಿ ಖಚಿತವಾಗಿರುವಂತಹ ಸಮಾಜವಾದೀ ಸಮಾಜವನ್ನು–ಕಮ್ಯುನಿಸಮ್ಮನ್ನು ಕಟ್ಟಿಬೆಳೆಸುವ ಮಹಾತ್ಕಾರ್ಯದ ಅಧ್ವರ್ಯು ಆಧುನಿಕ ಕಾರ್ಮಿಕ ವರ್ಗವೆಂಬ ಯಥಾರ್ಥವನ್ನು ಮಾರ್ಕ್ಸ್ ಮತ್ತು ಎಂಗೆಲ್ಸ್ "ಜರ್ಮನ್ ವಿಚಾರಧಾರೆ" ಯಲ್ಲಿ ವಿಶದೀಕರಿಸಿದರು."ಬಂಡವಾಳಶಾಹಿಯನ್ನು ಕಿತ್ತೊಗೆಯುವುದು, ಕಾರ್ಮಿಕ ವರ್ಗದ ಅಧಿಕಾರವನ್ನು ಸ್ಥಾಪಿಸುವುದು. ವರ್ಗ ವಿದ್ವೇಷದ ಮೇಲೆ ನಿಂತಿರುವ ಹಳೆಯ ಬಂಡವಾಳಶಾಹೀ ಸಮಾಜವನ್ನು ವಿಸರ್ಜನೆ ಮಾಡಿ ವರ್ಗಭೇದ ಹಾಗೂ ಖಾಸಗಿ ಆಸ್ತಿ ಇಲ್ಲದಂತಹ ಹೊಸ(ಸಮಾಜವಾದಿ) ಸಮಾಜವನ್ನು

ನಿರ್ಮಾಣ ಮಾಡುವುದು. ತಾವು ಸ್ಥಾಪಿಸಲಿದ್ದ ಕಾರ್ಮಿಕವರ್ಗದ ರಾಜಕೀಯ ಪಕ್ಷದ ಪ್ರಧಾನ ಉದ್ದೇಶವಾಗಿರುವುದೆಂದು"[೨೩] ಮಾರ್ಕ್ಸ್ ಮತ್ತು ಎಂಗೆಲ್ಸ್ ಘೋಷಿಸಿದರು. ಫ್ರೆಂಚ್ ಕಾಲ್ಪನಿಕ ಸಮಾಜೀವಾದಿ ಪಿಯರ್ರೆ-ಜೋಸೆಫ್ ಪ್ರೌಧೋನ್ ಸೈದ್ಧಾಂತಿಕ ಸಮರ್ಥನೆಯನ್ನು ನೀಡುವ ಪ್ರಚಾರ ಕಾರ್ಯವನ್ನು ನಡೆಸುತ್ತಿದ್ದರು. ಇರುವ ವ್ಯವಸ್ಥೆಯನ್ನು ಶಾಂತಿಯುತವಾಗಿ ಸುಧಾರಣೆ ಮಾಡಬಹುದೆಂದು ಖಾಸಗಿ ಆಸ್ತಿಯನ್ನು ಕೂಲಿಕೆಲಸವನ್ನು ರದ್ದುಗೊಳಿಸದೆಯೇ ಬಂಡವಾಳಶಾಹೀ ಶೋಷಣೆಯನ್ನು ಕೊನೆಗಾಣಿಸ ಬಹುದೆಂದೂ ಪ್ರೌಧೋನ್ ಪ್ರತಿಪಾದನೆ ಮಾಡುತಿದ್ದರು. ಕಾರ್ಮಿಕವರ್ಗದ ಸ್ವತಂತ್ರ ಸಂಘಟನೆ ಹಾಗೂ ಸ್ವತಂತ್ರ ಹೋರಾಟ ಅವರಿಗೆ ಗೌಣವಾಗಿತ್ತು. ಕಾರ್ಮಿಕವರ್ಗವು ಬಂಡವಾಳಶಾಹಿಯಿಂದ ಬಿಡುಗಡೆ ಹೊಂದಲು ಹೋರಾಡುವಾಗಲೇ ತನ್ನ ದೇಶಕ್ಕೂ ಇಡೀ ಜಗತ್ತಿಗೂ ಶಾಂತಿಯುತವಾದ ಭವಿಷ್ಯತ್ತನ್ನು ರೂಪಿಸುವುದಕ್ಕೆ ಕೂಡ ಹೋರಾಡುತ್ತದೆಂದು ಸ್ಪಷ್ಟಪಡಿಸಿದರು. ಕಮ್ಯೂನಿಷ್ಟ್ ಪಕ್ಷದ ಪ್ರಣಾಳಿಕೆಯಾದ್ಯಂತ ಹರಿಯುತ್ತಿರುವ ಮೂಲವಿಚಾರಧಾರೆ ಹೀಗಿದೆ "ಪ್ರತಿಯೊಂದು ಐತಿಹಾಸಿಕ ಯುಗದ ಆರ್ಥಿಕ ಉತ್ಪಾದನೆಯು ಮತ್ತು ಅದರಿಂದ ಅವಶ್ಯಕವಾಗಿಯೇ ಉದ್ಭವಿಸುವ ಸಮಾಜ ರಚನೆಯೂ ಈ ಯುಗದ ರಾಜಕೀಯ ಹಾಗೂ ಬೌದ್ಧಿಕ ಇತಿಹಾಸದ ತಳಪಾಯವಾಗಿರುತ್ತವೆ. ಅದರ ಫಲವಾಗಿ (ಭೂಮಿಯ ಸಾಮುದಾಯಿಕ ಒಡೆತನದ ಪ್ರಾಚೀನ ವ್ಯವಸ್ಥೆಯು ವಿಸರ್ಜನೆಗೊಂಡಂದಿನಿಂದ) ಎಲ್ಲ ಇತಿಹಾಸವೂ ವರ್ಗಹೋರಾಟಗಳ, ಶೋಷಿತ ಹಾಗೂ ಶೋಷಕವರ್ಗಗಳ ನಡುವಿನ ಹೋರಾಟಗಳ ಸಾಮಾಜಿಕ ಬೆಳವಣಿಗೆಯ ವಿವಿಧ ಘಟ್ಟಗಳಲ್ಲಿ ಮರ್ದಿತ ಹಾಗೂ ಮರ್ದಕ ವರ್ಗಗಳ ನಡುವಿನ ಹೋರಾಟಗಳ ಇತಿಹಾಸವಾಗಿದೆ" ಆದರೆ ಈ ಹೋರಾಟ ಈಗ ಎಂತಹ ಹಂತ ತಲುಪಿದೆ ಎಂದರೆ ಶೋಷಿತ ಹಾಗೂ ಮರ್ದಿತ ವರ್ಗವು (ಶ್ರಮಜೀವಿವರ್ಗ) ತನ್ನನ್ನು ಶೋಷಿಸುತ್ತಿರುವ ಮತ್ತು ಮರ್ದಿಸುತ್ತಿರುವ ವರ್ಗದಿಂದ (ಬಂಡವಾಳಗಾರ ವರ್ಗದಿಂದ) ತನ್ನ ವಿಮೋಚನೆಯನ್ನು ಅದೇ ಹೊತ್ತಿನಲ್ಲಿ ಇಡೀ ಸಮಾಜವನ್ನೇ ಶೋಷಣೆ, ಮರ್ದನ ಹಾಗೂ ವರ್ಗಹೋರಾಟಗಳಿಂದ ಸದಾಕಾಲಕ್ಕೂ ವಿಮೋಚನೆಗೊಳಿಸದೆ ಸಾಧಿಸಿಕೊಳ್ಳಲಾರದಾಗಿದೆ.

ಕಮ್ಯೂನಿಷ್ಟ್ ಪಕ್ಷದ ಪ್ರಣಾಳಿಕೆಯು ವೈಜ್ಞಾನಿಕ ಕಮ್ಯೂನಿಸಮ್ಮಿನ ರೂಪುರೇಷೆಗಳನ್ನು ಸ್ಪಷ್ಟವಾಗಿ ಸರಳವಾದ ಮತ್ತು ಮನಮುಟ್ಟುವ ಶೈಲಿಯಲ್ಲಿ ನಮ್ಮ ಮುಂದಿಡುತ್ತದೆ. ಅದರಲ್ಲಿ ಇತಿಹಾಸದ ಭೌತಿಕವಾದೀ ಅನ್ವೇಕ್ಷಣೆಯ ಮೂಲಭೂತ ತತ್ವಗಳನ್ನೂ, ಬಂಡವಾಳಶಾಹೀ ಸಮಾಜಕ್ಕೆ ಅನ್ವಯಗೊಳಿಸಿದ ರಾಜಕೀಯ ಅರ್ಥಶಾಸ್ತ್ರದ ಸಿದ್ಧಾಂತಗಳನ್ನೂ, ಆಧುನಿಕ ಕಾರ್ಮಿಕ ವರ್ಗದ ಹೋರಾಟದ ಗುರಿಯನ್ನು ಮತ್ತು ಪಥವನ್ನು ತೋರಿಸಿಕೊಡುವ ಮಾರ್ಗದರ್ಶಕ ಸೂತ್ರಗಳನ್ನೂ, ಸಮಾಜವಾದೀ ಮತ್ತು ಕಮ್ಯೂನಿಷ್ಟ್ ಸಮಾಜಗಳ ರೂಪರೇಷೆ ಮತ್ತು ನಿರ್ಮಾಣದ ವಿಧಾನಗಳ ವಿವರಣೆಯನ್ನು ಒಂದೇ ಕಡೆ ನಾವು ಕಾಣುತ್ತೇವೆ. ಕಾರ್ಮಿಕವರ್ಗದ ವಿಮೋಚನೆಯು ಕಾರ್ಮಿಕವರ್ಗದಿಂದಲೇ ಆಗಬೇಕಾಗಿದೆ. ಕಾರ್ಮಿಕವರ್ಗವು ವರ್ಗಭೇದವನ್ನೂ ಶೋಷಣೆಯ ಪರಿಸ್ಥಿತಿಯನ್ನೂ ಸಂಪೂರ್ಣ ಅಳಿಸಿಹಾಕದೆ, ತನ್ನ ಸ್ವಂತ ವಿಮೋಚನೆಯನ್ನು ಸಾಧಿಸಲಾರದು. ಕಮ್ಯೂನಿಷ್ಟ್ ಸಮಾಜದಲ್ಲಿ ಪ್ರತಿಯೊಬ್ಬನ ವಿಕಸನವು

ಎಲ್ಲರ ವಿಕಸನದ ಉಪಾಧಿಯಾಗಿರುತ್ತದೆ. ಒಬ್ಬೊಬ್ಬನ ಸಲುವಾಗಿ ಸಮಸ್ತರೂ ಸಮಸ್ತರ ಸಲುವಾಗಿ ಒಬ್ಬೊಬ್ಬನೂ ಬದುಕುತ್ತಾರೆ, ಶ್ರಮಿಸುತ್ತಾರೆ. ಇತಿಹಾಸದ ಉದ್ದಕ್ಕೂ ಶೋಷಕರು ಮತ್ತು ಶೋಷಿತರು, ಮರ್ದಕರು ಮತ್ತು ಮರ್ದಿತರು ಪರಸ್ಪರ ವಿರೋಧವಾಗಿ ನಿಂತು ಹೋರಾಡುತ್ತಾ ಬಂದಿದ್ದಾರೆ. ಈ ಹೋರಾಟವು ಕೆಲವೊಂದು ಬಹಿರಂಗವಾಗಿಯೂ ಕೆಲವೊಮ್ಮೆ ತೆರೆಯ ಮರೆಯಲ್ಲೂ ನಡೆಯುತ್ತದೆ. ಈ ಹೋರಾಟವು ಒಂದೇ ಇಕ್ಕಡೆಗಳೂ ನಾಶಹೊಂದುವುದರಲ್ಲಿ ಪರ್ಯಾವಸಾನ ಹೊಂದುತ್ತದೆ. ಅಲ್ಲವಾದರೆ ಇಡೀ ಸಮಾಜವೇ ಅಮೂಲಾಗ್ರವಾಗಿ ಪುನರ‍್ರಚನೆಯಾಗುವ ಪರಿಣಾಮವನ್ನುಂಟು ಮಾಡುತ್ತದೆ. ಆಧುನಿಕ ಬಂಡವಾಳಶಾಹೀ ಸಮಾಜವು ಈ ಪ್ರಕ್ರಿಯೆಯ ಒಂದು ಘಟ್ಟವಾಗಿದೆ. ಅದು ಅನಾದಿಯಾಗಿ ಇದ್ದುದೂ ಅಲ್ಲ, ಅನಂತವಾಗಿ ಉಳಿಯುವುದೂ ಇಲ್ಲ. ಅದು ಅದಕ್ಕಿಂತ ಹಿಂದೆ ಇದ್ದಂಥ ಸಾಮಂತಶಾಹೀ ಸಮಾಜದೊಳಗೆ ಮೊಳಕೆಯೊಡೆಯಿತು. ಸಾಮಂತಶಾಹಿಯ ಭಗ್ನಾವಶೇಷಗಳೊಳಡೆ ಬೆಳೆದು ತನ್ನ ಸರ್ವಸ್ವಾಮ್ಯವನ್ನು ಸ್ಥಾಪಿಸಿತು. ಬಂಡವಾಳಶಾಹಿಯು ವರ್ಗ ವೈರುಧ್ಯಗಳನ್ನೇನೂ ಕೊನೆಗಾಣಿಸಲಿಲ್ಲ. ಅದು "ಹಳೆಯವುಗಳ ಸ್ಥಳಗಳಲ್ಲಿ ಹೊಸ ವರ್ಗಗಳನ್ನು ಹೊಸ ದಬ್ಬಾಳಿಕೆಯ ಪರಿಸ್ಥಿತಿಗಳನ್ನೂ, ಮತ್ತು ಹೊಸ ಹೋರಾಟದ ರೂಪಗಳನ್ನು ಅಸ್ತಿತ್ವಕ್ಕೆ ತಂದಿತು. ಇಡೀ ಸಮಾಜವನ್ನು ಬಂಡವಾಳಗಾರ-ವರ್ಗ ಮತ್ತು ಕೂಲಿಕಾರ-ವರ್ಗ ಎಂಬ ಒಂದನ್ನೊಂದು ಖಾಡಾ ಖಾಡಿಯಾಗಿ ಎದುರಿಸುವ ಎರಡು ಮುಖ್ಯವರ್ಗಗಳನ್ನಾಗಿ ಹೆಚ್ಚು ಹೆಚ್ಚು ವಿಂಗಡನೆ ಮಾಡುತ್ತಾ ಬೆಳೆಯಿತು. ಅದು ವರ್ಗಹೋರಾಟವನ್ನು ಮೊದಲಿಗಿಂತೆಲ್ಲ ಸರಳಗೊಳಿಸಿತು. ಅದೇ ಸಮಯದಲ್ಲಿ ಅದನ್ನು ಮೊದಲಿಗಿಂತೆಲ್ಲ ತೀವ್ರಗೊಳಿಸಿತು. ಮಾರ್ಕ್ಸ್‌ರವರ ಹಳೆಯ ಗೆಳೆಯ ಜರ್ಮನ್‌ಕವಿ ಜಾರ್ಜ್‌ಹಾರ್ವೆ ಕಾರ್ಮಿಕರ ಚಳುವಳಿಯ ಪುನರುಜ್ಜೀವನವನ್ನು ಹೀಗೆ ಸ್ವಾಗತಿಸಿದ್ದಾರೆ:

ಎಚ್ಚರವಾಗಿಹ ದುಡಿಮೆಗಾರರೇ
ಕಾದಿರಿ ಒಗ್ಗಟ್ಟಾಗುತಯೆಲ್ಲರು
ಮುರಿದಿಕ್ಕಲು ಬಂಧನ ಬೇಡಿಗಳೆಲ್ಲ
ಮರಳಿ ಬಂದಿತು ಕ್ರಾಂತಿಯ ಕಾಲ
ಕಳಚಲು ನಿಮ್ಮಯ ಭುಜಗಳ ನೊಗವ
ಕೆಳಗಿಡೆ ನಿಮ್ಮಯ ತೋಳ್ಗಳು ನೇಗಿಲ
ಧೂರ್ತ ಶೋಷಕರೆದೆಗಳು ನಡುಗೆ
ಜಿಗಣೆ ದನಿಕರಿಗೆ ಗೋಳೇ ಗೋಳು
ನಿಮ್ಮೊಂತಿಯಿಲ್ಲದೆ ತಿರುಗದು ಗಾಲಿ
ನಿಂತರ ನೀವು, ನಿಲುವುದು ಗಾಡಿ
ಯಂತ್ರ ಚಲಿಸದು, ನೀವು ನಡೆಸದೆ
ಲಾಭವೆಲ್ಲಿದೆ ನೀವು ದುಡಿಯದೆ?
ಕವಿದಿಹ ಮೌಢ್ಯವ ಬೇಗನೆ ಹರಿಸಿ
ದಾಸ್ಯವ ತಾಳುವ ಸಹನೆಯ ತ್ಯಜಿಸಿ
ಅನ್ನವೆ ಸ್ವಾತಂತ್ರ್ಯವು ನಮಗೆಂದು
ತಿಳಿಯಿರಿ, ಸ್ವಾತಂತ್ರ್ಯವೆ ನಮ್ಮುಸಿರು

ಮಾರ್ಕ್ಸ್ ಮತ್ತು ಎಂಗೆಲ್ಸ್ ಕಾರ್ಮಿಕವರ್ಗದ ಈ ಚೇತರಿಕೆಯನ್ನು ಕಂಡು ಸಂತೋಷ ಹೊಂದಿದರು.

ಕಾರ್ಮಿಕವರ್ಗವು ೧೮೬೩ರಲ್ಲಿ ತನ್ನದೇ ಆದ ಸಂಘಟನೆಯ ಮೂಲಕ ಬಂಡವಾಳಶಾಹಿಯಿಂದ ವೈಚಾರಿಕವಾಗಿಯೂ, ಕ್ರಿಯಾತ್ಮಕವಾಗಿಯೂ, ಬಿಡುಗಡೆ ಹೊಂದುವ ಕ್ರಮ ಕೈಗೊಂಡುದನ್ನು ಮಾರ್ಕ್ಸ್ ಮತ್ತು ಎಂಗೆಲ್ಸ್ ಸ್ವಾಗತಿಸಿದರು.

ಕಾರ್ಮಿಕವರ್ಗವು ತನ್ನ ಕರ್ತವ್ಯವನ್ನು ಯಶಸ್ವಿಯಾಗಿ ನೆರವೇರಿಸುವುದಕ್ಕೆ ರಾಷ್ಟ್ರಮಟ್ಟದಲ್ಲೂ ಜಾಗತಿಕ ಮಟ್ಟದಲ್ಲೂ ಒಗ್ಗಟ್ಟಾಗಬೇಕೆಂದು ಮಾರ್ಕ್ಸ್ ತಿಳಿಸಿಹೇಳಿದ್ದಾರೆ. ಶ್ರಮಜೀವಿಗಳ ಸಂಖ್ಯಾಬಲವು ಅವರ ಜಯಕ್ಕೆ ಅನುಕೂಲಕರವಾದ ಸಂಗತಿಯಾಗಿದೆ. ಆದರೆ ಅದೊಂದೇ ಸಾಲದು "ಸಂಖ್ಯಾಬಲವು ಐಕ್ಯದಿಂದ ದೃಢವಾಗಿ ತಿಳುವಳಿಕೆಯಿಂದ ಕೂಡಿದ ಮಾರ್ಗದರ್ಶನವನ್ನು ಪಡೆಯಬೇಕು. ಆಗ ಅದಕ್ಕೆ ನಿಜವಾಗಿ ತೂಕವಿರುತ್ತದೆ" ಇಲ್ಲಿ "ಐಕ್ಯ" ಎನ್ನುವಾಗ ಎಲ್ಲಾ ದೇಶಗಳ ಶ್ರಮಜೀವಿಗಳ ಐಕ್ಯವೆಂದೂ "ತಿಳಿವಳಿಕೆ" ಎನ್ನುವಾಗ ಎಲ್ಲಾ ದೇಶಗಳ ಶ್ರಮಜೀವಿಗಳ ಐಕ್ಯವೆಂದೂ 'ತಿಳಿವಳಿಕೆ' ಎನ್ನುವಾಗ ಸಮಾಜದ ಬೆಳವಣಿಗೆಯ ನಿಯಮಗಳ ಮತ್ತು ವರ್ಗಹೋರಾಟದ ಮಾರ್ಗದ ತಿಳಿವಳಿಕೆಯೆಂದು ಮಾರ್ಕ್ಸ್ ವ್ಯಕ್ತಪಡಿಸಿದ್ದಾರೆ. "ಕಾರ್ಮಿಕವರ್ಗವು ಒಂದು ಕ್ರಾಂತಿಕಾರೀ ವರ್ಗ ಅಲ್ಲವಾದರೆ, ಅದು ಏನೂ ಅಲ್ಲದಾಗುತ್ತದೆ." ಎಂದು ಆ ಪತ್ರದಲ್ಲಿ ಮಾರ್ಕ್ಸ್ ಹೇಳಿದರು. ಕಾರ್ಮಿಕವರ್ಗವು ಶೋಷಣೆಯ ಆಧಾರದ ಮೇಲೆ ನಿಂತಿರುವ ಬಂಡವಾಳಶಾಹೀ ವ್ಯವಸ್ಥೆಯನ್ನು ಕೊನೆಗಾಣಿಸಲು ಹೋರಾಡಬೇಕು. "ಕಾರ್ಮಿಕವರ್ಗದ ಪರಿಪೂರ್ಣವಾದ ವಿಮೋಚನೆಯನ್ನು ಸಾಧಿಸುವ ಉಪಕರಣವಾಗಿ ಟ್ರೇಡ್ ಯೂನಿಯನ್‌ಗಳ ಸಂಘಟಿತ ಶಕ್ತಿಯ ವಿನಿಯೋಗ ಆಗಬೇಕು". ಎಂದು ಮಾರ್ಕ್ಸ್ ಒಂದು ಉಪನ್ಯಾಸದಲ್ಲಿ ಸ್ಪಷ್ಟಪಡಿಸಿದರು. 'ಬಂಡವಾಳ'ದಲ್ಲಿ ಮುಖ್ಯವಾಗಿ ಬಂಡವಾಳಕ್ಕೂ ಕೂಲಿಗೆಲಸಕ್ಕೂ ಬಂಡವಾಳಗಾರ ವರ್ಗಕ್ಕೂ, ಶ್ರಮಜೀವಿವರ್ಗಕ್ಕೂ ಇರುವ ಪರಸ್ಪರ ಸಂಬಂಧವನ್ನು ಮಾರ್ಕ್ಸ್ ವಿಶ್ಲೇಷಣೆ ಮಾಡಿದ್ದಾರೆ. ಆ ಮೂಲಕ ಬಂಡವಾಳಶಾಹೀ ಸಮಾಜದೊಳಗೆ ಎಡೆಬಿಡದೆ ನಡೆಯುತ್ತಿರುವ ವರ್ಗಸಂಘರ್ಷದ ಮರ್ಮವನ್ನವರು ಕೆದಕಿ ನೋಡಿದ್ದಾರೆ. ಆ ಸಂಘರ್ಷದ ಪರಿಣಾಮವಾಗಿ ಬಂಡವಾಳಶಾಹಿತ್ವ ಅವಸಾನ ಹೊಂದಿ ಸಮಾಜಸತ್ತೆ ಸ್ಥಾಪಿತವಾಗುತ್ತದೆಯೆಂದು ಅವರು ಹೇಳಿದ್ದಾರೆ. "ಅಡಿಯಿಂದ ಮುಡಿಯವರೆಗೂ ಪ್ರತಿಯೊಂದು ರಂಧ್ರದಿಂದಲೂ ರಕ್ತ ಮತ್ತು ಕೊಳೆ ಹೊರಸೂಸುತ್ತಾ ಬಂಡವಾಳಶಾಹಿಯು ತನ್ನ ಅಧಿಪತ್ಯವನ್ನು ಸ್ಥಾಪಿಸಿತು" ಬಂಡವಾಳಶಾಹಿಯು ಕೊಬ್ಬುತ್ತ ಹಬ್ಬುತ್ತ ಬೆಳೆದಂತೆಲ್ಲ ಕಾರ್ಮಿಕವರ್ಗದ ದಾಸ್ಯ ಮತ್ತು ದಾರಿದ್ರ್ಯ ತೀವ್ರವಾಗುತ್ತ ಸಾಗಿತು. ಈ ಪ್ರಕ್ರಿಯೆಯ ಮರ್ಮವನ್ನೆಲ್ಲ 'ಬಂಡವಾಳ' ದಲ್ಲಿ ಮಾರ್ಕ್ಸ್ ಭೇದಿಸಿ ಬಹಿರಂಗಪಡಿಸಿದ್ದಾರೆ. ಶ್ರಮವೇ ಎಲ್ಲ ಮೌಲ್ಯದ ಮೂಲ ಬಂಡವಾಳಶಾಹೀ ಸಮಾಜದಲ್ಲಿ ಕೂಲಿ ಕೆಲಸಗಾರನು ಶ್ರಮದಿಂದ ಸೃಷ್ಟಿಸುವ ಪೂರ್ತಿ ಮೌಲ್ಯವು ಅವನಿಗೆ ದೊರೆಯುವುದಿಲ್ಲ. ಅದರ ಒಂದು ಅಂಶವನ್ನು ಅವನು ಮನಸ್ಸಿಲ್ಲದಿದ್ದರೂ ಬಂಡವಾಳಗಾರನಿಗೆ ತನ್ನ ಜೀವಧಾರಣೆಯ ಏಕೈಕ ಸಾಧನವಾದ ತನ್ನ ಶ್ರಮ ಶಕ್ತಿಯ ವಿನಿಯೋಗಕ್ಕೆ

ಅಗತ್ಯವಿರುವ ಸಾಧನ ಸಲಕರಣೆಗಳನ್ನೆಲ್ಲದರ ಒಡೆಯನಿಗೆ ಬಿಟ್ಟುಕೊಡಬೇಕಾಗುತ್ತದೆ. ಬಂಡವಾಳಶಾಹೀ ಉತ್ಪಾದನಾವಿಧಾನಕ್ಕೆ ಎರಡು ಸಾಮಾಜಿಕ ವರ್ಗಗಳ ಅಸ್ತಿತ್ವವು ಪೂರ್ವಭಾವಿಯಾಗಿಯೇ ಅಗತ್ಯವಿರುತ್ತದೆ. ಒಂದು ಮಗ್ಗುಲನ್ನು ಉತ್ಪಾದನೆಯ ಹಾಗೂ ಜೀವನಧಾರಣೆಯ ಸಾಧನಗಳ ಒಡೆತನವನ್ನು ಹೊಂದಿರುವ ಬಂಡವಾಳಗಾರರ ವರ್ಗ: ಇನ್ನೊಂದು ಮಗ್ಗುಲಲ್ಲಿ ಎಲ್ಲ ಸಾಧನ, ಸಲಕರಣೆಗಳಿಂದಲೂ ಸಂಪೂರ್ಣವಾಗಿ ವಿರಹಿತವಾಗಿರುವ ಮತ್ತು ತಮ್ಮಲ್ಲಿರುವ ಒಂದೇ ಒಂದು ಸರಕಾರ ಶ್ರಮಶಕ್ತಿಯ ಮಾರಾಟದಿಂದಲೇ ಜೀವನಧಾರಣೆಯ ಸಾಧನೆಗಳನ್ನು ಪಡೆಯಬೇಕಾಗುವ ದುಡಿಮೆಗಾರರ ವರ್ಗ–ಇವೇ ಈ ಎರಡು ವರ್ಗಗಳು. ಈ ವರ್ಗಗಳೊಳಗಿನ ಸಂಬಂಧ ಹೇಗಿರುತ್ತದೆ? ದುಡಿಮೆಗಾರನ ಶ್ರಮಶಕ್ತಿಯೆಂಬ ಸರಕನ್ನು ಮಾರುವ ಮತ್ತು ಕೊಳ್ಳುವ ಎರಡು ವರ್ಗಗಳೊಳಗಿನ ಸಂಬಂಧವಾಗಿ ಅದು ವರ್ತಿಸುತ್ತದೆ. ಕಾರ್ಮಿಕವರ್ಗವು ಸುಲಿಗೆ ದಬ್ಬಾಳಿಕೆಗಳಿಂದ ತನ್ನನ್ನು ಬಿಡಿಸಿಕೊಳ್ಳುವುದರೊಂದಿಗೇ ಎಲ್ಲರನ್ನು ಅವುಗಳಿಂದ ವಿಮೋಚನೆಗೊಳಿಸುತ್ತದೆ. ಹಿಂದಿನ ಎಲ್ಲ ಕ್ರಾಂತಿಗಳಲ್ಲಿಯೂ ಒಂದು ಶೋಷಕವರ್ಗವು ಇನ್ನೊಂದು ಶೋಷಕವರ್ಗವನ್ನು ಅಧಿಕಾರದಿಂದ ತಳ್ಳಿ ತಾನೇ ಆ ಸ್ಥಾನವನ್ನು ಆಕ್ರಮಿಸಿದ್ದರೆ, ಕಾಮಿರ್ಕವರ್ಗವು ಇತಿಹಾಸದಲ್ಲೇ ಮೊತ್ತ ಮೊದಲಬಾರಿಗೆ ಎಲ್ಲ ತರದ ವರ್ಗಭೇದಗಳನ್ನು ತೊಡೆದುಹಾಕಿ, ಮನುಷ್ಯನನ್ನು ಮನುಷ್ಯ ಶೋಷಣೆ ಮಾಡುವ ಅವಕಾಶವನ್ನೇ ಕೊನೆಗಾಣಿಸುತ್ತದೆ. ಹಿಂದೆ ಅಧಿಕಾರವನ್ನು ವಶಪಡಿಸಿಕೊಂಡಿದ್ದ ಪ್ರತಿಯೊಂದು ವರ್ಗವೂ ಆ ಅಧಿಕಾರವನ್ನು ಉಳಿಸಿ ಬಲಪಡಿಸಲು ಹಾಗೂ ಇತರರ ಮೇಲೆ ಶೋಷಣೆ ಮತ್ತು ದಬ್ಬಾಳಿಕೆ ನಡೆಸಲು ಉಪಯೋಗಿಸಿದ್ದರೆ, ಕಾರ್ಮಿಕವರ್ಗವು ಇಡೀ ಸಮಾಜದ ಮೇಲೆ ಒಂದುವರ್ಗದ ಅಧಿಪತ್ಯ ಅಥವಾ ಪ್ರಭುತ್ವ ಅಗತ್ಯವಿಲ್ಲದಂಥ ಪರಿಸ್ಥಿತಿಯನ್ನು ಸೃಷ್ಟಿಸುತ್ತದೆ. ಕಾರ್ಮಿಕವರ್ಗವು ಅದರ ಗುರಿಯನ್ನೂ– ಕಮ್ಯೂನಿಸಮ್ಮಿನ ಉನ್ನತ ಹಂತವನ್ನು ತಲುಪಿದಾಗ ಪ್ರಭುತ್ವವು ಕ್ಷಯಿಸಿ ಅವಸಾನ ಹೊಂದಿರುತ್ತದೆ ಎಂದು ಮಾರ್ಕ್ಸ್ ವಿವರಿಸಿದ್ದಾರೆ. ಬಂಡವಾಳಶಾಹೀ ವ್ಯವಸ್ಥೆಯಲ್ಲಿ ಸಮಾಜದಲ್ಲಿ ಬಂಡವಾಳಗಾರವರ್ಗ ಮತ್ತು ಕಾರ್ಮಿಕ ವರ್ಗ ಎಂಬ ಎರಡು ಮುಖ್ಯ ವರ್ಗಗಳು ಒಂದನ್ನೊಂದು ಎದುರಿಸುತ್ತವೆ. ಬೇರೆ ಎಲ್ಲ ವರ್ಗಗಳೂ ಒಡೆಯುತ್ತವೆ. ಈ ಎರಡುವರ್ಗಗಳಲ್ಲೊಂದನ್ನು ಸೇರುತ್ತವೆ. ಆದರೆ ಬಂಡವಾಳಗಾರ ವರ್ಗವು ಕಾರ್ಮಿಕವರ್ಗವಿಲ್ಲದೆ ಬದುಕಲಾರದು. ಬಂಡವಾಳಶಾಹಿತ್ವದಲ್ಲಿ ಕಾರ್ಮಿಕವರ್ಗದ ಸಂಖ್ಯೆ ದಿನೇದಿನೇ ದೊಡ್ಡದಾಗುತ್ತದೆ. ಅದು ಒಂದೇ ಕಡೆ ಸೇರಿ ದುಡಿಯುವ ಕೇಂದ್ರೀಕರಣ ಬಲಹೊಂದುತ್ತದೆ. ಆಧುನಕ ಯಂತ್ರಗಳ ಮತ್ತು ಉತ್ಪಾದನಾತಂತ್ರಗಳ ಅನುಭವವನ್ನು ಪಡೆಯುತ್ತದೆ. ಸಮಾಜದ ಜೀವನಾಡಿಯಂತಿರುವ ಉತ್ಪಾದನೆಯ ಮರ್ಮಸ್ಥಾನಗಳನ್ನು ಆವರಿಸುತ್ತದೆ. ಬಂಡವಾಳಶಾಹಿ ವ್ಯವಸ್ಥೆಯೊಳಗೆ ಕಾರ್ಮಿಕ ವರ್ಗವು ಬಂಡವಾಳಶಾಹಿಯನ್ನು ಅಳಿಸಬಲ್ಲ ಶಕ್ತಿಯ ಕೇಂದ್ರವಾಗುತ್ತದೆ. ಮಾರ್ಕ್ಸ್‌ರವರ ಮಾತುಗಳಲ್ಲಿ ಹೇಳುವುದಾದರೆ ಬಂಡವಾಳಶಾಹಿಯು ತನ್ನನ್ನು ಹುಗಿಯುವುದಕ್ಕೆ ಗುಂಡಿ ತೋಡುವ ವರ್ಗವನ್ನು ತಾನೇ ಸೃಷ್ಟಿಸುತ್ತದೆ.

"ಒಬ್ಬ ವ್ಯಕ್ತಿಯನ್ನು ಇನ್ನೊಬ್ಬ ವ್ಯಕ್ತಿ ಶೋಷಣೆ ಮಾಡುವುದನ್ನು ಕೊನೆಗಾಣಿಸುವುದಕ್ಕೆ ಸಮಸಮವಾಗಿ ಒಂದು ರಾಷ್ಟ್ರವನ್ನು ಮತ್ತೊಂದು ರಾಷ್ಟ್ರವು ಶೋಷಣೆ ಮಾಡುವುದನ್ನು ಕೊನೆಗಾಣಿಸಲಾಗುತ್ತದೆ. ಒಂದು ರಾಷ್ಟ್ರದೊಳಗೆ ವರ್ಗಗಳ ಸಂಘರ್ಷವು ಮರೆಯುವುದಕ್ಕೆ ಅನುಗುಣವಾಗಿ ಒಂದು ರಾಷ್ಟ್ರವು ಮತ್ತೊಂದು ರಾಷ್ಟ್ರದ ವಿರೋಧವಾಗಿ ವರ್ತಿಸುವುದು ಕೊನೆಗಾಣುತ್ತದೆ."

೨.೭ ಬಸವಣ್ಣ ಮತ್ತು ಕಾರ್ಲ್‌ಮಾರ್ಕ್ಸ್:

ಬಸವಣ್ಣನವರು ಪೌರಾತ್ಯ ಭಾಗದ ಸಮತಾವಾದದ ಪ್ರತಿನಿಧಿಯಾಗಿದ್ದರೆ, ಕಾರ್ಲ್‌ಮಾರ್ಕ್ಸ್ ಪಾಶ್ಚಾತ್ಯ ಭಾಗದ ತತ್ವಜ್ಞಾನಿ. ನಮ್ಮ ಬಡತನ ನಮ್ಮನ್ನು ಈ ಸ್ಥಿತಿಗೆ ತಂದಿದೆ. ಬಡತನಕ್ಕೆ ಕಾರಣ ನಾವು ದುಡಿದು ಸೃಷ್ಟಿಸಿದ ಸಂಪತ್ತನ್ನು ದೋಚಿ ನಮ್ಮನ್ನು ಕೂಲಿ ಗುಲಾಮರಾಗಿ ಮಾಡಿರುವ ಶೋಷಕ ವರ್ಗ, ವಿಶ್ವದ ಶ್ರಮಜೀವಿಗಳಲ್ಲಿ ಮೂಡಿರುವ ಈ ಅರಿವಿನ ಹಿಂದೆ, ಪ್ರತಿಭಟನೆಯ ಈ ಧ್ವನಿಯಲ್ಲಿ, ಸ್ವಾಭಿಮಾನದ ಈ ಕೂಗಿನಲ್ಲಿ, ನ್ಯಾಯಕ್ಕಾಗಿ ಪಟ್ಟು ಹಿಡಿದು ಕೇಳುವ ಈ ಛಲದಲ್ಲಿ, ಕಾರ್ಲ್‌ಮಾರ್ಕ್ಸ್ ಇದ್ದಾರೆ. ಜಗತ್ತಿನ ಎಲ್ಲ ದಲಿತ, ದುಡಿಯುವ ಜನರ ಹೋರಾಟದ ಉಸಿರಾಗಿ ಮಾರ್ಕ್ಸ್ ಸಿದ್ಧಾಂತ ಚೈತನ್ಯ ತುಂಬುತ್ತದೆ. ಕಾರ್ಲ್‌ಮಾರ್ಕ್ಸ್‌ರವರು ಸಮತಾವಾದದ ತತ್ವಗಳನ್ನು ಪ್ರತಿಪಾದಿಸಿದರು. ಅವುಗಳೆಂದರೆ ದ್ವಂದ್ವಾತ್ಮಕ ಭೌತವಾದ, ಐತಿಹಾಸಿಕ ಭೌತವಿಶ್ಲೇಷಣೆ, ವರ್ಗಹೋರಾಟ, ಅಧಿಕ ಮೌಲ್ಯೋತ್ಪಾದನಾ ತತ್ವ, ಕಾರ್ಮಿಕರ ಸರ್ವಾಧಿಕಾರತ್ವ, ರಾಜ್ಯ ನಶಿಸಿಹೋಗುವಿಕೆ, ಈ ತತ್ವಗಳ ಅನುಷ್ಠಾನದಿಂದ ಸಮಾಜದಲ್ಲಿ ಸಮಾನತೆಯನ್ನು ತರಬಹುದೆಂದು ಕಾರ್ಲ್‌ಮಾರ್ಕ್ಸ್ ಪ್ರತಿಪಾದಿಸಿದರು.

ಕಾರ್ಲ್‌ಮಾರ್ಕ್ಸ್ ದುಡಿಯುವ ವರ್ಗದ ಪರವಾಗಿದ್ದರೂ ದೈವವಿರೋಧಿ, ಧರ್ಮವಿರೋಧಿ, ಧರ್ಮ ಜನರನ್ನು ಹೇಡಿಗಳನ್ನಾಗಿ ಮಾಡುತ್ತದೆ, ಮೂಢರನ್ನಾಗಿ ಮಾಡುತ್ತದೆ. ಹುಚ್ಚರನ್ನಾಗಿ ಮಾಡುತ್ತದೆ ಎಂದು ಹೇಳುವುದರ ಮೂಲಕ ಪ್ರತಿಯೊಬ್ಬನೂ ತನ್ನ ಬೆವರಿನ ಪ್ರತಿಫಲವನ್ನೇ ಅನುಭವಿಸಬೇಕು ಎಂದು ಹೇಳಿದರು. ಬಸವಣ್ಣನವರು ಕೂಡಾ ಅದೇ ಮಾತನ್ನು ಬೇರೆ ರೀತಿಯಲ್ಲಿ ಹೇಳಿದರು.

"ದೇವಲೋಕ ಮರ್ತ್ಯಲೋಕ ಬೇರಿಲ್ಲ ಕಾಣಿರೋ
ಮರ್ತ್ಯನೆಂಬುದು ಕರ್ತಾರನ ಕಮ್ಮಟವಯ್ಯ
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯ
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ,
ಕೂಡಲಸಂಗಮದೇವಾ"[೨೪]

ಬಸವಣ್ಣನವರ ಕಾಲದಲ್ಲಿ ವರ್ಗಭೇದಕ್ಕಿಂತಲೂ, ವರ್ಣಭೇದ, ಜಾತಿಬೇಧಗಳೇ, ವಿಶೇಷವಾಗಿದ್ದವು. ಎಲ್ಲರ ದೇಹವು ದೇವರ ವಾಸಸ್ಥಾನವಾದುದರಿಂದ ಯಾರ ದೇಹಗಳೂ ಅಪವಿತ್ರವಲ್ಲ. ನಾವು ವರ್ಣಭೇದ ಮಾಡುವುದೆಂದರೆ ದೇವನಲ್ಲಿಯೇ ಭೇದವನ್ನು ಅರಿಸಿದಂತೆ ಎಂದರು. ಹೀಗೆ ಬಸವಣ್ಣ ಮತ್ತು ಕಾರ್ಲ್‌ಮಾರ್ಕ್ಸ್‌ರವರಲ್ಲಿ ಅನೇಕ ಸಾಮ್ಯತೆಯನ್ನು ಕಾಣಬಹುದಾಗಿದೆ.

೨.೮ ಜನಪದರ ದೃಷ್ಟಿಯಲ್ಲಿ ವರ್ಗದ ಪರಿಕಲ್ಪನೆ:

ಈ ಮೊದಲೇ ತಿಳಿಸಿರುವಂತೆ ಭಾರತದ ಸಮಾಜವ್ಯವಸ್ಥೆಯು ಜಾತಿಪದ್ಧತಿ ಆಧಾರಿತವಾದುದು. ಇದು ಎಂದಿನಿಂದ ಆರಂಭವಾಯಿತೆಂದು ಹೇಳುವುದು ಕಷ್ಟ. ಜಾತಿಯೆಂಬುದು ಮೂಲತಃ ವೃತ್ತಿಗನುಸಾರವಾಗಿ ಹುಟ್ಟಿಕೊಂಡ ಒಂದು ಕಲ್ಪನೆ. ಭಾರತದ ಸಂದರ್ಭದಲ್ಲಿ ನಿಜವಾಗಿ ಜಾತಿ ತನ್ನ ಚಾರಿತ್ರಿಕ ಆಯಾಮದಿಂದಾಗಿ ಅಡಿರಚನೆಯಲ್ಲಿ ಒಂದು ವಿಶೇಷವಾದ ಸಂಬಂಧ ಹೊಂದಿದೆ. ಬೇರೆ ಮಾತಿನಲ್ಲಿ ಹೇಳುವುದಾದರೆ ಜಾತಿ ಎಂಬುದು ಭಾರತದ ಚರಿತ್ರೆಯಲ್ಲಿ ಕಾಣಿಸಿಕೊಳ್ಳುವ ವರ್ಗಸ್ವರೂಪವೇ ಆಗಿದೆ. ಈ ವರ್ಣವ್ಯವಸ್ಥೆ ಮತ್ತು ಜಾತಿಪದ್ಧತಿಗಳು ತಮ್ಮದೇ ಆದ ಕೆಲವು ಕಟ್ಟುಪಾಡುಗಳನ್ನು ರೂಪಿಸಿಕೊಂಡು ಬಂದಿವೆ. ಜನಪದಕಥೆಗಳು, ಲಾವಣಿಗಳು ಅವುಗಳನ್ನು ವಿಧೇಯತೆಯಿಂದ ಪಾಲಿಸಿಕೊಂಡು ಬಂದಿವೆ. ಜನಪದ ವಕ್ತೃವಿನ ಮನಸ್ಸಿನಲ್ಲಿ ಅದೊಂದು ಪ್ರಶ್ನಾತೀತ ವ್ಯವಸ್ಥೆ ಮತ್ತು ದೈವ ನಿರ್ಮಿತ ವ್ಯವಸ್ಥೆ ಎಂಬ ಭಾವನೆ ಇದ್ದುದು ಇದಕ್ಕೆ ಕಾರಣ. ಹಾಗಾಗಿ ಇಲ್ಲಿ ಸಾಮಾಜಿಕ ಶ್ರೇಣೀಕೃತ ವ್ಯವಸ್ಥೆಯ ಚಿತ್ರವೇ ನಮಗೆ ಎದುರಾಗುತ್ತದೆ. ರಾಜನಾಗುವವನು ಕ್ಷತ್ರಿಯನೇ, ಬೋಧಿಸುವವನು ಬ್ರಾಹ್ಮಣನೇ, ವ್ಯಾಪಾರ ಮಾಡುವವನು ವೈಶ್ಯನೇ ಆಗಿರುತ್ತಾನೆ. ವ್ಯವಸಾಯ ಮತ್ತಿತರ ಶ್ರಮದಾಯಕ ಕೆಲಸಗಳನ್ನು ಶೂದ್ರರು ಮಾಡಿದರೆ ಹೆಣಹೊರುವ, ಮಲ ಎತ್ತುವ, ಮೆಟ್ಟು ಹೆಣೆಯುವ, ಅಪರಾಧಿಗಳನ್ನು ವಧಿಸುವ, ಕೆಲಸಗಳನ್ನು ಮಾಡುವವರು ಚಂಡಾಲರು ಮತ್ತು ಹೊಲೆಯರು ಆಗಿರುತ್ತಾರೆ. ವ್ಯಕ್ತಿಗಳನ್ನು ಆಯಾ ಜಾತಿ ಮತ್ತು ವೃತ್ತಿಗಳಿಂದ ಸಂಬೋಧಿಸಲಾಗುತ್ತದೆ. ಜೋಯಿಸ, ಅಗಸ, ಅಕ್ಕಸಾಲಿ, ಚಮ್ಮಾರ, ಕುಂಬಾರ, ಬಡಿಗಾರ ಇತ್ಯಾದಿ ವೃತ್ತಿ ಪಂಗಡಗಳಿದ್ದು ಆಯಾ ಗುಂಪಿನ ಕೆಲಸಗಳನ್ನು ಅವರವರೇ ನಡೆಸಬೇಕಾದ ನಿರ್ಬಂಧವಿತ್ತು. ಸಾಮಾಜಿಕ ಲಾವಣಿಗಳಲ್ಲಂತೂ ಗೌಡ ಮತ್ತು ಜೋಯಿಸರಿಗೆ ವಿಶೇಷ ಮನ್ನಣೆ ಇರುತ್ತಿದ್ದುದು ತಿಳಿಯುತ್ತದೆ. ಜನಪದರಿಗೆ ವರ್ಗದ ಕುರಿತು ಸ್ಪಷ್ಟ ಪರಿಕಲ್ಪನೆ ಇಲ್ಲದಿದ್ದರೂ ಭಾಗಶಃ ಸಂದರ್ಭಗಳಲ್ಲಿ ಜನಪದರು ಜಾತಿತಾರತಮ್ಯವನ್ನು, ವರ್ಗತಾರತಮ್ಯವನ್ನು, ವರ್ಣತಾರತಮ್ಯವನ್ನು, ಯಥಾವತ್ತಾಗಿ ಒಪ್ಪಿಕೊಂಡು ಬಂದಿದ್ದಾರೆ. ಜನಪದರ ಪ್ರಕಾರ "ಕೆಳಜಾತಿಯ ಗಂಡ ಇಲ್ಲದ ಮಹಿಳೆ ಒಡೆಯನಿಲ್ಲದ ಆಸ್ತಿಯಂತೆ ಸಾರ್ವಜನಿಕರೆಲ್ಲರೂ ಆ ಆಸ್ತಿಯನ್ನು ಬಳಸಿಕೊಳ್ಳಬಹುದು" ಇನ್ನು ಮುಂದುವರೆದು ಹೇಳುವುದಾದರೆ ಈ ಕೆಳ ಜಾತಿಯ ಮಹಿಳೆಯರು ಮದುವೆಯಾಗಲೀ, ಆಗದಿರಲಿ ಸಾರ್ವಜನರಿಗೆ ಸೇರಿದವರು ಎನ್ನುವ ಅಧಿಕಾರ ಭಾವನೆ, ಜಾತಿ ಶ್ರೇಣೀಕರಣ ಸಮಾಜವು ಸೃಷ್ಟಿಸಿದೆ. ಹೀಗಾಗಿ ಕೆಳಜಾತಿಯ ಮಹಿಳೆಯರು ಅದರಲ್ಲೂ ಹಾಡಿಕೆ ಕ್ಷೇತ್ರದಲ್ಲಿರುವ ಮಹಿಳೆಯರು, ಮೇಲ್ಜಾತಿ ಹಾಗೂ ಮಧ್ಯಮ ಜಾತಿಯ ಪುರುಷರಿಂದ ಅಪಮಾನಗಳನ್ನು ಹಾಗೂ ಅಪಾಯಗಳನ್ನು ಎದುರಿಸುವರು.

ಹೀಗೆ ಜನಪದರು ಅಪಮಾನ ಮತ್ತು ಅಪಾಯಗಳನ್ನು ಎದುರಿಸುತ್ತಿದ್ದರೂ, ಅವರ ಪ್ರಕಾರ ಈ ವ್ಯವಸ್ಥೆ ಪ್ರಶ್ನಾತೀತ ವ್ಯವಸ್ಥೆ ಮತ್ತು ದೈವನಿರ್ಮಿತ ವ್ಯವಸ್ಥೆ ಆದ್ದರಿಂದ ಅದನ್ನು ಬದಲಿಸಬೇಕು

ಮತ್ತು ಅದರ ವಿರುದ್ಧ ಧ್ವನಿ ಎತ್ತಬೇಕೆಂಬ ಭಾವನೆ ಅವರಲ್ಲಿ ಮೂಡಿಲ್ಲದೇ ನಡೆದ ಘಟನಾವಳಿಗಳನ್ನು ವ್ಯಥೆಯಿಂದ ಜನಪದ ಸಾಹಿತ್ಯದಲ್ಲಿ ಚಿತ್ರಿಸಿರುವುದನ್ನು ಕಾಣಬಹುದು. ಆದರೂ ಕೆಲವೊಮ್ಮೆ ಸಾಮೂಹಿಕ ಸಂಘಟಾನಾತ್ಮಕ ಪ್ರತಿರೋಧ, ಹೋರಾಟ, ನ್ಯಾಯಯುತ ಹಕ್ಕು ಪಡೆದುಕೊಳ್ಳುವ ಪ್ರಯತ್ನ ನಡೆದಿರುವುದನ್ನು ಜನಪದ ಸಾಹಿತ್ಯದಲ್ಲಿ ನಾವು ಕಾಣಬಹುದು.

ಅಡಿಟಿಪ್ಪಣಿ:

೧. Essay in sociology trans.gerth and mills chap,VII.
೨. The black-coated worker, allen and unwin, 1958.
೩. The black-coated worker, allen and unwin, 1958.
೪. ಸಮಾಜಶಾಸ್ತ್ರ ಕೈಪಿಡಿ,ಮೂಲ: ವಿಲಿಯಂ ಎಫ್.ಆಗ್ಬರ್ನ್, ಮೆಯರ್ ಎಫ್. ನಿಮ್ಕಾಫ್, ಅನು: ಡಿ.ಎಚ್. ಮಲ್ಲಿನಾಥಯ್ಯ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೮೪, ಪು.೫೯೦.
೫. The culture and civilization of ancient Indian in historical outline- page 52.
೬. ಕಮ್ಯುನಿಸ್ಟ್ ಪಾರ್ಟಿ ಪ್ರಣಾಳಿಕೆ, ಅನುವಾದ ಕೆ.ಎಲ್ ಗೋಪಾಲ ಕೃಷ್ಣರಾವ್ ಪುಟ ೪೦ ೧೯೭೮
೭. W.n. kuber 'dr.ambedkar a critical study' 1979 p-28.
೮. Partha chatterjee 'caste and subaltern conciousness' subaltern studies VI (writing on south asian history and sociology) edited by ranjit guha, 1989, p-175).
೯. ಬಾಬಾಸಾಹೇಬ ಅಂಬೇಡ್ಕರ, ಬರಹಗಳು ಮತ್ತು ಭಾಷಣಗಳು, ಸಂ. ೧. ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ೧೯೯೦ ಪು.೧೯).
೧೦. ರಹಮತ್ ತರೀಕೆರೆ, ಕರ್ನಾಟಕದ ಸೂಫಿಗಳು, ೧೯೯೮, ಪು. ೧೨-೧೩.
೧೧. ರಾಜಾರಾಮ ಹೆಗಡೆ, ಬಲಿ-ವಾಮನ-ತ್ರಿವಿಕ್ರಮ, ಅರಿವು ಬರಹ ಸಂ.೧೪, ೧೯೯೮ ಪು.೨೬.
೧೨. Partha chatterjee 'caste and subaltern conciousness' subaltern studies VI edited by ranjit guha, 1989, p-206.
೧೩. ಭಾರತೀಯ ವಿಜ್ಞಾನದ ಹಾದಿ ೧೯೯೭; ಪು. ೧೩೭.
೧೪. 'ನಾಗರಿಕ' ವಾರಪತ್ರಿಕೆ, ಹೊನ್ನಾವರ, ದಿ: ೧೦.೯.೨೦೦೧.
೧೫. ಉದಾರಣೆ: ಪ್ರೊ. ಪ್ರಭಾಕರ್ ಶಿಶಿಲ್, ಆರ್ಥಿಕ ಚಿಂತನಧಾರೆ ೧೯೮೯, ಮೂರನೇ ಭಾಗ ೫೧
೧೬. ಡಾ. ಅಂಬೇಡ್ಕರ್ ಅಕ್ರಿಟಿಕಲ್ ಸ್ಟಡಿ-ಡಬ್ಲ್ಯೂ.ಸ್. ಕುಬೇರ ೧೯೭೯: ಪುಟ ೫೬
೧೭. ಉದ್ಧರಣೆ: ವರ್ಣದಿಂದ ವರ್ಗದಕಡೆಗೆ, ಆರ್.ವಿ. ಭಂಡಾರಿ,೨೦೦೩,ಪು.೧೬೭
೧೮. ಉದ್ಧರಣೆ: ವರ್ಣದಿಂದ ವರ್ಗದಕಡೆಗೆ, ಆರ್.ವಿ. ಭಂಡಾರಿ,೨೦೦೩,ಪು.೧೬೭
೧೯. The culture and civilization of ancient India in historical outline, ಏಳನೇ ಮುದ್ರಣ, ಪು.50.
೨೦. ಉದ್ಧರಣ: ಗಾಂಧಿ, ಅಂಬೇಡ್ಕರ್ ಅಂಡ್ ದ ಎಕ್ಸ್‌ಟ್ಯಾರ್ಸೇಶನ್ ಆಫ್ ಅನ್‌ಟಚಬಲಿಟಿ- ಹಿರೇಂದ್ರ ಮುಖರ್ಜಿ ೧೯೮೮-ಪು.೨೫.
೨೧. ಕಾರ್ಲ್‌ಮಾರ್ಕ್ಸ್ ಜೀವನಚರಿತ್ರೆ, ಪ್ರಗತಿ ಪ್ರಕಾಶನ, ಮಾಸ್ಕೋ, (ಇಂಗ್ಲಿಷ್) ಪು-೨೦.
೨೨. ಕಾರ್ಲ್‌ಮಾರ್ಕ್ಸ್ ಜೀವನಚರಿತ್ರೆ, ಪಿ.ಪಿ.ಹೆಚ್. ಪುಟ-೬೨.
೨೩. ಲೀಗ್ ಆಫ್ ಕಮ್ಯೂನಿಷ್ಟನ ನಿಯಮಾವಳಿಗಳು, ಮಾರ್ಕ್ಸ್ ಮತ್ತು ಎಂಗೆಲ್ಸ್ ಕೃತಿಗಳು, ಜರ್ಮನ್-ಸಂಪುಟ ೪, ಪುಟ-೫೯೬.
೨೪. ವಚನ ಕಮ್ಮಟ, ಪ್ರಸಾರಾಂಗ, ಪ್ರೊ. ಕೆ. ಮರುಳಸಿದ್ದಪ್ಪ, ಪ್ರೊ. ಕಿ.ರಂ. ನಾಗರಾಜ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೯೫.

ಅಧ್ಯಾಯ ೩

ಲಾವಣಿ ಮತ್ತು ಕಥನಗೀತೆಗಳಲ್ಲಿ ವರ್ಗಸಂಘರ್ಷ

ಅಧ್ಯಾಯ ೩

ಲಾವಣಿ ಮತ್ತು ಕಥನ ಗೀತೆಗಳಲ್ಲಿ ವರ್ಗಸಂಘರ್ಷ

೩.೧ ಐತಿಹಾಸಿಕ ಲಾವಣಿಗಳಲ್ಲಿ ವರ್ಗಸಂಘರ್ಷ:

ಲಾವಣಿ:

ಜನಪದ ಸಾಹಿತ್ಯದಲ್ಲಿ ವಯೋಮಾನದ ದೃಷ್ಟಿಯಿಂದ ನೋಡಿದರೆ ಜಾನಪದದ ಸಾಹಿತ್ಯಿಕ ಕುಟುಂಬದ ಕಿರಿಯ ಕೂಸು ಲಾವಣಿ. ಮೊದಲು ಜನಪದಗೀತೆ, ಅನಂತರ ಕ್ರಮವಾಗಿ ಕಥೆ, ಆಮೇಲೆ ಕಥನಕಾವ್ಯ ಹುಟ್ಟಿರಬೇಕೆಂದು ಊಹಿಸಬಹುದು. ಕನ್ನಡ ಜಾಯಮಾನಕ್ಕೆ 'ಲಾವಣಿ' ಪದ ಹೊಸದೇನೂ ಅಲ್ಲ. ಐತಿಹಾಸಿಕ ಲಾವಣಿಗಳಾದ ಸರ್ಜಪ್ಪ ನಾಯಕ, ಪಿರಿಯಾಪಟ್ಟಣದ ಲಾವಣಿಗಳಲ್ಲಿ 'ಲಾವಣಿ ಎಂಬ ಹೆಸರೇ ಬಳಸಲ್ಪಟ್ಟಿದೆ. 'ಪಿರಿಯಾಪಟ್ಟಣದ ಲಾವಣಿ ಹೇಳತೀನಿ ಕೇಳಿ ಮಾಸಭೆಯೆಲ್ಲ' ಎಂದೇ ಶುರುವಾಗುತ್ತದೆ. ೧೯೨೪ರ ಹೊತ್ತಿಗೆ 'ಕನ್ನಡ ನಾಡಿನ ಲಾವಣಿಸಾಂಗತ್ಯಗಳು' ಎಂಬ ಅಮೂಲ್ಯ ಲೇಖನವನ್ನು ಡಾ. ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರು ಪ್ರಕಟಿಸಿದ್ದಾರೆ.

ಕರ್ನಾಟಕ ಜನಪದ ಸಾಹಿತ್ಯದ ತವರು ಶ್ರೀಮಂತ ನೆಲೆಯಾಗಿರುವುದರಿಂದ ಉಳಿದ ಜನಪದ ಸಾಹಿತ್ಯ ಪ್ರಕಾರಗಳೆಂತೊ ಅಂತೆ ಲಾವಣಿಗಳೂ ಹೇರಳವಾಗಿ ದೊರೆಯುತ್ತವೆ. ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ಲಾವಣಿಗಳಲ್ಲಿ ಪ್ರಾದೇಶಿಕವಾದ ಭಿನ್ನರೂಪಗಳು ಸಿಗುತ್ತವೆ. ಹಾಗೆಂದ ಮಾತ್ರಕ್ಕೆ ಅವು ಬೇರೆ ಬೇರೆ ಎಂದು ಬಗೆಯಬೇಕಾದ ಅಗತ್ಯವಿಲ್ಲ. ಅವುಗಳನ್ನು ಬೆಸೆಯುವಂತಹ ಹಲವು ಸಮಾನ ಗುಣಲಕ್ಷಣಗಳನ್ನುಳ್ಳ ಒಂದು ಅಂತಃಸೂತ್ರ ಇದೆ. ಹಾಗಾಗಿ ಅವೆರಡೂ ಒಂದೇ ಸಂಸ್ಕೃತಿಯ ಕೊಡುಗೆಗಳು ಎಂಬುದನ್ನು ಮರೆಯುವಂತಿಲ್ಲ.

ಜಾನಪದ ಅಧ್ಯಯನವನ್ನು ಕನ್ನಡದಲ್ಲಿ ಪ್ರಾರಂಭಿಸಿದ ಡಾ. ಹಾ.ಮಾ.ನಾಯಕರು "ವಾಕ್ ಉಳಿದು ಬಂದ ಈ ಪ್ರಕಾರಗಳಲ್ಲಿ ಗೀತಗಳು ಮತ್ತು ಲಾವಣಿಗಳು ಬಹುಮುಖ್ಯವಾದ ವಿಭಾಗಗಳು. ಮೊದಲನೆಯದು ಭಾವಗೀತೆ ಸ್ವರೂಪದ್ದು, ಎರಡನೆಯದು ಕಥನ ನಿರೂಪಣೆಯದು" ಎಂದು ಹೇಳಿ ಜಾನಪದ ಕ್ಷೇತ್ರದ ಆರಂಭದ ವಿದ್ವಾಂಸರಾದ ಗ್ರಿಮ್ ಮೊದಲಾದವರು ಜನಪದ ಗೀತೆ, 'ಲಾವಣಿ ಇವುಗಳ ಅಂತರವನ್ನು ಸ್ಪಷ್ಟಪಡಿಸದೆ ಹೋದುದರಿಂದ ಸಾಕಷ್ಟು ಗೊಂದಲಕ್ಕೆ ಕಾರಣವಾಗಿದೆ. ಆದ್ದರಿಂದ ಲಾವಣಿಯನ್ನು 'Ballad' ಅರ್ಥದಲ್ಲಿ ಉಪಯೋಗಿಸಿದೆ"[೧] ಎಂದಿದ್ದಾರೆ.

ಡಾ. ಜೀ.ಶಂ.ಪರಮಶಿವಯ್ಯನವರು 'Ballad' ಎಂಬ ಮಾತಿಗೆ ಸಂವಾದಿಯಾಗಿ ಈಗಾಗಲೇ ಕನ್ನಡದಲ್ಲಿ ಬಳಕೆಗೆ ಬಂದಿರುವ 'ಲಾವಣಿ' ಎಂಬ ಮಾತನ್ನು ಕಂಠಸ್ಥ ಸಂಪ್ರದಾಯದ ಎಲ್ಲ ಹಾಡಿನ ರೂಪದ ಕಥೆಗಳಿಗೂ ಅನ್ವಯಿಸಬಹುದಾಗಿದೆ. ಅಡಕವಾದ ಔಚಿತ್ಯ ಪೂರ್ಣವಾದ ಈ ಹೆಸರಿನ ಕೆಳಗೆ ಹಾಡ್ಗತೆಗಳನ್ನು ಗುರುತಿಸಿಕೊಂಡು ಅತ್ಯಂತ ವಿಸ್ತಾರವಾದ ಖಂಡಕಾವ್ಯ ವ್ಯಾಪ್ತಿಯ ರಚನೆಗಳನ್ನು ಜನಪದಕಾವ್ಯಗಳೆಂದು ಕರೆಯಬಹುದು"[೨] ಎಂಬ ಅಮೂಲ್ಯ ಸೂಚನೆ ಕೊಟ್ಟಿದ್ದಾರೆ.

ಜ್ಯೋತಿ ಹೊಸೂರ ಅವರು ಕಥೆಗಳನ್ನುಳ್ಳ ಎಲ್ಲ ಹಾಡುಗಳನ್ನು ಲಾವಣಿಗಳೆಂದು ಕರೆಯುವುದರ ಬಗ್ಗೆ ತಮ್ಮ ಆಕ್ಷೇಪವನ್ನು ಎತ್ತಿದ್ದಾರೆ. ಮುಖ್ಯವಾಗಿ ಕೆ.ಮರುಳಸಿದ್ದಪ್ಪನವರು ಸಂಪಾದಿಸಿರುವ 'ಲಾವಣಿಗಳು' ಸಂಕಲನದ ಪ್ರಸ್ತಾಪನೆಯನ್ನು ಕುರಿತದ್ದು. ಆ ಆಕ್ಷೇಪ 'ಈ ವಿದ್ವಾಂಸರ ಪ್ರಕಾರ ಕಥೆಯನ್ನುಳ್ಳ ಗೀತೆಗಳೆಲ್ಲ ಕಡ್ಡಾಯವಾಗಿ ಲಾವಣಿಗಳು ಇಂಗ್ಲೀಷ್‌ನ 'Ballad' ಎಂಬುದಕ್ಕೆ ಕನ್ನಡದ ಲಾವಣಿ ಎಂಬುದಕ್ಕೆ ಸಂವಾದಿ ಪದವೆಂದು ಭಾವಿಸಿದುದೇ ಇದಕ್ಕೆ ಕಾರಣವೆಂದು ಅವರ ವಿವರಣೆಯಿಂದ ತಿಳಿಯಬಹುದಾಗಿದೆ. ಕನ್ನಡ ಜನಪದರಲ್ಲಿ ಬಳಕೆಗೊಳ್ಳುವ ಲಾವಣಿ ಪದದ ಪ್ರಸಂಗವನ್ನು ವಿವರವಾಗಿ ಅರಿತರೆ ಶ್ರೀಯುತರ ಅಭಿಪ್ರಾಯಗಳು ಸರಿಯಲ್ಲವೆಂಬುದು ಗೊತ್ತಾಗುವುದು. ಇಂಗ್ಲೀಷಿನ 'Ballad' ಎಂಬುದು ಕನ್ನಡ ಲಾವಣಿಯನ್ನು ಹೋಲಬಹುದೇ ಹೊರತು ಅವೆರಡೂ ಎಲ್ಲಂದರಲ್ಲಿ ಒಂದೇಯಾಗಲಾರವು. ಅವೆರಡೂ ಬೆಳೆದು ಬಂದ ಪ್ರದೇಶ ಅಲ್ಲಿಯ ಜನರ ಸಂಸ್ಕೃತಿ ಮತ್ತು ಅವುಗಳನ್ನು ಹಾಡುವ ಪ್ರಸಂಗ ಇತ್ಯಾದಿಗಳು ಬೇರೆ ಬೇರೆಯಾಗಿರುವಾಗ ಅವುಗಳನ್ನು ಒಂದುಗೂಡಿಸುವುದು ಉಚಿತವಾಗಲಾರದು. ಲಾವಣಿಗಳನ್ನು ಕನ್ನಡ ಜನಪದ (FOLK) ಪರಂಪರೆಯಲ್ಲಿ ಅದು ಬಳಕೆಗೊಳ್ಳುವ ಹಿನ್ನೆಲೆಯಲ್ಲಿ ಅಭ್ಯಸಿಸುವುದು ಸೂಕ್ತ'[೩] ಎಂದಿದ್ದಾರೆ.

ಡಾ. ಬೆಟಗೇರಿ ಕೃಷ್ಣಶರ್ಮರು 'ಜಾನಪದ ಸಾಹಿತ್ಯ ಸಂಶೋಧಕರೆನ್ನಿಸಿಕೊಳ್ಳುವ ಕೆಲವು ವಿದ್ವಾಂಸರು, ಲಾವಣಿ ಸಾಹಿತ್ಯದ ಸ್ವರೂಪ ವಾಸ್ತವ ಚರಿತ್ರೆಗಳನ್ನರಿಯದೆ ತ್ರಿಪದಿ ಸಾಹಿತ್ಯವನ್ನೇ ಲಾವಣಿ'ಯೆಂದು ಹೆಸರಿಟ್ಟು ಪ್ರಕಟಿದ್ದಾರೆ. ಅವರು ವಸ್ತು ಸ್ಥಿತಿಯನ್ನು ಅರಿತುಕೊಂಡು ತಮ್ಮ ಸಂಶೋಧನಾ ಕಾರ್ಯವನ್ನು ಮಾಡಿದರೆ ಚೆನ್ನು, ಇಲ್ಲವಾದರೆ ಜನಪದ ಸಾಹಿತ್ಯ ಕುತೂಹಲಗಳನ್ನು ಜನಪದ ಸಾಹಿತ್ಯ ಕುತೂಹಲಗಳನ್ನು ಸಂದಿಗ್ಧ ಸತ್ಯದ ದಾರಿಯನ್ನು ಹಿಡಿಸಿದ ಅಪರಾಧಕ್ಕೆ ಪಾತ್ರರಾದಂತಾಯಿತು"[೪] ಎಂದು ಎಚ್ಚರಿಸಿದ್ದಾರೆ.

ಬಿ.ಬಿ. ಮಹೇಶವಾಡಿಯವರು "ಲಾವಣಿ ಎಂದರೆ ಒಟ್ಟಿನ ಮೇಲೆ ಒಂದು ವಿಶಿಷ್ಟ ಪದ್ಧತಿಯ ಹಾಡುಗಾರಿಕೆಯಿಂದ ಕೂಡಿದ ಕಥನಕಾವ್ಯ ಮತ್ತು ಲಾವಣಿ ಒಂದೇ ಅಲ್ಲ. ಜಾನಪದ ಹಾಡುಗಾರಿಕೆಯಲ್ಲಿ ಲಾವಣಿಗೆ ಒಂದು ಅನ್ಯತ್ರವಾದ ವೈಶಿಷ್ಟ್ಯವಿದೆ. ಸೂಕ್ಷ್ಮವಾಗಿ ವಿಚಾರ ಮಾಡಿ ನೋಡಿದರೆ 'ಲಾವಣಿ' ಲಾವಣಿಯೇ ಆಗಿದೆ. ಅದು ಅದ್ವಿತೀಯವಾಗಿದೆ. ಕಥನಕಾವ್ಯ ಮತ್ತು ಲಾವಣಿ ಎರಡಕ್ಕೂ ಕಥೆ ಸಾಮಾನ್ಯವಾದರೂ ಹಾಡುಗಾರಿಕೆಯ ಕಲೆಯಲ್ಲಿ ಎರಡೂ ಭಿನ್ನವಾಗಿದೆ. ಲಾವಣಿಯ ಜೀವಾಳವೇ ಅದರ ಹಾಡುಗಾರಿಕೆಯ ಕಲೆಯಲ್ಲಿ ಅಡಕವಾಗಿದೆ"[೫] ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಡಾ.ಎಲ್.ಆರ್. ಹೆಗಡೆಯವರು "ಬೈಲುಸೀಮೆಯ ಲಾವಣಿಗಳು ಕನ್ನಡ ಜಾನಪದ ಜೀವನದಲ್ಲಿ ಹೆಣ್ಣಿನ ಗಂಡಸರ ಹಾಡುಗಳೆಂದೇ ಪ್ರಖ್ಯಾತವಾಗಿವೆ. ಗಂಡಿನ ಪಕ್ಷಕ್ಕೆ ನಿಂತು ಹಾಡುವ ಲಾವಣಿ (ನಾಗೇಶಿ) ತುರಾಯಿ, ಕಲ್ಕಿ, ಎಂಬ ಹೆಸರುಗಳೂ ಉಂಟು. (ದಪ್ಪು+ತಿಂತಿಣಿ) ಸಹಿತವಾದ ಲಾವಣಿಗಳು ಅದಿಲ್ಲದೆ ಬಯಲು ಲಾವಣಿಗಳೂ ಉಂಟು. ಈ ಲಾವಣಿಗಳಲ್ಲಿ ಮುಖ್ಯವಾಗಿ ಶೃಂಗಾರ ರಸದ ಲಾವಣಿಗಳಿದ್ದರೂ ಬೇರೆ ಕಥನಗಳುಳ್ಳ ಲಾವಣಿಗಳೂ ಉಂಟು. ಅದರಿಂದ ಬೈಲುಸೀಮೆಯ ಭಾಷೆಯನ್ನು ಉತ್ಸಾಹದ ಗತ್ತಿನಲ್ಲಿ ಅನುಪ್ರಾಸ, ಅಂತ್ಯಪ್ರಾಸಗಳಿಂದ ಸಹಿತವಾಗಿ ಕುಣಿವ ಮಣಿವ ಗತ್ತಿನ ಪಲುಕು–ಮಲಕಿನ ಪದವೇ ನಮ್ಮ ಲಾವಣಿ"[೬] ಎಂದು ಹೇಳಬಹುದು ಎಂದಿದ್ದಾರೆ.

ಇಂದು ಕೆಲವರು ಕಥನಕವನ ಎಂಬರ್ಥದಲ್ಲಿ ಬಳಸುವ ಇಂಗ್ಲೀಷ್ ಬ್ಯಾಲೆಡ್‌ನ ಮಾದರಿಯಲ್ಲಿ ಕನ್ನಡದ ಲಾವಣಿಗಳು ಎಂದು ಹೇಳುವಲ್ಲಿ ಹುರುಳಿಲ್ಲ. ಎಷ್ಟೇ ಲಾವಣಿಗಳು ಕಥೆ ಇಲ್ಲದೆಯೂ ಕೇವಲ ತತ್ವ, ನೀತಿ ಇಲ್ಲವೇ ವರ್ಣನೆಗಳಿಂದ ಕೂಡಿಕೊಂಡು ರಚಿತವಾಗಿವೆ. ಲಾವಣಿಯ ಮುಖ್ಯ ಗುರಿ ಅದರ ಹಾಡುಗಾರಿಕೆಯಲ್ಲಿದೆಯೇ ಹೊರತು ಕಥೆಯಲ್ಲಿ ಅಲ್ಲ. ಆದ್ದರಿಂದ ಇಂಗ್ಲೀಷ್‌ನ ಬ್ಯಾಲೆಡ್ ಮತ್ತು ಲಾವಣಿ ಬೇರೆ ಬೇರೆ ಎಂದು ಹೇಳಬಹುದು.[೭] ಎಂಬ ಅಭಿಪ್ರಾಯವನ್ನು ಡಾ.ಎಮ್.ಎಸ್.ಲಠ್ಠೆಯವರು ವ್ಯಕ್ತಪಡಿಸುತ್ತಾರೆ.

'Ballad'ಗೆ ಲಾವಣಿ ಪದ ಪ್ರಯೋಗಿಸುವ ಹಟ ಬಿಟ್ಟುಬಿಡುವುದು ಉತ್ತಮವೆಂದು ತೋರುತ್ತದೆ. ಬದಲಾಗಿ 'Ballad'ಗಳನ್ನು ಕಥನಕವನ, ಗೀತಕವನ, ಕಥಾನಕ, ಕಥನಕಾವ್ಯ, ಮುಂತಾದ ಹೆಸರುಗಳಲ್ಲಿ ಒಂದಕ್ಕೆ ಸಂವಾದಿಯಾಗಿ ಇಟ್ಟುಕೊಳ್ಳಬಹುದಾಗಿದೆ. ಇದರಿಂದ ಹಾಡ್ಗತೆಗಳೆಂದು ನಮ್ಮವರು ಹಿಂದಿನಿಂದ ಕರೆಯುತ್ತ ಬಂದ ಹೆಸರನ್ನು ಉಳಿಸಿಕೊಂಡಂತಾಗುತ್ತದೆ. ಅಲ್ಲದೆ, ಲಾವಣಿಯನ್ನು ಅದರ ಪಾಡಿಗೆ ಬಿಟ್ಟುಕೊಟ್ಟಂತಾಗಿ 'Ballad'ಗೆ ಸಮನಾದ ಅಲ್ಲದಿದ್ದರೂ ಹೆಚ್ಚು ಸಮಂಜಸವನಿಸುವ ಸಂವಾದಿ ಪದವೊಂದನ್ನು ಕಂಡುಕೊಂಡಂತಾಗುತ್ತದೆ"[೮] ಯೆಂಬುದು ವೀರಣ್ಣದಂಡೆಯವರ ಅಭಿಪ್ರಾಯ ಡಾ.ಸಂಗಮೇಶ ಬಿರಾದರ ಅವರು ಹೆಚ್ಚೂ ಕಡಿಮೆ ಇದೇ ಅಭಿಪ್ರಾಯವುಳ್ಳವರಾಗಿದ್ದಾರೆ.[೯]

ಡಾ.ಸಿ.ಪಿ.ಕೆ.ಯವರು "ಲಾವಣಿಗಳೆಲ್ಲ ಕಥನಗೀತೆಗಳು ನಿಜ, ಆದರೆ ಕಥನಗೀತೆಗಳೆಲ್ಲ ಲಾವಣಿಗಳಲ್ಲ. ಸರಳವಾದ ಸಣ್ಣಪುಟ್ಟ ಕಥನಗೀತೆಗಳು 'ಕತೆ ಹೇಳುತ್ತೇನೆ' ಎಂಬುದನ್ನು ಬಿಟ್ಟರೆ ಉಳಿದೆಲ್ಲ ಲಕ್ಷಣಗಳಲ್ಲಿ ಗೀತೆಗಳನ್ನೇ ಹೋಲುತ್ತವೆ. ಇವುಗಳದೇ ಒಂದು ಗುಂಪು. ಆದರೆ ಸುದೀರ್ಘವೂ ಕೆಲವು ವಿಶಿಷ್ಟ ಲಕ್ಷಣಗಳುಳ್ಳವೂ ಆದ ಕಥನಗೀತೆಗಳನ್ನು ಲಾವಣಿಗಳು (Ballad) ಎಂದು ಹೆಸರಿಸಿ ಒಂದು ಪ್ರತ್ಯೇಕ ಗುಂಪನ್ನಾಗಿಯೇ ಪರಿಗಣಿಸಬೇಕು ಎಂಬ ನಿಲುವಿಗೆ ಬಂದಿದ್ದಾರೆ"[೧೦] ಡಾ..ಸಿ.ಪಿ.ಕೆಯವರ ಈ ನಿಲುವು ಸರಿಯಾಗಿಯೇ ಇದೆ ಎಂದೆನ್ನಿಸುತ್ತದೆ. ಏಕೆಂದರೆ ಕಥನಗೀತೆಗಳಲ್ಲಿ ಹೆಚ್ಚು ಗಾತ್ರದಲ್ಲಿ ಸಣ್ಣದಿರುತ್ತವೆ. ಲಾವಣಿಗಳು ಗಾತ್ರದಲ್ಲಿ ಹೆಚ್ಚು ಸುದೀರ್ಘವಾಗಿರುತ್ತವೆ.

ಡಾ.ದೇ.ಜವರೇಗೌಡರು ತಮ್ಮ "ಜಾನಪದ ಅಧ್ಯಯನ" ಗ್ರಂಥದಲ್ಲಿ 'ಜನಪದ ಕಥನಕಾವ್ಯ' ಎಂಬ ತಲೆಕಟ್ಟು ಕೊಟ್ಟು ಅದರಲ್ಲಿ ಲಾವಣಿ (ನೀಳ್ಗವನ) ಖಂಡಕಾವ್ಯ ಮತ್ತು ಮಹಾಕಾವ್ಯ ಎಂಬ ವಿಭಾಗ ಕಲ್ಪಿಸಿಕೊಂಡಿದ್ದಾರೆ. ಈ ಚೌಕಟ್ಟಿನಲ್ಲಿ ಸಮಗ್ರ ಕಥನಕಾವ್ಯವನ್ನು ಅಳವಡಿಸಲು ಸಾಧ್ಯವಾಗುತ್ತದೆ ಎನ್ನುತ್ತಾರೆ. ಅವರು ಮುಂದುವರಿದು "ಉತ್ತರ ಕರ್ನಾಟಕದಲ್ಲಿ ಲಾವಣಿ ಎಂಬುದು ಒಂದು ವಿಶಿಷ್ಟ ಪ್ರಕಾರ ನಿಜ. ಮಹಾರಾಷ್ಟ್ರದಲ್ಲಿ ಉತ್ತರ ಪೇಶವಾಯಿ ಕಾಲದಲ್ಲಿ ಮೊಟ್ಟಮೊದಲಿಗೆ ಬಳಕೆಯಲ್ಲಿ ಬಂದ ಪದ 'ಲಾವಣಿ' ಶೃಂಗಾರಪ್ರಧಾನವಾದುದು ಲಾವಣಿಯೆಂದೂ, ವೀರರಸ ಪ್ರಧಾನವಾದುದು ಪೋವಾಡಾ (ಪವಾಡ) ಎಂದೂ ಅಲ್ಲಿ ರೂಢಿ ಮರಾಠಿ ಸಂಪರ್ಕದಿಂದಾಗಿ ಪ್ರಾಯಶ: ಉತ್ತರ ಕನ್ನಡದಲ್ಲಿ ಆ ಪದ ಮೊದಲು ಚಾಲ್ತಿಯಲ್ಲಿ ಬಂದಿರಬೇಕು. ಗೀಗೀಪದ, ಕಲ್ಕಿ ತುರಾಯಿಗಳಿಗೆ ಅದು ಆಗ ಅನ್ವಯವಾಗಿದ್ದಿರಬೇಕು. ಆ ಪದ ದಕ್ಷಿಣ ಕರ್ನಾಟಕಕ್ಕೆ ಬಂದಾಗ ವೀರಗೀತೆಗಳಿಗೆ ಸಂಗೊಳಿಸಿರಬೇಕು. ಹೊರಗಿನಿಂದ ಬಂದ ಪದ ಒಂದೇ ಭಾಷೆಯಲ್ಲಿ ಬೇರೆ ಬೇರೆ ಕಡೆ ಭಿನ್ನಾರ್ಥದಲ್ಲಿ ಬಳಕೆಯಾಗುವುದು ವಿಚಿತ್ರವೇನಲ್ಲ. ಎರಡು ಜಾತಿಗಳಲ್ಲೂ ಕಥೆ ಮತ್ತು ಗೇಯತೆ ವಿಶಿಷ್ಟ ಲಕ್ಷಣಗಳಾದ್ದರಿಂದ 'ಲಾವಣಿ' ಎನ್ನುವ ಪದವನ್ನು ಕಥನಗೀತೆಗಳಿಗೆ ಅನ್ವಯಿಸುವುದರಲ್ಲಿ ತಪ್ಪೇನಿಲ್ಲ..... ಆದ್ದರಿಂದ ಈ ಪದವನ್ನು ಕಥನಗೀತೆಗಳಿಗೆ ಅನ್ವಯಿಸಬಹುದಾದರೂ, ಗೊಂದಲ ಕಡಿಮೆ ಮಾಡುವ ದೃಷ್ಟಿಯಿಂದ ಅದನ್ನು ಸೀಮಿತಗೊಳಿಸುವುದು ಮೇಲೆಂದು ತೋರುತ್ತದೆ. ಕನ್ನಡದಲ್ಲಿ ರೂಢಿಯಲ್ಲಿರುವ ನಾನಾವಿಧದ ಕಥನಕಾವ್ಯ ಜಾತಿಗಳಿಗೆ ಬ್ಯಾಲೆಡ್ ಲಕ್ಷಣಗಳನ್ನು ಅನ್ವಯಿಸಲಾಗದು. ಮಾದೇಶ್ವರಕಾವ್ಯವನ್ನಾಗಲೀ, ಗುಣ ಸಾಗರೀಕವನವನ್ನಾಗಲೀ, ಬ್ಯಾಲೆಡ್ ಎಂದು ಕರೆಯುವುದು ತಪ್ಪು. ಆದ್ದರಿಂದ ಬಹು ತೃಪ್ತಿಕರವಲ್ಲದಿದ್ದರೂ ಸದ್ಯಕ್ಕೆ ಬ್ಯಾಲೆಡ್ ಎಂಬ ಪದಕ್ಕೆ ಸಂವಾದಿಯಾಗಿ 'ಲಾವಣಿ' [೧೧] ಎಂದಿಟ್ಟುಕೊಳ್ಳಬಹುದಾಗಿದೆ ಎಂದಿದ್ದಾರೆ.

ಇಂಗ್ಲೀಷ್ ಬ್ಯಾಲೆಡ್‌ನ ಎಲ್ಲ ಲಕ್ಷಣಗಳನ್ನು ಕನ್ನಡ ಕಥನಗೀತೆಗಳಲ್ಲಿ ಗುರುತಿಸಿಕೊಳ್ಳಲು ಸಾಧ್ಯವಿಲ್ಲ. ನಮ್ಮ ನೆಲದ ಮನೋಧರ್ಮ, ಜೀವನರೀತಿ, ನಂಬಿಕೆಗಳ ಹಿನ್ನಲೆಯಲ್ಲಿ ಪಾಶ್ಚಾತ್ಯರ ಬ್ಯಾಲೆಡ್ಡಿನ ಲಕ್ಷಣಗಳನ್ನು ಗಮನದಲ್ಲಿರಿಸಿಕೊಂಡು ಕನ್ನಡ ಲಾವಣಿಗಳ ಲಕ್ಷಣಗಳನ್ನು ತಂದುಕೊಳ್ಳಬೇಕಾಗುತ್ತದೆ. ಉದಾ: ಆಕ್ಸ್‌ಫರ್ಡ್ ನಿಘಂಟು ಬ್ಯಾಲೆಡ್‌ಗಳ ಗುಣನಿರ್ದೇಶನದಲ್ಲಿ 'A

simple spirited poem in short stanzas........' ಎಂಬಿತ್ಯಾದಿಯಾಗಿ ಹೇಳಿದೆ. ಆದರೆ ಪಾಶ್ಚಾತ್ಯ ಬ್ಯಾಲೆಡ್‌ಗಳಿಗೆ ಅನ್ವಯಿಸಿ ಹೇಳಿದ ಈ ಮಾತು ಜಗತ್ತಿನ ಎಲ್ಲ ಲಾವಣಿಗಳಿಗೆ ಅನ್ವಯಿಸುತ್ತದೆಂದೇನೂ ಇಲ್ಲ. ಈ ನಿಯಮವನ್ನು ದೀರ್ಘವೂ, ಸಂಕೀರ್ಣವೂ ಆದ ಸ್ಪೈನ್ ದೇಶದ ಲಾವಣಿಗಳೇ ಮೀರುತ್ತವೆ. ಅದು ಚಿಕ್ಕ ಚಿಕ್ಕ ಪದ್ಯಗಳಲ್ಲಿ ರಚಿತವಾದ ಸರಳ ಕವಿತೆಯೇ ಆಗಿರಬೇಕಿಲ್ಲ. ಬಂಗಾಳ, ಅಸ್ಸಾಂ, ಕರ್ನಾಟಕ, ಇತ್ಯಾದಿಗಳಲ್ಲಿ ದೊರಕಿರುವ ಲಾವಣಿಗಳು ದೀರ್ಘವೂ, ಮತ್ತು ಸಂಕೀರ್ಣವೂ ಆಗಿರುವುದಕ್ಕೆ ಸಾಕಷ್ಟು ನಿದರ್ಶನಗಳಿವೆ. ಹಾಗೆಯೇ ಬ್ಯಾಲೆಡ್‌ಗಳು ಪದ್ಯಖಂಡ (stanzaic) ಗಳನ್ನುಳ್ಳವು ಎಂಬ ಲಕ್ಷಣವು ಸಾರ್ವತ್ರಿಕವಾದ ನಿಯಮವಾಗಿರಬೇಕಾಗಿಲ್ಲ. 'Ballad'ನ ಸರ್ವಲಕ್ಷಣಗಳನ್ನು ಕನ್ನಡ ಲಾವಣಿಗಳಿಗೆ ಹೊಂದಿಸುವ ಅಥವಾ ಹೊಂದಿಸಲೇಬೇಕೆಂಬ ದೀಕ್ಷೆಯನ್ನು ಯಾರೂ ಹೊಂದಿಲ್ಲ. ಮುಖ್ಯವಾಗಿ ಇಲ್ಲಿ ಎದ್ದಿರುವ ಪ್ರಶ್ನೆ ಲಾವಣಿ ಎನ್ನುವ ಪದವನ್ನು ಕಥನಗೀತೆಗಳಿಗೆ ಅನ್ವಯಿಸಬೇಕೆ? ಬೇಡವೇ? ಎಂಬುದು. ಉತ್ತರ ಕರ್ನಾಟಕದಲ್ಲಿ ಲಾವಣಿ ಎಂಬುದು ಒಂದು ವಿಶಿಷ್ಟ ಕಥನ ರೂಪ ಎಂಬುದನ್ನು ಹಲವಾರು ವಿದ್ವಾಂಸರು ತಮ್ಮ ತಮ್ಮ ಲೇಖನಗಳಲ್ಲಿ ತೋರಿಸಿಕೊಟ್ಟಿದ್ದಾರೆ. ಬ್ಯಾಲೆಡ್‌ನ ಒಂದು ಪ್ರಭೇದವಾಗಿರುವ ಲಾವಣಿ ಹೆಸರನ್ನು ಸಮಗ್ರ ಸಂಪ್ರದಾಯಕ್ಕೆ ಅನ್ವಯಿಸುವುದು ತಪ್ಪು ಎಂಬುದು ಅವರ ಆಕ್ಷೇಪ. ಅಂದ ಮಾತ್ರಕ್ಕೆ ಹೆಚ್ಚು ಅಡಕವೂ, ಕನ್ನಡ ಜಾಯಮಾನಕ್ಕೆ ಲಗತ್ತಾಗಿರುವ (ಕೆಲವು ಐತಿಹಾಸಿಕ ರಚನೆಗಳಾದ ಪಿರಿಯಾಪಟ್ಟಣದ ಲಾವಣಿ, ಸರ್ಜಪ್ಪನಾಯಕ ಲಾವಣಿ, ಟಿಪ್ಪುಸುಲ್ತಾನ್ ಲಾವಣಿ ಮುಂತಾದುವುಗಳನ್ನು ಅದರ ಕರ್ತೃಗಳೇ 'ಲಾವಣಿ' ಎಂದು ಕರೆದಿರುವುದರ ಉಲ್ಲೇಖಗಳಿವೆ) ಮತ್ತು ಈಗಾಗಲೇ ಚಾಲ್ತಿಯಲ್ಲಿರುವ ಲಾವಣಿಪದವನ್ನು ಸಂಕುಚಿತಗೊಳಿಸಬೇಕಾಗಿಲ್ಲ.

ಇಂಗ್ಲೀಷಿನ ಬ್ಯಾಲೆಡಿಗೆ ಸಂವಾದಿಯಾಗಿ ಕನ್ನಡದಲ್ಲಿ 'ಲಾವಣಿ' ಪದ ಬಳಸುವುದು ಸಮ್ಮತವಲ್ಲವೆಂದು ಹೇಳಿ ಅನೇಕರು ಭಿನ್ನಾಭಿಪ್ರಾಯಗಳನ್ನು ಪ್ರಕಟಿಸಿದ್ದಾರೆ. ಡಾ. ಎಂ.ಎಂ.ಕಲಬುರ್ಗಿಯವರು ಲಾವಣಿಪದ ಉತ್ತರ ಕರ್ನಾಟಕದಲ್ಲಿ ವಿಶಿಷ್ಟ ಜಾತಿಯ ಕಥನಕಾವ್ಯ ಪ್ರಕಾರಕ್ಕೆ ಅನ್ವಯಿಸುತ್ತದೆಂದು ಹೇಳಿ ಡಾ.ಜೀ.ಶಂ.ಪರಮಶಿವಯ್ಯನವರ 'ಜನಪದ ಕಾವ್ಯಕಥೆಗಳು' ಗ್ರಂಥದ ಪ್ರಸ್ತಾವನೆಯಲ್ಲಿನ ಮೇಲಿನ ಅಭಿಪ್ರಾಯವನ್ನು ಚರ್ಚೆಗೆ ಈಡುಮಾಡುತ್ತಾರೆ. 'ಜನಪದ ಸಾಹಿತ್ಯವನ್ನು ವೈಜ್ಞಾನಿಕವಾಗಿ ವರ್ಗೀಕರಿಸಬೇಕಾದ ಹೆಸರಿಸಬೇಕಾದ ಈ ಕಾಲದಲ್ಲಿ ಶ್ರೀ ಜೀ.ಶಂ.ಪ. ಅವರು ಈ ಹೊಸ ಪ್ರಯೋಗದಿಂದ ಮುಂದಿನ ಸಂಶೋಧಕರಿಗೆ ತಿಳಿದೂ ತಿಳಿದೂ ಹೊಸದೊಂದು ತೊಡಕನ್ನು ಹುಟ್ಟಿಸಿಕೊಟ್ಟಂತಾಗಿದೆ. ಏನೆಲ್ಲದಕ್ಕೂ ಇಂಗ್ಲೀಷಿನ ಬೆನ್ನುಹತ್ತಿ ಅಲ್ಲಿರುವ ಪ್ರಕಾರಗಳಿಗೆ ಹೆಸರುಗಳಿಗೆ ನಮ್ಮಲ್ಲಿಯ ಪ್ರಕಾರಗಳನ್ನು, ಹೆಸರುಗಳನ್ನು ಹೊಂದಿಸಿ ನೋಡುವ ಜುಲುಮೆಯ ಪ್ರಯತ್ನವನ್ನು ಬಿಟ್ಟುಕೊಟ್ಟು ನಮ್ಮ ಸಾಹಿತ್ಯವನ್ನು ನಮ್ಮ ಪರಂಪರೆಯಲ್ಲಿ ನೋಡುವುದು ಲೇಸು. ಒಂದುವೇಳೆ ಇಂಗ್ಲೀಷ್ ಬ್ಯಾಲೆಡ್‌ಗಳಿಗೆ ಸಮನಾಗಿ ನಮ್ಮಲ್ಲಿರುವ ಹಾಡುಗಳಿಗೆ ಕನ್ನಡ ಹೆಸರು

ಕೊಡುವುದಿದ್ದರೆ ಜಾನಪದದ ವಿಶಿಷ್ಟ ಪ್ರಕಾರಕ್ಕೆ ಸೀಮಿತವಾಗಿರುವ ಲಾವಣಿ ಎಂಬ ಪದವನ್ನು ಸೃಷ್ಟಿಸಲಿ, ಇಲ್ಲವಾದರೆ 'Ballad'ನ ಒಂದು ಪ್ರಭೇದವೆನಿಸುವ ಲಾವಣಿಯನ್ನೇ 'Ballad'ಗೆ ಸಂವಾದಿಯಾಗಿ ಬಳಸಿದಂತಾಗುತ್ತದೆ ಎಂದು ವಾದಿಸಿದ್ದಾರೆ. ಅವರು ತಮ್ಮ ಅಭಿಪ್ರಾಯಕ್ಕೆ ಸಮರ್ಥನೆಯಾಗಿ ಕೆಲವು ಕಾರಣಗಳನ್ನು ನೀಡಿದ್ದಾರೆ. 'ಲಾವಣಿಗಳಲ್ಲಿ ಬಯಲು ಲಾವಣಿ, ಮೇಳ ಲಾವಣಿ' ಎಂಬ ಎರಡು ಪ್ರಕಾರ. ಒಬ್ಬ ಹಾಡುವುದು ಬಯಲು ಲಾವಣಿ, ಕನಿಷ್ಟ ಪಕ್ಷ ಇಬ್ಬರು ಹಾಡುವುದು ಮೇಳ ಲಾವಣಿ. ಒಬ್ಬನಿರುವಾಗ ಗೆಜ್ಜೆ ಕಟ್ಟಿಕೊಳ್ಳುತ್ತಾನೆ. ಹೆಚ್ಚು ಜನರಿರುವ ದಪ್ಪು ತಂತಿಣಿ ತಾಳೆ ಮೊದಲಾದ ವಾದ್ಯಗಳನ್ನು ಬಳಸುತ್ತಾರೆ. ಮೇಳ ಲಾವಣಿಗಳಲ್ಲಿ ಪುರುಷ ಪಕ್ಷ, ಸ್ತ್ರಿಪಕ್ಷಗಳ ನಡುವೆ ಸ್ಪರ್ಧೆ ನಡೆಯುತ್ತದೆ. ಆರಂಭದ ಹಾಡುಸಖಿ, ಕೊನೆಯ ಹಾಡು ಖ್ಯಾಲಿ, ಮಧ್ಯದ ಹಾಡು ಲಾವಣಿ, ಕಂಚಿಯ ಹಾಡು, ಡೊಳ್ಳಿನ ಹಾಡು, ಗೊಂದಲ ಹಾಡು, ಚೌಡಿಕಿಹಾಡು, ಕರ್ಬಲಹಾಡು, ಗೌರಿ–ಸೀಗಿಹಾಡು, ಇವೆಲ್ಲವನ್ನು ಲಾವಣಿಗಳಲ್ಲಿ ಅಂತರ್ಗತ ಗೊಳಿಸುವುದರಿಂದ ಗೊಂದಲವುಂಟಾಗುವುದಲ್ಲದೆ, ಆ ಹಾಡುಗಾರನಗೆ ಅವಮಾನ ಮಾಡಿದಂತಾಗುತ್ತದೆ'[೨] ಎಂದಿದ್ದಾರೆ. ಇಷ್ಟೆಲ್ಲ ಹೊಸ ವಿಚಾರಗಳ ಮಂಡನೆ ಮಾಡಿರುವ ಡಾ.ಎಂ.ಎಂ. ಕಲಬುರ್ಗಿಯವರು 'Ballad'ಗೆ ಸಂವಾದಿಯಾಗಿ ಬೇರೆ ಯಾವೊಂದು ಪದವನ್ನು ಕೂಡ ಸೂಚಿಸಿಲ್ಲ.

ಪ್ರಹ್ಲಾದಕುಮಾರ್ ಭಾಗೋಜಿಯವರು ತಮ್ಮ ಲಾವಣಿ ಎಂಬ ಲೇಖನದಲ್ಲಿ ಪೂರ್ವೋಕ್ತ ಅಭಿಪ್ರಾಯವೇ ಬರುವಂತಹ ಆಕ್ಷೇಪವನ್ನು ಎತ್ತಿದ್ದಾರೆ. ಅವರು 'ಲಾವಣಿಗಳ ಚರಿತ್ರೆಯನ್ನು ಹೇಳುವಾಗ 'Ballad'ಗಳ ಚರಿತ್ರೆಯನ್ನೇ ಹಿನ್ನೆಲೆಯಾಗಿ ಹೇಳಲಾಗಿದೆ. 'ಲಾವಣಿ' ರೂಪವೂ 'Ballad'ಗಳ ಮಾದರಿಯಲ್ಲಿಯ ಕಥನಕಾವ್ಯವೇ ಎಂಬುದು ನಿಜ. ಆದರೆ ಅದಕ್ಕೆ ಅದರದೇ ಆದ ವಿಶಿಷ್ಟ ಲಕ್ಷಣಗಳಿವೆ. ಹೋಳಿಯ ಪದಗಳು, ಗೊಂದಲಿಗರ ಹಾಡುಗಳು, ಕುಮಾರರಾಮನ ಸಾಂಗತ್ಯ, ಮೊದಲಾದುವು ಲಾವಣಿಯೆಂದು ಹೇಳಲ್ಪಡುವುದಿಲ್ಲ. ಉತ್ತರ ಕರ್ನಾಟಕದಲ್ಲಿ ಲಾವಣಿಯೆಂಬ ವಿಶಿಷ್ಟ ಕಾವ್ಯರೂಪವನ್ನೇ ಕಾಣುತ್ತೇವೆ. ಅದರ ಛಂದಸ್ಸು, ಹಾಡಿನಗತಿ, ಕಥಾನಿರೂಪಣೆಗಳಲ್ಲಿರುವ ವಿಶಿಷ್ಟತೆಯಿಂದಲೇ ಅದು ಗುರುತಿಸಲ್ಪಡುತ್ತದೆ. ತಾಳಬದ್ಧವಾದ ಗೇಯ ಛಂದಸ್ಸಿನ ಬಳಕೆ, ಅಂಶಗಣ, ಮಾತ್ರಾಗಣಗಳಲ್ಲಿ ಯೋಜಿತವಾಗಿ ಪ್ರಾಸ ಯಮಕಗಳಿಂದ ಮೆರೆಯುವ ಲಾವಣಿಯು ತನ್ನ ರಚನಾ ಕೌಶಲ್ಯದಲ್ಲಿಯೇ ವೈಶಿಷ್ಟ್ಯವನ್ನು ತೋರುತ್ತದೆ.... 'Ballad'ಗೆ ಸಂವಾದಿಯಾಗಿ 'ಗೀತ ಕಥನ' ವೆಂದೂ ಪದಗಳನ್ನು ಬಳಸಬಹುದು. ಲಾವಣಿ ಎಂಬುದನ್ನು ವಿಶಿಷ್ಟ ಲಕ್ಷಣಗಳನ್ನೊಳಗೊಂಡ ಸಾಹಿತ್ಯರೂಪಕ್ಕೆ ಮಾತ್ರ ಬಳಸುವುದು ಉಚಿತ'[೩] ಎಂಬ ನಿಲುವಿಗೆ ಬಂದಿದ್ದಾರೆ. ಭಾಗೋಜಿಯವರು ಡಾ.ಕಲಬುರ್ಗಿಯವರಂತೆ ಲಾವಣಿ ಬ್ಯಾಲೆಡ್ಡಿನ ಒಂದು ಪ್ರತ್ಯೇಕ ಪ್ರಕಾರ ಎಂಬ ಅಂಶವನ್ನು ಪ್ರತಿಪಾದಿಸಿದ್ದರಾದರೂ ಅವರು ವಿಭಾಗಿಸಿಕೊಡುವ ಉದಾಹರಣೆಗಳಲ್ಲಿ ಗೊಂದಲ ವಿರುವಂತೆ ಕಾಣುತ್ತದೆ. ಹಾಗಿದ್ದೂ ಭಾಗೋಜಿಯವರ ಗಂಭೀರ ಸಂಶೋಧನ ತಿಳುವಳಿಕೆ ಚರ್ಚೆಗೆ ಅಮೂಲ್ಯವಾದುದನ್ನು ಸೇರಿಸಿದೆ ಎಂಬುದರಲ್ಲಿ ಅನುಮಾನವಿಲ್ಲ.

ಕಥನ ಕಲೆಯ ಅಂಶಗಳನ್ನು ಒಳಗೊಂಡ ಎಲ್ಲ ಹಾಡುಗಳನ್ನು ಕನ್ನಡದಲ್ಲಿ ಲಾವಣಿಗಳು ಎಂದು ಕರೆಯುವ ಪ್ರಯತ್ನಗಳು ನಡೆದಿವೆ. ಲಾವಣಿ ಎಂಬ ಪದವನ್ನು ಇಷ್ಟು ವ್ಯಾಪಕವಾದ ಅರ್ಥದಲ್ಲಿ ಬಳಸುವ ಬಗ್ಗೆ ಕೆಲವರು ತಕರಾರು ತೆಗೆದಿದ್ದಾರೆ. ಬೆಳೆಯುತ್ತಿರುವ ಜಾನಪದದಲ್ಲಿ ಈ ತಕರಾರು ಬಂದಿರುವುದು ಸಹಜ. ಈ ಬಗೆಯ ಪಾರಿಭಾಷಿಕ ಪದಗಳನ್ನು ಬಳಸುವಾಗ ಅದರ ಅರ್ಥವನ್ನು ಸ್ಪಷ್ಟಪಡಿಸಿ ಹೊರಡುವುದು ಅನುಕೂಲ. ಇಂದು ರೂಢಿಸಿಕೊಂಡ ಅರ್ಥವು ನಾಳೆ ಚಲಾವಣೆಯನ್ನು ಕಾಣುವುದರಿಂದ ಈ ಕ್ರಮ ತಪ್ಪೇನೂ ಅಲ್ಲ. ಜಗತ್ತಿನ ಜಾನಪದದ ಹಿನ್ನೆಲೆಯಲ್ಲಿ ನೋಡಿದಾಗ ಈ ಬಗೆಯ ಒಂದು ಲಿಖಿತ ತೀರ್ಮಾನ ನಮಗೆ ಅಗತ್ಯ.

ಲಾವಣಿಗಳ ಹೆಸರಿನ ಸಮಸ್ಯೆಯನ್ನು ಕುರಿತಂತೆ ಡಾ.ದೇ.ಜ.ಗೌ. ಅವರು ಹೀಗೆ ಉತ್ತರಿಸಿದ್ದಾರೆ 'ಕಥೆ ಮತ್ತು ಗೇಯತೆ ವಿಶಿಷ್ಟ ಲಕ್ಷಣಗಳಾದ್ದರಿಂದ ಲಾವಣಿ ಎನ್ನುವ ಪದವನ್ನು ಕಥನಗೀತೆಗಳಿಗೆ ಅನ್ವಯಿಸುವುದರಲ್ಲಿ ತಪ್ಪೇನಿಲ್ಲ. ಕಾದಂಬರಿ ಪದ ಕನ್ನಡಕ್ಕೆ ಬಂದದ್ದಾದರೂ ಹೇಗೆ? ನಾಟಕ ಎಂಬುದು ರೂಪಕಗಳಲ್ಲೊಂದು ಪ್ರಭೇದ. ಕಾಲಾನಂತರದಲ್ಲಿ ಅದನ್ನು ಎಲ್ಲ ಜಾತಿಯ ನಾಟಕಗಳಿಗೆ ಅನ್ವಯಿಸಲಾಯಿತು. ಯಾವೊಂದು ಪದವೇ ಆಗಲಿ ಅದು ಯಾವ ವಸ್ತುವನ್ನು ಪ್ರತಿನಿಧಿಸುತ್ತದೆಯೋ ಆ ವಸ್ತುವಿನ ಸರ್ವಲಕ್ಷಣಗಳನ್ನು ಪ್ರತಿಬಿಂಬಿಸುವುದಿಲ್ಲ' ಎಂದಿದ್ದಾರೆ. ನಿಜ ಮೂಲತಃ lyre ತಂತಿವಾದ್ಯದೊಡನೆ ಹಾಡುತ್ತಿದ್ದ lyric (ಭಾವಗೀತೆಗೆ) ಈಗ ಮೂಲದ ಅರ್ಥ ಅನ್ವಯ ವಾಗುವುದಿಲ್ಲ. ಭಾವಗೀತೆ ಎಂದೊಡನೆ ಮೂಲದ ವಾದ್ಯ ನೆನಪಾಗದೆ ಅದರ ಸ್ಪಷ್ಟ ಕಲ್ಪನೆ ಮೂಡುತ್ತದೆ. ಕಾದಂಬರಿ ಎಂದೊಡನೆ ಬಾಣಭಟ್ಟನ 'ಕಾದಂಬರಿ' ಪಾತ್ರ ನೆನಪಾಗುವುದಿಲ್ಲ. ಯಾವುದೇ ಒಂದು ಹೊಸಪದ ಎಲ್ಲಾ ಮುಖಗಳನ್ನು ಪ್ರತಿನಿಧಿಸಬೇಕೆಂದು ಪಟ್ಟು ಹಿಡಿದರೆ ಯಾವ ಪದವೂ ಬಳಕೆಗೆ ಬರುವುದು ಕಷ್ಟ. ಪ್ರತಿಯೊಂದೂ ಪದಕ್ಕೂ ಒಂದಲ್ಲ ಒಂದು ಮಿತಿ ಇದೆ. ಮೊದಮೊದಲು ತೊಡಕು ಎನ್ನಿಸುವುದು ಸತತ ಬಳಕೆ ಪರಿಭಾವನೆಯಲ್ಲಿ ಸಲ್ಲಬೇಕಾದ ಅರ್ಥಗಳನ್ನು ಒಳಗೊಳಿಸಿಕೊಂಡು ಸಾಮಾನ್ಯ ಚಾಲ್ತಿಗೆ ಬಂದುಬಿಡುತ್ತದೆ ಎಂಬುದಕ್ಕೆ ಕಾದಂಬರಿ, ನಾಟಕ, ಭಾವಗೀತೆ ಪದಗಳೇ ನಿದರ್ಶನವಾಗಿವೆ. ಹೀಗಿರುವಾಗ ಗೊಂದಲ ತಪ್ಪಿಸಿಕೊಳ್ಳಲು ಲಾವಣಿಪದವನ್ನು ಕಥನಗೀತೆಗೆ ಅನ್ವಯಿಸದೆ ಒಂದು ವಿಶಿಷ್ಟ ಪ್ರಕಾರಕ್ಕೆ ಮಾತ್ರ ಸೀಮಿತಗೊಳಿಸಿಕೊಂಡರೆ ಇನ್ನಷ್ಟು ಗೊಂದಲದಲ್ಲಿ ಉಳಿದಂತಾಗುತ್ತದೆ. ಆದ್ದರಿಂದ ಡಾ.ಜೀ.ಶಂ.ಪ.ರವರು ಸೂಚಿಸುವ ಹಾಗೆ ಭಾವಗೀತೆಗಿಂತ ವಿಸ್ತಾರವಾದ ಕಥಾನಾತ್ಮಕವಾದ ವಿಶಿಷ್ಟ ಮಟ್ಟಿನಲ್ಲಿ ಹಾಡಲಾಗುವ ಸಾಂಪ್ರದಾಯಿಕ ಕಥನ ಕವನಗಳನ್ನು ಲಾವಣಿಯೆಂದೂ, ಕೆಲವು ಸುಧೀರ್ಘ ರಚನೆಗಳನ್ನೂ ಜನಪದ ಕಾವ್ಯ-ಖಂಡಕಾವ್ಯ, ಮಹಾಕಾವ್ಯವೆಂದು ಆಯಾ ರಚನೆಗಳ ದೀರ್ಘತೆ ವ್ಯಾಪ್ತಿಗಳನ್ನನುಸರಿಸಿ ಕರೆಯುವುದು ಸಮಂಜಸವೆಂದು ತೋರುತ್ತದೆ. ಹೆಚ್ಚು ವಿಸ್ತಾರವಲ್ಲದ ಆದಷ್ಟು ಕಡಿಮೆ ಅವಕಾಶದಲ್ಲಿ ಮುಗಿಸಬಹುದಾದ ಕಥನಕವನವನ್ನು "ಲಾವಣಿ"ಯ ಚೌಕಟ್ಟಿಗೆ ತಂದುಕೊಳ್ಳಬಹುದು.

ಒಂದು ನಿರ್ದಿಷ್ಟ ಪದ್ಯಜಾತಿಗೆ ನಾವು ಲಾವಣಿಗಳೆಂದು ಕರೆದುಕೊಂಡರೂ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಸಾಮಾನ್ಯ ಜನರು ಡಪ್ಪಿನ ಪದ (ಹಾಡು) ಗೀಗೀಪದ, ಬೀಬೀಪದ, ಶಾವಿರಕಿಪದ, ಇತ್ಯಾದಿ ಹೆಸರುಗಳಿಂದಲೇ ಕರೆಯುವುದು ಹೆಚ್ಚು. ಒಟ್ಟಾರೆಯಾಗಿ ಕರ್ನಾಟಕದಲ್ಲಿ ದೊರೆಯುವ ಲಾವಣಿಗಳನ್ನು ಎರಡು ಭಾಗ ಮಾಡಿಕೊಳ್ಳಬಹುದು. ಕಥಾನಾತ್ಮಕವಾದುವು ಒಂದು ಗುಂಪಾದರೆ, ಕಥೆ ಪ್ರಧಾನವಲ್ಲದ ಲಾವಣಿಗಳು ಮತ್ತೊಂದು ಗುಂಪು. ಎರಡನೆಯ ವರ್ಗದ ಲಾವಣಿಗಳು ಮೊದಲನೆಯ ವರ್ಗದ ಲಾವಣಿಗಳ ಅನಿವಾರ್ಯ ಲಿಂಗವೇ ಆಗಿ ಬರುವುದರಿಂದ ಅವುಗಳನ್ನು ಲಾವಣಿಗಳ ಒಟ್ಟು ಚೌಕಟ್ಟಿನಲ್ಲಿಯೇ ನಾವು ಪರಿಶೀಲಿಸುವುದು ಅಗತ್ಯವಾಗುತ್ತದೆ.

"ಉತ್ತರ ಕರ್ನಾಟಕದಲ್ಲಿ ಲಾವಣಿಯೆಂಬ ವಿಶಿಷ್ಟ ಕಾವ್ಯರೂಪವನ್ನು ಕಾಣುತ್ತೇವೆ. ಅದರ ಛಂದಸ್ಸು, ಹಾಡಿನ ಗತಿ, ಕಥಾನಿರೂಪಣೆಗಳಲ್ಲಿರುವ ವಿಶಿಷ್ಟತೆಯಿಂದಲೇ ಅದು ಗುರುತಿಸಲ್ಪಡುತ್ತದೆ. ತಾಳಬದ್ಧವಾದ ಗೇಯ ಛಂದಸ್ಸಿನ ಬಳಕೆ, ಅಂಶಗಣ, ಮಾತ್ರಾಗಣಗಳಲ್ಲಿ ಯೋಜಿತವಾಗಿ ಪ್ರಾಸ ಯಮಕಗಳಿಂದ ಮೆರೆಯುವ ಲಾವಣಿಯು ತನ್ನ ರಚನಾ ಕೌಶಲದಲ್ಲಿಯೇ ವೈಶಿಷ್ಟ್ಯವನ್ನು ತೋರುತ್ತದೆ. ಇದು ಲೋಕರಂಜನೆಗಾಗಿ ರಚಿತವಾಗಿ ಜನಸಮೂಹದಲ್ಲಿ ಹೇಳಲ್ಪಡುವ ಕಾವ್ಯ ಮಾದರಿ. ಉತ್ತರ ಕರ್ನಾಟಕದಲ್ಲಿ ಬಹು ಪ್ರಸಿದ್ಧಿಯಲ್ಲಿರುವ ಲಾವಣಿ ಸಂಪ್ರದಾಯವನ್ನು ಅವುಗಳ ವಿಷಯ ಮತ್ತು ರೂಪಗಳ ದೃಷ್ಟಿಯಿಂದ ಕೆಳಕಂಡಂತೆ ಗುರುತಿಸಬಹುದು.

೧. ಒಂಟಿ ಲಾವಣಿ ಅಥವಾ ಬಯಲು ಲಾವಣಿ

೨. ಮೇಳ ಲಾವಣಿ

ಒಂಟಿ ಲಾವಣಿಯಲ್ಲಿ ಒಬ್ಬನೇ ಹಾಡುಗಾರನಿರುತ್ತಾನೆ. ಮೇಳಲಾವಣಿಯಲ್ಲಿ ಮೂರು ಜನರಿರುತ್ತಾರೆ. ಈಗಿನ ಸಂದರ್ಭದಲ್ಲಿ ಒಂಟಿ ಲಾವಣಿಗಳು ಬಳಕೆಯಲ್ಲಿಲ್ಲ. ಮೇಳಲಾವಣಿಗಳೇ ಎಲ್ಲಾ ಕಡೆಗೂ ಪ್ರಚಾರ ಪಡೆದಿವೆ. ಬಹುಶಃ ಒಬ್ಬ ವ್ಯಕ್ತಿಯಿಂದ ಒಂಟಿ ಲಾವಣಿಯಾಗಿ ಹಾಡಿಸಿಕೊಳ್ಳುತ್ತಿದ್ದ ಲಾವಣಿ ಪ್ರಕಾರ ಕಾಲ ಸರಿದಂತೆ ಮೇಳಲಾವಣಿಯಾಗಿ ಗೀಗೀ ಸಂಪ್ರದಾಯವಾಗಿ ಪ್ರಚುರಗೊಳ್ಳುತ್ತ ಬಂದಿದೆ. ಪರ–ವಿರೋಧಿ ಗುಂಪುಗಳು ನಿರ್ಮಿತಿಯಿಂದಾಗಿ ಹರದೇಸಿ–ನಾಗೇಶಿ, ಕಲ್ಕಿ–ತುರಾ, ಸವಾಲ್–ಜವಾಬ್ ಸಂಪ್ರದಾಯಗಳಾಗಿ ಸ್ಪರ್ಧಾತ್ಮಕ ಮನೋಭಾವ ಪಡೆದಿವೆ. ಲಾವಣಿ ಬೆಳವಣಿಗೆಗೆ ಪೇಶ್ವೆಗಳ ಆಡಳಿತ ಹೆಚ್ಚಿನ ಪ್ರೋತ್ಸಾಹ ಕೊಟ್ಟಿದ್ದು ತಿಳಿದುಬರುತ್ತದೆ.

ಜಗತ್ತಿನ ಪ್ರಮುಖ ಸಾಹಿತ್ಯ ಪ್ರಕಾರಗಳಲ್ಲಿ ಲಾವಣಿಯೂ ಒಂದು ಪ್ರಮುಖ ಪ್ರಕಾರವಾಗಿರುವಂತೆ ಅದರ ಹುಟ್ಟು ಸಹ ಅತ್ಯಂತ ಸ್ವಾಭಾವಿಕವಾದುದಾಗಿದೆ. ಜನಪದ ಲಾವಣಿಗಳ ಮೂಲವನ್ನು ವೇದಗಳ ಕಾಲಕ್ಕೆ ವಿದ್ವಾಂಸರು ತೆಗೆದುಕೊಂಡು ಹೋಗಿರುವುದು ಕಾಣಿಸುತ್ತದೆ. ವೈದಿಕ ಯುಗದಲ್ಲಿಯೂ ಸಹ ಉತ್ಸವ ಸಮಾರಂಭಗಳಲ್ಲಿ ಗೀತೆಗಳನ್ನು ಹಾಡುತ್ತಿದ್ದರೆಂಬುದಕ್ಕೆ ವೇದ ಗ್ರಂಥಗಳಲ್ಲಿಯೇ

ನಿರ್ದೇಶನ ದೊರೆಯುತ್ತದೆ. ಅಲ್ಲಿ ಕಾಣಬರುವ "ಗಾಥೆ" ಗಳನ್ನು ನಮ್ಮ ಲಾವಣಿ ಸಾಹಿತ್ಯದ ಪ್ರಾಚೀನ ರೂಪಗಳೆಂದು ಭಾವಿಸಲಾಗಿದೆ.

ಜನಪದ ಸಾಹಿತ್ಯ ಕಾಲವನ್ನು ಕಾಲಾನುಕ್ರಮಣಿಕೆಯಲ್ಲಿ ಜೋಡಿಸುವುದು ಕಷ್ಟಸಾಧ್ಯವಾದ ವಿಚಾರ. ಲಾವಣಿಗಳಲ್ಲಿ ಐತಿಹಾಸಿಕ ವ್ಯಕ್ತಿಗಳ ಹೆಸರು, ಪ್ರದೇಶ, ಮುಂತಾದ ಕುರುಹುಗಳು ದೊರೆಯುವುದರಿಂದ ಸ್ವಲ್ಪಮಟ್ಟಿಗೆ ಕಾಲವನ್ನು ಗುರುತಿಸಲು ಸಾಧ್ಯ. ಸ್ವಾತಂತ್ರ್ಯ ಪೂರ್ವದಲ್ಲಿಯೇ ಬಹಳಷ್ಟು ಲಾವಣಿಗಳು ರಚನೆಗೊಂಡಿವೆ. ಬದುಕಿನ ಪ್ರಾಥಮಿಕ ಮುಖಗಳು ಅವಕ್ಕೆ ವಸ್ತುಗಳನ್ನೊದಗಿಸುತ್ತವೆ. ಅವುಗಳಲ್ಲಿ ಸಾಹಸ, ಕದನ, ಶಕ್ತಿಪರಾಕ್ರಮಗಳ ಕಥೆಗಳಿಗೆ ಹೆಚ್ಚು ಅವಕಾಶ. ಸಾಮಾನ್ಯವಾಗಿ ಅವುಗಳಲ್ಲಿ ಅತಿಮಾನುಷತೆಯ ಮಿಶ್ರಣವಿರುತ್ತದೆ. ಪ್ರೇಮ, ದ್ವೇಷ, ಕನಿಕರ, ಮತ್ತು ಸಾಂಸಾರಿಕವಾದ ಸರಳ ಹಿತಗಳ ಮೇಲೆ ಸಂಪೂರ್ಣ ಗಮನವಿರುತ್ತದೆ.

೩.೧ ಐತಿಹಾಸಿಕ ಲಾವಣಿಗಳಲ್ಲಿ ವರ್ಗಸಂಘರ್ಷ:

ಕರ್ನಾಟಕದ ಸಮೃದ್ಧ ಲಾವಣಿ ಪರಂಪರೆಯನ್ನು ಗಮನಿಸಿದರೆ ಐತಿಹಾಸಿಕ ವಸ್ತುವನ್ನೊಳಗೊಂಡ ಲಾವಣಿಗಳ ಸಂಖ್ಯೆ ಕಡಿಮೆಯೆಂದೇ ಹೇಳಬೇಕು. ಅವು ರಚನೆಗೊಂಡಿದ್ದು ಸಂಖ್ಯೆಯಲ್ಲಿ ವಿರಳವೊ ಅಥವಾ ಹಾಗೆ ರಚಿತವಾದವು ಕಾಲಗತಿಯಲ್ಲಿ ಜನತೆಯ ಸ್ಮರಣೆಯಲ್ಲಿ ನಿಲ್ಲದೆ ಮಾಸಿ ಹೋಗಿರುವುದು ಕಾರಣವೊ? ಖಚಿತವಾಗಿ ಹೇಳುವುದು ಕಷ್ಟ. ಪ್ರಸಿದ್ಧ ರಾಜವಂಶಗಳ ಚಕ್ರವರ್ತಿಗಳು ಹೇರಳವಾಗಿ ಈ ನಾಡಿನಲ್ಲಿ ಆಗಿಹೋಗಿದ್ದರೂ ಅವರ ಮೇಲೆ ಲಾವಣಿಗಳಾಗಲಿ, ಕಾವ್ಯಗಳಾಗಲಿ, ಹೆಚ್ಚಿನ ಸಂಖ್ಯೆಯಲ್ಲಿ ಹುಟ್ಟದಿರುವುದು ಆಶ್ಚರ್ಯ ಸಂಗತಿಯಾಗಿದೆ. ಹೀಗಾಗಲು ರಾಜರು, ಚಕ್ರವರ್ತಿಗಳು ಜನ ದೂರವಾದ ನಗರಗಳಲ್ಲಿ, ವೈಭವೋಪೇತ ಅರಮನೆಗಳಲ್ಲಿ ವಾಸಿಸುತ್ತಾ ಜನಸಾಮಾನ್ಯರ ಸಂಪರ್ಕಕ್ಕೆ ಬಾರದಿದ್ದುದು ಒಂದು ಮುಖ್ಯ ಕಾರಣವಾಗಿರಬಹುದು. ಜೊತೆಗೆ ಅವರ ಖಾಸಗಿ ಹಾಗೂ ಸಾರ್ವತ್ರಿಕ ಬದುಕಿನ ಅನೇಕ ವಿವರಗಳು ಗ್ರಾಮೀಣ ಸಾಹಿತ್ಯ ರಚನಾಕಾರರ ಪ್ರತಿಭಾ ಸ್ಪರ್ಶಕ್ಕೆ ಸಿಲುಕದೆ ದೂರವಾಗಿದ್ದುದು ಮತ್ತೊಂದು ಕಾರಣವಿರಬೇಕು. ಹೀಗಾಗಿ ದೊಡ್ಡ ದೊಡ್ಡ ರಾಜರು ಚಕ್ರವರ್ತಿಗಳ ಪ್ರಭಾವಲಯಕ್ಕೆ ಹೊರಗಾಗಿ ಉಳಿದ ಜನಪದ ಲಾವಣಿಕಾರರು ತಮ್ಮ ಕಣ್ಣು ಮುಂದಿನ ಸಾಮಂತರು, ಸಣ್ಣ ಸಣ್ಣ ಪಾಳೆಯಗಾರರ ಮೇಲೆ ಲಾವಣಿ ರಚಿಸಿದ್ದು ಸಹಜವಾದುದೇ ಆಗಿದೆ. ಈ ಜನಸಾಮಾನ್ಯ ಅರಸರು ಶ್ರೀಸಾಮಾನ್ಯನ ಆಶೆ–ಆಕಾಂಕ್ಷೆಗಳ ಪೂರೈಕೆಗಾಗಿ ಹೋರಾಟ ನಡೆಸಿದ್ದಾರೆ. ತಮ್ಮ ರಾಜ್ಯ ವಿಸ್ತರಣೆಯ ಮಹತ್ವಾಕಾಂಕ್ಷೆ, ಜೀವನಾದರ್ಶ, ಸೋಲು ಗೆಲುವುಗಳ ಮೂಲಕ ಜನತೆಯ ಅಂತಃಕರಣವನ್ನು ಮಿಡಿದಿದ್ದಾರೆ. ವೃತ್ತಿಗಾಯಕರು ಮತ್ತು ಲಾವಣಿಕಾರರು ಇಂಥವರ ಮೇಲೆ ಹಾಡುಕಟ್ಟಿ ಇತಿಹಾಸದ ಚಿರಂತನ ದಾಖಲೆಯಾಗಿ ಉಳಿಸಿಹೋಗಿದ್ದಾರೆ. ಈ ಮೂಲಕ ಪ್ರತಿಷ್ಠಿತ ಜೀವನ ಮತ್ತು ಶಿಷ್ಟಕಾವ್ಯ ಮರ್ಜಿಯನ್ನು ತಿರಸ್ಕರಿಸಿದ ಜೀವನದೃಷ್ಟಿಯನ್ನು ಈ ರಚನೆಗಳಲ್ಲಿ ಮೆರೆದಿದ್ದಾರೆ. ದೊರೆತಿರುವ

ಐತಿಹಾಸಿಕ ಲಾವಣಿಗಳನ್ನು ಗಮನಿಸಿದರೆ ಮೂಲದ ಐತಿಹಾಸಿಕ ಸಂಗತಿಗಳ ಯಥಾವತ್ ದಾಖಲೆ ಈ ಲಾವಣಿಗಳಲ್ಲಿ ಸಿಗುವುದು ಕಷ್ಟ. ಅದರಲ್ಲೂ ತೀರಾ ಪ್ರಾಚೀನವಾದ ಐತಿಹಾಸಿಕ ವಿಷಯಗಳು ಜನಪದ ಲಾವಣಿ ಲೋಕದಲ್ಲಿ ಉಳಿದುಬಂದಂತೆ ತೋರುವುದಿಲ್ಲ. ಮುಖ್ಯ ಚಾರಿತ್ರಿಕ ಘಟನೆಯೊಂದು ಲಾವಣಿಯೊಂದರ ಉಗಮಕ್ಕೆ ಕಾರಣವಾಗಿದ್ದರೂ ಅದರ ಬೆಳವಣಿಗೆಯಲ್ಲಿ ಅತಿಮಾನುಷ, ಅವಾಸ್ತವ, ಅಂಶಗಳು ಸೇರ್ಪಡೆಗೊಂಡು ಮೂಲಘಟನೆ ಇಷ್ಟೇ ಎಂದು ಗುರುತಿಸಿಕೊಳ್ಳುವುದು ಕಷ್ಟದ ಮಾತಾಗುತ್ತದೆ. ಐತಿಹಾಸಿಕವಾಗಿ ಒಂದು ಘಟನೆ ನಡೆದ ಹತ್ತಿರದ ಅವಧಿಯಲ್ಲಿಯೇ ಲಾವಣಿಯೊಂದು ಹುಟ್ಟಿಕೊಂಡು ಜನಪ್ರಿಯವಾಗಿ ಜನರ ಬಾಯಲ್ಲಿ ಉಳಿದುಕೊಂಡು ಬರುವುದು ಸಹಜವೇ ಆಗಿದೆ. ಕಾಲಗತಿಯಲ್ಲಿ ಅನೇಕ ಕಾರಣಗಳಿಂದಾಗಿ ಈ ಲಾವಣಿ ಮರೆತುಹೋಗಿ ಅದರ ಬಿಡಿ ತುಣುಕುಗಳು ಅಲ್ಲಲ್ಲಿ ಉಳಿದುಕೊಂಡಾಗ ಮೂಲ ಸ್ವರೂಪವನ್ನು ಊಹಿಸಲು ಕೂಡ ಕಷ್ಟವಾಗುತ್ತದೆ. ಆದರೆ ಎಲ್ಲಾ ಲಾವಣಿಗಳು ಹೀಗೆ ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡಿರುತ್ತದೆ ಎನ್ನಲಾಗುವುದಿಲ್ಲ. ಅನೇಕ ಲಾವಣಿಗಳು ಸಮಗ್ರತೆಯಿಂದಲೇ ಸಿಕ್ಕಿರುವುದನ್ನು ಕಾಣಬಹುದು.

ಲಾವಣಿಕಾರರು ಮತ್ತು ವೃತ್ತಿಗಾಯಕರು ತಮ್ಮ ಲಾವಣಿಗಳಿಗೆ ತಮ್ಮ ಮುಂದೆ ಕಾಣಿಸುತ್ತಿದ್ದ ಸಾಮಂತರು, ಸಣ್ಣ ಸಣ್ಣ ಪಾಳೆಯಗಾರರನ್ನು ನಾಯಕರನ್ನಾಗಿ ಮಾಡಿಕೊಂಡಿದ್ದರಿಂದ ಲಾವಣಿಗಳಲ್ಲಿ ಸತ್ಯ ಸಂಗತಿಗಳು ಹೆಚ್ಚಿನ ಮಹತ್ವವನ್ನು ಪಡೆದುಕೊಂಡವು. ಸಾಮಂತರು, ಸಣ್ಣ ಸಣ್ಣ ಪಾಳೆಯಗಾರರು ಜನಸಾಮಾನ್ಯರ ಮಧ್ಯದಲ್ಲಿ ವಾಸಿಸುತ್ತಿದ್ದರಿಂದ, ಜನಸಾಮಾನ್ಯರ ದುಃಖ ದುಮ್ಮಾನಗಳನ್ನು ಅರಿತಿದ್ದರಿಂದ ಸಮಾಜದ ಉದ್ಧಾರಕ್ಕಾಗಿ ಶ್ರಮಿಸಿದರು. ತುಳಿತಕ್ಕೊಳಗಾದವರ ಪರವಾದ ಧ್ವನಿಯಾಗಿ ಕೆಲಸ ಮಾಡಿದರು. ಇಂತಹವರೇ ಲಾವಣಿಗಳ ವಸ್ತುವಾದ್ದರಿಂದ ಲಾವಣಿಕಾರರು ಬಹಳ ಖುಷಿಯಿಂದ ಇವರ ಲಾವಣಿಗಳನ್ನು ಕಟ್ಟಿ ಹಾಡಿದರು. ಹೀಗಾಗಿ ರಾಜಮಹಾರಾಜರನ್ನು ವಿನಾಕಾರಣ ಹೊಗಳುವ ಅಪಾಯದಿಂದ ಲಾವಣಿಕಾರರು ತಪ್ಪಿಸಿಕೊಂಡರು.

ಹೀಗೆ ಸಿಕ್ಕಂತಹ ಲಾವಣಿಗಳಲ್ಲಿ ಪ್ರಾತಿನಿಧಿಕವಾಗಿ ಹಲಗಲಿಯ ಬೇಡರು, ಮಾಗಡಿ ಕೆಂಪೇಗೌಡ, ಆದಾಯ ತೆರಿಗೆ, ಸಂಗೊಳ್ಳಿರಾಯಣ್ಣ, ಸಿಂಧೂರ ಲಕ್ಷ್ಮಣ ಲಾವಣಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಲಾವಣಿಗಳಲ್ಲಿ ಶ್ರೀಮಂತ, ಬಡವರ ನಡುವಿನ ತಾರತಮ್ಯ ಅದಕ್ಕೆ ಬಡವರ ಪ್ರತಿರೋಧ ಮತ್ತು ಸಂಘರ್ಷ ಕಾಣುತ್ತೇವೆ.

೩.೧.೧ ಹಲಗಲಿಯ ಬೇಡರು

ಹಲಗಲಿಯ ಬೇಡರು ಲಾವಣಿ ಒಂದು ವಿಶಿಷ್ಟ ರೀತಿಯಾದ ಲಾವಣಿ ಸಾಮಾನ್ಯವಾಗಿ ಈ ಲಾವಣಿಯನ್ನು ಸ್ವಾತಂತ್ರ್ಯ ಸಂಗ್ರಾಮದ ಹಿನ್ನೆಲೆಯಲ್ಲಿ ನೋಡಲಾಗಿದೆಯಾದರೂ ಅದಕ್ಕಿಂತ ಭಿನ್ನವಾಗಿ ಈ ಲಾವಣಿಯನ್ನು ನೋಡಬೇಕಾತ್ತದೆಂದು ಸೂಕ್ಷ್ಮವಾಗಿ ಗಮನಿಸಿದಾಗ ಅರ್ಥವಾಗುತ್ತದೆ. ಬ್ರಿಟೀಷರ

ದರ್ಪ, ದೌರ್ಜನ್ಯ, ದಬ್ಬಾಳಿಕೆ, ಶ್ರೀಮಂತಿಕೆಯ ಮದ, ಅವರ ಆಳ್ವಿಕೆಯ ಕಾಲದಲ್ಲಿ ಮೈಗೂಡಿಸಿಕೊಂಡಿದ್ದರು. ತಮ್ಮ ದರ್ಪವನ್ನು ತೋರಿಸುವ ಸಲುವಾಗಿ ಒಂದಲ್ಲ ಒಂದು ರೀತಿಯಲ್ಲಿ ಬಡವರನ್ನು ಶೋಷಿಸಲು ತಮ್ಮ ಅಡಿಯಾಳಾಗಿ ಇಟ್ಟುಕೊಳ್ಳಲು ಕಾಯಿದೆಗಳನ್ನು ಜಾರಿಗೆ ತಂದು ಅವುಗಳನ್ನು ಒತ್ತಾಯದಿಂದ ಜನರ ಮೇಲೆ ಹೇರುತ್ತಿದ್ದರು. ಅಂತಹ ಕಾಯಿದೆಗಳನ್ನು ಬೇರೆ ವಿಧಿಯಿಲ್ಲದೆ ಜನಸಾಮಾನ್ಯರು ಒಪ್ಪಿಕೊಳ್ಳಬೇಕಾಗಿತ್ತು.

ಆದರೆ "ಹಲಗಲಿಯ ಬೇಡರು" ಲಾವಣಿಯಲ್ಲಿ ಹಲಗಲಿಯ ಬೇಡರು ಬ್ರಿಟೀಷರು ತಮ್ಮ ಮೇಲೆ ಹೇರಿದ್ದ "ನಿಶ್ಶಸ್ತ್ರೀಕರಣ ಕಾಯಿದೆ"ಯನ್ನು ವಿರೋಧಿಸಿದ್ದಾರೆ. ೧೮೭೦ಕ್ಕೆ ಬ್ರಿಟೀಷ್ ಆಡಳಿತವು "ಶಸ್ತ್ರಾಸ್ತ್ರ ಶಾಸನ" ಜಾರಿಗೊಳಿಸಿ ಯಾವ ಭಾರತೀಯನೂ ಸರಕಾರದ ಅನುಮತಿಯಿಲ್ಲದೇ ಯಾವುದೇ ಬಗೆಯ ಶಸ್ತ್ರಾಸ್ತ್ರವನ್ನು ತನ್ನ ಬಳಿ ಇಟ್ಟುಕೊಳ್ಳಬಾರದು. ಹಾಗೆ ಇಟ್ಟುಕೊಂಡರೆ ಅದು ದಂಡನಾರ್ಹ, ಅಪರಾಧ ಎಂದು ಮುಂತಾಗಿ ಸಾರಿದರು. ಬ್ರಿಟೀಷ್ ಸರಕಾರದ ಈ "ಶಸ್ತ್ರಾಸ್ತ್ರ ಶಾಸನ"ವನ್ನು ನಾಡಿನ ನಾನಾ ಭಾಗಗಳಲ್ಲಿ ಪ್ರತಿಭಟಿಸಲಾಯಿತು. ಅಂಥ ಪ್ರತಿಭಟನೆಯ ಜೀವಂತ ಸಾಕ್ಷಿ ಹಲಗಲಿಯ ಹರಾಕಿರಿ ಎಂದು ಪ್ರಸಿದ್ಧಿ ಪಡೆದಿದೆ.

ಹಲಗಲಿ ಗ್ರಾಮ ಮುಧೋಳ ಸಂಸ್ಥಾನದಲ್ಲಿದ್ದ ಒಂದು ಚಿಕ್ಕ ಗ್ರಾಮದ ಬಹುಸಂಖ್ಯಾತ ಮಂದಿ ಬೇಡರಾಗಿದ್ದರು. ಈ ಬೇಡರು ಸಾಮಾನ್ಯವಾಗಿ ಬೇಟೆಯಾಡಿ ಇತರ ಹೊಲಗೆಲಸ ಮಾಡಿ ಜೀವನ ನಿರ್ವಹಣೆ ಮಾಡುವಂಥ ಒಂದು ಮಾದರಿ ಬುಡಕಟ್ಟು ಗುಂಪು. ಬೇಟೆಯಾಡುತ್ತ ಆಡುತ್ತಾ ದೂರ ದೂರ ಕಾಡಿನಲ್ಲಿಯೇ ಹೋಗಿ ತಮಗೆ ಸರಿ ಕಂಡರೆ ಬೇರೆ ಕಡೆ ಉಳಿದು ಮತ್ತೆ ತಮ್ಮ ಮೂಲ ನೆಲೆಗೆ ತಿರುಗುವ ಒಂದು ರೀತಿಯ ಅರೆ ಅಲೆಮಾರಿ ಬಣ ಎಂದರೂ ಆದೀತು. ಈ ಕಾರಣಗಳಿಂದಾಗಿ ಶಸ್ತ್ರಾಸ್ತ್ರಗಳೆಂದರೆ ಅವರಿಗೆ ಜೀವನಾಧಾರ, ಜೀವನಸಂಗಾತಿ, ಇಂತಹ ಜೀವನಾಧಾರದ ಶಸ್ತ್ರಾಸ್ತ್ರಗಳನ್ನೇ ತ್ಯಜಿಸಬೇಕೆಂದು ಬ್ರಿಟೀಷ್ ಸರಕಾರ ಕಾಯಿದೆ ಜಾರಿಗೆ ತಂದಾಗ ಸಹಜವಾಗಿ ಬೇಡರಿಗೆ ದಿಕ್ಕು ತೋಚದಂತಾಗಿತ್ತು. ಈಗಾಗಲೇ ಸಮಾಜದ ಕೆಳಸ್ತರದ ಸಮುದಾಯವಾಗಿ ಬದುಕುತ್ತಿದ್ದವರಿಗೆ ಮತ್ತೊಂದು ಬರೆ ಬಿದ್ದಂತಾಗಿತ್ತು. ಶೋಷಣೆ ಎನ್ನುವುದು ಅತಿರೇಕಕ್ಕೆ ಹೋದಾಗ ಅದನ್ನು ಸಂಘರ್ಷದ ಮೂಲಕವೇ ಸರಿಪಡಿಸಬೇಕೆಂದು "ಬೇಡರು" ತೀರ್ಮಾನಿಸಿದಂತಿತ್ತು.

ಹಲಗಲಿಯ ಬೇಡರ ತೀರ್ಮಾನ ಪ್ರತಿಭಟನೆಯಾಗಿದ್ದರೆ ಇನ್ನುಳಿದ ಭಾರತೀಯರು ದಂಡ ತೆರುವುದನ್ನು ತಪ್ಪಿಸಿಕೊಳ್ಳುವ ಸಲುವಾಗಿ ತಮಗೆ ತಾವೇ ಬಂದು ತಮ್ಮ ಬಳಿಯಿದ್ದ ಶಸ್ತ್ರಾಸ್ತ್ರಗಳನ್ನು ಬ್ರಿಟೀಷ್ ಅಧಿಕಾರಿಗಳಿಗೆ ಒಪ್ಪಿಸಬೇಕಾಯಿತು. ಇಲ್ಲದೇ ಹೋದರೆ

ಮುಚ್ಚಿ ಇಟ್ಟವರಿಗೆ ಮೂರು ವರ್ಷದ ಬೇಡಿ ಹಾಕರಿ ಪೂರಾ
ಕೊಡದ ದಿಟಾಯಿ ಮಾಡಿದವರನಾ ಕಡದ ಹಾಕರಿ ತಾರಾ

ಎಂಬ ಬ್ರಿಟೀಷ್ ಅಧಿಕಾರಿಗಳ ಕಟ್ಟುನಿಟ್ಟಿನ ಆಜ್ಞೆಯಿಂದ ಭಯಭೀತರಾಗಿ ಕೆಲವರು ಸಾಲಸೋಲ ಮಾಡಿ ದನಕರು ಮಾರಿ ಹಬ್ಬದಲ್ಲಿ ತಂದ ಅಮೂಲ್ಯ ಆಯುಧಗಳನ್ನು ನೋಡುನೋಡುತ್ತಾ ಹೇಗೆ ಕೊಡುವುದು ಎಂದುಕೊಂಡು ಹುಗಿದಿಟ್ಟರು ನೆಲದಲ್ಲಿ. ಆ ಸಂದರ್ಭದಲ್ಲಿ ಜಾಯಿತ ಸಾಹೇಬ ಬಂದು ಸಂದುಗೊಂದುಗಳೊಂದನ್ನು ಬಿಡದೆ ಮನೆಮನೆಯ ಮೂಲೆ ಮುಡುಕುಗಳನ್ನು ಹುಡುಕಿಸಿದ. 'ಹ್ಯಾವಲಕ್' ಎನ್ನುವ ಬ್ರಿಟೀಷ್ ಸೈನ್ಯಾಧಿಕಾರಿ ಕಲಾದಗಿ ಸುತ್ತಮುತ್ತ ಹಳ್ಳಿಗಳಿಗೆ ಹೋಗಿ ಶಸ್ತ್ರಾಸ್ತ್ರಗಳನ್ನು ಜನರಿಂದ ಕಸಿದು ಸಂಗ್ರಹಿಸಿದನು. ಬ್ರಿಟೀಷರ ದೌರ್ಜನ್ಯ ನೀತಿಗೆ ಅಂಜಿದ್ದ ಅನೇಕರು ಬಾಯಿಬಿಚ್ಚದೆ ಶಸ್ತ್ರಾಸ್ತ್ರಗಳನ್ನು ಕೊಟ್ಟರು. ಆದರೆ ಹಲಗಲಿಯ ಬೇಡರ ಗುಂಪಿನ ನಾಯಕರಾದ ಪೂಜಾರ, ಹನುಮ, ರಾಮ, ಬಾಲ, ಜಡಗ, ಮುಂತಾದವರು ಶಸ್ತ್ರಾಸ್ತ್ರಗಳನ್ನು ಕೊಡುವುದಕ್ಕೆ ಪ್ರತಿಭಟಿಸಿ ನಿಂತರು. ಅದರ ವಿರುದ್ಧ ತಿರುಗಿ ಬಿದ್ದ ಪ್ರತಿರೋಧ ತಂತ್ರವನ್ನು ಹೆಣೆದು ೧೮೬೦ರ ಸುಮಾರು ನಡೆದಿರಬಹುದಾದ ಬೇಡರ ಈ ದಂಗೆಗೆ ಒಂದು ರಾಜಕೀಯ ಘಟನೆಯ ಸ್ಪರ್ಶವಿದೆ. ಆದರೆ ಇಲ್ಲಿಯ ದಂಗೆ ಮೂಲತಃ ಬೇಡ ಜನಾಂಗಗಳ ಬದುಕಿನ ಧೋರಣೆಗೆ ಸ್ಪಷ್ಟ ನಿದರ್ಶನ. ಜಾಯಿತ ಸಾಹೇಬ ಬಂದು ಸಂದುಗೊಂದುಗಳೊಂದನ್ನೂ ಬಿಡದೆ ಮನೆಮನೆಯ ಮೂಲೆ ಮುಡುಕುಗಳನ್ನು ಹುಡುಕಿಸಿದ. ನಿರ್ವಾಹವಿಲ್ಲದ ಜನ ಕಂಗಾಲಾದರು. ಒಬ್ಬರ ಮೇಲೊಬ್ಬರು ಚಾಡಿ ಹೇಳಿದರು. ಚಾಡಿಯ ಮಾತಾದರೂ ನಿಜವಾದ ಮಾತುಗಳ ಮಾರ್ಗದರ್ಶನದಿಂದ ಎಲ್ಲ ಹೋಗಿಬಿಟ್ಟವು. ವ್ಯಕ್ತಿ ಸ್ವಾತಂತ್ರ್ಯ ಮಾನವನ ಮೂಲಭೂತವಾದ ಹಕ್ಕು. ತಮ್ಮ ಜೀವನಕ್ಕೆ ಬದುಕಿನ ನಿರ್ವಹಣೆಗೂ ಆಧಾರ ಸ್ವರೂಪವಾಗಿದ್ದ ತಮ್ಮ ಶಸ್ತ್ರಾಸ್ತ್ರಗಳನ್ನು ಬಿಟ್ಟು ಕೊಡುವುದು, ಒಪ್ಪಿಸುವುದು ಎಂದರೆ ಅವರಿಗೆ ಪ್ರಾಣವೇ ಹೋದಂತೆ ಶಸ್ತ್ರಾಸ್ತ್ರಗಳು ಹೋದರೆ ಬದುಕಿದರೂ ಸತ್ತಂತೆಯೇ. ಆದ್ದರಿಂದ ಶಸ್ತ್ರಾಸ್ತ್ರಗಳನ್ನು ಎಂದೂ ಕೊಡುವುದಿಲ್ಲ ಎಂದು ಪ್ರತಿಭಟಿಸಿದ ಹಲಗಲಿಯ ಬೇಡರ ಜೀವನ ಮರಣಗಳ ಹೋರಾಟವನ್ನು ಬಹುಶ: ಕಂಡು ಕೇಳಿ ರಚಿತವಾದ ಲಾವಣಿ "ಹಲಗಲಿ ಬಂಟರ ಹತಾರ ಲಡಾಯಿ"

ಹಲಗಲಿ ಗ್ರಾಮ ಮುಧೋಳ ಸಂಸ್ಥಾನದ ಆಳ್ವಿಕೆಗೆ ಒಳಪಟ್ಟದ್ದಾಗಿದ್ದು ಬ್ರಿಟೀಷ್ ಆಳ್ವಿಕೆಗೆ "ರಾಜನಿಷ್ಠ" ವಾಗಿದ್ದು ತನ್ನ 'ಜೀ ಹುಜುರ' ಕಾರ್ಯವನ್ನು ನಿಷ್ಠೆಯಿಂದ ಪಾಲಿಸಿ, ಜನರಿಂದ ಶಸ್ತ್ರಾಸ್ತ್ರ ಸಂಗ್ರಹಿಸುವಲ್ಲಿ ಕುಂಪಣಿ ಸರಕಾರದ ಅಧಿಕಾರಿಗಳಿಗೆ ಎಲ್ಲ ವಿಧದ ಸಹಕಾರ ಸೇವೆ ಸಲ್ಲಿಸಲು ಸಿದ್ಧವಾಗಿತ್ತು.

ಹೊತ್ತು ಬಂದಿತು ಮತ್ತ ನೋಡರಿ ಕತ್ತಿ ಹಿಡುವ ಜನಕ
ಸಿಟ್ಟಿನ ಮಂದಿ ಬಂಟರ ಹಲಗಲಿ ಮುಟ್ಟಲಿಲ್ಲೊ ದಡಕ

ಎಂಬ ಪಲ್ಲವಿಯೊಂದಿಗೆ ಲಾವಣಿ ಪ್ರಾರಂಭವಾಗುತ್ತದೆ. "ಕತ್ತಿ ಹಿಡಿಯುವ ಸಿಟ್ಟಿನ ಮಂದಿ" ಎಂದು ಹಲಗಲಿ ಬಂಟರ ಬಗೆಗೆ ಹೇಳುವಾಗ ಅವರು ವೀರರು, ದಿಟ್ಟರು, ಎಂದು ಕವಿ ಅವರ ವರ್ಣನೆ ಮಾಡಿರುವನಾದರೂ "ಹೊತ್ತು ಬಂದಿತು" ಅವರ ಬದುಕು ದಡ ಮುಟ್ಟಲಿಲ್ಲ ಎನ್ನುವ ವಿಷಣ್ಣತೆಯ ದನಿಯಿಂದಲೇ ತನ್ನ ಲಾವಣಿ ಮುಂದುವರೆಸುತ್ತಾನೆ.

ಒಲ್ಲದ ಮನಸ್ಸಿನಿಂದ ಶಸ್ತ್ರಾಸ್ತ್ರಗಳನ್ನು ಇತರ ವರ್ಗದ ಜನ ಕುಂಪಣಿ ಸರ್ಕಾರಕ್ಕೆ ಅನಿವಾರ್ಯವಾಗಿ ತಂದೊಪ್ಪಿಸಿರಬಹುದು. ಶ್ರೀಮಂತಿಕೆಯ ವಿರುದ್ಧ ಸಿಡಿದೇಳುವ ತಾಕತ್ತು ದೌರ್ಜನ್ಯದ ವಿರುದ್ಧ ಮೆಟ್ಟಿನಿಲ್ಲುವ ಧೈರ್ಯ, ದರ್ಪದ ವಿರುದ್ಧ ಸಿಡಿದೇಳುವ ಶಕ್ತಿಯಿಲ್ಲದ ಕಾರಣ ಈ ರೀತಿಯಲ್ಲಿ ತಮ್ಮ ಶಸ್ತ್ರಾಸ್ತ್ರಗಳನ್ನು ತಂದೊಪ್ಪಿಸಿರಬಹುದು. ಆದರೆ ಹಲಗಲಿಯ ಬೇಡರು ಬಡವರಾಗಿದ್ದರೂ, ಧೈರ್ಯವಂತರೂ, ಶೂರವಂತರೂ ಆಗಿದ್ದರಿಂದ ಅನ್ಯಾಯದ ವಿರುದ್ಧ ದೌರ್ಜನ್ಯದ ವಿರುದ್ಧ ಸಂಘರ್ಷಕ್ಕಿಳಿಯುತ್ತಾರೆ. ಕುಂಪಣಿ ಸರ್ಕಾರ ನಿಶ್ಯಸ್ತ್ರೀಕರಣದ ಕಾಯಿದೆ ಜಾರಿಗೊಳಿಸಲು ಮೊದಲು ಮಾಡಿದ ಕೆಲಸ ಎಲ್ಲ ಕಡೆಗೂ ಡಂಗೂರ ಸಾರಿಸುವುದು "ಹತಾರ ಕಸಗೊಳ್ಳಿರಿ" ಎಂಬ ಹುಕುಮಿನೊಡನೆ ಎಲ್ಲಾ ಕಡೆಗೂ ಡಂಗೂರ ಸಾರಲಾಯಿತು.

"ನಿಮ್ಮ ನಿಮ್ಮ ಹತ್ತಿರ ಇರೋ–ಕತ್ತಿ, ಕಟಾರಿ, ಕೈ ಚೂರಿ, ಬಾಕು, ಗುರ್ಡಿ, ಸುರಗಿ ಚಕ್ರ, ಪಟಾಕ, ಪಿಸ್ತೂಲ, ಕರಲಿ, ತೋಕೆ, ಚಾಪಗೊಡ್ಲಿ, ಭಾಲ, ಭರ್ಜಿ, ಬಿಚಗತ್ತಿ, ತೋಪ, ತುಬಾಕಿ, ಮದ್ದುಗುಂಡ, ಹೀಗೆ ಎಲ್ಲ ಶಸ್ತ್ರಾಸ್ತ್ರಗಳನ್ನು ತಂದು ಸರ್ಕಾರಕ್ಕೆ ಒಪ್ಪಿಸಬೇಕು, ಮುಚ್ಚಿಟ್ಟವರಿಗೆ ಮೂರು ವರ್ಷ ಜೈಲು. ಅಂತಹವರನ್ನು ಬೇಡಿ ಹಾಕಿ ಬೀದಿಯೊಳಗ ಹಾಸಿ ಕರಕೊಂಡು ಹೋಗಲಾದೀತು ಬೇಡಿದ ಕೂಡಲೇ ಕೊಟ್ಟರ ಅಂತಹವರಿಗೆ "ವತನ" ಕೊಡಲಾಗುವುದು ಮತ್ತು 'ಸರಕರ ಬೇಕು ಅಂದರ ಶಸ್ತ್ರಾಸ್ತ್ರಾ ಇಟಗೊಳ್ಳೊದಕ್ಕ ಪರವಾನಿಗಿ ಕೊಡ್ತದ ಇದಕ್ಕ ತಪ್ಪಿ ಕೊಡೋದಿಲ್ಲ' ಅಂತ ಯಾರಾದರೂ 'ದಿಟಾಯ' ಮಾಡಿದರ ಅವರನ್ನ ಗುಂಡಿಕ್ಕಿ ಕೊಲ್ಲಲಾದೀತು. ಹೀಗೆ ಎಲ್ಲಾ ಗ್ರಾಮಗಳ ಬೀದಿಬೀದಿಗಳಲ್ಲಿ ಡಂಗುರ ಸಾರಿದಾಗ ಕೆಲವು ಜನ ಭಯಭೀತರಾಗಿ ತಮ್ಮತಮ್ಮಲ್ಲಿದ್ದ ಶಸ್ತ್ರಾಸ್ತ್ರಗಳನ್ನು ತಂದು ಸರಕಾರಿ ಅಧಿಕಾರಿಗಳಾದ 'ಜಾಯಿತ್' ಸಾಹೇಬರಿಗೆ ಒಪ್ಪಿಸಿದರು. ಒಪ್ಪಿಸಿದ ನಂತರ ಚಿಂತಾಕ್ರಾಂತರಾದರು.

ಹಲ್ಲು ಕಿತ್ತ ಹಾವಿನಂತಾದೆವಲ್ಲ
ಮುಸುಕು ಹಾಕಿ ತಿರುಗುವ ವಿಧವೆಯ ಸ್ಥಿತಿ ಬಂತಲ್ಲ
ತನ್ನ ಹೆಂಡತಿಯನ್ನು ಇನ್ನೊಬ್ಬರಿಗೆ ಕೊಡುವಂಥ ಹೇಡಿತನ ಬಂತಲ್ಲ.
ಸತ್ತ ಹೆಣಕ್ಕೆ ಶೃಂಗಾರ ಮಾಡಿದ ಒಂದು ದುರ್ಬರ ಮನೋಸ್ಥಿತಿ ಒದಗಿತಲ್ಲ.
ಹಾಡೇ ಹಗಲು ಲೂಟಿ ಮಾಡಿದರೂ ಇನ್ನು ಕೇಳುವವರಾರು

ಎಂದು ಜನ ಬಗೆ ಬಗೆಯಾಗಿ ಮಿಡುಕಿದರು, ಕಳವಳಕ್ಕೀಡಾದರು. ಆದರೆ ಇದಕ್ಕೆ ಭಿನ್ನವಾಗಿ ನಡೆದುಕೊಂಡವರೆಂದರೆ ಮುಧೋಳ ಸಂಸ್ಥಾನದ ಹಲಗಲಿ ಗ್ರಾಮದ ಬೇಡರು ಮಾತ್ರ. ಹೊರಡಿಸಿದ ಹುಕುಮಿನ ವಿರುದ್ಧವಾಗಿ ಸೆಟೆದು ನಿಂತರು. ಈ ಬೇಡರ ನಾಯಕತ್ವವನ್ನು ಪೂಜಾರ ಹನುಮ, ಜಡಗ, ಬಾಲ, ರಾಮ, ವಹಿಸಿದ್ದರು.

ಹತಾರ ಹೋದುವು ಅಂದ್ರ ನಮ್ಮ ಜೀವನ ಹೋದ್ಹಂಗ
ಒಮ್ಮೆ ಹ್ವಾದ ಜೀವ ಮತ್ತ ಬರೂದಿಲ್ಲ
ಅದಕ್ಕ ಕೈಯನ ಹತಾರ ಮಾತ್ರ ಕೊಡೂ ಹಂಗಿಲ್ಲ.

ಎಂದು ನಿರ್ಧರಿಸಿದರು. 'ಹತಾರಗಳನ್ನು ಕೇಳೋದಕ್ಕೆ ಬಂದ ಒಬ್ಬ ಕಾರಕೂನ ಶಿಪಾಯಿಗೆ ಕಪಾಳಕ್ಕೆ ಬಿಗಿದರು. ಬಂದ ಸಿಪಾಯಿ ನೆಲಕ್ಕೆ ಬಿದ್ದ. ಕಾರಕೂನ ಸಿಪಾಯಿ ಬಂದು ಮೇಲಿನ ಸಾಹೇಬರಿಗೆ ಹೇಳಿಕೊಂಡ. ಇದರಿಂದ ಕುಪಿತನಾದ ಸಾಹೇಬ ಪಕ್ಕದ ಹಳ್ಳಿ ಕುಂದರಗಿಗೌಡ ಕೃಷ್ಣನಾಯಕನನ್ನು ಬೇಡರ ಮನವೊಲಿಸಿ ಸಮಾಧಾನ ಮಾಡಲು ಕರೆಯಿಸಿದ.

ಕುಂದರಗಿ ಗೌಡ 'ಹಟ ಮಾಡಬ್ಯಾಡ್ರಿ ನಿಮ್ಮ ನಿಮ್ಮ ಹತಾರ ಸಾಹೇಬರ ವಶಾಕ್ಕ ಕೊಡ್ರಿ' ಎಂದು ಹೇಳಿದ. ಅವನ ಮುಖಕ್ಕೆ ಹೊಡೆದ ಹಾಗೆ ಬೇಡರು ಉತ್ತರಿಸಿದರು

'ಹೆಂಗ್ಸಾಗಿ ಕೈಯಾಗ ಬಳಿ ಇಟ್ಟಿಲ್ಲ.
ಯಾರಂವ ಹೇಳಾಂವ
ಜೀವ ಹ್ವಾದರೂ ಹತಾರ ಕೊಡೂ ಹಾಂಗಿಲ್ಲ

ಗೌಡ ನಿರುಪಾಯವಾಗಿ ಮರಳಿ ತನ್ನ ಅಸಹಾಯಕತೆಯನ್ನು ಸಾಹೇಬನ ಮುಂದೆ ವ್ಯಕ್ತಪಡಿಸಿದ. ಸಾಹೇಬರಿಗೆ ಭಾರೀ ಕೋಪ–ತಾಪ ಕಟ್ಟಸಿ ಮುಂಗೈ ಕಡಕೊಂಡ. ಕುದುರೆ ಸಿಪಾಯಿಗಳಿಗೆ ಹಲಗಲಿಗೆ ಹೋಗಿ ದಾಳಿ ಮಾಡುವಂತೆ ಹುಕುಮ್ ಕೊಟ್ಟ.. ಕುದುರೆಯ ಸಿಪಾಯಿಗಳು ಹಲಗಲಿಗೆ ಮುತ್ತುತ್ತಿರುವಂತೆಯೇ ಹಲಗಲಿಯೊಳಗಿಂದಲೇ ಮುಂಗಾರಿ ಮಳೆಯ ರಭಸದಂತೆ ಬರುತ್ತಿರುವವರ ಮೇಲೆ ಗುಂಡು ಹೊಡೆದರು. ಗುಂಡಿನ ಹೊಡೆತ ಬಿರುಸನ್ನು ಹತ್ತಿಕ್ಕುವುದು ಸಾಧ್ಯವಾಗದ ಸಿಪಾಯಿಗಳು ತಿರುಗಿ ಒಂದು ಗುಂಡದ ಹತ್ತಿರ ಬಂದು ಉಳಿದು 'ಲಗೂ ದಂಡ ಕಳಿಸಿರಿ' ಎಂದು ಪತ್ರ ಬರೆದು ಸಾಹೇಬನ ಕಡೆ ಒಬ್ಬನನ್ನು ಓಡಿಸಿದರು. ಈ ಸುದ್ದಿ ಮುಟ್ಟಿದ್ದೇ ತಡ ಸೈನಿಕರೇ ನೇರವಾಗಿ ಬಂದು ಹಲಗಲಿಯ ಮೇಲೆ ದಾಳಿ 'ಆರು ತಾಸ ರಾತ್ರಿ ಹೊತ್ತು'–ಮೈ ಮರವೆಯಿಂದ ಮಲಗಿದ್ದ ಊರ ಜನ ಕಕ್ಕಾಬಿಕ್ಕಿಯಾದರು. ಕಂಡಕಂಡಲ್ಲಿ ಸೈನಿಕರಿಂದ ಗುಂಡಿನ ಸುರಿಮಳೆ. ದಿಕ್ಕೆಟ್ಟು ಜನ ಓಡತೊಡಗಿದರು. ಅವರನ್ನು ಬೆಂಬತ್ತಿ ಸಿಕ್ಕಸಿಕ್ಕಲ್ಲಿ ಕೊಚ್ಚಿ ಹಾಕಿದರು. ಎಲ್ಲ ಕಡೆಗೂ ಹೆಣ ರಾಶಿ ಬಿದ್ದುವು. ಇಷ್ಟಾದರೂ ಜನ ಅಂಜಲಿಲ್ಲ. 'ದರದ' ದಯಾಮಯಾ–ಇಲ್ಲದ ತಿರುತಿರುವಿ ಕಡದರು.

'ಹೆಬಲಕೆ' ಸಾಹೇಬನಿಗಾಗಿ ಅಲ್ಲಿ ಒಂದು ಡೇರೆ ತಂಬು ಸಿದ್ಧವಾಯಿತು. ಸೈನಿಕರ ದಾಳಿ ನಡೆದೇ ಇತ್ತು. ಡೇರೆ ಸುತ್ತ ಫೇರೆ ಕವಾಯಿತು, ಜನರ ಚೀರಾಟ, ಗೋಳು, ಆಕ್ರಂದನ ಒಂದು ಕಡೆ ಗುಂಡಿನ ಸಪ್ಪಳ ಇನ್ನೊಂದು ಕಡೆ ಸುತ್ತೂ ಸಿಡಿಲು ಬಂದು ಎರಗಿದಂತಾಯಿತು. ಎಲ್ಲ ಕಡೆ 'ಕೆಂಧೂಳಿ' ನೆತ್ತರು. ಊರ ಅಗಸಿಗೆ ಬಂದು ನಿಂತ ಹೆಬಲಿಕೆ ಸಾಹೇಬ ಸುತ್ತೂ ದಂಡು ನಡುವೆ ಬೇಡರ ಗುಂಪು 'ನಡವಿ ಶಿಕ್ಕರೊ ಬಿಡಿಸವರ್ ಯಾರ್ ಈಗ' ಅಗಸಿ ಬಾಗಿಲಿಗೆ ಬಂದು ನಿಂತ ಹೆಬಲಕ್ ಹೇಳಿದ

'ವ್ಯರ್ಥ ಸಾಯಬೇಡಿರಿ ಎಲ್ಲ ತಂದು ಒಪ್ಪಿಸಿರಿ'

ನಿಮ್ಮನ್ನು ಕೊಲ್ಲೋದಿಲ್ಲ ಆ ರೀತಿ ಕೌಲು-ಕವಲು ಕೊಡುತ್ತೇವೆ, ಕರಾರು ಮಾಡಿಕೊಳ್ಳೋಣ' ಎಂದು ಬುದ್ಧಿಮಾತು ಹೇಳಿದ. ಎಲ್ಲೋ ಒಂದು ಕಡೆ ಬೇಡರ ಬಗ್ಗೆ ಹೆದರಿಕೆ ಇತ್ತು. ಬೇಡರ ಗುಂಪಿಗೆ ಇವನ ಮಾತಿನಲ್ಲಿ ನಂಬಿಕೆ ಹುಟ್ಟಲಿಲ್ಲ. ಆಗ ಜಡಗ ಗುಡುಗಿದ

'ಲೇ ಇವರನ್ನ ನಂಬಬ್ಯಾಡ್ರೀ
ಇವರು ಯಿಸ್ವಾಸ ಘಾತಕರು,
ಫಿತೂರಾ ಮಾಡ್ತಾರೂ, ಹೊಡಿರಲೇ ಇವರನಾ
ಮುಂದ ಘೋರ ಆದೀತು'

'ಢಡಲ್' ಎಂದು ಸಿಡಿದ ಒಂದೇ ಗುಂಡಿಗೆ ಹೆಬಲಕ್ ಉರುಳಿ ಹೆಣವಾದ. ಈ ಸುದ್ದಿ ಕೇಳಿ ಕಾರ್ ಸಾಹೇಬ ಬೆಂಕಿ ಕಾರಿದ. ಇಡೀ ಊರನ್ನೇ ಲೂಟಿ ಮಾಡಲು ಬೇಡರನ್ನು ಸದೆಬಡಿಯಲು ಸೈನಿಕರಿಗೆ ಆಜ್ಞಾಪಿಸಿದ. ಮತ್ತೆ ಗುಂಡಿನ ಸುರಿಮಳೆ 'ಅಷ್ಟು ಮುನ್ನೂರ ಮಂದಿ ಸೈನಿಕರನ್ನು ಗುಂಡು ಹಾಕಿ ಕೊಲ್ತೇನಿ.' ಎಂದು ಹಣಮ ಗುಂಡು ಹಾರಿಸಿದ. ಇನ್ನೊಂದು ಕಡೆ ಭೀಮ ಅನ್ನೋವನೂ ಬಂದು ಐನೂರು ಸೈನಿಕರನ್ನು ಸದೆಬಡಿಯತೊಡಗಿದ. ಬಾಲ ಹತ್ತು ಕುದರಿ ಸಿಪಾಯಿಗಳನ್ನು ಕಡದ ಹಾಕಿದ. ರಾಮನ ಕಡತ ಅದೂ ವಿಪರೀತ. ರಕ್ತದ ಕಾಲುವೆ ಹರಿಯಿತು. ಸೈನಿಕರು ಸಾವಿರ ಮಂದಿ ಇವರು ನಾಲ್ಕೈದು ಜನ-ಒಬ್ಬೊಬ್ಬರಾಗಿ ಬಲಿಯಾದರು. ಆರುಗುಂಡು ತಾಕಿ ಹಣಮ ನೆಲಕ್ಕೆ ಬಿದ್ದಾಗ ಜನ ಎಲ್ಲ ಅವನ ಸುತ್ತೂ ರೇಜುಗಟ್ಟಿ ಬೋರಾಡಿ ಅಳುತ್ತ ಹುದುಗಿ ನಿಂತರು. ಅಷ್ಟರಲ್ಲೇ ಒಬ್ಬ ಏರಿ ಬರುತ್ತಿದ್ದ ಸವಾರನ ಕುದುರಿ ಕಾಲನ್ನೇ ಭೀಮ ಕತ್ತರಿಸಿ ಹಾಕಿದ ಸವಾರ ನೆಲಕ್ಕುರುಳಿದ.

ಇದೇ ಸಮಯದಲ್ಲಿ 'ರಾಮಿ' ಎನ್ನುವಾಕೆ ಕತ್ತಿಬೀಸಿ ಮೂವರು ಸೈನಿಕರನ್ನು ಕತ್ತರಿಸಿದಳು. ಆರು ಕುದುರಿ ಕೊಚ್ಚಿ ಹಾಕಿದಳು. ಕಡೆಗೆ ಬಾಲನ ಶೌರ್ಯಕ್ಕೆ ಸಮಾನ ಶೌರ್ಯ ತೋರಿಸಿ ಗುಂಡು ಸಿಡಿದು ಅವಳೂ ಬಿದ್ದಳು. ('ರಾಮಿ ಹನುಮ ನೆಲಕ್ಕೆ ಬಿದ್ದು ಜನ ಬೋರಾಡುತ್ತಿರುವಾಗಲೇ ಹೊರಗೆ ಬಂದು 'ಹತಾರ'ದಿಂದ ಮೂರು ಜನರನ್ನು ಕೊಲ್ಲುತ್ತಾಳೆ. ಅವಳಲ್ಲಿ ಉಕ್ಕಿದ ಈ ರೋಷ ಪ್ರಾಣದ ಹಂಗು ತೊರೆದ ರೌದ್ರತೆ ನೋಡಿದರೆ ಬೇಡರ ಗುಂಪಿನಲ್ಲಿದ್ದ ಹನುಮನಿಗೆ ವಿಶೇಷ ಸಂಬಂಧಿಯಾಗಿರಬೇಕು) ಊರೆಲ್ಲ ಲೂಟಿಯಾಯಿತು. ಮನಿಮನಿ ಹೊಕ್ಕ ಸಿಪಾಯಿಗಳು ಊರಲ್ಲಿ ಏನೂ ಬಿಡಲಿಲ್ಲ. ದನಕರು ಉಳಿಯಲಿಲ್ಲ. ಊರೆಲ್ಲ ಮನೆಮನೆ ಹೊಕ್ಕು ಮುತ್ತು ಮಾಣಿಕ, ಬೆಳ್ಳಿ, ಬಂಗಾರ, ಹರಳಿನುಂಗುರ, ಹೊನ್ನುಂಗುರ, ಸರಗಿಸರ್ದಳಿ, ಬುಗುಡಿ ಬಾವಲಿ, ಕಡಗ, ಕಂಕಣ, ಡಾಬು, ನಡಕಟ್ಟಿ, ಎಲ್ಲವನ್ನು ಸಿಕ್ಕಷ್ಟು ದೋಚಿಕೊಂಡರು. ಇಷ್ಟೇ ಅಲ್ಲ. ಸಿಕ್ಕಸಿಕ್ಕ ಬಟ್ಟೆ: ದಿನಿ ನಿತ್ಯದ ಜಿನಸಿ, ಗಂಗಾಳಚರಿಗಿ, ಮಂಗಳಸೂತ್ರ, ಬೀಸುಕಲ್ಲು, ಮೊದಲ ಮಾಡಿ ಕೊಳ್ಳೆ ಹೊಡೆದು ಇಡೀ ಹಲಗಲಿಗೆ ಬೆಂಕಿ ಹಚ್ಚಿದರು. ಅಲ್ಲಿದ್ದಲ್ಲಿಯೇ ಕೂಸು ಸಹ ಸುಟ್ಟುಹೋದುವು. ನಾಲಗೆ ಚಾಚಿದ ಉರಿಯಲ್ಲಿ ಇಡೀ ಹಲಗಲಿ ಉರಿದು ಬೂದಿಯಾಯಿತು ಗುರುತು ಸಹ ಸಿಗದಷ್ಟು.

ಹಲಗಲಿಯ ಬೇಡರ ಜೀವನಾಧಾರವಾಗಿದ್ದ ಆಯುಧಗಳನ್ನೇ ಆಳುತ್ತಿದ್ದ ಸರ್ಕಾರ ಕೇಳಿದಾಗ ಬದುಕಿದ್ದು ಆಯುಧಗಳನ್ನು ಕಳೆದುಕೊಳ್ಳುವುದಕ್ಕಿಂತ ಕಾದಾಡಿ ಸಾಯುವುದೇ ಲೇಸೆಂದು ಬಗೆದ ಹಾಗೆ ಭಾಸವಾಗುತ್ತದೆ. ಶೋಷಣೆಯು ಅತಿರೇಕಕ್ಕೆ ಹೋದಾಗ ಇಂತಹ ಸಂಘರ್ಷಗಳು, ಅವಘಡಗಳು ಸಂಭವಿಸಿರುವುದನ್ನು ನಾವು ಇತಿಹಾಸದುದ್ದಕ್ಕೂ ಕಾಣುತ್ತೇವೆ.

ಬೇಡರ ಆರ್ಥಿಕ ಸ್ಥಿತಿಗತಿಗೆ ಜೀವನನಿರ್ವಹಣೆಗೆ ಅವರ ಶಕ್ತಿ ಶಸ್ತ್ರಾಸ್ತ್ರಗಳೇ ಮೂಲಾಧಾರ. ಅದನ್ನು ಕಸಿದುಕೊಳ್ಳುವುದು ಎಂದರೆ ಒಂದು ರೀತಿಯಲ್ಲಿ ಬ್ರಿಟೀಷರ ಶಸ್ತ್ರಾಸ್ತ್ರ ನಿಶ್ಶಸ್ತ್ರೀಕರಣ ಕಾಯಿದೆ ಅದರ ಕಾರ್ಯಾಚರಣೆ ಅವರಿಗೆ ಬದುಕು ಸಾವಿನ ಪ್ರಶ್ನೆಯಾಯಿತು. ಆಕಸ್ಮಿಕ ಸಿಡಿಲೆರಗಿದಾಗ ಅವರ ವ್ಯಕ್ತಿತ್ವದ ಹೊರಕವಚ ಕಳಚಿ ಆಂತರಿಕ ಸತ್ತ್ವ ಚಿಮ್ಮುತ್ತದೆ. ತಮ್ಮ ಶಸ್ತ್ರಗಳಿಗಾಗಿ ಬೇಡರು ಉಗ್ರ ಪ್ರತಿಭಟನೆಯನ್ನು ವ್ಯಕ್ತಪಡಿಸಲೇಬೇಕಾಯಿತು. ಇದು ಒಬ್ಬ ವ್ಯಕ್ತಿಯ ಪ್ರತಿಭಟನೆಯಾಗದೇ ಇಡೀ ಸಮುದಾಯದ ಬಂಡಾಯವಾಗುತ್ತದೆ. ಇದರಿಂದ ಜನಪದ ಗುಂಪುಗಳ ಸಾಮೂಹಿಕ ರೂಪದ ನಡವಳಿಕೆ ನಿರ್ಧಾರಗಳು ಗೊತ್ತಾಗುತ್ತವೆ. ಸ್ವರಕ್ಷಣೆಗಾಗಿ ತಮ್ಮ ಮೇಲೆ ಹೊರಗಿನಿಂದ ಹೇರಲ್ಪಟ್ಟ ನಿರ್ಬಂಧಗಳನ್ನು ಧಿಕ್ಕರಿಸುವ ವಿಚಲಿತಗೊಳ್ಳುವ ಸ್ಥೈರ್ಯ ತಮ್ಮ ಸೀಮಿತ ಶಕ್ತಿ ಸಲಕರಣೆಗಳನ್ನು ಅರಿವಿಗೆ ತಂದುಕೊಳ್ಳದೇ ಎಷ್ಟೇ ದುರ್ಬರ ಪರಿಸರದಲ್ಲೂ ಧುಮುಕುವುದು. ಪ್ರಾಣದ ಹಂಗು ತೊರೆದು ಹೋರಾಟ-ಸಾವು, ಸಂಘರ್ಷ, ಇವೇ ಕೆಲವು ಜನಪದ ವೃಂದಗಳ ವಿಲಕ್ಷಣ ಗುಣಗಳೂ ಆಗಿವೆ.

ಹಲಗಲಿ ಬೇಡರ ಈ ಬಂಡಾಯ ಒಂದು ಐತಿಹಾಸಿಕ ಸಂದರ್ಭವಾಗಿದ್ದರೂ ಉಳ್ಳವರು ಮತ್ತು ಇಲ್ಲದವರ ನಡುವೆ ನಡೆಯುವಂತಹ ಒಂದು ವರ್ಗಸಂಘರ್ಷವೆಂದೇ ಹೇಳಬೇಕು.

೩.೧.೨ ಮಾಗಡಿ ಕೆಂಪೇಗೌಡ:

ಮಾಗಡಿ ಕೆಂಪೇಗೌಡನ ಕಥೆ ಬೆಂಗಳೂರು, ತುಮಕೂರು, ಮುಂತಾದ ಕರ್ನಾಟಕದ ಪೂರ್ವದಿಕ್ಕಿನ ಜಿಲ್ಲೆಗಳಲ್ಲಿ ಪ್ರಾಚುರ್ಯದಲ್ಲಿದೆ. ಹೆಳವರು. ದೊಂಬಿದಾಸರು, ತೆಲುಗು ಜಂಗಮರು ಈ ಮೂರು ವರ್ಗದ ವೃತ್ತಿಗಾಯಕರು ಈ ಲಾವಣಿಯನ್ನು ಹಾಡುತ್ತಾರಾದರೂ ದೊಂಬಿದಾಸರೇ ಹಾಡುಗಾರಿಕೆಯಲ್ಲಿ ಪರಿಣತಿ ಸಾಧಿಸಿದವರಾಗಿದ್ದಾರೆ. ಇದು ದೊಂಬಿದಾಸರ ಏಕಮಾತ್ರ ಲಾವಣಿ. ಇದೇ ಕಥೆಯ ಮತ್ತೊಂದು ರೂಪ ಡಾ. ಜೀ.ಶಂ.ಪ ರವರ 'ಜನಪದ ವೀರಕಾವ್ಯಗಳು' ಸಂಕಲನದಲ್ಲಿ ದೊರೆಯುತ್ತದೆ. ಹೆಳವರು ಈ ಕಥೆಯನ್ನು ಗಂಟೆಯ ಮೇಲೂ ದೊಂಬಿದಾಸರು ಮತ್ತು ತೆಲುಗು ಜಂಗಮರು ಏಕತಾರಿಯ ಮೇಲೂ ಹಾಡುತ್ತಾ ಈ ಮೂರು ವರ್ಗದವರೂ ಹಾಡುವ ಕಥೆಯಲ್ಲಿ ಪರಸ್ಪರ ಹೋಲಿಕೆ ಇದೆ. ಪ್ರಸ್ತುತ ದೊಂಬಿದಾಸರು ಹಾಡುವ ಲಾವಣಿಯನ್ನು ಮಾತ್ರ ಇಲ್ಲಿ ಗಮನಿಸಲಾಗಿದೆ.

ಎಲಹಂಕ ನಾಡಿನ ತಿಮ್ಮೇಗೌಡ ದಂಪತಿಗಳ ಹಿರಿಯ ಮಗ ನಂಜೇಗೌಡ 'ಏಳು ಜತೆ ಮೆಟ್ಟು ಸವೆದೊ ಹೆಣ್ಣು ಮಾತ್ರ ಸಿಗಲಿಲ್ಲ' ಎನ್ನುವ ಸ್ಥಿತಿ ಕೊನೆಗೆ ನಂಜೇಗೌಡನ ವಿವಾಹ

ಹರಿಯಮ್ಮನೆಂಬುವಳೊಂದಿಗೆ ನೆರವೇರಿತು. ಹೀಗಿರುವಾಗ ಯಲಹಂಕದಲ್ಲಿ ಘೋರಕ್ಷಾಮ ಉಂಟಾಯಿತು. ನಂಜೇಗೌಡನ ಮನೆಯನ್ನೂ ಅದು ಮುಟ್ಟಿತು. 'ಊರಿನಲ್ಲಿ ಎಲ್ಲರೂ ಸತ್ತು ಹೋಗಿ ಕುಪ್ಪಮ್ಮ, ಹರಿಯಮ್ಮ, ಮತ್ತು ಮೂರು ತಿಂಗಳ ಕೆಂಪೇಗೌಡ ಮಾತ್ರ ಉಳಿದುಕೊಂಡರು. ಕುರುಡಿ ಅತ್ತೆ, ಮೈದುನ ಕೆಂಪೇಗೌಡನನ್ನು ನೋಡಿಕೊಳ್ಳುವ ಹೊಣೆ ಹರಿಯಮ್ಮನ ಮೇಲೆ ಬಿತ್ತು. ಮಾವ ಮತ್ತು ಗಂಡನ ತಿಥಿಯ ಸಾಲಕ್ಕೆ ಬತ್ತಿ ಬಿದ್ದು ಅವರು ಹೊಲಮನೆ ಕಳೆದುಕೊಂಡು ಮಾಗಡಿಯ ಕಡೆ ವಲಸೆ ಬಂದರು.

ಕೆಟ್ಟು ತವರು ಸೇರಬಾರದೆಂಬ ಕಟು ಅನುಭವದೊಂದಿಗೆ ಮಾಗಡಿಯ ಧರ್ಮಚಾವಡಿಯಲ್ಲಿ ಮೂವರೂ ಆಶ್ರಯ ಪಡೆಯುತ್ತಾರೆ. ಅವರ ಬಡತನ ಹೇಳತೀರದು. ಉಣ್ಣುವುದಕ್ಕೆ ಅನ್ನವಿಲ್ಲ, ಉಡುವುದಕ್ಕೆ ಬಟ್ಟೆ ಇಲ್ಲ. ಹರಿಯಮ್ಮ ಹಾಲಿನಲ್ಲೇ ಮೈದುನನನ್ನು ಸಾಕುತ್ತಾಳೆ. ಈ ಮೂವರೂ ಧರ್ಮಚಾವಡಿಯಲ್ಲಿ ಉಳಿಯುವುದಕ್ಕೆ ಅಲ್ಲಿನ ಹಾರುವರು ಆಕ್ಷೇಪ ಎತ್ತುತ್ತಾರೆ. ಅಲ್ಲಿಂದ ಜಾಗ ಖಾಲಿ ಮಾಡಿ ಹಿಪ್ಪೆ ತೋಪಿನ ಗುಡಿಸಲಿಗೆ ಹೋಗುತ್ತಾರೆ. ಈಚಲು ಬರಲು ತಯಾರಿಸಿ ಅದನ್ನು ಮಾರಿ ಜೀವನ ಸಾಗಿಸುತ್ತಾರೆ. ಹನ್ನೆರಡು ವರ್ಷ ತುಂಬುತ್ತಲೂ ಕೆಂಪೇಗೌಡ ಅತ್ತಿಗೆಯೊಂದಿಗೆ ಬರಲು ಮಾರಲು ಮಾಗಡಿ ಪೇಟೆಗೆ ಬರುತ್ತಾನೆ. ಅವನು ಗಟ್ಟಿಮುಟ್ಟಾಗಿ ಬೆಳೆದದ್ದನ್ನು ನೋಡಿದ ಗುರಿಕಾರನಿಗೆ ಕೆಲಸಕ್ಕೆ ಇರಿಸಿಕೊಳ್ಳುವ ಸ್ವಾರ್ಥ ಹುಟ್ಟುತ್ತದೆ. ಹರಿಯಮ್ಮನನ್ನು ಕೇಳಿದಾಗ ಆಕೆ ಸಮ್ಮತಿಸಲಿಲ್ಲ. ಸಮಯ ಸಾಧಿಸಿ ಒಬ್ಬನೇ ಬರಲು ಮಾರಲು ಬಂದಾಗ ಉಪಾಯದಿಂದ ಮನೆಗೆ ಕರೆದುಕೊಂಡು ಹೋಗಿ ಹಾಲು ಅನ್ನ ಉಣಬಡಿಸಿ ಮೋಸದಿಂದ ಒಪ್ಪಿಸಿಕೊಂಡು ಬಿಡುತ್ತಾನೆ.

ಆಗ ಊಟಮಾಡೊ ಸಮಯದಲ್ಲಿ
ಎರಡು ರಟ್ಟೆ ಹಿಡಿದುಕೊಂಡ್ರು
ಅಯ್ಯ ಬರುವೋದು ನಿಜವೇ ಆದ್ದೆ
ಹೆಬ್ಬೆಟ್ಟ ಬಿತ್ತಪ್ಪ
ಆಗ ಒಪ್ಪಂದವ ಮಾಡಿದರು

ಗುರಿಕಾರ ಬಾಲಕ ಕೆಂಪೇಗೌಡನನ್ನು ತೋಟದ ಕೆಲಸಕ್ಕೆ ನೇಮಿಸಿಕೊಂಡು ಹೊಡೆದು ಬಡಿದು ಹಿಂಸಿಸಿದ. ಹಗಲು ಇರುಳು ದುಡಿಸಿಕೊಂಡ. ತಾಯಿ, ಅತ್ತಿಗೆ ತುಂಬಾ ವ್ಯಥೆಪಟ್ಟರು. ಕೆಂಪೇಗೌಡನ ಮೇಲಿನ ಆಸೆಯಿಂದ ಆತನ ತಾಯಿ ಪ್ರಾಣವನ್ನೇ ಬಿಟ್ಟಳು. ಹರಿಯಮ್ಮ ಮೈದುನನ ಕಷ್ಟನಿವಾರಣೆಗಾಗಿ ಮಾಗಡಿ ರಂಗಧಾಮನನ್ನು ಭಕ್ತಿಯಿಂದ ಪ್ರಾರ್ಥಿಸಿದಳು. ಒಮ್ಮೆ ತೋಟದಲ್ಲಿ ಕೆಲಸ ಮಾಡುತ್ತಿದ್ದಾಗ, ಮಾಯದ ನಿದ್ರೆಕೊಟ್ಟು ತಲೆಯ ಮೇಲೆ ಏಳು ಹೆಡೆಯ ಸರ್ಪವಾಗಿ ಹೆಡೆಬಿಚ್ಚಿದ ರಂಗಧಾಮ, ಮರೆಯಲ್ಲಿ ನಿಂತು ಇದನ್ನು ನೋಡಿದ. ಗುರಿಕಾರ, ಮುಂದೆ ಕೆಂಪೇಗೌಡ ರಾಜನಾಗುತ್ತಾನೆಂದು ತಿಳಿದು ಅವನನ್ನು ಮನೆಗೆ ಕರೆದುಕೊಂಡು ಬಂದು ಉಪಚರಿಸಿದ. ಏಳಹಂಡನೀರಹೊಯ್ದು, ಹಾಲು ಅನ್ನ ಉಣ್ಣಿಸಿ ರಾಜನಾದರೆ ತನ್ನನ್ನೇ ಮಂತ್ರಿಯಾಗಿ ಮಾಡಿ ಕೊಳ್ಳಬೇಕೆಂದು ಭಾಷೆ ಪಡೆದು ಕೆಂಪೇಗೌಡನನ್ನು ಬೀಳ್ಕೊಟ್ಟ.

ಇಲ್ಲಿಯೂ ಕೂಡ ಮೇಲ್ವರ್ಗದವರ ಸ್ವಾರ್ಥ, ಅವಕಾಶವಾದಿತನವನ್ನು ಕಾಣಬಹುದು. ಒಂದು ದಿನ ಕೆಂಪೇಗೌಡ ಅತ್ತಿಗೆಯೊಂದಿಗೆ ಕಾಡಿನಿಂದ ಗರಿಹೊತ್ತು ತರುವಾಗ ಮಾಯದ ಮಳೆ ಬಂದು ಗರಿಗಳೆಲ್ಲ ಕೊಚ್ಚಿಹೊದುವು. ಒಂದು ಕಡೆ ಹೋಗಿ ನಿಂತು ಅವುಗಳನ್ನು ಎಳೆದಾಗ ತಳದಲ್ಲಿ ಏಳು ಕೊಪ್ಪರಿಗೆ ನಿಧಿ ಅವನಿಗೆ ದೊರಕಿತು. ಮಾಗಡಿ ರಂಗಧಾಮ "ಏಳು ವರ್ಷದ ಹುಡುಗನಾಗಿ ಕಾಣಿಸಿಕೊಂಡು ಮುಂದೆ ಕೆಂಪೇಗೌಡ ರಾಜನಾಗುವನೆಂದೂ ಆಗ ತನ್ನ ಗುಡಿಯನ್ನು ಜೀರ್ಣೋದ್ಧಾರ ಮಾಡಬೇಕೆಂದೂ ತಿಳಿಸಿ ಮಾಯವಾಗುತ್ತಾನೆ. ಮುಂದೆ ರಂಗನಾಥನ ಗುಡಿಯ ಅಡಿಪಾಯ ಮಾಡಿಸುವಾಗ ಕೆಂಪೇಗೌಡನಿಗೆ ದೊರೆತನ ಬಂತು. ಕೊಟ್ಟಮಾತಿನಂತೆ ಅವನು ಹಾರುವನನ್ನು ದಳವಾಯಿ ಮಾಡಿಕೊಂಡ. ಒಂಭತ್ತು ಜನ ಪಾಳೆಯಗಾರರನ್ನು ಗೆದ್ದ. ಹರಿಯಮ್ಮನ ಆದೇಶದ ಮೇರೆಗೆ ಅಲುಮೇಲು ಮಂಗಮ್ಮನನ್ನು ಮದುವೆಯಾಗಿ ಆಕೆಯಿಂದ ಒಂದು ಹೆಣ್ಣು ಮಗುವ ಪಡೆದ ದಿನ "ದಂಡುದಾಳಿ ಕಟ್ಟಿಕೊಂಡು ಬೆಂಗಾಡಿಗೆ ಹೋದ" ಅದು ಗಂಡು ಭೂಮಿಯೆಂದು ತಿಳಿದಾಗ ಅಲ್ಲೇ ಪಟ್ಟಣ ಕಟ್ಟಿಸಿದ. ಅದೇ ಬೆಂಗಳೂರು ಪಟ್ಟಣವೆಂದು ಹೆಸರುವಾಸಿಯಾಯಿತು.

ರಂಗಧಾಮನ ಪೂಜೆಗಾಗಿ ಒಂದು ದಿನ ಹಾರುವ ದಳವಾಯಿಯೊಂದಿಗೆ ಗುಡಿಗೆ ಬಂದ ಪೂಜಾರಿ ಪುಟ್ಟಣ್ಣ ಸಂಭ್ರಮದಿಂದ ಪೂಜೆ ನಡೆಸಿ ಪ್ರಸಾದ ಕೊಟ್ಟ. ಅದರಲ್ಲಿ ಬಿಳಿಯ ಕೂದಲೊಂದು ಸಿಕ್ಕಿತು.

ಅಯ್ಯ ನೋಡಿದೇನೋ ಕೆಂಪೇಗೌಡ
ರಂಗಧಾಮ ಮುದುಕನಾದ
ಅಯ್ಯ ಮುದಿಯ ರಂಗಧಾಮ
ಗಂಡುಮಕ್ಕಳ ವರವನ್ನು
ಅಯ್ಯ ಹ್ಯಾಗೆತಾನೆ ಕೊಡುತಾನೆ

ಎಂದು ಪ್ರಶ್ನಿಸಿ 'ಸೋಮೇಶ್ವರನ ಗುಡಿ ಕಟ್ಟಿಸು ಮಕ್ಕಳಾಗುತ್ತದೆ' ಎಂದು ಪ್ರೇರಣೆ ಕೊಟ್ಟ. ಅದರಂತೆ ಅರ್ಧಗುಡಿ ಸಿದ್ಧವಾಯ್ತು. ಆದರೆ ಬೆಳಗಾಗೊ ಹೊತ್ತಿಗೆ ಗುಡಿಯೆಲ್ಲ ಕುಸಿದು ಬಿದ್ದಿತು. ಅದು ಬಿಮ್ಮನೆಸೆಯ ಬಲಿ ಕೇಳುತ್ತದೆಂದು ಶಾಸ್ತ್ರದಿಂದ ತಿಳಿದುಕೊಂಡ. ಕೆಂಪೇಗೌಡ ಹೆಂಡತಿ ಮಂಗಮ್ಮನನ್ನೇ ಬಲಿಕೊಟ್ಟನು. ಮಾಗಡಿ ರಂಗಧಾಮ ಪುನಃ ಏಳುವರ್ಷದ ಹುಡುಗನಾಗಿ ಕಾಣಿಸಿಕೊಂಡು ವಾರಕ್ಕೊಂದು ಪೂಜೆನಾದರೂ ಮಾಡಿಸುವಂತೆ ಕೇಳಿದ.ಕೆಂಪೇಗೌಡ ತಿರಸ್ಕಾರದಿಂದ ಕಂಡು ಆ ಗುಡಿಯ ಬಾಗಿಲು ಮುಚ್ಚಿಸಿದ. ಬುದ್ಧಿ ಹೇಳಲು ಬಂದ ಹರಿಯಮ್ಮನನ್ನೇ ತಿರಸ್ಕರಿಸಿದ್ದರಿಂದ ಆಕೆ ಆಕೆ ಆಘಾತದಿಂದ ಪ್ರಾಣಬಿಟ್ಟಳು. ಕೆಂಪೇಗೌಡನ ವಿನಾಶ ಕಾಲ ಪ್ರಾಪ್ತವಾಯಿತು. ರಂಗಧಾಮ ಮೈಸೂರು ಚಾಮುಂಡಿಯ ಆಶ್ರಯ ಪಡೆದ. ಹಾರುವರು ಹಾಳು ಸಂಚು ಮಾಡಿದರು. ಸಮಯ ಸಾಧಿಸಿ ಚಾಮುಂಡಿ ಮಾಗಡಿಯನ್ನು ಸೇನೆಯೊಂದಿಗೆ ಮುತ್ತಿದರು. ಆಗ ಕೆಂಪೇಗೌಡ ಸೂಳೆ ಚೆನ್ನಕ್ಕನ ಮನೆಯಲ್ಲಿದ್ದ. ಅಲ್ಲಿಂದ

ತಪ್ಪಿಸಿಕೊಳ್ಳಲಾಗದಂತೆ ಮನೆಸುತ್ತ ಉಕ್ಕಿನ ದಸಿ ನಡೆಸಲಾಗಿತ್ತು. ಮದ್ದುಗುಂಡುಗಳಿಗೆ ಹೇಳಿಕಳುಹಿಸಿದ. ಎಳ್ಳು ಬೆರೆಸಿದ ಮದ್ದುಗುಂಡನ್ನು ಹಾರುವರು ಕಳುಹಿಸಿದರು. 'ಯುದ್ಧದಲ್ಲಿ ಉಕ್ಕಿನ ದಸಿಯ ಮೇಲೆ ಬಿದ್ದು ನಟ್ಟುಕೊಂಡ. ಆಗ ರಂಗಧಾಮ ಬಂದು 'ಅಯ್ಯ ಈಗಲಾದರೂ ನನ್ನ ಪೂಜೆ ಮಡೀಸೀಯ ಕೆಂಪೇಗೌಡ' ಎಂದು ಕೇಳಿದ ಆತ ಒಪ್ಪಲಿಲ್ಲ. ಶ್ರೀರಂಗನ ಪಾದ ಸೇರಿಕೊಂಡ. ಆತನ ಹೆಣ್ಣು ಮಕ್ಕಳು, ವರ್ಷಕ್ಕೊಮ್ಮೆ ಶ್ರೀರಂಗ ಜಾತ್ರೆ ನಡೆಸತೊಡಗಿದರು.

ಕೆಂಪೇಗೌಡ ಲಾವಣಿಯಲ್ಲಿ ಚಾರಿತ್ರಿಕ ಮೌಲ್ಯಕ್ಕಿಂತ ಜನಪದ ಕಥೆಯ ಆವರಣವೇ ಎದ್ದು ತೋರುತ್ತದೆ. ಜನಪದ ಕಥೆಯಲ್ಲಿ ಕಾಣಬರುವ ಆಶಯಗಳು ಕೂಡಿಕೊಂಡು ಚರಿತ್ರೆಯ ಅಂಶಗಳನ್ನು ಮಸುಕುಗೊಳಿಸಿರುವಂತೆ ಕಾಣಿಸುತ್ತದೆ. ಲಾವಣಿಯ ಮೊದಲು ಘೋರಕ್ಷಾಮ, ಕಡುಬಡತನ, ನಿಷ್ಠೂರಹಿಂಸೆ, ಕಟು ವಾಸ್ತವದ ಚಿತ್ರಣವಿದ್ದರೆ ನಡುನಡುವೆ ದೈವಶಕ್ತಿಯ ಕೃಪೆ, ನಿಯಂತ್ರಣ ತಲೆಹಾಕುತ್ತದೆ. ಕಡುಬಡತನ ಕಾಣುತ್ತಿದ್ದರೂ, ಅತ್ತೆ, ಮೈದುನನನ್ನೂ ಸಾಕುವ ಕಾಯಕ ಶ್ರದ್ಧೆಯನ್ನು ನೆಚ್ಚುವ, ಮೈದುನನಿಗಾಗಿ ಆತ್ಮರ್ಪಣೆ ಮಾಡಿಕೊಳ್ಳುವ ಉದಾತ್ತ ಪಾತ್ರವಾಗಿ ಹರಿಯಮ್ಮ ಮೆರೆದಿದ್ದಾಳೆ. ಕೆಳವರ್ಗದವರ ಮೌಢ್ಯ ಮತ್ತು ಪರಾವಲಂಬನೆಯನ್ನು ಬಂಡವಾಳ ಮಾಡಿಕೊಂಡು ಅವರ ಅವನತಿಗೆ ಹೊಂಚುಹಾಕುವ ಪುರೋಹಿತಶಾಹಿ ಕುತಂತ್ರದ ಸಾಂಸ್ಕೃತಿಕ ದುರಂತವೊಂದನ್ನು ಅನಕ್ಷರಸ್ಥರ ಸಾಹಿತ್ಯ ದಾಖಲುಗೊಳಿಸುವ ರೀತಿ ಅನನ್ಯವಾಗಿದೆ. ಕೆಂಪೇಗೌಡನ ಬದುಕು ಕಷ್ಟದ ಸುಳಿಯಲ್ಲಿ ಸಿಕ್ಕು ಕ್ರಮಕ್ರಮವಾಗಿ ಹಣ್ಣಾಗುವ ಬಗೆಯನ್ನು, ಅವನ ಸತ್ಯನಿಷ್ಠೆ ಮತ್ತು ಉದಾರತೆಯ ಮುಖವನ್ನು ಚಿತ್ರಿಸುತ್ತಲೇ ಪುರೋಹಿತಶಾಹಿಯ ಕುತಂತ್ರ ದೈವದ ಅವಕೃಪೆಗೆ ಒಳಗಾಗುವ ದುರಂತವನ್ನು ಕವಿ ಮನೋಜ್ಞವಾಗಿ ಚಿತ್ರಿಸಿದ್ದಾನೆ.

೩.೧.೩ ಸಂಗೊಳ್ಳಿ ರಾಯಣ್ಣ:

ಸಂಗೊಳ್ಳಿರಾಯಣ್ಣನನ್ನು ಸಾಮಾನ್ಯವಾಗಿ ನಾವು ಸ್ವಾತಂತ್ರ್ಯ ಹೋರಾಟಗಾರನ ಹಿನ್ನೆಲೆಯಲ್ಲಿ ನೋಡುತ್ತೇವೆ. ಆದರೆ ಸಂಗೊಳ್ಳಿರಾಯಣ್ಣ ಬ್ರಿಟೀಷರ ವಿರುದ್ಧ ಹೋರಾಟವನ್ನು ಮಾಡುವ ಮೊದಲು ಮೇಲ್ವರ್ಗಕ್ಕೆ ಸೇರಿದ್ದ ಕುಲಕರ್ಣಿಯವನೊಂದಿಗೆ ಹೋರಾಟವನ್ನು ಮಾಡಬೇಕಾಗಿ ಬರುತ್ತದೆ. ಸಂಗೊಳ್ಳಿರಾಯಣ್ಣನ ಕ್ಷಾತ್ರಹೋರಾಟಕ್ಕೆ ಎರಡು ಮಜಲುಗಳಿದ್ದಂತೆ ತೋರುತ್ತದೆ.

೧. ರಾಯಣ್ಣನನ್ನು ಕುರಿತಂತೆ ಹುಟ್ಟಿದ ಎಲ್ಲಾ ಪ್ರಮುಖ ಲಾವಣಿಗಳಲ್ಲಿರುವಂತೆ ಕುಲಕರ್ಣಿಯೊಂದಿಗಿನ ವೈಯಕ್ತಿಕ ಕಲಹ
೨. ವೈಯಕ್ತಿಕ ಕಲಹ ಸೇಡಿನಲ್ಲಿ ಕೊನೆಗೊಂಡ ಮೇಲೆ ಹುಟ್ಟಿದ ರಾಷ್ಟ್ರೀಯ ಉದಾತ್ತ ವ್ಯಕ್ತಿತ್ವ

ಫ್ಲೀಟರು ಸಂಗ್ರಹಿಸಿದ ಲಾವಣಿಯಲ್ಲಿ ರಾಯಣ್ಣನ ವ್ಯಕ್ತಿತ್ವದ ಎರಡನೆಯ ಮುಖ ಇಲ್ಲದಿರುವುದು ಒಂದು ಲೋಪವಾಗಿ ಕಾಣಿಸುತ್ತದೆ. ಉಳಿದ ಪಾಠಗಳಲ್ಲಿ ಈ ಎರಡೂ ವ್ಯಕ್ತಿತ್ವದ ಪರಿಚಯ ನಮಗಾಗುತ್ತದೆ.

ಪುಂಡ ಕಿತ್ತೂರ ನಾಡಿನೊಳಗ ಭಂಡಾಯರಾಯಾ
ಪಂಡಿತರೆಲ್ಲಾ ಇಟ್ಟ ಕೇಳರಿ ಚಿತ್ತಾ
ಅಂವ ಜಾತಿಲೆ ಕುರಬ ಭೀರುನ ಭಕ್ತಾ
ಹಳಬ ಸರಕಾರದ ಚಾಕರಿ ಮಾಡುತ್ತಿದ್ದೊ ಸಿಸ್ತಾ
ಕುಲಕರ್ಣಿ ದಶಿಯಿಂದ ಪೈಲೆ ಕದನ ಹುಟ್ಟಿ ಊರಬಿಟ್ಟ
ಸುತ್ತೆಲ್ಲಾ ಹಾವಳಿ ಮಾಡಿದೋ ವಿಪರೀತಾ
ಬಂಟ ಇದ್ದರ ಇರಬೇಕೋ ಪುಂಡ ರಾಯ ಪ್ರಖ್ಯಾತ

ಮೊದಲಿಗೇ ಲಾವಣಿ ಸಂಗೊಳ್ಳಿರಾಯಣ್ಣನ ಹುಟ್ಟು, ಚಾಕರಿ, ಹೋರಾಟದ ಪ್ರಸ್ತಾಪ ಮಾಡುತ್ತದೆ. ಬ್ರಿಟೀಷರ ಹಿಡಿತಕ್ಕೆ ಸಿಗುವ ಮುನ್ನ ಕಿತ್ತೂರು ಸಂಸ್ಥಾನ ಪೇಶ್ವೆಯವರ ಅಂಗರಾಜ್ಯವಾಗಿತ್ತು. ಆಂಗ್ಲರ ಕೈಗೆ ಬಂದೊಡನೆ ಬಿಗಿಯಾದ ಕಾಯಿದೆ, ಆಡಳಿತ ಬಂತು. ವಿಕ್ಟೋರಿಯಾ ರಾಣಿಯ ಆಳ್ವಿಕೆ ಆರಂಭವಾಗಿ ಭೂಮಿಯನ್ನು ಮೋಜಣಿ ಮಾಡಿಸಿ, ಬಾಂದುಕಲ್ಲನ್ನು ನೆಡಸಿ ಹೊಸತೆರಿಗೆಯನ್ನು ವಿಧಿಸಿದ್ದರ ಪ್ರಸ್ತಾಪವಿದೆ. ಈ ಬದಲಾವಣೆಗಳು 'ಇಂಗ್ರೇಜಿ ಸರಕಾರಾ ನೋಡ್ರಿ ಹೆಚ್ಚಿಂದಾ' ಎಂಬ ಭ್ರಮೆಯನ್ನು ಹುಟ್ಟಿಸಿದೆ.

ಹೀಗೆ ಹಿಂದೆ ಪೇಶ್ವೆಯ ಕಾಲದಲ್ಲಿ ಕುಲಕರ್ಣಿಯಾಗಿ ಕೆಲಸ ಮಾಡುತ್ತಿದ್ದ ಬಾಳಣ್ಣ ಬ್ರಿಟೀಷರ ಕಾಲದಲ್ಲೂ ಸೇವಕನಾಗಿ ತನ್ನ ಮಾಮೂಲಿ ವೃತ್ತಿಯನ್ನು ಮುಂದುವರಿಸಿಕೊಂಡು ನಡೆದಿರಬಹುದು. ಅವರ ಕೈಕೆಳಗೆ ಹಳಬ(ಓಲೆಕಾರ)ನಾಗಿ ತಳವಾರ ಫಕೀರ ಮತ್ತು ರಾಯಣ್ಣ ಕೆಲಸ ಮಾಡುತ್ತಿದ್ದರೆಂದು ಊಹಿಸಲವಕಾಶವಿದೆ. ಒಂದು ದಿನ ಕುಲಕರ್ಣಿ ಆಳುಗಳೊಂದಿಗೆ ಮೋಜಣಿ ಕೆಲಸಕ್ಕೆ ಹೋಗಿದ್ದವನು ಕುದುರೆಯ ಮೇಲೆ ಕುಳಿತು ಒಂದು ಮಲಪ್ರಭಾ ನದಿಯಲ್ಲಿ ಸ್ನಾನಕ್ಕಾಗಿ ಇಳಿಯುತ್ತಾನೆ. ಜೊತೆಯಲ್ಲಿ ಹಳಬರು ಇರುತ್ತಾನೆ. ರಾಯಣ್ಣನಿಗೆ ಕುಲಕರ್ಣಿ ಕುದುರೆ ಹಿಡಿದುಕೊಂಡಿರುವ ಕೆಲಸ ಒಪ್ಪಿಸಿ ಸ್ನಾನ ಮಾಡುತ್ತಾನೆ. ಅನಂತರ ತಾನು ಉಟ್ಟಿದ್ದ ಧೋತರ ಒಗೆಯಲು ರಾಯಣ್ಣನಿಗೆ ಹೇಳುತ್ತಾನೆ. ಆಗ

ಮುಂದಿನ ಕೇಡಗಾಲಕ್ಕಿನ್ನ ಅಂದಾನೋ ಬ್ರಾಹ್ಮಣ್ಣ
ಬಂದ ಉಟ್ಟಿರುವ ಧೋತ್ರಾ ಒಗತಾರಾಕೋ ರಾಯಾ ನೀನಾ ।
ಹಳಬರಾದ ಮೇಲೆ ಹೇಳಿದ ಮಾತ ಮೀರುವರೇನಾ
ತುಸು ಅಲಕ್ಷ ಮಾಡದೆ ಪಾಲಿಸೆನ್ನ ವಚನಾ
ಸಿಟ್ಟಿಗೆದ್ದ ಅಂತಾನ ರಾಯಾ ಉಟ್ಟಿರುವ ಧೋತ್ರಾ
ಒಗತರಾಲಾಕು ಬಿಟ್ಟ ಆಳಗಳ ಕೆಲಸ ಮಾಡವಲ್ಲ ನಾನಾ ।
ಎಂಥ ಕೆಟ್ಟ ಮಾತನಾಡಿದೆಪ್ಪ ಬಾಳಣ್ಣ ನೀನಾ
ಕಡಿಯಂದ್ರ ನೂರ ಮಂದೀನ ಕಡಿಯಾವ
ಹೊಡಿಯಂದ್ರ ನೂರ ಮಂದೀನ ಹೊಡಿಯಾವ
ಇಂಥ ಡೊಮ್ಮ್ಯಾನ ಕೆಲಸ ಮಾಡಲಾಕ ನಾಚಿಕಿಲ್ಲೇನ
ಬಗ್ಗಿ ಒಲಿಯ ಊದಿ ಬಸದ ಬಾಣಾ ಮಾಡಾವಲ್ಲೋನಾ
ದೊಡ್ಡ ದೊಡ್ಡ ಮೇಲಮಾಳಿಗಿ ಜಿಗದ ಅಂತ್ರಾಟ್ಲ ಜಿಗದ ಹೋಗುವಾಂವ ನಾನಾ ।
ಹಿಂಗ ಹೇಳಿ ಜುಟ್ಟಾ ಹಿಡಿದ ಬಗ್ಗಿಸಿ ಮೂರು ಗಜ್ಜ ಗುದ್ದಿದ ಅವನಾ

'ಧೋತರಾವನ್ನು ಒಗೆದಾಕು' ಎಂದು ಬಾಳಣ್ಣಾ ಹೇಳಿದಾಗ ಸಂಗೊಳ್ಳಿರಾಯಣ್ಣನಿಗೆ ಕೋಪ ಬರುತ್ತದೆ. ಬಿಟ್ಟಿ ಆಳಲ್ಲವೆಂದು ಪ್ರತಿರೋಧಿಸುತ್ತಾನೆ. ಸಂಘರ್ಷಕ್ಕೆ ಎಡೆಮಾಡಿಕೊಡುವ "ಧೋತರಾ"ದ ಮಾತು ಸಂಗೊಳ್ಳಿರಾಯನನ್ನು ಕೆರಳಿಸುತ್ತದೆ. ಸಂಗೊಳ್ಳಿರಾಯಣ್ಣ ಜುಟ್ಟು ಹಿಡಿದು ಬಗ್ಗಿಸಿ ಬಾಳಣ್ಣನಿಗೆ ಗುದ್ದುತ್ತಾನೆ. ಕುಲಕರ್ಣಿ ಬಾಳಣ್ಣನಿಗೆ ಪ್ರತಿ ಮಾತನಾಡಲಿಲ್ಲ. ಮನಸ್ಸಿನಲ್ಲೇ ಇಟ್ಟುಕೊಂಡ. ಒಂದಲ್ಲಾ ಒಂದು ದಿನ ಇದಕ್ಕೆ ಪ್ರತೀಕಾರ ಮಾಡಿ ಮಾನ ಕಳೆಯುತ್ತೇನೆಂದು ಅಂದುಕೊಂಡ. ಎರಡು, ಮೂರು ತಿಂಗಳು ಕಳೆಯಿತು. ಸರ್ಕಾರಕ್ಕೆ 'ಪಾಳೆಂಣಾ' (ಕಂದಾಯ) ಸಲ್ಲಿಸುವ ದಿನ ಬಂತು. ಕುಲಕರ್ಣಿ ಮೀಸೆ ಹುರಿಮಾಡಿ ಕಂದಾಯ ವಸೂಲಿಗೆ ಬರುತ್ತಲೇ ರಾಯಣ್ಣ ತಮ್ಮನ್ನು 'ಅಬರುಗೇಡಾ' ಮಾಡಬಾರದೆಂದೂ ಮನೆಯಲ್ಲಿರುವ ಹೋರಿಗಳನ್ನಾದರೂ ಮಾರಿ ಬಾಕಿ ಕಟ್ಟುವುದಾಗಿ ದೈನ್ಯದಿಂದ ಕೇಳಿಕೊಂಡ. ಪ್ರೀತಿಯಿಂದ ಸಾಕಿದ ಹೋರಿಗಳನ್ನು ಹಿಡಿದುಕೊಂಡು ಕಿತ್ತೂರು ಸಂತೆಗೆ ಮಾರಲು ಹೋದನು. ತಾಯಿ ಎಷ್ಟು ಬೇಡವೆಂದರೂ ಕೇಳಲಿಲ್ಲ. ಇತ್ತ ಹಳಬರು ಕುಲಕರ್ಣಿಯಲ್ಲಿಗೆ ಬಂದು 'ಬಿಟ್ಟರ ಕುಲಕರ್ಣಿನ ಇಂದಿಗೆ ಉಟ್ಟಂತ ಹೆಂಗಸರ ಶಾಲಿ ತೊಟ್ಟಂಗ ಕುಬ್ಬಸ ಅಂತ' ರಾಯಣ್ಣ ಶಪಥ ತೊಟ್ಟನೆಂದು ಸುಳ್ಳು ಹೇಳಿದರು.ಸಿಟ್ಟುಗೊಂಡ ಕುಲಕರ್ಣಿ ಪತ್ರದ ವಾಯಿದೆ: ಮುಗಿಯಿತೆಂದು 'ವಾರೆಂಟ್' ಬರೆದು ರಾಯಣ್ಣನ ಮನೆಗೆ ಜಪ್ತಿ ಕಳುಹಿಸಿದ. ರಾಯಣ್ಣನ ತಂದೆ ಈವೊಂದು ದಿನ ತಡೆಯಬೇಕೆಂದು ಕಾಲುಕಟ್ಟಿಕೊಂಡ ಅವನಿಗೆ ಕರುಣೆ ಬರಲಿಲ್ಲ. ಬದಲಾಗಿ ಭರಮಣ್ಣನನ್ನು ಚಾವಡಿಗೆ ಕರೆದುಕೊಂಡು ಹೋಗಿ ಬಾಗಿಸಿ ಅವನ ಡುಬ್ಬದ ಮೇಲೆ ಕಲ್ಲು ಹೊರಿಸಿ ನಿಲ್ಲಿಸಿದ. ಇತ್ತ ಸಂತೆಗೆ ಹೋದ ರಾಯಣ್ಣ ಹೋರಿಗಳನ್ನು ಮಾರಿ ಮೂನ್ನೂರು ರೂಪಾಯಿಗಳನ್ನು ಪದರಾಗ ಕಟ್ಟುತ್ತಾ 'ತಳಮಳಿಸಿ' ಊರ ಕಡೆ ಬಂದ. ತಾಯಿಗೆ ಕುಡಿಯಲು ನೀರು ಕೇಳಿದ. ಆಕೆ ನೀರು ಕೊಟ್ಟು ನಡೆದ ಸಂಗತಿ ಹೇಳಿದಳು. ಆಗ ರಾಯಣ್ಣ

ತಗದ ತಿಂದ ಕುಲಕರ್ಣಿ ಮ್ಯಾಲ ಕರಕರ ಹಲ್ಲತಿಂದಾ ।
ತಂದಿನ ಮನಿಗೆ ಕರಕೊಂಡ ಹೋಗಿ ವಂದನೆ ಮಾಡಿ ಹೇಳತಾನ ರಾಯಾ ।
ಇಂದಿಗಿ ಬಿಟ್ಟ ಬಿಡ್ರಿ ನನ್ನ ಹಂಬಲಾ
ನಿಮ್ಮ ಹೊಟ್ಟೆಲಿ ಹುಟ್ಟದ ಪುತ್ರ ನಾಯೇನಲ್ಲಾ ।
ಮಡದಿ ಕೊರಳಾಗಿನ ಗುಳದಾಳಿ ಹರದ ನಡದಾನ
ಕುಲಕರ್ಣಿ ಹೊಲಕ ಜೋಳ ಚಾಪಿಸಿದ ಅಗಣಿತ
ಲಂಕಾ ಹಾರ್‍ಯಾಡಿದಂಗೋ ವೀರ ಹನುಮಂತ
ವೈರಿ ಮನಿಗೆ ಬೆಂಕಿ ಹಚ್ಚಿ ನಡದಾನ ಹಿಡಿರಂತ

ಇಲ್ಲಿ ಕುಲಕರ್ಣಿಯ ಮೇಲಿನ ಸಂಗೊಳ್ಳಿರಾಯಣ್ಣನ ಸ್ವರೂಪ ವೈಯಕ್ತಿಕ ಸ್ವರೂಪದ್ದಾಗಿದ್ದರೂ, ಆ ಕಾಲಘಟ್ಟದ ವರ್ಗತಾರತಮ್ಯದ ಪ್ರತೀಕಾರದಂತೆ ಗೋಚರಿಸುತ್ತದೆ. ಶೋಷಣೆಯ ಸ್ವರೂಪ ಮಿತಿಮೀರಿದಾಗ ಪ್ರಾಣದ ಹಂಗನ್ನೂ ತೊರೆದು ಹೋರಾಡುವುದನ್ನು ಕಾಣಬಹುದು.

ಇದು ಕೇವಲ ಇಲ್ಲಿಗೆ ಮಾತ್ರ ನಿಲ್ಲದೆ ರಾಯಣ್ಣನ ವೀರಜೀವನಕ್ಕೆ ನಾಂದಿಯಾಡುತ್ತದೆ. ವೈಯಕ್ತಿಕ ಸೇಡನ್ನು ತೀರಿಸಿಕೊಂಡ ಮೇಲೆ ರಾಯಣ್ಣನ ಗಮನ ಬ್ರಿಟೀಷರ ಕಡೆಗೆ ತಿರುಗುತ್ತದೆ. ಆತನಲ್ಲಿನ ವೀರತ್ವದ ಉದ್ಬೋಧನೆಗೆ ಕುಲಕರ್ಣಿ ಒಂದು ನೆಪವಾಗುತ್ತಾನೆ. ಮುಂದೆ ರಾಯಣ್ಣ ತನ್ನ ಜೀವದ ಗೆಳೆಯ ಬಿಚ್ಚುಗತ್ತಿ ಚೆನ್ನಬಸಣ್ಣನ ಸಲಹೆ ಮೇರೆಗೆ ಶಿವಗುತ್ತಿ ಅರಸನ ಬಳಿಗೆ ಹೋಗುತ್ತಾನೆ. ರಾಯಣ್ಣನನ್ನು ನೋಡಿ ಅರಸ ಕಣ್ಣಿನಲ್ಲಿ ಮೆಚ್ಚಿಗೆ ಸೂಚಿಸಿ ಶಿವಗುತ್ತಿ ಪುಂಡನೊಂದಿಗೆ ನಾಳೆ ಬಂಡಾಯ ಮಾಡಿ ಗೆಲ್ಲೆಂದು ವೀಳ್ಯ ಕೊಡುತ್ತಾನೆ. ಮರುದಿನ ಶಿವಗುತ್ತಿ ಊರಿನಲ್ಲಿ ಏಳೆಂಟು ಸಾವಿರ ಜನ ಕೂಡುತ್ತಾರೆ.

ಟನ್ ಟನ್ ಜಿಗದ ವಗದ ಅಂತರಲಾಗಾ
ಕಣ್ಣುಮುಚ್ಚಿಕಣ್ಣ ತೆಗೆಯುವುದರೊಳಗ ಶಿವಗುತ್ತಿ
ಪುಂಡನ ಚಂಡ ಕಡಿಕ ಮಾಡಿ ಬಿಟ್ಟೋ ರಾಯಾ ।
ಬಾದ್ದೂರ ಅರಸ ಸಾಕ್ಷಾತ ನೋಡಿದೋ ತನ್ನ ಕಣ್ಣಾರಾ

ರಾಯಣ್ಣನ ವಿಷಯಕ್ಕೆ ತಕ್ಕ ರಾಜಮರ್ಯಾದೆ ಸಿಕ್ಕಿತು. ಶಿವಗುತ್ತಿ ಅರಸ 'ಏನು ಬೇಡುತ್ತಿ ಬೇಡು' ಎಂದ. 'ನನಗೆ ಇನ್ನೇನು ಬೇಡ ಒಂದು ಸಾವಿರ ದಂಡುಕೊಡಬೇಕು' ಎಂದು ಬೇಡಿಕೊಂಡ. ಅರಸ ಅವನ ಅಪೇಕ್ಷೆಯಂತೆ ಒಂದು ಸಾವಿರ ದಂಡು ಕೊಟ್ಟು ಮೆಚ್ಚಿಗೆ ಸೂಚಿಸಿದ. ಸೇನೆಯೊಂದಿಗೆ ಹೊರಟು ಬರುವಾಗ ಕಿತ್ತೂರು ಸಂಸ್ಥಾನ ಬ್ರಿಟೀಷರ ಕೈವಶವಾದ ಸುದ್ದಿ ತಿಳಿಯಿತು. ಗೋಧೂಳಿ ಕೆರೆಯ ದಂಡೆಯ ಮೇಲೆ ಸರಕಾರದ ದಂಡು ರಾಯಣ್ಣನ ದಂಡನ್ನು ಕತ್ತರಿಸುವುದಕ್ಕೆ ಸಜ್ಜಾಗಿ ಕಾಯುತ್ತಿತ್ತು. ಸಾಹೇಬ ಡೇರೆಯೊಳಗೆ ಕುಳಿತಿದ್ದ. ಸುಳಿವು ಹಿಡಿದ ರಾಯಣ್ಣ ಮತ್ತು ಅವನ ಸಂಗಡಿಗರು ಸಮಯ ಸಾಧಿಸಿ ಅವರ ಮೇಲೆ ಬಿದ್ದು 'ಹಾರ್‍ಯಾಡಿಸಿ' ಕಡಿದರು. ರಾಯಣ್ಣನ ಸಂಚು ತಿಳಿಯಲು ಯಾರೂ ಉಳಿಯಲಿಲ್ಲ. ಸೈನ್ಯ ಬಾಳೇ ಸಂಪದ ಗುಡ್ಡದಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದಾಗ ಸಿಟ್ಟುಗೊಂಡ ಬ್ರಿಟೀಷ್ ಸಾಹೇಬ ರಾಯಣ್ಣನನ್ನು ಸೆರೆ ಹಿಡಿಯಲು ದಂಡು ತಯಾರು ಮಾಡಿಕೊಂಡು ಬಂದ. ರಾಯಣ್ಣ ಗಿಡಗಂಟಿಗಳಿಗೆ ಬಟ್ಟೆ ಸುಡುತ್ತ ಬೆಂಕಿ ಹಚ್ಚಿ ಸೇನೆ ಅಡಿಗೆಯಲ್ಲಿ ನಿರತವಾಗಿರುವಂತೆ ನಟಿಸಿದ. ಸರ್ಕಾರಿ ಸೈನಿಕರು ಸುತ್ತುಗಟ್ಟಿ ನಿಂತು ಮೋಸಹೋದರು. ರಾಯಣ್ಣ ಮತ್ತು ಅವನ ಹಿಂಬಾಲಕರು ಅವರನ್ನೆಲ್ಲಾ ಸುತ್ತುಗಟ್ಟಿ ತರುಬಿ 'ಹೊಳಹೊಳದ ಕತ್ತಿ ಮಿಂಚಿನ ಪರಿಯಾಗಿ ಹಬ್ಬ ಮಾಡಿದರು.

ಕೋಟೆ ಕಿಲ್ಲೆ ಹಾಳಾದ ಮೇಲೆ ಕಿತ್ತೂರಿನಿಂದ ಚೆನ್ನಮ್ಮರಾಣಿ ಚೀಟಿ ಕಳುಹಿಸಿದಳು. ರಾಯಣ್ಣ ಸಾವಿರ ಮಂದಿ ಸೈನಿಕರಿಗೆ ಸ್ವಸ್ಥವಾಗಿ ಇರಬೇಕೆಂದು ಹೇಳಿ ಚೆನ್ನಮ್ಮನನ್ನು ಭೇಟಿಯಾದ.

ಚೆನ್ನವ್ವ ರಾಯಣ್ಣನ ಮುಂದೆ ಇನ್ನೇನು ಅತಿ ಅಂತಾಳ ಮಗನ ।
ಮೊನ್ನೆ ಮಲ್ಲಸರ್ಜ ಹೊದಾನ ಕೈಬಿಟ್ಟ ಘನ್ನಘಾತುಕರು
ಕೆಂಪ ಸೋಜರು ಕೆಟ್ಟ
ಇಷ್ಟು ಮನ್ನಿಸಿ ಕೇಳಿ ಹಳಬರಾಯಾಗ ಬಂದಿತೋ ಸಿಟ್ಟ
ಹಲ್ಲ ತಿಂದ ಅಂತಾನೋ ದೊರಿ ಮಲ್ಲಸರ್ಜ ಹೋದಬಳಿಕ
ಎಲ್ಲಾನು ಕಚೆರಿ ಬಿಡತೀನಿ ಸುಟ್ಟಾ
ಎಲ್ಲೆಲ್ಲಾ ನಡಿದಾಂಗ ಮಾಡತೀನಿ ಇಂಗ್ರೇಜನ ಆಟ ॥

ಹೀಗೆ ಚೆನ್ನವ್ವನೊಂದಿಗೆ ಪ್ರತಿಜ್ಞೆ ಮಾಡಿ ದಂಡಿನೊಂದಿಗೆ ಹೊರಟ. ಬಿಳಿದಿ ಸಂಪಗಾಂವಿ ಕಚೇರಿಗೆ ಬೆಂಕಿ ಹಚ್ಚಿದ. ಅವನನ್ನು ಹಿಡಿಯಲು ಬ್ರಿಟೀಷರ ಫೌಜು ಬಂತು. ರಾಯಣ್ಣನನ್ನು ಹಿಡಿಯುವ ಯತ್ನ ವಿಫಲವಾಯಿತು. ರಾಯಣ್ಣನ ಸೈನ್ಯದೊಂದಿಗೆ ಹೋರಾಡುವುದರಿಂದ ಆಗುವ ಅಪಾಯವನ್ನು ಅವರು ತಿಳಿದುಕೊಂಡಿದ್ದರು. ಕಿತ್ತೂರು ನಾಡನ್ನು ಪಿತೂರಿನಿಂದ ಗೆದ್ದಂತೆಯೇ ರಾಯಣ್ಣನನ್ನು ಸಂಚಿನಿಂದಲೇ ಕೈಸೆರೆಯಾಗುವಂತೆ ಯೋಚಿಸಿದರು. ನೇಗಿನಾಳದ ಯಂಕನಗೌಡ, ಖಿದಾನಪೂರದ ಲಿಂಗನಗೌಡ ಕೂತು ಉಣ್ಣುವಂತ ಹೊಲದ ಆಶೆಗಾಗಿ ಇದರಲ್ಲಿ ಶಾಮಿಲಾದರು. ರಾಯಣ್ಣನೊಂದಿಗೆ ಸ್ನೇಹ ಬೆಳೆಸಿ ಅವನಿಗೆ ಸಂಪೂರ್ಣವಾಗಿ ವಿಶ್ವಾಸ ಹುಟ್ಟುವಂತೆ ನಟಿಸಿದರು. ರಾಯಣ್ಣ ಅವರೊಂದಿಗೆ ಜಳಕ ಮಾಡಿ 'ಗುಡ್ಡೇ ಚಂಣ' ಕೊಡುವಾಗ ವಿಶ್ವಾಸದ್ರೋಹ ಮಾಡಿದರು. ಮುಖದ ಮೇಲೆ ಕಂಬಳಿ ಮುಚ್ಚಿ ಹಳಬರ ಸಹಾಯದಿಂದ ಕೈಕಾಲು ಕಟ್ಟಿದರು. ಸೆರೆಯಾದ ರಾಯಣ್ಣನನ್ನು ಅನಂತರ ನಂದಗಡದಲ್ಲಿ ಗಲ್ಲಿಗೇರಿಸಲಾಯಿತು.

ಹೀಗೆ ಅಧಿಕಾರಶಾಹಿವರ್ಗ ಹೇಗಾದರೂ ಮಾಡಿ ರಾಷ್ಟ್ರಪರವಾದ ಹೋರಾಟಗಳನ್ನು ಹತ್ತಿಕ್ಕುತ್ತಿದ್ದರು. ವೈಯಕ್ತಿಕ ದ್ವೇಷದ ವರ್ಗಸಂಘರ್ಷದ ಮೂಲಕ ಪ್ರಾರಂಭವಾಗುವ ಸಂಗೊಳ್ಳಿರಾಯಣ್ಣನ ಲಾವಣಿ ಸಂಗೊಳ್ಳಿ ರಾಯಣ್ಣನ ಜೀವನದಲ್ಲಿ ಅಗಾಧವಾದ ಬದಲಾವಣೆಗೆ ಕಾರಣವಾಗುತ್ತದೆ. ಕೇವಲ ಅದು ವರ್ಗಸಂಘರ್ಷಕ್ಕಷ್ಟೇ ಸೀಮಿತವಾಗದೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಂಗೊಳ್ಳಿರಾಯಣ್ಣ ಪಾಲ್ಗೊಳ್ಳುವಂತೆ ಪ್ರೇರೇಪಿಸುತ್ತದೆ.

೩.೧.೪ ಸಿಂಧೂರ ಲಕ್ಷ್ಮಣ:

ಸಿಂಧೂರ ಲಕ್ಷ್ಮಣ ಉತ್ತರ ಕನಾಟಕದ ಪ್ರಸಿದ್ಧ ಲಾವಣಿ. ಈ ಲಾವಣಿಯು ಬಿಜಾಪುರ ಜಿಲ್ಲೆಯ ಜನಪ್ರಿಯ ರಚನೆ. ಈ ಲಾವಣಿಯ ನಾಯಕ ಕೆಳವರ್ಗಕ್ಕೆ ಸೇರಿದ ಬೇಡರ ಯುವಕ ಲಕ್ಷ್ಮಣ. ಈತ ನಿರ್ಗತಿಕರಿಗೆ ಉದಾರಿ, ಬಂಡವಾಳಶಾಹಿಗಳಿಗೆ ಸಿಂಹಸ್ವಪ್ನ. ಜಮಖಂಡಿ, ಬೀಳಗಿ, ಜತ್ತಿ ಉಮರಾಣಿ ಪ್ರದೇಶಗಳಲ್ಲಿ ಕಾರ್ಯಾಚರಣೆ ನಡೆಸಿದ ಸಿಂಧೂರ ಲಕ್ಷ್ಮಣ ಅಲ್ಲಿನ ಜನಪದ ಲಾವಣಿಕಾರರ ಮನಸ್ಸು ತುಂಬಿರಬೇಕು. ಹಾಗಾಗಿ ಲಾವಣಿಕಾರರ ಕಥಾವಸ್ತುವಾಗಿ ಲಕ್ಷ್ಮಣ ಕಾಣಿಸಿಕೊಳ್ಳುತ್ತಾನೆ.

ಸ್ವಾತಂತ್ರ್ಯಪೂರ್ವದಲ್ಲಿ ಕರ್ನಾಟಕದ ಉತ್ತರಗಡಿಯಲ್ಲಿ 'ಜತ್ತ ಎಂಬ ಸಂಸ್ಥಾನ ಅಸ್ತಿತ್ವದಲ್ಲಿತ್ತು. ಅದನ್ನು ಕೊಲ್ಲಾಪುರದ 'ಥಪಳೆ' ಎಂಬುವವನು ಆಳುತ್ತಿದ್ದ. ಆ ಸಂಸ್ಥಾನಕ್ಕೆ ಸೇರಿದ ಒಂದು ಚಿಕ್ಕಹಳ್ಳಿ ಸಿಂಧೂರ. ಅಲ್ಲಿ ಓಲೇಕಾರನಾಗಿ ಕೆಲಸ ಮಾಡುತ್ತಿದ್ದ ಬೇಡರ ಯುವಕ ಲಕ್ಷ್ಮಣ

ಪರಗಾಣೆ ಜತ್ತೀ ಉಮರಾಣಿ ದೇಶಕ ವಾಯಿಣಿ
ಆಳುವಂತ ಧಣಿ ಡಪ್ಪಳೆ ಸರಕಾರ ॥ ಪಲ್ಲ ॥
ಜತೆ ಸಂಸ್ಥಾನ ಪೈಕಿ ಸಣ್ಣಹಳ್ಳಿ ಸಿಂಧೂರ ॥ ಗೀ ॥
ಸಿಂಧೂರ್‍ಯಾಗ ಲಕ್ಷ್ಮಣ ಹುಟ್ಯಾನ । ಬಂಟ ಅನಿಸ್ಯಾನ ಕೊಟ್ಟ ವಚನ
ಹುಟ್ಟಿ ತಪ್ಪಲಿಲ್ಲ ಹುಟ್ಟಿ ತಪ್ಪಲಿಲ್ಲ
ಘಟ ಹೋಗುತನಕ ಹಿಡಿದಾ ಹಟ ಬಿಡಲಿಲ್ಲಾ ॥ ಗೀ ॥

ಪಾಂಡವರೊಳಗ ಇದ್ದಂಗ ಭೀಮ
ಚೆಲುವ ಚಂದ್ರಾಮ ಥೇಟ ಹೋಳಿ ಕಾಮ । ರೂಪದಲಿ ಡೌಲ
ಯಾವ ತಾಯಿ ಹೊಟ್ಟೇಲಿ ಹುಟ್ಯಾನ ಪ್ರಬಲ ॥ ಗೀ ॥

ಹೀಗೆ ಆರಂಭವಾಗುವ ಲಾವಣಿ ಸಿಂಧೂರ ಲಕ್ಷ್ಮಣನ ಊರು, ರೂಪು, ಛಲ, ತಾಯಿ ತಂದೆಯರ ಭಾಗ್ಯ ಇತ್ಯಾದಿಗಳನ್ನು ಪರಿಚಯಿಸುತ್ತದೆ. ಲಕ್ಷ್ಮಣ ಬಡವನಾದರು ಪ್ರಾಮಾಣಿಕ, ಸಾಹಸಿ, ಗುರಿಹೊಡೆಯುವುದರಲ್ಲಿ ಓಡುವುದರಲ್ಲಿ ನಿಸ್ಸೀಮ. ಓಡುವ ಮೊಲವನ್ನು ಹಿಡಿದು ತರುತ್ತಿದ್ದನೆಂದು ಪ್ರತೀತಿ. ಸೊಕ್ಕಿನಿಂದ ವರ್ತಿಸಿದ ಅಧಿಕಾರಿಯನ್ನು ಪ್ರತಿಭಟಿಸಿ ಅವನ ಮೇಲೆ ಕೈ ಮಾಡಿದ. ಸರ್ಕಾರಕ್ಕೆ ದೂರು ಹೋಯಿತು. ಬೇಡಿ ಹಾಕಲು ಬಂದ ಪೋಲೀಸರಿಂದ ತಪ್ಪಿಸಿಕೊಂಡು ಓಡಲು ಯತ್ನಿಸಿದ ಲಕ್ಷ್ಮಣನಿಗೆ ಭರ್ಜಿಯ ಏಟು ಬಿತ್ತು. ಅವನು ಜೈಲು ಸೇರಿದ. ಸುದ್ಧಿ ತಿಳಿದ ಅವನ ಜೀವದ ಗೆಳೆಯರು– ಸಾಬ್ಯಾ, ನರಸ್ಯಾ, ಗೋಪಾಳ್ಯಾ ಮೂವರೂ ಕೂಡಿಕೊಂಡು ಜತ್ತಿಯ ಜೈಲಿಗೆ ಮುತ್ತಿಗೆ ಹಾಕಿ ಲಕ್ಷ್ಮಣನನ್ನು ಬಿಡಿಸಿಕೊಂಡು ಹೋದರು.

ಸಾರಿ ಹೊಂಟಾರ ನಡುವಿ ಪ್ಯಾಟ್ಯಾಗ
ಯಾವ ಗಂಡ್ಸ ಮಗ ಇದ್ದರ ಹಿಡಿಯಬೇಕು ನಮಗ ॥ ಗೀ ॥

ಈ ಸವಾಲು ಬ್ರಿಟೀಷ್ ಸರ್ಕಾರಕ್ಕೆ ಅವಮಾನದ ಸಂಗತಿಯಾಯಿತು. ಅವನನ್ನು ಬಂಧಿಸಲು ಕುದುರೆ ಸವಾರರನ್ನು ಕಳುಹಿಸಿಕೊಡಲಾಯಿತು. ಅವರ ಕೈಗೆ ಸಿಗದೆ ಲಕ್ಷ್ಮಣ ಟೀಳಿ ಗುಡ್ಡದಲ್ಲಿ ಅಡಗಿ ಕುಳಿತ. ಹುಡುಕಲು ಬಂದ ಸವಾರರ ಕುದುರೆ ಕಾಲುಗಳಿಗೆ ಕಲ್ಲುಗಳಿಂದ ಹೊಡೆದು ಗಾಯ ಮಾಡಿದ. ಅವರು ಅಂಜಿ ಓಡಿಹೋದರು. ಹತಾಶನಾದ ಅಧಿಕಾರಿ

ನಾಳೆ ಬರತೀನಿ । ಹುಷಾರಿರು ನೀನು
ಗುಡ್ಡದೊಳಗ
ನಿನಗ ಹಿಡಿಯದಿದ್ದರ ಹೆಂಗ್ಸ ಅಂತ । ಕರೆಯೋ ಲಕ್ಷ್ಮಣ ನನಗ

ಎಂದು ಅನ್ನುತ್ತಿದ್ದಂತೆ ಸಿಡಿಲಿನಂತೆ ಗುಡ್ಡದಿಂದ ಲಕ್ಷ್ಮಣನ ಪ್ರತಿಸವಾಲು ಮೊಳಗಿತು.

ರಾತ್ರಿ ಬರುತೀನಿ ಹುಷಾರಿರು ನೀನು
ಚಾವಡಿಯೊಳಗ ಹುಷಾರಿರು ನೀನು
ಈ ಮಾತ ಸುಳ್ಳಂದ್ರ ಗಂಟ್ಹಾಕೊ ಪದರಾಗ ॥ ಇಳುವು ॥

ಮಾತಿನಂತೆ ಸರಿರಾತ್ರಿ ಲಕ್ಷ್ಮಣನ ಗುಂಪು ಚಾವಡಿಯನ್ನು ಮುತ್ತುತ್ತದೆ. ಎಲ್ಲರೂ ಆಯಾಸದಿಂದ ನಿದ್ರೆ ಹೋಗಿರುತ್ತಾರೆ. ಆಗ ಲಕ್ಷ್ಮಣನ ಕಡೆಯವರು

ಇನ್ಸಪೇಟರಿಗೆ ಜಗ್ಗಿ ಎಬ್ಬಿಸಿದರು । ಒಬ್ಬ ಶಿಪಾಯೀನ ಮೀಸೆ ಬೋಳಶ್ಯಾರು
ವಾಲೀಕಾರನ ಹಲ್ಲು ಮುರಿದಾರು । ಕುದುರೆಯ ಬಾಲ ಕುಯ್ದಾರು ॥ ಅಂತ್ರ ॥

ಕತ್ತಿ ಬಂದೂಕ ಭರ್ಜಿ ತಗೊಂಡಾರ । ಸಿಂಧೂರ ಬಿಟ್ಟಾರ
ಪರಾರಿಯಾಗ್ಯಾರ ನಾಲ್ಕು ಮಂದಿ ॥ ೨ ॥

ಇನ್ಸಪೆಕ್ಟರ್ ನಿದ್ದೆಗಣ್ಣು ತೆರೆಯುತ್ತಿರುವಾಗಲೇ ಲಕ್ಷ್ಮಣ ಮತ್ತೊಮ್ಮೆ ಹಂಗಿಸಿ ಹಲ್ಲು ಕಡಿದು ಹೋದ. ಅವಮಾನಗೊಂಡ ಸರ್ಕಾರ ಅವನನ್ನು ಹಿಡಿಯಲು ದೊಡ್ಡ ದಂಡನ್ನೇ ಕಳುಹಿಸಿತು. ಆತ ದುಂಡ್ಯಾ, ಬಸ್ಯಾ, ಸಿದ್ದ್ಯಾ ಮುಂತಾದವರೊಂದಿಗೆ ದುರ್ಗಮವಾದ ಪ್ರದೇಶಗಳಲ್ಲಿ ಬೀಡುಬಿಡುತ್ತಾ ಸಿಕ್ಕ ಹಳ್ಳಿಗಳ ಮೇಲೆ ಧಾಳಿ ಮಾಡಿದರು. ಒಮ್ಮೆ ಕಾಖಂಡಿಕಿ ತೋಟದಲ್ಲಿ ಬೀಡುಬಿಟ್ಟಿದ್ದಾಗ ಅನಿರೀಕ್ಷಿತವಾಗಿ ಲಕ್ಷ್ಮಣನ ಹಲ್ಲು ಮುರಿಯಿತು. ಇದು ಅಶುಭದ ಸೂಚನೆಯೆಂದು ಭಾವಿಸಲಾಯಿತು.

ತ್ವಾಟದಾಗ ಮನಗಿಕೊಂಡ್ರ ಉಂಡು
ಪೋಲಿಸಿನವರ ದಂಡು ಹಾರಿಸಿದರು ಗುಂಡು
ಸಪ್ಪಳಕ್ಕೆ ಎದ್ದಾರ
ಉಳಿಕಿಯವರು ಜಿರಿದು ಹೋದಾರ । ನರಸ್ಯಾನ ಹಿಡಿದಾರು ॥ ಗೀ ॥
ಮಳೆ ಸುರಿದಂಗೆ ಹಾರಸ್ತಾರ ಗುಂಡಾ
ಬಾಳ್ಯಾ ಪಡಾ ಆಯ್ತು ಕೇಡಾ । ನಷ್ಟ ಮಾಡಿದರು
ಪೋಲಿಸಿನವರು ಇಬ್ಬರ್ನ । ಹೊಲೆಯರ್ನ ಹೊಡೆದು ಕೊಂದರು ॥ ಗೀ ॥
ದುಂಡ್ಯಾಗ ಸಿಟ್ಟು ಬಂದಿತ್ತಲ್ಲಾ । ಕವಣಿಗೆ ಹಾಕಿ ಕಲ್ಲಾ
ಒಗೆದು ಮುರಿದಾ ಕಾಲ

ಆದರೂ ಈ ಕದನದಲ್ಲಿ ಬಸ್ಯಾ ಸಾವನ್ನಪ್ಪುತ್ತಾನೆ. ನರಸ್ಯಾ ಸೆರೆಸಿಕ್ಕುತ್ತಾನೆ. ತನ್ನ ಸಂಗಾತಿಗಳಿಗೊದಗಿದ ಕಷ್ಟ ಲಕ್ಷ್ಮಣನನ್ನು ಅಧೀರನನ್ನಾಗಿ ಮಾಡುತ್ತದೆ.

ಎತ್ತ ಹೋದಾನ ನರಸ್ಯ ಕೋಮಲ । ನಿತ್ಯ ತಿನ್ನುವಿ ಕೊಬ್ಬರಿ ಬೆಲ್ಲಾ
ನಿನಗ ಯಾರ ಕೊಡುವರಾ ಹಾಲ ॥ ಗೀ ॥

ಎಂದು ಕಣ್ಣೀರು ಸುರಿಸುತ್ತಾನೆ. ಈ ವೇಳೆಗೆ ಲಕ್ಷ್ಮಣ ಜೇಲು ಸೇರಿ ಇಪ್ಪತ್ತೊಂದು ದಿನ ತುಂಬುತ್ತದೆ. ಅವನನ್ನು ಬಿಡಿಸಿಕೊಳ್ಳಲು ಹೋಗಿ ಸಿಕ್ಕಿಬಿದ್ದ ಗೆಳೆಯರು ಹಿಂಡಲಗಿ ಜೈಲು ಸೇರುತ್ತಾರೆ. ಎಲ್ಲರೂ

ಒಂದಾಗಿ ಜೇಲು ಗೋಡೆ ಬಿಗಿದು ಪರಾರಿಯಾಗುತ್ತಾರೆ. ಇವರ ಅಸಾಧಾರಣ ಸಾಹಸಕ್ಕೆ ಜನ ಮೆಚ್ಚುತ್ತಾರೆ. ಸರ್ಕಾರ ದಿಗಿಲು ಬೀಳುತ್ತದೆ.

ಜಮಖಂಡಿ ಹತ್ತಿರದ ಕಲ್ಲೊಳ್ಳಿ ಗುಡ್ಡದಲ್ಲಿ ಅಡಗಿದ್ದ ಲಕ್ಷ್ಮಣನನ್ನು ಹಿಡಿಯಲು ಇನ್ಸ್‌ಪೆಕ್ಟರ್‌ನೊಬ್ಬ ಗುಪ್ತ ವೇಷದಿಂದ ಬರುತ್ತಾನೆ. "ಈಗ ಲಸಮ್ಯಾ ಸಿಕ್ಕರ ಕಡದ ಚೆಲ್ಲತೀನಿ, ಕುಡಿತೀನಿ, ನೆತ್ತರು ಅಂತ ಕರಕರಾ ತಿಂತಾನ ಹಲ್ಲಾ" ದುರಾದೃಷ್ಟಕ್ಕೆ ಅವನೆದುರಿಗೆ ಲಕ್ಷ್ಮಣ ಬಂದು ನಿಲ್ಲಬೇಕೆ? ಜೊತೆಗಿದ್ದ ಪೋಲೀಸ್ ಪೇದೆ ಗಾಬರಿಯಾಗಿ ಓಟಕಿತ್ತ. ಲಕ್ಷ್ಮಣ ಇನ್ಸ್‌ಪೆಕ್ಟರ್‌ನ ಮೇಲೆ ಬಿದ್ದು ಹಣ್ಣುಗಾಯಿ ನೀರುಗಾಯಿ ಮಾಡಿದ. ಅವನ ಎದೆಯ ಮೇಲೆ ಕುಳಿತು ಬಾಯಲ್ಲಿ ಮಣ್ಣು ಹಾಕಿ 'ಕರಕರಾ' ಅಂತ ಅವನ ಕುತ್ತಿಗೆ ಕೊಯ್ದು ಕಲ್ಲೊಳ್ಳಿಯ ಚಾವಡಿಗೆ ರುಂಡವನ್ನು ತೆಗೆದುಕೊಂಡು ಬಂದ. ಆ ದಿನ ಯಾರೂ ಅವರನ್ನು ಎದುರಿಸಲು ಬಾರದ್ದರಿಂದ ಆ ರಾತ್ರಿ ಜತ್ತಿಯವರೆಗೆ ಪ್ರಯಾಣ ಮಾಡಿ ಊರ ಆಗಸೆಯ ಮುಂದೆ ತಲೆಯನ್ನು ನೇತು ಹಾಕಿದ.

ಲಕ್ಷ್ಮಣ ಮತ್ತು ಸಂಗಡಿಗರಿಗೆ ದಿನೇದಿನೇ ಅಪಾಯ ಹೆಚ್ಚಾಗತೊಡಗಿತು. ಅವರನ್ನು ಹಿಡಿಯಲು ಹಿರಿಯ ಪೋಲೀಸ್ ಅಧಿಕಾರಿಗಳ ಪಡೆಯೇ ಬಂದಿತು. ಪರಸ್ಪರ ಪ್ರತ್ಯೇಕ ಹೋರಾಟವೇ ಜರುಗಿ ಗುಡ್ಡದ ಮೇಲೆ ನಿಂತು ಕಾಳಗ ಕೊಟ್ಟ ಲಕ್ಷ್ಮಣನಿಗೆ ಜಯವಾಯಿತು. ನೇರ ಹೋರಾಟದಿಂದ ಪ್ರಯೋಜನವಿಲ್ಲವೆಂದು ಕಂಡುಕೊಂಡ ಸರ್ಕಾರ ಅವನನ್ನು ಮೋಸದಿಂದ ಸೆರೆ ಹಿಡಿಯುವ ಸಂಚು ನಡೆಸಿತು.

ಲಕ್ಷ್ಮಣನಿಗೆ ಆಶ್ರಯವಾಗಿದ್ದ ತೆಗ್ಗಿನಾಯಕನೆಂಬುವವನಿಗೆ ಇನಾಮು ಕೊಡುವ ಆಶೆ ಹುಟ್ಟಿಸಿತು. ಲಕ್ಷ್ಮಣ ಮತ್ತು ಅವನ ಸಂಗಡಿಗರಿಗೆ ತೆಗ್ಗಿನಾಯಕ ಊಟದ ವ್ಯವಸ್ಥೆ ಮಾಡಿ ಹಿಡಿದು ಕೊಡುವ ಸಂಚು ನಡೆಸಿದ. ಅಧಿಕಾರಿಗಳನ್ನು ಗುಟ್ಟಾಗಿ ಕರೆಸಿ ಊಟದ ಪಂಕ್ತಿಯಲ್ಲಿ ಯಾರ ಮುಂದೆ ಲಾಟೀನು ಇಡುತ್ತೇನೆಯೊ ಅವನೇ ಲಕ್ಷ್ಮಣನೆಂದು ತಿಳಿಯಬೇಕೆಂದು ಸೂಚಿಸಿದ.

ಲಾಟೀನ ತಗದ ಲಕ್ಷ್ಮಣನ ಕರದು
ಕೈಯಾಗ ಕೊಟ್ಟಾನು । ಮೊದಲ ಸೂಚನೆ ಇತ್ತು
ವಾಲಿಕಾರ ಸ್ವಾಮಣ್ಣ ಹೊಡದಾನು । ಪಕ್ಕೆಯಾಗ ಗುಂಡಾ ಬಡಿತಲ್ಲಾ
ಅತು ಒಳ್ಳೇ ಕೇಡಾ । ನಾಯಕ ಓಡಿ ಹೋದಾ
ಲಕ್ಷ್ಮಣ ಬಿದ್ದಾನು
ಮೋಸ ಮಾಡಿ ಹೊಡದಂಗಾಯ್ತು । ಅಭಿಮನ್ಯುವಿಗೆ ಕೌರವನು ॥ ಗೀ ॥

ಗುಂಡು ತಗುಲಿದ ಲಕ್ಷ್ಮಣ ಹೊರಳಿ ಹೊರಳಿ ಪ್ರಾಣ ಬಿಟ್ಟ. ಅವನ ಗೆಳೆಯರಿಗೆ ಪಾಸಿ ಶಿಕ್ಷೆಯಾಯಿತು. ತೆಗ್ಗಿನಾಯಕ ತಾನು ಮಾಡಿದ ತಪ್ಪಿಗೆ ಅನ್ನ ನೀರು ಬಿಟ್ಟು ಸತ್ತ. ಉತ್ತರ ಕರ್ನಾಟಕದ ಗಂಡುಭಾಷೆಯಲ್ಲಿ ಹುಟ್ಟಿರುವ ಈ ಲಾವಣಿ ವೀರಾವೇಷಯುಕ್ತವಾಗಿದೆ. ಸ್ಫೂರ್ತಿ ಆವೇಷಗಳೇ ಈ ಲಾವಣಿಯ ಜೀವಾಳ.

೩.೧.೫ ಆದಾಯ ತೆರಿಗೆ:

೧೮೬೦ರ ಜುಲೈ ೩೧ ರಿಂದ ಜಾರಿಗೆ ಬಂದ ಕಾಯಿದೆ ಪ್ರಕಾರ ಆಸ್ತಿ, ಉದ್ಯೋಗ, ವ್ಯಾಪಾರ ಮತ್ತು ಕಚೇರಿಗಳ ಆದಾಯಗಳ ಮೇಲೆ ಹಾಕಿದ ಮೂಲ ಸುಂಕವನ್ನು ಕುರಿತ ಲಾವಣಿ ಆದಾಯ ತೆರಿಗೆ. ಯಾವಾಗಲೂ ಗಮನಿಸಲ್ಪಡುತ್ತಿದ್ದ ಆದಾಯ ಮತ್ತು ಸನದು ತೆರಿಗೆಗಳ ಬಗ್ಗೆ ಇದ್ದ ಅಪಖ್ಯಾತಿ ಮತ್ತು ಸಂಶಯಗಳನ್ನು ಕುರಿತು ಈ ಹಾಡು ಉದ್ದಕ್ಕೂ ಸರಳವಾಗಿ ವಿವರಿಸುತ್ತಾ ಹೋಗುತ್ತದೆ.

ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟೀಷರಿಗೆ ಅಂದರೆ ಆಳುವ ವರ್ಗಕ್ಕೆ ಭೂಕಂದಾಯವನ್ನು ತೆರುತ್ತಿದ್ದ ಬೇಸಾಯಗಾರರು ಮುಖ್ಯರು. ಈ ತರಹದ ನೇರ ತೆರಿಗೆ ಅವರಿಗೆ ಹೊರೆ ಎಂದಾಗಲೀ, ಅಪರೂಪದ ಸಂದರ್ಭಗಳಲ್ಲಿ ರಕ್ಷಣೆ ಎಂದಾಗಲೀ ಅಲ್ಲ. ಆದರೆ ಹೆಚ್ಚು ಕಡಿಮೆ ಅಂಥ ತೆರಿಗೆಗಳು ಅವರ ಮೇಲೆಯೇ ಹೆಚ್ಚಾಗಿ ಬೀಳುತ್ತಿದ್ದುದ್ದರಿಂದ ಅದರಿಂದುಂಟಾಗುತ್ತಿದ್ದ ಫಲಿತಾಂಶಗಳನ್ನು ತಡೆಯಲು ಇಂಗ್ಲೀಷ್ ಜಿಲ್ಲಾಧಿಕಾರಿಗಳ ಎಲ್ಲ ಪ್ರಯತ್ನಗಳನ್ನು ವಿರೋಧಿಸಲಾಗುತ್ತಿತ್ತು.

ಆಳುವ ವರ್ಗದ ಅಧಿಕಾರಿಗಳು ಸಾಮಾನ್ಯ ಉದ್ದೇಶಗಳಿಗೆ ಶೇಕಡಾ ಮೂರರಂತೆಯೂ, ರಸ್ತೆಗಳು, ಕಾಲುವೆಗಳು ಮತ್ತು ಇತರ ರಿಪೇರಿ ಕೆಲಸಗಳಿಗಾಗಿ ಶೇಕಡಾ ಒಂದರಂತೆಯೂ, ಸುಂಕವನ್ನು ವಿಧಿಸಲಾಗುತ್ತಿತ್ತು. ರಸ್ತೆ ಮಾಡಿಸುವುದು ಮತ್ತು ಇತರ ರಿಪೇರಿ ಕೆಲಸಗಳನ್ನು ನಡೆಸುವುದು ಮುಂತಾದ ಯೋಜನೆಗಳೆಲ್ಲ ರೈತರ ಹಣವನ್ನು ಸುಲಿಯುವುದಕ್ಕಾಗಿ ಕಂದಾಯ ಅಧಿಕಾರಿಗಳು ಒಡ್ಡುತ್ತಿದ್ದ ನೆವಗಳಾಗುತ್ತಿದ್ದವು.

ಏನ ಹೇಳಲಿ ಜನ್ಮದ ಗೋಳಾ
ಇಂಗ್ರಜಿ ಉಪದರ್ ಆದೀತ ಬಾಳಾ
ಬಡವರ ಅಳತಾರೊ ಗಳಗಳಾ
ಮಾಡತಾರ ಚಿಂತಿ

ಹೀಗೆ ಪ್ರಾರಂಭವಾಗುವ ಲಾವಣಿ ಆಳುವ ವರ್ಗದವರ ಶೋಷಣೆ ಎಷ್ಟರಮಟ್ಟಿಗಿತ್ತು ಎಂಬುದನ್ನು ಸೂಚಿಸುತ್ತಿದ್ದು, ಬಡವರು ಗಳಗಳನೆ ಅತ್ತು ಚಿಂತೆಯನ್ನು ಮಾಡುತ್ತಿದ್ದರು ಎಂಬ ಸಾಲುಗಳ ಮೂಲಕ ಅದರ ತೀವ್ರತೆಯನ್ನು ವಿವರಿಸುತ್ತಿದೆ. ಇಡೀ ಜನ್ಮ ಗೋಳಿನಂದ ಕೂಡಿದ್ದು ಅಧಿಕಾರಿಗಳ ಕಿರುಕುಳ ಜಾಸ್ತಿಯಾಗಿತ್ತು ಎಂಬುದನ್ನು ತಿಳಿಸುತ್ತದೆ. ವಾರ್ಷಿಕ ಆದಾಯ ಇನ್ನೂರು ರೂಪಾಯಿಗಳಿಗಿಂತ (ಹೆಸರಿಗೆ ಮಾತ್ರ ಬ್ರಿಟೀಷ್ ನಾಣ್ಯದ ಇಪ್ಪತ್ತು ಪೌಂಡುಗಳು) ಕಡಿಮೆ ಇದ್ದರೂ ತೆರಿಗೆ ವಿಧಿಸಲ್ಪಡಬೇಕು. ಒಟ್ಟು ಮೊತ್ತ ಕಡೆಯ ಪಕ್ಷ ಆರು ನೂರು ರೂಪಾಯಿಗಳನ್ನು ಮುಟ್ಟದಿದ್ದರೂ ಬರೀ ಬೇಸಾಯದ ಕಸುಬುಗಳಿಂದ ಆದಾಯವಿಲ್ಲದಿದ್ದರೂ ತೆರಿಗೆ ವಿಧಿಸಲ್ಪಡಬೇಕು.

ಕಟಗಿ ಮಾರತಾರ ಮಾಡಿ ತೂಕ
ಪ್ಯಾಂಡಾರೆರು ಲಮಾಣೆರು ಕಟಕಿ
ಮಾರಿ ತಮ್ಮ ಮಕ್ಕಳ್ನ ಮಾಡತಿದ್ರ ಜೋಕಿ
ಈಗ ಬೇಡುದ ಬಂದತಿ ಬಿಕ್ಕಿ
ಕೆಲಸ ಹೀಂಗ್ ಅತಿ

ಹೀಗೆ ಕಟ್ಟಿಗೆಯನ್ನು ಒಂದುಗೂಡಿಸಿ ಮಾರುವ ಸಮಾಜದ ಕಟ್ಟಕಡೆಯ ಬಡವರೂ ಕೂಡ ಭಯದ ವಾತಾವರಣದಲ್ಲಿ ಬದುಕಬೇಕಾಗಿತ್ತು. ತಮ್ಮ ಮಕ್ಕಳನ್ನು ಸಾಕುವ ಸಲುವಾಗಿ ಕಟ್ಟಿಗೆಯನ್ನು ಮಾರುತ್ತಿದ್ದ ಪ್ಯಾಂಡಾರೆರು ಎನ್ನುವ ಅಲೆಮಾರಿ ಜನಾಂಗ ಹಾಗೂ ಲಮಾಣಿ ಜನಾಂಗದವರು ಕೂಡ ಮುಂದೇನಾಗುತ್ತದೆ? ಎಂಬ ಭಯದಲ್ಲಿ ಬದುಕುತ್ತಿದ್ದರು. ಅಂತಹವರಿಗೂ ಆದಾಯ ತೆರಿಗೆಯನ್ನು ಬ್ರಿಟೀಷ್ ಅಧಿಕಾರಿಗಳು ವಿಧಿಸುತ್ತಿದ್ದರು.

ಬ್ರಿಟೀಷ್ ಅಧಿಕಾರಿಗಳ ಉಪದ್ರವ ಎಷ್ಟರಮಟ್ಟಿಗಿತ್ತೆಂದರೆ ತೆರಿಗೆಯನ್ನು ಕಟ್ಟಲು ಒಂದು ನಿಗಧಿತ ವಾಯಿದೆಯನ್ನು ನೋಟೀಸ್ ಮೂಲಕ ಕೊಟ್ಟು ಅಕಸ್ಮಾತ್ತಾಗಿ ಆ ವಾಯಿದೆಯ ಒಳಗೆ ತೆರಿಗೆಯನ್ನು ಕಟ್ಟದಿದ್ದರೆ ಬಯ್ದು ಹಣವನ್ನು ವಸೂಲಿ ಮಾಡಲು ಆಜ್ಞೆ ಕೊಡುತ್ತಿದ್ದರು. ಇದರಿಂದ ರೊಚ್ಚಿಗೆದ್ದ ಬಡವರು ಅದನ್ನು ವಿರೋಧಿಸುತ್ತಾರೆ.

ಕಲೆಕಟರ ಸಾಹೇಬ ಬಂದ ಆಗ
ಬಂದು ಇಳದಾನ ಬಂಗಲೇದಾಗ
ಜನರೆಲ್ಲ ಹೋಗಿ ಮುತ್ತಿದಾರ್ ಅವಂಗ
ಶಿವಾ ಇಳದ್ದಾಂಗ

ಹೀಗೆ ಕಲೆಕ್ಟರ್ ಸಾಹೇಬ ಬಂಗಲೆಯಲ್ಲಿ ಬಂದು ಇಳಿದುಕೊಂಡಾಗ ಜನರೆಲ್ಲ ಹೋಗಿ ಮುತ್ತಿಗೆ ಹಾಕಿ ತಮ್ಮ ಅಹವಾಲನ್ನು ಸಲ್ಲಿಸುತ್ತಾರೆ. ತೆರಿಗೆ ಕಡಿಮೆ ಮಾಡಬೇಕೆಂದು ಬಡವರು, ಆಳುವ ವರ್ಗದವರ ವಿರುದ್ಧ ಹೋರಾಟ ಮಾಡುವುದು ಶೋಷಣೆಯು ಮಿತಿಮೀರಿದಾಗ, ಮನಸ್ಸಿನಲ್ಲಿ ಹೆದರಿಕೆ ಇದ್ದರೂ, ಎಲ್ಲರೂ ಧೈರ್ಯಮಾಡಿ ಶೋಷಣೆಯ ವಿರುದ್ಧ ಧ್ವನಿ ಎತ್ತುತ್ತಾರೆ. ಆದರೂ ಬಡವರು ತೆರಿಗೆ ಕಟ್ಟಿರದ ಹಲಗಿ, ಕುಂಟೀ ರೆಸಮಿಪಟ್ಟಿ ಬಾಂಡೆ, ಸಾಮಾನಾ, ಜುಮಾನು-ತಾಟಿ ಇವುಗಳಿಗೆ ಬೆಲೆಕಟ್ಟಿ ಹರಾಜು ಹಾಕುತ್ತಾರೆ.

ಬಾಳ ಕೆಟ್ಟರ್ ಅಣ್ಣಾ ಸರಕಾರಾ
ಬಡವರ ತಂದಾರ ಕಣ್ಣೀರಾ
ಹೆಂತಾ ಯಾಳೇ ತಂದಿ ಈಶ್ವರ
ನಮಗ್ಯಾರದಿಲ್ಲ ಆಧಾರಾ

ಎಂಬುವಲ್ಲಿ ಆಳುವ ವರ್ಗದ ನಿರಂಕುಶಪ್ರಭುತ್ವ, ಸಾಮಾಜಿಕ ಅಸಮಾನತೆಯ ಕಂದರ ಬಡವರು ಯಾವಾಗಲೂ ಕಣ್ಣೀರನ್ನು ಹಾಕುತ್ತಿದ್ದರು ಎಂಬುದನ್ನು ಪ್ರತಿಬಿಂಬಿಸುತ್ತದೆ. ಬಡವರು ದೇವರಿಗೆ

ಮೊರೆಯನ್ನಿಡುವುದರ ಜೊತೆ ಇಂತಹ ಕಾಲವನ್ನು ನೀನು ದಯಪಾಲಿಸಬಾರದಿತ್ತು, ಕಾಪಾಡುವವ ನೀನೇ ನಮಗೆ ಇಂತಹ ಕಾಲವನ್ನು ನೀಡಿದ್ದೀಯಾ, ನಮ್ಮನ್ನು ರಕ್ಷಿಸುವವರ್‍ಯಾರು? ಎಂದು ತಮ್ಮ ಅಸಹಾಯಕತೆಯನ್ನು ತೋರ್ಪಡಿಸುತ್ತಾರೆ.

ಮುಸಲರ ಎಲ್ಲಾ ಕುಂತಾರ ಕೂಡಿ
ಮಸೂತಿ ವಳಗ ಮಸಲತಾ ಮಾಡಿ
ಕಾಹೈ ಧೂಂಡ್‌ಕರ್ ಲಕಾವ್-ಅರೆ ಲಕಡಿ
ಹಿಂದಕ ಸರಿದಿರಿ ಅನಮಾನ ಮಾಡಿ

ಹೀಗೆ ಬೇರೆ ಬೇರೆ ಜಾತಿಯ, ವರ್ಗದ ಜನ ಆದಾಯ ತೆರಿಗೆಯನ್ನು ವಿರೋಧಿಸುವ ಸಲುವಾಗಿ ತಮ್ಮತಮ್ಮಲ್ಲಿಯೇ ಒಗ್ಗಟ್ಟಿನಿಂದ ಗುಂಪು ಕಟ್ಟಿಕೊಂಡು ಯೋಜನೆಗಳನ್ನು ರೂಪಿಸಿಕೊಳ್ಳುತ್ತಿದ್ದರು. ಮುಸಲ್ಮಾನರೆಲ್ಲರೂ ಒಟ್ಟಿಗೆ ಸೇರುವಂತಹ ಜಾಗ ಮಸೀದಿ. ಮಸೀದಿಯ ಒಳಗೆ ಎಲ್ಲಾ ಮುಸಲ್ಮಾನರು ಒಟ್ಟಾಗಿ ಸೇರಿಕೊಂಡು ಏನೇ ಆದರೂ ಮುನ್ನುಗ್ಗಬೇಕು, ಹಿಂದೆ ಸರಿಯಬಾರದೆಂದು ನಿರ್ಣಯಿಸುತ್ತಾರೆ. ಹಾಗೆಯೇ ಬ್ರಿಟೀಷರು ಹೀಗೆ ಮಾಡುವುದರಿಂದ ಬೇಡಿ ಹಾಕಿ ಕರೆದುಕೊಂಡು ಹೋಗುತ್ತಾರೆಯೇ ವಿನಃ ಮತ್ತೇನೂ ಮಾಡಲು ಸಾಧ್ಯವಿಲ್ಲವೆಂದು ಧೃಡ ನಿಶ್ಚಯದೊಂದಿಗೆ ಆದಾಯ ತೆರಿಗೆಯನ್ನು ವಿರೋಧಿಸಲು ಮುಂದಾಗುತ್ತಾರೆ. ಅನಂತರ ಒಂದು ಅರ್ಜಿಯನ್ನು ಬರೆದುಕೊಂಡು ಮುಸಲ್ಮಾನರೆಲ್ಲರೂ ಎಲಪಾಟ್ ಸಾಹೇಬನ ಬಳಿಗೆ ಹೋಗುತ್ತಾರೆ.

ತುಮ್ ಖಾವಂದ ಅರ್ಜಿಯ ಸುನ್ನಾ
ಹಮಾರಿ ಪಟ್ಟಿ ಮಾಫ್ ತುಂ ಕರ್‍ನಾ

ಎಂದು ಕೇಳಿಕೊಳ್ಳುತ್ತಾರೆ. 'ಜನಪ್ರಿಯ ಶೂರ' 'ಹಿತ್ತಾಲಿ ವೀರಭದ್ರ' ದೃಶ್ಯದಲ್ಲಿ ಕಾಣಿಸಿಕೊಂಡಾಗ ಅಪೀಲು ವಿಚಾರಣೆಯ ಅಧಿಕಾರಿಗಳನ್ನುಳ್ಳ ಅಧಿಕಾರಿಯಿಂದುಂಟಾದ ವಿಚಾರಣೆಗಳಿಗೆ ಉತ್ತರಿಸುತ್ತ, ತನ್ನ ಹಳ್ಳಿಯ ಜನಗಳ ಆದಾಯಗಳಿಗನುಸಾರವಾಗಿ ಪ್ರಾಮಾಣಿಕವಾಗಿ ಐದುನೂರು ರೂಪಾಯಿಗಳ ಮಿತಿ ಹಾಕಿದುದು, ಕಂದಾಯದ ಅಧಿಕಾರಿ ಮತ್ತು ಹಳ್ಳಿಗರಿಗೆ ಸಂತೋಷವಾಗುವಂತೆ ಇತ್ತು. ಹೀಗೆ ಉದ್ದಕ್ಕೂ ವರ್ಗ ಸಂಘರ್ಷ ಕಂಡುಬಂದರೂ ಲಾವಣಿಯ ಕೊನೆಗೆ ಒಳ್ಳೆಯ ಅಧಿಕಾರಿಗಳ ದೆಸೆಯಿಂದ ಲಾವಣಿಯು ಸುಖಾಂತ್ಯ ಕಾಣುತ್ತದೆ.

೩.೨ ಪೌರಾಣಿಕ ಲಾವಣಿಗಳಲ್ಲಿ ವರ್ಗಸಂಘರ್ಷ:

ಇತಿಹಾಸ ಪೂರ್ವಯುಗಕ್ಕೆ ಸಂಬಂಧಿಸಿದುದು ಎಂದು ಭಾವಿಸಲಾದ ವಿಶ್ವಸೃಷ್ಟಿ, ಮಾನವ ಸಮುದಾಯಗಳ ಸೃಷ್ಟಿ-ಸ್ಥಿತಿ ಲಯಗಳಿಗೆ ಸಂಬಂಧಿಸಿದ ಕಥೆಗಳೇ ಪುರಾಣ ಕಥೆಗಳು; ಹಾಡಿನಲ್ಲಿ ನಿರೂಪಿತವಾದ ಪುರಾಣ ಕಥೆಗಳೇ ಪೌರಾಣಿಕ ಕಥೆಗಳು. ಅಂತೆಯೇ ಸಾಂಸ್ಕೃತಿಕ ವೀರರಿಗೆ

ಸಂಬಂಧಿಸಿದ ಕಥೆಗಳೂ ಧಾರ್ಮಿಕ ನಂಬಿಕೆಗಳನ್ನು ಸಾರುವ ಘಟನೆಗಳು ಹಾಡಿನಲ್ಲಿ ನಿರೂಪಿತವಾದರೆ ಅಂಥ ರಚನೆಗಳನ್ನು ಪೌರಾಣಿಕ ಕಥನಗೀತೆಗಳೆಂದೇ ಪರಿಗಣಿಸಬೇಕಾಗುತ್ತದೆ. ಪ್ರಾಚೀನ ಕಾಲದಿಂದಲೂ ಪ್ರತಿಯೊಂದು ಸಾಹಿತ್ಯದಲ್ಲಿ ಪುರಾಣಗಳ ಗಾಢವಾದ ಪ್ರಭಾವ ಕಾಣುತ್ತೇವೆ. ದೇವರು, ಉಪದೇವರು, ಸಂಸ್ಕೃತಿ ವೀರರು ಮುಂತಾದವರನ್ನು ಕುರಿತಾದ ಕಥಾನಕವೇ ಪುರಾಣವೆನ್ನಿಸಿದೆ. ಜಗತ್ತಿನಸೃಷ್ಟಿ, ಮನುಷ್ಯನ ಹುಟ್ಟುಸಾವು ಇತ್ಯಾದಿಗಳನ್ನು ಇವು ಒಳಗೊಂಡಿರುತ್ತವೆ. ಸಾಂಸ್ಕೃತಿಕ ವೀರ (cultural hero)ನೊಬ್ಬ ಪುರಾಣ ಪಾತ್ರವಾಗಿದ್ದು ಮಾನವಕುಲಕ್ಕೆ ಉಪಕಾರ ಮಾಡುವವನು, ಕಾಲಕಾಲಕ್ಕೆ ತಕ್ಕ ಸೂಚನೆ ಕೊಡುವವನು ಆಗಿರುತ್ತಾನೆ. ಗ್ರೀಕ್ ಸಂಸ್ಕೃತಿಯ ವೀರ ಪ್ರೊಮಿಥ್ಯೂಸ್ ಸ್ವರ್ಗಾಧಿಪತಿಯನ್ನು ವಂಚಿಸಿ ಭೂಮಿಯ ಜನತೆಗೆ ಬೆಂಕಿಯನ್ನು ತಂದುಕೊಡುತ್ತಾನೆ. ಇಲ್ಲಿ ಬೆಂಕಿ ಒಂದು ಸಾಂಸ್ಕೃತಿಕ ಮೂಲಾಂಶ. ಇಂಥ ಘಟನೆಗಳು ಪುರಾಣ ಕಥೆಗಳಲ್ಲಿ ಪದೇಪದೇ ಬರುತ್ತವೆ. ಅಮೆರಿಕೆಯ 'ಪ್ಯುಬ್ಲೊ' ಬುಡಕಟ್ಟಿನ ಜನರಲ್ಲಿ ಬಹುಸ್ವಾರಸ್ಯವಾದ ಪುರಾಣ ಕಥೆಯೊಂದಿದೆ. ಪ್ರಾಚೀನ ಕಾಲದಲ್ಲಿ ಜನರು ಭೂಮಿಯ ತಳದಲ್ಲಿ ವಾಸಿಸುತ್ತಿದ್ದು, ಅಲ್ಲಿನ ಸಂಸ್ಕೃತಿ ವೀರನ ಸೂಚನೆಯಂತೆ ಭೂಮಿಯ ಮೇಲೆ ಬರಲು ಪ್ರಯತ್ನಿಸಿದಂತೆ ಆ ಜಾಗ ಕತ್ತಲೆ, ಬೆಳಕಿಲ್ಲದ ನಾಲ್ಕನೆಯ ಗುಹೆಯಾಗಿತ್ತು. ಮನುಷ್ಯರ ದೇಹ ಲೋಳೆಯಿಂದ ಕೂಡಿದ್ದು ಭೂಮಿಗೆ ಬರಬೇಕಾದ ದಾರಿ ತೀರಾ ಕಡಿದಾಗಿದ್ದುದರಿಂದ ಅದು ಸಾಧ್ಯವಾಗುತ್ತಿರಲಿಲ್ಲ. ಪುರೋಹಿತನೊಬ್ಬ ವೃಕ್ಷದ ಬೀಜವೊಂದನ್ನು ಭೂಮಿಯ ಮೇಲೆ ನೆಟ್ಟನೆಂದೂ ಅದು ಬೆಳೆದು ಮರವಾದಾಗ ಅದರ ಬೇರುಗಳನ್ನು ಆಶ್ರಯಿಸಿ ಜನರು ಭೂಮಿಯ ಮೇಲೆ ಬಂದರೆಂದೂ, ಸಾಂಸ್ಕೃತಿಕ ವೀರ ಅವರಿಗೆ ಬೆಂಕಿಯನ್ನು ತೋರಿಸಿದನೆಂದೂ ಕಥೆ ಇದೆ.

ಜಗತ್ತಿನ ಅನೇಕ ಪುರಾಣಗಳಲ್ಲಿ ಕಂಡುಬರುವ ಇಂಥ ಕಥೆಗಳು ಆಯಾ ದೇಶದ ಧಾರ್ಮಿಕ ಮತ್ತು ರಾಷ್ಟ್ರೀಯ ನಂಬಿಕೆಗಳಾಗಿ ಜನಪದ ಕಥೆಗಳ ಐತಿಹ್ಯಗಳ ಲಾವಣಿಗಳ ರೂಪದಲ್ಲಿ ಉಳಿದು ಬಂದಿದೆ. ಆದ್ದರಿಂದ ಜನಪದ ಕಥೆ, ಐತಿಹ್ಯಗಳಿಗೆ ಹತ್ತಿರವಾಗುವ ಅನೇಕ ಸಂಗತಿಗಳ ರೂಪ ಸಾಮ್ಯಗಳು ಪೌರಾಣಿಕ ಲಾವಣಿಗಳಲ್ಲಿ ಕಾಣಿಸುತ್ತವೆ. ಆಯಾ ಸಂಸ್ಕೃತಿಯ ಸಾಂಸ್ಕೃತಿಕ ವೀರರು ಈ ಗುಂಪಿನ ಲಾವಣಿಗಳಲ್ಲಿ ನಾಯಕರಾಗಿ ಬರುತ್ತಾರೆ. ಸಮಷ್ಟಿಯ ಒಳಿತಿಗಾಗಿ ಶ್ರಮಿಸಿದ ಇಂಥವರು ರಾಮ, ಅರ್ಜುನರಂತೆ ರಾಷ್ಟ್ರೀಯ ವೀರರು ಆಗಿರುವರಲ್ಲದೆ ಶಿವ, ವಿಷ್ಣು, ಬ್ರಹ್ಮರಂಥ ದೇವಾನುದೇವತೆಗಳೂ ಆಗಿರಬಹುದು. ಜನಸಮಷ್ಟಿ ಮನಸ್ಸು ತಮ್ಮತಮ್ಮ ಕಲ್ಪನೆ, ಜೀವನದ ಕಷ್ಟಸುಖಗಳಿಗೆ ಅನುಸಾರವಾಗಿ ಪಾತ್ರ ಸನ್ನಿವೇಶಗಳನ್ನು ಸೃಷ್ಟಿಸಿದೆ. ಹಾಗಾಗಿ ಈ ವರ್ಗದ ಲಾವಣಿಗಳಲ್ಲಿ ವಸ್ತು, ಪಾತ್ರ ಮತ್ತು ಘಟನೆಗಳು ಪೌರಾಣಿಕವಾಗಿ ಮುಖ್ಯವಾಗುತ್ತವೆ. ಪ್ರೊ. ಜಿ.ಎಚ್.ಗೆರಾಲ್ಡ್ ಅವರು ಸಮಗ್ರ ಲಾವಣಿಗಳನ್ನು ಕುರಿತಂತೆ ಹೇಳುವ 'ವಸ್ತುವಿನ ಆಯ್ಕೆ, ನಿರ್ವಹಣೆಯ ಮೂಲಕ ಅದನ್ನು ಕಟ್ಟಿದ ಹಾಗೂ ಹಾಡಿದ ಜನತೆಯ ಅಭ್ಯಾಸ ಮತ್ತು ಅಭಿರುಚಿಯನ್ನು ಕುರಿತಂತೆ ಏನನ್ನಾದರೂ ಇವು ಹೇಳಿಯೇ ತೀರುತ್ತವೆ. ಇದರಿಂದ ಸಂಸ್ಕೃತಿ ಚರಿತ್ರೆಯ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ

ಸಹಾಯವಾಗುತ್ತದೆ"[೪] ಎಂಬ ಮಾತುಗಳನ್ನು ಪುರಾಣ ಸಂಬಂಧಿಯಾದ ಕನ್ನಡ ಲಾವಣಿಗಳಿಗೂ ಅನ್ವಯಿಸಬಹುದೆಂದು ತೋರುತ್ತದೆ.

ಜನಪದದ ದೈನಂದಿನ ಕೆಲಸಕಾರ್ಯಗಳ ಉದ್ಘಾಟನೆ ತಮ್ಮ ಇಷ್ಟದೈವದ ನೆನಕೆಯಿಂದಲೇ ಆರಂಭವಾಗುತ್ತದೆ. ಚುಂಚನಗಿರಿಯ ಭೈರವನೊ, ಬೆಟ್ಟದ ಮಲ್ಲಯ್ಯನೊ, ನಂಜನಗೂಡಿನ ನಂಜುಂಡನೊ, ತಿರುಪತಿಯ ತಿಮ್ಮಪ್ಪನೊ, ಮೇಲುಕೋಟೆಯ ಚೆಲುವರಾಯನೊ, ಮುಂಜಾನೆಯ ಈ ಹಗಲು ಕಣ್ತೆರೆವ ಕ್ರಿಯೆಯ ಹಿಂದೆ ಇದ್ದೇ ಇರುತ್ತಾರೆಂಬ ಅಚಲ ನಂಬಿಕೆ. ಇದು ಜನಸಾಮಾನ್ಯರ ದೈವಭಕ್ತಿ ಮತ್ತು ಬಾಳ ಶಕ್ತಿಯ ದ್ಯೋತಕ. ಭಗವಂತನ ಬಗೆಗಿನ ಅವರ ನಿಷ್ಠೆ, ಶ್ರದ್ಧೆ, ವಿಶ್ವಾಸಗಳು ಚಿಕಿತ್ಸಕ ಬುದ್ಧಿಯ ಫಲವಾಗಿ ಮೂಡಿಬರದೆ ನಿರ್ಮಲಾಂತಃಕರಣದಿಂದ, ಋಣಭಾರದ ಭಾವದಿಂದ, ಮುಗ್ಧ ನಂಬಿಕೆಯಿಂದ ಕುಡಿಯೊಡೆದು ಬಂದವುಗಳಾಗಿವೆ. ಹೀಗಾಗಿ ಈ ದೈವಪ್ರಜ್ಞೆ ಅವರ ಬದುಕನ್ನು ತಿದ್ದುವ, ಸಮಾಜವನ್ನು ನಿಯಂತ್ರಿಸುವ, ಶಕ್ತಿಯಾಗಿದೆ. ತಮ್ಮ ಕ್ಷಣಕ್ಷಣದ ಕಾಯಕದಲ್ಲೂ ದೈವೀಸ್ಪರ್ಶತೆಯನ್ನು ಕಂಡ ಜನಪದ ಮನಸ್ಸು ಬದುಕಿನ ನಲಿವು ಗೆಲುವುಗಳ ಕಷ್ಟ ಕಾರ್ಪಣ್ಯಗಳ ಭಾರವನ್ನೆಲ್ಲಾ ಭಗವಂತನ ಮೇಲೆ ಹಾಕಿ ನಿರುಮ್ಮಳವಾಗಿದೆ. ಕಂಡಕಂಡದ್ದನ್ನು ದೇವರೆಂದು ಪೂಜಿಸಿದೆ. ಆರ್ತತೆ, ತನ್ಮಯತೆ, ಪರವಶತೆ, ಮುಗ್ಧತೆಯಿಂದ ಸ್ತುತಿಸಿದೆ. ಯಾವುದೇ ಸಿದ್ಧರು, ಸಾಧಕರು ಅಲ್ಲದ ಸಾಮಾನ್ಯ ಚೇತಸರ ಹೆಣ್ಣುಮಕ್ಕಳ, ಸಂಸಾರಚಕ್ರದಲ್ಲಿ ಸಿಕ್ಕಿದ ಆರ್ತಜೀವದ ಹೃದ್‌ಭಾವದ ಮೊರೆ ಅವರ ಗೀತೆ-ಲಾವಣಿಗಳಲ್ಲಿ ಹಲವು ಕುಡಿಯೊಡೆದಿವೆ.

ಪುರಾಣ ಪ್ರಸಂಗಗಳನ್ನು ಜನಪದ ಮತ್ತು ಶಿಷ್ಟಕವಿಗಳಿಬ್ಬರೂ ಸ್ವೀಕರಿಸಿದರೂ ವಸ್ತು ನಿರ್ವಹಣೆ ಹಾಗೂ ಕಲ್ಪನೆಗಳಲ್ಲಿ ವ್ಯತ್ಯಾಸಗಳೂ ಎದ್ದು ತೋರುತ್ತವೆ. ಈ ವ್ಯತ್ಯಾಸವೇ ಜನಪದ ಕವಿಗಳ ವೈಶಿಷ್ಟ್ಯ ಕೂಡ ಆಗಿದೆಯೆನ್ನಬಹುದು. ಮೇಲುನೋಟಕ್ಕೆ ಇವು ಪುರಾಣ ಪಾತ್ರಗಳಂತೆ ಕಂಡುಬಂದರೂ ನಿಜವಾದ ಜೀವನದ ಸಾಮಾನ್ಯ ಬದುಕಿನಿಂದ ದೂರಸರಿದವುಗಳು ಆಗಿರುವುದಿಲ್ಲ. ಜನಪದ ಲಾವಣಿಗಳಲ್ಲಿ ಶೃಂಗಾರ ಪ್ರಸಂಗಗಳು, ಅಶ್ಲೀಲ ಹಾಡುಗಳು ಬರುತ್ತವೆ. ಅನೇಕ ದೇವರು ಬೇರೆ ಬೇರೆ ಹೆಣ್ಣುಗಳಿಗೆ ಒಲಿದು ಒಡನಾಡಿನ ಹಾಡುಗಳಿವೆ. ನಂಜುಂಡ, ಚಾಮುಂಡಿ, ಚೆನ್ನುಗ, ಚೆಲುವಯ್ಯ, ವರನಂದಿ, ಗಂಗೆಗೌರಿ ಜಗಳ, ಕೃಷ್ಣ ಕೊರವಂಜಿ, ಅಂಬಿಗರ ಗಂಗೆ ಸುಭದ್ರೆ, ಅಭಿಮನ್ಯು, ಅರ್ಜುನ ಜೋಗಿ, ಅಭಿಮನ್ಯು ವತ್ಸಲೆ, ಇತ್ಯಾದಿ ಲಾವಣಿಗಳು, ಉದಾಹರಣೆಗಳಾಗಿವೆ. ಆದರೆ ಪೌರಾಣಿಕ ಲಾವಣಿಗಳು ಮತ್ತು ಹಾಡುಗಳಲ್ಲಿನ ಪ್ರಣಯ ಪ್ರಸಂಗಗಳು, ಪಾತ್ರಗಳು ಸಾಮಾಜೀಕರಣಗೊಳ್ಳುವುದೊಂದು ವಿಶೇಷ. ದೈವಿಕ ಆವರಣದಿಂದ ಮುಕ್ತಗೊಂಡು ಇವು ಬದುಕಿನ ನೇರಸಂಪರ್ಕಕ್ಕೆ ಬರುತ್ತವೆ. ಶಿವ ಇದ್ದುಬದ್ದ ಸುಳ್ಳು ಹೇಳುತ್ತಾನೆ. ಅವನ ಹೆಂಡಂದಿರು ಅಶ್ಲೀಲವಾಗಿ ಬೈದುಕೊಂಡು ಬೀದಿ ಜಗಳವಾಡುತ್ತಾರೆ. ಮಾನವ ಸಹಜ ಸಣ್ಣ ದೊಡ್ಡ ಗುಣಗಳೆಲ್ಲ ಅವರಿಗೆ ಆರೋಪಿತವಾಗುತ್ತವೆ. ಲಾವಣಿ, ಹಾಡುಗಳ ಈ ರೋಚಕತೆ ಅವುಗಳ ಜನಪ್ರಿಯತೆ ಮತ್ತು ಪ್ರಸಾರಕ್ಕೆ ಕಾರಣವಾಗಿವೆ. ಇದೊಂದು ಸಂಕೋಚ ಮುಕ್ತವಾದ

ಸಹಜ ಲೋಕ. ಭಗವಂತ ಮತ್ತು ಭಕ್ತರ ಮಧುರ ಬಾಂಧವ್ಯ ಅನೇಕ ಭಾಷೆಯ ಹಾಡು ಲಾವಣಿಗಳಲ್ಲಿ ಚಿತ್ರಿತವಾಗಿವೆ. ದೇವರು ಭಕ್ತನ ಸಲಿಗೆ ಸಂಬಂಧಗಳು ಕನ್ನಡ ಲಾವಣಿ ಮತ್ತು ಕಥನಗೀತೆಗಳಲ್ಲಿ ಕಂಡುಬರುತ್ತದೆ.

ಲಾವಣಿಗಳಲ್ಲಿ ಬರುವ ಜಾನಪದಕಲ್ಪನೆಗೂ, ಪುರಾಣ ಕಲ್ಪನೆಗೂ, ಇರುವ ವ್ಯತ್ಯಾಸವನ್ನು ಲಾವಣಿಗಳ ಅಧ್ಯಯನದಿಂದ ಗಮನಿಸಬಹುದು. ಒಬ್ಬ ಕವಿ ಲಾವಣಿಯನ್ನು ಹಾಡುತ್ತಿರುವ ಸಂದರ್ಭದಲ್ಲಿ ತನ್ನ ಕಾಲಘಟ್ಟದ ಸಾಮಾಜಿಕ ಸ್ತರವಿನ್ಯಾಸವನ್ನು ಹಾಗೂ ಸಾಮಾಜಿಕ ವ್ಯವಸ್ಥೆಯನ್ನು ಗಮನದಲ್ಲಿಟ್ಟುಕೊಂಡು ಕೆಲವೊಂದು ಬದಲಾವಣೆಗಳನ್ನು ಮಾಡಿಕೊಂಡು ಹಾಡುತ್ತಾನೆ. ತನ್ನ ಮನಸ್ಸಿನ ಭಾವನೆಗಳನ್ನು ನಿರ್ಭಯದಿಂದ ವ್ಯಕ್ತಪಡಿಸುತ್ತಾನೆ. ಇದಕ್ಕೆ ಪೂರಕವಾಗಿ ಕೆಲವೊಂದು ಉದಾಹರಣೆಗಳನ್ನು ನೋಡಬಹುದು. 'ಗೌರಮ್ಮನ ಮದುವೆ' 'ಹುಟ್ಟಿದಾಳೆ ಗೌರಮ್ಮ' ಭೂಲೋಕದಲ್ಲಿ 'ಶ್ರೀ ಗೌರಿಯ ಮದುವೆ' ಇವುಗಳನ್ನು ಬೇರೆ ಬೇರೆ ವೃತ್ತಿಗಾಯಕರು ಹಾಡುತ್ತಾರಾದರೂ ಅವುಗಳ ಒಳತಿರುಳು ಒಂದೇ ಆಗಿರುತ್ತದೆ. ಅಲ್ಪಸ್ವಲ್ಪ ವಿವರಗಳನ್ನು ಬಿಟ್ಟರೆ ಕಥೆಯ ಮೂಲಸ್ವರೂಪದಲ್ಲಿ ಹೇಳಿಕೊಳ್ಳುವಂಥ ಪಾಠಭೇದಗಳು ಇರುವುದಿಲ್ಲ. ಕರಾಕೃ ಅವರು ಈ ಬಗೆಯ ಕೆಲವು ಹಾಡುಗಳನ್ನು 'ಬಯಲು ನಾಡಿನ' ಹಳ್ಳಿಗಳಲ್ಲಿ ದೊಂಬಿದಾಸರು ಏಕನಾದವನ್ನು ಹಿಡಿದುಕೊಂಡು ಮನೆಮನೆಗೂ ಹೋಗಿ ಹಾಡಿ ರೈತರನ್ನು ಮೆಚ್ಚಿಸಿ ಭಿಕ್ಷೆಯನ್ನು ಪಡೆಯುವಾಗ ಹಾಡುವರು.[೨೫] ಪ್ರಸ್ತುತ ಲಾವಣಿ ಪೌರಾಣಿಕ ಮತ್ತು ಸಾಮಾಜಿಕ ಮುಖಗಳೆಡರಲ್ಲೂ ಗಮನಾರ್ಹವಾಗಿದೆ. ಮೇಲ್ನೋಟದ ಪೌರಾಣಿಕ ಆವರಣ ನಿಧಾನವಾಗಿ ಕಳಚಿಕೊಳ್ಳತ್ತ ಸಮಾಜದ ಜಾತಿ, ಮತಗಳ ಸಾಮಾಜಿಕ ಆವರಣವನ್ನು ಲಾವಣಿ ಪ್ರವೇಶಿಸುವುದು ಸ್ವಾರಸ್ಯದ ಸಂಗತಿಯಾಗಿದೆ. ಶಿವನ ಭಾವಿ ಹೆಂಡತಿಯಾದ ಗೌರಿ ಸಾಮಾನ್ಯ ಮನುಷ್ಯರ ಹಾಗೆ ಭೂಮಿಯಲ್ಲಿ ಹುಟ್ಟುತ್ತಾಳೆ. 'ಅಷ್ಟಾಗಿ ಇಷ್ಟಾಗಿ ತಾ ದೊಡ್ಡವಳಾಗುವ' ವೇಗದ ಬೆಳವಣಿಗೆಯಲ್ಲಿ ಆಕೆಗೆ ಹನ್ನೆರಡು ವರ್ಷ ತುಂಬುತ್ತದೆ. ಶ್ರೀ ಗೌರಿಯೇ ಮನೆಯಲ್ಲಿ ಹುಟ್ಟಿರುವುದರಿಂದ ಅವಳನ್ನು ಯಾರಿಗೆ ಮದುವೆ ಮಾಡಿಕೊಡಬೇಕೆಂಬ ಆತಂಕ ತಂದೆತಾಯಿಯರನ್ನು ಕಾಡಿದೆ. ಆಕೆಯನ್ನೇ ಕೇಳಿ ನೋಡುವುದು ಸೂಕ್ತವೆಂದು ಒಂದೊಂದೇ ಜಾತಿಯ ಗಂಡುಗಳನ್ನು ಹೆಸರಿಸಿ 'ಇವರಿಗೆ ಕೊಡಲೇನೆ ಮಗಳೆ ಶ್ರೀ ಗೌರಿ' ಎಂದು ಕೇಳುತ್ತಾರೆ.

ಬ್ರಾಂಬರ ವೇದ ನಾ ಓದಲಾರೆ
ನಿತ್ಯ ತಣ್ಣೀರಲ್ಲಿ ನಾ ಬೀಳಲಾರೆ
ದಿನಕ್ಕೊಂದು ಮಡಿ ಸೀರೆ ಉಡಲಾರೆ
ಹೊತ್ತಿಗೆ ಒಪ್ಪತ್ತು ನಾ ಉಣ್ಣಲಾರೆ
ಬ್ರಾಂಬರ ಸಾವಾಸ ಬೇಕಿಲ್ಲ ತಂದೆ
ಶಿವಭಕ್ತನ ಶಿವಪೂಜೆ ನಾ ಮಾಡಲಾರೆ
ಹರಭಕ್ತ ಗುರುಪೂಜೆ ನನಕೈಲಿ ಬರದು

ಒಕ್ಕಲಿಗರ ಕಳೆಸತ್ತ ನಾ ಕೀಳಲಾರೆ
ಒಕ್ಕಲಿಗರ ಮೂರು ಮುದ್ದೆ ನಾ ತಿನ್ನಲಾರೆ
ದಿನಕ್ಕೆ ಮೂರು ಸಾರಿ ನಾ ಉಣ್ಣಲಾರೆ
ಕುರುಬರ ಕುರಿಬಣ್ಣ ನಾನುಡಲಾರೆ
ಕಂಬ್ಳಿಗೆ ಸರಿಗಂಜಿ ನಾ ಕಾಸಲಾರೆ
ಕೋಮ್ಟಿಗರ ಕೊಟ್ಟವ ನಾ ಕುಟ್ಟಲಾರೆ
ಕಾಸಿಕ್ಕಾಸಿಗೆ ತಕ್ಡಿ ನಾ ತೂಗಲಾರೆ

ಇತ್ಯಾದಿಯಾಗಿ ಬ್ರಾಹ್ಮಣ, ವೀರಶೈವ, ಒಕ್ಕಲಿಗ, ಕುರುಬ, ಕ್ಷತ್ರಿಯ, ವೈಶ್ಯ, ಕುಂಬಾರರ ಸಹವಾಸ ಬೇಡವೆಂದು ಆಕೆ ತಿರಸ್ಕರಿಸುತ್ತಾಳೆ. ಜಾತಿಯ ಕಟ್ಟಳೆಯನ್ನು ಮೀರಲು ಪ್ರಯತ್ನಿಸುತ್ತಾಳೆ. ಬೇಸರಗೊಂಡ ತಂದೆ ದಕ್ಷಬ್ರಹ್ಮ

'ಹದಿನೇಳು ಹತ್ತು ಜಾತಿ ಹೇಳಿ ನಾ ಕೊಟ್ಟೆ ಕುರಿಯಮ್ಮ
ಎಲೆ ಗೌರಿ ಯಾರ್ನ ಕುರುತೀಯೊ'

ಎಂದು ಬೇಸರಿಸಿದಾಗ 'ಜಂಗಮರಿಗೆ ಕೊಡುಸಯ್ಯ ಜಾಣ ನನತಂದೆ' ಎಂದು ತನ್ನ ನಿರ್ಧಾರ ಪ್ರಕಟಿಸುತ್ತಾಳೆ. ವಾಸ್ತವವಾಗಿ ಜಾತಿ ಶ್ರೇಣಿಯಲ್ಲಿಯೂ ಬಡವ ಬಲ್ಲಿದರೂ ಇರುತ್ತಾರೆ. ಈ ಜಾತಿಗಳ ಹೊರತಾದ ಗಂಡನನ್ನು ಗೌರಿ ಬಯಸುತ್ತಾಳೆ. ಈ ಮಾತುಗಳನ್ನು ಕವಿ ಗೌರಿಯ ಬಾಯಿಯಲ್ಲಿ ಹೇಳಿಸುವುದರ ಮೂಲಕ ಜಾತಿ ವ್ಯವಸ್ಥೆಯನ್ನು ವಿರೋಧಿಸುತ್ತಾನೆ. ಯಾವೊಂದು ಸುಖ ಕಾಣದ ಶಿವನಿಗೆ ಗೌರಿ ಒಲಿಯುವುದು ಕವಿಗೆ ಖುಷಿಯನ್ನು ಕೊಡುತ್ತದೆ. ಕೆಳವರ್ಗದ ಪ್ರತಿನಿಧಿಯಾದ ಕವಿಗೆ ಸಮಾಜದಲ್ಲಿ ಇಂತಹ ಬದಲಾವಣೆಗಳನ್ನು ಕಾಣುವ ಹಂಬಲವಿದೆ.

ಯಾವೊಂದು ಸುಖ ಹೊಂದದ ಶಿವನಿಗೆ, ಮಗಳು ಒಲಿದಳೆಂಬ ಆತಂಕ ಗೌರಿಯ ತಂದೆಗೆ ಹಾಗಾಗಿ

ಬೂದಿ ಜಂಗಮನನ್ನು ಹ್ಯಾಗೆ ಮೆಚ್ಚಿದೆ
ಉಣ್ಣೋಕೆ ತಣಿಗಿಲ್ಲ ಮಣ್ಣು ಕೊಪ್ಪರಿಕೆ
ಏರೋಕೆ ಕುದಿರಿಲ್ಲ ಮುದಿಯೆತ್ತು ಶಿವಗೆ
ಇಕ್ಕೋಕೆ ಒಡವಿಲ್ಲ ನಾಗರಹಾವುಗಳು
ಧರಿಸೋಕೆ ಗಂಧವಿಲ್ಲ ಕಾಡು ಈಭೂತಿ
ಅಂಥ ಜಂಗಮನನ್ನು ಯಾಕೆ ಮೆಚ್ಚಿದೆ

.... ಇತ್ಯಾದಿಯಾಗಿ ಕೇಳುತ್ತಾನೆ. 'ಹಣೇಲಿ ಬರದಂಗೆ' ಆಗಲಿ ಎಂದು ಕಾಡಿನಲ್ಲಿ ಕಣ್ಣು ಕಟ್ಟಿ ಬಿಟ್ಟು ಬರುತ್ತಾರೆ. ಬಡ ಜಂಗಮನ ಜೊತೆ ತನ್ನ ಮಗಳ ಮದುವೆ ಮಾಡಿಸಲು ಕಿಂಚಿತ್ತು ಇಷ್ಟವಿರುವುದಿಲ್ಲ. ಹಾಗಾಗಿ ತನ್ನ ಮಗಳ ಮೇಲಿನ ಆಸೆಯನ್ನು ಬಿಟ್ಟು ಕಾಡಿನಲ್ಲಿ ಬಿಟ್ಟು ಬರುತ್ತಾರೆ. ಆಕೆಯಾದರೊ

ಅಂಜದೆ ಶಿವಗಂಗೆ ಮಠದ ಸಮೀಪದ ರುದ್ರಾಕ್ಷಿ ವನದಲ್ಲಿ ಕಷ್ಟತರವಾದ ತಪಸ್ಸನ್ನು ಮಾಡುತ್ತಾಳೆ. ಆಕೆಯ ಉಗ್ರತಪಸ್ಸಿಗೆ ಮೆಚ್ಚಿದ ಶಿವ ಕೇರೆ, ನಾಗರ, ಹೆಬ್ಬಾವು, ಸಣ್ಣಸಣ್ಣ ಹಾವುಗಳಿಂದ ಶೃಂಗರಿಸಿಕೊಂಡು ನಾಗಾಭರಣನಾಗಿ ಮುದಿಜಂಗಮ ವೇಷದಲ್ಲಿ ಬರುತ್ತಾನೆ. ಶ್ರೀಮಂತೆಯಾಗಿದ್ದ ಗೌರಿ ಮುತ್ತು ರತ್ನಗಳ ಭಿಕ್ಷೆ ನೀಡಿದರೂ ಸ್ವೀಕರಿಸದೆ 'ಕನ್ಯಾದಾನ'ವನ್ನೇ ಅಪೇಕ್ಷಿಸುತ್ತಾನೆ. ಆತನೇ ತಾನು ಬಯಸಿದ ವರನೆಂದು ಗೌರಿ ತಿಳಿದು ಚಿನ್ನದ ಚೊಂಬಿನ ಪನ್ನೀರಿನಲ್ಲಿ ಪಾದ ತೊಳೆದು ಮಠಕ್ಕೆ ಹೊರಡುತ್ತಾಳೆ ಮಠದಲ್ಲಿ ಶಿವ ಮತ್ತು ಗಿರಿಜೆಯರ ವಿವಾಹ ನೆರವೇರುತ್ತದೆ.

ಭಾರತೀಯ ಶಿಷ್ಟ-ಅಶಿಷ್ಟ ಪರಂಪರೆಗಳೆರಡೂ ಸ್ತ್ರೀ ಸಮುದಾಯದ ಬಗ್ಗೆ ಪಕ್ಷಪಾತವನ್ನು ಮಾಡಿಕೊಳ್ಳುತ್ತಲೇ ಬಂದಿವೆ. 'ಹೆಣ್ಣು ಹುಟ್ಟಲಿ ಹತ್ತೆಮ್ಮೆ ಕರೆಯಾಲಿ' ಎಂದೂ, ಹೆಣ್ಣಿನಿಂದ ಬಳಗ ಹೆಚ್ಚುತ್ತದೆಂದೂ ಹಾಡಿಹೊಗಳಿದ ಮನಸ್ಸು ಲಿಂಗಭೇದದ ಕ್ರೌರ್ಯವನ್ನು ಮುಂದೆ ಮಾಡಿಕೊಂಡು ಹೆಣ್ಣಿನ ಸ್ಥಾನಮಾನವನ್ನು ನಿಕೃಷ್ಟಗೈದಿದೆ. ಜನಸಂಖ್ಯೆಯ ಅರ್ಧಭಾಗದಂತಿರುವ ಸ್ತ್ರೀವರ್ಗದ ಹಕ್ಕನ್ನು ನಿರಾಕರಿಸುತ್ತಲೇ ಬಂದಿದ್ದಾರೆ. ಕುಲೋದ್ಧಾರ ಮತ್ತು ಸ್ವರ್ಗಪ್ರಾಪ್ತಿಯ ನೆಪದಲ್ಲಿ ಪುರಾಣ ಕಟ್ಟುಕಥೆಗಳಿಗೆ ಮಾರುಹೋದ ಭಾರತೀಯ ಮನಸ್ಸು ಹೆಣ್ಣು ಮಗುವಿನ ಹುಟ್ಟಿನಿಂದಲೂ ಚಡಪಡಿಸುತ್ತದೆ. ಇತಿಹಾಸದುದ್ದಕ್ಕೂ ಹೆಣ್ಣನ್ನು ಸಮಾಜ ತುಚ್ಛವಾಗಿ ಕಂಡಿದೆ. ಹಾಗೆಯೇ ನಡೆಸಿಕೊಂಡು ಬಂದಿದೆ. ಈ ಬಗೆಯ ಅವಜ್ಞೆ ಮತ್ತು ಲಿಂಗ ಭೇದನೀತಿಗೆ ಕನ್ನಡ ಜನಪದ ಸಾಹಿತ್ಯ ಕೂಡ ಹೊರತಾಗಿಲ್ಲ. ಕನ್ನಡ ಲಾವಣಿಗಳಲ್ಲಿಯೇ ಇದಕ್ಕೆ ಸಾಕಷ್ಟು ಪುರಾವೆಗಳು ಕಾಣಸಿಗುತ್ತವೆ.

ಕರಾಕೃ ಅವರು ಸಂಪಾದಿಸಿರುವ 'ಅಂಬಿಗರ ಗಂಗ' ಎಂಬ ಪುರಾಣ ಲಾವಣಿಯಲ್ಲಿ ಗರ್ಭಿಣಿಯಾದ ಗಿರಿಮಾಜಿಗೆ ಕನಸಿನಲ್ಲಿ ಶಿವ ಕಾಣಿಸಿಕೊಂಡು ಹೆಣ್ಣು ಮಗು ಹುಟ್ಟಿದರೆ ತನಗೆ ಮದುವೆ ಮಾಡಿಕೊಡಬೇಕೆಂದು ಕೇಳುತ್ತಾನೆ. ಅನಂತರ ಆ ದಂಪತಿಗಳಿಗೆ ಹೆಣ್ಣು ಮಕ್ಕಳೆರಡು ಹುಟ್ಟುತ್ತವೆ. ಜೋಯಿಸರು

ಹಾಲು ಅನ್ನ ಉಣ್ಣೊ ಹಾರುವ ದೋಸುರಯ್ಯ
ಮುತ್ತಿನ ಪಾಂಚಾಂಗ ಕೈಲ್ಪಿಡಿದು ಹೇಳ್ಯಾರೆ
ಅವಳು ಮೂಡಲ ತೊರೆಯ ಪಡೆದಳು
ಮೂಡಲ ತೊರೆಯ ಪಡೆದಳು- ಹಿರಿಯೋಳು
ನಾಡೀನ ಈಶ್ವರನ ಪಡೆದಳು

ಸಮಾಜದಲ್ಲಿ ಓದುಬರಹ ಬಲ್ಲವರು ಮೇಲ್ವರ್ಗದವರಾದ್ದರಿಂದ ಭವಿಷ್ಯವನ್ನು ಕೇಳಲೂ, ಪಂಚಾಂಗವನ್ನು ತೆಗೆಸಲು ಮೇಲ್ವರ್ಗದವರನ್ನು ಅವಲಂಬಿಸಬೇಕಿತ್ತು. 'ಹಾಲು ಅನ್ನ ಉಣ್ಣುವ ಹಾರುವ ದೋಸುರಯ್ಯ' ಎಂಬ ಸಾಲು ಶ್ರೀಮಂತ ಬ್ರಾಹ್ಮಣ ವ್ಯಕ್ತಿ ದೋಸುರಯ್ಯ. ಈತ ಪಂಚಾಂಗವನ್ನು ನೋಡಿ ಭವಿಷ್ಯವನ್ನು ಹೇಳುತ್ತಿದ್ದ. ಕಥೆಯು ಕಿರಿಯ ಮಗು ಕೆಟ್ಟ ನಕ್ಷತ್ರದಲ್ಲಿ ಹುಟ್ಟಿದೆ ಎಂಬ ಜನಪದ ನಂಬಿಕೆಯೊಂದಿಗೆ

ಪ್ರಾರಂಭವಾಗುತ್ತದೆ. ಆದ್ದರಿಂದ 'ಏಳಿಗೆ ಸಂತಾನವಿಲ್ಲಾ; ಪುತ್ರ ಸಂತಾನ ಮೊದಲಿಲ್ಲ; ಕನ್ನೆಯ ನೀವು ಬಿಟ್ಟು ಬನ್ನಿ ಹರಿಯೊ ತೊರೆಗ್ಹೋಗಿ' ಎಂಬುದು ಜೋಯಿಸರ ಕೊನೆಯ ಮಾತು. ಕೆಟ್ಟ ಶುಕ್ರವಾರ ಹೆಣ್ಣಿನ ಜನನಕ್ಕೆ ಪ್ರಶಸ್ತವಲ್ಲ ಎಂಬುದು ನಂಬಿಕೆ. ಅರಸರಿಂದ ತಂದೆ ತಾಯಿಗೆ ಮರಣ ಮನೆಗೂ ಜಯವಿಲ್ಲವೆಂಬ ಧ್ವನಿಯೂ ಇದೆ. ಈ ಎಲ್ಲ ಸಂದಿಗ್ಧದಲ್ಲಿಯೇ ಗಿರಿರಾಜ ಮಗುವನ್ನು (ನಂಬಿಕೆಗೆ ಕಟ್ಟುಬಿದ್ದು) ಹೊಲೆಗೆ ಬಿಟ್ಟು ಬಂದ. ಮಗು ತೇಲುತ್ತ ಅಂಬಿಗ ಗಂಗನ ಕೈ ಸೇರುತ್ತದೆ. ಮಕ್ಕಳಿಲ್ಲದ ಆತ ಶಿಶುವನ್ನು ಎತ್ತಿ ಮುದ್ದಾಡಿ ಮನೆಗೆ ತರುತ್ತಾನೆ. ಗಂಗೆಯಲ್ಲಿ ಸಿಕ್ಕ ಮಗುವಾದ್ದರಿಂದ ಆ ಮಗುವಿಗೆ 'ಗಂಗೆ' ಎಂಬ ಹೆಸರಾಗುತ್ತದೆ.

ಮಗು ಬೆಳೆದು ದೊಡ್ಡದಾಯಿತು. ಇತ್ತ ಕೈಲಾಸದಲ್ಲಿ ಪಾರ್ವತಿಗೆ ಸ್ವಪ್ನದ ಮೂಲಕ' ಸವತಿ ಬರುವುದರ ಮುನ್ಸೂಚನೆ ಸಿಗುತ್ತದೆ. ಮುಂಬರುವ ದುರಂತ, ಅಹಿತಕರ ಸಂಗತಿಗಳನ್ನು ಜನಪದರು ಸ್ವಪ್ನದಂತಹ ರೂಪಕ ಕ್ರಮದಲ್ಲಿ ಅಭಿವ್ಯಕ್ತಿಸುವುದೊಂದು ಸಾರ್ವತ್ರಿಕ ಸಂಗತಿಯಾಗಿ ಕಾಣಬರುತ್ತದೆ. ಅದೊಂದು ಕಲಾತ್ಮಕ ಅಭಿವ್ಯಕ್ತಿಯ ಅನಿವಾರ್ಯ ಕ್ರಮ. ಅದರಂತೆ ಪಾರ್ವತಿ ರಾತ್ರಿಯ ಕನಸಿನಲ್ಲಿ ಮಂಚಕ್ಕೆ ರತ್ನ ಬಿಗಿದಂತೆ ಸ್ವಪ್ನ ಕಂಡುದಾಗಿ ಗಂಡನಿಗೆ ತಿಳಿಸುತ್ತಾಳೆ. ಕನಸಿನಲ್ಲಿ ಕಂಡ ರತ್ನ ಹೆಣ್ಣಿನ ಸ್ವರೂಪವೆಂದೂ, ಮಂಚಕ್ಕೆ ಬಿಗಿದಂತೆ ಕಂಡುದು ಸವತಿ ಬರುವ ಸೂಚನೆಯೆಂದೂ, ಅವನು ವಿವರಿಸುತ್ತಾನೆ. ಈ ಮಾತು ಪಾರ್ವತಿಗೆ ತಮಾಷೆಯಾಗಿ ಕಂಡರೂ ಆಕೆ ಉದಾರಿಯಾಗಿಯೇ ವರ್ತಿಸಿ 'ಬಂದರು ಬರಲೇಳು ಭಾಗ್ಯವೇ ಉಣಲೇಳು' ಎನ್ನುತ್ತಾಳೆ. ಭಾರತೀಯ ಸ್ತ್ರೀಯನ್ನು ಸಹನೆಯ, ಪ್ರೀತಿವಾತ್ಸಲ್ಯದ, ಕರುಣಾಮೂರ್ತಿಯಾಗಿ ಚಿತ್ರಿಸಿ ವೈಭವೀಕರಿಸುವ ಆತುರದಲ್ಲಿ ಆಕೆಯ ಮನಸ್ಸಿನಾಳದ ಬೇಗುದಿ, ಕಂಡೂಕಾಣದೆ ಅನುಭವಿಸುವ ಅನಂತ ನೋವಿನ ಮುಖವನ್ನು ಇಲ್ಲಿ ಚಿತ್ರಿಸಿರದೇ ಇರುವುದು ಇಲ್ಲಿನ ದೋಷವೆನ್ನಬಹುದು. ಗಂಡು ಬೇರೊಂದು ಹೆಣ್ಣಿನ ಸಂಗ ಮಾಡಿದ ಸುದ್ದಿ ತಿಳಿದ ಹೆಣ್ಣು 'ನಾ ಮುಡಿದ ಮಲ್ಲಿಗೆ ಅವಳೊಂದು ಗಳಿಗೆ ಮುಡಿಯಲಿ' ಎನ್ನುವ ಔದಾರ್ಯ, ನಿರ್ಮತ್ಸರತೆ ತೋರಿದರೆ, ಹೆಣ್ಣು ಗಂಡೊಬ್ಬನ ಸಂಗ ಮಾಡಿದ ಸುಳಿವು ಸಿಕ್ಕೊಡನೆ ತಡಮಾಡದೆ ಆಕೆ ಮಂಡೆ ಹೊಯ್ಯಲು ಮುಂದಾಗುತ್ತಾನೆ. ಇಂಥ ಲಿಂಗ ಭೇದ ನೀತಿಯ ಕ್ರೌರ್ಯ ನಮ್ಮ ಸಾಹಿತ್ಯದಲ್ಲಿಯೇ ಸತತವಾಗಿ ಸಾಗಿ ಬಂದಿರುವುದನ್ನು ಗಮನಿಸಬಹುದಾಗಿದೆ. ಪ್ರಸ್ತುತ ಲಾವಣಿಯ ಪಾರ್ವತಿಯೂ ಇದೇ ಬಗೆಯ ಔದಾರ್ಯದಿಂದ ನಡೆದುಕೊಳ್ಳುತ್ತಾಳೆ.

ಮರುದಿನ ಕಾವಿ ಕಮಂಡಲು ಧರಿಸಿದ ಶಿವ ಕನ್ಯಾನ್ವೇಷಣೆಗಾಗಿ ಭೂಮಿಗೆ ಬಂದು ಅಂಬಿಗರ ಕೇರಿಯಲ್ಲಿ ಓಡಾಡುತ್ತಾನೆ. ಗಂಗೆಯ ಅಪರೂಪದ ಸೌಂದರ್ಯ ಕಂಡು ಬೆರಗಾಗಿ ಅವಳು ಯಾರ ಮಗಳೆಂದು ತಿಳಿಯುವ ಕುತೂಹಲ ತೋರಿಸುತ್ತಾನೆ. ಅಂಬಿಗರ ಮಗಳೆಂದರೂ ನಂಬಿಕೆ ಬರುವುದಿಲ್ಲ.

ಅಂಬಿಗರ ಮಗಳಾದ್ರೆ ನಂಬಿಕೆ ಬರುವುದಿಲ್ಲ
ಅಂಬಿಗರ ಕುಲವಾದ್ರೆ ನಿಂದೀಸಿ–ನುಡಿದೋರು
ಬಂದೀರು ನಮ್ಮ ಕಿರುಜಡೆಗೆ

'ಶಿವನ ಮುಡಿಯಲ್ಲಿ ಬಂದು ನೆಲೆಸೆಂಬ, ಕೈಲಾಸಕ್ಕೆ ತನ್ನೊಂದಿಗೆ ಬಾ' ಎಂಬ ಅವನ ಆಹ್ವಾನ ಅವಳಿಗೆ ಆಶ್ಚರ್ಯ ಹುಟ್ಟಿಸುತ್ತದೆ.

ಬುಗಿ ಸೇದೋರು ನಾವು, ಬಾಡು ತಿನ್ನೋರು ನಾವು
ಮೀನು ತಿನ್ನೋರು ನಾವು, ನಳ್ಳಿ ತಿನ್ನೋರು ನಾವು
ಗೆಂಡೆ ಕಿಳೋರು ನಾವು, ತೆಪ್ಪ ತಳ್ಳೋರು ನಾವು,

ಎಂಬುದಾಗಿ ತನ್ನ ಕುಲದ ಕೀಳರಿಮೆಯಿಂದಲೇ ಗಂಗೆ ಮಾತನಾಡುತ್ತಾಳೆ. ತಾನು ಬಡವರ ಮಗಳು, ಹೀನ ಕುಲದವಳೆಂಬ ಶೂದ್ರರ ದೈನ್ಯದ ಧ್ವನಿಯೂ ಬೆರೆತುಕೊಂಡಿರುವುದನ್ನು ಗಮನಸಬಹುದಾಗಿದೆ. ಮೆಚ್ಚಿದ ಗಂಡಿಗೆ ಹೆಣ್ಣಿನ ಕುಲ ಅಡ್ಡಿಯಾಗಲಿಲ್ಲ.

ಮೀನು ಎಂಬುದು ಕವಡೆಯ ಸರ ಕಣೆ
ನೀ ಬಂದಿರು ನನ್ನ ತುರುಬಿಗೆ

ಎಂದು ಅವಳ ಅಳುಕನ್ನು ಪರಿಹರಿಸಿದ. ತನಗೆ ಅವಳೊಬ್ಬಳೇ ಹೆಂಡತಿಯೆಂದು ಸುಳ್ಳು ಹೇಳಿದ. ಸಮಾಜದಲ್ಲಿ ತಳಸಮುದಾಯದ ಭಾವನೆಗಳ ಜೊತೆ ಆಟವಾಡಿ ಜನ ಹೇಗೆ ನಂಬಿಕೆ ಹುಟ್ಟಿಸಿ ಮೋಸಗೊಳಿಸುತ್ತಿದ್ದರು ಎಂಬುದಕ್ಕೆ ಇದೊಂದು ಉತ್ತಮ ನಿದರ್ಶನವಾಗಿದೆ. ಶಿವನ ಉದ್ದೇಶ ಮೋಸಗೊಳಿಸುವುದಾಗಿಲ್ಲದೇ ಇರುವುದಾದರೂ, ಅಂದಿನ ಸಾಮಾಜಿಕ ಸ್ಥಿತಿಗತಿಗೆ ಹಿಡಿದ ಕನ್ನಡಿಯಂತೆ ಈ ಕಥೆ ಗೋಚರಿಸುತ್ತದೆ. ಅಪ್ಪಟ ಪ್ರೇಮಜಾತಿ, ಕುಲಗಳಂತಹ ಅಡಚಣೆಗಳನ್ನು ಮೆಟ್ಟಿನಿಲ್ಲಬಲ್ಲದೆಂಬ ಸತ್ಯವನ್ನು ಜನಪದ ಕವಿ ನಿರ್ಭಯವಾಗಿ ಸಾದರಪಡಿಸುವಂತೆ ಈ ಪ್ರಸಂಗದಲ್ಲಿ ಕಾಣಿಸುತ್ತದೆ. ಶಿವ ಅಂತಿಮವಾಗಿ ಗಂಗೆಯನ್ನು ಮುಡಿಯಲ್ಲಿ ಧರಿಸಿದ. ಈ ಸುದ್ದಿ ಗಿಳಿಗಳ ಮೂಲಕ ಪಾರ್ವತಿಗೆ ತಿಳಿಯುತ್ತದೆ. ಆಕೆಗೆ ನಂಬಿಕೆ ಬರಲಿಲ್ಲ. ಅವುಗಳಿಗೆ ತುಪ್ಪದ ಅನ್ನದ ಆಸೆ ತೋರಿಸಿ, ಶಿವನನ್ನು ಎಲ್ಲಿ ಕಂಡಿರೆಂದು ಪುನಃಪುನಃ ಕೇಳುತ್ತಾಳೆ.

ಇಂಚೆ ವನದಲ್ಲಿ ಚಂದ್ರನ ಕೊಣದಲ್ಲಿ
ಗಂಗೆಗೂ ಶಿವರಾಯಗೂ ಇನವಂದ–ಆಗುವಾಗ
ನಾವು ಕಂಡೇವು ಶಿವಗಂಗೇನ

ಸ್ವಪ್ನದ ಅಸ್ಪಷ್ಟ ಸಂಗತಿಯೆಂದು ದೂರದ ಸುದ್ದಿಯೆಂದು ನಿರುಮ್ಮಳವಾದ ಪಾರ್ವತಿಯ ಮನಸ್ಸು ಸುದ್ದಿಯ ಖಚಿತತೆಯಲ್ಲಿ ವಿಕಾರಗೊಳ್ಳುತ್ತದೆ. ಮನುಷ್ಯ ಸಹಜ ವರ್ತನೆಯನ್ನು ಕವಿ ಪಾರ್ವತಿಯ ತಳಮಳದಲ್ಲಿ ಕೌಶಲಯುತವಾಗಿ ಸಂಯೋಜಿಸಿದ್ದಾನೆ. ಔದಾರ್ಯದ ಮನಸ್ಸು ಕೂಡ ತನ್ನ ಹಾನಿಯ ನಿರ್ಣಾಯಕ ಕ್ಷಣದಲ್ಲಿ ಹೇಗೆ ವ್ಯಗ್ರವಾಗಬಲ್ಲದೆಂಬ ಸತ್ಯವನ್ನು ಕವಿ ಪರಿಣಾಮಕಾರಿಯಾಗಿ ತಂದಿದ್ದಾನೆ.

ಕೆಟ್ಟೆ ಕೆಟ್ಟೆ ಎಂದು ನೆಟ್ಟೀಯ ನುರುಕೀದೆ
ಕೆಟ್ಟೇನು ಶಿವನ ದೆಸೆಯಿಂದ–ಗೌರಮ್ಮ
ಹೊಟ್ಟೆಯ ಉರಿಯು ಅರಳೀತು

ಸವತಿಯೊಂದಿಗಿನ ಮುಂದಿನ ತನ್ನ ಸಂಸಾರದ ಕಹಿಯನ್ನು ಕಲ್ಪಿಸಿಕೊಳ್ಳುತ್ತಲೇ ತಂದೆಯ ಮನೆಗೆ ಬರುತ್ತಾಳೆ. ಆಕೆಯ ಆ ಹೊತ್ತಿನ ಮಾನಸಿಕ ಸ್ಥಿತಿಯನ್ನು ಲಾವಣಿ ಪರಿಣಾಮಕಾರಿಯಾಗಿ ಹಿಡಿದಿಟ್ಟಿದೆ.

ಸಿಡಿಮಿಡಿಗೊಳ್ಳುತ್ತ ಕುಡಿಬೆವರ ಇಕ್ಕುತ್ತ
ಉಟ್ಟಂತ ನೆರಿಗೆ ಚೆಲ್ಲೂತ–ಗೌರಮ್ಮ
ಬಂದಾಳು ದಾರಿ ನೂಕೂತ

ತಂದೆ ತಾಯಿಯರ ಯಾವುದೇ ಉಪಚಾರ ಅವಳ ಮನಸ್ಸಿಗೆ ಸಂತೋಷ ಕೊಟ್ಟಿಲ್ಲ. ಬಾಗಿಲು ಹಾಕಿಕೊಂಡು ಕೋಣೆಯೊಳಗೆ ಕುಳಿತುಬಿಟ್ಟಳು. ಶಿವ ಅಪ್ಪರಲ್ಲಿ ಗಂಗೆಯನ್ನು ಮುಡಿಯಲ್ಲಿ ಅಡಗಿಸಿಕೊಂಡು ಬಂದು ಬಾಗಿಲು ತಟ್ಟಿದ. ಮೂಡಲ ಸೀಮೆಗೆ ಹೋಗಿ ಮುತ್ತು ಭಿಕ್ಷವ ಬೇಡಿ ಜೋಳಿಗೆ ತುಂಬಿದೆ. ಭುಜ ನೊಂದಿದೆ ಬಾಗಿಲು ತೆಗೆಯೆಂದು ಅವಸರ ಪಡುತ್ತಿದ್ದಾನೆ. ಬಾಗಿಲು ತೆರೆಯಲು ತಾನು ಕತ್ತಲೆ ಬೆತ್ತಲೆಯಲ್ಲಿ ಇದ್ದೇನೆಂದೂ, ಇನ್ನೂ ಒತ್ತಾಯಿಸಿದಾಗ ಮಗು ತೊಡೆಯ ಮೇಲಿದೆಯೆಂದು ಹೇಳಿ ಕಾಲ ವಿಳಂಬ ಮಾಡುತ್ತಾಳೆ. ಒತ್ತಾಯ ಹೆಚ್ಚಿದಾಗ ಬಾಗಿಲು ತೆರೆಯುತ್ತಾಳೆ. ಮೌನವಾಗಿ ಎರಡು ಮಣೆಗಳನ್ನು ಹೊತ್ತುಕೊಂಡು ಇಡುತ್ತಾಳೆ. ಶಿವ 'ಗೌರಾಜೀ ಯಾಕೆ ಸುರನಾರಿ ಮನಸೊಂದು ಮಣೆಯೆರಡು ಇಬ್ಬರುಂಟೇನೇ ಪುರುಷರು' ಎಂದು ಕೇಳಿದ. 'ನನಗಿನ್ನೊಬ್ಬ ಪುರುಷನಾದರೆ ಧರೆಯೇನು ಬೆಳೆದೀತು! ನಿಮಗೊಂದು ನಿಮ್ಮ ಜಡೆಯ ಒಳಗಿರುವ ಸುರನಾರಿ: ಗಂಗಾದೇವಿಗೊಂದು ಮಣೆಯೋದು' ಎಂದು ಹೇಳುವುದರ ಮೂಲಕ ಹಲವು ಮಾತುಗಳನ್ನು ಆಡಿ ಉಂಟು ಮಾಡುವ ಪರಿಣಾಮವನ್ನು ಒಂದೇ ತ್ರಿಪದಿಯಲ್ಲಿ ಜನಪದ ಕವಿ ಸಾಧಿಸಿದ್ದಾನೆ.

ಕಥೆಯು ಸುಖಾಂತ್ಯವಾಗಿ ಮುಕ್ತಾಯವಾದರೂ ಕೂಡ ಬಡ ಅಂಬಿಗರ ಮಗಳಾದ ಗಂಗೆಯನ್ನು ಶಿವ ಒಲಿಯುವುದು ಪಾರ್ವತಿಗೆ ಇಷ್ಟವಿರುವುದಿಲ್ಲ. ಮೂಲತಃ ಪಾರ್ವತಿ ರಾಜನ ಮಗಳು. ಆ ಕಾರಣವಾಗಿ ಸವತಿಗಳ ಮಧ್ಯೆ ಅಂತರವಿರುತ್ತದೆ. ದಾಂಪತ್ಯದಲ್ಲಿ ಪಾಲುಕೊಡಬೇಕಾಗಿ ಬಂದಾಗ ಸಂಘರ್ಷ ಹೇಗೆ ಭುಗಿಲೇಳುತ್ತದೆ ಎಂಬುದಕ್ಕೆ ಈ ಕಥೆ ಒಂದು ಉತ್ತಮ ನಿದರ್ಶನವಾಗಿದೆ.

ಮನುಷ್ಯಲೋಕದ ಪ್ರಣಯದಾಟದ ಸರಸವನ್ನು ದೇವಲೋಕಕ್ಕೂ ವಿಸ್ತರಿಸಿ ಲೌಕಿಕ ಬಯಕೆಗಳನ್ನು ತಣಿಸಿಕೊಂಡಂತೆ ಅನ್ನಿಸುತ್ತದೆ. ಮೂಲಕಥೆಯ ಕೃಷ್ಣ ವೇಣುಗೋಪಾಲನಾಗಿದ್ದರೆ ಜನಪದರ ಕೃಷ್ಣ 'ಕಿನ್ನರಿಲೋಲ' ನಾಗಿ ಚಿತ್ರಿತವಾಗಿರುವುದು ವಿಶೇಷ.

ರುಕ್ಮಿಣಿ ಗರ್ವಹರಣ:

'ರುಕ್ಮಿಣಿ ಗರ್ವಹರಣ' ಎಂಬ ಲಾವಣಿಯು ಶ್ರೀಮಂತಿಕೆಗೆ ತಕ್ಕುದಾದ ಗಂಡನ ಮನೆ ಸಿಗಲಿಲ್ಲವೆಂದು ಜಂಭಪಡುವ ರುಕ್ಮಿಣಿಯ ಚಿತ್ರಣವನ್ನು ಕೊಡುತ್ತದೆ.

ಹೆಂಗಸರಾದ ಮೇಲ ಯಾರಾದರೇನ
ಮಾಡತಿರತಾರ ಪುರುಷರ ನಿಂದಾ
ನರರ ನಡಾವಳಿ ನೋಡಿ ರುಕ್ಮಿಣಿ
ಜಕ್ಸ್ಯಾಳ ಮಾಡಿ ಒಮ್ಮೆ ಹರಿಯ ನಿಂದಾ
ಒಂದದಿವಸ ರುಕ್ಮಿಣಿ ಮನಸ್ಸಿನಲ್ಲಿ
ಕುಬುದ್ಧಿ ಹುಟ್ಟಿತ ಹರಿವಿಷಯಕ
ತೌರಮನಿಯ ಐಶ್ವರ್ಯನೆನಸಿ ಅಂತಾಳ
ನನಗ ಅತ್ತಿಮನಿ ದೊರಕಲಿಲ್ಲ ನನ್ನ ಲೆಕ್ಕ
ನಾನೋಡಿದರ ರಸನ ಮಗಳು
ಕಡಿಮಿಲ್ಲ ನಮ್ಮ ತಂದಿ ಸಂಪತಕ್ಕ
ಅತ್ತಿ ಮಾನ್ಯಾವ್ರ ಐಶ್ವರ್ಯ ನೋಡಿದಿರ
ನಾಚಿಕಿ ಬರತಿತಿ ಹೇಳುದರ

ಹೀಗೆ ಕೃಷ್ಣನೊಟ್ಟಿಗೆ ಮದುವೆಯಾದ ರುಕ್ಮಿಣಿ ಅತ್ತೆಯ ಮನೆಯವರು ತನಗೆ ಸರಿಸಾಟಿವಿಲ್ಲದೆಂದು ತಾನು ಶ್ರೀಮಂತಳ ಮಗಳೆಂದು ಅತ್ತೆಯ ಮನೆತನವನ್ನು ಹೀಗಳೆಯುತ್ತಾಳೆ. ತಂದೆಯ ಐಶ್ವರ್ಯದ ಮುಂದೆ ಅತ್ತೆಯ ಮನೆಯವರು ಯಾವ ಲೆಕ್ಕಚಾರದಲ್ಲೂ ಹತ್ತಿರ ಬರಲು ಸಾಧ್ಯವಿಲ್ಲವಾದ್ದರಿಂದ ಸೊಸೆಯಾಗಿ ತಾನು ಆ ಮನೆಯಲ್ಲಿ ಇರಲು ನಾಚಿಕೆಯಾಗುತ್ತದೆ ಎಂದು ಹೇಳುತ್ತಾಳೆ. ರುಕ್ಮಿಣಿ ಅಷ್ಟಕ್ಕೆ ತನ್ನ ಅಸಮಾಧಾನವನ್ನು ನಿಲ್ಲಿಸದೆ ಮುಂದುವರೆದು

ಜಾತಿ ತೆರೆ ಇವರ ಶ್ರೇಷ್ಠರೆಂದಿನ
ಗೌಳಗೇರ ಕುಲಾ ಇವರದ ಪೈತೀಕ
ಹಾಲ ಬೆಣ್ಣೆ ಮಾರಿ ಹೊಟ್ಟಿ ತುಂಬಿ
ಕೊಳ್ಳಾವ್ರ ಹೆಂತಾಮನಿಗಂಟ ಬಿತ್ತ ನನ್ನ ಪಾಲಕ್ಕ !

ಹೀಗೆ ಜಾತಿಯಲ್ಲಿಯೂ ತನ್ನ ಗಂಡನ ಮನೆಯವರು ಕೀಳು. ಹಾಲು, ಬೆಣ್ಣೆ, ಮಾರಿ ಹೊಟ್ಟೆ ತುಂಬಿಸಿಕೊಳ್ಳುವಂತಹವರು. ಎಂಥ ಮನೆಗೆ ಗಂಟು ಬಿದ್ದೆಯೆಂದು ಕೈಕೈ ಹಿಚುಕಿಕೊಳ್ಳುತ್ತಾಳೆ. ಹಾಗೆಯೇ ತನ್ನ ಗಂಡ ಕೃಷ್ಣನ ಕುರಿತು ಹೇಳುತ್ತಾ ನೀಲಿವರ್ಣದವ 'ಛತ್ರ ಚಾಮರ ಇವನಿಗಿಲ್ಲ' ಅಂದರೆ ತನ್ನ ಗಂಡ ರಾಜನ ವಂಶದವನಲ್ಲ, ಹೀಗಿರುವಾಗ ಸಂಪತ್ತು ಇವನಿಗೆ ಬರುವುದಾದರೂ ಎಲ್ಲಿಂದ ಎಂದು ಹೀಗಳೆಯುವಳು.

'ದನಕಾಯಕೋತಾ ತಿರಗಾಂವಾ ವನಾವನಾ' ದನಗಳನ್ನು ಮೇಯಿಸಿಕೊಳ್ಳುತ್ತಾ ಕಾಡುಮೇಡು ಅಲೆಯುವವನು. ಇವನ ಸೇವೆಯನ್ನು ಮಾಡಲೂ ಮನಸ್ಸು ಬರುತ್ತಿಲ್ಲವೆಂದು ಹೇಳುವುದರ ಮೂಲಕ ಶ್ರೀಮಂತವರ್ಗ, ಬಡವರ್ಗದ ಮೇಲೆ ತೋರುತ್ತಿದ್ದ ಅಸಡ್ಡೆಯ ಪ್ರತಿರೂಪವಾಗಿ ರುಕ್ಮಿಣಿ ಇಲ್ಲಿ ಕಾಣಿಸುತ್ತಾಳೆ. ಇನ್ನು ತನ್ನ ಮಾತುಗಳನ್ನು ಮುಂದುವರೆಸುತ್ತಾ ಶ್ರೀಮಂತನ ಜೊತೆಯಲ್ಲಿ ಮದುವೆ

ಮಾಡಿಕೊಂಡಿದ್ದರೆ ಐಶಾರಾಮಿ ಜೀವನ ನಡೆಸಬಹುದಾಗಿತ್ತು. ಅದನ್ನು ಈಗ ತನ್ನ ಜೀವನದಲ್ಲಿ ಕಳೆದುಕೊಂಡಿದ್ದೇನೆ ಎಂದು ಮರುಕಪಡುತ್ತಾಳೆ. ಆದರೆ ಬಹಳ ಬೇಗ ಆಕೆಗೆ ಪಶ್ಚಾತ್ತಾಪವಾಗುತ್ತದೆ. ತನ್ನ ತಪ್ಪಿನ ಅರಿವು ಆಕೆಯಲ್ಲಿ ಮೂಡುತ್ತದೆ.

ದಶಾವತಾರ ಧಾರಣ ಮಾಡಿದಾಂವಾ
ಹಂತಾ ದೇವಗ ನಾಯಾಗ ನಿಂದಿಸಿನೆಂತ

ಹೀಗೆ ಪಶ್ಚಾತ್ತಾಪ ಪಟ್ಟನಂತರ ಮಂಚದ ಮೇಲೆ ಮಲಗಿದ್ದ ಕೃಷ್ಣನ ಬಳಿ ಹೋಗಿ ಕುಳಿತು ಪತಿಸೇವೆ ಮಾಡಲು ತೊಡಗುತ್ತಾಳೆ.

ಸಾಕ ರುಕ್ಮಿಣಿ ನನ್ನ ಸೇವಾ ಮಾಡುದು
ಅಬರು ಅಲ್ಲ ಇದ ನಿನಗೆ
ನೀ ನೋಡಿದರ ಅರಸನ ಮಗಳು
ಕಡಿಮಿ ಇಲ್ಲ ನಿಮ್ಮ ತಂದಿ ಸಂಪತ್ತಕ್ಕ
ನಿಮ್ಮ ತಂದಿ ಮನ್ಯಾಗ ಇದ್ದ ದ್ರವ್ಯದಷ್ಟ ಹೆಡ್ಡಿದರ
ಮಣ್ಣ ಹೊಂಡಾಕಿಲ್ಲ ನಮ್ಮ ಮನಿಯಾಗ
ನೀ ನೋಡಿದರ ಕಾಂಚನವರ್ಣ
ನಾ ಅದನ ನೀಲವರ್ಣ ಕರ್ರಗ

ರುಕ್ಮಿಣಿ ಸೇವೆ ಮಾಡಲು ತೊಡಗಿದ ತಕ್ಷಣ ಕೃಷ್ಣ ನಯವಾಗಿ ಆಕೆಯ ಕೊಂಕುನುಡಿಗಳಿಗೆ ಉತ್ತರವನ್ನು ನೀಡುತ್ತಾನೆ. ಆಕೆ ಅರಸನ ಮಗಳಾಗಿರುವುದರಿಂದ ಬಡವನಾದ ತನಗೆ ಸೇವೆ ಮಾಡುವುದು ತರವಲ್ಲ ಮತ್ತು ನಿನ್ನ ಬಣ್ಣಕ್ಕೂ, ನನ್ನ ಬಣ್ಣಕ್ಕೂ, ಅಜಗಜಾಂತರ ವ್ಯತ್ಯಾಸವಿದೆಯೆಂದು ಆಕೆಯ ಮನಸ್ಸಿಗೆ ತಟ್ಟುವಂತೆ ಉತ್ತರಿಸುತ್ತಾನೆ. ಹಾಗೆಯೇ ತನ್ನ ಮಾತುಗಳನ್ನು ಮುಂದುವರೆಸುತ್ತಾ

ರಾಜಪಟ್ಟ ನನಗಿಲ್ಲ ದ್ರವ್ಯದ ಅನಕೂಲಾ
ಚಾತಿಲಿ ಗೊಲ್ಲ ಕಾಯಾಂವಾ ಗೋಗಳಾ
ರಾಜ ಸುಪುತ್ರಿಯಾಗಿ ನೀ ನನ್ನ ಕೈಕಾಲ ಒತ್ತುದ ಅನ್ಯೆಬಾಳಾ
ಜೀವಕ ಬ್ಯಾಸ್ರ ನಿನಗ ಒಣಗೋಳಾ

ಈ ರೀತಿಯಲ್ಲಿ ಜಾತಿ, ವರ್ಗಗಳಲ್ಲಿ ಎಷ್ಟರಮಟ್ಟಿಗೆ ಅಂತರವಿದೆ ಎನ್ನುವುದನ್ನು ಹೆಂಡತಿಗೆ ಮನದಟ್ಟು ಮಾಡಲು ಪ್ರಯತ್ನಿಸುತ್ತಾನೆ. ಕೊನೆಗೆ

ನನ್ನಬಿಟ್ಟ ಒಬ್ಬ ಅರಸನ ಮಾಡಿಕೊಂಡ
ವಿಷಯಸುಕಾ ಅನುಭವಿಸ ಹೋಗಂದಾ

ಎಂದು ತನ್ನನ್ನು ಬಿಟ್ಟು ಅರಸನ ಜೊತೆ ಮದುವೆ ಮಾಡಿಕೊಳ್ಳಬಹುದೆಂದು, ಇದಕ್ಕೆ ತನ್ನ ಅಭ್ಯಂತರವೇನಿಲ್ಲವೆಂದು, ತನ್ಮೂಲಕ ಆಕೆಗೆ ಸ್ವಾತಂತ್ರ್ಯ, ಮತ್ತು ಅನುಮತಿಯನ್ನು ಕೊಡುತ್ತಾನೆ.

ರುಕ್ಮಿಣಿಯು ತೋರಿಸಿದ ದರ್ಪಕ್ಕೆ ಪ್ರತಿಯಾಗಿ ನಯವಾಗಿಯೇ ಶ್ರೀಮಂತ ಮತ್ತು ಬಡವರ ನಡುವೆ ಇದ್ದ ಅಂತರವನ್ನು ಒಪ್ಪಿಕೊಳ್ಳುತ್ತಾನೆ. ಕೃಷ್ಣ ರುಕ್ಮಿಣಿಯ ವಿರುದ್ಧ ಸಂಘರ್ಷಕ್ಕಿಳಿಯುವುದಿಲ್ಲ. ಬಹುಶಃ ಅದಕ್ಕೆ ಕಾರಣ ಗಂಡ-ಹೆಂಡತಿಯ ಸಂಬಂಧವಿರಬಹುದು. ಕೊನೆಗೂ ರುಕ್ಮಿಣಿಗೆ ತನ್ನ ತಪ್ಪಿನ ಅರಿವಾಗುತ್ತದೆ. ತನ್ನ ತಪ್ಪನ್ನು ಮನ್ನಿಸಬೇಕೆಂದು ಕೃಷ್ಣನಲ್ಲಿ ಕೇಳಿಕೊಳ್ಳುವಳು. ಹೀಗೆ ಕೊನೆಗೆ ರುಕ್ಮಿಣಿಯ ಗರ್ವಹರಣವಾಗುತ್ತದೆ.

ಏಕಲವ್ಯ:

ತುಂಗಳದ ಸಂಗಮೇಶ ಕವಿಯ 'ಏಕಲವ್ಯ' ಲಾವಣಿಯು ತನ್ನ ನಡಿಗೆಯ ವಿವಿಧ ಘಟ್ಟಗಳಲ್ಲಿ ಪಡೆದುಕೊಂಡಿರುವ ಅಭಿವ್ಯಕ್ತಿಯ ಕ್ರಮ ನಮ್ಮ ಮೈನವಿರೇಳಿಸುತ್ತದೆ. 'ಯೋಧರಾಜನಾದ ಏಕಲವ್ಯ ವ್ಯಾಧರಾಜನೆಂದು ಕೇಳಿ ಭೇದ ಬುದ್ಧಿ ಬಂದಿತಾಗ ದ್ರೋಣನಲ್ಲಿ' ಎಂದು ಹೇಳುತ್ತಲೇ ಮುಗ್ಧನೂ ನಿಸ್ಸಹಾಯಕನೂ ಆದ ಏಕಲವ್ಯನಿಗೆ ಒದಗುವ ಗತಿಯನ್ನು ವಿವರಿಸಿದ್ದಾನೆ. 'ವರ್ಣದ್ವೇಷದಿಂದ ದ್ರೋಣ ಶಿಷ್ಯನಾಗಿ ತಗೋಳಿಲ್ಲ ಸ್ವಾರ್ಥಕ್ಕಾಗಿ ಕೃಷ್ಣ ಕೊಂದ ಅವನನ್ನು' ಎನ್ನುತ್ತ ಭಾರತೀಯ ವರ್ಣವ್ಯವಸ್ಥೆಯ ವಿಶ್ಲೇಷಣೆ ನಡೆಸಿದ್ದಾನೆ. ಪುರಾಣದ ವಸ್ತುವಾದರೂ ಲಾವಣಿಕಾರನ ಕುಶಲತೆಯಿಂದಾಗಿ ಅದಕ್ಕೊಂದು ಮರುಹುಟ್ಟು ಪ್ರಾಪ್ತವಾಗಿದೆ.

ದ್ರೋಣಾಚಾರ್ಯರು ಪಾಂಡವರು ಮತ್ತು ಕೌರವರಿಗೆ ಗುರುಗಳಾಗಿದ್ದರು. 'ಅಸ್ತ್ರ ವಿದ್ಯಾ ಶಾಸ್ತ್ರ ವಿಷಯ ಮೊದಲ ಮಾಡಿ ತ್ರಿಷಷ್ಟ ವಿದ್ಯಾದೊಳಗ ನಿಪುಣ ದ್ರೋಣಾಚಾರಿ' ಎಲ್ಲಾ ಬಗೆಯ ವಿದ್ಯೆಗಳಲ್ಲಿ ದ್ರೋಣಾಚಾರ್ಯರು ನಿಪುಣರಾಗಿದ್ದರು. ಬಹಳ ಸಂತೋಷದಿಂದ ದ್ರೋಣಾಚಾರ್ಯರು ಶಸ್ತ್ರವಿದ್ಯೆಯನ್ನು ಕೌರವ ಮತ್ತು ಪಾಂಡವರಿಗೆ ಹೇಳಿಕೊಡುತ್ತಿದ್ದರು. ಅರ್ಜುನ ದ್ರೋಣಾಚಾರ್ಯರ ಪ್ರಿಯಶಿಷ್ಯನಾಗಿದ್ದನು. ತಮಗೆ ಗೊತ್ತಿರುವ 'ಶಬ್ಧವೇಧಿ' ವಿದ್ಯೆಯನ್ನು ಹೇಳಿಕೊಡಬೇಕಾಗಿ ಬಂದಾಗ ಕೌರವ ಮತ್ತು ಪಾಂಡವರನ್ನು ದ್ರೋಣಾಚಾರ್ಯರು ಕೇಳುವರು. 'ಗುಟ್ಟಿನಿಂದ ಬಂದ ಮಾತ ಅಪ್ಪೂರಿಗಿ ಕೇಳತಾನ ನಿಷ್ಠಾದಿಂದ ನನ್ನ ಆಶಾ ತೀರಿಸುವಿರಿ' ಆಗ ಕೌರವರು 'ನಿಮ್ಮ ವಿಚಾರವನ್ನ ನೀವು ಏನ ಹೇಳುವಿರಿ ಕೇಳಿ ಮಾತ ಕೌರವರೆಲ್ಲ ಹೇಳಲಿಲ್ಲ ಸುಮ್ಮನಾದ್ರ ತಾಳ ಹೊಡದಾಂಗ ಎದ್ದ ನಿಂತ ಧನುರ್ಧಾರಿ' ಸುಮ್ಮನಾಗುವರು. ಆಗ ಪಾರ್ಥ (ಅರ್ಜುನ) ತಾನು ಮಾಡುವುದಾಗಿ ವಚನ ಕೊಡುತ್ತಾನೆ. ದ್ರೋಣಾಚಾರ್ಯರಿಗೆ ಬಹಳ ಸಂತೋಷವಾಗುವುದು. ಆಗ ದ್ರೋಣಾಚಾರ್ಯರು, ಅರ್ಜುನನನ್ನು ಕುರಿತು ಹೀಗೆ ಹೇಳುತ್ತಾರೆ.

'ಯಾರು ಲೋಕದಲ್ಲಿ ಆಗದಂಗ ನಿನ್ನ ಸರಿ' ಎಂದು ಹೇಳಿದ ದ್ರೋಣಾಚಾರ್ಯರು ಅರ್ಜುನನಿಗೆ ಯಾರಿಗೂ ಗೊತ್ತಿಲ್ಲದ ವಿದ್ಯೆಯನ್ನು ಹೇಳಿಕೊಡುತ್ತಾರೆ.

ಧನುರ್ವಿಧ್ಯಾ ಪಾರ್ಥಬಲವಂತ-ಆದ ಅವಶಮರಂತ
ಖಾಸ ಶಿಷ್ಯಹೌದ ಅವನು-ಶಿಷ್ಯ ಹೌದ ಅವನು

ಧನುರ್ವಿದ್ಯೆಯಲ್ಲಿ ಬಹಳ ನಿಷ್ಣಾತನಾದ ಅರ್ಜುನ ದ್ರೋಣಾಚಾರ್ಯರಿಗೆ ಖಾಸ ಶಿಷ್ಯ. ತನ್ನ ವಿದ್ಯೆಯ ಆಳವನ್ನು ತಿಳಿದುಕೊಳ್ಳಲು

ಕತ್ತಲದಾಗ ಒಮ್ಮೆ ಪಾರ್ಥತುತ್ತ ಹೋತ ಬಾಯ್ಗೆ ನಿರತ ಗತ್ತಿನಿಂದ
ತಿಳದಕೊಂಡ ಅರ್ಜುನಾ
ತನ್ನ ಕಣ್ಣಕಾಣದ ದೂರವಿರುವ ವಸ್ತುವನಾ
ಬೇಕಾದಾಂಗ ಹೊಡಿಯ ಬಹುದ ಬಾಣ ಅಂಬುದನಾ

ಕತ್ತಲೆಯಲ್ಲಿ ಒಮ್ಮೆ ಬಾಣ ಪ್ರಯೋಗ ಮಾಡುವನು. ತನ್ನ ಕಣ್ಣಿಗೆ ಕಾಣದೆ ಇರುವ ದೂರದ ವಸ್ತುವಿನ ಕಡೆಗೆ ಬಾಣಬಿಡುವನು. ಆ ಬಾಣ ಹೋಗಿ ಗುರಿಯಿಟ್ಟ ವಸ್ತುವಿಗೆ ತಗಲುತ್ತದೆ. ಅಂದಿನಿಂದ ತನ್ನ ವಿಶೇಷ ವಿದ್ಯೆಯ ಬಗ್ಗೆ ಅರ್ಜುನನಿಗೆ ಹೆಮ್ಮೆಯಾಗುವುದು. ಹೀಗಿರುತ್ತಿರುವಾಗ ಕೌರವರನ್ನು ಸೂತಪುತ್ರ ಕರ್ಣ ಸೇರಿಕೊಳ್ಳುತ್ತಾನೆ. ಕಾಲಕ್ರಮೇಣ ಕೌರವರು ಮತ್ತು ಪಾಂಡವರ ನಡುವೆ ವೈರತನ ಬೆಳೆಯುತ್ತದೆ. ಧನುರ್ವಿದ್ಯಾ ಪ್ರಾಪ್ತಿಗಾಗಿ ವನದರಾಜ ಹಿರಣ್ಯಧನು ತನುಜನಾದ ಏಕಲವ್ಯ ಬಂದಾನಲ್ಲಿ ಕೌರವರು ಮತ್ತು ಪಾಂಡವರ ನಡುವಿನ ಸಂಬಂಧ ಹದಗೆಟ್ಟಿರುವ ಸಂದರ್ಭದಲ್ಲಿ ಧನುರ್ವಿದ್ಯೆಯನ್ನು ಕಲಿಯಬೇಕೆಂಬ ಮಹಾದಾಸೆಯಿಂದ ಕಾಡಿನಲ್ಲಿ ವಾಸವಾಗಿದ್ದ ಹಿರಣ್ಯಧನುವಿನ ಮಗ ಏಕಲವ್ಯ ಬರುವನು.

ಒಳೆ ಹರುಷದಿಂದ ವಿದ್ಯೆಗಾಗಿ ದ್ರೋಣನಲ್ಲಿ
ಪಾದಾಮುಟ್ಟ ಮಾಡಿ ನಮಸ್ಕಾರ ಕೇಳ್ಯಾನಲ್ಲಿ
ದ್ರೋಣಾಚಾರಿ ಅವನ ನೋಡಿ ಬಾಣವಿದ್ಯಾದೊಳಗ ಇವಗ ಕಾಣುದಿಲ್ಲ
ಸರಿಸಮ ಸರ್ವರಲ್ಲಿ

ಏಕಲವ್ಯ ಬಹಳ ಭಕ್ತಿನಿಷ್ಠೆಯಿಂದ ದ್ರೋಣಾಚಾರ್ಯರ ಪಾದಮುಟ್ಟಿ ನಮಸ್ಕರಿಸುವನು. ಆಗ ಏಕಲವ್ಯನ ಸರಿಸಾಟಿ ಬಾಣವಿದ್ಯೆಯಲ್ಲಿ ಯಾರು ಇಲ್ಲವೆಂದೆನಿಸಿ ಸಂತುಷ್ಟಗೊಳ್ಳುವರು. ಆದರೆ ಆ ಭಾವನೆಯನ್ನು ಬಹಿರಂಗವಾಗಿ ವ್ಯಕ್ತಪಡಿಸುವುದಿಲ್ಲ.

ಯೋಧನಾದ ಏಕಲವ್ಯ ವ್ಯಾಧರಾಜನೆಂದು ಕೇಳಿ ಭೇದಬುದ್ಧಿ ಬಂದಿತಾಗ ದ್ರೋಣನಲ್ಲಿ
ಅವನ ಶಿಷ್ಯನಾಗಿ ತಗೋಳಿಲ್ಲ ಅವತನ್ನಲ್ಲಿ

ಏಕಲವ್ಯ ವಿದ್ಯೆ ಕಲಿಯಲು ಯೋಗ್ಯನಾಗಿದ್ದರೂ ಅವನು ವ್ಯಾಧ (ಬೇಡ) ನೆಂಬ ಕಾರಣಕ್ಕೆ ದ್ರೋಣಾಚಾರ್ಯರಲ್ಲಿ ಭೇದಭಾವ ಮೂಡುತ್ತದೆ. ಏಕಲವ್ಯನನ್ನು ಅವರು ಶಿಷ್ಯನನ್ನಾಗಿ ಸ್ವೀಕರಿಸುವುದಿಲ್ಲ.

ಇಟ್ಟ ಗುರುಭಕ್ತಿ ಏಕಲವ್ಯ ಆತನಲ್ಲಿ
ವನಕೆ ಹೋಗಿ ನಿಷಾದಪುತ್ರ ಮನಕ ಒಪ್ಪು ದ್ರೋಣಮೂರ್ತಿ
ಮಾಡಿಯಿಟ್ಟ ಒಂದು ಗಿಡದ ಬುಡದಲ್ಲಿ
ಒಳೆ ನಿರತನಾದ ಅವತನ್ನ ವಿದ್ಯಾದಲ್ಲಿ

ಏಕಲವ್ಯ ತನ್ನ ಸ್ವಸ್ಥಾನಕ್ಕೆ ಹೋಗಿ ದ್ರೋಣಾಚಾರ್ಯರ ಮೂರ್ತಿಯನ್ನು ಪ್ರತಿಷ್ಠಾಪಿಸಿ ಒಂದು ಗಿಡದ ಬುಡದಲ್ಲಿ ನಿಂತುಕೊಂಡು ವಿದ್ಯೆಯನ್ನು ಶ್ರದ್ಧೆಯಿಂದ ಕಲಿಯುತ್ತಾನೆ. ಗುರುಶ್ರದ್ಧೆ ಮತ್ತು ಇಚ್ಛಾಶಕ್ತಿ ಮತ್ತು ಸತತ ಅಭ್ಯಾಸದಿಂದ ಧರ್ನುವಿದ್ಯೆ ಏಕಲವ್ಯನಿಗೆ ಒಲಿಯುತ್ತದೆ.

ಗುರಿಹೂಡಿ ಬಾಣಬಿಡುವ ಮತ್ತ ಅದನ ತಿರುಗಿ ಪಡೆವ ಶರದ ಚಾಕಚಕ್ಯ
ಹತ್ತಿತವನ ಬೆನ್ನಾ
ಹೀಂಗ ಅಸ್ತ್ರ-ಶಸ್ತ್ರ ವಿದ್ಯಾದಲಿ ಆದ ಸಂಪನ್ನಾ
ಗುರುದ್ರೋಣರನ್ನ ಮೀರಿನಿಂತ ವಿದ್ಯಾವನಾ

ಧನುರ್ವಿದ್ಯೆಯಲ್ಲಿ ಗುರಿಹೂಡಿ ಬಾಣ ಬಿಡುವ ವಿದ್ಯೆ ಏಕಲವ್ಯನಿಗೆ ಒಲಿಯುವುದು. ಆತ ಎಷ್ಟರಮಟ್ಟಿಗೆ ಧನುರ್ವಿದ್ಯೆಯಲ್ಲಿ ಪರಿಣಿತ ಪಡೆಯುತ್ತಾನೆಂದರೆ ವಿದ್ಯೆಯಲ್ಲಿ ಗುರುದ್ರೋಣರನ್ನು ಮೀರಿ ನಿಲ್ಲುತ್ತಾನೆ. ಹಗಲಿರುಳೆನ್ನದೆ ಪ್ರತಿನಿತ್ಯ ಬಹಳ ಜಾಗ್ರತೆಯಿಂದ ಸಾಧನೆಯನ್ನು ಮಾಡುತ್ತಿರುತ್ತಾನೆ. ಹೀಗಿರುವಾಗ

ಅಂಥಾ ಹೊತ್ತಿನ್ಯಾಗ ಒಂದದಿನ ಹೊಕ್ಕವನಾ
ಬ್ಯಾಟಿ ನಾಯಿಗಳನ ಕೂಡಿಕೊಂಡ ಬಂದ ಅರ್ಜುನ
ಬ್ಯಾಟಿ ನಾಯಿ ಬೊಗಳಿಕೊಂತ ಕೆಟ್ಟಗುಲ್ಲ ಮಾಡಿಕೊಂತ-ನಟ್ಟ
ಅಡವಿಯಲ್ಲಿ ಬಂದು ಏಕಲವ್ಯನ
ಚಿತ್ತ ಕಲಕಿ ಮಾಡಿದಾವ ಅವನ ಬಹಿರ್ಮುಖನ
ದಯಾಮಯಿ ಏಕಲವ್ಯ ಮಾಯಾದಿಂದ ಶಬ್ದಭೇದಿ ಆಯವಾದ
ಬಾಣಬಿಟ್ಟ ನಾಯಿಮ್ಯಾಗ
ಆಗ ಏಳೂಬಾಣ ಬಂದನಟ್ಟು ಬಾಯ ಒಳಗ
ನಾಯಿ ಓಡಿಕೊಂತ ಹೋತಬಾಯಿ ಮಾಡಿ ಮ್ಯಾಗ
ಧನುರ್ಧಾರಿ ಅರ್ಜುನಗ ನೆನೆದರೇನು ತಿಳಿಯಲಿಲ್ಲ ಏನು ಗಾಯವಿಲ್ಲ
ಬಾಣಬಿಟ್ಟ ಹ್ಯಾಂಗ

ಒಂದು ದಿನ ಅರ್ಜುನ ಏಕಲವ್ಯನಿದ್ದ ಕಾಡಿಗೆ ಬರುವನು. ಆತನ ಜೊತೆ ಬೇಟೆ ನಾಯಿಗಳು ಕೂಡ ಇರುತ್ತವೆ. ಬೇಟೆ ನಾಯಿಗಳು ಕೆಟ್ಟದಾಗಿ ಬೊಗಳಿಕೊಂಡು ಬರುವಾಗ ಶಬ್ಧ ಬಂದ ಕಡೆ ಬಾಣ ಪ್ರಯೋಗಿಸಿ ಏಕಲವ್ಯ ನಾಯಿಗಳನ್ನು ಸಾಯಿಸುವನು. ಈ ದೃಶ್ಯವನ್ನು ನೋಡಿದ ಅರ್ಜುನ ಆಶ್ಚರ್ಯಚಕಿತನಾಗುವನು. ಏಕೆಂದರೆ ಶಬ್ದವೇಧಿ ವಿದ್ಯೆ ಕೇವಲ ಅರ್ಜುನನಿಗೆ ಮಾತ್ರ ದ್ರೋಣಾಚಾರ್ಯರು ಕಲಿಸಿರುತ್ತಾರೆ. ತನಗೆ ಗೊತ್ತಿಲ್ಲದೆ ದ್ರೋಣಾಚಾರ್ಯರು ಬೇರೆ ಯಾರಿಗಾದರೂ ಕಲಿಸಿರಬಹುದೇ? ಎಂಬ ಅನುಮಾನ ಅರ್ಜುನನಿಗೆ ಮೂಡುತ್ತದೆ.

ಇದನ ತಿಳಿಯಬೇಕ ಯಾವ ಅಂವ ಅಂಬುದೀಗ
ಮೆತ್ತಗಾಗಿ ನಾಯಿ ಬೆನ್ನ ಹತ್ತಿಕೊಂಡ ಅರ್ಜುನಾದಿ ಇತ್ತಬಂದ
ನೋಡತಾರ ಏಕಲವ್ಯನ

ಇದನ್ನು ತಿಳಿಯಲೇಬೇಕೆಂದು ಅರ್ಜುನ ನಾಯಿಗಳ ಬೆನ್ನ ಹತ್ತಿಕೊಂಡು ಬರುತ್ತಾನೆ. ಆಗ ಏಕಲವ್ಯನನ್ನು ಕಾಣುವನು.

ಕಪ್ಪುಬಣ್ಣವಿತ್ತ ಹೊಲಸ ಮೆಯ್ಯಮ್ಯಾಲ ಅವನ
ಬಿಲ್ಲಬಾಣ ಕಯ್ಯೊಳಗ ಸುತ್ತಿ ಕೃಷ್ಣಾಜಿನ
ಕೇಳತಾನ ಯಾವ ಗುರು ಹೇಳ ನಮಗ ಕಲಿಸಿದಾರ ತಿಳಿಯಲಿಲ್ಲ
ಇಲ್ಲಿಯತನ ಇದರ ಕೂನ

ಕಪ್ಪುಮೈಬಣ್ಣ, ಹೊಲಸುಮೈ, ಕೈಯಲ್ಲಿ ಬಿಲ್ಲುಬಾಣ ಹಿಡಿದ ಏಕಲವ್ಯ ಕಾಣಿಸಿಕೊಳ್ಳುತ್ತಾನೆ. ಏಕಲವ್ಯನನ್ನು ಕಂಡ ಅರ್ಜುನ ಕೇಳುತ್ತಾನೆ, ಯಾರು ನಿನ್ನ ಗುರು? ನಿನಗೆ ಈ ವಿದ್ಯೆಯನ್ನು ಕಲಿಸಿದವರು ಯಾರು? ಎಂದು, ಆಗ ಏಕಲವ್ಯ ದ್ರೋಣಾಚಾರ್ಯರು ತನ್ನ ಗುರುಗಳೆಂದು ಹೇಳುತ್ತಾನೆ.

ಕೇಳಿಪಾರ್ಥ ದ್ರೋಣ ಹೆಸರನ್ನ–ಮನದೊಳಗ ಆದ ಅವಖಿನ್ನ
ನನಗರಿಯದ ಕಲಿಸಿದಾನ ಹ್ಯಾಂಗ–ಕಲಿಸಿದಾನ ಹ್ಯಾಂಗ

ಅರ್ಜುನನಿಗೆ ಮಾತ್ರ 'ಶಬ್ದವೇಧಿ' ವಿದ್ಯೆಯನ್ನು ಹೇಳಿಕೊಡುವುದಾಗಿ ಮತ್ತು ಮತ್ಯಾರಿಗೂ ಈ ವಿದ್ಯೆಯನ್ನು ಹೇಳಿಕೊಡುವುದಿಲ್ಲವೆಂದು ಅರ್ಜುನನಿಗೆ ಮಾತು ಕೊಟ್ಟಿರುತ್ತಾರೆ. ಆದ್ದರಿಂದ ದ್ರೋಣಾಚಾರ್ಯರ ಹೆಸರನ್ನು ಕೇಳಿದಾಕ್ಷಣ ಅರ್ಜುನ ವಿಚಲಿತನಾಗುತ್ತಾನೆ. ತನಗರಿಯದೇ ಈ ವಿದ್ಯೆಯನ್ನು ಏಕಲವ್ಯನಗೆ ಯಾವಾಗ, ಹೇಗೆ ಹೇಳಿಕೊಟ್ಟರು ಎಂದು ಯೋಚಿಸುತ್ತಾನೆ. ತನ್ನಲ್ಲಿ ಉಂಟಾದ ಖಿನ್ನತೆಯನ್ನು ಹೋಗಲಾಡಿಸಿಕೊಳ್ಳಲು ಅರ್ಜುನ ದ್ರೋಣಾಚಾರ್ಯರ ಬಳಿ ಬರುತ್ತಾನೆ.

ಬಂದ ಹೇಳ್ಯಾನ ಗುರುವಿಗಿ ವೃತ್ತಾಂತ–ದ್ರೋಣಾಚಾರಿ ಆದಾನ ಬ್ರಾಂತ
ತಿಳಿಯದ ಹಿಡದ ಕುಂತಾನ ಗುಂಗ–ಕುಂತಾನ ಗುಂಗ
ಅವನ ಬೆಟ್ಟಿಗಿ ಮಾಡ್ಯಾನ ಆತೂರ–ಪಾರ್ಥನ ಕೂಡಿ ಗುರುವರಾ
ಬಂದ್ರ ಅಡವಿ ಆರ್ಯಾಣ ಹಿಂಗ–ಆರ್ಯಾಣ ಹಿಂಗ

ಅರ್ಜುನ ದ್ರೋಣಾಚಾರ್ಯರ ಬಳಿ ಬಂದವನು, ಒಬ್ಬ ಬೇಡ 'ಶಬ್ದವೇದಿ' ವಿದ್ಯೆಯನ್ನು ಕಲಿತಿರುವುದರ ಪ್ರಸ್ತಾಪ ಮಾಡುತ್ತಾನೆ. ಕೇವಲ ಕ್ಷತ್ರಿಯರು ಮಾತ್ರ ಕಲಿಯುವ ವಿದ್ಯೆಯನ್ನು ಒಬ್ಬ ನಿಷಾದ ಹೇಗೆ ಕಲಿತ, ಎಂಬ ಪ್ರಶ್ನೆಯನ್ನು ದ್ರೋಣಾಚಾರ್ಯರಿಗೆ ಕೇಳುತ್ತಾನೆ. ಈ ವಿಷಯವನ್ನು ಕೇಳಿದ ದ್ರೋಣಾಚಾರ್ಯರಿಗೆ ಆಶ್ಚರ್ಯವಾಗಿ ಅವನ ಭೇಟಿ ಮಾಡಬೇಕೆಂದು ಆತರಿಸುತ್ತಾರೆ.

ಇಬ್ಬರು ಏಕಲವ್ಯನನ್ನು ಭೇಟಿಯಾಗಬೇಕೆಂದು ಏಕಲವ್ಯನಿದ್ದ ಕಾಡಿಗೆ ಹೋಗುತ್ತಾರೆ. ಕಾಡಿನ ವಾತಾವರಣ ಇಬ್ಬರಿಗೂ ಆನಂದವನ್ನುಂಟು ಮಾಡುತ್ತದೆ. ಪ್ರಶಾಂತವಾದ ಆ ವನ ತಪಸ್ಸಿನ ವನದಂತೆ ಗೋಚರಿಸುತ್ತದೆ.

ಆಕಸ್ಮಿಕವಾಗಿ ಗುರುವನ್ನು ಕಂಡ ಏಕಲವ್ಯ
ಎರಗಿದಾನ ಪಾದಮ್ಯಾಲ ಗುರುವು ನಾನು
ನಿನಗ ಹ್ಯಾಂಗ ಹೇಳ ಇದನ

ದ್ರೋಣಾಚಾರ್ಯರ ಪಾದದ ಮೇಲೆ ಬಿದ್ದು ನಮಸ್ಕರಿಸುತ್ತಾನೆ. ಅಪಾರ ಭಕ್ತಿ, ಗೌರವವನ್ನು ತೋರಿಸುತ್ತಾನೆ. ಆಗ ದ್ರೋಣಾಚಾರ್ಯರು 'ನಾನು ನಿನಗೆ ಗುರು ಹೇಗಾದೆ' ಎಂದು ಪ್ರಶ್ನಿಸುತ್ತಾರೆ.

ದ್ರೋಣ ಕೇಳಿದಾಗ ವ್ಯಾಧಮೂರ್ತಿತೋರಿದಾನ
ಹಿಂದನಡದ ಘಟನಾ ಎಲ್ಲಾ ಅವಗ ತಿಳಿಸಿದಾನ

ಏಕಲವ್ಯ ದ್ರೋಣಾಚಾರ್ಯರ ಮೂರ್ತಿ ಪ್ರತಿಷ್ಠಾಪನೆ ಮಾಡಿಕೊಂಡು ವಿದ್ಯೆಯನ್ನು ಕಲಿತ ಬಗೆಯನ್ನು ವಿವರಿಸುತ್ತಾನೆ. ಮೂರ್ತಿಯನ್ನು ಕಂಡ ದ್ರೋಣಾಚಾರ್ಯರಿಗೆ ಖುಷಿಯಾಗುತ್ತದೆ. ಆದರೆ ಅರ್ಜುನ ಅಸೂಯೆಪಡುತ್ತಾನೆ. ಮೇಲ್ವರ್ಗದ ತನಗೆ ಮಾತ್ರ ಲಭಿಸಬೇಕಾಗಿದ್ದ ವಿದ್ಯೆ ಕೆಳವರ್ಗದ ಏಕಲವ್ಯನಿಗೂ ದಕ್ಕಿರುವುದು ಆತನಿಗೆ ಇಷ್ಟವಾಗುವುದಿಲ್ಲ. ಇದನ್ನು ಮೀರುವ ಬಗೆಯನ್ನು ಮನಸ್ಸಿನಲ್ಲಿ ನೆನೆಯುತ್ತಾನೆ.

ಬಲಗೈ ಹಿರಿಯ ಬೆರಳ ದಕ್ಷಿಣವಾಗಿ ಬೇಕ ಅಂದಾನು
ಅಂದಮಾತ ಬಾಯಿಯಿಂದ ಬಂದಿದ್ದಿಲ್ಲ ಇನ್ನ ಹೊರಗ ಒಂದಿನಿತು
ಮರುಗಲಿಲ್ಲ ತನ್ನ ಮನದಾಗ

ಬಲಗೈ ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ದ್ರೋಣಾಚಾರ್ಯರು ಕೇಳಿದಾಗ ಮರುಮಾತಾಡದೆ ಏಕಲವ್ಯ ತನ್ನ ಹೆಬ್ಬೆರಳನ್ನು ಕಡಿದುಕೊಡುತ್ತಾನೆ.

ಬೆರಳ ಕೊಯ್ದು ಇಟ್ಟ ದ್ರೋಣಾಚಾರಿ ಪಾದಮ್ಯಾಗ
ಅವನ ಕೀರ್ತಿಹೊತ ಗುರುಭಕ್ತಂತ ನಾಡಿನೊಳಗ
ಹಿರಿಯ ಬೆರಳ ಪಡೆದ ದ್ರೋಣ ಕಿರಿಯನಾದ ಭೂಮಿಮ್ಯಾಗ

ಮನದಲ್ಲಿ ಅಳುಕನ್ನು ತೊಡೆದು ಹಾಕಿ ಬೆರಳನ್ನು ಕೊಯ್ದು ದ್ರೋಣಾಚಾರ್ಯರ ಪಾದದ ಮೇಲೆ ಇಡುತ್ತಾನೆ. ಈ ರೀತಿ ಮಾಡಿದ್ದರಿಂದ ಏಕಲವ್ಯನ ಕೀರ್ತಿ ನಾಡಿನ ತುಂಬೆಲ್ಲ ಹಬ್ಬುತ್ತದೆ. ಮೇಲ್ವರ್ಗದವರಾದ ದ್ರೋಣಾಚಾರ್ಯರು ಏಕಲವ್ಯನ ಮುಂದೆ ಗುಣದಲ್ಲಿ ಕಿರಿಯರಾಗಿ ಕಾಣುತ್ತಾರೆ. ಅರ್ಜುನನಿಗೆ ಗೊತ್ತಿದ್ದ ವಿದ್ಯೆ ಏಕಲವ್ಯನಿಗೂ ಗೊತ್ತಿದೆ ಎಂಬ ಸತ್ಯ ಲೋಕಕ್ಕೆ ಗೊತ್ತಾಯಿತು. ಏಕಲವ್ಯನ ಗುಣಗಾನ ಎಲ್ಲಾ ಕಡೆಗಳಲ್ಲಾಗುವುದು.

ವ್ಯಾಧಾ ಜಾತಿಯಿಂದ ಕಡಿಮೆಯೆಂಬುದೊಂದೆ ಸೊಲ್ಲಾ
ಅದೇ ವರ್ಣದ್ವೇಷವೆಂಬುದಾಗಿ ಬಂದಿತಲ್ಲಾ

ಕೆಳವರ್ಗದ ಬೇಡವಾಗಿರುವುದೊಂದೇ ಏಕಲವ್ಯನಿಗೆ ಮುಖ್ಯವಾಹಿನಿಗೆ ಬರಲು ತೊಡಕಾಗಿರುತ್ತದೆ. ಇಂಥ ಸಂದರ್ಭದಲ್ಲಿ ಶ್ರಮಜೀವಿಯಾಗಿ ಯಾರ ಸಹಾಯವಿಲ್ಲದೆ ಧನುರ್ವಿದ್ಯೆಯಲ್ಲಿ ವಿಶೇಷ ವಿದ್ಯೆಯಾದ

'ಶಬ್ದವೇದಿ' ಯನ್ನು ಕಲಿತಿರುತ್ತಾನೆ. ಹೀಗಿದ್ರೂ ಈ ವಿದ್ಯೆಯಿಂದ ವಂಚಿತನನ್ನಾಗಿ ಮಾಡಬೇಕೆಂಬ ಉದ್ದೇಶದಿಂದ ಏಕಲವ್ಯನ ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ಪಡೆದುಕೊಳ್ಳುವರು.

ಹಿರಿಯಬೇರಳು ಹೋದರೇನು ತೋರ ಮಧ್ಯದಿಂದ ವ್ಯಾಧಸರಳ
ಹೂಡಿಹೊಡಿಯತಿದ್ದ ಹಿಡದಬಿಲ್ಲಾ

ಹಿರಿಯ ಬೆರಳನ್ನು ಕಳೆದುಕೊಂಡರು ಸ್ವಂತ ಪರಿಶ್ರಮದಿಂದ ತೋರ ಬೆರಳ ಸಹಾಯದಿಂದ ಬಿಲ್ವಿದ್ಯೆಯನ್ನು ಏಕಲವ್ಯ ಕಲಿಯುತ್ತಾನೆ. ಎಡಗೈಯನ್ನು ಉಪಯೋಗಿಸುವ ಪ್ರಸಂಗ ಬಂದೇ ಇರುವುದಿಲ್ಲ. ಕಂಗಾಲಾಗುವುದಕ್ಕೆ ಯಾವುದೇ ಕಾರಣವಿರುವುದಿಲ್ಲ. ತಾಯಿಯ ಸೇವೆಯನ್ನು ಮಾಡುತ್ತಾ ತನಗೆ ಉಂಟಾಗಿದ್ದ ಬೆರಳ ದುಃಖವನ್ನು ಮರೆಯುತ್ತಾನೆ. ಅರ್ಜುನನ ಹಿತಕ್ಕಾಗಿ ದ್ರೋಣಾಚಾರ್ಯರು ಏಕಲವ್ಯನ ಬೆರಳನ್ನು ಪಡೆದಿರುವರು. ಕೆಳವರ್ಗದವನಾದ ಏಕಲವ್ಯನ ಮೇಲೆ ಈ ಶೋಷಣೆಯಾಗಿದ್ದರೂ ಏಕಲವ್ಯ ಅದನ್ನು ಸಹಿಸಿಕೊಳ್ಳುತ್ತಾನೆ. ಆದರೆ ಕೃಷ್ಣ ಇದಕ್ಕಿಂತಲೂ ದೊಡ್ಡಮೋಸವನ್ನು ಏಕಲವ್ಯನಿಗೆ ಮಾಡುವನು. ಏಕಲವ್ಯ ಶ್ರದ್ಧೆಯಿಂದ ಬಿಲ್ವಿದ್ಯೆ ಅಭ್ಯಾಸ ಮಾಡುವುದನ್ನು ಕಂಡ ಕೃಷ್ಣನಿಗೆ ಅರ್ಜುನ ಏಕಲವ್ಯನ ಮೇಲೆ ಯುದ್ಧಮಾಡಿ ಗೆಲುವು ಸಾಧಿಸಲು ಸಾಧ್ಯವಿಲ್ಲವೆಂಬ ಸತ್ಯ ಗೊತ್ತಾಗುತ್ತದೆ. ಆಗ ಏಕಲವ್ಯನನ್ನು ಸಾಯಿಸುವ ಯೋಚನೆ ಮಾಡುತ್ತಾನೆ. ಮಹಾಭಾರತ ಕುರುಕ್ಷೇತ್ರ ಯುದ್ಧಕ್ಕೂ ಮುನ್ನವೇ ಏಕಲವ್ಯನನ್ನು ಕಪಟದಿಂದ ಸಾಯಿಸುವನು. ಹೀಗೆ ಮುಕ್ತಾಯವಾಗುವ ಲಾವಣಿಯಲ್ಲಿ ಮೇಲ್ವರ್ಗದ ಅರ್ಜುನನ ದ್ವೇಷ, ಈರ್ಷೆ, ಶೋಷಣೆ ಮತ್ತು ಸಂಘರ್ಷವನ್ನು ಕಾಣಬಹುದು.

ಕೊಂತ್ಯಮ್ಮ:

ಸಾರ್ವತ್ರಿಕ ಹಸಿವು, ಬಡತನದ ದಾರುಣಚಿತ್ರ, ಹಾಗೂ ಪಾಂಡವರಂತಹ ಕ್ಷತ್ರಿಯರೂ ಕೂಡ ಕಾಲದ ವಶಕ್ಕೆ ಸಿಕ್ಕಿ ಬಡತನದ ಬೇಗೆಯಲ್ಲಿ ಬೇಯುತ್ತಿರಬೇಕಾದ ಸಂದರ್ಭದಲ್ಲಿ ಮೇಲ್ವರ್ಗದವರ ಶೋಷಣೆಗೆ ಒಳಗಾಗುವ ಚಿತ್ರ 'ಕೊಂತ್ಯಮ್ಮ' ಲಾವಣಿಯಲ್ಲಿ ಕಾಣಬಹುದು. ಕೊಂತಿ ಒಂದು ಪ್ರಾತಿನಿಧಿಕ ಪಾತ್ರವಾಗಿ ಸಮಷ್ಟಿನೋವಿಗೆ ಮುಖವಾಣಿಯಾಗಿ ನಿಂತಂತೆ ಕಾಣಿಸುತ್ತದೆ. ಮೇಲ್ನೋಟಕ್ಕೆ ಮಹಾಭಾರತ ಕಥೆಯಂತೆ ಕಂಡರೂ ಅದರ ಪೌರಾಣಿಕ ಮುಖಕ್ಕಿಂತ ಸಾಮಾಜಿಕ ಮುಖವೇ ನಮ್ಮನ್ನು ಗಾಢವಾಗಿ ತಟ್ಟುತ್ತದೆ. ಇರುವಾಗ ಎಲ್ಲಾ ರೀತಿಯ ಅನುಭೋಗಗಳನ್ನು ಅನುಭವಿಸಿದ ಕೊಂತಿಗೆ ಕಾಲಕ್ರಮೇಣ ಊರನ್ನು ಬಿಟ್ಟು ಕಾಡನ್ನು ಸೇರಿಕೊಳ್ಳಬೇಕಾದ ಅನಿವಾರ್ಯ ಪರಿಸ್ಥಿತಿಯಲ್ಲಿ ಬಡತನ ಆವರಿಸುತ್ತದೆ. ಆಕೆಯ ಬಡತನದ ದಾರುಣ ಸ್ಥಿತಿ ಹೇಗಿತ್ತೆಂದರೆ

ಉಡುವುದಕೆ ಸೀರೆಯಿಲ್ಲದೆ
ಓಣಿ ಒಳಗಲ ಬಟ್ಟೆಯ–ಕೊಂತ್ಯಮ್ಮ
ಹಾದಿಬೀದಿಯ ಬಟ್ಟೆಯ ಬಟ್ಟೆಯ
ಚಿಂದಿಯನೆತ್ತಿಕೊಂಡು–ಕೊಂತ್ಯಮ್ಮ

ಹರಿವಜಲಧಿಗೆ ಬಂದು
ಒಗದು ಮಡಿಗಳ ಮಾಡಿ– ಕೊಂತ್ಯಮ್ಮ
ಕುಕ್ಕಿ ಮಡಿಗಳ ಮಾಡಿ
ಹೊಲಿವದಕೆ ಚೂಜಿವಲ್ಲದೆ– ಕೊಂತ್ಯಮ್ಮ
ಹೊಲಿವದಕೆ ದಾರಿಲ್ಲದೆ
ಅಪ್ಪ ಸಣಬನೆದಾರ– ಕೊಂತ್ಯಮ್ಮ
ಸಣ್ಣಗೆ ಎಡದುಕಂಡು
ಹಂಚಿಯ ಕಡ್ಡಿಯ ಮುರುದು– ಕೊಂತ್ಯಮ್ಮ
ಚೂಜಿಯ ಮಾಡಿದಳೊ
ಅಯ್ಯ ಎಂತೆವರಿಗೆಂತ ಕಾಲ– ಮಾರಾಯರಿಗೆ
ಏನು ಬಡಸ್ತನವಯ್ಯ

ಹೀಗೆ ಮಾಡಿಕೊಂಡರೂ ಎದೆಯಿಂದ ಮಂಡಿ ಮುಚ್ಚುವವರೆಗೆ ಆಯಿತೇ ಹೊರತು ಪೂರಾ ಮೈಮುಚ್ಚಲಿಲ್ಲ. ಕಾಡು ಬಳ್ಳಿಯ ಸೊಪ್ಪನ್ನಾದರೂ ಆಯ್ದು ಬೇಯಿಸೋಣವೆಂದರೆ ಅದಕ್ಕೂ ಹಾಕಲು ಉಪ್ಪಿನ ಕೊರತೆ. ಉಪ್ಪಿಲ್ಲದ ಸಪ್ಪೆ ಸಾರನ್ನು ಐದುಮಕ್ಕಳಿಗೆ ಸಾಲಾಗಿ ಕೂರಿಸಿ ಬಡಿಸಿದರೆ ಭೀಮನಿಗೆ ಎಟುಕುವುದಿಲ್ಲ. ಎದೆಯ ಹಾಲು ಕೊಟ್ಟರೆ ಸ್ತನ ತೊಟ್ಟೆಲ್ಲ ಉರಿ, ಯಾತನೆ, ಇದರಿಂದ ಪಾರಾಗಲು ಕಿರುಬೆರಳನ್ನು ಆತನ ಬಾಯಿಗಿಟ್ಟು ಸಂತೈಸುವ ಚಿತ್ರ ಮಾರ್ಮಿಕವಾಗಿ ಮೂಡಿನಲ್ಲುತ್ತದೆ.

ಐದುಜನ ಮಕ್ಕಳನೆ– ಕೊಂತ್ಯಮ್ಮ
ಸಪ್ಪೆಸೊಪ್ಪನೆ ಕೊಟ್ಟಳೊ
ಭೀಮನಿಗೆ ಎಟುಕಲಿಲ್ಲವೊ– ಕೊಂತ್ಯಮ್ಮ
ಎದೆಪಾಲ ಕೊಡುವಳಲ್ಲೊ
ತೊಟ್ಟೆಲ್ಲ ಉರಿಯಲಾಗ– ಕೊಂತ್ಯಮ್ಮ
ಕಿರುಬೆರಳ ಕೊಡುವಳಣ್ಣ

ಹೀಗೆ ಬಡತನದ ಎಲ್ಲಾ ರೀತಿಯ ಕಷ್ಟಗಳನ್ನು ಅನುಭವಿಸುತ್ತಿರಬೇಕಾದರೆ ಬ್ರಾಹ್ಮಣರ ಮನೆಗೆ ಬಂದು ಕುಂತಿ ಭಿಕ್ಷೆ ಬೇಡುತ್ತಾಳೆ. ಆದರೆ ಬ್ರಾಹ್ಮಣ ಭಿಕ್ಷೆಯ ಬದಲಾಗಿ ಆಕೆಯಿಂದ ಕೆಲಸವನ್ನು ಬಯಸುವನು. ಅಂದರೆ ಮೇಲ್ವರ್ಗದವರು ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಯಾವುದನ್ನು ಮಾಡುತ್ತಿರಲಿಲ್ಲ. ಅದರಲ್ಲೂ ಕೆಳವರ್ಗದವರಿಂದ ಸಾಧ್ಯವಾದಷ್ಟು ಕೆಲಸಗಳನ್ನು ಮಾಡಿಸಿ ಕೊಳ್ಳುತ್ತಿದ್ದರು. ಆದರೆ ಶ್ರಮಕ್ಕೆ ತಕ್ಕ ಪ್ರತಿಫಲ ಬಡವರಿಗೆ ಸಿಗುತ್ತಿರಲಿಲ್ಲವೆಂಬುದಕ್ಕೆ ಕೊಂತ್ಯಮ್ಮ ಉತ್ತಮ ಉದಾಹರಣೆ.

ಮಕ್ಕಳ ಕರೆದುಕೊಂಡು–ನಾಲ್ಕುಜನರ
ಕೊನೆಗೆ ನಡೆಸಿಕೊಂಡು
ಕಿರಿಯೋನು ನಕುಲಯ್ಯನ– ಕೊಂತ್ಯಮ್ಮ
ಕಂಕುಳಲಿ ಎತ್ತಿಕೊಂಡು

ಬ್ರಾಹ್ಮಣರ ಮನೆಗೆ ಬಂದು-ಮಕ್ಕಳಿಗೆ
ಇಷ್ಟನ್ನವನು ಕೇಳುತಾಳೆ
ಅನ್ನವನು ಕೇಳಿದರೆ-ಬ್ರಾಹ್ಮಣರು
ಏನಂತ ನುಡಿವರಮ್ಮ
ಎಲೆ ಅನ್ನವನು ಕೇಳುವೋಳೆ-ಎಲೆನಾರಿ
ನಮ್ಮ ಮನೆಯ ಒಳಗೆ ನೀನು
ಕೊಟ್ಟಣವ ಕುಟ್ಟ ಮುದುಕಿ-ಎಲೆನಾರಿ
ನಮ್ಮನೆ ಮನೆಯೊಳಗೆ
ಕೂಲಿಗಳ ಮಾಡಿದರೆ-ನಿನಗಿಷ್ಟ
ನುಚ್ಚಕ್ಕಿ ಕೊಡುವೆವಮ್ಮ
ಆಗ ಬ್ರಾಹ್ಮಣರ ಮಾತುಗಳನು-ಬಡಕೊಂತಿ
ಲಾಲೈಸಿ ಕೇಳುತಾಳೆ
ಅವರ ಒರಳು ಕಲ್ಲಿನ ಸುತ್ತ-ಬಡಕೊಂತಿ
ಗಂಡುಗಾಸೆಯ ಹಾಕಿ
ದಿಂಡುಗೆಯ ಸುತಿ-ಬಡಕೊಂತಿ
ಕೊಟ್ಟನವ ಕುಟ್ಟಿದರೆ-ಬ್ರಾಹ್ಮಣರು
ಇಷ್ಟು ನುಚ್ಚಕ್ಕಿ ಕೊಟ್ಟರಯ್ಯ

ಹೀಗೆ ಬ್ರಾಹ್ಮಣನ ಮನೆಯಲ್ಲಿ ಎಷ್ಟೇ ಕಷ್ಟವಾದರೂ ಅವರು ಕೊಟ್ಟ ಕೆಲಸವನ್ನು ಅಚ್ಚುಕಟ್ಟಾಗಿ ಕುಂತಿ ಮಾಡುತ್ತಾಳೆ. ಕೊಟ್ಟಣ ಕುಟ್ಟುವ ದಾರುಣ ಸ್ಥಿತಿ ಕುಂತಿಗೆ ಬರುತ್ತದೆ. ಅಪರೂಪದ ಶಕ್ತಿಯನ್ನು ಹೊಂದಿದ್ದ ಪಾಂಡವರು ಕೂಡ ಈ ವರ್ಗಸಂಘರ್ಷದ ಚೌಕಟ್ಟಿನಲ್ಲಿ ಸಿಕ್ಕಿಹಾಕಿಕೊಂಡು ನರಳಬೇಕಾದ ಪರಿಸ್ಥಿತಿ ಬಂದಿತ್ತು ಎಂದರೆ ಆ ಕಾಲಘಟ್ಟದ ಕೆಳವರ್ಗದ ಬಡವರ ಸ್ಥಿತಿ ಹೇಗಿತ್ತು? ಎನ್ನುವುದನ್ನು ಕಲ್ಪಿಸಿಕೊಳ್ಳಬಹುದಾಗಿದೆ.

೩.೩ ಸಾಮಾಜಿಕ ಲಾವಣಿಗಳಲ್ಲಿ ವರ್ಗಸಂಘರ್ಷ:

"ಲಾವಣಿಗಳು ಸಾಮಾಜಿಕ ಉತ್ಪನ್ನಗಳಾಗಿರುವುದರಿಂದ ಸಮಾಜದ ಮೂಲ ಅನುಭವವೇ ಲಾವಣಿ ಕರ್ತೃವಿನ ಸಾಮಗ್ರಿಯಾಗಿರುತ್ತದೆ" ಸಮಾಜದ ನೂರೆಂಟು ಜೀವನ ವಿಧಾನಗಳು ನೋವು ನಲಿವಿನ ಮುಖಗಳು ಅವುಗಳಲ್ಲಿ ಅಭಿವ್ಯಕ್ತವಾಗುತ್ತವೆ. ನಾಡಿನ ವಿಭಿನ್ನ ಭೌಗೋಳಿಕ ಪ್ರದೇಶಗಳಲ್ಲಿ ನೆಲೆನಿಂತ ಆದಿಮಾನವ ಸಮುದಾಯಗಳು ತಮತಮಗೆ ಎಟುಕಿದ ವಿವಿಧ ವೃತ್ತಿಗಳನ್ನು ಆಧರಿಸಿ ಜೀವನವನ್ನು ನಿರ್ವಹಿಸುತ್ತ ಬಂದರು. ವೃತ್ತಿಗನುಗುಣವಾಗಿ ಆಯಾ ಸಮುದಾಯದಲ್ಲಿ ಆರ್ಥಿಕ ತರತಮಗಳು ರೂಪುಗೊಂಡು ಕಾಲಾನಂತರದಲ್ಲಿ ಕುಲ, ಕುಲದೇವತೆ, ಕುಲದೇವತಾರಾಧನೆಗಳಲ್ಲಿ ಪರಿವರ್ತನೆಗಳುಂಟಾದವು. ಭೂಮಿಗೆ ಒಡೆಯರಾಗಿ ಉಟ್ಟುಂಡು ಸುಖವಾಗಿರುವ ಗುಂಪು ಕೆಲವಾದರೆ

ಅಲೆಮಾರಿಗಳಾಗಿ ತಮ್ಮ ತಮ್ಮ ಬದುಕಿಗಾಗಿ ಅಲೆದಾಡಿ, ಮತ್ತೆ ಸ್ವಸ್ಥಾನಕ್ಕೆ ಮರಳಿ ಸುಸ್ಥಿತಿಯ ಗುಂಪುಗಳಿಗೆ ಅಧೀನವಾಗಿ ದುಡಿಯುತ್ತಿದ್ದ ವೃಂದಗಳು ಇನ್ನು ಕೆಲವು. ಒಂದು ಗುಂಪಿನವರು ಉಚ್ಚರಾದರು; ಇನ್ನೊಂದು ಗುಂಪಿನವರು 'ನೀಚ' ರಾದರು. ಉಚ್ಚ ಗುಂಪಿನವರು ತಮ್ಮ ಎಲ್ಲ ಕೆಲಸ ಕಾರ್ಯಗಳಿಗೂ ಕೆಳಗುಂಪನ್ನು ಬಳಸಿಕೊಂಡರು. ಆದರೆ ಕೆಳಗುಂಪಿನ ಸಮುದಾಯಗಳ ಕೌಟುಂಬಿಕ ಚಟುವಟಿಕೆಗಳಲ್ಲಿ ಅಷ್ಟಾಗಿ ಬೆರೆಯಲಿಲ್ಲ. ಕಾಲಾನುಕ್ರಮದಲ್ಲಿ ಆ ಗುಂಪುಗಳ ನಡುವಣ ವ್ಯವಹಾರಗಳೂ ಆರ್ಥಿಕ ಆಧಾರದ ಮೇಲೆಯೇ ಮುನ್ನಡೆದು ಒಂದೊಂದು ಪ್ರತ್ಯೇಕ ಪಂಗಡಗಳಾಗಿ ಅವರದೇ ಬೇರೆ ಕುಲ; ಇವರದೇ ಬೇರೆ ಕುಲ. ಅವರದೇ ಬೇರೆ ಸಾಮಾಜಿಕ ಪರಿಸ್ಥಿತಿ, ಇವರದೇ ಬೇರೆ ಸಾಮಾಜಿಕ ಪರಿಸ್ಥಿತಿಯಾಯಿತು.

ಹೀಗಿರುವಾಗ ಸಾಮಾಜಿಕ ಲಾವಣಿಗಳಲ್ಲಿ ಬರುವ ಪಾತ್ರಗಳೆಲ್ಲವೂ ಕಾಲ್ಪನಿಕ ವ್ಯಕ್ತಿಗಳಾಗಿರದೆ ಸಾಮಾಜಿಕ ಜೀವಿಗಳಾಗಿ ಬದುಕಿದವರು. ಕಷ್ಟ-ನಷ್ಟಗಳಲ್ಲಿ ಈಸಿದವರು, ಉದಾತ್ತ ಉದ್ದೇಶಕ್ಕಾಗಿ ತ್ಯಾಗ-ಬಲಿದಾನ ಮಾಡಿದವರು ಆಗಿರುತ್ತಾರೆ. ಇವರು ದೀನರು, ಅಸಹಾಯಕರು, ಮುಗ್ಧರು, ವೀರೋಚಿತ ಜೀವನ ನಡೆಸಿದವರು, ತಮ್ಮ ವಿಲಕ್ಷಣ ವರ್ತನೆಗಳಿಂದ ವಿಡಂಬನೆಗೆ ಒಳಗಾದವರು, ಪ್ರೀತಿಯಲ್ಲಿ ಸಿಕ್ಕಿಕೊಂಡು ಚಡಪಡಿಸುವವರು ಆಗಿರುತ್ತಾರೆ. ಅನೇಕ ಸಂದರ್ಭಗಳಲ್ಲಿ ಬದುಕಿನ ಕ್ರೂರ ಸತ್ಯಗಳನ್ನು ಆಧರಿಸಿ ಹುಟ್ಟಿಕೊಂಡ ರಚನೆಗಳೂ ಆಗಿರುತ್ತವೆ. ಇವುಗಳೆಲ್ಲದರ ವಸ್ತು ಸಾಮಾಜಿಕ ಜೀವನಕ್ಕೆ ಸಂಬಂಧಪಡುವುದರಿಂದ ಜನಪದ ಕರ್ತೃವಿನ ಮನಸ್ಸನ್ನು ಇವು ಕೆದರುತ್ತವೆ. ಅಲ್ಲಿನವರ ವ್ಯಕ್ತಿತ್ವವನ್ನು ಆಧರಿಸಿ ಲಾವಣಿಗಳು ಹುಟ್ಟುತ್ತವೆ, ಪ್ರಸಾರಗೊಳ್ಳುತ್ತವೆ. ಕಾಲದೇಶಗಳಲ್ಲಿ ಸಂಚರಿಸುತ್ತ ಸಾಕಷ್ಟು ಬದಲಾವಣೆಯನ್ನು ಸಾಧಿಸಿಕೊಳ್ಳುತ್ತವೆ. ಮೊದಲು ಏಕಕವಿ ಕರ್ತೃತ್ವವಾಗಿದ್ದು ಅನಂತರ ಬಹುಕರ್ತೃತ್ವದ ಸ್ವರೂಪವನ್ನು ಪಡೆಯುತ್ತವೆ.

ಲಾವಣಿಗಳ ಉಳಿದ ವರ್ಗಗಳಿಗೆ ಹೋಲಿಸಿದರೆ 'ಸಾಮಾಜಿಕ ಲಾವಣಿ'ಗಳ ಗುಂಪೇ ಅತ್ಯಂತ ದೊಡ್ಡದೆಂದು ಕಾಣಿಸುತ್ತದೆ. ಜೀವನದ ಕಟುಸತ್ಯಗಳ ವಾಸ್ತವ ನಿರೂಪಣೆ ಮಾಡಿ ಮನಸ್ಸನ್ನು ತಲ್ಲಣಗೊಳ್ಳುವಂತೆ, ಜೀವನ ಸಮಸ್ಯೆಗಳ ಬಗ್ಗೆ ಗಂಭೀರವಾಗಿ ಯೋಚಿಸುವಂತೆ ಮಾಡುವುದೇ ಆಗಿದೆ. ಮಾನವನಿಗೆ ಗೊತ್ತಿಲ್ಲದಂತೆಯೇ ಅವನಲ್ಲಿನ ಮೌಢ್ಯ, ಕ್ರೋಧ, ಮಾತ್ಸರ್ಯ, ಸಣ್ಣತನ, ಸ್ವಾರ್ಥ ಇವುಗಳಲ್ಲಿ ಅನಾವರಣಗೊಳ್ಳುತ್ತದೆ. ಇವು ಮತ್ತೊಂದು ಜೀವಿಯ ಬದುಕಿನ ಅಮಾನುಷ ಹತ್ಯೆಗೆ, ಅಸಹನೀಯವಾದ ಮಾನಸಿಕ ಹಿಂಸೆಗೆ, ದಾರುಣತೆಗೆ ಕಾರಣವಾಗಬಲ್ಲುದೆಂಬ ಸತ್ಯವನ್ನು ಇವು ಚಿತ್ರಿಸುತ್ತವೆ. ಜೊತೆಗೆ ಮರೆಯಲಾಗದ ನೆನಪುಗಳಾಗಿ ನಿಟ್ಟುಸಿರನ್ನು ಸದಾ ನಮ್ಮಲ್ಲಿ ಹೇಗೆ ಉಳಿಸುತ್ತವೆಂಬುದು ಈ ಕಥೆಗಳಿಂದ ವೇದ್ಯವಾಗುತ್ತದೆ. ಈ ವರ್ಗದ ಲಾವಣಿಗಳಲ್ಲಿ ಬಹುಪಾಲು ವಾಸ್ತವತೆಯ ಆಧಾರದ ಮೇಲೆ ಹುಟ್ಟುವುದರಿಂದ ಅವು ಗದ್ಯಕಥೆಗಳಂತೆ ಉದ್ದೇಶ ಪೂರ್ವಕ ಸುಖಾಂತವನ್ನು ಹೊಂದುವುದಿಲ್ಲ. ಸಹಜ ಬೆಳವಣಿಗೆ ಹೊಂದಿ ದುರಂತದಲ್ಲಿಯೇ ಮುಕ್ತಾಯವಾಗುತ್ತವೆ.

ಒಂದು ನಿರ್ದಿಷ್ಟ ಘಟನೆ ಸಂಭವಿಸಿದ ಸಮೀಪ ಕಾಲದಲ್ಲೇ ಈ ಲಾವಣಿಗಳು ಜನ್ಮ ತಳೆಯುವುದರಿಂದ ಅದನ್ನು ಕೇಳುವ ಶ್ರೋತೃವರ್ಗಕ್ಕೂ ಆ ಘಟನೆಯ ವಾಸ್ತವ ಪರಿಚಯ ಇರುವುದರಿಂದ ಕಲ್ಪಕತೆ ಅಥವಾ ಕೃತಕ ಮುಕ್ತಾಯವನ್ನು ಒದಗಿಸಲು ಸಾಧ್ಯವಾಗುವುದಿಲ್ಲ. ಹಾಗಾಗಿ ಕಲ್ಪನೆಯ ಮೇಲೆ ಹುಟ್ಟಿಕೊಳ್ಳುವ ಕಟ್ಟುಕಥೆಗಳಿಗೂ ವಾಸ್ತವಿಕತೆಗಳನ್ನು ಬೆನ್ನೆಲುಬಾಗುಳ್ಳ ವಾಸ್ತವಿಕ ಲಾವಣಿಗಳಿಗೂ ನಿರ್ವಹಣೆಯಲ್ಲಿ ವ್ಯತ್ಯಾಸಗಳು ಹುಟ್ಟಿಕೊಳ್ಳುತ್ತವೆ. ಆದ್ದರಿಂದ ನಿರ್ದಿಷ್ಟ ಜನಸಮೂಹಕ್ಕೆ ಮತ್ತು ಸ್ಥಳಕ್ಕೆ ಸೀಮಿತವಾಗುವ ಇವು ಗದ್ಯಕಥೆಗಳಂತೆ ಸುಖಾಂತವಾಗುವ ಸ್ವಾತಂತ್ರ್ಯ ವಹಿಸಲು ಸಾಧ್ಯವಾಗುವುದಿಲ್ಲವೆಂದು ತೋರುತ್ತದೆ.

೩.೩.೧ ಸಂಗ್ಯನ ಅಪರಾಧ ಮತ್ತು ಸಾವು

ಬಡತನ ಅಂಬುದು ಬಳಕೆಟ್ಟ
ಬಡವಗ ಬಂತು ಬಹುಶಿಟ್ಟ
ಸಾವಕಾರ ಸಾಲಾ ಕೊಡಬೇಕಾದರ
ಸಂಗ್ಯಾನ ಆದಿತೊ ಸಂಕಷ್ಟ

ಹೊಂಗಲ ಎಂಬ ಪಟ್ಟಣದಲ್ಲಿ ಒಬ್ಬ ಸಾಹುಕಾರ. ಆ ಸುತ್ತಿನಲ್ಲೆಲ್ಲ ಅವನ ಹೆಸರು ಪ್ರಸಿದ್ಧ. ಬೆಳ್ಳಿ ಬಂಗಾರ ರೂಪಾಯಿ ಅವನ ವಹಿವಾಟಿನ ವಸ್ತುಗಳು. ತನ್ನ ಹೊಲದ ಆಧಾರದ ಮೇಲೆ ಸಂಗ್ಯ ಸಾಲ ಮಾಡಿದ. ಕಾಲಕ್ಕೆ ಸರಿಯಾಗಿ ತೀರಿಸಲಾಗಲಿಲ್ಲ. ಬಡತನ ಕಿತ್ತು ತಿನ್ನುವಂತಿತ್ತು. ಸಾಹುಕಾರ ಕೊಟ್ಟ ಸಾಲ ತೀರಿಸುವಷ್ಟು ಶಕ್ಯನಿರಲಿಲ್ಲ. ಕಾಗದ ಬರೆದು ಕೊಟ್ಟ ಐದು ವರ್ಷದ ಮೇಲೆ ಸಾಹುಕಾರ ಬಸವಲಿಂಗಣ್ಣ ಕೋರ್ಟಿಗೆ ಹೋದ.

ಐದು ವರಷದ ದಿನ ಮುದ್ದತ ಮಾಡಿದನ ಬರಕೊಟ್ಟ ಕಾಗದ ಬರಾಬರಿ
ನ್ಯಾಯ ಬಂದಿತೊ ಹೋದಬರಿ
ಜೋರಿ ಮಾಡಲಿಲ್ಲ ಕಾಯದೆ ಮೀರಿ
ಮಾಸೀಲಿ ಪ್ರಕಾರ ಫಿರ್ಯಾದಿ ಮಾಡಿದನ ಸವದತ್ತಿ ಕೋರ್ಟಿನ್ಯಾಗ
ಬಿತ್ತಮುರಿ

ಸಾಹುಕಾರ ಬಸವಲಿಂಗಣ್ಣ ಸಂಗ್ಯನ ಮೇಲೆ ಜೋರು ಮಾಡದೇ ಹೋದರೂ ಸವದತ್ತಿ ಕೋರ್ಟಿನಲ್ಲಿ ನ್ಯಾಯಾಂಗ ಹೋರಾಟಕ್ಕೆ ದಾವೆಯನ್ನು ಹೂಡುತ್ತಾನೆ. ಸವದತ್ತಿ ಕೋರ್ಟು ಸಾಹುಕಾರ ಬಸವಲಿಂಗಣ್ಣನ ಪರವಾಗಿ ತೀರ್ಪನ್ನು ನೀಡುತ್ತದೆ. ಈ ತೀರ್ಪನ್ನು ಪ್ರಶ್ನಿಸಲು ಸಂಗ್ಯ ಧಾರವಾಡದ ಕೋರ್ಟಿಗೆ ಹೋಗಬೇಕಾಗುತ್ತದೆ. ಬಡವನಾದ ಸಂಗ್ಯ, ಧಾರವಾಡ ಕೋರ್ಟಿಗೆ ಅಪೀಲು ಹೋಗುತ್ತಾನೆ. ನೂರು ರೂಪಾಯಿ ಕೊಟ್ಟು ಒಬ್ಬ ವಕೀಲನನ್ನಿಡುತ್ತಾನೆ. ಈ ರೀತಿ ಕೋರ್ಟಿನಲ್ಲಿ ಕೇಸು ದಾಖಲು ಮಾಡಿ ಅದನ್ನು ನಿಭಾಯಿಸಲು ತನ್ನಲ್ಲಿದ್ದ ಎತ್ತಿನ ಗಾಡಿಯನ್ನು ಮಾರಬೇಕಾಗಿ ಬರುತ್ತದೆ. ಈಗಾಗಲೇ ಸಾಲದಿಂದ ಜರ್ಜರಿತನಾಗಿದ್ದ ಸಂಗ್ಯ ಇದ್ದ ಗಾಡಿಯನ್ನು ಕಳೆದುಕೊಳ್ಳುತ್ತಾನೆ. ಧಾರವಾಡದ ಕೋರ್ಟಿನಲ್ಲೂ

ಸಂಗ್ಯನಿಗೆ ಸೋಲಾಗುತ್ತದೆ. ಉಳ್ಳವರಿಗೆ ಸುಲಿದ ಬಾಳೆಯಂತಿರುವ ಕಾನೂನು ಇಲ್ಲದವರಿಗೆ ಬೆಟ್ಟದಂತಿರುತ್ತದೆ. ಕಾನೂನಿನಂತೆ ಹೊಲವನ್ನು ವಶಪಡಿಸಿಕೊಳ್ಳಲು ಕಾರಕೂನ ಬಂದು ಸಂಗ್ಯನನ್ನು ಕರೆಸುತ್ತಾನೆ. ಇದ್ದ ವಿಚಾರವನ್ನು ತಿಳಿಸುತ್ತಾನೆ. ಆಗ ಸಂಗ್ಯ,

ಹೇಳಿಕೊಂಡ ತನ ಅನಕೂಲಾ
ಫೈಸಲ ಪ್ರಕಾರ ರೂಪಾಯಿ ಕೊಡತೆನ ಹೊಲದ ವಳಗ ಬಿಡಸರಿ ಪಾಲಾ
ಸರ್ವತಪ್ಪು ನಂದ ಆಯಿತಲ್ಲಾ
ನಿನ್ನಿಂದ ಹೊರತ ಗಟಿಯಿಲ್ಲಾ
ಬಸಲಿಂಗಣ್ಣನ ಮಾತ ಮೀರುದಿಲ್ಲ
ಕೈ ಮುಗದ ಹಿಡಿದನ ಕಾಲಾ

ಒಂದು ಸಾರಿ ಹೊಲದ ಒಳಗೆ ಹೋಗಲು ಅವಕಾಶ ಮಾಡಿಕೊಡಲು ಕೇಳಿಕೊಳ್ಳುತ್ತಾನೆ. ಬಸವಲಿಂಗಣ್ಣನಿಗೆ ಕೊಡಬೇಕಾದ ಹಣ ಪಾವತಿ ಮಾಡುತ್ತೇನೆ. ಬಸವಲಿಂಗಣ್ಣನ ಮಾತು ಮೀರುವುದಿಲ್ಲವೆಂದು ಕೈಮುಗಿದು ಕಾಲನ್ನು ಹಿಡಿದುಕೊಳ್ಳುತ್ತಾನೆ. ಆದರೂ ಬಸವಲಿಂಗಣ್ಣನ ಮನಸ್ಸು ಕರಗುವುದಿಲ್ಲ. ಆ ಹೊಲವನ್ನು ಕಳೆದುಕೊಂಡು ಚಿಂತಾಕ್ರಾಂತನಾಗುತ್ತಾನೆ. ತನ್ನ ಹೊಲವನ್ನು ಮರಳಿ ಹೇಗೆ ಪಡೆಯುವುದೆಂದು ಯೋಚಿಸುತ್ತಾನೆ. ಕೊನೆಗೆ ಪರಿಷ್ಯಾನ ಜೊತೆ ಸೇರಿ ಮಸಲತ್ತು ನಡೆಸಿ

ಇಂದಿಗೆ ಹೋಗಲಿ ನಮ್ಮ ತಲಿ
ಆಗುವುದು ಆಗಲಿ
ಜೀವದಿಂದ ಹೊರತಾ

'ಆಗುವುದೆಲ್ಲ ಆಗಲಿ, ನಮ್ಮ ತಲೆ ಹೋದರೂ ಸರಿಯೆ' ಎಂದು ತೀರ್ಮಾನಿಸಿ ಇಬ್ಬರೂ ಕುಡುಗೋಲನ್ನು ಮಸೆದರು. ಮಂಗಳವಾರ ಉದಯದಲ್ಲೆದ್ದ 'ಸಂಗ್ಯ, ಪರಿಷ್ಯ ಇಬ್ಬರು ಅಂತರ ಬಸವಣ್ಣ ಮಡಸು ನಮ ಜಿದ್ದ' ಬಸವಣ್ಣ ನಡಸು ನಮ್ಮ ಜಿದ್ದು ಎಂದು ಹೇಳಿ ಕುಡುಗೋಲನ್ನು ಮಸೆದು ಬಗಲಲ್ಲಿ ಮುಚ್ಚಿಕೊಂಡು ಹೊರಟು ಮೂರು ತಾಸಿನ ಹೊತ್ತೇರುವುದರಲ್ಲಿ ಫಕೀರಣ್ಣನ ಮನೆಗೆ ಬರುವರು. ಫಕೀರಣ್ಣ ಮನೆಯಲ್ಲಿರಲಿಲ್ಲ. ತುಕ್ಕಣ್ಣ ಇದ್ದ. 'ಏನು ಕೆಲಸ ಇತ್ತು?' ಎಂದು ಕೇಳಿದ. 'ಬಹಳ ಕೆಲಸ ಇತ್ತು' ಎಂದು ಹೇಳಿ ಹಿಂತಿರುಗಿದ. ಸಾಕಾಗಿ ಅಂಗಡಿಗೆ ಬಂದು ಕಾಯಿಕರ್ಪೂರ ತೆಗೆದುಕೊಂಡು ಹೋಗಿ ಬಸವಣ್ಣ ದೇವರಿಗೆ ಪೂಜೆ ಮಾಡಿ ಹೊಂಗಲದ ದಾರಿ ಹಿಡಿದರು. ಅವನೂ ಇರಲಿಲ್ಲ. ಏನಾದರಾಗಲೀ, ಸಾಹುಕಾರರನ್ನು ಹುಡುಕಿ ಹುಡುಕಿ ಕೊಲ್ಲಬೇಕೆಂಬ ದೃಢನಿರ್ಧಾರಕ್ಕೆ ಸಂಗ್ಯ ಮತ್ತು ಪರಿಷ್ಯಾ ಬಂದಿರುತ್ತಾರೆ.

ಜಮೀನು ಇಲ್ಲದೇ ಗಾಡಿಯನ್ನು ಕಳೆದುಕೊಂಡು, ಬಡತನದ ಬೇಗೆಯಲ್ಲಿ ಬೇಯುತ್ತಿದ್ದ ಸಂಗ್ಯ ಸಮಾನ ಮನಸ್ಕ ಪರಿಷ್ಯಾನನ್ನು ಜೊತೆಗೂಡಿ ಫಕೀರಣ್ಣ, ರಾಚಪ್ಪರನ್ನು ಕೊಲ್ಲಲು ಹುಡುಕಾಡುತ್ತಾರೆ.

ಆದರೆ ಆ ಸಂದರ್ಭದಲ್ಲಿ ಅವರಿಬ್ಬರೂ ಇವರ ಕೈಗೆ ಸಿಕ್ಕುವುದಿಲ್ಲ. ಯಾರೂ ಸಿಗಲಿಲ್ಲವಲ್ಲ ಎಂದು ಮನಸ್ಸಿನಲ್ಲಿಯೇ ಕುದಿದರು. ಬಸವಲಿಂಗಣ್ಣನ ಮನೆಗೆ ಹೋದರು. ಈ ಇಬ್ಬರು ಬಂದದ್ದು ಅವನಿಗೆ ತಿಳಿಯಲಿಲ್ಲ.

ಬಸವಲಿಂಗಣ್ಣನ ಚಿತ್ತ ರುಪಾಯಿ ಮೇಲೆ
ಮೂರುನಾಕು ಮಂದಿ ಅವನ ಬದಿಯಲ್ಲಿ
ಕಡದಾರು ಅಂಬುದು ಅವಗ ತಿಳಿಯಲಿಲ್ಲ
ಶಿವ ತಂದ ಹಾಕಿದ ಮಾಲಿ
ಸಂಗ್ಯಾ ಮುಂಗೈಯಂಗಿಯ ತೇಡಿಕೊಂಡ ಬಗಲನ್ನು
ಕುಡಗೋಲ ತಕ್ಕೊಂಡ
ನಿಂತ ನೋಡಿ ಕಡದನೊ ಅವನ ಚಂಡ
ಅದರಂತ ಕುಡಗೋಲ ಯಳಕೊಂಡ
ಕಡದವನ ಹಿಂದಕ ಸರಕೊಂಡ
ವೋಡಿ ಹೋದನ ಪರಿಷ್ಯಾನ್ನ ಕರಕೊಂಡ
ಬಸಲಿಂಗಣ್ಣಯೆದ್ದ ಸಂಗಟಾಗಿ
ಶಿರಬಾಗಿ
ಬಾಯಿಲಿ ಸುರಿತ ನೆತ್ತರಾ
ಹಾರಿತ ಕಬರಾ
ಬಿದ್ದನ ಜೀವ ಹೋಗಿ

ಹೀಗೆ ಸಂಗ್ಯ ಮತ್ತು ಪರಿಷ್ಯಾ ಬಸವಲಿಂಗಣ್ಣನನ್ನು ಸುತ್ತುವರೆದು ಅವನನ್ನು ಕುಡುಗೋಲಿನಿಂದ ಕಡಿಯುತ್ತಾರೆ. ಇವರ ಉದ್ದೇಶ ಬಸವಲಿಂಗಣ್ಣನಿಗೆ ತಿಳಿದಿರುವುದಿಲ್ಲ. ಇದ್ದಕ್ಕಿದ್ದ ಹಾಗೆ ದಾಳಿಯಾದಾಗ ಅದರಿಂದ ಚೇತರಿಸಿಕೊಳ್ಳಲೂ ಕೂಡ ಬಸವಲಿಂಗಣ್ಣನಿಗೆ ಸಾಧ್ಯವಾಗುವುದಿಲ್ಲ. ಬಸವಲಿಂಗಣ್ಣ ಸಂಕಟದಿಂದ ಏಳುವನು. ಶಿರ ಬಾಗಿತು. ಬಾಯಿಯಿಂದ ರಕ್ತ ಸುರಿಯುವುದು. ಪ್ರಜ್ಞೆತಪ್ಪಿ ಸಾಯುವನು. ಅಲ್ಲಿ ಕುಳಿತಿದ್ದ ಮಂದಿ ಗಾಬರಿಯಾಗಿ 'ಹಿಡಿಯಿರಿ ಹಿಡಿಯಿರಿ' ಎಂದು ಕೂಗಿದರು. ಎದುರಿಗೆ ಬರುತ್ತಿದ್ದ ಮಂದಿ ಯಾರೂ ಹಿಡಿಯಲಾಗಲಿಲ್ಲ. ಸುದ್ದಿ ತಿಳಿದ ಹಳಬರು ಬಂದರು. ಊರಲ್ಲೆಲ್ಲ 'ಬಬ್ಬಾಟ' ವಾಗಿ ಸಂಗ್ಯ ಮತ್ತು ಪರಿಷ್ಯಾ ಹೊಂಗಲದ 'ಗೇಟನ್ನು ದಾಟಲಾಗಲಿಲ್ಲ. ಇಕ್ಕಟ್ಟಿನ ಓಣಿಯೊಂದರಲ್ಲಿ ಓಡಿಹೋಗುವಾಗ ಹಳಬರು ಅವರನ್ನು ಹಿಡಿದುಬಿಟ್ಟರು. ಅವರ ಮನಸ್ಸಿನ ಸಿಟ್ಟು ತೀರಿತ್ತು. ಮಂದಿ ಸುತ್ತುವರಿದು ಕೂಡಿದರು.

ಹೊಡಕೊಂತ ಚಾವಡಿ ಗೋವರ ಮರ್ಯಾದೆ ಉಳಿಯಲಿಲ್ಲ ಸಂಗ್ಯಾಂದಾ
ಕುಲಕರ್ಣಿ ಬಂದನೋಡಿದಾ
ಪೋಲಿಸಗವಡ ಹೊಡಿ ಅಂದಾ
ಇದರ-ಬದರ ಸಂಗ್ಯಾನ ಪರಿಷ್ಯಾನ ಕಂಬಕೆ ಕಟ್ಯಾರೊ ಬಿಗಬಿಗದ

ಕೈಯಿನ ಕುಡುಗೋಲನ್ನು ಬೀಸಿ ಒಗೆದು ಬಿಟ್ಟ ಸಂಗ್ಯ. ಅವರನ್ನು ದಾರಿಯುದ್ದಕ್ಕೂ ಹೊಡೆಯುತ್ತ ಚಾವಡಿಗೆ ತಂದರು. ಸಾಹುಕಾರ ಕುಲಕರ್ಣಿ ಬಂದು ನೋಡಿದ. ಪೋಲೀಸು ಗೌಡನಿಗೆ ಹೊಡೆಯಲು ಅಪ್ಪಣೆಕೊಟ್ಟ. ಸಂಗ್ಯ-ಪರಿಷ್ಯಾರನ್ನು ಎದುರುಬದುರಾಗಿ ಕಂಬಗಳಿಗೆ ಕಟ್ಟಿದರು.

ಸುಳ್ಳ ಬಡಿಯಬೇಡಿರಿ ನಿವನಮಗ
ಕಡದಾಂಗ ಕಬೂಲ್ ಅದೇವ್ ಈಗ
ನಮ್ಮನ ಹಿಡದ ಕಳವರಿ ಸಂಪಗಾಂವ್ಯಾಗ
ಅವ ಅಯಿದಾನ ವಕ್ಕುಂದ ಊರಾಗ

'ಸುಮ್ಮನೆ ನಮ್ಮನ್ನು ಹೊಡೆಯಬೇಡಿರಿ, ಸಂಪಂಗಾಂವಿಗೆ ನಮ್ಮನ್ನು ಕಳಿಸಿರಿ ಕಚೇರಿಯಲ್ಲಿ ವಿಚಾರಣೆ ನಡೆಯಲಿ ವಕ್ಕುಂದದ ಹೂವಿನ ರಾಮ ಇದ್ದಾನೆ ಇದರಲ್ಲಿ' ಎಂಬ ಹೊಸ ವಿಚಾರವನ್ನು ಸಂಗ್ಯ ಮತ್ತು ಪರಿಷ್ಯ ಹೇಳುವರು. ಕೂಡಲೇ ಹಳಬರು ವಕ್ಕುಂದಕ್ಕೆ ಹೋದರು. ಹೂವಿನರಾಮ ಸಿಕ್ಕಿದ. ತರತರ ನಡುಗಿದ. ಉಣ್ಣಲೂ ಬಿಡದೆ ರಾತ್ರೋರಾತ್ರಿ ಅವನನ್ನು ಎಳೆದು ತಂದರು. ಸಂಪಂಗಾಂವಿಯ ಕಚೇರಿಗೆ ದೂರನ್ನೊಯ್ಯಲಾಯಿತು. ಹಳಬ ಕೊಟ್ಟ ವರದಿಯನ್ನು ಸುಭೇದಾರ ಓದಿನೋಡಿದ ಬುಧವಾರ ಸಂಜೆಯ ಹೊತ್ತಿಗೆ ಫೌಜುದಾರನೂ ಲಗುಬಗೆಯಿಂದ ಬಂದ ಸಾಹುಕಾರರಿಗೆ ಸರಳವಾಗಿರುವ ಕಾನೂನಿನ ಸಮರದಲ್ಲಿ ಗೆಲ್ಲುವುದಿರಲಿ, ಅದರಿಂದ ತಪ್ಪಿಸಿಕೊಳ್ಳುವುದು ಕಷ್ಟಕರವಾಗಿರುತ್ತದೆ. ಸಂಗ್ಯನಿಗೆ ಶಿಕ್ಷೆಯನ್ನು ಕೊಡಲು ಆತುರಾತುರವಾಗಿ ಎಲ್ಲಾ ರೀತಿಯ ತಯಾರಿಗಳನ್ನು ಮಾಡಿಕೊಳ್ಳಲಾಗುತ್ತದೆ.

ಫೌಜುದಾರ ಬಂದು ನೆತ್ತರನ್ನ ನೋಡಿದ

ಹೆಣವನ್ನು ನೋಡಿ ಮರಮರ ಮರುಗಿದ. ಮೃತರ ಕಡೆಯವರಿಗೆ ಹೆಣ ಒಪ್ಪಿಸಿ ಮಣ್ಣು ಮಾಡಿಸಲು ಅಪ್ಪಣೆ ಕೊಡಿಸಿದ. ಬಸವಲಿಂಗಣ್ಣನ ತಂದೆತಾಯಿಯರು ಬಿದ್ದು ಹೊರಳಾಡಿ 'ಬೋರಾಡಿ' ಅತ್ತರು. ದುಃಖವನ್ನು ತಡೆಯಲಾರದ ಅವನ ತಾಯಿ ಗೋಳಾಡಿ 'ಹಾಕಿದಾ ಗುಂಡುಗುಳದಾಳಿ ವೊಗದಾಳ ಹರದ' ಶಿವನ ಆಟ ಯಾರಿಗೂ ತಿಳಿಯದು. ಸಂಗ್ಯ ಪರಿಷ್ಯರನ್ನು ಹಾಜರುಪಡಿಸಲಾಯಿತು. 'ಯಚ್ಚರ ತಪ್ಪಿಯತ್ತರ ಹೋದಿರಿ' ಎಂದು ಮಾಮ್ಲೇದಾರ ಹುಕುಮು ಮಾಡಿದ. ಬೆಳಗಾಂವಿಗೆ ದೂರನೊಯ್ದನು.

ಇಲ್ಲಿ ತಾಲೂಕ ಬಿಟ್ಟರ ಸಂಪಗಾಂವಿ
ವೋದ ಹಾಕ್ಯಾರ ಜಿಲ್ಲೆ ಬೆಳಗಾಂವಿ
ಕರಸಿ ಸಾಹೇಬ ಮಾಡಿದ ನಿರ್ಣಾಯ
ಸಂಗ್ಯಾಗ ಬಿದ್ದಾಂಗ ಆದೀತ ಕೆಂಬಾಂವಿ
ಕಟ್ಟಬರದ ಕಳಿವ್ಯಾರ ಮಮ್ಯಾಗಿ
ಹುವ್ವಿನ ರಾಮನ ತಂದದ್ದ ಅನ್ಯಾಯ

ಹೂವಿನ ರಾಮನನ್ನು ವಿನಾಕಾರಣ ಎಳೆದು ತರಲಾಗಿದೆ. ಅವನು ಯಾವ ಅಪರಾಧವನ್ನು ಮಾಡಿಲ್ಲವೆಂದು ಸಾಹೇಬರು ನಿರ್ಣಯ ಕೊಟ್ಟಾಗ 'ಸಂಗ್ಯನಿಗೆ ಕೆರೆಬಾವಿಯಲ್ಲಿ ಬಿದ್ದ ಅನುಭವವಾಯಿತು'

ಬೆಳಗಾಂವಿಯಿಂದ ಮೂರು ತಿಂಗಳನಂತರ ಉತ್ತರ ಬಂತು. ಪರಿಷ್ಯನನ್ನು ಗಡೀಪಾರು ಮಾಡಿದರು. ಸಂಗ್ಯನಿಗೆ ಮರಣದಂಡನೆ ವಿಧಿಸಿದ್ದು ಜಾಹೀರಾತಿ ಹೋಯಿತು. ಅಲ್ಲಿಂದ ಅವನನ್ನು ಧಾರವಾಡಕ್ಕೆ ಒಯ್ಯಲಾಯಿತು. ಧಾರವಾಡವನ್ನು ಬಿಟ್ಟರೂ ಅವನನ್ನು ಉಳಿಸಲು ಯಾರಿಂದಲೂ ಆಗಲಿಲ್ಲ. ಗಲ್ಲುಶಿಕ್ಷೆ ಹೊಂಗಲದಲ್ಲೇ ನಡೆಯಲೆಂದು ತೀರ್ಮಾನಿಸಲಾಯಿತು.

ಯಚ್ಚರಿಕೆ ಇರಬೇಕ ಯಚ್ಚರದಿಂದ
ಹಿರದ ಕಟ್ಟಿ ಪಾರಾ ಹಿಂದಮುಂದಾ
ಗಲ್ಲಿಗ್ ಹಾಕುದು ಸಾಮಾನ ಯೆಲ್ಲಾ
ಸಂಗ್ಯ ಚೆಕ್ಕಡಿ ಮೇಗ ಕುಂತಿದ್ದ
ಮಾಡಿ ತಂದರೊ ಬಲಿ-ಬಂದ
ಮಾತಾಡತಾನ ದರಜಿಲ್ಲದ
ಬೆಸ್ತಾರ ದಿವಸಾ ಅಣ್ಣ ತಮ್ಮರನಾ ತನ್ನ ತಾಯಿನಾ ಕರಸಿದಾ

ಗಲ್ಲಿಗೆ ಹಾಕುವುದು ಸಾಮಾನ್ಯ ವಿಷಯವಲ್ಲ. ಹಿಂದೆಮುಂದೆ ಸರಿಯಾಗಿ ಪಹರೆಯಿರಬೇಕು. ಎಚ್ಚರದಿಂದ ಇರಬೇಕು ಎಂಬ ಆಜ್ಞೆಯನ್ನು ಹೊತ್ತವರು ಸಂಗ್ಯನನ್ನು ಕಾಯುತ್ತಿದ್ದರು. ಸಂಗ್ಯ ಚೆಕ್ಕಡಿಯ ಮೇಲೆ ಕುಳಿತಿದ್ದ. 'ಬೆಸ್ತಾರ'(ಗುರುವಾರ) ದಿನ ಅಣ್ಣ ತಮ್ಮಂದಿರನ್ನು ತಾಯಿಯನ್ನು ಕರೆಸಿಕೊಂಡ. 'ಆಗುವುದೆಲ್ಲ ಆಗಿಹೋಗಿದೆ ಯಾಕೆ ಅಳುತ್ತಿ' ಎಂದು ತಾಯಿಗೆ ಸಮಾಧಾನ ಹೇಳಿದ. 'ಬ್ರಹ್ಮ ಬರೆದ ಬರಿ ಮಾಡಿದಂತಾ ತಪ್ಪಾ ಯೆಣ್ಣೆರತ ಹೋದಾಂಗ ದೀಪಾ ಆಕಲ್ಪಾ' ಶುಕ್ರವಾರ ಸಂತೆಯ ದಿನ ಸುತ್ತಿನ ಮಂದಿ ಕೂಡಿದರು. 'ಹವ್ವಹಾರಿ ಕಬರಿಲ್ಲದ' ಮಾತಾಡುತ್ತಲೇ ಇದ್ದ ಸಂಗ್ಯನನ್ನು ಊರ ಹೊರಕ್ಕೆ ತರಲಾಯಿತು.

ಸಾಹೆಬಗ ಹೇಳಿಕೊಂಡ ಯೇನೇನ ಕೈಮುಗದ ಮಾಡಿದ ಶರಣ
ಐದ ರೂಪಾಯಿ ಖರ್ಚು ಮಾಡಿಕ್ಯಾರ ಮಠದವೊಳಗ
ಕೊಡಸರಿ ಮಣ್ಣ
ಮಾರಿಬಾಡಿ ಆದಿತ ಸಣ್ಣ ಕಳೆಗುಂದಿ ಹಾರಿತ ಬಣ್ಣಾ
ಹರಹರಾ ಅಂತ ಹಾದಿ ಹಿಡದನೊ ಹತ್ತಿನಿಂತ ತನ್ನ ಟಿಕಾಣ

ಮಠದೊಳಗೆ ಮಣ್ಣು ಮಾಡಲು ಅವಕಾಶಕೊಡಬೇಕೆಂದು ಸಾಹೇಬನನ್ನು ಕೈ ಮುಗಿದು ಕೇಳಿಕೊಂಡ. ಆದರೆ ಅವನ ಕೊನೆಯ ಆಸೆಯನ್ನು ಈಡೇರಿಸಲು ಸಾಹೇಬ ಒಪ್ಪಲಿಲ್ಲ. ಮುಖವೆಲ್ಲ ಕಳೆಗುಂದಿ ಬಾಡಿಹೋಯಿತು. ಗಲ್ಲುಶಿಕ್ಷೆ ಅನುಭವಿಸಲು ತಯಾರಾದ.

ಗಲ್ಲಿಗೆ ಹಾಕ್ಯಾರ ಕೊರಳಿಗೆ ಸರಕಾ
ಸ್ವರ್ಗದ ದಾರಿ ಹಿಡಿದಾನೊ ಕೈಲಾಸಕಾ
ಅಕ್ಕತಂಗೇರ ಅಣ್ಣತಮ್ಮರ ತಾಯಿ ದುಕ್ಖ
ಸುತ್ತಗಟ್ಟಿ ನಿಂತಿತ ಜನಲೋಕಾ
ನಾಕ ತಿಂಗಳ ಹನ್ನೆರಡ ದಿನಕ
ಅವರಾತ್ರಿ ಅಮಾಸಿ ತಾರೀಖಾ

ಹೀಗೆ ಸಂಗ್ಯನನ್ನು ಗಲ್ಲಿಗೆ ಹಾಕಿದರು. ಸಂಗ್ಯ ಸ್ವರ್ಗದ ಹಾದಿ ಹಿಡಿದ ಕೈಲಾಸಕ್ಕೆ. ಅಕ್ಕತಂಗಿಯರ, ತಾಯಿಯ ದುಃಖ ಮುಗಿಲಿಗೇರಿತು. 'ಜನಲೋಕ' ಸುತ್ತುಗಟ್ಟಿ ನಿಂತಿತು.

ಈ ಲಾವಣಿಯಲ್ಲಿ ಬ್ರಿಟೀಷರ ಪ್ರವೇಶವಿಲ್ಲ. ಬಡವರನ್ನು ಸುಲಿದು ತಿನ್ನುವ ಬಂಡವಾಳಶಾಹಿ ಜನ ಅವತ್ತೂ ಇದ್ದರು ಎಂಬ ಸಂಗತಿಯನ್ನು ಸಾರುತ್ತದೆ. ಈ ಲಾವಣಿಯಲ್ಲಿ ಪಾತ್ರಗಳ ನಡುವಿನ ಸಂಬಂಧಗಳು ಅರ್ಥವಾಗದೆ ಗೊಂದಲವಾಗುವ ಸಂಭವ ಉಂಟು. ಏನೇ ಆಗಲಿ ಈ ಲಾವಣಿಯಲ್ಲಿ ನೇರ ವರ್ಗಸಂಘರ್ಷವಿರುವುದನ್ನು ಕಾಣುತ್ತೇವೆ.

೩.೩.೨ ಬಪ್ಪಿಂಗ-ಬಮ್ಮಿಂಗ:

ಬಪ್ಪಿಂಗ-ಬಮ್ಮಿಂಗ ಒಂದು ಅಪೂರ್ವಕಥನಗೀತೆ. ಜಾತಿವ್ಯವಸ್ಥೆಯಲ್ಲಿನ ತಾರತಮ್ಯ. ಬಡವ-ಬಲ್ಲಿದರ ನಡುವಿನ ವಿವಾಹ ನಿಷೇಧಕ ಸಾಂಪ್ರದಾಯಿಕ ದೃಷ್ಟಿಯ ಮೂಲಕ ಜರುಗಿದ ದುಃಖಗಳ ಸವೇಗವಾದ ಕಥನದ ರೀತಿಯಿದೆ. ಕಥನಗೀತೆ ಪಂತಕಟ್ಟುವುದರ ಮೂಲಕ ಪ್ರಾರಂಭವಾಗುತ್ತದೆ.

ಬಪ್ಪಿಂಗ್ನೋ ಬಂಮ್ಮಿಂಗ್ನೋ
ಏನೆಂದ ಪಂತಮಾಡಿದರು
ಪಗಡೆ ಆಟ ಆಡಬೇಕು
ನೀಸೋತರೆ ನಿನತಂಗಿ
ನನಗೆ ಆದರೆ ಕೊಡಬೇಕು
ನಾಸೋತರೆ ನನತಂಗಿ
ನಿನಗೆ ಆದರೆ ಕೊಡತೇನೆ
ಅಂದೇಳಿ ಪಂತ ಮಾಡಿಕೊಂಡು
ಪಗಡಿ ಆಟ ಹೂಡಿದರು

ಬಪ್ಪಿಂಗ ಬ್ರಾಹ್ಮಣ, ಬಮ್ಮಿಂಗ ಹೊಲೆಯರವನು. ಇಬ್ಬರು ಒಂದುದಿನ ವಿಚಿತ್ರವಾದ ಪಂತವನ್ನು ಕಟ್ಟಿಕೊಂಡರು. 'ಯಾರು ಸೋಲುತ್ತಾರೋ ಅವರು ತಮ್ಮ ತಂಗಿಯನ್ನು ಗೆದ್ದವರಿಗೆ ಮದುವೆ ಮಾಡಿಕೊಡಬೇಕು'. ಇದು ಸಮಾಜದ ನಿಯಮಕ್ಕೆ ವಿರುದ್ಧವಾದ ಪಂಥವಾಗಿತ್ತು. ಸಾಮಾನ್ಯವಾಗಿ ಸ್ವಜಾತಿಯ ವಧು-ವರರ ನಡುವೆ ಮದುವೆಯಾಗುತ್ತಿತ್ತು. ಮೇಲ್ಜಾತಿಯ ಮತ್ತು ಕೆಳಜಾತಿಯರ ನಡುವೆ ಮದುವೆ ನಿಷಿದ್ಧವಾಗಿತ್ತು. ಆ ರೀತಿಯೇನಾದರೂ ಸಮಾಜದ ನಿಯಮಕ್ಕೆ ವಿರುದ್ಧವಾಗಿ ಅಂತರಜಾತೀಯ ವಿವಾಹ ಮಾಡಿಕೊಂಡರೆ ಅಂತಹವರನ್ನು ಊರಿನಿಂದ ಗಡಿಪಾರು ಮಾಡುತ್ತಿದ್ದರು ಅಥವಾ ಕೊಲ್ಲುತ್ತಿದ್ದರು.

ಬಪ್ಪಿಂಗ್ನೋ ಬ್ರಾಹ್ಮಣ
ಬಮ್ಮಿಂಗ್ನೋ ಹೊಲೆಯನು

ಈ ಕಥನಗೀತೆಯಲ್ಲಿ ಬ್ರಾಹ್ಮಣ ಮತ್ತು ಹೊಲೆಯನ ನಡುವೆ ಪಂಥವೇರ್ಪಟ್ಟಿರುತ್ತದೆ. ಇಬ್ಬರೂ ಗೆಳೆಯರಿರಬಹುದೆಂದು ಎಂಬುದಕ್ಕೆ ಯಾವುದೇ ಸಾಕ್ಷ್ಯ ಕಥನಗೀತೆಯಲ್ಲಿ ಕಾಣಸಿಗುವುದಿಲ್ಲ. ನಿಗದಿತ ಪಗಡೆಯಾಟದಲ್ಲಿ ಬಮ್ಮಿಂಗನಿಗೆ ಜಯವಾಗುತ್ತದೆ. ಪಗಡೆಯಾಟದಲ್ಲಿ ಗೆದ್ದ ಬಮ್ಮಿಂಗ, ಬಪ್ಪಿಂಗನಿಗೆ ಕೇಳುತ್ತಾನೆ.

ನೀ ಆಡಿದ ಮಾತಿನ ಪರಕಾರ

ಲಗ್ನಕೆ ಯಾವಾಗ ಬರಬೇಕೊ?

ಆಗ ಕೊಟ್ಟ ಮಾತಿನ ಪ್ರಕಾರ

ಮೇಲೆ ಬರುವ ಸುಕ್ರವಾರ
ದಿಬ್ಬಣ ತಕ್ಕಡ್ಂ ಬಾರಪ್ಪ
ನನ್ನಲು ತಂಗಿನ
ಲಗ್ನಮಾಡಿ ಕೊಡತೇನೆ

ಮುಂದಿನ ಶುಕ್ರವಾರ ದಿಬ್ಬಣ ತರಲು ಬಪ್ಪಿಂಗ, ಬಮ್ಮಿಂಗನಿಗೆ ಆಹ್ವಾನ ನೀಡುತ್ತಾನೆ. ಈ ರೀತಿ ಆಹ್ವಾನ ನೀಡಿದ ಬಪ್ಪಿಂಗ, ದುಃಖದಿಂದ ಮನೆಗೆ ಬಂದು ಕಂಬಳಿ ಮುಸುಕು ಹಾಕಿಕೊಂಡು ಮಲಗಿದನು. ಊಟವನ್ನು ಮಾಡದೆ ದುಃಖಿತನಾಗಿದ್ದ ಮಗನನ್ನು ತಾಯಿ ಪ್ರಶ್ನಿಸುತ್ತಾಳೆ.

ಕೇಳಲ್ಲೊ ನನ್ನ ಮಗನೆ
ಯಾಕಿನ್ನು ಮಲಗಿದೆ
ಊಟಕ್ಕಾದರು ಏಳಪ್ಪ
ಯಾರು ನಿನಗೆ ಬೂದಾರು?
ಯಾರು ನಿನಗೆ ಹೊಡಿದಾರು?

'ಊಟಕ್ಕಾದರು ಏಳು ಮಗನೆ' ಎಂದು ಕರೆದು ಮಲಗಿರುವುದರ ಕಾರಣವನ್ನು ತಾಯಿ ಕೇಳಿದಾಗ ಬಪ್ಪಿಂಗ ತಾನು ಹೊಲೆಯನಾದ ಬಮ್ಮಿಂಗನಿಗೆ ಮಾತು ಕೊಟ್ಟ ವಿಚಾರವನ್ನು ತಿಳಿಸುತ್ತಾನೆ. ಹಿಂದಿನ ಜನರು ಕೊಟ್ಟ ಮಾತಿನ ಪರಿಪಾಲನೆ ಮಾಡಲು ಹಿಂಜರಿಯುತ್ತಿರಲಿಲ್ಲವೆನ್ನುವುದಕ್ಕೆ ಇದು ಉತ್ತಮ ಉದಾಹರಣೆಯೆಂದು ಹೇಳಬಹುದು. ಬಪ್ಪಿಂಗನ ತಾಯಿ ಅಂತರ್ಜಾತೀಯ ವಿವಾಹಕ್ಕೆ ಒಪ್ಪಿಕೊಳ್ಳುವಳು. ಭಾರತೀಯ ಸಂಸ್ಕೃತಿಯ ಪ್ರಕಾರ ಭಾರತೀಯ ನಾರಿ ಅದರಲ್ಲೂ ಹಳ್ಳಿಯ ಹುಡುಗಿ ಹಿರಿಯರು ನಿಶ್ಚಯ ಮಾಡಿದ ವರನ ಜೊತೆಯೇ ಮದುವೆ ಮಾಡಿಕೊಳ್ಳುತ್ತಿದ್ದದ್ದು ಪದ್ಧತಿಯಾಗಿತ್ತು. ಹೀಗಾಗಿ ಬಪ್ಪಿಂಗನ ತಂಗಿ ಮದುವೆಗೆ ಅನಿವಾರ್ಯವಾಗಿ ಒಪ್ಪಿಕೊಂಡಳು.

ಶುಕ್ರವಾರ ದಿನದಲ್ಲಿ
ಬಮ್ಮಿಂಗ ಅಂಬವನು
ದಿಬ್ಬಣ ತಕ್ಕಂಡ್ ಬಂದಿರ
ದಿಬ್ಬಣ ಬಂದದು ನೋಡಿದನು
ತಂಗಿನಾದರು ಕರೆದಿದಾನು
ಸೃಂಗಾರವ ಮಾಡಿದ
ಲಗ್ನ ಮಾಡಿ ಕೊಡುವನು

ಹೀಗೆ ಮದುವೆಯಾಗಿ ಹೋದ ಮೇಲ್ವರ್ಗದ ಹುಡುಗಿ, ಬಡವ ಗಂಡನ ಮನೆಯಲ್ಲಿ ಊಟ ಮಾಡಲು ಸಾಧ್ಯವಾಗುವುದಿಲ್ಲ. ತುತ್ತುಗಳು ಬಾಯಿಗೆ ಹೋಗದೆ ಕೆಳಗೆ ಬೀಳುತ್ತಿದ್ದವು. ಯಾವಾಗ ಬಡ ಅತ್ತೆಯ ಮನೆಯಲ್ಲಿ ಇರಲು ಸಾಧ್ಯವಾಗುವುದಿಲ್ಲವೋ ಆಗ ತವರು ಮನೆಗೆ ಬಂದು 'ನನಗೆ ಹಸಿವಾಗುತ್ತದೆ ಊಟಕ್ಕೆ ಬಡಿಸು' ಎಂದು ತಾಯಿಗೆ ಕೇಳುವಳು. ಆದರೆ ತಾಯಿ 'ಹಸಿವಾದರೆ ಹಾದಿಯ ಮಣ್ಣು ತಿನ್ನು; ಕೊಟ್ಟವನ ಮನೆಗೆ ಹೋಗು' ಎನ್ನುತ್ತಾಳೆ.

ಹೊಟ್ಟೆ ಹಸು ಆದರೆ
ಹಾದಿ ಮಣ್ಣು ತಿನ್ನವ್ವ
ಕೊಟ್ಟವನ ಮನೆಗೆ ಹೋಗವ್ವ

ಮದುವೆಯ ನಂತರ ಕೆಳಜಾತಿಗೆ ಸೇರಲ್ಪಟ್ಟ ತನ್ನ ಮಗಳ ಬಗೆಗಿನ ಮಮತೆ ಪ್ರೀತಿಯನ್ನು ತಾಯಿ ಕಳೆದುಕೊಂಡಿರುತ್ತಾಳೆ ಎಂದೆನಿಸುತ್ತದೆ. ಮತ್ತೊಂದು ದೃಷ್ಟಿಯಲ್ಲಿ ನೋಡುವುದಾದರೆ 'ಕೊಟ್ಟ ಹೆಣ್ಣು ಕುಲದಿಂದ ಹೊರಗೆ' ಎಂಬ ಗಾದೆಯ ಹಿನ್ನಲೆಯಲ್ಲಿ ತಾಯಿ ಊಟಕ್ಕಿಕ್ಕಲು ಹಿಂದೇಟು ಹಾಕುತ್ತಾಳೆ ಎನಿಸುತ್ತದೆ. ಹೀಗೆ ತವರು ಮನೆಯವರಿಗೆ ಬೇಡವಾದ ಆ ಹುಡುಗಿ

ತಾಯಿ ಬೇಡದಿಂದ ಮಗಳೀಗೆ
ಜೀವಿದ್ದು ಫಲವೇನು?
ಅಂದೇಳಿ ಬಾವಿಲಿ ಬಿದ್ದಿತ್ತು
ಪ್ರಾಣವು ಹೋಗಿತ್ತು

ಜೀವಿಸಿದ್ದು ಫಲವೇನು? ಎಂದು ಭಾವಿಸಿ ಬಾವಿಯಲ್ಲಿ ಬಿದ್ದು ಸಾಯುತ್ತಾಳೆ. ಪುನಃ ತನ್ನ ಬಡಗಂಡನ ಮನೆಗೆ ಹೋಗಲು ಆಕೆಗೆ ಇಷ್ಟವಾಗುವುದಿಲ್ಲ. ಅತ್ತೆ ಮನೆಯ ಊಟವನ್ನೂ, ವಾಸ್ತವ್ಯವನ್ನು ಬಿಟ್ಟು ತವರು ಮನೆಗೆ ಬಂದು ಅಲ್ಲಿಯೂ ತಿರಸ್ಕೃತಳಾದ ಮೇಲ್ವರ್ಗದ ಆ ಹೆಣ್ಣು ಮಗಳು ಬಡವರ ಮನೆಯಲ್ಲಿ ಸೊಸೆಯಾಗಿ ಬದುಕುವುದಕ್ಕಿಂತ ಸಾಯುವುದೇ ಲೇಸೆಂದು ಬಗೆದು ಸಾವಿಗೆ ಶರಣಾಗುವಳು. ಅಂದರೆ ಈ ಕಥನಗೀತೆಯಲ್ಲಿ ಕಾಣಿಸಿಕೊಳ್ಳುವ ಮೇಲ್ವರ್ಗದ ಬ್ರಾಹ್ಮಣ ಕುಟುಂಬದ ಹೆಣ್ಣು ಕೆಳವರ್ಗದ ಬಡ ಗಂಡನ ಮನೆಯಲ್ಲಿ ಬಾಳ್ವೆ ನಡೆಸುವ, ಹೊಂದಾಣಿಕೆಯ ಜೀವನವನ್ನು ನಡೆಸುವ ಯಾವುದೇ ಪ್ರಯತ್ನ ಮಾಡುವುದಿಲ್ಲ. ತನ್ನ ಜೀವನ ಸಾರ್ಥಕ್ಯತೆಯನ್ನು ಪಡೆದುಕೊಳ್ಳಲಿಲ್ಲವೆಂದು ಭಾವಿಸಿ ಸಾವಿಗೆ ಶರಣಾಗುವುದು, ಸಮಾಜದ ಉಳ್ಳವರ ಧೋರಣೆಯನ್ನು ತೋರಿಸುತ್ತದೆ. ಆ ಬ್ರಾಹ್ಮಣ ಕುಟುಂಬದ ಹೆಣ್ಣು, ಬಡ ಗಂಡನ ಬಾಳನ್ನು ಹಸನು ಮಾಡಬಹುದಿತ್ತು. ಆತನ ಜೀವನದಲ್ಲಿಯೂ ಬೆಳಕನ್ನು ತರಬಹುದಾಗಿತ್ತು. ಆದರೆ ಅದ್ಯಾವುದನ್ನೇ ಮಾಡದೆ ತನ್ನ ಪ್ರಾಣವನ್ನೇ ಕಳೆದುಕೊಂಡಿದ್ದು ದುರಂತವೆಂದೇ ಭಾವಿಸಬೇಕಾಗುತ್ತದೆ.

೩.೩.೩ ಬಯಲು ಸೀಮೆಯ ಗೌಡನ ಮಗಳು:

ಬಯಲು ಸೀಮೆಯ ಗೌಡನ ಮಗಳು ಕಥನಗೀತೆಯ ಶೀರ್ಷಿಕೆಯೇ ಹೇಳುವಂತೆ, ಗೌಡನ ಮಗಳ ಹಮ್ಮು ಬಿಮ್ಮು ಪ್ರತಿಷ್ಠೆಯನ್ನು ಕುರಿತ ಕಥೆಯಾಗಿದೆ. ಹಳ್ಳಿಗಳಲ್ಲಿ ಅಂದಿನಿಂದ ಇಂದಿನವರೆಗೂ ವರ್ಗಸಂಘರ್ಷ, ವರ್ಣವೈಷಮ್ಯಗಳು ಹೇಗೆ ತನ್ನ ಸತ್ವವನ್ನು ಕಳೆದುಕೊಳ್ಳದೆ ಉಳಿದುಕೊಂಡು ಬಂದಿದೆ ಎಂಬುದನ್ನು ಈ ಕಥನಕಾವ್ಯದಲ್ಲಿ ಕಾಣಬಹುದು.

ಮೇಲುವರ್ಗದವರು, ಕೆಳವರ್ಗದವರನ್ನು ಶೋಷಣೆ ಮಾಡುತ್ತಾ ಬಂದಿರುವುದನ್ನು ಹಾಗೆಯೆ ಶ್ರೀಮಂತರು ಬಡವರನ್ನು ಶೋಷಣೆ ಮಾಡುತ್ತಾ ಬಂದಿರುವುದು ಹೊಸವಿಷಯವಲ್ಲ. ಬಂಡವಾಳಶಾಹಿಯ ಆರ್ಭಟ ಸರ್ವಕಾಲಕ್ಕೂ ಬೆಳೆಯುತ್ತಾ ಬಂದಿರುವ ವಿಷಯವಾಗಿದೆ. ಅದರಲ್ಲೂ ಹಳ್ಳಿಗಳಲ್ಲಿ ಇದರ ಬಗ್ಗೆ ಹೇಳುವವರು ಇಲ್ಲ, ಕೇಳುವವರು ಇಲ್ಲ.

ಕಥನಗೀತೆಯಲ್ಲಿ ಬರುವ ಬಯಲುಸೀಮೆಯಲ್ಲಿರುವ ಗೌಡನ ಪಾರಂಪಾರಿಕ ವ್ಯಕ್ತಿತ್ವ ಹಾಗೂ ಅವನ ಮಗಳ ಅಹಂಕಾರ ದೌರ್ಜನ್ಯವನ್ನು ಇಲ್ಲಿ ಕಾಣಬಹುದು. ಕಥೆಯಲ್ಲಿ ಗೌಡನಮಗಳು ಕೆಳವರ್ಗದ, ಬಡವನಾದ ಗೊಲ್ಲರ ಹುಡುಗನನ್ನು 'ಇನವಂದ' (**ವಿನೋದ, ಚೆಲ್ಲಾಟ**) ಆಡಲು ಕರೆಯುವಳು. ಆಗ ಗೊಲ್ಲರ ಹುಡುಗ ದೊಡ್ಡ ಗೌಡರ ಮಗಳ ಜೊತೆ 'ಇನವಂದ' ವಾಡುವುದು ತನ್ನಂಥಹವರಿಗೆ ಸರಿಯಲ್ಲ ಎಂದು ತಿಳಿದು ಇನವಂದ ಆಡಲು ಒಪ್ಪುವುದಿಲ್ಲ. ಈ ಕಾರಣದಿಂದಾಗಿ ಗೌಡನಮಗಳು ಸಿಟ್ಟಿಗೆದ್ದು ಅವನ ಮೇಲೆ ಸೇಡು ತೀರಿಸಿಕೊಳ್ಳುವಳು. ಮುಗ್ಧ ಹುಡುಗನ ಸಾವಿಗೆ ಕಾರಣವಾಗುತ್ತಾಳೆ. ಸತ್ತ ಗೊಲ್ಲರ ಹುಡುಗನನ್ನು ಸ್ವಾಮಿನಷ್ಠೆಗೆ ಹೆಸರಾದ ನಾಯಿಗಳೆರಡು ಬದುಕಿಸುವುದನ್ನು ಇಲ್ಲಿ ಕಾಣಬಹುದು.

ಜನಪದಕಥೆ, ಪುರಾಣ, ಇತಿಹಾಸದಲ್ಲಿ ಪಶುಪಕ್ಷಿ, ಪ್ರಾಣಿಗಳು, ಒಂದಲ್ಲ ಒಂದು ರೀತಿಯಲ್ಲಿ ಮಾನವ ಪಾತ್ರವಷ್ಟೇ ಪ್ರಮುಖ ಪಾತ್ರವನ್ನು ವಹಿಸಿ ಕತೆಯ ತಿರುವುಗಳಿಗೆ ದಾರಿ ಮಾಡಿಕೊಡುತ್ತವೆ. ಮಾನವ ಪ್ರಪಂಚದಲ್ಲಿ ಪರಸ್ಪರ ಒಡನಾಟ, ಸಲುಗೆ ಸ್ನೇಹ ತ್ಯಾಗಗಳು ಇದ್ದರೂ ತ್ಯಾಗ ಮಮತೆಯಿಂದ ಕೂಡಿದ ಅನಿರೀಕ್ಷಿತವಾದ ಸ್ಮರಣೀಯ ಫಲಕೊಡಬಹುದಾದ ಸನ್ನಿವೇಶಗಳು ವಿರಳ. ಆದರೆ ಪ್ರಾಣಿ ಪ್ರಪಂಚದಲ್ಲಿ ಭಿನ್ನವೆನ್ನಬಹುದು. 'ಪ್ರಾಣಿಗಳು ಜೀವನದ ಹಂಗು ತೊರೆದು ಕೃತಜ್ಞತೆಯಿಂದ ಹೋರಾಡುವ ಪ್ರಸಂಗಗಳು ಜಾನಪದ ಪುರಾಣ, ಇತಿಹಾಸ ಕತೆಗಳಲ್ಲಿ ಕಂಡುಬರುವುದುಂಟು. ಅದರಲ್ಲೂ ಸ್ವಾಮಿಭಕ್ತಿ ನಿಷ್ಠೆಗೆ ಹೆಸರಾದ ನಾಯಿಗಳು ಸಾಹಸವನ್ನು ಹೆಚ್ಚಾಗಿಯೇ ಕೇಳಿದ್ದೇವೆ. 'ಬಯಲು ಸೀಮೆಯ ಗೌಡನ ಮಗಳು' ಲಾವಣಿಯಲ್ಲಿ ಬರುವ ಜೂಲುನಾಯಿ, ಕಾಳುನಾಯಿಗಳು ಸಾಹಸ ರಮ್ಯೋಜ್ವಲವಾಗಿ ಚಿತ್ರಿತವಾಗಿದೆ'.[೧೬] ಲಾವಣಿ ಪ್ರಾರಂಭ 'ಜಗಂಜ್ಯೋತಿ ಮಾವಿನಮರವೆ ತಂದನಾನ ಬಯಲು ಸೀಮೆಯ ಗೌಡನ ಮಗಳೆ ತಂದೆನಾನಾ' ಎಂಬುವುದರಿಂದಾಗುತ್ತದೆ. ಮಾವಿನೆಲೆ ಮತ್ತು ಹಣ್ಣನ್ನು ಶುಭ

ಸಂದರ್ಭಗಳಲ್ಲಿ ಬಳಸಿಕೊಳ್ಳುವುದು ಮೊದಲಿನಿಂದಲೂ ರೂಢಿಯಲ್ಲಿದೆ. ಪ್ರಕೃತಿಯಲ್ಲಿ ದೈವವನ್ನು ಕಾಣುವ ಜನಪದರು ಮರಗಿಡಬಳ್ಳಿ ಪ್ರಾಣಿ ಪಶು ಪಕ್ಷಿಗಳಲ್ಲಿಯೂ ಸಹ ಕಾಣುತ್ತಾರೆ. ಹಾಗೇ ಫಲಬಿಡುವ ಮಾವಿನಮರವನ್ನು ಮೊದಲು ಸ್ಮರಿಸುತ್ತಾರೆ. ನಂತರ ಬರುವ 'ಬಯಲುಸೀಮೆಯ ಗೌಡನ ಮಗಳು ತಂದೆನಾನಾ' ಇದು ಶೀರ್ಷಿಕೆಯನ್ನು ಹೇಳುವುದರ ಜೊತೆಗೆ ಕಥನಗೀತೆಯಲ್ಲಿ ಬರುವ ಪ್ರಮುಖ ಸ್ತ್ರೀ ಪಾತ್ರವೊಂದನ್ನು ಎತ್ತಿ ಹಿಡಿದಿದೆ. ಕಥೆಯ ಆದಿ ಅಂತ್ಯ ತಿರುವುಗಳಿಗೆ ಗೌಡನ ಮಗಳ ಪ್ರತಿಷ್ಠೆಯೇ ಕಾರಣವಾಗಿದೆ ಎಂದು ತಿಳಿದುಬರುತ್ತದೆ.

ಒಮ್ಮೆ ಗೌಡನ ಮಗಳು, ಗೊಲ್ಲರ ಹುಡುಗನ ಸ್ನೇಹವನ್ನು ಬಯಸಿ 'ಇನವಂದ' ಆಡಲು ಕರೆಯುತ್ತಾಳೆ. ಆ ಗೊಲ್ಲರ ಹುಡುಗ ದಿನನಿತ್ಯದಂತೆ

ಏಳು ಸಾವಿರ ಹುಂಡಿ ದನವ
ಹೊಡಕೊಂಡಿ ಗೊಲ್ಲರ್ಹುಡುಗ
ಸುರಹೊನ್ನೆ ಮರತಕ್ಕೆ ಬಂದು
ಕರಿಯ ಕಂಬಳಿಯ ಬೀಸಿ ಗದ್ದಿಗೆ ಹೂಡಿ
ಕಾಳುವಾಯಿ–ಜೂಲುನಾಯಿ
ಏಳುಸಾವಿರ ಹುಂಡಿದನವ
ಮೆಯ್ಯಾರೆ ಹೊಡೆದು ಬುಟ್ಟ
ಚಿನ್ನದ ಕೊರಳ ಬೆಳ್ಳಿಕೊರಳ
ಲಾಲೇಸಿ ನುಡಿತಾನೆ

ಏಳು ಸಾವಿರ ಹುಂಡಿದನವನ್ನು ಮೆಯ್ಯಲು ಬಿಟ್ಟು ತಂಪಾದ ಮರದ ನೆರಳಿನಲ್ಲಿ ಕೊಳಲನ್ನು ಊದುತ್ತಾನೆ. ಅವನ ಕೊಳಲಿನ ಗಾನ ಇಡೀ ಪ್ರಕೃತಿಯಲ್ಲಿ ತುಂಬಿದೆ. ಆ ಮುಗ್ಧತೆಯ ಆನಂದದಲ್ಲಿ ಮೈಮರೆತಿರುವ ಗೊಲ್ಲರ ಹುಡುಗನನ್ನು ನೀರಿಗೆಂದು ಬಂದ ಬಯಲು ಸೀಮೆಯ ಗೌಡನ ಮಗಳು ನೋಡುತ್ತಾಳೆ. ಅವನ ಕೊಳಲಿನ ಗಾನಕ್ಕೆ ಆನಂದ ಪಟ್ಟುಕೊಂಡು ಅವನ ಹತ್ತಿರಕ್ಕೆ ಹೋಗಿ ಈ ರೀತಿ ವಿಚಾರಿಸುತ್ತಾಳೆ.

'ಯಾವ ಸೀಮೆ ಚೆಲುವಾನೊ, ಯಾವಗೌಡ ದೊರೆ ಮಗನೊ, ನಾವು ಇನವಂದ ಆಡೋಣಾ ಬಾರೋ' ಎನ್ನುತ್ತಾಳೆ. ಅವಳ ಆ ಮಾತನ್ನು ಕೇಳಿದ ಗೊಲ್ಲರ ಹುಡುಗನಿಗೆ ಗಾಬರಿಯಾಗುತ್ತದೆ. ಆದರೂ ಬಹಳ ನಮ್ರತೆಯಿಂದ ಈ ರೀತಿ ಕೇಳಿಕೊಳ್ಳುತ್ತಾನೆ.

ಕೇಳವ್ವ ನನ ತಾಯಿ
ನಾ ನೋಡಿದರೆ ಗೊಲ್ಲರ ಹುಡುಗ
ನೀ ನೋಡಿದರೆ ಗೌಡನ ಮಗಳು
ನಿನ್ನೊಂದಿಗೆ ಇನವಂದ
ನಾನಾಡೋದಿಲ್ಲ ತಾಯಿ

ಎಂದು ಗೌರವದಿಂದ ಕೇಳಿಕೊಳ್ಳುತ್ತಾನೆ. ತನ್ನ ಮತ್ತು ಅವಳ ಮಧ್ಯೆ ಇರುವ ಅಂತರವನ್ನು ತಿಳಿಸುತ್ತಾನೆ. ಆದರೂ ಗೌಡನ ಮಗಳು ಈ ರೀತಿ ಹೇಳುತ್ತಾಳೆ. 'ಅಂಜಬ್ಯಾಡ ಅಳುಕಬ್ಯಾಡ ನಾ ಇನವಂದ ಆಡೂಣಾ ಬಾ' ಎಂದು ಒತ್ತಾಯಿಸುತ್ತಾಳೆ. ಗೌಡನ ಮಗಳ ಜೊತೆ ಇನವಂದ ಆಡಲು ಗೊಲ್ಲರ ಹುಡುಗ ಒಪ್ಪುವುದೇ ಇಲ್ಲ. ಇದರಿಂದ ಕೋಪಗೊಂಡ ಗೌಡನಮಗಳು ಸಿಟ್ಟಿನಿಂದ ಈ ರೀತಿ ಹೇಳುತ್ತಾಳೆ.

ಇನವಂದ ಆಡದೆ ಹೋದ್ರೆ
ನಿನ್ನ ಶಿರವ ಕಡಿಸೂವೆ
ನಿನ್ನ ಶಿರವಾನೆ ಮೆಟ್ಟಕೊಂಡು
ನಾ ತಣ್ಣೀರ ಮೀಯುತೀನಿ

ಎಂದು ಮುಗ್ಧ ಗೊಲ್ಲರ ಹುಡುಗನ ಪ್ರಾಣಕ್ಕೆ ಸಂಚಕಾರವನ್ನು ತರುತ್ತಾಳೆ.ಅವನ ಮೇಲಿನ ಕೋಪಕ್ಕೆ ತನ್ನ ತಂದೆಯಿಂದ ಶಿಕ್ಷೆ ಕೊಡಿಸುತ್ತೇನೆ ಎಂದು ಪಣ ತೊಟ್ಟಳು. ಆ ಕ್ಷಣವೇ ಅವಳು

ತೊಟ್ಟಿದ ಬಳೆಗಳ ಲಗ್ಗಾನೆ ನರಕಾಳೆ
ಇಕ್ಕಿದ್ದ ಸೀರೆ ರವಿಕೆ ಪರಪರನೆ ಹರುದಾಳೆ
ಬಳೆಯಗಾಜ ತಕ್ಕೊಂಡವಳು ಮೈಕೈಯನಜುಕೊಂಡು
ಊರಿಗೆ ಹೋಗಿ ಮಂಚಾಕೆ ಮೊಕಾಡೆಯಾಗಿ
ಮಲಗಾಳೆ ಗೌಡನ ಮಗಳು

ಎಷ್ಟೆಲ್ಲಾ ರಂಪರಾದ್ಧಾಂತ ಮಾಡಿಕೊಂಡಿರುತ್ತಾಳೆ ಎಂದರೆ, ಅವಳನ್ನು ಆ ಸ್ಥಿತಿಯಲ್ಲಿ ನೋಡಿದ ಯಾರೇ ಆಗಲಿ ಗೊಲ್ಲರ ಹುಡುಗನ ಮೇಲೆ ಕೋಪ ಅನುಮಾನ ಪಟ್ಟುಕೊಳ್ಳುವುದಂತೂ ಸತ್ಯ. ಅದಕ್ಕೆ ತಕ್ಕಂತೆ ಗೌಡನ ಮಗಳು ಹೀನವಾದ ಸ್ಥಿತಿಯಲ್ಲಿ ತನ್ನ ವೇಷಭೂಷಣಗಳನ್ನು ಬದಲಾಯಿಸಿಕೊಂಡು ಮನೆಗೆ ಬಂದು ಮೊಕಾಡೆಯಾಗಿ ಮಲಗುತ್ತಾಳೆ.

ಮಗಳನ್ನು ತಂದೆ ಬಂದು ವಿಚಾರಿಸಿದಾಗ ಎಲ್ಲದಕ್ಕೂ ಗೊಲ್ಲರ ಹುಡುಗನ ಮೇಲೆ ಚಾಡಿ ಹೇಳುತ್ತಾಳೆ. 'ನನ್ನ ಮೈಗುದ್ದಿಗೆ ಸುವ್ವಾಲಾಲೆ ಬಂದಾನೆ ಗೊಲ್ಲರ ಹುಡುಗ ಬ್ಯಾಡ ಅಂದು ನಾನು ಸಾರಿ ಹೇಳುತ ಬಂದೆ ಎಂದು, ಗೊಲ್ಲರ ಹುಡುಗನು ತನ್ನನ್ನು ಹಿಡಿದುಕೊಳ್ಳಲು ಬಂದ' ಎಂದು ಸುಳ್ಳು ಹೇಳಿದಳು. ಶ್ರೀಮಂತಿಕೆಯ ಅಮಲಿನಲ್ಲಿ ಬೆಳೆದು ಸೊಕ್ಕಿದ ಮಗಳ ಮಾತನ್ನು ಕೇಳಿದ ಗೌಡನೇ ಹಿಂದೆ ಮುಂದೆ ಆಲೋಚಿಸದೆ ಅವಳ ಮಾತನ್ನು ನಿಜವೆಂದು ನಂಬುತ್ತಾರೆ. ಗೊಲ್ಲರ ಹುಡುಗನ ಮೇಲಿನ ಸೇಡನ್ನು ತೀರಿಸಿಕೊಳ್ಳಲು ತನ್ನ ತಂದೆಯ ಹತ್ತಿರ ಈ ರೀತಿ ಹೇಳುತ್ತಾಳೆ. 'ಗೊಲ್ಲರ ಹುಡುಗನ ಶಿರವ ಮೆಟ್ಟಿಕೊಂಡು ನಾ ತಣ್ಣೀರು ಮೀಯಬೇಕು' ಎಂದು ತಂದೆಗೆ ತಿಳಿಸುತ್ತಾಳೆ.

ಗೌಡ ತನ್ನ ಮಗಳಿಗಾದ ಅವಮಾನವನ್ನು ಸಹಿಸಿಕೊಳ್ಳದೆ, ಹಿಂದೆ ಮುಂದೆ ಆಲೋಚಿಸದೆ ದಂಡನ್ನು ಕಟ್ಟಿಕೊಂಡು ಗೊಲ್ಲರ ಹುಡುಗನ ಹತ್ತಿರ ಹೋದ. ಸುರಹೊನ್ನೆ ಮರದಡಿಯಲ್ಲಿ ಕುಳಿತಿರುವ ಗೊಲ್ಲರ ಹುಡುಗನ ಶಿರವನ್ನು ಕಡಿದ. ಮಗಳಿಗೆ ಶಿರವನ್ನು ತಂದುಕೊಟ್ಟ. ಮಗಳು ಆನಂದದಿಂದ 'ಗೊಲ್ಲರ ಹುಡುಗನ ಶಿರವ ಮೆಟ್ಟಿಕೊಂಡು ತಣ್ಣೀರ ಮೀಯುವಳು. ಅಲ್ಲಿಗೆ ಅವಳು ತೊಟ್ಟ ಹಟ ನೆರವೇರಿತು. ಅವಳ ಮನಸ್ಸು ಆನಂದದಿಂದ ನಲಿಯಿತು. ಶ್ರೀಮಂತರು ಹೇಗೆ ಅಮಾಯಕರ ಜೀವಕ್ಕೆ ಬೆಲೆ ಕೊಡದೆ ಅವರನ್ನು ತಮ್ಮ ಆಟದ ವಸ್ತುವನ್ನಾಗಿ ಮಾಡಿ ಕೊಳ್ಳುತ್ತಾರೆ ಎಂಬುದಕ್ಕೆ ಗೌಡ ಹಾಗೂ ಅವನ ಮಗಳು ಉತ್ತಮ ಉದಾಹರಣೆ. ಆದರೆ ಮನುಷ್ಯರಂತೆ ಪ್ರಾಣಿಗಳು ಇರುವುದಿಲ್ಲ. ಅವುಗಳಿಗೆ ಜೀವದ ಬೆಲೆ, ಸಂಬಂಧದ ಬೆಲೆ, ಒಡೆಯನ ಬೆಲೆ, ಮಾನವೀಯ ಮೌಲ್ಯಗಳ ಸಂಬಂಧ ಬೆಲೆಯ ಅರಿವು ಇರುತ್ತದೆ. ಇದಕ್ಕೆ ಸಾಕ್ಷಿಯಾಗಿ ಗೊಲ್ಲರ ಹುಡುಗ ಸಾಕಿದ ಜೂಲುನಾಯಿ ಕಾಳುನಾಯಿಗಳು ಬರುತ್ತವೆ.

ಗೊಲ್ಲರ ಹುಡುಗನ ದನಗಳ ರಕ್ಷಣೆಯನ್ನು ಹೊತ್ತಿದ್ದ ಕಾಳುನಾಯಿ, ಜೂಲುನಾಯಿಗಳಿಗೆ ತನ್ನ ಒಡೆಯನು ಸತ್ತ ಸುದ್ದಿ ತಿಳಿಯುತ್ತದೆ. ಅವು ತಮ್ಮ ಒಡೆಯನ ದುರಂತ ಮರಣವನ್ನು ಕಂಡು ಆಕಾಶಕ್ಕೆ ಹಾರಿ ಭೂಮಿಗೆ ಬೀಳುತ್ತವೆ.

೩.೩.೪ ಕೂಪನ:

ವರುಷದ ಹೆಚ್ಚಿನ ದಿನಗಳಲ್ಲಿ ಅರ್ಧದಷ್ಟು ಗ್ರಾಮೀಣ ಜನರು ಒಂದು ದಿನದಲ್ಲಿ ಒಂದೇ ಹೊತ್ತಿನ ಊಟವನ್ನು ಮಾಡುತ್ತಿದ್ದಾರೆ. ಇದಕ್ಕೆ ಕಾರಣ ಬಡತನ. ಬಡತನದ ಬೇಗೆಯಲ್ಲಿ ಬೇಯುತ್ತಿರುವ ಕುಟುಂಬಗಳಿಗೆ ಆಶಾಕಿರಣದಂತಿರುವ ನ್ಯಾಯಬೆಲೆ ಅಂಗಡಿಗಳಲ್ಲಿಯೂ ಅವರ ಪಾಲಿನ ಸಕ್ಕರೆ, ಅಕ್ಕಿ ದೊರೆಯುತ್ತಿಲ್ಲ. ಕೂಪನ್ (ಪಡಿತರ ಚೀಟಿ) ವಿತರಣೆ ಸರ್ಕಾರದ ಒಂದು ಕಾರ್ಯಕ್ರಮ. ಈ ಕಾರ್ಯಕ್ರಮದ ಪ್ರಕಾರ ಆರ್ಥಿಕವಾಗಿ ಹಿಂದುಳಿದವರಿಗೆ ಕಡಿಮೆ ಬೆಲೆಯಲ್ಲಿ ಅಕ್ಕಿ, ಗೋಧಿ, ಸಕ್ಕರೆ, ಸೀಮೆಎಣ್ಣೆ ಮುಂತಾದ ಜೀವನೋಪಾಯಕ್ಕೆ ಅಗತ್ಯವಾದ ಪದಾರ್ಥಗಳನ್ನು ವಿತರಿಸುವುದು. ಈ ಕಾರ್ಯಕ್ರಮದ ಉದ್ದೇಶ ಉತ್ತಮವಾಗಿದ್ದರೂ, ಉದ್ದೇಶದಂತೆ ಬಡವರಿಗೆ ತಲುಪಬೇಕಾಗಿರುವ ಪದಾರ್ಥಗಳೆಲ್ಲ ದಲ್ಲಾಳಿಗಳ, ಪಟ್ಟಭದ್ರಹಿತಾಸಕ್ತಿಗಳ ಪಾಲಾಗುತ್ತಿವೆ. ಈ ವಿಚಾರವನ್ನು ಜನಪದರು ಲಾವಣಿಯಲ್ಲಿ ಬಹಳ ಚೆನ್ನಾಗಿ ಕಟ್ಟಿಕೊಡುತ್ತಾರೆ. ಕೂಪನ ಲಾವಣಿಯ ಪ್ರಾರಂಭವು

ಕೂಪನ ತಗೊಂಡು ಬಾರವ್ವ ತಂಗೀ ಹೋಗೂನು ಕಂಟ್ರೋಲಕ
ಅಕ್ಕಿ ಗೋದಿ ಸಕ್ಕರಿ ಕೊಡತಾರ । ಇವತ್ತ ಮದ್ಯಾಹ್ನಕ

ಲಾವಣಿಯ ಪ್ರಾರಂಭದಲ್ಲಿ ತಂಗೀಯ ಒಡಗೂಡಿ ಬಹಳ ಖುಷಿಯಿಂದ ನ್ಯಾಯಬೆಲೆ ಅಂಗಡಿಗೆ ಹೊರಡಲು ತಯಾರಾಗುವ ಮಹಿಳೆಯನ್ನು ಕಾಣಬಹುದು. ಹಸಿವೆಯಿಂದ ನರಳುವ ಬಡವರಿಗೆ

ಕಡಿಮೆ ಬೆಲೆಯಲ್ಲಿ ಪದಾರ್ಥಗಳನ್ನು ಕೊಡಮಾಡುವ ನ್ಯಾಯಬೆಲೆ ಅಂಗಡಿಗೆ ಹೋಗಲು ಬಡವರಿಗೆ ಆನಂದವಾಗುತ್ತದೆ. ಅದೇ ರೀತಿ ಇಲ್ಲೂ ಕೂಡ ಆನಂದದಿಂದ ನ್ಯಾಯಬೆಲೆ ಅಂಗಡಿಯ ಕಡೆಗೆ ಮಹಿಳೆ ಹೊರಡುವುದನ್ನು ಕಾಣಬಹುದು. ಆದರೆ ಹೊರಡುವಾಗ ಅನುಭವಿಸಿದ ಖುಷಿ ಕೆಲವೇ ಹೊತ್ತಿನಲ್ಲಿ ಮಾಯವಾಗುತ್ತದೆ. ಆಡುವ ಹುಡುಗರು ಕೂಪಾನನ್ನು ಕಳೆದಿರುತ್ತಾರೆ. ಎಲ್ಲ ದಾಖಲೆಗಳು ಸರಿ ಇದ್ದರೂ ಕೊಡಬೇಕಾದ ಪದಾರ್ಥಗಳನ್ನು ಸತಾಯಿಸಿ ಕೊಡುವ ನ್ಯಾಯಬೆಲೆ ಅಂಗಡಿಯ ಮಾಲೀಕ ಕೂಪಾನ್ ಇಲ್ಲದೆ ಕೊಡುವುದು ಕನಸಿನ ಮಾತೇ ಆಗಿರುತ್ತದೆ. ಆದ್ದರಿಂದ ಹೊಸ ಕೂಪನ್ ತರಿಸಿಕೊಳ್ಳಲು ಆ ಮಹಿಳೆ ಇಚ್ಚಿಸುತ್ತಾಳೆ.

ಕಂಟ್ರೋಲ್ದಾಗ ಪಾಳೆ ಹತ್ತ್ಯಾದ ನಾವೇನ ಮಾಡಬೇಕ
ಚಾ ಸೋಸಾಕ ಸಕ್ಕರಿ ಇಲ್ಲ ಇವತ್ತ ಸದ್ಯೇಕ

'ಚಹಾ' ಮಾಡಲು ಸಕ್ಕರೆ ಇಲ್ಲದಿರುವುದು ಅವರ ಬಡತನ ಮತ್ತು ಪಡಿತರ ಚೀಟಿಯನ್ನೇ ಅವಲಂಬಿಸಿರುವುದರ ಸಂಕೇತವಾಗಿದೆ.

ಚಲೋಚಲೋ ಅರಿಬಿ ತಗದ ಇಡತಾರ । ಮಕ್ಕಳಿಗ್ಹೊಲಸಾಕ
ಮಂಜರಪಟ ಬಡವರಿಗಿ ಕೊಡತಾರ ಅವನೇನ ಸುಡಬೇಕ

ಉತ್ತಮವಾದ ಬಟ್ಟೆಗಳು ವಿತರಣಾ ಕೇಂದ್ರಕ್ಕೆ ಬಂದಿದ್ದರೂ ಅದರ ವಿತರಣೆ ಮಾಡದೆ ಉಳ್ಳವರಿಗೆ, ವಿತರಣಾ ಕೇಂದ್ರದ ಮಾಲೀಕರು ಮಾರಿಕೊಳ್ಳುತ್ತಾರೆ. ಬಡವರಿಗೆ ಹರಿದುಹೋಗಿರುವ ಬಟ್ಟೆಗಳನ್ನು ಕೊಡುತ್ತಾರೆ. ಅವುಗಳನ್ನು ಸುಟ್ಟುಹಾಕಬೇಕೆಂದು ಬಡವರು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸುತ್ತಾರೆ. ಮೇಲ್ವರ್ಗದ ಪರವಾದ ಸಮಾಜದ ಬಗ್ಗೆ ಅಸಹನೆಯನ್ನು ವ್ಯಕ್ತಪಡಿಸುತ್ತಾ

ನಾಯಿ ಹಲ್ಲಿನಂತ ಗೋದಿ ಕೊಡತಾರು ಅವನೇನ ಸುಡಬೇಕ
ಕೆಂಪಜ್ವಾಳಾ ತಿಂದ ನಾವು ಕೆಲಸಕ ಹೋಗಬೇಕ

ನ್ಯಾಯಬೆಲೆ ಅಂಗಡಿಗಳ ವಿತರಣಾ ಕೇಂದ್ರಗಳಲ್ಲಿ ಕೊಡುವಂತಹ ಗೋಧಿ ಮತ್ತು ಜೋಳ ತಿನ್ನುವುದಕ್ಕೆ ಯೋಗ್ಯವಾಗಿರುವುದಿಲ್ಲ. ಅಂತಹ ಪದಾರ್ಥಗಳನ್ನು ವಿತರಿಸಲಾಗುತ್ತದೆ. ಎಂದು ತಮ್ಮ ಆಕ್ರೋಶವನ್ನು ಬಡವರು ವ್ಯಕ್ತಪಡಿಸುತ್ತಾರೆ.

ಈಗಿನ ಪಂಚರು ಲಂಚಾ ತಿಂತಾರ । ಇಲ್ಲಿಂದ ದಿಲ್ಲಿತನಕ
ಪಂಚರ ಪರಿಸ್ಥಿತಿ ಮುಂದ ಹೇಳ್ತೇನ ಇಲೆಕ್ಷನ ಕಾಲಕ

ಅಧಿಕಾರದ ಗದ್ದುಗೆಯನ್ನೇರುವ ಪಂಚಾಯಿತಿಯ ಸದಸ್ಯರು ಭ್ರಷ್ಟರು, ಲಂಚಕೋರರು ಇವರಿಗೆ ಬಡವರ ಬಗ್ಗೆ ಕಾಳಜಿಯಿಲ್ಲವೆಂದು ಹೇಳುವುದರ ಮೂಲಕ ವ್ಯವಸ್ಥೆಯಲ್ಲಿ ಅತ್ಯುನ್ನತ ಹುದ್ದೆಗಳನ್ನು ಅಲಂಕರಿಸುವಂತಹವರು ಎಂತವರಾಗಿರುತ್ತಾರೆಂದು ಸಮಾಜದ ಮುಂದಿಡಲು ಪ್ರಯತ್ನಿಸುತ್ತಾರೆ. ಲಂಚಗುಳಿತನವೆನ್ನುವುದು ಕೇವಲ ಪಂಚರಿಗೆ ಮಾತ್ರ ಸೀಮಿತವಾಗದೆ ದಿಲ್ಲಿಯವರೆಗೆ ಹಬ್ಬಿದೆ. ಭ್ರಷ್ಟವ್ಯವಸ್ಥೆ, ಭ್ರಷ್ಟ ಅಧಿಕಾರಿಗಳು, ಭ್ರಷ್ಟರಾಜಕಾರಣಿಗಳು ಸಮಾಜದಲ್ಲಿ ತುಂಬಿಕೊಂಡಿದ್ದಾರೆಂದು ಹೇಳುವುದರ

ಮೂಲಕ ಅವರ ವಿರುದ್ಧ ಸಂಘರ್ಷಕ್ಕಿಳಿಯುತ್ತಾರೆ. ತಾರತಮ್ಯ, ಶೋಷಣೆ, ಅಧಿಕಾರದ ದುರ್ಬಳಕೆ, ಅಕ್ರಮ, ಅನಾಚಾರಗಳು ಚುನಾವಣೆಯ ಸಮಯದಲ್ಲಿ ಅತಿ ಹೆಚ್ಚು ಸಂಭವಿಸುತ್ತದೆ ಎಂದು ಹೇಳುವುದರ ಮೂಲಕ ಬಡವರು, ಶ್ರೀಮಂತರ ವಿರುದ್ಧ ಸಂಘರ್ಷಕ್ಕಿಳಿಯುತ್ತಾರೆ.

೩.೩.೫ ಕಬೀರದಾಸ ಲಾವಣಿ:

ಉತ್ತರದ ಭಕ್ತಿಪಂಥದಲ್ಲಿ ಸಂತ ಕಬೀರನ ಹೆಸರು ಪ್ರಸಿದ್ಧವಾದುದು. ಅವನನ್ನು ಕುರಿತಂತೆ ಕರ್ನಾಟಕದಲ್ಲೂ ಅನೇಕ ಲಾವಣಿಗಳು ರಚಿತವಾಗಿವೆ. ಕಬೀರನ ಭಕ್ತಿಯ ಪರೀಕ್ಷೆ ಮತ್ತು ಆತ ಉತ್ತೀರ್ಣನಾದುದ್ದನ್ನು ಈ ಲಾವಣಿ ವರ್ಣಿಸುತ್ತದೆ. 'ಕಬೀರನ ಕಮಾಲ'(ನಿಂಗಣ್ಣ ಸಣ್ಣಕ್ಕಿ ಸಂ.ಬಾಳಗೋಪಾಳನ ಲಾವಣಿಗಳು,೧೯೭೪), 'ಕಬೀರದಾಸ ಲಾವಣಿ' (ನಿಂಗಣ್ಣ ಸಣ್ಣಕ್ಕಿ, ಸಂ. ಸಾತುಕ್ಯಾಮಣ್ಣನ ಲಾವಣಿಗಳು, ೧೯೮೧), 'ಕಬೀರನ ಕಥೆ' (ರಾಮಸ್ವಾಮಿ ಎಸ್. ಮತ್ತು ನಟರಾಜ್ ಎಮ್.ಬಿ, ಸಂ. 'ಹಾಡಾಕೆ ಬೈಗುಂಟೆ ಬೆಳಗುಂಟೆ', ೧೯೭೭) ಇತ್ಯಾದಿ ಶೀರ್ಷಿಕೆಗಳಲ್ಲಿ ಈ ಕಥೆ ದೊರೆಯುತ್ತದೆ. ಬಾಳಗೋಪಾಲ, ಸಾತುಕ್ಯಾಮಣ್ಣನಂಥ ಉತ್ತರ ಕರ್ನಾಟಕದ ಆಧುನಿಕ ಜನಪದಕವಿಗಳು ಕಲ್ಗಿ ತುರಾ ಸಂಪ್ರದಾಯದಲ್ಲಿ ಕಬೀರನ ಕಥೆಯನ್ನು ಹಾಡಿದ್ದಾರೆ.

ಕಬೀರ ವಿಷ್ಣುಭಕ್ತ. ಸಾಧುಸಂತರು ಯಾರು ಯಾವ ಹೊತ್ತಿಗೆ ಬಂದರೂ ಅವರ ಸೇವೆ ಮಾಡಲು ಪ್ರಸಿದ್ಧ. ಹೀಗಾಗಿ ದೂರದ ಊರುಗಳಿಂದ ಅತಿಥಿಗಳು ಬಂದು ಆತಿಥ್ಯ ಪಡೆದು ಹೋಗುತ್ತಿದ್ದರು. ಕಡುಬಡತನದಲ್ಲಿದ್ದರೂ ಆತ ತನ್ನ ಈ ನಿಷ್ಠೆಯನ್ನು ಕೈಬಿಟ್ಟಿರಲಿಲ್ಲ. ಹೀಗಿರುವಾಗ ಒಂದುದಿನ ನಡುರಾತ್ರಿಯಲ್ಲಿ ಸಾಧುಗಳ ತಂಡವೊಂದು ಊರಿಗೆ ಬಂದು ಕಬೀರನನ್ನು ಎಚ್ಚರಿಸಿತು.

ಹಸದ ಸಾಯತೇವ ನೂರಜನಾ
ಎಲ್ಲಾರಿಗೂ ಅನ್ನಾ ಕಾಣಿಸೋ ಪುಣ್ಯಶೀಲಾ
ಅನ್ನ ಇಲ್ದಿದ್ರ ಒಬ್ಬರೂ ಉಳಿದುಲ್ಲಾ
ಹಿಂಗ ಎಬ್ಬಿಸಿದಾರಾ ದಾಂದಲಾ

ಕಬೀರ ಸಮಾಧಾನ ಮಾಡಿದ. ಇನ್ನೊಂದು ತಾಸು ಕಾಯಿರಿ, ನೀವು ಸ್ನಾನಮಾಡಿ ಬರೋದರೊಳಗೆ ಊಟ ತಯಾರೆಂದು ಹೇಳಿದ. ಮನೆಯಲ್ಲಿ ಸೆರೆಕಾಳು ಇರಲಿಲ್ಲ. ಅಡಿಗೆಗೆ ಸಾಮಾನಾದ್ರು ಎಲ್ಲಿದೆ ಎಂದು ಕಬೀರನ ಹೆಂಡತಿ ಕೇಳುತ್ತಾಳೆ.

ಕಬೀರ ಅಂತಾನ ಕೇಳ ಪತಿವ್ರತಿ
ಸತ್ಯದ ರೀತಿ ಬಹಳ ಕಠಿಣಾ
ನಮ್ಮನ್ನು ಕಾಯಾವ ಸ್ವಾಮಿ ಜನಾರ್ದನಾ
ಮಾನ ಅಪಮಾನ ಅವನ ಸ್ವಾಧೀನಾ
ಪ್ರಾಣ ಹ್ವಾದ್ರು ಚಿಂತಿ ಇಲ್ಲ
ತಿರುಗಿಸಬಾರ್ದ ಕೊಟ್ಟವಚನಾ

ಹೀಗೆ ಹೇಳಿದ ಕಬೀರ ತನ್ನ ಹೆಂಡತಿಯನ್ನು ಅಂಗಡಿಯಲ್ಲಿ ಅಡವಿಡುವ ಮಾತನ್ನಾಡುತ್ತಾನೆ. ಆಕೆ 'ಪ್ರಾಣಪತಿವಚನ ಮಡೆಸೇನ' ಅಂದಳು. ದೃಢನಿಶ್ಚಯದೊಂದಿಗೆ ಅವರು ಅಂಗಡಿಕಾರನಲ್ಲಿಗೆ ಹೋದರು ಅವನನ್ನು ನಡುರಾತ್ರಿಯಲ್ಲಿ ಎಬ್ಬಿಸಿ

ನನ್ನ ಹೆಣತೀನ ಒತ್ತಿ ಇಟಕೊರ‍್ರಿ
ಹೆಸರ ಬರಕೊರ‍್ರಿ ಸೀದಾಕೊಡ್ರಿ ಮೊದಲಾ
ಹಿಟ್ಟು ಅಕ್ಕಿ, ಉಪ್ಪಬ್ಯಾಳಿ ಬೆಲ್ಲಾ
ನೂರಮಂದಿ ಭರತಿ ಕೊಡ್ರಿ ಎಲ್ಲಾ

ಬಡವರು ತಮ್ಮ ಮಾನಮರ್ಯಾದೆಯನ್ನು ಕಾಪಾಡಿಕೊಳ್ಳಲು ತಮ್ಮನ್ನು ತಾವು ಅಡವಿಟ್ಟುಕೊಳ್ಳಲೂ ಹಿಂಜರಿಯುತ್ತಿರಲಿಲ್ಲವೆನ್ನುವುದಕ್ಕೆ ಇದು ಉತ್ತಮ ಸಾಕ್ಷಿ. ಒಬ್ಬ ಅಂಗಡಿಯ ಮಾಲೀಕ ಮನಸ್ಸು ಮಾಡಿದಿದ್ದರೆ ಸಾಲದ ರೂಪದಲ್ಲಿ ಕಬೀರನಿಗೆ ಅಗತ್ಯವಾಗಿದ್ದ ಸಾಮಾನುಗಳನ್ನು ಕೊಡಬಹುದಾಗಿತ್ತು. ಆದರೆ ಬಡವ–ಶ್ರೀಮಂತರ ನಡುವೆ ಕಂದಕವಿದ್ದದ್ದರಿಂದ, ಶೋಷಣೆಗೆ ಒಳಪಡಿಸುವ ಒಳಮನಸ್ಸು ಶ್ರೀಮಂತನಿಗೆ ಇದ್ದದ್ದರಿಂದ ಅಂಗಡಿಕಾರ ಎಂಟುದಿನದ ಒಳಗೆ ಹೆಂಡತಿಯನ್ನು ಬಿಡಿಸಿಕೊಂಡು ಹೋಗಬೇಕೆನ್ನುವ ವಾಯಿದೆಯ ಮೇರೆಗೆ ಸಾಮಾನುಗಳನ್ನು ಕೊಟ್ಟು ಕಳುಹಿಸುತ್ತಾನೆ. ಎಂಟುದಿನಗಳ ಕಾಲಾವಕಾಶ ಕೊಡುವುದರ ಹಿಂದೆಯೂ ಒಂದು ಹುನ್ನಾರವಿರುತ್ತದೆ.

ಅಂಗಡಿಕಾರನಿಗೆ ಒಬ್ಬ ಬಡವ ಮುಂದಿನ ಎಂಟು ದಿನಗಳ ಒಳಗಾಗಿ ತೆಗೆದುಕೊಂಡು ಹೋದ ಸಾಮಾನುಗಳಿಗೆ ಪ್ರತ್ಯುತ್ತರವಾಗಿ ಹಣವನ್ನು ಮರುಳಿಸಲು ಸಾಧ್ಯವಿಲ್ಲವೆಂಬ ಸತ್ಯದ ಅರಿವಿರುತ್ತದೆ. ಆತನ ಉದ್ದೇಶ ಹಣ ಪಾವತಿ ಮಾಡದೇ ಹೋದರೆ ಬಡ ಕಬೀರನ ಹೆಂಡತಿಯನ್ನು ಲೈಂಗಿಕವಾಗಿ ಬಳಸಿಕೊಳ್ಳಬಹುದೆಂಬುದಾಗಿರುತ್ತದೆ. ಹೀಗಾಗಿಯೇ ಸಾಹುಕಾರನಗೆ ಕಬೀರನ ಹೆಂಡತಿಯ ಮೇಲೆ ಮನಸ್ಸಾಗಿ ಆಕೆಯ ಸಂಗ ಮಾಡಲು ಹಾಸಿಗೆಯ ಬಳಿಗೆ ಬಂದು ನಿಂತ. ಅಪಾಯ ಕಂಡ ಶ್ರೀಹರಿ ಮಾಯಾವೇಷದಿಂದ ಕಬೀರನ ಹೆಂಡತಿಯ ವೇಷಧರಿಸಿ ಮುಸುಗು ಹಾಕಿ ಮಲಗಿದ. ಕಾಮಿಸುವ ಪ್ರಬಲ ಇಚ್ಚೆಯಿಂದ ಮಂಚಕ್ಕೆ ಅವಳನ್ನು ಎತ್ತಿಕೊಂಡು ಹೋದ ಸಾಹುಕಾರನಿಗೆ ಕಂಡದ್ದು ಆಶ್ಚರ್ಯ ಹುಟ್ಟಿಸಿತು. ಕಬೀರನ ಹೆಂಡತಿಯ ಬದಲಾಗಿ ತಂಗಿ ಮಾಯಾದೇವಿ ಅಲ್ಲಿದ್ದಳು. ಅವಮಾನವಾಯಿತು. ಪರಿಣಾಮ ಏನೇ ಆಗಿರಬಹುದು, ಆದರೆ ಸಾಹುಕಾರನ ಇಂಗಿತ ಬಡವರ ಶೋಷಣೆ ಮಾಡುವುದು. ಈ ಸಂದರ್ಭ ಬಡಹೆಣ್ಣು ಪ್ರತಿಭಟಿಸುವ ಸ್ಥಿತಿಯಲ್ಲಿರದೆ ಅಸಹಾಯಕಳಾಗಿರುತ್ತಾಳೆ. ಅಸಾಧಾರಣವಾದ ಬದಲಾವಣೆ ಆಗದಿದ್ದಿದ್ದರೆ ಅನಿವಾರ್ಯವಾಗಿ ಸಾಹುಕಾರನ ಹಾಸಿಗೆಯಲ್ಲಿ ಮಲಗಿ ಆತನ ಕಾಮತೃಷೆಗೆ ಬಲಿಯಾಗಬೇಕಾಗಿತ್ತು. ಆಕೆ ಎಷ್ಟೇ ಪ್ರತಿಭಟಿಸಿದ್ದಿದ್ದರೂ ಸಾಹುಕಾರನಂದ ತಪ್ಪಿಸಿಕೊಳ್ಳುವುದು ಕಷ್ಟಸಾಧ್ಯವಾಗಿತ್ತು. ಹೀಗೆ ಸಾಹುಕಾರರಿಗೆ ಬಡವರು 'ಬಲಿಪಶುಗಳಾಗುತ್ತಿದ್ದುದ್ದಕ್ಕೆ ಅನೇಕ ಉದಾಹರಣೆಗಳನ್ನು ಕೊಡಬಹುದು. ಅವಮಾನಿತನಾದ ಸಾಹುಕಾರ ಯಾರಿಗೂ ವಿಷಯ

ತಿಳಿಸಬಾರದೆಂದು ಬೇಡಿ ಅವಳ ಕ್ಷಮೆ ಕೋರಿದ. ಇತ್ತ ಶ್ರೀಹರಿ ರಾತ್ರೋರಾತ್ರಿಯೇ ಕಬೀರನ ಹೆಂಡತಿಯನ್ನು ಮನೆಗೆ ಕರೆದುಕೊಂಡು ಹೋಗಿಬಿಟ್ಟ. ಕಬೀರದಾಸನಿಗೆ ಹೆಂಡತಿ ಬಂದದ್ದು ನೋಡಿ ಆಶ್ಚರ್ಯವಾಯಿತು. ಆಕೆ ಸುಳ್ಳು ಹೇಳಿ ತಪ್ಪಿಸಿಕೊಂಡು ಬಂದಿರಲೇಬೇಕೆಂದು ಭಾವಿಸಿದ.

ಆಕಿ ಮಾರಿ ನೋಡಿ ಆದ ಶಿಟ್ಟಾ
ಚಂಡ ಹಿಡಿದ ಹೊರಗ ನುಗಿಸಿಕೊಟ್ಟಾ।
ಉಚ್ಚಾಪತಿ ಲೆಕ್ಕಾ ಕೊಟ್ಟಿಲ್ಲಾ ಸಾಲ
ಮುಟ್ಟಿಲ್ಲ ಸಾಹುಕಾರ ಹ್ಯಾಂಗ ಬಿಟ್ಟಾ।
ಅವಗ ಏನ ಹೇಳಿ ಬಂದಿ ಪಂಟಾ
ನನ್ನಾ ಸತ್ಯಕ್ಕ ಹಚ್ಚಿದಿ ಬಟ್ಟಾ

ಆಕೆ ನಡೆದದ್ದೆಲ್ಲಾ ಹೇಳಿದರೂ ಕಬೀರ ನಂಬಲಿಲ್ಲ. ಹಿಂದೆ ಮುಂದೆ ಯೋಚಿಸಿದ. ಕುಡಗೋಲು ತೆಗೆದುಕೊಂಡು ಆಕೆಯ ಶಿರವನ್ನು ಕತ್ತರಿಸಿದ. ಶವವನ್ನು ಊರ ಹೊರಗೆ ಶೂಲಕ್ಕೆ ನೇತು ಹಾಕಿದ. ಬೆಳಿಗ್ಗೆ ಊರಿನಿಂದ ಹೊರಟ ಸಾಧುಗಳನ್ನು ನೋಡಿ ಹೆಣಬಾಗಿ ಕೈಮುಗಿಯಿತು. ಕಾಲು ಅಲ್ಲಾಡಿಸಿ ನಕ್ಕಿತು. ಹರಿಚರಣದಲ್ಲಿ ನಷ್ಠೆ ಇಟ್ಟಿತು. ಸಾಹುಕಾರನ ಲೆಕ್ಕ ತರಿಸಿ ನೋಡಲು ಹೇಳಿತು. ಅವರು ಅದರಂತೆ ಮಾಡಿದರು. ಸಾಲದ ಬಾಕಿ ಅದರಲ್ಲಿ ತೀರಿತ್ತು. ಕಬೀರನಿಗೆ ಆಘಾತವಾಯಿತು. ಸಾಧುಗಳು ಇದು 'ಹರಿಕೃತ' ಅಂದರು. ಶಿರ ಮತ್ತು ಮುಂಡವನ್ನು ಹೊಂದಿಸಿಟ್ಟು ಹರಿಭಜನೆ ಮಾಡಿದರು. ಭಕ್ತರ ದೀನಸ್ಥಿತಿಗೆ ಕರುಣೆ ಉಕ್ಕಿ ಶ್ರೀಹರಿ ಪ್ರತ್ಯಕ್ಷನಾದ.

ಕಬೀರ ಹೊಂದ್ಯಾನ ಹರಿಯ ಚರಣಕ
ಅಂತಾನ ನಿವ್ಯಾಕ ಮಾಡಿಕೊಂಡ್ರಿ ಇಷ್ಟಶ್ರಮಾ।
ಆಗ ನಗತ ಅಂದಾನ ಭಗವಾನಾ
ಭಕ್ತರ ಅಭಿಮಾನಾ ಕಾಯುದು ನಮ್ಮ ಕ್ರಮಾ।

'ಭಕ್ತಿ ಇಟ್ಟವನಿಗೆ ಮುಕ್ತಿಗೇನೂ ಚಿಂತೆ ಇಲ್ಲ' ಎಂಬ ಸಂದೇಶ ಸಾರುವುದೇ ಈ ಲಾವಣಿಯ ಉದ್ದೇಶವಾಗಿದೆಯಾದರೂ ಇದರಲ್ಲೂ ಅಂಗಡಿ ಸಾಹುಕಾರ ಕಬೀರನ ಹೆಂಡತಿಯನ್ನು ಬಯಸುವುದರ ಮೂಲಕ ಉಂಟಾಗುವ ವರ್ಗಸಂಘರ್ಷವನ್ನು ಕಾಣಬಹುದು. ಇದಕ್ಕಿಂತ ಸ್ವಲ್ಪ ವಿಭಿನ್ನವಾದ ಲಾವಣಿ 'ಬಾಳಗೋಪಾಳನ ಲಾವಣಿ' ಸಾಧುಗಳಿಗೆ ಅನ್ನಹಾಕಲು ಸಾಧ್ಯವಿಲ್ಲದ ಸ್ಥಿತಿಯಲ್ಲಿ ಕಬೀರ ಮತ್ತು ಆತನ ಮಗ ಕಮಾಲ ನಡುರಾತ್ರಿಯಲ್ಲಿ ಶೆಟ್ಟಿಯ ಅಂಗಡಿಗೆ ಕನ್ನ ಹಾಕುತ್ತಾರೆ. ಬೇಕಾದ್ದನ್ನು ತೆಗೆದುಕೊಂಡು ಬರುವಾಗ ಕಬೀರನಗೆ ಒಂದು ಸಂಶಯ ಕಾಡುತ್ತದೆ. ಸಾಹುಕಾರ ನಿದ್ರೆಯಲ್ಲಿದ್ದಾನೆ. ನಾವು ಹೋದ ನಂತರ ಉಳಿದದ್ದನ್ನು ತುಡುಗರು ದೋಚಿಕೊಂಡು ಹೋದರೇನು ಗತಿ? ಮರಳಿ ಬಂದು ಸಾಹುಕಾರನನ್ನು ನಿದ್ರೆಯಿಂದ ಎಚ್ಚರಿಸಿ 'ಜ್ವಾಕಿ ಮಾಡಿಕೊಳ್ಳೊ ಬಾಕಿ ಉಳಿದದ್ದಾ' ಅಂದ ಕಮಾಲ ಕಿಂಡಿಯನ್ನು ದಾಟಿ ಬರುವಾಗ ಸಾಹುಕಾರ ಅವನ ಕಾಲು ಹಿಡಿದ. ಆಪತ್ತಿಗೆ ಸಿಕ್ಕಿ ಸಿಕ್ಕಿ ಬಿದ್ದ ಕಮಾಲನ ಗುರುತು

ಹತ್ತದಂತೆ ಕಬೀರ ತಲೆಯನ್ನು ಕತ್ತರಿಸಿದ. ಮುಂದೆ ದೇಹವನ್ನು ಶೂಲಕ್ಕೇರಿಸುವುದು. ಶವಸಾಧುಗಳ ಸ್ತುತಿ ಮಾಡುವುದು, ಕಮಾಲನ ಜೀವ ಮರಳಿ ಬರುವುದು ಇತ್ಯಾದಿ ಪ್ರಸಂಗಗಳು ಜರುಗುತ್ತವೆ. ಇಲ್ಲಿ ಗಮನಿಸಬೇಕಾದ ಅಂಶ ಅನಿವಾರ್ಯವಾಗಿ ಸಾಧುಗಳಿಗೆ ಅನ್ನಹಾಕಲು ಸಾಧ್ಯವಿಲ್ಲದ ಸ್ಥಿತಿಯಲ್ಲಿ ಕಬೀರ ಸಾಹುಕಾರ ಶೆಟ್ಟಿಯ ಅಂಗಡಿಗೆ ಕನ್ನಹಾಕುವುದು. ಕನ್ನ ಹಾಕುವುದರ ಹಿನ್ನಲೆ ಕಬೀರನಿಗೆ ಬಹುಶಃ ಶೆಟ್ಟಿಯ ಬಳಿ ಸಾಲ ಕೇಳಿದರೆ ಬಡವನಾದ ತನಗೆ ಸಾಲ ಕೊಡುವುದಿಲ್ಲ. ಆದ್ದರಿಂದ ಕನ್ನಹಾಕುವುದೇ ಲೇಸೆಂಬ ನಿರ್ಧಾರಕ್ಕೆ ಬಂದು ಆ ರೀತಿ ಕಳ್ಳತನ ಮಾಡಲು ಹೋಗಿರಬಹುದು. ಸಂಪತ್ತು 'ಒಂದು ಕಡೆ ಕ್ರೋಢಿಕರಣಗೊಂಡಿದ್ದರಿಂದ ಬಡ ಕಬೀರ ಬೇಕಾದ ಸಾಮಾನುಗಳನ್ನು ಕದಿಯಲು ಹೋಗುವುದು.

೩.೩.೬ ಲಾಲಾಗುಜ್ಜನ ಹಾಡು

ಅನಾದಿ ಕಾಲದಿಂದಲೂ ಸಮಾಜದಲ್ಲಿ ಆರ್ಥಿಕ ಸಂಕಷ್ಟದಲ್ಲಿರುವ ಕೆಳವರ್ಗದ ಜನ ಮೇಲ್ವರ್ಗದ ಶ್ರೀಮಂತರ ಬಳಿ ಸಾಲ ಮಾಡುತ್ತಿರುವುದು ಸರ್ವೇಸಾಮಾನ್ಯವಾದ ವಿಚಾರ. ಅನಕ್ಷರಸ್ಥ ಕೆಳವರ್ಗದ ಜನ ಅವಶ್ಯಕತೆಗೆ ಮಾಡುತ್ತಿದ್ದ ಸಣ್ಣ ಮೊತ್ತದ ಸಾಲ ನಿಗಧಿತ ಸಮಯಕ್ಕೆ ಸರಿಯಾಗಿ ಪಾವತಿಸಲು ಸಾಧ್ಯವಾಗದೇ ಬಡ್ಡಿಯ ರೂಪದಲ್ಲಿ ಬೃಹದಾಕಾರವಾಗಿ ಬೆಳೆಯುತ್ತಿತ್ತು. ಶ್ರೀಮಂತ ಸಾಹುಕಾರರು ಸಾಲವಸೂಲಾತಿಗಾಗಿ ಸಾಲ ಪಡೆದುಕೊಂಡವರನ್ನು ಅಥವಾ ಅವರ ಮನೆಯ ಮಕ್ಕಳನ್ನು ಜೀತದಾಳಾಗಿ ಇಟ್ಟುಕೊಳ್ಳುತ್ತಿದ್ದರು. ಪ್ರಸ್ತುತ ಲಾವಣಿಯು ಹಣದ ವಿಷಯಕ್ಕೆ ಇಬ್ಬರು ಸ್ನೇಹಿತರ ನಡುವೆ ಉಂಟಾದ ಬಿರುಕಿನ ಬಗ್ಗೆ ಬೆಳಕು ಚೆಲ್ಲುತ್ತದೆ.

ವಿಶ್ವಾಸ ನಂಬಿಕೆ ಜೋಡಿ ಇರೋದು ಅವರು ಕೂಡಿ ಜೋಡಿ ಮೈತರಾ ।
ಲಾಲಾಗುಜ್ಜ ಅನ್ನಾವ ಸಾವುಕಾರಾ । ಬಾಬಜ್ಜಿ ಅನ್ನಾವ ಬಡವರಾ
ಲಾಲಾಗುಜ್ಜನಲ್ಲಿ ಸಾಲಾತಂದಿದ್ದ ರೂಪಾಯಿ ಮೂರುಸಾವಿರಾ ।
ಮೂರು ಸಾವಿರಾ ॥

ಲಾಲಾಗುಜ್ಜ ಎನ್ನುವವ ಸಾಹುಕಾರ. ಬಾಬಜ್ಜಿ ಎನ್ನುವವ ಬಡವ. ಇಬ್ಬರು ಆತ್ಮೀಯ ಸ್ನೇಹಿತರು. ಹೀಗಿರಲು ಒಂದು ದಿನ ಬಾಬಜ್ಜಿಗೆ ಹಣದ ಅವಶ್ಯಕತೆ ಉಂಟಾಗಿ ಲಾಲಾಗುಜ್ಜನಲ್ಲಿ ಮೂರು ಸಾವಿರ ರೂಪಾಯಿ ಸಾಲ ಕೇಳಿ ಪಡೆದುಕೊಳ್ಳುತ್ತಾನೆ. ವಿಶ್ವಾಸ, ನಂಬಿಕೆ ಇಬ್ಬರಲ್ಲೂ ಇದ್ದದ್ದರಿಂದ ಲಾಲಾಗುಜ್ಜ ಹಣವನ್ನು ಸರಿಯಾಗಿ ಎಣಿಸಿ ಬಾಬಜ್ಜಿಗೆ ಕೊಟ್ಟ.

ಲಾಲಾಗುಜ್ಜ ರೂಪಾಯಿ ಎಣಿಸಿ ಕೊಟ್ಟ ಇಲ್ಲ ಅಂವಗ ಕಪಟ ಜೋಡಿ ಮೈತರಾ ।
ಮುಂದೆ ಬಂತ ಕಾಡು ಹೂನಾರಾ। ಕೆಟ್ಟ ಮಂದಿ ಕೂಡ್ಯಾರ ನಾಲ್ಕಾರಾ।
ಲಾಲಾಗುಜ್ಜನ ಕರದ ಕೇಳತಾರ ಅದರ ವಿಚಾರ। ಅದರ ವಿಚಾರಾ ॥

ದಸ್ತ ಇಲ್ಲದ ರೂಪಾಯಿ ಹೇಗೆ ಕೊಟ್ಟೆ ಎಂಥಾದ ಎದೆ ಗಟ್ಟಿ ಅಂತ ಕೇಳಿದಾರವರಾ ।
ನಿನ್ನ ರೂಪಾಯಿಗೇನು ಆಧಾರಾ । ಎಂಥ ಮಳ್ಳ ಮಂದಿಗುಜ್ಜರಾ ।
ದಸ್ತ ಬರೆಯಿಸಿಕೊಳ್ಳಬೇಕಂತ ಹೇಳಿದಾರವರಾ । ಹೇಳಿದಾರವರಾ ।

ಆನಂತರದಲ್ಲಿ ಲಾಲಾಗುಜ್ಜ ನಾಲ್ಕು ಕೆಟ್ಟಮಂದಿಯ ಮಾತನ್ನು ಕೇಳಬೇಕಾದ ಪ್ರಸಂಗ ಬರುತ್ತದೆ. 'ದಸ್ತವಿಲ್ಲದೆ ರೂಪಾಯಿ ಹೇಗೆ ಕೊಟ್ಟೆ' ಎಂದು ಆ ನಾಲ್ಕು ಮಂದಿ ಸ್ನೇಹಕ್ಕೆ ಹುಳಿ ಹಿಂಡುವ ಕೆಲಸವನ್ನು ಮಾಡುತ್ತಾರೆ. ಇನ್ನು ಮುಂದುವರೆದು 'ನೀನು ಕೊಟ್ಟ ರೂಪಾಯಿಗೇ ಆಧಾರನೇ ಇಲ್ಲ. ಆದ್ದರಿಂದ 'ದಸ್ತ ಬರೆಯಿಸಿ ಕೋ' ಎನ್ನುತ್ತಾರೆ. ಇಲ್ಲಿಯವರೆಗೆ ನಿಷ್ಕಲ್ಮಶ ಮನಸ್ಸುಳ್ಳ ವ್ಯಕ್ತಿಯಾಗಿದ್ದ ಲಾಲಾಗುಜ್ಜ ನಾಲ್ಕು ಜನ ಕೆಟ್ಟಮಂದಿಯ ಮಾತು ಕೇಳಿ ಆಸೆಬುರುಕನಾಗುತ್ತಾನೆ.

ಅವರ ಮಾತು ಕೇಳಿದ ಆ ಕ್ಷಣಾ ಬಾರೊ ಬಾಬಜ್ಜಣ್ಣಾ ಅಂತ ಕರದಾನು ।
ಕರದಾನು॥
ದಸ್ತ ತರಬೇಕ ಈಗಿಂದಿಗ ಬರಕೊಡು ಲಗುಬೇಗ ಅವರಿಗೆ ಹೇಳಿದಾನು ।
ಹೇಳಿದಾನು॥
ಬಾಬಜ್ಜಿ ತಂದ ಕಾಗದಾ ಇಲ್ಲ ಅಗಾಧಾ ಅವಗ ಬರಕೊಟ್ಟಾನು। ಬರಕೊಟ್ಟಾನು

ಬಾಬಜ್ಜಿಯನ್ನು ಕರೆದು ದಸ್ತ ಬರಕೊಡೆಂದು ಕೇಳುತ್ತಾನೆ. ಆಗ ಬಾಬಜ್ಜಿ, ಲಾಲಾಗುಜ್ಜನಿಗೆ ದಸ್ತ ಬರೆದುಕೊಡುತ್ತಾನೆ. ಬಾಬಜ್ಜಿ ದಸ್ತ ಬರೆದುಕೊಟ್ಟ ನಂತರ ಒಂದು ವರ್ಷ ಕಳೆಯುತ್ತದೆ. ಈ ಮಧ್ಯೆ ಅವರ ಮಧ್ಯೆ ಯಾವುದೇ ವ್ಯವಹಾರವಾಗಲೀ, ಸಂಪರ್ಕವಾಗಲೀ ಇರುವುದಿಲ್ಲ.

ಲಾಲಾಗುಜ್ಜ ರೂಪಾಯಿ ಬೇಕಂದಾ ತರೋಗ ಹೋಗಂದ ನಮಗೆ
ನಿರ್ವಾಹವಿಲ್ಲಾ।
ಬಾಬಜ್ಜಿ ಹಿಡಿದ ಮಂದಿಕಾಲಾ । ಅವನ ರೂಪಾಯಿ ಜೋಡಣೆ ಮಾಡಿದೆಲ್ಲಾ
ಜೋಡಣೆ ಮಾಡಿ ರೂಪಾಯಿ ಒಯ್ದು ಕೊಟ್ಟ ಲಾಲಾಗ ಹೇಳಿ ಬಿಟ್ಟ
ಮುಟ್ಟಿದು ನಿನ್ನ ಎಲ್ಲಾ

ಇದ್ದಕ್ಕಿದ್ದ ಹಾಗೆ ಲಾಲಾಗುಜ್ಜ ಬಾಬಜ್ಜಿಯನ್ನು ಕರೆದು ತುರ್ತಾಗಿ ಹಣಬೇಕಾಗಿದೆ, ಹಣಹೊಂದಿಸಿಕೊಡೆಂದು ಕೇಳುತ್ತಾನೆ. ಆಗ ಬಾಬಜ್ಜಿ ಬಹಳ ಕಷ್ಟಪಟ್ಟು ಹಣ ಒದಗಿಸಿ ಲಾಲಾಗುಜ್ಜನಿಗೆ ತಂದೊಪ್ಪಿಸಿ, ಹಣವೆಲ್ಲ ತಲುಪಿರುವುದರ ಬಗ್ಗೆ ಖಾತರಿ ಪಡಿಸಿಕೊಂಡು ಹೊರಡುತ್ತಾನೆ. ಆದರೆ ಹಣಕೊಡುವ ಸಂದರ್ಭದಲ್ಲಿ ಸಾಕ್ಷಿಯಾಗಿ ಯಾರೂ ಇರುವುದಿಲ್ಲ.

ಆ ವೇಳೆಗೆ ಸಾಕ್ಷಿಯಾರಿಲ್ಲಾ । ತನ್ನ ದಸ್ತ ಸಹ ಬೇಡಲಿಲ್ಲಾ ।
ಹೊರಟ ಮನೆಗೆ ಬಂದಾನೊ ಮುಂದಿನ ಭವಿಷ್ಯ ತಿಳಿಲಿಲ್ಲ । ಭವಿಷ್ಯ ತಿಳಿಲಿಲ್ಲ

ಹಣಪೂರ್ತಿಯಾಗಿ ಹಿಂತಿರುಗಿಸಿದರೂ ಬಾಬಜ್ಜಿಯಂತಹ ಮುಗ್ಧ ಬಡವ ತಾನು ಬರೆದುಕೊಟ್ಟ ದಸ್ತವನ್ನು ಕೂಡ ಮರಳಿಕೊಡುವಂತೆ ಲಾಲಾಗುಜ್ಜನಿಗೆ ಕೇಳುವುದಿಲ್ಲ. ಗ್ರಾಮೀಣ ಪರಿಸರದಲ್ಲಿ ಇಂತಹ

ಘಟನೆಗಳು ಯಥೇಚ್ಚವಾಗಿ ನಡೆಯುತ್ತವೆ. ಬಡವರು ತಾವು ಪಡೆದ ಸಾಲವನ್ನು ಬಡ್ಡಿಸಮೇತ ಹಿಂತಿರುಗಿಸಿದರೂ ಸಾಹುಕಾರರಿಗೆ ಬರೆದುಕೊಟ್ಟ ಸಾಲದ ಪತ್ರವನ್ನು ವಾಪಸ್ಸು ಪಡೆದುಕೊಳ್ಳುವುದಿಲ್ಲ. ಹಿಂಪಡೆಯಬೇಕೆಂಬ ಪರಿಜ್ಞಾನವೂ ಅವರಿಗಿರುವುದಿಲ್ಲ. ಅದಕ್ಕೆಲ್ಲ ಕಾರಣ ಅವರ ಅಜ್ಞಾನ, ಅನಕ್ಷರತೆ ಮತ್ತು ಸಮಾಜದಲ್ಲಿರುವ ವರ್ಗ, ವರ್ಣತಾರತಮ್ಯ. ಲಾಲಾಗುಜ್ಜ, ಬಾಬಜ್ಜಿ ಬರೆದುಕೊಟ್ಟ ದಸ್ತವನ್ನೇ ತನ್ನ ಬಂಡವಾಳವನ್ನಾಗಿ ಮಾಡಿಕೊಂಡು ದಾವೆ ಹೂಡುತ್ತಾನೆ.

ಅವನ ದಸ್ತ ಅವಗೆ ಕೊಡಲಿಲ್ಲ । ಕೂತ ಜನ ಕೇಳರಿನ್ನ ಮೇಲಾ ।
ದಸ್ತ ಒಯ್ದು ದಾವೆ ಮಾಡಿಸಿದ ಬಾಬಜ್ಜಿಯ ಮೇಲಾ । ಬಾಬಜ್ಜಿಯ ಮೇಲಾ
ಸರಕಾರ ಕಾಯ್ದೆದುರಸ ಮೇಲಿಂದ ಮೇಲೆ ಕರಸ ಇರುವದು ದೊಡ್ಡಅಮಲಾ ।
ಶಮನಾಸ ಆದಿತ ಬಾಬಜ್ಜಿಯ ಮೇಲಾ । ಬಾಬಜ್ಜಿಯ ಕರಕೊಂಡ್ಹೋದಾರಲ್ಲಾ ।
ಮುನಾಸುಪ ಕೇಳಿದಾರ ರೂಪಾಯಿ ಯಾಕ ಕೊಡಲಿಲ್ಲ । ಯಾಕ ಕೊಡಲಿಲ್ಲ ॥

ಬಾಬಜ್ಜಿ ದೊಡ್ಡಮೊತ್ತದ ಹಣವನ್ನು ಕೊಡಬೇಕೆಂದು ಲಾಲಾಗುಜ್ಜ ಕೋರ್ಟಿನಲ್ಲಿ ದಾವೆ ಹೂಡುತ್ತಾನೆ. ಆಗ ಬಾಬಜ್ಜಿಯನ್ನು ಕರೆದುಕೊಂಡು ಹೋಗಿ ಕೋರ್ಟಿನ ಕಟಕಟೆಯಲ್ಲಿ ಮುನಸುಫನ ಮುಂದೆ ನಿಲ್ಲಿಸುತ್ತಾರೆ. ಆಗ ಮುನಸುಫ ಹಣ ಯಾಕೆ ಹಿಂದಿರುಗಿಸಲಿಲ್ಲವೆಂದು ಬಾಬಜ್ಜಿಗೆ ಕೇಳುತ್ತಾನೆ. ಬಾಬಜ್ಜಿ ಹಣವನ್ನು ಹಿಂದಿರುಗಿಸಿರುದಾಗಿ ಹೇಳುತ್ತಾನೆ. ಆದರೆ ಅದಕ್ಕೆ ಸಾಕ್ಷಿ ಯಾರೆಂದು ಕೇಳಿದಾಗ

ನೀಕೊಟ್ಟಾಗ ಸಾಕ್ಷಿ ಯಾರಂದಾ । ಕರತಾ ಹೋಗಂದಾ ಮುನುಸುಫ ಹೇಳಿದಾ ।
ಹೇಳಿದಾ ॥
ಧ್ಯಾನ ಮಾಡಿದ ಬಾಬಜ್ಜಿ ಆವಾಗ ವೆಂಕಟರಣಾಗ ನೀನೆ ಆಗಾವಂದಾ ।
ಆಗಾವಂದಾ ॥

ಪ್ರತ್ಯಕ್ಷಸಾಕ್ಷಿ ಯಾರೂ ಇಲ್ಲದ ಕಾರಣ ಧ್ಯಾನ ಮಾಡಿ 'ವೆಂಕಟರಮಣ' ನಿಗೆ ನೀನೆ ಸಾಕ್ಷಿಯಾಗೆಂದು ನಿವೇದಿಸಿಕೊಳ್ಳುತ್ತಾನೆ. ತಾನು ದುಡ್ಡುಕೊಡುವಾಗ ವೆಂಕಟಪತಿ ಅಷ್ಟೇ ಇದ್ದುದಾಗಿ ಆತನ ಹೊರತು ಬೇರೆ ಯಾರು ಇಲ್ಲದ್ದಾಗಿ ಹೇಳುತ್ಥಾನೆ. ಇಷ್ಟು ಹೇಳಿ ಅಲ್ಲಿಂದ ಹೊರಟು ಹೋಗುತ್ತಾನೆ. ಆಗ ಅಲ್ಲಿದ್ದ ಜನರಿಗೆ ಆಶ್ಚರ್ಯವಾಗುತ್ತದೆ. ದೇವರೇ ಸಾಕ್ಷಿ ಹೇಗಾಗುತ್ತಾನೆ ಎಂಬ ಕುತೂಹಲ ಮೂಡುತ್ತದೆ. ಕಾನೂನಿನ ಪ್ರಕಾರ ಮುನಸುಫ ದೇವರಿಗೆ 'ಸಮನ್ಸ್' ಜಾರಿ ಮಾಡುತ್ತಾನೆ. ಸಮನ್ಸನ್ನು ಹೊತ್ತೊಯ್ದ ಕೋರ್ಟಿನ ಸಿಬ್ಬಂದಿ ದೇವರಗುಡಿಗೆ ಹೋಗುತ್ತಾನೆ. ಆ ಸಮಯದಲ್ಲಿ ಪೂಜಾರಿ ದೇವರಗುಡಿಗೆ ಬೀಗಹಾಕಿ ಮನೆಗೆ ಹೊರಟು ಹೋಗಿದ್ದ. ದೇವರಗುಡಿಯ ಬಾಗಿಲಿಗೆ ಎರಡು ಕಿಟಕಿ ಇರುವುದನ್ನು ಕಂಡ ಕೋರ್ಟಿನ ಸಿಬ್ಬಂದಿ ಕಾಗದವನ್ನು ಗುಡಿಯ ಒಳಗೆ ಬಿಸಾಕಿದ. ಆಶ್ಚರ್ಯವೆಂಬಂತೆ ಆ ಕ್ಷಣದಲ್ಲಿಯೇ ದೇವರು ಸಹಿ ಮಾಡಿಬಿಟ್ಟ. ಅಷ್ಟರಲ್ಲೆ ಊಟ ಮಾಡಿ ಪೂಜಾರಿ ದೇವರಗುಡಿಗೆ ಬರುತ್ತಾನೆ. ಕೋರ್ಟಿನ ಸಿಬ್ಬಂದಿಯನ್ನು ನೋಡಿ ಬಂದ ವಿಚಾರವೇನು? ಎಂದು ಕೇಳಿದಾಗ ದೇವರಿಗೆ ಸಮನ್ಸ್ ತಂದಿರುವ ವಿಚಾರವನ್ನು ತಿಳಿಸಿ, ಬಾಗಿಲು ತೆರೆಯುವಂತೆ ಹೇಳುತ್ತಾನೆ. ಪೂಜಾರಿ

ದೇವರಗುಡಿಯ ಬಾಗಿಲನ್ನು ತೆಗೆದಾಗ ದೇವರು ಸಹಿ ಮಾಡಿದ ಕಾಗದವನ್ನು ತೆಗೆದುಕೊಂಡು ಕಛೇರಿಗೆ ವಾಪಸ್ಸಾಗುತ್ತಾನೆ. ಕಛೇರಿಯಲ್ಲಿ ಮುನಸುಫ ಪತ್ರವನ್ನು ಓದಿಸಿದಾಗ ಎಲ್ಲರಿಗೂ ಆಶ್ಚರ್ಯವಾಗುತ್ತದೆ. ಏಕೆಂದರೆ 'ದೇವರ ಬರೆದ ಅಕ್ಷರ ಛಾಪಖಾನೆ ಆಕಾರ ಇದ್ದಾವ ಕೇಳರಿ । ಕೇಳರಿ' ದೇವರು ಬರೆದ ಅಕ್ಷರ ಛಾಪಕಾಗದದ ಮೇಲೆ ಬರೆದ ಅಕ್ಷರದ ಹಾಗಿರುತ್ತದೆ. ಆದರೆ ನ್ಯಾಯ ತೀರ್ಮಾನವಾಗಬೇಗಾದರೆ ಸಾಕ್ಷಿದಾರ ಕೋರ್ಟಿಗೆ ಬರಬೇಕಾಗಿರುವುದು ಖಡ್ಡಾಯ. ಹಾಗಾಗಿ ದೇವರು ಬರುವುದರ ಕರಾರು ಆಗುತ್ತದೆ. ಎಲ್ಲಾ ಕಡೆ ದೇವರು ಬರುವ ಸುದ್ದಿ ಹರಡಿ ಚರ್ಚೆಗೆ ಗ್ರಾಸವಾಗುತ್ತದೆ. ನ್ಯಾಯ ತೀರ್ಮಾನದ ದಿನ ಬರುತ್ತದೆ. ಆ ದಿನ ಕಚೇರಿಯ ಒಳಗೆ ನಿಂತುಕೊಳ್ಳಲೂ ಜಾಗ ಸಿಗುವುದಿಲ್ಲ. ಹೆಚ್ಚು ಜನ ಸೇರಿ ಗದ್ದಲವುಂಟಾಗುತ್ತದೆ. ಎಲ್ಲರೂ ದೇವರ ಆಗಮನಕ್ಕಾಗಿ ಜಾತಕ ಪಕ್ಷಿಯಂತೆ ಕಾದು ಕುಳಿತಿರುತ್ತಾರೆ. ಅಷ್ಟರಲ್ಲೇ ಇದ್ದಕ್ಕಿದ್ದ ಹಾಗೆ ಸಿಡಿಲು ಮಿಂಚುಗಳ ಆರ್ಭಟ ಕೇಳಿಬರುತ್ತದೆ. ಕಚೇರಿಯ ಮೇಲೆ ಬೆಳಕು ಬರುತ್ತದೆ. ವೆಂಕಟಪತಿ ದೇವರು ಬಂದದ್ದು ಯಾರಿಗೂ ಕಾಣಿಸುವುದಿಲ್ಲ.

ವೆಂಕಟಪತಿ ದೇವ್ರು ಬಂದದ್ದು ಯಾರಿಗೂ ಕಾಣಲಿಲ್ಲ । ಯಾರಿಗೂ ಕಾಣಲಿಲ್ಲ ।
ವೆಂಕಟಪತಿ ದೇವರ ಬಂದ ಲಾಲಾಗುಜ್ಜಗಂದ ಮಾತುನಂದ ಅಲ್ಲಾ ।
ಹಣಮುಟ್ಟಿದೆ ನನ್ನದು ಎಲ್ಲಾ । ಮೇಲೆ ಬರದದ್ದು ಸುಳ್ಳಲ್ಲಾ ।
ಇಗಿಂದೀಗ ತರಸಿ ನೋಡಿರಿ ದೈವ ನೀವೆಲ್ಲಾ । ದೈವ ನೀವೆಲ್ಲಾ ।

ಹೀಗೆ ಯಾರ ಕಣ್ಣಿಗೂ ಬೀಳದೇ ಬಂದ ದೇವರು ಲಾಲಾಗುಜ್ಜನ ಪರಕಾಯ ಪ್ರವೇಶ ಮಾಡಿ, ಲಾಲಾಗುಜ್ಜನಿಂದಲೇ ಸತ್ಯವನ್ನು ಹೇಳಿಸುತ್ತಾನೆ. ಲಾಲಾಗುಜ್ಜ ಎಲ್ಲರ ಮುಂದೆ ತನಗೆ ಹಣ ಮುಟ್ಟಿರುವ ವಿಷಯವನ್ನು ಒಪ್ಪಿಕೊಳ್ಳುತ್ತಾನೆ. ಅವನಿಂದ ಬಾಬಜ್ಜಿ ಬರೆದು ಕೊಟ್ಟ ಕರಾರು ಪತ್ರವನ್ನು ತರಿಸಿಕೊಳ್ಳುತ್ತಾರೆ. ಮುನಸುಫ ಎಲ್ಲವನ್ನು ಪರಿಶೀಲಿಸಿ ಆ ಕಾಗದವನ್ನು ಬಾಬಜ್ಜಿಗೆ ತಲುಪಿಸುತ್ತಾನೆ. ಇಷ್ಟು ಸತ್ಯಾಂಶ ಹೊರಬೀಳಲು ಕಾರಣವಾದ ದೇವರನ್ನು ಕಾಣಲು ಜನ ಹಾತೊರೆಯುತ್ತಿದ್ದರೂ ದೇವರು ಕಾಣಿಸಿಕೊಳ್ಳುವುದಿಲ್ಲ. 'ಖಟ್ಲೆ ಹರಿದು ಆದಿತ ಖುಲಾಸಾ । ಒಬ್ಬರೊಬ್ಬರಿಗಿ ಉಳಿಲಿಲ್ಲ ವಿಶ್ವಾಸಾ' ಮೊಕದ್ದಮೆ ಬಾಬಜ್ಜಿಗೆ ನ್ಯಾಯ ಸಿಗುವುದರ ಮೂಲಕ ಮುಕ್ತಾಯವಾಗುತ್ತದೆ. ಬಾಬಜ್ಜಿಯಂತಹ ಮುಗ್ಧ, ಪ್ರಾಮಾಣಿಕ ಕೆಳವರ್ಗದ ಬಡವನ ಸ್ಥಿತಿ ಎಷ್ಟು ಶೋಚನೀಯ ಸ್ಥಿತಿಗೆ ತಲುಪಿರುತ್ತದೆಂದರೆ ಸಾಕ್ಷಿ ಹೇಳಿಸಲು ದೇವರನ್ನು ಕರೆಸಬೇಕಾಗುತ್ತದೆ. ತಾನು ಸಾಲ ತೀರಿಸುತ್ತಿರಬೇಕಾದರೆ ಯಾರಾದರೂ ಸಾಕ್ಷಿ ಇರಬೇಕೆನ್ನುವ ಪರಿಜ್ಞಾನ ಆತನಿಗಿರುವುದಿಲ್ಲ. ಮತ್ತು ಅದರ ಅವಶ್ಯಕತೆ ಆತನಿಗೆ ಆ ಸಂದರ್ಭಕ್ಕೆ ಬೇಕೆನಿಸಿರುವುದಿಲ್ಲ. ಇಂತಹ ಪ್ರಾಮಾಣಿಕ, ಮುಗ್ಧ, ಅಸಹಾಯಕ, ಬಡ ಕೆಳವರ್ಗದ ಜನ ಸಮಾಜದಲ್ಲಿರುವುದರಿಂದಲೇ ಶ್ರೀಮಂತವರ್ಗ ವ್ಯವಸ್ಥಿತವಾಗಿ ಬಡಕೆಳವರ್ಗದ ಜನರನ್ನು ಶೋಷಿಸಲು ತುಳಿಯಲು ಸಾಧ್ಯವಾಗುತ್ತಿರುವುದು. ಈ ಲಾವಣಿಯಲ್ಲಿ ಬಾಬಜ್ಜಿಯ ಸಹಾಯಕ್ಕೆ ದೇವರು ಬಂದ. ಆದರೆ ದೇವರು ಬಾರದೆ ಇದ್ದಿದ್ದರೆ ಆತನ ಸ್ಥಿತಿ ಹ್ಯಾಗಿರುತ್ತಿತ್ತು ಎಂಬುದನ್ನು ಊಹಿಸಲು ಕೂಡ ಸಾಧ್ಯವಿಲ್ಲ.

೩.೩.೭ ಕಡ್ಲಿಮಟ್ಟಿ ಕಾಶೀಬಾಯಿ

ಹೆಣ್ಣಿನ ಅಭಿಪ್ರಾಯ, ದುಗುಡ, ದುಮ್ಮಾನಗಳು ಹೆಚ್ಚಾಗಿ ಜಾನಪದದಲ್ಲಿ ದಾಖಲಾಗಿಲ್ಲ. ಯಾಕೆಂದರೆ ಹೆಣ್ಣಿಗೂ ಧ್ವನಿಯಿದೆ, ಮನಸ್ಸಿದೆ, ಬುದ್ಧಿಯಿದೆ ಎಂದು ಪುರುಷ ಪ್ರಧಾನ ಸಮಾಜ ಆಲೋಚಿಸಿಲ್ಲ. ಆದರೆ ಕಡ್ಲಿಮಟ್ಟಿ ಕಾಶೀಬಾಯಿ ಲಾವಣಿ ಇದಕ್ಕೆ ವ್ಯತಿರಿಕ್ತವಾದ ಲಾವಣಿ. ಇಲ್ಲಿ ಕಾಶೀಬಾಯಿ, ಅಧಿಕಾರಿಯಿಂದ ತನ್ನ ಮೇಲೆ ಆಗಬಹುದಾದ ಅತ್ಯಾಚಾರದಿಂದ ತಪ್ಪಿಸಿಕೊಳ್ಳಲು ಬಹಳಷ್ಟು ಹೋರಾಟವನ್ನು ಮಾಡುತ್ತಾಳೆ. ಜಾತಿ ಶ್ರೇಣೀಕರಣವುಳ್ಳ ಭಾರತೀಯ ಸಮಾಜದಲ್ಲಿ ಮೇಲ್ಜಾತಿಯವರಿಗೆ ತಳಸಮುದಾಯಗಳ ಸ್ತ್ರೀ ಪುರುಷರಿಬ್ಬರೂ ದಾಸ,ದಾಸಿಯರಾಗಿರುವರು. ಆದರೆ ಇಲ್ಲಿ ಕಾಶೀಬಾಯಿ ಆ ರೀತಿ ಭಾವಿಸದೆ ಹೋರಾಟ ನಡೆಸುವುದು ಇಲ್ಲಿನ ವಿಶೇಷ.

ಒಬ್ಬಳೇ ಮಗಳ ಚೊಚ್ಚಲು ಬಾಣಂತನ ಮಾಡಿ ಮೊಮ್ಮಗನನ್ನು ಕಂಡು ನಲಿಯುತಿದ್ದ ಕಾಶೀಬಾಯಿಯ ತಂದೆ ತಾಯಿಗಳು, ಅಳಿಯ ಕರೆಯಲು ಬಂದಾಗ, ಮಗಳನ್ನು ಇನ್ನೂ ಕೆಲವು ದಿನ ಇರಿಸಿಕೊಳ್ಳುವ ಅಭಿಲಾಷೆಯಿಂದ ಏನೇನೋ ನೆಪ ಹೇಳಿ, ಕಳುಹಿಸಲು ಒಪ್ಪಲಿಲ್ಲ. ಸಿಟ್ಟುಗೊಂಡ ಗಂಡ ಗಡಗಡನೆ ನಡೆದುಬಿಟ್ಟ. ಗಂಡನ ಖಾಸಗಿ ಆಸ್ತಿಯಾಗಿ ಪರಿಗಣಿಸಲ್ಪಡುವ ಹೆಂಡತಿಯ ಮೇಲೆ ಕುಟುಂಬದ ಮಾನಾಪಮಾನಗಳನ್ನು ಕಾಯುವ ಜವಾಬ್ದಾರಿ ಇರುತ್ತದೆ. ಗಂಡ ಸಿಟ್ಟು ಮಾಡಿಕೊಂಡರೂ ಶಾಂತಿಯುತವಾಗಿ ಪ್ರತಿಕ್ರಿಯಿಸುತ್ತಾ ಆತನಿಗೆ ಹಿತವಾಗುವಂತೆ ನಡೆದುಕೊಳ್ಳಬೇಕು ಇದು ಸಮಾಜದ ನಿಯಮ. ಆದ್ದರಿಂದ ಗಂಡ ಸಿಟ್ಟಿನಲ್ಲಿ ಹೊರಟುಹೋದುದನ್ನು ಆಮೇಲೆ ತಿಳಿದ ಕಾಶೀಬಾಯಿ ಮಗುವನ್ನು ಎತ್ತಿಕೊಂಡು ತಾನೂ ಹೊರಟುಬಿಟ್ಟಳು. ತಂದೆ-ತಾಯಿಗಳ ತಡೆಯನ್ನು ಲೆಕ್ಕಿಸದೆ. ಊರಿನಿಂದ ಸುಮಾರು ದೂರವೇ ಇದ್ದ ರೈಲು ನಿಲ್ದಾಣಕ್ಕೆ ಬಂದಳು. ಅಷ್ಟರಲ್ಲಿ ಗಂಡನನ್ನು ರೈಲು ಒಯ್ದುಬಿಟ್ಟಿತ್ತು. ಅವಳು ನಿಲ್ದಾಣ ತಲುಪಿದಾಗ ಇಳಿಹೊತ್ತಿನ ಸಮಯ. ಮೊದಲೇ ಹಳ್ಳಿಯ ಮುಗ್ಧೆ. ಹೆಚ್ಚು ಪ್ರಯಾಣ ಮಾಡಿದ್ದು ಗೊತ್ತಿಲ್ಲದವಳು. ರೈಲು ಬರುವ ವೇಳೆಯೂ ಗೊತ್ತಿರಲಿಲ್ಲ. ಸ್ಟೇಷನ್ ಮಾಸ್ತರನನ್ನು ಕೇಳಿದಳು. ಅವಳನ್ನು ನೋಡಿದ ಕ್ಷಣದಲ್ಲಿ ಆ ಮಾಸ್ತರ ಮೋಹಪರವಶನಾದ. ಅವಳೊಂದಿಗೆ ಇನ್ನಾರಾದರೂ ಬಂದಿರುವರೇನೋ ಎಂದು ಅತ್ತಿತ್ತ ನೋಡಿ ಒಬ್ಬಂಟಿಗಳೆಂದು ತಿಳಿದುಕೊಂಡ. ಕಾಯುವ ಕೋಣೆಯಲ್ಲಿ ಕೂರಿಸಿದ. ಈಗ ಬಂದೀತು, ಆಗ ಬಂದೀತು, ಎಂದು ರೈಲನ್ನು ಕಾಯುತ್ತ ಆ ಮುಗ್ಧೆ ಕೋಣೆಯಲ್ಲಿ ಕುಳಿತಳು.

ಅದು ಮೊದಲೇ ಹಳ್ಳಿಯ ನಿಲ್ದಾಣ. ರೈಲಿಲ್ಲದ ವೇಳೆಯಲ್ಲಿ ಪ್ರಯಾಣಿಕರು ಸುಳಿಯುವುದಿಲ್ಲ. ರೈಲು ಸಿಬ್ಬಂದಿಯೂ ಹೆಚ್ಚು ಇರುವುದಿಲ್ಲ. ಮಾಸ್ತರ ಪ್ಲಾಟ್ ಫಾರಂ ಉದ್ದಕ್ಕೂ ಅಡ್ಡಾಡತೊಡಗಿದ. ಇದ್ದ ಒಬ್ಬಿಬ್ಬರು ಸಹಾಯಕರನ್ನೂ ಕುಂಟುನೆಪ ಮಾಡಿ ದೂರ ಅಟ್ಟಿದ. ತಾನು ಮತ್ತು ಆಕೆ ಇಬ್ಬರೇ ನಿಲ್ದಾಣದೊಳಗೆ. ಮೈ ಬಿಸಿಯೇರುತ್ತದೆ. ತಡವಾದರೆ ಯಾರಾದರೂ ಬಂದುಬಿಡಬಹುದು ಎನ್ನಿಸಿತೇನೊ. ಮೆಲ್ಲನೆ ಕೋಣೆಯೊಳಗೆ ಇಣಿಕಿದ. ಆ ಮುಗ್ಧೆ ಕಾಶೀಬಾಯಿ ತನ್ನದೇ ರೈಲಿನ ಪ್ರಪಂಚದಲ್ಲಿ

ವಿಹರಿಸುತ್ತಿದ್ದಳೆಂದು ತೋರುತ್ತದೆ. ಒಳಕ್ಕೆ ಹೆಜ್ಜೆ ಹಾಕಿದ ಮಾಸ್ತರ. ಮಗು ಮಲಗಿತ್ತು. ಒಳ್ಳೆಯದೇ ಆಯಿತು ಎಂದುಕೊಂಡ. ಮೆಲ್ಲನೆ ಅವಳನ್ನು ಮಾತಾಡಿಸಲು ಯತ್ನಿಸಿದ. ಅವನು ಕೇಳಿದ್ದಕ್ಕೆಲ್ಲ ಅವಳು ಚುಟುಕಿನಲ್ಲಿ ಉತ್ತರಿಸಿ ಸುಮ್ಮನಾಗುತ್ತಿದ್ದಳು. ಯಾರೂ ಇಲ್ಲದ ಸಮಯದಲ್ಲಿ ಅವನು ಒಳಗೆ ಬಂದುದರಿಂದ ಸಂಶಯಪಡತೊಡಗಿದ್ದಳು. 'ಎಲೆಯಡಿಕೆ' ಯ ಪ್ರಸ್ತಾಪ ಬಂದಾಗ ಸಂಶಯ ಸ್ಪಷ್ಟವಾಯಿತು. ಏನು ಮಾಡುವುದೆಂದು ತೋಚಲಿಲ್ಲ. ಮೃದು ಮಾತಿನಲ್ಲಿಯೇ ಅವಳು ವಿರೋಧಿಸಿದಾಗ ಮಾಸ್ತರ ಬಲಾತ್ಕಾರ ಕ್ರಮ ಕೈಗೊಳ್ಳದೇ ಬೇರೆ ದಾರಿಯಿರಲಿಲ್ಲ. ಕಾಮೋನ್ಮತ್ತನಾಗಿದ್ದ ಅವನು ಸರ್‍ರನೆ ಹತ್ತಿರ ಬಂದು ಕೈ ಮಿಲಾಯಿಸತೊಡಗಿದ. ಅವಳು ಎದ್ದು ಹಿಮ್ಮೆಟ್ಟಿ ಅತ್ತಿತ್ತ ಒಲೆದು ತಪ್ಪಿಸಿಕೊಳ್ಳತೊಡಗಿದಳು. ಕ್ಷಣಕ್ಷಣಕ್ಕೂ ಮತ್ತಿನಲ್ಲಿ ಮುಳುಗಿಹೋಗುತ್ತಿದ್ದ ಮಾಸ್ತರ ತಾನು ಬದುಕಬೇಕಾದರೆ ಅವಳ ಆಸರೆ ಬೇಕೇಬೇಕು ಎಂಬಷ್ಟು ತೀವ್ರ ಮನಸ್ಥಿತಿಗೆ ಬಲಿ ಬಿದ್ದ. ಮನಸ್ಸನ್ನೂ ಮೀರಿಸಿ ದೇಹ ಮುಂದೋಡುವಂತಿತ್ತು ಅವನ ಬೇಟದಾಟ.

ಅಂಥ ಪರಿಸ್ಥಿತಿಯಲ್ಲಿ ಸಿಕ್ಕ ಕಾಶೀಬಾಯಿ ತಪ್ಪಿಸಿಕೊಳ್ಳಲು ಹವಣಿಸಿದಳು. ಮಗು ಮಲಗಿದ್ದುದರಿಂದ ಅದನ್ನೆತ್ತಿಕೊಂಡು ಓಡುವಷ್ಟು ಸಮಯವಿರಲಿಲ್ಲ. ಆ ಕಾಮುಕ ಮಗುವನ್ನು ಏನು ಮಾಡಿಯಾನು, ಮೊದಲು ತನ್ನ ಪಾತಿವ್ರತ್ಯ ಕಾಪಾಡಿಕೊಳ್ಳಬೇಕು, ಎಂಬುದಾಗಿ ಅವಳು ಲೆಕ್ಕಹಾಕಿರಬೇಕು. ನುಣುಚಿಕೊಂಡು ಹೋಗಲಾರದ ಹಾಗೆ ಬಾಗಿಲಿಗೆ ಕಾವಲಾಗಿದ್ದುಕೊಳ್ಳುತ್ತಲೇ ಅವನು ತನ್ನ ಕಾಯಕದಲ್ಲಿ ತೊಡಗಿದ್ದ. ಎಲ್ಲಾ ರೀತಿಯ ಅಧಿಕಾರವನ್ನು ಅನುಭವಿಸುತ್ತಿದ್ದ ಮಾಸ್ತರ ತನ್ನ ಪ್ರಪಂಚದಲ್ಲಿ ತಾನೇನೂ ಮಾಡಿದರೂ ಸರಿ ಎಂದು ಆ ಮುಗ್ಧ ಮಹಿಳೆಯ ಮೇಲೆ ಅತ್ಯಾಚಾರವೆಸಗಲು ಮುಂದಾದ. ಆ ಚಿಕ್ಕ ಕೋಣೆಯಲ್ಲಿ ಎಷ್ಟು ಹೊತ್ತು ತಾನೇ ಹಾಗೆ ಆಟವಾಡಿಸಲು ಸಾದ್ಯವಿತ್ತು? ಕಡೆಗೂ ಅವಳು ಮಾಸ್ತರನ ತೋಳ್ತೆಕ್ಕೆಗೆ ಸಿಕ್ಕಿರಬೇಕು. ಆಗ ಬೇರೆ ಮಾರ್ಗವೇ ಕಾಣದೇ, ವಶವಾದವಳಂತೆ ನಟಿಸಬೇಕಾಗಿದ್ದಿತು. ಆ ನಟನೆಯ ನಡುವೆ ಅವಳು 'ಕಾಲುಮಡಿದು' (ಜಲಬಾಧೆ ತೀರಿಸಿಕೊಂಡು) ಬರುವನೆಂದು ಹೇಳಿದಳು. ಹಕ್ಕಿ ಇನ್ನು ತಪ್ಪಿಸಿಕೊಳ್ಳುವಹಾಗಿಲ್ಲ. ದಾರಿಗೆ ಬಂದಿದೆ, ಅದೂ ಅಲ್ಲದೆ ಮಗು ಬೇರೆ ಇಲ್ಲೇ ಇದೆ. ಈ ಬಗೆಯ ಲೆಕ್ಕಾಚಾರಗಳಿಂದ ಅವನ ತೋಳುಗಳು ಸಡಿಲಗೊಂಡಿರಬೇಕು. 'ಲಗೂ ಬಾ' ಎಂದು ಹೇಳಿ ಹೊರಕ್ಕೆ ಹೋಗಲು ಅವಕಾಶ ಕೊಟ್ಟ ಮಾಸ್ತರ.

ಅವಕಾಶ ಸಿಕ್ಕಿದ ಕೂಡಲೆ ಅವಳು ಓಡಲಿಲ್ಲ. ಸಹಜ ನಡಿಗೆಯಲ್ಲಿಯೇ ಹೊರಗೆ ಹೋದಳು. ಕಾಲುಮಡಿದು ಅದೇ ಸಹಜ ನಡಿಗೆಯಲ್ಲಿ ಹಿಂತಿರುಗಿದಳು. ಕೋಣೆಯ ಬಳಿ ಬರುತ್ತಿದ್ದಂತೆಯೇ ಸರ್‍ರನೆ ಕದ ಎಳೆದುಕೊಂಡು ಹೊರಗಿನಿಂದ ಚಿಲಕ ಹಾಕಿಕೊಂಡಳು. ಅದು ತೆರೆದುಕೊಳ್ಳದಂತೆ ಕಡ್ಡಿಯಂಥದೇನಾದರೂ ಸಿಕ್ಕಿಸಿರಬೇಕು. ಹೊರಗಿನಿಂದ ಚಿಲಕ ಹಾಕಿದ ಮೇಲೆ ಎಲ್ಲಾ ಗಂಡಸರು ಆಸೆ ಹುಟ್ಟಿಸುವ ಹಾಗೆ ಈತನು ಒಡವೆ ವಸ್ತ್ರ ಕೊಡುವ ಆಮಿಷ ಒಡ್ಡುವನು.

ಏನಬೇಕ ಬೇಡ ನಿನಗ ಇಲ್ಲ ಅನ್ನುದಿಲ್ಲ ನಾನು
ರೋಖ ರೂಪಾಯಿ ವಸ್ತಾ ವಡವಿ ಕಡಿಮಿಲ್ಲಾ

ಮಾಸ್ತರನ ಆಮಿಷಗಳಿಗೆ ಕಾಶಿಬಾಯಿ ಕಿವಿಗೊಡುವುದಿಲ್ಲ. ಬದಲಾಗಿ ತಿರಸ್ಕರಿಸುವಳು. ಇಷ್ಟೆಲ್ಲದರ ನಡುವೆಯು ಚಿಲಕ ತೆಗೆಯದೇ ಇದ್ದಾಗ ಮಾಸ್ತರನ ಕೋಪ, ಕಾಮ ಎರಡೂ ಸಿಡಿದೆದ್ದವು. ಮಾಸ್ತರ ಕುರುಡಾದ. ಬಾಗಿಲು ತೆಗೆಯುವಂತೆ ಕೂಗಿದ, ಕೂಗಿದ, ಮತ್ತೆ ಮತ್ತೆ ಕೂಗಿದ. ಆ ಕಿಟಕಿಯಿಂದ ಈ ಕಿಟಕಿಗೆ ಈ ಕಿಟಕಿಯಿಂದ ಆ ಕಿಟಕಿಗೆ ಓಡಾಡುತ್ತಾ ಕೂಗುತ್ತಲೇ ಇದ್ದ. ಕಾಶೀಬಾಯಿ ಏನೊಂದು ಮಾತನ್ನೂ ಆಡದೆ ಮೌನವಾಗಿ ದುಃಖಿಸುತ್ತ ಹೊರಗೆ ಕುಳಿತುಬಿಟ್ಟಿದ್ದಳು. ಮಾಸ್ತರನ ಕೋಪ, ಕ್ರೋಧವಾಗಿ ಮಾರ್ಪಡಲು ಬಹಳ ಹೊತ್ತು ಬೇಕಾಗಲಿಲ್ಲ. ಕಾಮ ಕ್ರೋಧ ಎರಡರ ನಡುವೆಯೂ ಸಿಕ್ಕಿಕೊಂಡು ಹುಚ್ಚನಂತಾದ. ತಾನು ಏನು ಮಾಡುತ್ತಿದ್ದೇನೆಂಬ ಅರಿವನ್ನವನು ಕಳೆದುಕೊಂಡಿದ್ದ. ಹೊರಗೆ ಕುಳಿತವಳನ್ನು ಬೈದ, ಹೆದರಿಸಿದ, ಹಾರಾಡಿದ, ಕಿಟಕಿಗೆ ನೆಗೆದು ತೂರಾಡಿದ. ಒಳಗೆ ಬಂಧಿತನಾಗಿರುವವನು ಎಷ್ಟು ಹಾರಾಡಿಕೊಂಡರೂ ಭಯವಿಲ್ಲವೆಂದುಕೊಂಡು ಕಾಶೀಬಾಯಿ, ಮಂದಿ ಬಂದಾರೆಂದು ದಾರಿ ನೋಡುತ್ತಾ ಹಾರೈಸುತ್ತಾ, ಕುಳಿತೇ ಇದ್ದಳು.

ಕೂಗಿ, ಕೂಗಿ, ನೆಗೆದು ಮಾಸ್ತರ ಸುಸ್ತಾಗುವ ಹೊತ್ತಿಗೆ ಮಗು ಕಣ್ಣಿಗೆ ಬಿದ್ದಿತು. ಸುಸ್ತೆಲ್ಲ ಹಾರಿಹೋಯಿತು. ಹೊಸ ಉಪಾಯವೊಂದು ಹೊಳೆಯಿತು. 'ಏ ಕಾಶೀಬಾಯಿ, ಈಗ ನನ್ ಬಾಳಾನ್ ಜಿಂವ ನನ ಕೈಯಾಗದ, ತೆಟ್ಟಿ ತೆರಿತಿಯೋ ಇಲ್ಲೋ?' ಎಂದು ಅವನು ಅಬ್ಬರಿಸಿದಾಗ ಅವಳು ಹೆದರಿ ಅಪ್ಪಳಿಸಿಹೋದಳು. 'ಏ ಬ್ಯಾಡ್ರೀಯಪ, ಹಾಂಗ್ ಮಾಡಿಬ್ಯಾಡ್ರಿ' ಎಂದು ದೈನ್ಯದಿಂದ ಕೇಳಿಕೊಂಡಳು. ಎಂಥವರ ಹೃದಯವೂ ನೀರಾಗುವಂತೆ ಗೋಳಿಟ್ಟಳು. ಅದರಿಂದ ಅವನು ಕಲ್ಲಾದನೇ ಹೊರತು ಕರಗಲಿಲ್ಲ. ಅವನ ಹಟ ಹೆಚ್ಚುತ್ತಾ ಹೋಯಿತು. 'ಏ ಇಲ್‌ನೋಡ್ ಇಲ್ಲ, ಜಿಂವಾ ತೆಗಿಯೂದೇ ಖರೆ' ಎಂದು ಹೇಳುತ್ತ ಮಗುವನ್ನೆತ್ತಿ ಕಿಟಕಿಯಲ್ಲಿ ತೋರಿಸಿದ. ಗಾಬರಿಗೊಂಡ ಮಗು ಕಿಟಾರನೆ ಕಿರುಚಿಕೊಳ್ಳುತ್ತ ಅಳತೊಡಗಿತ್ತು. ಮಗುವನ್ನು ನೋಡಿ ಕಾಶೀಬಾಯಿ ಕುಳಿತಲ್ಲಿಂದ ಧಿಗ್ಗನೆದ್ದು ಕಿಟಕಿಯ ಬಳಿಗೋಡಿದಳು. ಎದೆ ಎದೆ ಬಡಿದುಕೊಳ್ಳಲು ತೊಡಗಿದಳು. ಇವಳು ಏನು ಮಾಡಿದರೂ ಅವನಲ್ಲಿ ಕರುಣೆ ಹುಟ್ಟಲಿಲ್ಲ. ಮಗುವನ್ನೊಂದು ಕಡೆ ಇಟ್ಟು ಆಯುಧಕ್ಕಾಗಿ ತಡಕಾಡಿದ. ಹರಿತವಾದ ಆಯುಧವೊಂದು ಸಿಕ್ಕಿತೆಂದು ತೋರುತ್ತದೆ. 'ಏ ಕಾಶೀಬಾಯೀ, ಇಲ್ ನೋಡ ನನ್ ಕೈಯಾಗೇನದ ನೋಡಿದಿ? ತೆಟ್ಟಿ ತೆರಿತಿಯೋ ಇಲ್ಲೊ ಹೇಳ. ಇಲ್ಲಾಂದ್ರ ನಿನ್ ಬಾಳಾ ಯಾಂಗಿಲ್ ನೋಡ' ಆ ಆಯುಧವನ್ನು ನೋಡಿ ಕಾಶೀಬಾಯಿಗೆ ಮತ್ತಷ್ಟು ಗಾಬರಿಯಾಯಿತು. ಕೊಂದೇಬಿಟ್ಟರೆ ಏನು ಮಾಡುವುದೆಂದು ಒಂದು ಕ್ಷಣ ಎದೆ ಅಳುಕಿತು. ಆದರೂ 'ಬಾಗಿಲು ತೆರೆಯಲೆಂದು ಹೆದರಿಸುತ್ತಿದ್ದಾನೆ ಅಷ್ಟೇ' ಎಂಬ ಭಾವವೇ ಗೆದ್ದಿತು. ಏನಾದರೂ ಮಾಡಲಿ, ಹೊರಗೆ ಮಂದಿ ಕಾಣುವತನಕ ಬಾಗಿಲನ್ನು ಮಾತ್ರ ತೆಗೆಯಬಾರದು ಎಂದು ನಿರ್ಧರಿಸಿದಳು. ಕಡೆಗೆ ಅವನು ಕೊಲ್ಲುವುದೇ ಖರೆ ಎಂದೆನಿಸಿದಾಗ ಸೆಟೆದು ನಿಂತು ಕಾಳಿಯಾದಳು. ವೀರಾವೇಷದಿಂದ ಎದೆಸೆಟೆಸಿ ಅಬ್ಬರಿಸಿದಳು.

ಕಾಶಿಬಾಯಿ ಅಂತಾಳಾಗ ಧರ್ಮ ಸಾಕ
ನನ್ನ ಗಂಡಗ ಆಶೆ ಆಗಲೆಂತ ಬೇಡಿಕೊಳ್ಳುವೆನು
ಮುಂದ ಮಗನ್ನ ಕೊಡಾವ ದೇವರದಾನು

ಕಾಮಕ್ರೋಧಗಳಿಂದ ಕುರುಡಾಗಿದ್ದ ಅವನ ಮನಸ್ಸು ಪರಿವರ್ತನೆಗೆ ಪಕ್ಕಾಗಲಿಲ್ಲ. ಕೈ, ಮೊಣಕೈ, ತೋಳು, ಪಾದ, ಮೊಣಕಾಲು, ತೊಡೆ ಹೀಗೆ ನಿರ್ದಯಿಯಾಗಿ ಒಂದೊಂದನ್ನೇ ಕತ್ತರಿಸಿ ಕಿಟಕಿಯಿಂದ ಹೊರಕ್ಕೆ ಒಗೆಯಲು ತೊಡಗಿದ. ಕಾಶೀಬಾಯಿ ಹುಚ್ಚಿಯಂತೆ 'ಕೊಲ್ಲು ನೀ ಕೊಲ್ಲು ನೀ' ಎಂದು ಹಿಡಿಹಿಡಿ ಶಾಪ ಹಾಕುತ್ತಾ ಆ ಎಲ್ಲ ತುಂಡುಗಳನ್ನು ಆಯ್ದು ಆಯ್ದು ಮಡಿಲು ತುಂಬಿಕೊಳ್ಳುತ್ತ ನಿಂತಳು. ಎಲ್ಲ ಮುಗಿದ ಮೇಲೆ ಮಾಸ್ತರ ಮುಂದೇನು ಮಾಡಬೇಕೆಂದು ತೋಚದೆ ಶತಪಥಗುಟ್ಟತೊಡಗಿದ. ತನ್ನ ಮಡಿಲು ತುಂಬಿದ ಮೇಲೆ ಕಾಶೀಬಾಯಿ ಮತ್ತೆ ಬಾಗಿಲು ಕಾಯುತ್ತಾ ಬಿಕ್ಕಿ ಬಿಕ್ಕಿ, ಅತ್ತುಕೊಳ್ಳತ್ತಾ ಬೆಳಗಾಗುವವರೆಗೆ ಹಾಗೆ ಕುಳಿತಳು.

ಬೆಳಗಾಯಿತು. ಒಬ್ಬೊಬ್ಬರಿಗೆ ಒಂದು ಬಗೆಯ ಬೆಳಗು ಅದು. ರೈಲು ಬಂದಿತು. ಅದರಿಂದಿಳಿದ ಪೋಲೀಸರ ಬಳಿಗೆ ಓಡಿದಳು. ಅವರ ಕಾಲುಕಟ್ಟಿ ನಡೆದದ್ದನ್ನೆಲ್ಲವನ್ನೂ ಹೇಳಿಕೊಂಡಳು. ಸ್ಟೇಷನ್ ಮಾಸ್ತರ ಬಂಧಿತನಾದ. ಅನಂತರ ವಿಚಾರಣೆ ನಡೆದು ಗಲ್ಲಿಗೇರಿಸಲ್ಪಟ್ಟ.

ಪುರುಷ ಪ್ರಧಾನ ಸಮಾಜ ಅದರಲ್ಲೂ ಅಧಿಕಾರಶಾಹಿ ಪುರುಷವರ್ಗದ ಹಿಡಿತಕ್ಕೆ ಸಿಕ್ಕಿದ ಬಡ, ಅಸಹಾಯಕ, ಮುಗ್ಧ, ಅಮಾಯಕ ಹೆಣ್ಣು, ಸಂದಿಗ್ಧ ಪರಿಸ್ಥಿತಿಯಲ್ಲಿ ಸಂದರ್ಭದ ಬಲಿಪಶು ವಾಗದೇ, ಧೈರ್ಯದಿಂದ ಎದುರಿಸುವುದು. ಹೆಣ್ಣು ಕುಲಕ್ಕೆ ಮಾದರಿಯ ರೂಪದಲ್ಲಿ ಕಂಡುಬರುವಳು.

೩.೪ ಜನಪದ ಕಥನಗೀತೆಗಳಲ್ಲಿ ವರ್ಗಸಂಘರ್ಷ:

ಕನ್ನಡ ಜನಪದ ಸಾಹಿತ್ಯದಲ್ಲಿ ಜನಪದ ಗದ್ಯಕಥೆಗಳಷ್ಟೇ ಮಹತ್ವದ ಪ್ರಕಾರವೆಂದರೆ ಜನಪದ ಕಥನಗೀತೆಗಳು. ಹಾಡಿನ ರೂಪದಲ್ಲಿರುವ ಕಥೆಯೇ ಕಥನ ಗೀತೆ. ಜನಪದ ಗುಂಪುಗಳು ತಾವು ಕೇಳುತ್ತ ಬಂದ ಪುರಾಣ-ಪವಾಡ, ತಮಗೆ ತಿಳಿದ ಚರಿತ್ರೆ, ಪರಾಕ್ರಮ, ಶೌರ್ಯ, ತಾವು ನೋಡಿದ ಧಾರ್ಮಿಕ, ಸಾಮಾಜಿಕತ್ಯಾಗ, ಬಲಿದಾನ, ಕೌಟುಂಬಿಕ ಸುಖ ದುಃಖದ ಸಂದರ್ಭಗಳಿಗೆ ಸಹಜವಾಗಿ ಸ್ಪಂದಿಸಿ, ಅಂಥ ಘಟನೆಗಳನ್ನು ವಿವರ ವಿವರವಾಗಿ ಸೆರೆಹಿಡಿದು, ಆ ಕಥಾನಕಗಳನ್ನು ಹಾಡಿಗೆ ತಿರುಗಿಸಿ ಮನಮೋಹಕವಾಗಿ, ಹೃದಯ ಸ್ಪರ್ಶಿಯಾಗಿ ಹಾಡುತ್ತ ಬಂದ ಗೀತೆಗಳೇ ಜನಪದ ಕಥನಗೀತೆಗಳು.

ಲಾವಣಿ ಮತ್ತು ಕಥನಗೀತೆಗಳಿಗೆ ವ್ಯತ್ಯಾಸ ಗುರುತಿಸಲು ಹೊರಟಾಗ ಅನೇಕ ಸಂಪ್ರದಾಯದ ಕಥೋಪಜೀವಿಗಳು ಸಮಗ್ರ ರಾತ್ರಿ ಹಾಡುವ ಸುಪ್ರಸಿದ್ಧ ಕಥೆಗಳ ವಿಸ್ತಾರ ಒಂದು ಬಗೆಯಾದರೆ, ನಾಡಿನ ಹೆಣ್ಣುಮಕ್ಕಳು ತಮ್ಮ ಬದುಕಿಗೆ ಹತ್ತಿರವಾದಂತೆ, ತಮ್ಮ ಹೃದಯದ ರಾಗ ಭಾವಗಳಿಗೆ

ಸಮೀಪವರ್ತಿಯಾದಂತೆ, ಹಾಡಿಕೊಳ್ಳುವ ಮನೋಜ್ಞ ಕಥನಗೀತೆಗಳ ವೈವಿಧ್ಯ ಇನ್ನೊಂದು ಬಗೆಯದು[೧೭] ಈ ಮಾತು ಕಥನಗೀತೆಗಳ ಪ್ರಸರಣ ವ್ಯಾಪ್ತಿಗೆ ಕನ್ನಡಿ ಹಿಡಿಯುತ್ತದೆ. ಲಾವಣಿ, ಕಥನಗೀತೆ, ದೀರ್ಘವಾದ ಖಂಡಕಾವ್ಯ ಮತ್ತು ಮಹಾಕಾವ್ಯದವರೆಗೆ ಹಬ್ಬಿದ ಜನಪದ ಕಥನಗೀತೆಗಳ ಪ್ರಪಂಚವನ್ನು ದೇ.ಜ.ಗೌ 'ಜನಪದ ಕಥನಕಾವ್ಯ'[೧೮] ಎಂದು ಕರೆದಿರುವುದು ಸೂಕ್ತವಾಗಿದೆ. ಇದರಿಂದ ಎಲ್ಲ ಬಗೆಯ ಜನಪದ ಕಥನಗೀತೆಗಳನ್ನು ಸೂತ್ರೀಕರಿಸಿದಂತಾಗುತ್ತದೆ. ಜನಪದ ಕಥನಕಾವ್ಯದ ವರ್ಗೀಕರಣ ಅಷ್ಟೊಂದು ಸುಲಭದ ಕಾರ್ಯವಲ್ಲ, ಆದುದರಿಂದ ಜನಪದ ಸಂವೇದನೆಯ ಪ್ರಮುಖ ಧ್ವನಿಯಾಗಿ ಪರಂಪರಾನುಗತವಾಗಿ ಲಾವಣಿಯ ರೂಪ ಕನ್ನಡ ಜನಪದವನ್ನು ಸೇರುವುದಕ್ಕೂ ಪೂರ್ವದ ಕಾಲದಿಂದಲೇ ಹರಿದು ಬಂದ ಕಥನಗೀತೆಗಳನ್ನು ಪ್ರತ್ಯೇಕವಾಗಿಯೇ ಪರಿಗಣಿಸುವುದು ಸೂಕ್ತ.

ಒಟ್ಟಾರೆ ಲಾವಣಿಗಳೆಲ್ಲ ಕಥನಗೀತೆಗಳಲ್ಲ. ಕೆಲವು ಲಾವಣಿಗಳಲ್ಲಿ ಕಥನ ಲಾವಣಿಗಳುಂಟು. ಕಥನಗೀತೆಗಳು ಖಂಡಕಾವ್ಯ, ಮಹಾಕಾವ್ಯದ ವ್ಯಾಪ್ತಿಯನ್ನು ಪಡೆದಿರುವುದರಿಂದ ಅವು ಲಾವಣಿಗಿಂತ ಭಿನ್ನ. 'ಲಾವಣಿಗಳೆಲ್ಲ ಕಥನಗೀತೆಗಳು ನಿಜ; ಆದರೆ ಕಥನಗೀತೆಗಳೆಲ್ಲ ಲಾವಣಿಗಳಲ್ಲ'[೧೯] ಎನ್ನುವ ಮಾತಿನಲ್ಲಿ ತಿದ್ದುಪಡಿ ಅಗತ್ಯ. ಲಾವಣಿಗಳಲ್ಲಿ ಕಥನ ಲಾವಣಿಗಳಿವೆ. ಆದರೆ ಕಥನಗೀತೆಗಳು ಲಾವಣಿಗಳಲ್ಲ. 'ಎರಡು ಜಾತಿಗಳಲ್ಲಿಯೂ ಕಥೆ ಮತ್ತು ಗೇಯತೆ ವಿಶಿಷ್ಟ ಲಕ್ಷಣಗಳಾದ್ದರಿಂದ 'ಲಾವಣಿ' ಎನ್ನುವ ಪದವನ್ನು ಕಥನಗೀತೆಗಳಿಗೆ ಅನ್ವಯಿಸುವುದರಲ್ಲಿ ತಪ್ಪೇನಿಲ್ಲ'[೨೦] ಆದರೆ 'ಲಾವಣಿ' ಪದವನ್ನು ಕಥನಗೀತೆಗಳ ಗುಂಪಿಗೆ ಸೇರಿಸುವಾಗ ಬರೀ 'ಲಾವಣಿ' ಪದವನ್ನಷ್ಟೇ ಅನಾಮತ್ತಾಗಿ ಬಳಸದೇ 'ಕಥನಲಾವಣಿ' ಎಂದು ಬಳಸಬೇಕು. ಆಗ ಕಲ್ಬುರ್ಗಿಯವರು ಗಮನಿಸಿದ 'ಹೊಸದೊಂದು ತೊಡಕು ಗೊಂದಲ'[೨೧] ಪರಿಹಾರವಾಗುತ್ತದೆ. ಹೀಗೆ ಕಥನಗೀತೆಗಳು ಮತ್ತು ಲಾವಣಿಗಳು ಒಂದೇ ಅಥವಾ ಬೇರೆ ಬೇರೆಯೇ ಎನ್ನುವುದರ ಬಗ್ಗೆ ವಿದ್ವಾಂಸರಲ್ಲಿಯೇ ಭಿನ್ನಾಭಿಪ್ರಾಯವಿರುವ ಕಾರಣ ಮತ್ತು ಅವು ನನಗೆ ಬೇರೆ ಬೇರೆಯಾಗಿಯೇ ಕಾಣಿಸುವುದರಿಂದ ಜನಪದ ಕಥನಗೀತೆಗಳನ್ನು ಬೇರೆಯಾಗಿಯೇ ವಿಭಾಗಿಸಿಕೊಂಡು ಅದರಲ್ಲಿ ವರ್ಗ ಸಂಘರ್ಷ ಹೇಗಿದೆ ಎನ್ನುವುದನ್ನು ಪ್ರಾತಿನಿಧಿಕವಾಗಿ ಕೆಲವು ಕಥನಗೀತೆಗಳನ್ನು ತೆಗೆದುಕೊಂಡು ನೋಡಲಾಗಿದೆ.

೩.೪.೧ ಹಾರುವಯ್ಯ ಮಾದಗಿತ್ತಿ ಹಾಡು

ಹಾರುವಯ್ಯ ಮಾದಗಿತ್ತಿ ಕಥನಗೀತೆಯಲ್ಲಿ ಮೇಲುಕುಲದ ಹಾರುವನೊಬ್ಬ ಕೆಳಕುಲದ ಅದರಲ್ಲೂ ಅಸ್ಪೃಶ್ಯವರ್ಗಕ್ಕೆ ಸೇರಿದ ಮಾದಿಗರ ಹೆಣ್ಣನ್ನು ಮೋಹಿಸುವುದಾಗಿದೆ. ಸಮಾಜ ವ್ಯವಸ್ಥೆಯಲ್ಲಿ ಕೆಳಜಾತಿಯ ಸ್ತ್ರೀ ಮೇಲುಜಾತಿಯವರಿಗೆ ದಾಸ-ದಾಸಿಯರಾಗಿರುತ್ತಾರೆ. ಹಾಗೂ ಮೇಲುಜಾತಿಯವರು ಕೆಳಜಾತಿಯವರನ್ನು ತಮ್ಮ ಸ್ವತ್ತೆಂದು ಭಾವಿಸಿರುತ್ತಾರೆ. ಇಂತಹ ಸಂದರ್ಭಗಳಲ್ಲಿ ಕೆಳವರ್ಗದ ಸ್ತ್ರೀಯ ಅಭಿಪ್ರಾಯಕ್ಕೆ ಆಸ್ಪದವಾಗಲಿ, ಅವಕಾಶವಾಗಲೀ ಇರುವುದಿಲ್ಲ.

ಪ್ರಸ್ತುತ ಕಥೆಯ ಪ್ರಾರಂಭದಲ್ಲಿ ಮಾದಿಗರ ಹೆಣ್ಣಿನ ಸೌಂದರ್ಯವನ್ನು ವರ್ಣಿಸಲಾಗಿದೆ. ಸೌಂದರ್ಯವತಿಯಾದ ಮಾದಿಗರ ಹೆಣ್ಣು ಒಂದು ದಿನ ನೀರು ತರಲು ಹೊರಟಿರುತ್ತಾಳೆ. ಅದೇ ದಾರಿಯಲ್ಲಿ ಒಬ್ಬ ಬ್ರಾಹ್ಮಣ ಜಪ ಮಾಡುತ್ತಾ ಕೂತಿರುತ್ತಾನೆ. ಇದ್ದಕ್ಕಿದ್ದ ಹಾಗೆ ಕಣ್ಣನ್ನು ತೆರೆದು ನೋಡಿದಾಗ ಸೌಂದರ್ಯವತಿ ಮಾದಿಗರ ಹೆಣ್ಣು ಕಾಣಿಸಿಕೊಳ್ಳುತ್ತಾಳೆ. ಆಗ ಬ್ರಾಹ್ಮಣನಿಗೆ ಆಕೆಯ ಮೇಲೆ ಮನಸ್ಸಾಗುತ್ತದೆ. ಮೋಹದ ಬಲೆಯಲ್ಲಿ ಬೀಳುತ್ತಾನೆ. ಆಗ ಎತ್ತ ಕಡೆಯೂ ಹೋಗದ ಹಾಗೆ ಆಕೆಯನ್ನು ತಡೆಹಿಡಿಯುತ್ತಾನೆ. ಆಗ ಮಾದಗಿತ್ತಿ

> **ಬ್ಯಾಡ ಬ್ಯಾಡಾರುವಯ್ಯ ಬ್ಯಾಡ ನನ್ನ ಗುರುವೆ**
> **ಇದುವೇನು ಹಾರುವಯ್ಯ ಈ ಕರುಮ ಈಗ**
> **ಮಾದಗಿತ್ತಿ ಸಂಗಾವು ನಿನಗೆ ಬ್ಯಾಡಾರುವಾ**
> **ಬ್ಯಾಡ ಕಾಣಾರುವಾ ಬೇಡಿಕೊಂಬೆನು ನಿನ್ನ**
> **ಮಾದಗಿತ್ತಿ ಅಂಬೋದ ಅರಿಯೇನೊ ಹಾರುವಾ ?**

ಹೀಗೆ ಮಾದಗಿತ್ತಿ ಮೇಲ್ಜಾತಿ ಮತ್ತು ಕೆಳಜಾತಿಗಳ ಮಧ್ಯೆ ಸಮಾಜದಲ್ಲಿರುವ ಅಂತರ ಎಂತದ್ದು, ಸಮಾಜದ ನೀತಿ ನಿಯಮಗಳೇನು? ತಾನೆಷ್ಟೇ ಸೌಂದರ್ಯವತಿಯಾಗಿದ್ದರೂ, ತಾನು ಕೆಳವರ್ಗಕ್ಕೆ ಸೇರಿದ ಹೆಣ್ಣು ಎನ್ನುವುದನ್ನು ಬ್ರಾಹ್ಮಣನಿಗೆ ಮನದಟ್ಟು ಮಾಡಲು ಪ್ರಯತ್ನಿಸುತ್ತಾಳೆ. ನನ್ನ ಸಂಗ ನಿನಗೆ ಬೇಡಿ ನಾನು ಮಾದಗಿತ್ತಿ ಅದನ್ನಾದರೂ ನೀನು ಬಲ್ಲಿಯಾ? ಎನ್ನುವ ಪ್ರಶ್ನೆ ಕೇಳುವುದರ ಮುಖಾಂತರ ಸಮಾಜದಲ್ಲಿ ಬೇರೂರಿರುವ ಜಾತಿ,ವರ್ಗ, ವರ್ಣದ ಇತಿ-ಮಿತಿಗಳನ್ನು ವಿವರಿಸುತ್ತಾಳೆ. ಇದಕ್ಕೆ ಪ್ರತಿಯಾಗಿ ಬ್ರಾಹ್ಮಣ ಆಕೆಯ ಸೌಂದರ್ಯವನ್ನು ಹೊಗಳುತ್ತಾನೆ. ಆಕೆಯನ್ನು ಸೂರ್ಯ, ಚಂದ್ರರಿಗೆ ಹೋಲಿಸುತ್ತಾನೆ. ಸಂದರ್ಭೋಚಿತವಾಗಿ ಆಕೆಯ ವರ್ಣನೆ ಮಾಡಿ ಆಕೆಯನ್ನು ದೈಹಿಕವಾಗಿ ಬಳಸಿಕೊಳ್ಳುವುದೇ ಅವನ ಬಯಕೆಯಾಗಿರುತ್ತದೆ. ಇದನ್ನು ಮುಂದಿನ ಸಾಲುಗಳು ಪುಷ್ಟೀಕರಿಸುತ್ತವೆ.

> **ಮಾದಗಿತ್ತಿ ನೀನಲ್ಲ ಮಾಯ್ಕಾರಿ ಹೆಣ್ಣು**
> **ಮಾದಗಿತ್ತಿ ಆದಾರೆ ಮತ್ತೆ ಒಳ್ಳೆದಾಯ್ತು**
> **ಮಾದಗಿತ್ತಿ ಸಂಗಾವು ಮಧ್ಯಾಹ್ನ ಸಾಕು**

ಮಾದಗಿತ್ತಿ 'ಸಂಗಾವು ಮಧ್ಯಾಹ್ನ ಸಾಕು' ಎಂಬ ಸಾಲನ್ನು ಹೆಚ್ಚಿನ ವಿಶ್ಲೇಷಣೆಗೆ ಒಳಪಡಿಸಿದಾಗ ಯಾವುದೇ ವಲಯದ ಮಾಲೀಕರು ತಮ್ಮಲ್ಲಿ ಬರುವ ಕೂಲಿ ಕಾರ್ಮಿಕರ ಹೆಣ್ಣು ಮಕ್ಕಳನ್ನು ಅನೈತಿಕವಾಗಿ ಬಳಸಿಕೊಂಡಿರುವ ಉದಾಹರಣೆಗಳನ್ನು ಕಾಣುತ್ತೇವೆ. ಅನಕ್ಷರಸ್ಥರಾದ, ಮುಗ್ಧರಾದ, ಬಡತನದ ಬೇಗೆಯಲ್ಲಿ ಬೆಂದಜೀವಗಳು ಶ್ರೀಮಂತಮಾಲೀಕರ ತೆವಲಿಗೆ ಅಸಹಾಯಕವಾಗಿ ಬಲಿಯಾಗಬೇಕಾಗಿದೆ. ಇಂತಹ ಸಂದರ್ಭದಲ್ಲಿ ಪ್ರತಿಭಟಿಸುವ ಶಕ್ತಿಯನ್ನು ಕೂಡ ಕೆಳವರ್ಗದ ಸ್ತ್ರೀಯರು ಹೊಂದಿರುವುದಿಲ್ಲ. ಈ ಕಥೆಯ ಬ್ರಾಹ್ಮಣನಿಗೆ ಮಾದಗಿತ್ತಿಯನ್ನು ಮದುವೆಯಾಗಬೇಕೆಂಬ ಯಾವ ಹಂಬಲವು ಇಲ್ಲ. ಕೇವಲ ಹಗಲಿನಲ್ಲಿ ಆಕೆಯನ್ನು ಬಳಸಿಕೊಳ್ಳುತ್ತೇನೆಂದು ಹೇಳುವಾಗ ತಾತ್ಕಾಲಿಕವಾದ ಲೈಂಗಿಕ ತೃಪ್ತಿಯನ್ನು

ಆಕೆಯಿಂದ ಬಯಸುತ್ತಿರುವುದು ಸ್ಪಷ್ಟವಾಗಿದೆ. ಬ್ರಾಹ್ಮಣನಿಗೆ ಮದುವೆಯಾಗಬೇಕೆಂಬ ಮನಸ್ಸಿದ್ದಿದ್ದರೆ ಆಕೆಯ ಸಂಗ ಮಧ್ಯಾಹ್ನ ಸಾಕೆಂದು ಹೇಳುತ್ತಿರಲಿಲ್ಲ. ಆದರೂ ಮುಂದಿನ ಸಾಲುಗಳಲ್ಲಿ 'ನಿನ್ನೆಡಪಾದದಡಿಯೆ ಎನ್ನ ಸಿರಸಕಡಿವೆ' ಎನ್ನುತ್ತಾನೆ. ಆಕೆಯ ನಂಬಿಕೆಯನ್ನು ಗಳಿಸಲು ಬಹಳಷ್ಟು ಪ್ರಯತ್ನಿಸುತ್ತಾನೆ. ಬ್ರಾಹ್ಮಣ ಎಷ್ಟೇ ಪ್ರಯತ್ನಪಟ್ಟರೂ ತಾನು ಮಾದಗಿತ್ತಿ ಕೆಳವರ್ಗಕ್ಕೆ ಸೇರಿದವಳೆಂದು ಒತ್ತಿಒತ್ತಿ ಹೇಳುತ್ತಾಳೆ. ಹಾಗೂ ಬ್ರಾಹ್ಮಣ ತನ್ನಿಂದ ದೂರವಾಗಲೆಂದು ಮಾದಗಿತ್ತಿ ಹೀಗೆನ್ನುತ್ತಾಳೆ.

ನನ್ನಿಂದೆ ನೀ ಬಂದರೆ ಹೆಂಡ ಕುಡಿಯಲು ಬೇಕು
ಹೆಂಡ ಕುಡಿಯಲು ಬೇಕು ಕಂಡ ಕಚ್ಚಲು ಬೇಕು
ಬ್ಯಾಡಯ್ಯ ಹಾರುವಯ್ಯ ಮಾದಗಿತ್ತಿ ಸಂಗಾವು

ಕೆಳಜಾತಿ, ಕೆಳವರ್ಗದ ಜನ ಮೂಲತಃ ಮಾಂಸಹಾರಿಗಳು. ಬ್ರಾಹ್ಮಣರು ಸಸ್ಯಹಾರಿಗಳು. ಹೆಂಡ ಕುಡಿಬೇಕು, ಕಂಡ ಕಚ್ಚಬೇಕು. ಹೀಗೆ ಹೇಳಿದರಾದರೂ ಮೂಲತಃ ಸಸ್ಯಹಾರಿಯಾದ ಬ್ರಾಹ್ಮಣ ತನ್ನಿಂದ ದೂರವಾಗುತ್ತಾನೇನೋ ಎಂದ್ಹೇಳುತ್ತಾಳೆ. ಆದರೆ ಬ್ರಾಹ್ಮಣ ಅದಕ್ಕೂ ಒಪ್ಪಿಗೆಯನ್ನು ಸೂಚಿಸುತ್ತಾನೆ. ಆಕೆ ಕುಡಿಯುವ ಹೆಂಡ ಆಕೆ ಕಚ್ಚೊ ಕಂಡವನ್ನೇ ಕಚ್ಚುತ್ತೇನೆನ್ನುತ್ತಾನೆ. ಹೀಗೆ ಹೇಳಿದ ಬ್ರಾಹ್ಮಣ ಆಕೆಯ ಸೆರಗನ್ನು ಹಿಡಿಯುತ್ತಾನೆ. ಆಗ ಮಾದಗಿತ್ತಿ ಗಾಬರಿಯಾಗಿ

ಬ್ಯಾಡ ಬ್ಯಾಡ ಹಾರುವಯ್ಯ ಬೇಡಿಕೊಂಬೆನು ನಿನ್ನ
ನಮ್ಮಣ್ಣೋರು ಕಂಡಾರೆ ಏನ ಮಾಡಿಸ್ಯಾರು?
ನಮ್ಮಪ್ಪೋರು ಕಂಡಾರೆ ಹೇಗೆ ಬಿಟ್ಟಾರು?
ಕುಲವಲ್ಲದ ಕುಲವ ಜಾತಿ ಕೆಡಿಸ್ಯಾರು
ಜಾತಿನ್ನ ಕೆಡಿಸ್ಯಾರು ರೀತಿ ಕೆಡಿಸ್ಯಾರು

ತನ್ನಪ್ಪ, ಅಣ್ಣ ಇದಕ್ಕೆ ಸಮ್ಮತಿಸುವುದಿಲ್ಲ. ಮೇಲಾಗಿ ಕುಲ, ಜಾತಿ, ಕೆಟ್ಟುಹೋಗುತ್ತದೆ. ಸಮಾಜದ ನೀತಿ ನಿಯಮಗಳನ್ನು ಮೀರಿದ ಹಾಗಾಗುತ್ತದೆ ಎಂದು ಸೆರಗನ್ನು ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಾಳೆ. ಆದರೆ ಹಾರುವಯ್ಯ ಆಕೆಯನ್ನು ಹೇಗಾದರೂ ಮಾಡಿ ಪಡಿಯಲೇಬೇಕು ಎಂದು ನಿರ್ಧರಿಸಿ

ನಾ ಜಾತಿ ಕೆಟ್ಟರೂ ಸರಿಯೆ ರೀತಿಗೆಟ್ಟರೂ ಸರಿಯೆ
ನಿನ್ನಿಂದ ನಾನು ಬರುವುದೇ ಸರಿಯೇ

ಹೀಗೆ ಹೇಳಿ ಆಕೆ ದೇಹ ಸೌಂದರ್ಯದ ವರ್ಣನೆಯನ್ನು ಮಾಡುತ್ತಾನೆ. ತಲೆಬುಗರಿಯ ಚೆಂಡು, ಕಣ್ಣುಕಾಡಿಗೆ ಭರಣಿ, ಬಾಯಿ ಬಚ್ಚರಣೆ ಭರಣಿ, ಹಣ್ಣು ದಾಳಿಂಬೆ ಬೀಜ, ತುಟಿ ತೊಂಡೆಯ ಹಣ್ಣು, ತೋಳು ಬಾಳೆಯ ದಿಂಡು, ತೊಡೆ ಕದಳೀಯ ಕಂಬ, ಬೆನ್ನು ಬೆತ್ತದ ಹಲಿಗೆ, ಸೊಂಟ ನಾಗರಾವಿನ ಸೊಂಟ ನೀನು ಸೂರ್ಯ ಚಂದ್ರರಿಗೆ ಸಮಾನ. ಹೀಗೆಂದು ವರ್ಣಿಸಿದ ಬ್ರಾಹ್ಮಣ ತೊಡೆಮ್ಯಾಲೆ ತೊಡೆ ಹಾಕಿ ಮಾತಾಡು ಬಾರೆಂದು ಕರೆಯುತ್ತಾನೆ. ನಂತರ ಇಬ್ಬರು ಕೂಡಿ ಬ್ರಾಹ್ಮಣನ ತಾಯಿ ಇದ್ದಲ್ಲಿಗೆ ಹೋಗುತ್ತಾರೆ. ಆಗ ತಾಯಿಗೆ ದಿಗ್ಭ್ರಾಂತವಾಗುತ್ತದೆ.

ಏನಪ್ಪ ಎಲೆಮಗನೆ ಏನಪ್ಪ ಇದು ಕರುಮ?
ಮಾದಗಿತ್ತಿ ಅಂಬೋದ ಅರಿಯೇನೊ ಮಗನೆ?
ಇದುವೇನೊ ಎಲೆಮಗನೆ ಈ ಕರುಮ ಈಗ?

ಹೀಗೆ ಆಶ್ಚರ್ಯದಿಂದ ಅಸಹಜವಾದ ದೃಶ್ಯಕ್ಕೆ ಪ್ರತಿಕ್ರಿಯಿಸುತ್ತಾಳೆ. ಮಾದಗಿತ್ತಿ ಮತ್ತು ಬ್ರಾಹ್ಮಣನ ತಾಯಿ ಇಬ್ಬರೂ ಸ್ತ್ರೀ ವರ್ಗಕ್ಕೆ ಸೇರಿದ್ದರೂ, ಸಮಾಜದ ಜಾತಿ, ವರ್ಗಗಳ ಶ್ರೇಣೀಕೃತ ವ್ಯವಸ್ಥೆಯಲ್ಲಿ ಬ್ರಾಹ್ಮಣನ ತಾಯಿ ಮೇಲ್‌ಸ್ಥರದಲ್ಲಿದ್ದರೆ, ಮಾದಗಿತ್ತಿ ಕೆಳಸ್ಥರದಲ್ಲಿರುತ್ತಾಳೆ. ಆದ್ದರಿಂದ ಬ್ರಾಹ್ಮಣನ ತಾಯಿ ಈ ಸಂಬಂಧಕ್ಕೆ ತನ್ನ ಸಹಮತವನ್ನು ವ್ಯಕ್ತಪಡಿಸುವುದಿಲ್ಲ. ಇದು ಕರ್ಮ. ಇದು ತರವಲ್ಲವೆಂಬ ಅಭಿಪ್ರಾಯವನ್ನು ತಾಳುತ್ತಾಳೆ. ಆಗ ಬ್ರಾಹ್ಮಣ, ತನ್ನ ತಾಯಿಯ ಮುಂದೆ ಮಾದಗಿತ್ತಿಯನ್ನು ಮತ್ತೆ ಸೂರ್ಯ ಚಂದ್ರರಿಗೆ ಹೋಲಿಸುತ್ತಾನೆ. ಆಗ ತಾಯಿ ಇದಕ್ಕೆ ಪ್ರತಿಕ್ರಿಯಿಸದೇ ಅವನ ಜಾತಿ, ಕುಲವನ್ನು ನೆನಪಿಸುವ ಮಾತುಗಳನ್ನಾಡುತ್ತಾಳೆ.

ಬಾಡೀನ ಮಡಿಕ್ಯಾಗೆ ನೀರಾನೆ ಕಾಸೀವಿ
ಜನಿವಾರ ತಗುದಾಕಿ ತಾನ ಮಾಡುಬಾರೊ
ಅತ್ತಿ ಆಲದ ಮರದಡಿ ಎತ್ತುಕರ ಸತ್ತಾವೆ
ಕತ್ತಿ ಚೂರಿ ತಕ್ಕೊಂಡು ಕುಯ್ಬಾರೊ ಹಾರುವ
ರಕ್ತ ಕುಸುವಿದ ಗಡಿಗ್ಯಾಗೆ ನೀರಾವ ಕಾಸೀವಿ
ಜನಿವಾರ ಬಿಚ್ಚಿಟ್ಟು ಜಪಮಾಡು ಬಾರೊ
ಎಣ್ಣೆ ಹಚ್ಚಿ ಮಾಡೀವಿ ಬಾರುಕೋಲಾ?
ಅಣ್ಣಾನೋರ ಸಂತಿಗ್ಹೋಗಿ ಮಾರಿಕಂಬಾರೊ ಹಾರುವಯ್ಯ
ತುಪ್ಪ ಹಚ್ಚಿ ಮಾಡೀವಿ ಇಪ್ಪತ್ತು ಬಾರಕೋಲ
ಅಪ್ಪನೋರ ಸಂತಿಗ್ಹೋಗಿ ಮಾರಿಕಂಬಾರೊ ಹಾರುವಯ್ಯ
ಹಣ್ಣೆನಂತ ಹಾರುವಯ್ಯ, ಕುಲಗೆಟ್ಟ ನನ್ನಾರುವಯ್ಯ
ಅಣ್ಣನೋರ ಸಂತಿಗ್ಹೋಗಿ ಮಾರಿಕಂಬಾರೊ ಹಾರುವಯ್ಯ

ಹೀಗೆ ಅವರ ಕುಲ, ಕಸುಬು ಮತ್ತು ಅವರ ಸಂಪ್ರದಾಯಗಳನ್ನು ನೆನಪಿಸುತ್ತಾಳೆ. ಆದರೆ 'ಹಾರುವಯ್ಯ ಆಮೇಲೆ ಏನು ಮಾಡಿದ? ಮಾದಿಗರ ಜಾತಿಯ ಕಸಬನ್ನು ಮಾಡಿದನೆ? ಆಕೆಯನ್ನು ಕೂಡಿದನೆ? ಮದುವೆಯಾದನೆ? ಈ ಪ್ರಶ್ನೆಗಳಿಗೆ ಸ್ಪಷ್ಟ ಉತ್ತರ ಸಿಕ್ಕುವುದಿಲ್ಲ'[೨೨] ವೆಂದು ಹೇಳುತ್ತಾರೆ.

ಆದರೆ ಮುದ್ದೇಬಿಹಾಳ ತಾಲ್ಲೂಕು ಮೂಕಿಹಾಳದ ಭಜನಾ ಮಂಡಳಿಯವರು ಭಜನೆ ಮಟ್ಟಿನಲ್ಲಿ ಹೀಗೆ ಹಾಡುತ್ತಾರೆ.[೨೩]

ಏನ್ ಸೋತಿನಪ್ಪ ಮಾದ್ರಾಕಿಗೆ
ನಾ ಎಂತ ಮನಸು ಕೊಟ್ಟಿನಪ್ಪ ಮಾನ್ಗೇಡಿಗೆ

ಬಹುಶಃ ಬ್ರಾಹ್ಮಣನಿಗೆ ಪ್ರಥಮನೋಟದಲ್ಲಿ ಆಕೆಯ ಬಗೆಗಿದ್ದ ಕಲ್ಪನೆ ಕಾಲಾನಂತರದಲ್ಲಿ ಹೊರಟುಹೋಗಿರಬೇಕು. ಆದ್ದರಿಂದಲೇ ಮಾದಗಿತ್ತಿಗೆ ಮನಸ್ಸು ಕೊಡಬಾರದಾಗಿತ್ತೆಂದು ವ್ಯಥೆಪಡುತ್ತಾನೆ. ಮತ್ತು

ಬಾಡ್ಡೇಸಿದ ಮಡಿಕ್ಯಾಗೆ ನೀರನ್ನು ಕಾಸ್ಯಾಳ
ಕೂಡಿ ಜಳ್ಕ ಮಾಡಾವಂದ್ರೆ ಕುಲದಲ್ಲಿ ಮಾದ್ರಾಕಿ
ಹೆಂಡರ ಗಡಿಗ್ಯಾಗ ದುಂಡಗಡ್ಬ ಮಾಡ್ಯಾಳ
ಕೂಡಿ ಊಟ ಮಾಡಾಣಾಂದ್ರೆ ಕುಲದಲ್ಲಿ ಮಾದ್ರಾಕಿ

ಕುಲ-ಕುಲಗಳ ಮಧ್ಯೆ, ಜಾತಿ-ಜಾತಿಗಳ ಮಧ್ಯೆ, ವರ್ಗ-ವರ್ಗಗಳ ಮಧ್ಯೆ ಇರುವ ವ್ಯತ್ಯಾಸ, ಅಂತರ ಅರಿವು ಅವನಿಗಾಗುತ್ತದೆ. ಮಾದಗಿತ್ತಿ ತನ್ನ ಮನೆಯಲ್ಲಿ ಪಾತ್ರೆಗಳ ಕೊರತೆಯಿಂದಾಗಿ ಅಡಿಗೆ ಮತ್ತು ನೀರು ಕಾಯಿಸುವುದು ಎರಡನ್ನು ಒಂದೇ ಪಾತ್ರೆಯಲ್ಲಿ ಮಾಡುತ್ತಿರುವಂತೆ ಬ್ರಾಹ್ಮಣನ ಮನೆಯಲ್ಲಿಯೂ ಮಾಡಲು ಕೋಪಕ್ಕೆ ತುತ್ತಾಗುತ್ತಾಳೆ. ಹಾಗೆಯೇ ಅವಳ ಜೊತೆಯಲ್ಲಿ ಸ್ನಾನ ಮಾಡಲು ಹಿಂಜರಿಯುತ್ತಾನೆ. ಏಕೆಂದರೆ ಮೂಲತಃ ಕುಲದಲ್ಲಿ ಆಕೆ ಮಾದರಗಿತ್ತಿ. ಹಾಗೆಯೇ ಬೇರೆ ಎಲ್ಲಾ ಕೆಲಸಗಳನ್ನು ತನ್ನ ತವರು ಮನೆಯಲ್ಲಿ ಮಾಡಿದಂತೆಯೇ ಮಾಡುತ್ತಿದ್ದುದರಿಂದ ಬ್ರಾಹ್ಮಣ ರೋಸಿ ಹೋಗಿರುತ್ತಾನೆ. ಆದರೂ ಈ ಹೊಯ್ದಾಟದಲ್ಲಿಯೇ ಇರಲಾರದೆ, ಮೋಹಿಸಿದ ಹೆಣ್ಣನ್ನು ಬಿಡುವ ಸ್ಥಿತಿಯಲ್ಲಿರದೆ, ಅತ್ತ ಮಾದಿಗರ ಬಾಳಿಗೆ ಹೊಂದಿಕೊಂಡು ಹೋಗಲೂ ಆಗದ ಅಸಾಧ್ಯ ಸ್ಥಿತಿಯಲ್ಲಿದ್ದು, ನಂಟು, ಗಂಟು ಎರಡನ್ನು ಉಳಿಸಿಕೊಳ್ಳುವ ಆಲೋಚನೆ ಮಾಡಿ ಮಾದಿಗರವಳೊಡನೆ ತನ್ನ ಮನೆಗೆ ಬಂದವನು

ಅಮ್ಮಮ್ಮ ನನ್ನೆತ್ತ ತಾಯೆ ಸೊಸೆಯ ತಂದಿವಿನಿ
ಸೊಸೆಯ ತಂದಿವಿನಿ ನೀರು ಕೊಡು ತಾಯಿ

ಎನ್ನುತ್ತಾನೆ. ತಾಯಿ ಕೊಟ್ಟ ನೀರು ಈಸಿಕೊಂಡು ಇಬ್ಬರೂ ಕೈಕಾಲು ಮುಖ ತೊಳೆದುಕೊಂಡರು. ಸೊಸೆಯ ಅಂದಚೆಂದವನ್ನು ತಾಯಿ ತಂದೆ ಮೆಚ್ಚಿಕೊಂಡರು. ಮದುವೆ ಮಾಡಿದರು.

ಹಾರುವಯ್ಯ ತಾಯಿ ತಂದೆ ಕುಂತು ಮಾತಾಡಿ
ನಿನ್ನಣೆಯಲಿ ಬರೆದ ಬರಣೇಕೆ
ನಾನು ಬರೆದಿದ್ದಲ್ಲ ನೀನು ಬರದಿದ್ದಲ್ಲ

ಇದು ಮಂಡೆಮ್ಯಾಲೆ ಬರದ ಬರಣೇಕ
ಆಕಾಶದಷ್ಟ ಹಸೆ ಬರೆದು ಭೂಮಿಯಷ್ಟೇ ಚಪ್ಪರಾಕಿ
ಹಾರುವಯ್ಯಗು ಮಾದಗಿತ್ತಿಗೂ ಮದುವೆಯ ಮಾಡ್ಯಾರೆ

ಆಕೆ ಮಾದಗಿತ್ತಿ ಎಂದು ತಿಳಿದೂ ಮದುವೆ ಮಾಡಿದರೆ? ಇರಲಾರದು. ಹಾರುವಯ್ಯ ಸುಳ್ಳು ಹೇಳಿರಬೇಕು. ಆಕೆಯ ರೂಪಿಗೆ ಮಾರುಹೋಗಿ ಈ ರೀತಿ ಸುಳ್ಳು ಹೇಳಿ ಮದುವೆ ಮಾಡಿಕೊಂಡಿರಬೇಕು.

ಈ ಕಥಾನಕದಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ ಕಥಾನಕದ ಮೂಲದಲ್ಲಿ ಮದುವೆಯಾಗುವುದಿಲ್ಲ. ಹಾರುವಯ್ಯ ಮತ್ತು ಮಾದಗಿತ್ತಿ, ಹಾರುವಯ್ಯನ ಮನೆಗೆ ಬಂದು ಹಾರುವಯ್ಯನ ತಾಯಿಯನ್ನು ಭೇಟಿಯಾದ ನಂತರ ಕಥೆ ಮುಕ್ತಾಯವಾಗುತ್ತದೆ. ಇದು ದಕ್ಷಿಣ ಕರ್ನಾಟಕದ ಜನಪದಕಾರರು ಹಾಡುವ ಹಾಡು. ಆದರೆ ಕಥೆಯ ಮುಂದಿನ ಭಾಗ ಹಾಡುವವರು, ಮುದ್ದೇಬಿಹಾಳ ತಾಲ್ಲೂಕು ಮೂಕಿಹಾಳದ ಭಜನಾಮಂಡಳಿಯವರು. ಇವರು ಉತ್ತರ ಕರ್ನಾಟಕ ಭಾಗಕ್ಕೆ ಸೇರಿದವರಾಗಿದ್ದಾರೆ. ಇಲ್ಲಿ ಉದ್ಭವಿಸುವ ಪ್ರಶ್ನೆಯೆಂದರೆ ದಕ್ಷಿಣ ಕರ್ನಾಟಕದ ಹಾಡುಗಾರರು ಹಾಡುವ ಹಾಡು ಮತ್ತು ಉತ್ತರ ಕರ್ನಾಟಕದ ಭಜನಾ ಮಂಡಳಿಯವರು ಹಾಡುವ ಹಾಡು, ಒಂದೇ ಬಗೆಯ ಹಾಡೇ? ಅಥವಾ ಬೇರೆ ಬೇರೆ ಹಾಡುಗಳೆ? ಅಲ್ಲಿಯ ಕಥಾನಕದ ಪಾತ್ರಗಳಿಗೂ ಇಲ್ಲಿಯ ಪಾತ್ರಗಳಿಗೂ ಸಾಮ್ಯತೆಯನ್ನು ಕಲ್ಪಿಸಬಹುದೇ? ಉತ್ತರ ಕರ್ನಾಟಕ ಭಾಗದ ಹಾಡುಗಾರರು, ದಕ್ಷಿಣ ಕರ್ನಾಟಕ ಭಾಗದ ಹಾಡುಗಾರರ ಸಂಬಂಧಿಕರೇ? ಈ ಎಲ್ಲಾ ಪ್ರಶ್ನೆಗಳು ಎದುರಾಗುತ್ತವೆ. ಏನೇ ಇರಲಿ ಹಾರುವಯ್ಯ ಮಾದಗಿತ್ತಿ ಕಥನಗೀತೆ ಸಮಾಜದ ಅಸಹಾಯಕ ವರ್ಗದ ಮಹಿಳೆಯ ಚಿತ್ರವನ್ನು ತೆರೆದಿಡುತ್ತದೆ.

೩.೪.೨ ವೀರದಿಮ್ಮವ್ವ

ವೀರದಿಮ್ಮವ್ವ ಕಥನ ಗೀತೆಯು ದಕ್ಷಿಣ ಕರ್ನಾಟಕದ ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ದಬ್ಬೆಘಟ್ಟ ಗ್ರಾಮದಲ್ಲಿ ನಡೆದಿರುವುದು. ದಬ್ಬೆಘಟ್ಟ ಗ್ರಾಮದ ಗೌಡನಾದ ನಂಜೇಗೌಡನಿಗೆ ಏಳು ಜನ ಮಕ್ಕಳು. ಅದರಲ್ಲಿ ಆರು ಜನ ಗಂಡು ಮಕ್ಕಳು. ಒಬ್ಬಳು ಮಾತ್ರ ವೀರದಿಮ್ಮವ್ವ ಎನ್ನುವ ಹೆಣ್ಣು ಮಗಳು. ಒಂದುದಿನ ವೀರದಿಮ್ಮವ್ವ ನೀರು ತರಲು ಬಾವಿಗೆ ಹೋಗುತ್ತಿದ್ದಾಗ ಬಾವಿಯ ಏರಿಮೇಲೆ ಬೇಡರ ಬಮ್ಮಣ್ಣ ಎಂಬ ಒಬ್ಬ ಯುವಕ ಕಾರೆಕಾಯನ್ನು ತಿಂದು ಎದೆಸೊಕ್ಕಿ ಬಿದ್ದಿರುತ್ತಾನೆ. ಬಾಲೆಯಾಗಿದ್ದ ದಿಮ್ಮವ್ವ ಬೇಡರ ಬಮ್ಮಣ್ಣನನ್ನು ಆ ಸ್ಥಿತಿಯಲ್ಲಿ ನೋಡಿ ಅವನನ್ನು ರಕ್ಷಿಸುವ ಸಲುವಾಗಿ ಎದೆ ಒತ್ತಿ ನೀರನ್ನು ಸವರಿ, ತಲೆಯನ್ನು ತಟ್ಟಿ, ಏಳಿಸಲು ಪ್ರಯತ್ನಿಸುತ್ತಾಳೆ. ತಿಮ್ಮವ್ವ ಇಷ್ಟೆಲ್ಲ ಪ್ರಯತ್ನಪಟ್ಟ ಮೇಲೆ ಆತ ಸಾವರಿಸಿಕೊಂಡು ಏಳುತ್ತಾನೆ. ತಾನು ಆ ಸ್ಥಿತಿಯಲ್ಲಿರುವುದನ್ನು ಮನಗಂಡು ಎಷ್ಟೊತ್ತು ಮಲಗಿದ್ದೇನೆಂದು ತಿಮ್ಮವ್ವಳಿಗೆ ಕೇಳುತ್ತಾನೆ. ಆಗ ತಿಮ್ಮವ್ವ

ಹೊಟ್ಟೆಗೂಟ ಇಲ್ಲವೇನು ಕಾರೆಕೆಂಗನು ತಿಂದು ತಂದನಾನು ತಾನೆ
ಎದೆಸೊಕ್ಕಿ ಬಿದ್ದಲ್ಲೊ ಬೇಡರ ಬಮ್ಮಣ್ಣ ತಂದನಾನು ತಾನೆ
ನಮ್ಮೂರಿಗೆ ಬಂದರೀಗ ಹೊಟ್ಟೆಗ್ಹಿಟ್ಟು ಕೊಡುತೀವಿ ತಂದನಾನು ತಾನೆ
ಹೊಟ್ಟೆಗ್ಹಿಟ್ಟು ಕೊಡುತೀವಿ ಉಡುವ ಬಟ್ಟೆ ಕೊಡುತೀವಿ ತಂದನಾನು ತಾನೆ
ದನವನಾದರು ಕಾಯತೀಯ ಕಸವನಾದರು ಗುಡುಸುತೀಯ? ತಂದನಾನು ತಾನೆ
ಹಂಗಂದ ಮಾತೀಗೆ ಒಪ್ಪಿದಾನೆ ಬಮ್ಮಣ್ಣ ತಂದನಾನು ತಾನೆ

ಹೀಗೆ ಒಬ್ಬ ಬಡ ಬೇಡನ ಸಹಾಯ ಮಾಡಲು ಮುಂದಾಗುತ್ತಾಳೆ. ತನ್ನೂರಿಗೆ ಬಂದರೆ ಹೊಟ್ಟೆಗೆ ಹಿಟ್ಟು, ಉಡಲು ಬಟ್ಟೆ, ದನಗಳನ್ನು ಮೇಯಿಸುವ ಕೆಲಸ ಹೀಗೆ ಅವನಿಗೆ ಬದುಕಲು ಬೇಕಾದ ಎಲ್ಲಾ ರೀತಿಯ ವ್ಯವಸ್ಥೆಯನ್ನು ಮಾಡಿಕೊಡುತ್ತೇನೆಂದು ಭರವಸೆ ನೀಡುತ್ತಾಳೆ. ಆಗ ಬಮ್ಮಣ್ಣ ಅದಕ್ಕೆ

ಸಮ್ಮತಿಯನ್ನು ಸೂಚಿಸುತ್ತಾನೆ. ತಿಮ್ಮವ್ವಳನ್ನು ಬಮ್ಮಣ್ಣ ಹಿಂಬಾಲಿಸಿಕೊಂಡು ಆಕೆಯ ಮನೆಗೆ ಬರುತ್ತಾನೆ.

ಹೊರ ಬಾಗಿಲಲ್ಲಿ ನಿಲ್ಲಿಸ್ಯಾಳೆ ಏನಂತ ಹೇಳುತಾಳೆ ತಂದನಾನು ತಾನೆ
ತಾಯಿ ತಂದೆಯನಾದರು ಕೇಳಿಕೊಂಡು ಬರುತೀನಿ ತಂದನಾನು ತಾನೆ
ಹೊರಬಾಗಿಲಲ್ಲಿ ನಿಲ್ಲಯ್ಯ ಎನುತಾಳೆ ತಿಮ್ಮವ್ವ ತಂದನಾನು ತಾನೆ

ಬಮ್ಮಣ್ಣ ಅಪರಿಚಿತ ಬೇಡ ಜನಾಂಗಕ್ಕೆ ಸೇರಿದ ಕೆಳವರ್ಗದ ಸಾಮಾನ್ಯ ಮನುಷ್ಯನಾದ್ದರಿಂದ ತಿಮ್ಮವ್ವಳ ಮನೆಯ ಒಳಗೆ ಸುಲಭವಾಗಿ ಅವನಿಗೆ ಪ್ರವೇಶ ಸಿಗುವುದಿಲ್ಲ. ತಿಮ್ಮವ್ವ ಅವನನ್ನು ಹೊರಬಾಗಿಲಲ್ಲೆ ನಿಲ್ಲುವಂತೆ ಹೇಳಿ ತಂದೆತಾಯಿಯರ ಅನುಮತಿ ಪಡೆದುಕೊಂಡು ಬರುತ್ತೇನೆಂದು ಮನೆಯ ಒಳಗೆ ಹೋಗುತ್ತಾಳೆ. ತಂದೆತಾಯಿಯ ಬಳಿ ಬಮ್ಮಣ್ಣನ ವಿಷಯ ಪ್ರಸ್ತಾಪ ಮಾಡಿ ಅವನಿಗೆ ಇರಲು ಅವಕಾಶ ಮಾಡಿಕೊಟ್ಟರೆ ಮನೆಯ ದನಕರುಗಳನ್ನು ಮೇಯಿಸಿಕೊಂಡಿರುತ್ತೇನೆಂದು ಅದರಿದ ತಮಗೆ ಅನುಕೂಲವಾಗುತ್ತದೆಂದು ಮನದಟ್ಟು ಮಾಡಿಕೊಡುತ್ತಾಳೆ. ಇದಕ್ಕೆ ತಂದೆ-ತಾಯಿಯರ ಅನುಮತಿ ಸಿಗುತ್ತದೆ. ಮಗಳ ಒಪ್ಪಿಗೆಯೇ ತಮ್ಮ ಒಪ್ಪಿಗೆಯೆಂದು ಹೇಳುತ್ತಾರೆ. ಆಗ ತಿಮ್ಮವ್ವಳು, ಬಮ್ಮಣ್ಣನಿಗೆ ಊಟ ಕೊಟ್ಟು

ದನಕರ ಒಂಬತ್ತು ರಾಸು ಒಡಕೊಂಡೆ ಹೋಗಬೇಕು ತಂದನಾನು ತಾನೆ
ಬೆಳಕಲ್ಲ ಬೆಟ್ಟದ ಕವಲಿಗೆ ಹೊಡೆಯಬೇಕು ತಂದನಾನು ತಾನೆ
ಹಂಗಂದ ಮಾತೀಗೆ ಒಪ್ಪಿದಾನೆ ಬಮ್ಮಣ್ಣ ತಂದನಾನು ತಾನೆ

ಒಂಬತ್ತು ರಾಸು ದನಕರುಗಳನ್ನು ಬೆಟ್ಟದ ಕವಲಿಗೆ ಹೊಡೆದುಕೊಂಡು ಹೋಗಬೇಕೆಂದು ಬಮ್ಮಣ್ಣನ ಕೆಲಸದ ವ್ಯಾಪ್ತಿಯನ್ನು ತಿಳಿಸುತ್ತಾಳೆ. ಬಮ್ಮಣ್ಣನು ತಿಮ್ಮವ್ವ ಹೇಳಿದ ಹಾಗೆಯೇ ಬೆಟ್ಟದ ತಪ್ಪಲಿಗೆ ದನಕರುಗಳನ್ನು ಹೊಡೆದುಕೊಂಡು ಹೋಗುತ್ತಾನೆ. ಅದೇ ದಾರಿಯಲ್ಲಿ ತಿಮ್ಮವ್ವಳ ಅಣ್ಣಂದಿರು ತಮ್ಮ ಹೊಲದಲ್ಲಿ ಕೆಲಸ ಮಾಡುತ್ತಾ ಕೆಲಸದಲ್ಲಿ ತಲ್ಲೀನರಾಗಿರುತ್ತಾರೆ. ಅವರಿಗೆ ಊಟ ತೆಗೆದುಕೊಂಡು ಹೋಗಿ ಕೊಡುವ ಜವಾಬ್ದಾರಿ ತಿಮ್ಮವ್ವಳಿಗಿರುತ್ತದೆ. ಹೀಗೆ ಆ ದಾರಿಯಲ್ಲಿ ತಿಮ್ಮವ್ವ ಊಟವನ್ನು ಹೊತ್ತುಕೊಂಡು ಹೋಗುತ್ತಿರಬೇಕಾದರೆ

ತಿಮ್ಮವ್ವ ಬರುವದನ್ನು ಬಮ್ಮಣ್ಣ ನೋಡುತಾನೆ ತಂದನಾನು ತಾನೆ
ಬೆಳಕಲ್ಲು ಬೆಟ್ಟದಿಂದ ದಡ್ಡನೆ ನೆಗುದಾನೆ ತಂದನಾನು ತಾನೆ
ದಡ್ಡನೆ ನೆಗುದಾನೆ ದುಬ್ಬಾನೆ ಧುಮುಕಾನೆ ತಂದನಾನು ತಾನೆ

ತಿಮ್ಮವ್ವಳ ಮೇಲಿನ ಆಸೆಯಿಂದ ಬೆಳಕಲ್ಲು ಬೆಟ್ಟದ ಮೇಲಿಂದ ನೆಗೆದು ತಿಮ್ಮವ್ವಳ ಮುಂದೆ ಬರುತ್ತಾನೆ.

'ತಿಮ್ಮವ್ವಳ ಮುಂಜೆರಗ ಹಿಡುದಾನೆ ಬಮ್ಮಣ್ಣ ತಂದನಾನು ತಾನೆ'

ತಿಮ್ಮವ್ವಳ ಸೌಂದರ್ಯಕ್ಕೆ ಮರುಳಾಗಿ ಆಕೆಯ ಮುಂಜೆರಗವನ್ನು ಹಿಡಿಯುತ್ತಾನೆ. ಆಗ ದಿಗ್ಭ್ರಾಂತಳಾದ ತಿಮ್ಮವ್ವ ದಿಕ್ತೋಚದೆ, ಆಶ್ಚರ್ಯಚಕಿತಳಾಗಿ ಆ ಸನ್ನಿವೇಶದಿಂದ ಪಾರಾಗಲು

ನನಗಿಂತ ಚೆಲುವೆಯ ತಂದು ಮದುವೆಯ್ಯ ಮಾಡಿಸೇನು ತಂದನಾನು ತಾನೆ
ನನ್ನ ಮುಂಜೆರಗ ಬಿಡಯ್ಯ ಎನುತಾಳೆ ತಿಮ್ಮವ್ವ ತಂದನಾನು ತಾನೆ

ತನಗಿಂತ ಚೆಲುವೆಯನ್ನು ತಂದು ಮದುವೆ ಮಾಡಿಸುತ್ತೇನೆ ತನ್ನ ಸೆರಗನ್ನು ಬಿಡೆಂದು ಬಮ್ಮಣ್ಣನಿಗೆ ವಿನಂತಿಸಿಕೊಳ್ಳುತ್ತಾಳೆ. ಆಕೆಗೆ ಸಾಮಾಜಿಕ ವ್ಯವಸ್ಥೆಯ ಕಟ್ಟುಕಟ್ಟಳೆಗಳು ಮತ್ತು ಮಿತಿಗಳ ಬಗ್ಗೆ ಅರಿವಿರುತ್ತದೆಂನಿಸುತ್ತದೆ. ಬಮ್ಮಣ್ಣ ಒಬ್ಬ ಕೆಲಸದಾಳಾಗಿ ಆಕೆಯ ಮನೆಯಲ್ಲಿರುತ್ತಾನೆ. ಮೇಲಾಗಿ ಬೇಡ ಜನಾಂಗಕ್ಕೆ ಸೇರಿದವನು ಈಕೆ ಜಮೀನ್ದಾರನ ಮಗಳು. ಇಬ್ಬರ ನಡುವಿನ ಅಂತರ ಸಾಮಾಜಿಕ ವ್ಯವಸ್ಥೆಯಲ್ಲಿ ಬಹಳಷ್ಟಿರುತ್ತದೆ. ಇಷ್ಟೆಲ್ಲಾ ತಿಮ್ಮವ್ವ ವಿನಂತಿಸಿಕೊಂಡರೂ

ಪಟ್ಟೆ ಸೆರಗೊಂದ ನೆಟ್ಟಾನೆ ಹರಿದಾನು ತಂದನಾನು ತಾನೆ
ಪುಟ್ಟಾಣಿ ಕುಪುಸಾವ ಪುಟ್ಟಾನೆ ಕಿತ್ತಾನೆ ತಂದನಾನು ತಾನೆ

ಆಕೆಯ ವಸ್ತ್ರಗಳನ್ನು ಹರಿಯುತ್ತಾನೆ. ತಿಮ್ಮವ್ವ ಅಸಹಾಯಕಳಾಗಿ ಶಿವಶ್ಲೋಕ ಜಪಿಸುತ್ತಾಳೆ. ನಿರ್ಜನವಾದ ಪ್ರದೇಶವಾದ್ದರಿಂದ ಆಕೆಗೆ ಬೇರೆ ದಾರಿ ಕಾಣಿಸುವುದಿಲ್ಲ. ಇಲ್ಲಿ ಬಮ್ಮಣ್ಣ ಮುಂದೆ ಮಾನಭಂಗ ಮಾಡಿದನಾ? ಅಥವಾ ಕೇವಲ ವಸ್ತ್ರಗಳನ್ನು ಹರಿದು ಬಿಟ್ಟುಬಿಟ್ಟನಾ? ಇದನ್ನು ಜನಪದಕಾರ ನಮ್ಮ ಊಹೆಗೆ ಬಿಟ್ಟುಬಿಡುತ್ತಾನೆ. ಮುಂದೆ ತಿಮ್ಮವ್ವ ಊಟವನ್ನು ಹೊತ್ತುಕೊಂಡು ಅಣ್ಣಂದಿರ ಬಳಿಗೆ ಹೋಗುತ್ತಾಳೆ. ಊಟವನ್ನು ಇಳಿಸಲು ಬಂದ ಕಿರಿಯ ಅಣ್ಣ ಆಕೆಯ ಕುಪ್ಪಸ ಹರಿದಿರುವುದನ್ನು ಗಮನಿಸಿ, ಕುಪ್ಪಸ ಹರಿದಿರಲು ಕಾರಣವೇನೆಂದು ಪ್ರಶ್ನಿಸುತ್ತಾನೆ. ಅದಕ್ಕೆ ತಿಮ್ಮವ್ವ

ಅಣ್ಣಯ್ಯ ಅಣ್ಣಯ್ಯ ನಾನು ಬರುವಂಥ ದಾರಿಲ್ಲಿ ತಂದನಾನು ತಾನೆ
ಸೀಗೆಮೆಳೆಗೆ ಸಿಕ್ಕಿ ಹರಿದೋಯ್ತು ಅಣ್ಣಯ್ಯ ತಂದನಾನು ತಾನೆ
ಬಿದುರುಮೆಳೆಗೆ ಸಿಕ್ಕಿ ಹರಿದೋಯ್ತು ಅಣ್ಣಯ್ಯ

ನಡೆದ ಘಟನೆಯನ್ನು ಹೇಳಲು ಹಿಂಜರಿಯುತ್ತಾಳೆ. ಇಲ್ಲಿ ತಿಮ್ಮವ್ವ ಸುಳ್ಳು ಹೇಳಲು ಕಾರಣ ಬಮ್ಮಣ್ಣನನ್ನು ಉಳಿಸಿಕೊಳ್ಳಲೋ? ಬಮ್ಮಣ್ಣನ ಮೇಲಿನ ಪ್ರೀತಿಗೋ? ಅಣ್ಣಂದಿರು ಕೋಪಿಷ್ಠರು ವರ್ಗತಾರತಮ್ಯದ ಹಿನ್ನಲೆಯಲ್ಲಿ ಅವರೇನಾದರೂ ಬಮ್ಮಣ್ಣನನ್ನು ಸಾಯಿಸಿ ಬಿಡುತ್ತಾರೋ ಎನ್ನುವ ಕಾರಣಕ್ಕೋ? ಅಥವಾ ತಿಮ್ಮವ್ವಳ ಸ್ವಭಾವ ನಡವಳಿಕೆಯ ಬಗ್ಗೆ ಅನುಮಾನ ಬರುತ್ತದೆಂಬ ಕಾರಣಕ್ಕೋ? ಇಂತಹ ಪ್ರಶ್ನೆ ಇಲ್ಲಿ ಏಳುತ್ತದೆ. ಒಟ್ಟಿನಲ್ಲಿ ತಿಮ್ಮವ್ವ ಅಣ್ಣಂದಿರ ಬಳಿ ಸುಳ್ಳೇಳುತ್ತಾಳೆ. ಕುಪ್ಪಸ ಸೀಗೆ ಮೆಳೆಗೆ ಸಿಕ್ಕಿ ಹರಿದೋಯ್ತು ಎಂದೆನ್ನುತ್ತಾಳೆ. ಬಿದುರು ಮೆಳೆಗೆ ಸಿಕ್ಕಿ ಹರಿದೋಯ್ತು ಎನ್ನುತ್ತಾಳೆ. ಆರು ಜನ ಅಣ್ಣಂದಿರು ಒಟ್ಟಿಗೆ ಕುಳಿತು ಚರ್ಚಿಸಿ ತಿಮ್ಮವ್ವಳಿಗೆ ಮನೆಗೆ ಹೋಗಲು ಹೇಳುತ್ತಾಳೆ. ತಿಮ್ಮವ್ವ ವೇಗವಾಗಿ ಮನೆಯ ಕಡೆ ಬರುತ್ತಿರಬೇಕಾದರೆ

ಬರುವಂತ ಹಾದೀಲಿ ದೊಡ್ಡಮನುಸೆನಾಗವಳೆ ತಂದನಾನು ತಾನೆ
ದೊಡ್ಡಮನಸೆನಾಗವಳೆ ರುತುಮನುಸೆನಾಗವಳೆ ತಂದನಾನು ತಾನೆ

ಋತುಮತಿಯಾಗಿ ದೊಡ್ಡವಳಾಗುತ್ತಾಳೆ. ಇಂತಹ ಸ್ಥಿತಿಯಲ್ಲಿ ಮನೆಗೆ ಬಂದು ಮನೆಯ ಹೊರಬಾಗಿಲಲಿ ನಿಂತುಕೊಂಡು ಬಿಡುತ್ತಾಳೆ. ಇದನ್ನು ಗಮನಿಸಿದ ಸಾರು ಜನ ಅತ್ತಿಗೆಯರು " ತಮಗೆ ಇರುವವಳೊಬ್ಬಳೇ ನಾದಿನಿಯಾದ್ದರಿಂದ ಆಕೆಯನ್ನು ಗುಡಿಲಿಗೆ ಕೂಡಿಸಬೆಕು. ಒಸಿಗೆಯನ್ನು ಮಾಡಬೇಕೆಂದು ನಿರ್ಧರಿಸುವರು. ಬಹಳ ಖುಷಿಯಿಂದ ಎಲ್ಲಾ ಅತ್ತಿಗೆಯರು ಶುಭಕಾರ್ಯಕ್ಕೆ ಬೇಕಾದ ಸಾಮಾನು ಸರಂಜಾಮುಗಳನ್ನು ತರಿಸಿಕೊಳ್ಳುವರು. ಸಂಭ್ರಮದಿಂದ ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಂಡು ಆರುಜನ ಅಣ್ಣಂದಿರು ಕಾವಲಿರುತ್ತಾರೆ. ಆರು ಜನ ಅತ್ತಿಗೆಯರು ಗುಡಲೀಗೆ ಕೂಡುವರು. ಬೇರೆ ಯಾರ ಆಗಮನವೂ ಆಗದಂತೆ ನೋಡಿಕೊಳ್ಳಲು ಎಲ್ಲಾ ರೀತಿಯ ವ್ಯವಸ್ಥೆಯನ್ನು ಮಾಡಿಕೊಳ್ಳುವರು. ಹೀಗಿರಬೇಕಾದರೆ ಬಮ್ಮಣ್ಣ ದನಕರುಗಳನ್ನು ಹೊಡೆದುಕೊಂಡು ಬಂದು ದೊಡ್ಡಿಯಲ್ಲಿ ಕೂಡಿಹಾಕಿ ಓರೆಗಣ್ಣಿನಿಂದ ತಿಮ್ಮವ್ವಳ ಗುಡಲನ್ನು ನೋಡುವನು. ಹಾಗೆ ನೋಡಿದ ಬಮ್ಮಣ್ಣ ಪ್ಯಾಟೆ ಬೀದಿಗೆ ಬಂದು ಕಡಲೆಬೆಲ್ಲವನ್ನು ತೆಗೆದು ಪೊಟ್ಟಣವನ್ನು ಕಟ್ಟಿಸುವನು. ಹರುಕಲ ಜೇಬಿಗೆ ಹುರುಗಡಲೆ ತುಂಬಿಕೊಂಡು ಬಂದು ತಿಮ್ಮವ್ವಳ ಗುಡಲೀಗೆ ನುಗ್ಗುವನು. ಆಗ

ಗುಡಲೀಗೆ ನುಗುತಾನೆ ಬೇಡರ ಬೇಡರ ಬಮ್ಮಣ್ಣ ತಂದನಾನು ತಾನೆ
ದಡ್ಡನೆ ಒದ್ದಾಳೆ ತುಪ್ಪಾನೆ ಬಿದ್ದಾನೆ ತಂದನಾನು ತಾನೆ
ಏನೆ ತಿಮ್ಮವ್ವ ದಡ್ಡನೆ ಒದ್ಯಲ್ಲೆ? ತಂದನಾನು ತಾನೆ
ದಡ್ಡಾನೆ ಒದ್ದೈಲ್ಲೆ ದುಪ್ಪಾನೆ ಬಿತ್ತಲ್ಲೆ? ತಂದನಾನು ತಾನೆ
ಅಣ್ಣಯ್ಯ ಅಣ್ಣಯ್ಯ ಅಗಸಾರ ಕತ್ಯಪ್ಪಾ ತಂದನಾನು ತಾನೆ

ಗುಡಲೀಗೆ ನುಗ್ಗಿದ ಬಮ್ಮಣ್ಣನನ್ನು ತಿಮ್ಮವ್ವ ಜೋರಾಗಿ ಒದೆಯುವಳು. ಜೋರಾದ ಶಬ್ದ ಕೇಳಿದ ಅಣ್ಣಂದಿರು 'ಏನೆ ತಿಮ್ಮವ್ವ ದಡ್ಡನೆ ಒದ್ಯಳೆ' ಎಂದು ಕೇಳುತ್ತಾಳೆ. ತಂಗಿಯನ್ನು ಕಾಯುತ್ತಿದ್ದ ಅಣ್ಣಂದಿರ ಪ್ರಶ್ನೆಗೆ ವಾಸ್ತವವನ್ನು ಮರೆಮಾಚಿ 'ಅಗಸರ ಕತ್ತೆ' ಬಂದಿತ್ತು. ಅದಕ್ಕೆ ಒದ್ದೆ ಎಂದು ಉತ್ತರಿಸುತ್ತಾಳೆ. ಗುಡಲ ಸೊಪ್ಪಿಗೆ ಬಂದ ಕತ್ತೆಗೆ ಒದ್ದೆ ಎಂದಾಗ ಅಣ್ಣಂದಿರು ಸುತ್ತಮುತ್ತೆಲ್ಲಾ ಹುಡುಕಾಡುತ್ತಾರೆ. ಎಲ್ಲೋ ಒಂದು ಕಡೆ ಅಣ್ಣಂದಿರಿಗೆ ಅನುಮಾನ ಮೂಡುತ್ತದೆ. ಆದ್ದರಿಂದ ತಂದೆಯ ಬಳಿ ಬಂದು

ನಮತಂಗಿ ತಿಮ್ಮವ್ವ ಮಡಗೋದು ಸರಿಯಲ್ಲಾ ತಂದನಾನು ತಾನೆ
ನಮ್ಮಪಟ್ಟುಣಕ್ಕೆ ಕೆಟ್ಟೆಸರು ಬರುತ್ತೈತೆ ಎನ್ನುತಾರೆ ತಂದನಾನು ತಾನೆ

ತಂಗಿ ತಿಮ್ಮವ್ವಳಿಗೆ ಮದುವೆ ಮಾಡಬೇಕೆಂಬ ಪ್ರಸ್ತಾಪ ಮಾಡಿದಾಗ ತಂದೆ ಸಕಾರಾತ್ಮಕವಾಗಿ ಸ್ಪಂದಿಸುತ್ತಾರೆ. ತತ್‌ಕ್ಷಣದಲ್ಲಿಯೇ ಮಾವನಗೆ ಪತ್ರಬರೆದು 'ನನ್ನ ಮಗಳಿಗೆ ನಿಮ್ಮಮಗನ ಜೊತೆ ಮದುವೆ' ಮಾಡಿಕೊಡುತ್ತಾನೆ. ನಿಮ್ಮ ಮಗನನ್ನು ಕರೆದುಕೊಂಡು ಬನ್ನ ಎಂದಾಗ ಮಾವನ ಮಗನನ್ನು ದಂಡು ದಳವಾಯಿಯೊಂದಿಗೆ ನಂಜೇಗೌಡರ ಊರಿಗೆ ಕರೆದುಕೊಂಡು ಬರುತ್ತಾರೆ. ನಂಜೇಗೌಡರು ಅದ್ದೂರಿಯಾಗಿ ತಮ್ಮ ಮಗಳ ಮದುವೆಯನ್ನು ಮಾಡುತ್ತಾರೆ. ಮದುವೆಯ ನಂತರ

ತಿಮ್ಮವ್ವಳ ಅತ್ತೆ, ಮಾವ, ಮಗ ಮತ್ತು ಸೊಸೆಯನ್ನು ತಮ್ಮ ಜೊತೆ ಕಳಿಸಿಕೊಡುವಂತೆ ಕೇಳುತ್ತಾರೆ. ಆದರೆ ನಂಜೇಗೌಡರು 'ನನಗೆ ಇರುವವಳು ಒಬ್ಬಳೇ ಮಗಳಾದ್ದರಿಂದ ಒಂದು ತಿಂಗಳು ಅಳಿಯ-ಮಗಳನ್ನು ಮನೆಯಲ್ಲಿಯೇ ಇಟ್ಟುಕೊಂಡು ಆನಂತರ ಕಳುಹಿಸಿಕೊಡುತ್ತೇನೆ' ಎನ್ನುತ್ತಾರೆ. ಆಗ ತಿಮ್ಮವ್ವಳ ಅತ್ತೆ-ಮಾವ ದಂಡು ದಳವಾಯಿಯನ್ನೆಲ್ಲಾ ಕಟ್ಟಿಕೊಂಡು ಸಮ್ಮ ಪಟ್ಟಣಕ್ಕೆ ವಾಪಸ್ಸಾಗುತ್ತಾರೆ. ಒಂದು ತಿಂಗಳು ಕಳೆಯುತ್ತದೆ.

ತಿಂಗಾಳೆ ತುಂಬಿದಾವು ಕಳಿಗಾದರು ಕೊಡಬೇಕು ತಂದನಾನು ತಾನೆ
ನಮಗೆ ಇರುವಾಳೊಬ್ಬಳೆ ಮಗಳು ಕಳಿಸ್ದಂಗೆ ಇರುವದು ತಂದನಾನು ತಾನೆ

ಮಗಳನ್ನು ಕಳುಹಿಸಿ ಕೊಡಬೇಕಾದ ಅನಿವಾರ್ಯ ಸಂದರ್ಭ ನಂಜೇಗೌಡರಿಗೆ ಒದಗಿಬರುತ್ತದೆ. ನಂಜೇಗೌಡರು ಚಿಂತಾಕ್ರಾಂತರಾಗುತ್ತಾರೆ. 'ಇರುವವಳೊಬ್ಬಳೆ ಮಗಳು ಆಕೆಯನ್ನು ಕಳುಹಿಸಿ ಇರುವುದಾದರೆ ಹೇಗೆಂಬ ಚಿಂತೆ ಅವರನ್ನು ಆಕ್ರಮಿಸುತ್ತದೆ. ಮೃಷ್ಟಾನ್ನ ಭೋಜನ ಮಾಡಿಸಿ ಮಗಳನ್ನು ನಂಜೇಗೌಡರು ಕಳುಹಿಸಿಕೊಡುತ್ತಿರುವ ಸಂದರ್ಭದಲ್ಲಿ

ತಂದೆಯ ಪಾದಕ್ಕೆ ಶರಣೆಂದಾಳು ತಿಮ್ಮವ್ವ ತಂದನಾನು ತಾನೆ
ಅಣ್ಣಂದಿರ ಪಾದಕ್ಕೆ ಶರಣೆಂದಾಳು ತಿಮ್ಮವ್ವ ತಂದನಾನು ತಾನೆ
ಅವರ ಅತ್ತಿಗೆಯರ ಪಾದಕ್ಕೆ ಶರಣೆಂದಾರು ತಿಮ್ಮವ್ವ ತಂದನಾನು ತಾನೆ

ಇಷ್ಟೆಲ್ಲಾ ಮಾಡಿ ದೊಡ್ಡವರ ಆಶೀರ್ವಾದ ಪಡೆದುಕೊಂಡು ತವರು ಮನೆಬಿಟ್ಟು ಹೋಗುವಾಗ ಕಣ್ಣೀರು ಸುರಿಸುತ್ತಾಳೆ. ಹೀಗೆ ತವರು ಮನೆಯಿಂದ ಹೊರಟ ತಿಮ್ಮವ್ವ-ಆಕೆಯ ಗಂಡ ನಡುಕಾಡಲ್ಲಿ ಹೋಗುತ್ತಾರೆ. ಬಮ್ಮಣ್ಣ ಇವರಿಬ್ಬರಿಗೆ ಗೊತ್ತಾಗದ ಹಾಗೆ ಅವರನ್ನು ಹಿಂಬಾಲಿಸುತ್ತಾನೆ. ನಡುಕಾಡಲ್ಲಿ ಗಂಡ-ಹೆಂಡತಿ ಇಬ್ಬರೂ ನಡೆದುಕೊಂಡು ಹೋಗುತ್ತಿರಬೇಕಾದರೆ ತಿಮ್ಮವ್ವ ಗಂಡನನ್ನು ಬಿಟ್ಟು ಎಲ್ಲಿಗೋ ಹೋಗಿ ಮರಳಿ ಬರುವಷ್ಟರಲ್ಲಿ ಬಮ್ಮಣ್ಣ

ತಿಮ್ಮವ್ವನ ಗಂಡಾನ ತಲೆ ಹಾರಿಸಿ ಹೊಡೆದಾನು ತಂದನಾನು ತಾನೆ
ಹಾರೀಸಿ ಹೊಡುದಾನು ಬೀಸಾದರು ಹೊಡೆದಾನು ತಂದನಾನು ತಾನೆ

ತಿಮ್ಮವ್ವಳ ಗಂಡನ ತಲೆಯನ್ನು ಹಾರಿಸಿಬಿಡುತ್ತಾನೆ. ಅಷ್ಟರಲ್ಲಿ ತಿಮ್ಮವ್ವ ಬಂದು ಈ ದೃಶ್ಯವನ್ನು ನೋಡಿ ಉಪಾಯದಿಂದ ಗಂಡನ ಕೊಲೆಮಾಡಿದ ಬಮ್ಮಣ್ಣ ಬಗ್ಗುವಂತೆ ಮಾಡಿ ಆತನ ತಲೆಯನ್ನು ಹಾರಿಸುತ್ತಾಳೆ. ತನ್ನ ಕಣ್ಣ ಮುಂದೆ ಗಂಡನ ಸಾವನ್ನು ಕಂಡು ದಿಗ್ಭ್ರಾಂತಳಾಗುತ್ತಾಳೆ, ಚೀರುತ್ತಾಳೆ, ಅಳುತ್ತಾಳೆ, ಆಕ್ರಂದಿಸುತ್ತಾಳೆ. ಆದರೆ ಆಕೆಯ ಗೋಳನ್ನು ನೋಡಿ ಸಮಾಧಾನ ಮಾಡುವವರು ಅಲ್ಲಿ ಯಾರೂ ಇರುವುದಿಲ್ಲ. ಗಂಡನ ತಲೆಯನ್ನು ಮಡಿಲಲ್ಲಿ ಕಟ್ಟಿಕೊಂಡು ಬಮ್ಮಣ್ಣನ ತಲೆಯನ್ನು ಎಡಗೈಯಲ್ಲಿ ಹಿಡಿದುಕೊಂಡು ನಡುಗಾಲಲ್ಲಿ ನಡೆದು ಒಂದು ಹೆಬ್ಬಾಲದ ಸಮರದ ಕೆಳಗೆ ಕುಳಿತುಕೊಳ್ಳುತ್ತಾಳೆ. ಪುನಃ ಚೀರುತ್ತಾಳೆ, ಅಳುತ್ತಾಳೆ, ಆಕ್ರಂದಿಸುತ್ತಾಳೆ. ಶಿವಶೋಕ ಮಾಡುತ್ತಾಳೆ. ಅದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ನಂತರ

ಇವಳ ಗಂಡನ ತಲೆಯನ್ನು ತೊಡೆಯ ಮೇಲೆ ಮಡಿಕೊಂಡು ತಂದನಾನು ತಾನೆ
ಬಮ್ಮಣ್ಣನ ತಲೆಯನ್ನು ಸೆಡಗಾಲಲ್ಲಿ ಒದ್ದುಕೊಂಡು ತಂದನಾನು ತಾನೆ
ಗೋಳು ಗೋಳೆನ್ನುತಾಳೆ ಶಿವಸೋಕ ಮಾಡುತಾಳೆ ತಂದನಾನು ತಾನೆ

ಗಂಡನ ತಲೆಯನ್ನು ತೊಡೆಯ ಮೇಲೆ ಇಟ್ಟುಕೊಂಡು ಬಮ್ಮಣ್ಣನ ತಲೆಯನ್ನು ಎಡಗಾಲಲ್ಲಿ ಒದ್ದುಕೊಂಡು ಹೋಗುತ್ತಾಳೆ. ಒಂದು ತಿಂಗಳ ಮುತ್ತೈದೆ ವಿಧವೆಯಾಗುತ್ತಾಳೆ. ಇಂಥ ಸಮಯದಲ್ಲಿಯೇ ತಿಮ್ಮವ್ವಳ ತಂದೆ-ತಾಯಿಗೆ, ಅತ್ತೆ-ಮಾವರಿಗೆ ದುಃಸ್ವಪ್ನ ಬೀಳುತ್ತದೆ. ಮಗಳನ್ನು ನೋಡಬೇಕೆಂದು ತಿಮ್ಮವ್ವಳ ತಂದೆ-ತಾಯಿ ಹೊರಡುತ್ತಾರೆ. ಮಗಳನ್ನು ಆ ಸ್ಥಿತಿಯಲ್ಲಿ ನೋಡಿ ನಂಜೇಗೌಡರು ಆಕೆಯನ್ನು ಮನೆಗೆ ಕರೆಯುತ್ತಾರೆ.

ಶಿವಲೋಕದಿಂದಾಲಿ ಸಿರಿಗಂಧಾದ ಕೊರಡು ಬಂದೋ ತಂದನಾನು ತಾನೆ
ಅಂಬಾರದಿಂದಾಲಿ ಧೂಪಾದ ಕೊಡ ಬಂದೊ ತಂದನಾನು ತಾನೆ
ತಿಮ್ಮವ್ವಳ ಕೊಂಡಕ್ಕೆ ಸಿರಿಗಂಧ ಅಣಿಯಾದೊ ತಂದನಾನು ತಾನೆ

ಹೀಗೆ ತಿಮ್ಮವ್ವ ಸತಿಸಹಗಮನ ಪದ್ಧತಿಗೆ ಅಣಿಯಾಗುತ್ತಾಳೆ. ತನ್ನ ಗಂಡನೇ ಇಲ್ಲದ ಮೇಲೆ ತಾನದ್ದೇನು ಪ್ರಯೋಜನವೆಂದು ಬಮ್ಮಣ್ಣನ ತಲೆಯನ್ನು ಕೊಂಡಕ್ಕೆ ಎಸೆದು ಗಂಡನ ತಲೆಯನ್ನು ಮಡಿಲಲ್ಲಿ ಕಟ್ಟಿಕೊಂಡು ಕೊಂಡ ಸುತ್ತ ಸುತ್ತು ಹಾಕಿ ಕೊಂಡವನ್ನು ಏರುತ್ತಾ ಸತಿಸಹಗಮನವಾಗುತ್ತಾಳೆ. ಹೀಗೆ ತಿಮ್ಮವ್ವ ಶಿವಲೋಕವನ್ನು ಸೇರುತ್ತಾಳೆ. ಹಿಂದಿನ ಕಾಲದಲ್ಲಿ ಗಂಡ ಸತ್ತರೆ ಹೆಂಡತಿಯೂ ಬೆಂಕಿಗೆ ಹಾರಿ ತನ್ನ ಪ್ರಾಣವನ್ನು ಕಳೆದುಕೊಳ್ಳುವ ಸತಿಸಹಗಮನ ಪದ್ಧತಿ ಜಾರಿಯಲ್ಲಿತ್ತು. ಪುರುಷ ಪ್ರಧಾನ ಸಮಾಜದಲ್ಲಿ ಯಜಮಾನಿಕೆಯನ್ನು ಹೊಂದಿದ್ದ ಪುರುಷ, ಸ್ತ್ರೀ ಶೋಷಣೆಯ ರೂಪದಲ್ಲಿ ಸತಿಸಹಗಮನ ಪದ್ಧತಿಯನ್ನು ಜಾರಿಗೆ ತಂದ. ಪ್ರಸ್ತುತ ಕಥನಗೀತೆಯಲ್ಲಿ ಬಮ್ಮಣ್ಣ ಬೇಡ ಜಾತಿಗೆ ಸೇರಿದ ಕೆಳವರ್ಗದವನಾಗಿ ಶ್ರೀಮಂತ ನಂಜೇಗೌಡರ ಮಗಳನ್ನು ಬಯಸುವುದು ಸಮಾಜ ವ್ಯವಸ್ಥೆಯ ವಿರುದ್ಧವಾದ ನಿರ್ಧಾರವಾಗಿರುತ್ತದೆ. ಆದರೆ ತಿಮ್ಮವ್ವಳ ರೂಪ, ಲಾವಣ್ಯಕ್ಕೆ ಮರುಳಾಗಿದ್ದ ಬಮ್ಮಣ್ಣ ಹೇಗಾದರು ಮಾಡಿ ಆಕೆಯನ್ನು ಪಡೆಯಬೇಕೆಂಬ ದುಸ್ಸಾಹಸಕ್ಕೆ ಇಳಿಯುತ್ತಾನೆ. ಇಲ್ಲಿ ಬಮ್ಮಣ್ಣ ತಿಮ್ಮವ್ವಳ ಮನೆಯಲ್ಲಿಯೇ ಕೆಲಸದಾಳಾಗಿದ್ದುಕೊಂಡು ಆಕೆಯನ್ನು ಬಯಸುವುದು ಅಪರಾಧವಾಗುತ್ತದೆ. ಶ್ರೀಮಂತ ನಂಜೇಗೌಡ ಶ್ರೀಮಂತರ ಮನೆಯ ವರವನ್ನು ಹುಡುಕಿ ಮದುವೆ ಮಾಡುವುದು, ಬಮ್ಮಣ್ಣನ ಆಸೆಗೆ ತಣ್ಣೀರೆರಚಿದಂತಾಗುತ್ತದೆ. ಆತ ಹತಾಶ ಮನೋಭಾವನೆಯಿಂದ ತಿಮ್ಮವ್ವಳ ಗಂಡನ ತಲೆಯನ್ನು ಕತ್ತರಿಸುವುದು, ಶ್ರೀಮಂತರ ವಿರುದ್ಧದ ಆಕ್ರೋಶಕ್ಕಾಗಿ ಎಂಬುದು ಇಲ್ಲಿ ಮನವರಿಕೆಯಾಗುತ್ತದೆ. ಸಂಘರ್ಷದ ಪರಮಾವಧಿಯೆಂಬಂತೆ ತನಗೆ ಧಕ್ಕದ ತಿಮ್ಮವ್ವ, ಬೇರೆ ಯಾರಿಗೂ ಸಿಗಬಾರದೆಂದು ತಿಮ್ಮವ್ವಳ ಗಂಡನ ಕೊಲೆ ಮಾಡುತ್ತಾನೆ. ಕಥೆಯ ಅಂತ್ಯ, ಗಂಡನೇ ಸರ್ವಸ್ವವೆಂಬಂತೆ ನಡೆದುಕೊಳ್ಳುವ ತಿಮ್ಮವ್ವ ಗಂಡನ ತಲೆಯನ್ನು ಮಡಿಲಲ್ಲಿ ಇಟ್ಟುಕೊಳ್ಳುವುದು, ತನ್ನ ಸಾಂಸಾರಿಕ ಜೀವನಕ್ಕೆ ಅಡ್ಡಿ ಬಂದು ತನ್ನ ಗಂಡನ ಸಾವಿಗೆ ಕಾರಣನಾದ ಬಮ್ಮಣ್ಣನ ತಲೆಯನ್ನು ಕಾಲಿನಿಂದ ಒದ್ದುಕೊಂಡು

ಹೋಗುವುದು ಆತನ ಮೇಲಿನ ಆಕ್ರೋಶವನ್ನು ತೋರಿಸುತ್ತದೆ. ಹೀಗೆ ಬಹಳ ನೊಂದುಕೊಂಡ ವೀರತಿಮ್ಮವ್ವ ಕೊನೆಗೆ ಸತಿಸಹಗಮನಪದ್ಧತಿಗೆ ಆಹುತಿಯಾಗುತ್ತಾಳೆ.

೩.೪.೩ ಬತಿಗೇಡಿ ರಾಜ

ಭಾರತೀಯ ಸಮಾಜದಲ್ಲಿ ಹೆಣ್ಣನ್ನು ವ್ಯಕ್ತಿಯೆಂದು ಪರಿಗಣಿಸಿದ ಉದಾಹರಣೆಗಳಿಲ್ಲ. ಚರಿತ್ರೆಯುದ್ದಕ್ಕೂ ಹೆಣ್ಣನ್ನು ಭೋಗವಸ್ತು ಮುಖೇನವೇ ಗುರುತಿಸಿರುವುದು ಯಾವ ಮಹಾತ್ಮರಿಗೂ ಅಪರಾಧವಾಗಿ ಕಾಣಿಸಿಲ್ಲ. ರಾಜ, ಮಹಾರಾಜರು, ಆಳ್ವಿಕೆ ನಡೆಸುತ್ತಿದ್ದ ಕಾಲದಲ್ಲಿ ರಾಜಕುಮಾರಿ ಮದುವೆಯಾಗಿ ಬರುವ ಸಂದರ್ಭದಲ್ಲಿ ಆಕೆಯ ಜೊತೆ ಆಕೆಯ ನಾಲ್ಕೈದು ಸಖಿಯರು ಕೂಡ ಬರುತ್ತಿದ್ದರು. ರಾಜ ಸಮರ್ಥನಾಗಿದ್ದರೇ ಆತನೇ ಆ 'ಸಖಿ' ಯರನ್ನು ನಿಭಾಯಿಸುತ್ತಿದ್ದ. ಇಲ್ಲದಿದ್ದಲ್ಲಿ ಆ ಸಖಿಯರು ಅರಮನೆಯ ಸಿಬ್ಬಂದಿಯ ಪಾಲಾಗುತ್ತಿದ್ದರು.

ಈ ಲಾವಣಿಯಲ್ಲಿ ಬರುವ ರಾಜ, ಶೀರ್ಷಿಕೆ ಸೂಚಿಸುವಂತೆ ಕೈಲಾಗದ ಹೇಡಿ. ಇಂತಹ ರಾಜ ಒಂದು ದಿನ ಭಾವಿನೀರಿಗೆ ಹೋಗಿ ಒಬ್ಬಳು ಮದುವೆಯಾದ ಹೆಣ್ಣಿನ ಮೇಲೆ ಮನಸ್ಸಿಡುತ್ತಾನೆ. ಹಾಗೆ ಮನಸಿಟ್ಟ ರಾಜ ಆ ಹೆಣ್ಣನ್ನು ಪಡೆಯಲು ನಾನಾ ರೀತಿಯ ಕಸರತ್ತನ್ನು ಮಾಡುತ್ತಾನೆ. ಮೂಲತಃ ಬಡವೆಯಾದ ಹೆಣ್ಣಿಗೆ ಆಭರಣಗಳನ್ನು ಕೊಡುತ್ತೇನೆಂದು ಪುಸಲಾಯಿಸಲು ಪ್ರಯತ್ನಿಸುತ್ತಾನೆ.

ವಸ್ತಾವ ಒಡವಿ ಕೊಡುವೆ ಸೀರಿ ಕುಬ್ಬಸ ಕೊಡುವೆ
ಇರನಡಿಯ ನನ್ನ ರಂಗಮಾಲೊಳು

ರಾಜನಾದ್ದರಿಂದ ಈ ರೀತಿಯ ಆಮಿಷಗಳನ್ನು ಒಡ್ಡಿದರೆ ಆ ಹೆಣ್ಣನ್ನು ಸೆಳೆಯಬಹುದೆಂದು ಭಾವಿಸಿರುತ್ತಾನೆ. ಆದರೆ ಆ ಹೆಣ್ಣು

ವಸ್ತಾ ಒಡವಿಯನೊಲ್ಲೆ ಸೀರಿ ಕುಬ್ಬುಸವನೊಲ್ಲೆ
ನನ ಬಡತನ ನನಗಿರಲೆ

ಎಂದು ತನ್ನ ಸದ್ಯದ ಸ್ಥಿತಿಗತಿಗೆ ತೃಪ್ತಿಯನ್ನು ಪಟ್ಟುಕೊಂಡು ಆಭರಣ, ಸೀರೆ, ಕುಬ್ಬಸ, ಯಾವುದೂ ಬೇಡವೆಂದು ತಿರಸ್ಕರಿಸಿ ತನ್ನ ಬಡತನ ತನಗಿರಲಿ ಎಂದು ಖಂಡಾತುಂಡಾವಾಗಿ ಹೇಳಿಬಿಡುತ್ತಾಳೆ. ಆಗ ರಾಜನಿಗೆ ನಿರಾಶೆಯಾಗುತ್ತದೆ. ಚಿಂತಾಕ್ರಾಂತನಾಗಿ ಕೋಣೆಯಲ್ಲಿ ಒಬ್ಬಂಟಿಯಾಗಿ ಮಲಗುತ್ತಾನೆ. ತಾಯಿ-ತಂದೆ ಒಬ್ಬೊಬ್ಬರಾಗಿ ಬಂದು ಆತನ ಚಿಂತೆಗೆ ಕಾರಣವನ್ನು ಕೇಳಿದಾಗ, ಊರೊಳಗೊಂದು ಹೆಣ್ಣನ್ನು ನೋಡಿ ಮನಸನ್ನು ಆಕೆಗೆ ಕೊಟ್ಟಿರುವುದಾಗಿ ಹೇಳುತ್ತಾನೆ. ಮತ್ತು ಏನಾದರೂ ಮಾಡಿ ಆಕೆ ತನಗೆ ಸಿಗುವ ಹಾಗೆ ಮಾಡಬೇಕೆಂದು ತಂದೆ-ತಾಯಿಯರಲ್ಲಿ ನಿವೇದಿಸಿಕೊಳ್ಳುತ್ತಾನೆ. ತಕ್ಷಣ ರಾಜ ಮಂತ್ರಿಯನ್ನು ಕರೆದು, ತನ್ನ ಮನದಾಳದ ಆಸೆಯನ್ನು ತಿಳಿಸಿ ಅದಕ್ಕೆ ಪರಿಹಾರವನ್ನು ಸೂಚಿಸಬೇಕೆಂದು ಹೇಳುತ್ತಲೇ ದಾಸಿಯನ್ನು ಕರೆಯಲು ಸೂಚಿಸುತ್ತಾನೆ. ದಾಸಿಯೂ ತಕ್ಷಣದಲ್ಲಿ ಹಾಜರಾದಾಗ ಆಕೆಗೂ

ಅದೇ ವಿಚಾರವನ್ನು ವಿವರಿಸಿ ಹೇಳುತ್ತಾನೆ. ದಾಸಿ ಚಟ್ಟನೆ ಎದ್ದು ಆ ಹೆಣ್ಣಿನ ಬಳಿಗೆ ಬರುತ್ತಾಳೆ. ಆಗ ಆ ಹೆಣ್ಣು ದಾಸಿಯನ್ನು ಒಳ ಕರೆದು ಕುಳ್ಳಿರಿಸಿ ಬಂದ ಸಮಾಚಾರವನ್ನು ಕೇಳುತ್ತಾಳೆ. ದಾಸಿ

ವಸ್ತಾ ಒಡವಿ ಕೊಡುವೆ ಸೀರಿ ಕುಬ್ಬಸಾ ಕೊಡುವೆ
ಇರನಡಿ ರಂಗಮಾಲೊಳು

ಎಂದೆನ್ನುತ್ತಾಳೆ. ಆದರೆ ಆ ಹೆಣ್ಣು ಕೋಪೋದ್ರಿಕ್ತಳಾಗಿ ಅದನ್ನು ತಿರಸ್ಕರಿಸುತ್ತಾ

ಮರತ ಮನಗ್ಯಾನ ನಮ್ಮರಾಜ
ನನ್ನ ಗಂಡನ ಕರಸಿ ಬಾಯಾನ ಹಲ್ಲಮುರಸಿ
ಆಗ ಹೋಗಬ್ಯಾಡ ಅವಮಾನ

ತನ್ನ ಗಂಡನನ್ನು ಕರೆಸಿ ಹಲ್ಲಮುರಿಸುತ್ತೇನೆಂದು ವೀರಾವೇಷದಿಂದ ಆ ಹೆಣ್ಣು ಹೇಳುತ್ತಾಳೆ. ಹೀಗೆ ಹೇಳುವ ಧೈರ್ಯವನ್ನು ಎಲ್ಲಾ ಮಹಿಳೆಯರು ಮಾಡುವುದಿಲ್ಲ. ಪರಿಸ್ಥಿತಿಗೆ ತಲೆಬಾಗಿ ಶರಣಾಗುವವರ ಸಂಖ್ಯೆಯೇ ಹೆಚ್ಚು. ಅದರಲ್ಲೂ ರಾಜ ಬಯಸುತ್ತಿದ್ದಾನೆಂದರೆ ಹೆಣ್ಣು ಯಾರೇ ಆಗಿರಲಿ, ಆಕೆ ಒಪ್ಪಿಗೆಯನ್ನು ಸೂಚಿಸಬೇಕಾದ ಅನಿವಾರ್ಯ ಪರಿಸ್ಥಿತಿ ಇತ್ತು. ಆದರೆ ಇಲ್ಲಿ ಅದಕ್ಕೆ ವ್ಯತಿರಿಕ್ತವಾಗಿ ಹೆಣ್ಣು ಸೆಟೆದು ನಲ್ಲುತ್ತಾಳೆ. ಕೆಳವರ್ಗದ ಬಡಮಹಿಳೆಯ ಮೇಲೆ ಆಗಬಹುದಾದ ದೌರ್ಜನ್ಯವನ್ನು ವಿರೋಧಿಸುತ್ತಾಳೆ.ಆ ಹೆಣ್ಣಿನ ಮನೆಗೆ ಬಂದ ದಾಸಿ ದಾರಿಗೆ ಸುಂಕವಿಲ್ಲದಂತೆ ಮರಳಿ ರಾಜನ ಅರಮನೆಗೆ ಹೋಗುತ್ತಾಳೆ.

ಆ ಹೆಣ್ಣ ನಿಮಗೆ ಒಲಿಯದರಿ
ಆ ಹೆಣ್ಣ ನಮಗ ದೊರಿಯದರಿ

ಹೀಗೆ ಆ ಹೆಣ್ಣಿನ ಬಗೆಗಿನ ಆಸೆಯನ್ನು ಬಿಟ್ಟುಬಿಡುವಂತೆ ರಾಜನಿಗೆ ಸೂಚ್ಯವಾಗಿ ಹೇಳುತ್ತಾಳೆ. ಯಾವಾಗ ಆ ಹೆಣ್ಣು ವಸ್ತು-ಒಡವೆಗಳಿಗೆ ಮಾರುಹೋಗಿ ಒಳಗಾಗದ ಹೆಣ್ಣನ್ನು ಮೋಸದಿಂದಲಾದರೂ ಪಡೆಯಬೇಕೆಂದು ರಾಜ ನಿರ್ಧರಿಸುತ್ತಾನೆ. ಅವಳು ನೀರಿಗೆ ಬರುವುದನ್ನು ಕಾಯ್ದು ಕುಳಿತ. ನೀರಿಗೆ ಬಂದ ಹೆಣ್ಣನ್ನು ಬಲಾತ್ಕರಿಸಲು ಪ್ರಯತ್ನಿಸುವನು. ಅದೇ ಹೊತ್ತಿಗೆ ಆ ಹೆಣ್ಣಿನ ಗಂಡ ರಾಮಣ್ಣ ಅಲ್ಲಿಗೆ ಬಂದು

ಮನಗಿದ ರಾಮಣ್ಣ ಚಟ್ಟಂತ ಎದ್ದಾನ
ಕಣ್ಣೆರಡು ಕಾಲ ತೆಗೆದಾನ

ರಾಜನ ಕೈಕಾಲುಗಳನ್ನು ಮುರಿದು, ಕಣ್ಣುಗಳನ್ನು ಕಿತ್ತಿಹಾಕಿ ಆತನಿಗೆ ತಕ್ಕಶಾಸ್ತಿಯನ್ನು ಮಾಡುವನು. ಪರಸ್ತ್ರೀ, ಅದೂ ಮದುವೆಯಾದ ಹೆಣ್ಣನ್ನು ರಾಜ ಬಯಸುವುದು. ಅದಕ್ಕೆ ಸ್ವತಃ ಆತನ ತಂದೆ-ತಾಯಿ ಪ್ರೋತ್ಸಾಹ ನೀಡುವುದು ಒಂದು ರೀತಿಯಲ್ಲಿ ಸಖೇದಾಶ್ಚರ್ಯವನ್ನುಂಟು ಮಾಡುತ್ತದೆ. ಹಾಗೆಯೇ ಒಂದು ಹೆಣ್ಣನ್ನು ಪಡೆದುಕೊಳ್ಳುವ ಸಲುವಾಗಿ ದಾಸಿಯ ರೂಪದಲ್ಲಿ ಮತ್ತೊಬ್ಬಳು ಹೆಣ್ಣನ್ನು

ಬಳಸಿಕೊಳ್ಳುವುದನ್ನು ನೋಡಿದರೆ ಸ್ತ್ರೀ ವರ್ಗವನ್ನು ಪುರುಷ ಪ್ರಧಾನ ವ್ಯವಸ್ಥೆ ಹೇಗೆ ತುಚ್ಛವಾಗಿ ಕಾಣುತ್ತಿದೆಂಬುದನ್ನು ಮನಗಾಣಬಹುದು. ಇಲ್ಲಿ ಮಂತ್ರಿ–ದಾಸಿಯರು ರಾಜನ ಇಚ್ಛೆಗೆ ವಿರೋಧಿಸದೆ ಇರುವುದು ಸಹಜ ಎನ್ನಸಬಹುದೇನೋ! ಕೆಳವರ್ಗಕ್ಕೆ ಬಡವನಾದರೂ ರಾಜನನ್ನು ಎದುರಿಸಿ ಅವನನ್ನು ಸೀಳುವಷ್ಟು ತಾಕತ್ತು ಚೆಂಬುಳಿಯ ಗಂಡನಲ್ಲಿತ್ತು. ಅದಕ್ಕಾಗಿ ಹೆಂಡತಿಯನ್ನು ಕಾಪಾಡಿದ. ಅದೇ ಬಲವಿಲ್ಲದ ಹೆಂಡಂದಿರು ರಾಜನ ಕಾಮಕ್ಕೆ ಬಲಿಯಾಗಬೇಕಾಗಿತ್ತೆಂಬ ರಾಜನ ಬಲಾತ್ಕಾರದ, ದೌರ್ಜನ್ಯದ, ದಬ್ಬಾಳಿಕೆಯ ಸತ್ಯಚಿತ್ರವನ್ನು ಈ ಗೀತಕವನ ಕಣ್ಮುಂದೆ ಕಟ್ಟುತ್ತದೆ. ಜೊತೆಗೆ ಮನಸ್ಸು ಮಾಡಿದರೆ ಗ್ರಾಮೀಣ ಭಾಗದ ಜನರು ಏನೂ ಬೇಕಾದರೂ ಮಾಡಬಹುದು ಎನ್ನುವುದಕ್ಕೆ ಉತ್ತಮ ಉದಾಹರಣೆ ಈ ಕಥನಕವನ.

ಅಡಿಟಿಪ್ಪಣಿ:

೧. ಹಾ.ಮಾ. ನಾಯಕ, ಜಾನಪದ ಸ್ವರೂಪ, ೧೯೭೧, ಪು–೨೬–೨೮.

೨. ಜೀ.ಶಂ.ಪರಮಶಿವಯ್ಯ, ಜನಪದಕಾವ್ಯಕಥೆಗಳು, ೧೯೭೧, ಪು.೧೩ರ ಅಡಿಟಿಪ್ಪಣಿ.

೩. ಕನ್ನಡ ಲಾವಣಿ, ಕನ್ನಡ ಭಾರತಿ೫–೨, ಕರ್ನಾಟಕ ವಿ.ವಿ. ೧೯೭೨, ಪು.೧೦೬–೧೦೮.

೪. ಬೆಟಗೇರಿಕೃಷ್ಣಶರ್ಮ, ಕನ್ನಡ ಜಾನಪದಸಾಹಿತ್ಯ, ೧೯೭೬, ಕರ್ನಾಟಕ ವಿ.ವಿ. ಪು–೨೩.

೫. ಮಹೀಶವಾಡಿ, ಬಿ.ಬಿ.ಜಾನಪದವೀರಗೀತೆಗಳು, ೧೯೭೧ ಕರ್ನಾಟಕ ವಿ.ವಿ. ಪು–೫.

೬. ಎಲ್.ಆರ್.ಹೆಗಡೆ, ಜನಪದಸಾಹಿತ್ಯ, ಪು–೧೪೮–೧೪೯.

೭. ಕನ್ನಡದಲ್ಲಿ ಲಾವಣಿ ಕನ್ನಡಸಾಹಿತ್ಯಪರಿಷತ್ಪತ್ರಿಕೆ, ಸಂ.೬೬, ಸಂಚಿಕೆ–೧.

೮. ಜನಪದಕಥೆಯವಸ್ತು ಮತ್ತು ತಂತ್ರ ಹಾಗೂ ಇನ್ನಿತರ ಲೇಖನಗಳು, ವೀರಣ್ಣ ದಂಡೆ, ೧೯೮೧, ಪು–೬೦.

೯. ಚಾಪಚಾಕತೀವ ಡಪ್ಪಿನ ಮ್ಯಾಲ, ತರಂಗ–೧.

೧೦. ಸಿ.ಪಿ.ಕೆ, ಜನಪದಗೀತೆ, ೧೯೭೫, ಪು–೧೭–೧೮.

೧೧. ದೇ.ಜ.ಗೌ. ಜಾನಪದ ಅಧ್ಯಯನ, ಪು–೧೧೭–೧೧೮.

೧೨. ಲಾವಣಿ ಒಂದು ಸ್ಪಷ್ಟನೆ, (ಮಂಥನ) ಸಾಧನೆ೨–೨, ೧೯೭೩.

೧೩. ಭಾಗೋಜಿ ಪಿ.ಕೆ. ಜಾನಪದಸಾಹಿತ್ಯದರ್ಶನ–೧, ಪು.೨೧೯–೨೨೦.

೧೪. Gerould G.H. The Ballad of Tradition 1957, p.36.

೧೫. ಕ.ರಾ.ಕೃ 'ಜಾನಪದ ಕಥನಗೀತೆಗಳು' ೧೯೬೨, ಪು.೨೧೭.

೧೬. ಕಾಳೇಗೌಡ ನಾಗವಾರ, ಬಯಲು ಸೀಮೆಯ ಲಾವಣಿಗಳು, ಬಯಲುಸೀಮೆಯ ಗೌಡನ ಮಗಳು ಪ್ರಸ್ತಾವನೆ xxii.

೧೭. ಜೀ.ಶಂ.ಪ. ಜಾನಪದ ಖಂಡಕಾವ್ಯಗಳು, ಮೊದಲ ಮಾತು ಪು. III.

೧೮. ದೇ.ಜ.ಗೌ. ಜಾನಪದ ಅಧ್ಯಯನ, ಪು. ೧೧೨.

೧೯. ಸಿ.ಪಿ.ಕೆ ಜನಪದ ಗೀತೆ, ಪು. ೧೭.

೨೦. ಡಾ.ದೇ.ಜ.ಗೌ. ಜಾನಪದ ಅಧ್ಯಯನ, ಪು. ೧೧೭.

೨೧. ಡಾ. ಎಂ.ಎಂ. ಕಲಬುರ್ಗಿ, ಲಾವಣಿ ಒಂದು ಸ್ಪಷ್ಟನೆ (ಮಂಥನ) ಸಾಧನೆ ೨-೨.

೨೨. ಡಾ. ಎಚ್.ಎಲ್. ನಾಗೇಗೌಡ, ಕನ್ನಡ ಜನಪದ ಕಥನಕಾವ್ಯಗಳು, ಪು.೭೪.

೨೩. ಅದೇ ಪು. ೭೪.

ಅನುಬಂಧಗಳು

ಅನುಬಂಧ – ೧
ಹಲಗಲಿಯ ಬೇಡರು

ಪಲ್ಲಾ

ಹೊತ್ತು ಬಂದಿತು ಮತ್ತ ನೋಡರಿ ಕತ್ತಿ ಹಿಡುವ ಜನಕ
ಶಿತ್ತಿನ ಮಂದಿ ಭಂಟರ ಹಲಗಲಿ ಮುಟ್ಟಲಿಲ್ಲ ದಡಕ

೧ನೇ ನುಡಿ

ವಿಲಾತಿಯಿಂದ ಹುಕುಮ ಕಳವಿದರ ಕುಂಪಣಿ ಸರಕಾರಾ
ಎಲ್ಲ ಜನರನಾ ತರಿಸಿ ಜೋರಿ ಮಾಡಿ ತರಬೇಕ ಹತಾರಾ

ಕತ್ತಿ ಕಟಾರಿ ಕೈ–ಚೂರಿ ಬಾಕು ಗುರ್ದಿ ಸುರಾಯಿ ಚಕ್ರಾ
ಬಾಲಿಯ ಬರ್ಚಿ ಬಿಚ್ಚುಗತ್ತಿ ನೋಡ ಬಾಣಬಿಲ್ಲಿನವರಾ

ಪಟಾತ ಪಿಸ್ತೂಲ ಕರುಲಿ ತೇಗಾ ಚಾಪಗೊಡ್ಲಿಶಸ್ತ್ರಾ
ತೋಪು ತುಬಾಕಿ ಹೊಡವು ಮದ್ದ ಗುಂಡ ಬಿಡಬ್ಯಾಡರಿ ಚೂರಾ

ಮುಚ್ಚಿ ಇಟ್ಟವರಿಗೆ ಮೂರು ವರ್ಷದ ಬೇಡಿ ಹಾಕರಿ ಪೂರಾ
ಕೊಡದ ದಿಟಾಯಿ ಮಾಡಿದವರನಾ ಕಡದ ಹಾಕರಿ ತಾರಾ ॥ ಚ್ಯಾಲ ॥

ಬೇಡಿದ ಕ್ಷಣಕ ತಾವು ತಂದು
ಕೊಡತಾರ ಹಿಡಿಹಿಡಿರ್ ಎಂದು

ವತ್ನ ಕೊಡತೇವ್ ಅನ್ನರಿ ವೊಂದ್ ಒಂದು
ತಂದು ಕೊಡತಾರ ತಮ್ಮ ಕುಸಿಲಿಂದು

ಬಂದಿತು ಹುಕುಮ ಹೀಂಗ್ ಎಂದು
ಡಣ್ಗುರ ಸಾರಿದರ ಮುಂದು

ಶೂರ ಶಿಪಾಯಿಜನರ ತಾವು ತಿಳಿದು
ಅಳತಾರು ಕಣ್ಣಿಗೆ ನೀರ್ ತಂದು ॥ ಯೇರ ॥

ಬಹಳ ಚಿಂತಿಯ್ ಆಗಿ ದುಃಖದಿಂದ ಅವರು ಬಿದ್ದರ್– ಅಣ್ಣ ನೆಲಕ

*_*_*_*

೨ನೇ ನುಡಿ

ಕೇಳುತ ಹುಕುಮಾ ಕೆಳವರ ತಂದ ಕಂದ ಕೊಟ್ಟಾರ ಆವಾಗ
ಬಹಳ ಬೆಲಿವು ಹೆಚ್ಚಿನ ಹತಾರಾ ಮುಚ್ಚಿ ಇಟ್ಟರ ವೊಳಗ

ಸಾಲದಸಮದ ಮಾಡಿ ದನ-ಕರ ಮಾರಿ ತಂದಿನ್ನ ಹಬ್ಬದಾಗ
ನೋಡ ನೋಡ ಹ್ಯಾಂಗೆ ಕೊಡುನ್‌ಅಂತ ಹುಗಿದ್‌ಇಟ್ಟರ ನೆಲದಾಗ

ಶೂರ ಚಟಿಗಾರು ಜಾಯಿತಸಾಹೇಬ ಬಂದಾರ ಆವಾಗ
ಸಂದಿಯಗೊಂದಿ ವೊಂದು ಉಳಿಯದ್‌ಆಂಗ ಹೊಕ್ಕ ಹುಡಿಕೆರ ಮನಿಯಾಗ

ತೆಪ್ಪಿತ್‌ಉಪಾಯಿ ಇನ್ನ ಮಾತರ ಮಾಡುನ್‌ಅಂತರ ಹ್ಯಾಂಗ
ವೊಬ್ಬರಕೊಬ್ಬರ ಚ್ಯಾಡ ಹೇಳತರ ವರ್ಮ ಸಾಧಿಸಿದ್‌ಹಾಂಗ ॥ ಚ್ಯಾಲ ॥

ಜ್ಯಾಡಸಿ ಹೋದವೊ ಯಲ್ಲಾ
ನಾಡ್‌ಒಳಗೆ ಯೇನು ಉಳಿದಿಲ್ಲಾ

ಅಜ್ಜಮುತ್ತೆರ ಹಿಡುವ ಪಿಸ್ತುಲ
ಕಾಸದ್‌ಓದರ ಕತ್ತಿಯ ಡಾಲಾ

ಕವಚ ಬೆಳ್ಳಿಯ ಮಕಮಾಲಾ
ರತ್ನದ ಹಿಡಿಕಿವ ಹೋದವು ಯೆಲ್ಲಾ ॥ ಯೇರ ॥

ಹೋದ ಹತಾರಕ ಹೊಟಿಬ್ಯಾನಿ ಹಚ್ಚಿಕೊಂಡ ನಿಂತರ ಸಾವುದಕ

*_*_*_*

೩ನೇ ನುಡಿ

ಹಲ್ಲ ಕಿತ್ತಿದಾ ಹಾಂವಿನ ಪರಿಯು ನಮಗ ಆದಿತ್‌ಅಲ್ಲಾ
ರಂಡಿ ಮುಸುಕ ಹಾಕಿ ತಿರಿಗಿದರ ನಮ ಮಾನ ಉಳಿಯುವದಿಲ್ಲಾ

ಮಗ್ಗಲದಾಗಿನ ಹೇಣತಿ ಕೊಟ್‌ಆಂಗ ಆತಿ ಹೀಡಿ ಆದೇವ್‌ಅಲ್ಲಾ
ಸಾವಕಾರು ನಮ್ಮ ಜೀವ ಹೋದಿತ್‌ಅಂತ ಚಿಂತಿ ಮಾಡೇರ್‌ಅಲ್ಲಾ
ಹಗಲಿ ಮನ ಹೊಕ್ಕ ಹಣಾ ವೋದರ ಕೇಳವರ್‌ಯಾರ್‌ಇಲ್ಲಾ

ಪುಂಡ ಪಾಳೆಗಾರ ಪಚ್ಚ್ಯಾ ವಜೀರರು ಪಂತ ಹಿಡಿಯಲಿಲ್ಲಾ
ದಂಡನ್ ಆಳುವ ಧೊರಿ ದೌಲತ್‌ಅಂಜಿ ಕುಳಿತರ್‌ಅಲ್ಲಾ ॥ ಚ್ಯಾಲ ॥

ದೇವರ ತಂದ ಪಡಿಪಟಾ
ಚಿಂತಿ ಹತ್ತಿ ಆದರೋ ನಷ್ಟಾ

ಅಧಿಕಾರ ಉಳಿಯಲಿಲ್ಲ ಯೆಳ್ಳಅಷ್ಟಾ
ಕೇಡಗಾಲ ಬಂದಿತು ಕನಿಕಷ್ಟಾ

ಹೆಂಗಸ್ಆಗಿ ಶೀರಿಯ ವುಟ್ಟಾ
ಸೋಂಡ್ಒಣಗಿ ಆದೀತೋ ಬೊಬ್ಬಾಟಾ

ಅದ್ಹಾಂಗ್ಅತಿ ಸ್ತ್ರೀಯರ ಕ್ರೀಡಾದ್ಆಟಾ
ಭಂಟರಿಗೆ ಬಂದಿತೊ ಬಿಕ್ಕಷ್ಟಾ ॥ ಯೇರಾ ॥

ಪಕ್ಕಾ ಕಿತ್ತ ಪಕ್ಷಿ ಗತಿ ಆಗಿ ಚಿಂತಿ ಆದರ ಮನಕ

*_*_*_*

೪ನೇ ನುಡಿ

ಹಲಗಲಿ ಅಂಬುವ ಹಳ್ಳಿ ಮುಧೋಳರಾಜ್ಯದಾಗ ಇತ್ತು
ಪೂಜೆರಿ ಹಣಮಾ ಬಾಲ ಜಡಗ ರಾಮ ಮಾಡ್ಯಾರ ಮಸಲತ್ತು

ಕೈನ ಹತಾರ ಕೊಡಬಾರದೊ ನಾವು ನಾಲ್ಕು ಮಂದಿ ಜತ್ತು
ಹತಾರ ಹೋದ್ಇಂದ ಬಾರದದ ನಮ್ಮ ಜೀವ ಸತ್ಓಗುದು ಗೊತ್ತು

ಸುತ್ತಿನ ಹಳ್ಳಿ ಮತ್ತ ಧೊರಿಗಳಿಗೆ ತಿಳಶೆರ ಹೀಂಗ್ಅಂತು
ಮಾಡರಿ ಜಗಳಾ ಕೂಡ್ಇರತೇವು ಕುಮುಕಿ ಯಾವತ್ತು

ವೊಳಗಿಂದ್ಒಳಗ ವಚನ ಕೊಟ್ಟರೊ ಬ್ಯಾಡರ್ಎಲ್ಲ ಕಲಿತು
ಕಾರಕೂನನ ಕಪಾಳಕ ಬಡದರ ಶಿಪಾಯಿ ನೆಲಕ ಬಿತ್ತು ॥ ಚ್ಯಾಲ ॥

ದುಃಖದಿಂದ ಅವರು ಅಲ್ಲಿಗ್ ಹೋಗಿ
ಸಾಹೇಬಗ ಹೇಳಿದರ ಕೂಗಿ

ಕೇಳಿ ಸಾಹೇಬ ಯೆದ್ದ ಸಿಟ್ಟಿಗಿ
ತಿರಿಗಿ ಹೋದ ಆವಾಗ ಕಲಾದಗಿ

ಕರ್ಸಿ ಕೃಷ್ಣನಾಯಕಗೌಡ ಕುಂದರಗಿ
ಕರಶ್ಯಾನ ಸಂಧಾನಕ್ಕ್ಆಗಿ ॥ ಯೇರ ॥

ಹಟಾ ಮಾಡಬಾರದು ನಿಮ್ಮ ಹತಾರ ಕೊಡಿರಿ ಸಾಹೇಬನ್ ಈಶಕ

*_*_*_*

೫ನೇ ನುಡಿ

ಹತಾರ ಕೊಡಲಿಕೆ ಹೆಂಗಸ್ ಆಗಿ ಬಳಿಯ್‌ಇಟ್ಟಿಲ ಕೈಯಾಗ
ಯಾವ ಬಂದೀರಿ ಜೀವಹೋದರು ಕೊಡುದಿಲ್ಲ ಸುಮ್ಮನ್‌ಹೋಗರಿ ಈಗ

ಅಂದ ಮಾತ ಯೆಲ್ಲ ಬಂದ ಹೇಳಿದಾನ ಆವಾಗ ಸಾಹೇಬಗ
ಶಿಟ್ಟಿಲಿ ಮುಂಗೈ ಕಟ್ಟನೆ ಕಡಕೊಂಡ ಹುಕುಮ ಕೊಟ್ಟರ್‌ಆಗ

ಕುದರಿಯಮಂದಿ ಕೂಡಿ ಮುಟ್ಟಿತೊ ಹಲಗಲಿಸ್ಥಳದ ಮೇಗ
ವೊಳಗಿನ ಮಂದಿ ವೊಟ್ಟರಲೆ ಹೊಡದರ ಮುಂಗಾರಿಮಳಿ ಸುರದ್‌ಆಂಗ

ಹೊರಗಿನ ಮಂದಿ ಗುಂಡ ಹತ್ತಿಕೆರ ತಿರಿಗೆರ ಆವಾಗ
ಕಾಗದ ಬರದ ಕಳವೆರ ಬೇಗನದಂಡ ಬರಲ್‌ಎಂತ ಹೀಂಗ ॥ ಚ್ಯಾಲ ॥

ದಂಡ ಬಂತ ನೋಡ ತಯಾರ್‌ಆಗಿ
ಜಲದ ಮಾಡಿ ಬಂತ ಹಲಗಲಿಗಿ

ಆರ ತಾಸ ರಾತ್ರ್ಯಾಗ ಹೋಗಿ
ಊರಿಗಿ ಹಾಕಿದಾರ ಮುತ್ತಿಗಿ

ಗುಂಡ ಹೊಡದಾರ ವಿಪರೀತ ಸೂರಿಆಗಿ
ಅಂಜಿ ವೋಡಾಗ್ ಹತ್ತಿತ ಮುಂದ್‌ಆಗಿ

ಬೆನ್ನ ಹತ್ತಿ ನೋಡಿದಾರ ಇವರ್ ಆಗಿ
ಬಿದ್ದಾವ ಹೆಣಗೋಳು ಸೂರಿ ಆಗಿ ॥ ಯೇರ ॥

ಮುತ್ತಿಗಿ ಹಾಕಿ ಅವರು ಕತ್ತಿಲಿ ಕಡದರ ಅಂಜಲಿಲ್ಲ ಯಾತ್‌ಎತಕ

*_*_*_*

೬ ನೇ ನುಡಿ

ಬೆನ್ನ ಹತ್ತಿ ತಿರಿತಿರಿವಿ ಕಡದರೊ ಯೇನು ಉಳಿಯದ್‌ಆಂಗ
ನಡವಿ ಹಾಕಿಕೊಂಡ ಹೊಡದರ ಗುಂಡ ದರಜ ಇಲ್ಲದ್‌ಹಾಂಗ

ಕವಾತ ಫೈರಾ ಸುತ್ತಗಟ್ಟಿ ತಂಬು ನುಡಿಶಾರ ಆವಾಗ
ತೋಪು ತುಬಾಕಿ ಕರುಲಿ ಪಿಸ್ತುಲ ಬಾಕ ನಡವಿನಾಗ

ಶಿಡಿಲಿನ ಹಂತ ಗುಂಡ ಹೊಡವುತ ಕತ್ತಿಲಿ ಕಡದರ ವೊಲತ್‌ಆಂಗ
ನಡುಗಿತು ಬ್ಯಾಡಕಿ ಕೆನ್-ಧೂಳ ಹರಿದ್-ಆಂಗ ಕಡದಾಟವು ಹ್ಯಾಂಗ

ಕೇಡ-ಗಾಲ ಬಂದಿತ ನಡವಿ ಶಿಕ್ಕರೊ ಬಿಡಸವರ್-ಯಾರ್-ಈಗ
ಚಟಿಕಾರರು ಚಾಟಿ ಮಾಡುತ ನಡದರ ಗುಡದಾರ ॥ ಇಳವ ॥

ಅಗಸಿಗೆ ಬಂದು ನಿಂತಿತು
ಹೆಬಲಕ್-ಸಾಹೇಬಂದು ತಾವು ನಿಂತು

ಹೇಳತಾರ ಬುದ್ಧಿಯ ಮಾತು
ಕೊಡತೇವ ಕವಲ ಈ ಹೊತ್ತು
ಹೋಗಬ್ಯಾಡರಿ ವೆರ್ತಾ ನೀವು ಸತ್ತು ॥ ಯೇರ ॥

ಯೆಂಬು ಮಾತಿಗೆ ನಂಬಿಕೆ ಸಾಲದ ಹಣಮ ಬಂದ ಮುಂದಕ

*_*_*_*

೭ನೇ ನುಡಿ

ಜಡಗ ಹೇಳತನ ಹೊಡಿ ಇವರನಾ ಈಗ ಘಾತಕರೊ ಯಿವರಾ
ಇಸವಸ-ಘಾತ ಮಾಡಿ ನೆಂಬಿಗಿಲೆ ಮಾಡತಾರು ಫೀತುರಾ

ಮಾಸ-ಮಾಡಿ ಬಲ-ದೇಶ ತಗೋತರ ಮುಂದ ನಮಗ ಗೋರಾ
ಅಂದ ಹೊಡದಾರೊ ವೊಂದು ಗುಂಡಿಗೆ ಆದ ಸಾಹೇಬ ಟಾರಾ

ಕಾರ್-ಸಾಹೇಬ ಬೆಂಕಿ-ಚೂರ ಆಗಿ ತಾನು ಲೂಟಿ ಮಾಡ್-ಅಂದ ವೂರ
ಹುರಪಿಲಿ ಹೊಡದರ ಮಳಿ ಆದ ಹಾಂಗ ಗುಂಡ ಸುರದವು ಬರಮೂರಾ

ಹಣಮ ಹೇಳತನ ಗುಂಡ ಹೊಡದಕೆರ ಕೆಡವುನ್-ಅಷ್ಟು ಬಾರಾ
ಮುನ್-ನೂರ ಮಂದಿ ಯನ್ನ ಮೇಗೆ ಬಿಟ್ಟ ಆಗ ನೋಡರಿ ಜೋರಾ ॥ ಚ್ಯಾಲ ॥

ಭೀಮನು ಇದರಿಗೆ ನಿಂತಾ
ಐ-ನೂರ ಮಂದಿಗೆ ಮಲತಾ

ಬಾಲನು ಮಾಡಿದ ಕಸರತ್ತಾ
ಕುದರಿಯ ಕಡದನೊ ಹತ್ತಾ

ರಾಮನ ಕಡತ ವಿಪರೀತಾ
ಕಾವಲಿ ಹರಿತೊ ರಕ್ತಾ

ಸಾವಿರ ಆಳಿಗೆ ವೊಬ್ಬ ಮಲತಾ
ಕೂಗತಾನೊ ಕಡಿ-ಕಡಿರ್-ಎಂತಾ ॥ ಯೇರ ॥

ನಾಲ್ಕು ಮಂದಿ ಹೀಂಗ ಕಡದ ಸತ್ತರೊ ಭಂಟರ್-ಅನಸೆರ ಜನಕ

*_*_*_*

೮ನೇ ನುಡಿ

ಯಾರು ಕೇಳಲಿಲ್ಲ ಆರು ಗುಂಡ ತಾಕಿ ಹಣಮ ಬಿದ್ದ ನೆಲಕ
ಚೀರಿ-ಆಡುತ ಜನ ಸುತ್ತಗಟ್ಟಿತಿ ಅಂಜಿ-ಕೊಂಡ ಜೀವಕ

ಶೂರವೊಬ್ಬ ಬಹಳ ಜೋರ ಮಾಡಿದನ ಹತಾರ ತಗೊಳುದಕ
ಯೇರಿ ಬರು ಕುದರಿ ಕಾಲ ಕಡದನೊ ಸ್ವಾರ ಬಿದ್ದ ನೆಲಕ

ರಾಮಿ ಗುಂಡಿಲಿ ಜೋರ ಮಾಡಿ ಹೊಡದಳೊ ಮೂರ ಮಂದಿ ಶಿರಕ
ಆರ ಕುದರಿಯ ಕಡದ ಸಿಡದಳೊ ಬಾಲನ ಸೂರಾಯಕ ॥ ಚ್ಯಾಲ ॥

ಯಾರ್-ಯಾರು ಇಲ್ಲದ್-ಆದೀತು
ಊರ್-ಎಲ್ಲಾ ಲೂಟಿ ಆಗಿ ಹೋತು

ಮಂದಿ ಮನಿ ಹೊಕ್ಕ ಹುಡಕಿತು
ದನ-ಕರಾ ಲಯಾ ಆದೀತು

ಸಣ್ಣ ಕೂಸಗಳು ಹೋದವು ಸತ್ತು
ಬೆಂಕಿ ಹಚ್ಚ್ಯಾರ ವೂರ ಸುಟ್ಟಿತು

ನಷ್ಟ ಆತಿ ನೋಡರಿ ಈವತ್ತು
ನಾ ಹೇಳತೇನ ಈ ಮಾತು ॥ ಯೇರ ॥

ಇಷ್ಟ್-ಎಲ್ಲ ಅಳವ್-ಆಗಿ ಹೋದಿತೊ ಮುಟ್ಟಲಿಲ್ಲ ಯಾತ್-ಎತಕ

*_*_*_*

೯ ನೇ ನುಡಿ

ಕತ್ತಿ ಕುದರಿ ಮುತ್ತು ಮಾಣಿಕಾ ಯಾವದು ಬಿಡಲಿಲ್ಲಾ
ಬೆಳ್ಳಿ ಭಂಗಾರಾ ಹರಳಿನ್-ಉಂಗರಾ ಹೊನ್ನ್-ಉಂಗರ ಗೋಲಾ

ಸರಗಿ ಸರ್ದಳಿ ಬುಗುಡಿ ಬಾವಲಿ ಬಿಡಲಿಲ್ಲ
ಕಡಗ ಕಂಕಣಾ ನಡವಿನ-ಡಾಬಾ ನಡಕಟ್ಟು ರುಮಾಲಾ

ಕುಬಶಾ ಶೀರಿ ಹಪ್ಪಳ ಶಾಂಡಿಗಿ ಕುರ್ಚಿಗಿ ಕುಡಗೋಲಾ
ಕೊಡಲಿ ಕೋಟಿ ಕುಡ-ಕಬ್ಬಿಣಾ ಮಸರು ಬೆಣ್ಣೆ ಹಾಲಾ

ಉಪ್ಪ ಯೆಣ್ಣಿ ಅರಶಿಣ ಜೀರಿಗಿ ಅಕ್ಕಿ ಸಕ್ಕರಿ ಬೆಲ್ಲಾ
ಗಂಗಳಚರಗಿ ಮಂಗಳ-ಸೂತ್ರಾ ತಕೊಂಡ ಹೋದರ ಬಿಸು-ಕಲ್ಲಾ ॥ ಇಳವ ॥

ಹಾಳ್-ಆಗಿ ಹೋದಿತೊ ಇಷ್ಟು
ವರ್ಣಿಸಿ ಹೇಳಲು ಎಷ್ಟು

ಯೆಲ್ಲ ತಗೊಂಡರೊ ಶಿಕ್ಕ್-ಅಷ್ಟು
ಅರ್ದ ನಿಂತರೊ ವೂರಿಗೆ ಕೊಳ್ಳಿ ಕೊಟ್ಟು

ಬೂದಿ ಮಾಡೆರ ಹಲಗಲಿ ಸುಟ್ಟು
ಹಲಗಲಿ ಗುರ್ತ ಎಳ್ಳಷ್ಟು

ಕಾಣಸ್ತ ಹೋದಿತೊ ಕೆಟ್ಟು
ವರ್ಣಿಸಿ ಹೇಳಿದೆನು ಇಷ್ಟು ॥ ಯೇರ ॥

ಕುರ್ತಕೋಟಿ-ಕಲ್ಮೇಶನ ದಯದಿಂದ ಹೇಳುದ-ಕೇಳುದಕ

ಸಂಗ್ರಹ: ಫ್ಲೀಟರು ಸಂಗ್ರಹಿಸಿದ ಲಾವಣಿಗಳು ಸಂ. ಕ್ಯಾತನಹಳ್ಳಿ ರಾಮಣ್ಣ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವ ವಿದ್ಯಾಲಯ, ೧೯೯೧.

ಮಾಗಡಿ ಕೆಂಪೇಗೌಡ

ಅಯ್ಯನಾಡುಗಾರರ ಮಾಗಡಿಲಿ
ನಾಡುಗಾರ ನಂಜೇಗೌಡ ತಂದಾನತಾನೆ
ಮುವ್ವತ್ಮೂರು ಜನಸಂಖ್ಯೆ
ಅರಮನೆ ಒಕ್ಕಲುತನ
ಹಳೆರಾಗಿ ಹುಳಿಮಜ್ಜಿಗೆ
ಉಂಟಾದ ಸಂಸ್ಥಾನ
ನಾಡುಗಾರ ನಂಜೇಗೌಡ
ಮಗನಿಗೆ ಹೆಣ್ಣಿಗಾಗಿ
ಏಳು ಜತೆ ಮೆಟ್ಟು ಸವೆದೂ
ಹೆಣ್ಣು ಮಾತ್ರ ಸಿಕ್ಕಲಿಲ್ಲ
ಅಯ್ಯ ಇಂತಪ್ಪ ಒಕ್ಕಲುತನಕೆ
ಹೆಣ್ಣು ಸೂತ್ರ ಸಿಕ್ಕಲಿಲ್ಲ
ಅಯ್ಯ ಮನೆಯ ಹಣವೆಲ್ಲ
ಖರ್ಚೆ ಆಗಿ ಹೋಯಿತಲ್ಲ
ಅಯ್ಯ ಯಲಹಂಕಕ್ಕೋದನಯ್ಯ
ಹರಿಯಮ್ಮನ ನೋಡುತಾರೆ
ನಂಜೇಗೌಡನ ಹೆಂಡತಿ ಆಗ
ಕುಪ್ಪಮ್ಮ ತಾಯಿಯು
ಒಂಬತ್ತು ತಿಂಗಳ ಬಿಮ್ಮನಸೆ ತಾನು
ಕುಪ್ಪಮ್ಮ ತಾಯಿಯು
ಗಂಡು ಮಗುವನು ಹಡೆದಾಳು
ಶುಕ್ರವಾರದ ದಿನದಲ್ಲಿ
ಮಗನುಹುಟ್ಟಿದ ಮಾರುದೆಸೆ
ಸೊಸೆ ಬಂದ ಕಾಲುದೆಸೆ
ಹೀರೆ ಮಗ ತಿಮ್ಮೇಗೌಡನಿಗೆ
ಸುಖ ಸೋಬನ ಮಾಡಿಸ್ಯಾನು
ಮೂವತ್ಮೂರು ಮಂದಿಯಲ್ಲಿ
ಮೂರು ಜನ ಉಳಿದಾರು
ತಿಥಿ ಮಾಡಲು ಹಣವೆಯಿಲ್ಲ
ಬಾಳ ಬಡಸ್ತಾನ ಬಂದ್ಯೆತೆ ಅಲ್ಲಿ
ತಿಥಿಗಾಗಿ ಅಣ್ಣೋಜಿ ತಾವು
ತಮ್ಮೋಜಿ ತಾವು ಹಣವನ್ನು
ಸಾವನ್ನೆ ಮಾಡುತಾರೆ
ತಿಥಿಯನ್ನ ಮಾಡುತಾರೆ

ತಿಥಿಯಾದ ಬೆಳಗ್ಗೆ ಆದರೆ
ಸಾಲದೋರೆ ಬಂದರಯ್ಯ
ಅಮ್ಮ ಸಾಲವನ್ನು ಕೊಡದಿದ್ದರೆ
ಅಡವು ಆಸ್ತಿಬರೆದುಕೊಡೆ
ಸಾಲಗಾರ ಹಿಂಸೆ ತಡೆಯಲಾರದೆ
ಅಡವು ಆಸ್ತಿ ಬರೆದುಕೊಟ್ರು
ಬರೆದುಕೊಟ್ಟ ಬೆಳಗ್ಗೆ ಆಗ
ಬಿಡಿ ಮನೆಯ ಎಂದರಯ್ಯ
ಮೂರು ತಿಂಗಳು ಮಗುವಾಗ
ಮೈದ ಕೆಂಪೇಗೌಡನಗೆ
ಗಡಿಗೆ ಮಡಕೆ ತುಂಬಿಕೊಂಡು
ಮೈದುನನ ಎತ್ತಿಕೊಂಡು
ಕಣ್ಣುಕಾಣದ ಕುಪ್ಪಮ್ಮನ
ಕೈನಾದರೆ ಹಿಡಿದುಕೊಂಡು
ಮಂಗಲವಾರ ದಿನವಾದರೆ
ಮಾಗಡಿ ಪಟ್ಟಣವ ಬಿಟ್ಟು
ಯಲಹಂಕ ನಮ್ಮ ತೌರೂರಿಗೆ
ಹೋಗೋಣ ನಡಿಯತ್ತೆ
ಅತ್ತೆ ಕುಪ್ಪಮ್ಮ ಏನಂದಳಾಗ
ಕೆಟ್ಟು ತೌರುಮನೆಗೆ ಹೋಗಬಾರದು
ಕೆಟ್ಟು ತೌರುಮನೆಗೆ ಹೋಗಬಾರದು
ಅತ್ತೆ ಮಾತ ಮೀರಿ ಹರಿಯಮ್ಮ
ಈಗ ಕರೆದುಕೊಂಡೆ ಹೋಗುತಾಳೆ
ಹರಿಯಮ್ಮನ ತಾಯಿ ತಂದೆ
ಮಾತನಾಡಿಸಲಿಲ್ಲವಯ್ಯ
ಆಗ ನೋಡುತಾಳೆ ಹರಿಯಮ್ಮ
ಬಾಳ ದುಃಖವೆ ಬರುತೈತೆ
ಆಗ ಅತ್ತೆ ಕೇಳೇ ಕುಪ್ಪಮ್ಮ
ತೌರು ಮನೆಗೆ ಹೋಗಬಾರ್ದು
ಆಗ ಹಿಂದಕೆ ಕರೆದುಕೊಂಡು
ಬರುತಾಳೆ ಹರಿಯಮ್ಮ
ಮಾಗಡಿ ಧರ್ಮ ಚಾವಡಿಯ
ಸೇರಿಕೊಂಡರು ಮೂರು ಜನವು
ಉಣ್ಣೊಕಾದರೆ ಅನ್ನವಿಲ್ಲ
ಉಡುವುದಕೆ ಬಟ್ಟೆಯಿಲ್ಲ
ತಿಂದ ಹಾಲಲಿ ಮೈದನನ್ನ

ಸಾಕುತಾಳೆ ಹರಿಯಮ್ಮ
ನೋಡುತಾರೆ ಹಾರುವರು
ಧರ್ಮ ಚಾವಡಿಲಿರುವುದನ್ನು
ಅಣ್ಣ ಏನಾದರು ಮಾಡಿ
ಇವರ ಚಾವಡಿ ಬಿಟ್ಟು ಓಡಿಸಬೇಕು
ಅಮ್ಮ ಇಲ್ಲಿ ನೀವಿರಕೂಡದು
ಊರಬಿಟ್ಟು ಹೋಗಬೇಕು
ಆಗ ಧರ್ಮ ಚಾವಡಿ ಬಿಟ್ಟು
ಹಿಪ್ಪೆ ತೋಪಿಗೆ ಹೋಗುತಾರೆ
ಆಗ ಸೊಪ್ಪಿನ ಗುಡಿಸಲು ಕಟ್ಟುತಾಳೆ
ಅತ್ತಿಗೆ ಹರಿಯಲಾದೇವಿ
ಅಯ್ಯ ಏಳುಬರಲ ತರುತಾಳೆ
ಏಳು ದುಡ್ಡಿಗೆ ಮಾರುತಾಳೆ
ಅಯ್ಯ ಏಳು ದುಡ್ಡಿನ ಅಕ್ಕಿಪಡಿಯ
ತರುತಾಳೆ ಹರಿಯಮ್ಮ ತಾಯಿ
ಬಾಳ ಕಷ್ಟದ ಜೀವನವು
ಅವರ ಪಾಲಿಗೆ ಬಂದಿತಲ್ಲ
ಒಂದು ವರುಷವಾಯಿತಲ್ಲ
ಎರಡು ವರ್ಷ ತುಂಬಿತಯ್ಯ
ಅಯ್ಯ ಮೂರು ವರ್ಷವಾಯಿತು
ನಾಲ್ಕು ವರ್ಷವೆ ಆಯಿತು
ಅಯ್ಯ ಐದು ವರ್ಷವೆ ಆಯಿತು
ಆರು ವರ್ಷವಾಯಿತು
ಅಯ್ಯ ಏಳು ವರ್ಷವಾಯಿತು
ಎಂಟು ವರ್ಷವಾಯಿತು
ಆಗ ಒಂಬತ್ತು ವರ್ಷವಾಯಿತು
ಹತ್ತು ವರ್ಷವಾಯಿತು
ಆಗ ಹನ್ನೊಂದುವರ್ಷ ಆಯಿತು
ಹನ್ನೆರಡು ವರ್ಷ ಆಯಿತು
ಹನ್ನೆರಡು ವರ್ಷದ ಮಗನಾಗಿ
ಮೈದಯ್ಯ ಕೆಂಪೇಗೌಡ
ಅತ್ತಿಗೆ ನಾನು ಬರಲ ಮಾರೋಕೆ
ಬರುತೀನಿ ನಾನು ಅತ್ತಿಗಮ್ಮ
ಬೇಡಕಾಣೊ ಕೆಂಪೇಗೌಡ
ನೀನು ಪೇಟೆಗೆ ಬರಬೇಡ
ಆಗ ಅತ್ತಿಗೆ ಮಾತ ಮೀರಿ

ಹೊರಟವ್ನೆ ಪೇಟೆಗೆ
ಆಗ ಬರಲೆಂದು ಕೂಗುತಾಳೆ
ಅತ್ತಿಗೆ ಹರಿಯಮ್ಮ
ನೋಡುತಾರೆ ಹಾರುವಣ್ಣ
ಗುರುಕಾರರು ನೋಡ್ಯಾರೆ
ಅಣ್ಣ ನೋಡಿದೇನೊ ಅನ್ನೊಕೆ
ಬಡ ಒಕ್ಕಲರುಡುಗಿರೊ ಸೊಗಸನ್ನು
ಅಣ್ಣ ಏನಾದರೂ ಮಾಡಿ ಇವನ
ನಮ್ಮ ಮನೆಯಲಿಟ್ಟು ಕೊಂಡರೆ
ಎಂದು ಓಡಿ ಬಂದರು ಮಾಡಿ ಇಳಿದು
ಹರಿಯಮ್ಮನ ಬಳಿಗಾಗ
ಅಮ್ಮ ನಮ್ಮ ಮೈದ ಕೆಂಪೇಗೌಡನ
ನಮ್ಮ ಮನೆಯಲಿ ಇರಿಸಿರಮ್ಮ
ಸ್ವಾಮಿ ಆ ಮಾತ ಅನ್ನೊಬೇಡಿ
ನನ್ನ ಮೈದನ ಇರಿಸೊದಿಲ್ಲ
ಎಂದು ಸಿಟ್ಟುಬರೊ ಮಾತನಾದರೆ
ಆಡುತಾಳೆ ಹರಿಯಾಲಮ್ಮ
ಆಗ ಸಮಯವನ್ನೆ ಕಾಯುತಾರೆ
ಅಣ್ಣ ತಮ್ಮ ಹಾರುವರು
ಅಯ್ಯ ಏಳು ಬರಲು ಮಾರುತಾಳೆ
ಅತ್ತಿಗೆ ಹರಿಯಾಲಮ್ಮ
ಮೈದುನ ಕೆಂಪೇಗೌಡನ
ಆಗ ತಿರಿದಾಲಲ್ಲಿ ಸಾಕುವಳೆ
ತಿರಿಗಿ ಈಚಲ ಬೆಟ್ಟಕೋಗಿ
ಏಳು ಬರಲ ಕಟ್ಟುತಾಳೆ
ಬರಲನಾದರೆ ಹೊತ್ತುಕೊಂಡು
ಗುಡಿಸಲ ಬಳಿಗೆ ಬರುತಾಳೆ
ಆಗ ಮನೆಯ ಬಳಿಗೆ ಬರೋಹೊತ್ತಿಗೆ
ಸಳಿಜರವೆ ಬಂದಾವೆ
ಅಯ್ಯ ಏನಪ್ಪ ಮಾಡೋದು
ಬರಲ ಮಾರೋಕಾಗೊದಿಲ್ಲ
ಅಮ್ಮ ಏತಕಮ್ಮ ನಿನಗೆ ಯೋಚನೆ
ನಾನೆ ಬರಲ ಮಾರುತೀನಿ
ಕಂದ ಬೇಡಕಾಣೊ ನನ್ನ ಕಂದ
ಪೇಟೆಗೆ ನೀ ಹೋಗಬೇಡ
ಅಮ್ಮ ಪೇಟೆಗೆ ನಾನೋದರೂವೆ

ಹಾರವರ ಬೀದಿಗೋಗೊದಿಲ್ಲ
ಎಂದು ಅತ್ತಿಗೆಗೆ ಹೇಳವ್ನೆ
ಬರಲ ತಕೊಂಡು ಹೊರಟವ್ನೆ
ಹೋಗಿ ಮಾಗಡಿಯ ಒಕ್ಕಲರ ಬೀದೀಲಿ
ಬರಲು ಎಂದು ಕೂಗುತಾನೆ
ಬರಲು ಎಂದು ಕೂಗಿದ ದನಿಯ
ಕೇಳಿಕೊಂಡರು ಹಾರುವರು
ಅಣ್ಣ ನೋಡಿದೇನೊ ಕೆಂಪೇಗೌಡ
ಒಬ್ಬನೇ ಈಗ ಬಂದವ್ನೆ
ಎಂದು ಮಾಡಿ ಇಳಿದು ಓಡಿಬಂದು
ಕೆಂಪೇಗೌಡನ ಹಿಡದುಕೊಂಡ್ರು
ಕೇಳೊ ಕೇಳೊ ಕೆಂಪೇಗೌಡ
ನಮ್ಮ ಮಾತ ನೀನು ಕೇಳೊ
ಅಯ್ಯ ಹಾಲು ಅನ್ನ ಇಕ್ಕುತೀವಿ
ಸಂಬಳ ನಿನಗೆ ಕೊಡುತೀವಿ
ಅಯ್ಯ ಕೆಲಸ ನೀನು ಮಾಡಬೇಡ
ನಮ್ಮ ಹಿಂದೆ ತಿರುಗಾಡಿಕೊಂಡಿರು
ಎಂದು ಏಳು ಬರಲ ತಕ್ಕೊಂಡರು
ಏಳು ದುಡ್ಡ ಕೈಗೆ ಕೊಟ್ಟು
ಅಯ್ಯ ಮಂಚದ ಮೇಲೆ ಕುಂಡಿಸ್ಯಾರು
ಹಾಲು ಅನ್ನ ಊಟಕ್ಕಿಟ್ರು
ಆಗ ಊಟಮಾಡೊ ಸಮಯದಲ್ಲಿ
ಎರಡು ರಟ್ಟೆ ಹಿಡಿದುಕೊಂಡ್ರು
ಅಯ್ಯ ಬರುವೋದು ನಜವೆ ಆದ್ರೆ
ಹೆಬ್ಬೆಟ್ಟ ಒತ್ತಪ್ಪ
ಆಗ ಒಪ್ಪಂದವ ಮಾಡಿದರು
ಮಾಗಡಿಯ ಕೆಂಪೇಗೌಡ
ಮನೆಗಾದರೆ ಬರುತಾನೆ
ಅತ್ತಿಗೆಗೆ ಹೇಳುತಾನೆ
ಅಮ್ಮ ನಾನಾದರೆ ಹಾರುವರ
ಮನೆಗೆ ಸಂಬಳಕೋಗುತೀನಿ
ಆಗ ಜ್ವರ ಬಂದು ನೆರಳುತಿದ್ದ
ಅತ್ತಿಗೆ ಹರಿಯಮ್ಮ ತಾಯಿ
ಕಂದ ಬೇಡಕಾಣೊ ನನ್ನ ಕಂದ
ಹಾರುವರ ಮನೆಗೋಗಬೇಡ
ಆಗ ಅತ್ತಿಗಮ್ಮನ ಮಾತ ಮೀರಿ

ಹೊರಟು ಹೋದ ಸಂಬಳಕ್ಕೆ
ಕಂದ ಇಂಥ ಕಷ್ಟಪಟ್ಟು ನಿನ್ನ
ಸಾಕಿದೇನೊ ನನ್ನ ಕಂದ
ನನಗೆ ಉತ್ತರ ಹೇಳಿ ನೀನು
ಹೋಗುತೀಯ ನನ್ನ ಕಂದ
ಎಂದು ಬಾಳವಾಗಿ ದುಃಖವನ್ನೆ
ಮಾಡುತಾಳೆ ಅತ್ತಿಗೆ ಹರಿಯಮ್ಮ
ಅಯ್ಯ ಬಂದ ನೀನು ಕೂಲಿಕೆಂಪ
ಬಂದನೇನು ಕೆಂಪೇಗೌಡ
ಅಯ್ಯ ಕೂಲಿಕೆಂಪ ಎಂದ ಮಾತ
ಕೇಳಿದನು ಕೆಂಪೇಗೌಡ
ಅಯ್ಯ ಮಾಗಡಿಗೆ ಮೂಡಲಾಗಿ
ಮೂವ್ವತ್ತು ಎಕರೆ ಜಾಗೀರಿ
ಅಯ್ಯ ಮುವ್ವತ್ತು ಎಕರೆ ಜಾಗೀರಿಗೆ
ಮುಳ್ಳು ಬೇಲಿ ಹಾಕಬೇಕು
ಅಯ್ಯ ಹಗಲು ಅಣ್ಣೋಜಿ ಕಾವಲು
ಇರುಳು ತಮ್ಮೋಜಿ ಕಾವಲು
ಕಗ್ಗಲ ರಾಗಿ ಮುದ್ದೆ ಕಾಣೊ
ಮುಗ್ಗಲುರಳಿ ಸಾರು ಕಾಣೊ
ಅಯ್ಯ ಬಾಳಕಷ್ಟ ಬಂದಿತಯ್ಯ
ಮಾಗಡಿ ಕೆಂಪೇಗೌಡನಗೆ
ಆಗ ಒಂದು ನಿಮಿಷ ನಿಂತುಕೊಂಡ್ರೆ
ಬಾಳೆ ಕಂಬ ಸುತ್ತುತಾರೆ
ಅಯ್ಯ ಎತ್ತಲಾರದ ಗುಂಬಕೊಟ್ರು
ಎತ್ತಲಾರದ ಗುದ್ದಲಿ ಕೊಟ್ರು
ಮುವ್ವತ್ತು ಎಕರೆ ಜಾಗೀರಿಗೆ
ಮುಳ್ಳು ಬೇಲಿ ಕಟ್ಸಿಸ್ಯಾರು
ಅಯ್ಯ ಹಗಲು ನಿದ್ರೆ ಇಲ್ಲವಲ್ಲ
ಇರುಳು ನಿದೆರ ಇಲ್ಲವಲ್ಲ
ಒಂದು ವರ್ಷವಾಯಿತಯ್ಯ
ಎರಡು ವರ್ಷವಾಯಿತಯ್ಯ
ಅತ್ತಿಗೆ ಹರಿಯಾಲದೇವಿ
ಬಾಳ ವ್ಯಥೆಯ ಪಡುತಲವಳೆ
ಆಗ ಮೂರು ವರ್ಷವಾಯಿತಯ್ಯ
ನಾಲ್ಕು ವರ್ಷವಾಯಿತು
ಒಂದು ನಿಮಿಷ ನಿಂತುಕೊಂಡರೆ

ಹುಣಸೆ ಬರಲಲಿ ಹೊಡೆಯುತಾರೆ
ಅಯ್ಯ ಕೆಂಪೇಗೌಡ್ನ ತಾಯಿಯಾದರೆ
ಕೆಂಪೆಗೌಡ್ನ ಮೇಗಳ ಆಸೆಯಿಂದ
ಪ್ರಾಣವನ್ನೆ ಬಿಟ್ಟಳಾಗ
ಆಗ ಅತ್ತಿಗೆ ಹರಿಯಮ್ಮ
ಓಡಿ ಅವನ ಬಳಿಗೆ ಬಂದಳು
ಕಂದ ನಿಮ್ಮ ತಾಯಿ ಸತ್ತಳು
ಮಕವನಾದರೆ ನೋಡುಬಾರೊ
ಆಗ ಅಂಗಂದ ಮಾತಕೇಳಿ
ಅಣ್ಣೋಜಿ ತಮ್ಮೋಜಿ ತಾವು
ಹೋಗಿ ಹೋಗಿ ಹರಿಯಮ್ಮ
ತೋಟದೊಳಕ್ಕೆ ನೀನು ಬರಬೇಡ
ಅಂತಪ್ಪ ಮಾತ ಕೇಳಿ
ಮಾಗಡಿಯ ಕೆಂಪೇಗೌಡ
ಸ್ವಾಮಿ ಬೇಗನೋಗಿ ಅಜ್ಜಿ ಮಕವ
ನೋಡಿಕೊಂಡು ಬರುತೀನಿ
ಅಜ್ಜಿ ಮೊಕವ ತೋರಿಸಿದರು
ಅಣ್ಣೋಜಿ ತಮ್ಮೋಜಿದೀರು
ಅತ್ತಿಗೆ ಹರಿಯಮ್ಮ ತಾಯಿ
ಒಬ್ಬಳೇ ಕಷ್ಟಪಟ್ಟು
ಅಯ್ಯ ಎಂತಪ್ಪ ಸಂಸ್ಥಾನಕೆ
ಏನು ಗತಿಯೆ ಬಂದಿತಯ್ಯ
ಮನೆದೇವರು ರಂಗದಾಮ
ಕುಲದೇವರು ರಂಗಧಾಮ
ಆಗ ರಂಗಧಾಮನ ದಯೆ ಬಂತು
ಕೆಂಪೇಗೌಡನ ಮೇಲೆ ಆಗ
ಆಗ ಯಾಕಾಸಿ ಹಬ್ಬಕಾದರೆ
ತೊಟತಾವು ಒಬ್ಬನೇ ಬಿಟ್ರು
ಅಯ್ಯ ಬಾಳ ಆಯಾಸವಾಗಿ
ಬಾಳೆ ಎಲೆಯ ಕುಯ್ಕಿಕೊಂಡು
ಬಾಳೆ ಎಲೆಯ ಹಾಸಿಕೊಂಡು
ಒಂದು ಎಲೆಯ ಹೊದ್ದುಕೊಂಡು
ಆಗ ಮಲಗ್ಯಾನು ಆವೊತ್ತು
ಅಲ್ಲಿಗೆ ಹನ್ನೆರಡು ವರ್ಷವು
ಮಾಗಡಿಯ ರಂಗಧಾಮ
ಏಳು ಹೆಡೆಯ ಸರ್ಪವಾಗಿ ಬಂದ

ಅಯ್ಯ ಮಲಗಿದ್ದ ಕೆಂಪೇಗೌಡನ
ಎದೆಯ ಮೇಲೆ ಮಲಗ್ಯಾನು
ಅಣ್ಣೋಜಿ ತಮ್ಮೋಜಿ
ಸ್ವಪ್ನನಾದರೆ ಕಂಡರಲ್ಲ
ಅಣ್ಣ ಕೆಂಪೆಗೌಡನಿಗೆ
ಇನ್ನು ದೊರೆತನ ಬರುತ್ತೈತೆ
ಅಣ್ಣ ಕೆಂಪೆಗೌಡನಿಗೆ
ಇನ್ನು ದೊರೆತನ ಬರುತ್ತೈತೆ
ಅಣ್ಣ ನಡಿಯಣ್ಣ ತೋಟತಾಕೆ
ಬೇಗ ಎಂದು ಬಂದರಾಗ
ಆಗ ಓಡೋಡಿ ಬರುತಾರೆ
ತೋಟದ ಹತ್ತಿರಾಕೆ
ಅಯ್ಯ ತೋಟದ ಒಳಗೆಲ್ಲ
ಕೆಂಪೇಗೌಡ್ನ ನೋಡುತಾರೆ
ಬಾಳೆ ಗಿಡದ ನೆರಳಿನಲ್ಲಿ
ಮನಿಗವ್ನೆ ಕೆಂಪೇಗೌಡ
ಮಕಕ್ಕೆ ಬಿಸಿಲು ಒಡೆಯುತ್ತೈತೆ
ಹೆಡೆಯ ನೆರಳು ಮಾಡಿಕೊಂಡು
ಅಯ್ಯ ಮನಗ್ಯಾನೆ ನಾಗರಾಜ
ಮಕಕ್ಕೆ ನೆರಳ ಮಾಡಿಕೊಂಡು
ಅಣ್ಣೋಜಿ ತಮ್ಮೋಜಿದೀರ
ಕಣ್ಣಿಗೆ ಕಂಡು ಸರ್ಪಾವು
ಮಾಯವಾಗಿ ಹೋಯಿತಲ್ಲ
ಮಾಗಡಿಯ ರಂಗಧಾಮ
ಅಯ್ಯ ಎಬ್ಬರಿಸಿದರು ಕೆಂಪೇಗೌಡನ
ಹೇಳಯ್ಯ ಎನ್ನುತಾಗ
ಎದ್ದು ನೋಡಿದ ಕೆಂಪೇಗೌಡ
ಬಾಳ ಆಶ್ಚರ್ಯವಾಯಿತಾಗ
ಆಗ ಕರಕೊಂಡು ಮನೆಗೆ ಬಂದರು
ಮಾಗಡಿ ಕೆಂಪೇಗೌಡನ
ಆಗ ಹಾಲು ಅನ್ನ ಊಟಕಿಟ್ಟು
ಎರಡು ರೆಟ್ಟೆ ಹಿಡಿದುಕೊಂಡ್ರು
ಅಪ್ಪ ಕೇಳಯ್ಯ ಕೆಂಪೇಗೌಡ
ನಮ್ಮ ಮಾತ ನೀನು ಕೇಳು
ಅಪ್ಪ ನಿನಗೆ ದೊರೆತನ ಬಂದರೆ
ನಮಗೆ ಮಂತ್ರಿ ಪದವಿ ಕೊಡಬೇಕು

ಆಗಲಿ ಮಾಸ್ವಾಮಿ ಕೊಡುತೀನಿ
ಎಂದು ಬರೆದು ಕೊಟ್ಟನಲ್ಲ
ಅಯ್ಯ ಹನ್ನೆರಡು ವರ್ಷದ
ಸಂಬಳನಾದರೆ ಕೊಡಲಿಲ್ಲ
ಅತ್ತಿಗೆ ಹರಿಯಮ್ಮ ತಾಯಿ
ಈಚಲ ಬರಲ ಮಾರಕೋಗಿ
ಅಯ್ಯ ಮಾಯದ ಮಳೆಗೆ ಸಿಕ್ಕಿ
ಈಗ ಹರಿಯಮ್ಮ ತಾಯಿ
ಅಯ್ಯ ಈಚಲ ಬರಲು ಕೊಚ್ಚಿಕೊಂಡು
ಹೋಗುತಾವೆ ಹಳ್ಳದಲ್ಲಿ
ಮನೆಗೆ ಓಡಿ ಹೋದನಲ್ಲ
ಮಾಗಡಿಯ ಕೆಂಪೇಗೌಡ
ಆಗ ನೋಡುತಾಳೆ ಹರಿಯಮ್ಮ
ಮೈದುನ ಕೆಂಪೇಗೌಡನ
ಕಂದ ಅವರಾಗಿ ಕಳಿಸಿದರಪ್ಪ
ನೀನಾಗಿ ಬಂದೆಯಪ್ಪ
ಅಮ್ಮ ಅವರಾಗಿ ಕಳಿಸಿದರಮ್ಮ
ನಾನಾಗೆ ಬರಲಿಲ್ಲ
ಅಯ್ಯ ಅವರಾಗಿ ಕಳಿಸಿದ ಮೇಲೆ
ಸಂಬಳವೆಲ್ಲೊ ನನಕಂದ
ಅಮ್ಮ ಸಂಬಳ ಮಾತ್ರ ಕೊಡಲಿಲ್ಲ
ದೋರೆತನ ಬರುತ್ತೆಂದು
ಅಯ್ಯ ಈಚಲು ಬರಲೆಲ್ಲ
ಕೊಚ್ಚಿಕೊಂಡು ಹೋದವಯ್ಯ
ಅಮ್ಮ ಹುಡುಕಿಕೊಂಡು ಬರುತೀನಿ
ಯಾವ ಹಳ್ಳದಲ್ಲಿ ಹೋದವಮ್ಮ
ಕಂದ ಮಾಗಡಿಗೆ ಬಡಲಾಗಿ
ಸೀಗೆ ಹಳ್ಳದಲ್ಲಿ ಹೋದವಪ್ಪ
ಆಗ ಸೀಗೆ ಹಳ್ಳದ ದಾರಿ ಹಿಡಿದು
ಹೋಗುನೆತಾ ಕೆಂಪೇಗೌಡ
ಅಯ್ಯ ಸೀಗೆ ಮರದ ಅಡಿಯಲ್ಲಿ
ಹೂತುಕೊಂಡವೆ ಬರಲು ಎಲ್ಲ
ಹೋಗಿ ನೋಡಿದ ಕೆಂಪೇಗೌಡ
ಈಚಲು ಗರಿ ಕಾಣುತ್ತೈತೆ
ಅಯ್ಯ ಒಂದು ಗರಿ ಹಿಡಿದುಕೊಂಡು
ಎಳೆದಾನು ಕೆಂಪೇಗೌಡ

ಆಗ ದಿಗ್ಗನೆ ಏಳು ಕೊಪ್ಪರಿಕೆ
ಹಣವಾದರು ಎದ್ದಿತಯ್ಯ
ಆಗ ಬಹಳ ಭಯವಾಯಿತಯ್ಯ
ಮಾಗಡಿ ಕೆಂಪೇಗೌಡನಿಗೆ
ಆಗ ಮಾಗಡಿಯ ರಂಗಧಾಮ
ಏಳು ವರ್ಷದ ಹುಡುಗನಾಗಿ
ಅಯ್ಯ ಹೆದರಬೇಡ ಬೆದರಬೇಡ
ಮಾಗಡಿಯ ಕೆಂಪೇಗೌಡ
ಆಗ ನನ ಗುಡಿಯ ಕಟ್ಟಸಯ್ಯ
ಮಾಗಡಿಯ ಕೆಂಪೇಗೌಡ
ರಂಗಧಾಮನ ಗುಡಿಗೆ ತಳಹದಿಯ
ಮಾಡಿಸ್ಯಾನು ಕೆಂಪೇಗೌಡ
ಆಗ ದೊರೆತನ ಬಂದಿತಯ್ಯ
ಮಾಗಡಿ ಕೆಂಪೇಗೌಡನಿಗೆ
ಆಗ ಮಂತ್ರಿ ದಳವಾಯಿ ಪಟ್ಟ
ಹಾರುವರಿಗೆ ಕೊಡುತಾನೆ
ಅಯ್ಯ ಬಾಳ ಐಶ್ವರ್ಯ ಬಂದಿತಯ್ಯ
ಮಾಗಡಿ ಕೆಂಪೇಗೌಡನಿಗೆ
ಆಗ ಒಂಬತ್ತು ಜನ ಪಾಳೇಗಾರರು
ಇವನ ವಶವೆ ಆದರಯ್ಯ
ಅಯ್ಯ ಕೆಂಪೇಗೌಡನಿಗೆ ಮದುವೆಯ
ಮಾಡುತ್ತಾಳೆ ಹರಿಯಮ್ಮ
ಅಯ್ಯ ಕೋಟೆಕೊತ್ತಲುಗಳನು
ಆಗ ಕಟ್ಟಿಸ್ಯಾನೆ ಕೆಂಪೇಗೌಡ
ಆಗ ಅಲಮೇಲು ಮಂಗಮ್ಮಗೆ
ಹೆಣ್ಣು ಮದುವೆ ಆಯಿತಯ್ಯ
ಅಯ್ಯ ಬಾಳ ಪ್ರೀತಿಯಿಂದ
ಸಾಕುತಾರೆ ಹೆಣ್ಣು ಮಗುವ
ಒಂದು ವರುಷ ಆಯಿತಯ್ಯ
ದೊರೆತನ ಬಂದು ಅಲ್ಲಿಗೆ
ಅಯ್ಯ ಎರಡು ಮೂರು ನಾಲ್ಕು ಐದು
ವರ್ಷವಾದರೆ ಆದುವಯ್ಯ
ಆಗ ಮತ್ತೊಂದು ಹೆಣ್ಣು ಮಗುವು
ಹುಟ್ಟಿತಯ್ಯ ಕೆಂಪೇಗೌಡನಿಗೆ
ಆಗ ದಂಡುದಾಳಿ ಕಟ್ಟಿಕೊಂಡು
ಬೆಂಗಾಡಿಗೆ ಹೋದನಯ್ಯ

ಅಯ್ಯ ಬೆಂಗಾಡು ಎಂಬೋದು
ಗಂಡುಭೂಮಿ ಕಾಣಿರಯ್ಯ
ಆಗ ನೊಡುತಾನೆ ಕೆಂಪೇಗೌಡ
ಬಾಳ ಗಂಡು ಭೂಮಿ ಕಾಣಯ್ಯ
ಬೆಂಗಾಡು ಹೋಗಿ ಆಗ
ಬೆಂಗಳೂರು ಆಗುತ್ತೈತೆ
ಎಂದು ಮುವ್ವತ್ತು ಮೈಲಿ ಚದರಳತೆ
ಮಾಡಿಸ್ಯಾನು ಕೆಂಪೇಗೌಡ
ಅಯ್ಯ ಮುವ್ವತ್ತು ಮೈಲಿ ಚದರಳತೆ
ಮೀರಿ ಹೋದ ಕಾಲಕಾದರೆ
ಅಯ್ಯ ಒಬ್ಬರ ತಲೆ ಒಬ್ಬರ ಕೈಲಿ
ಮಡಿಯಲಿ ರಾಜ್ಯವು
ಎಂದು ಶಾಸನ ಮಾಡಿಸ್ಯಾನು
ಮಾಗಡಿಯ ಕೆಂಪೇಗೌಡ
ಮಾಗಡಿಗೆ ಹಿಂದಿರುಗಿ ಆಗ
ಹೊರಟೈತೆ ದಂಡುದಾಳಿ
ಅಯ್ಯ ಪೂಜಾರಿ ಪುಟ್ಟಣ್ಣನ
ಹೇಳಿ ಕರಸಿದ ಕೆಂಪೇಗೌಡ
ಅಯ್ಯ ನಾಳೆ ಆದರೆ ರಂಗಧಾಮನ
ಪೂಜೆಗೆ ನಾವು ಬರುತೀನಿ ಪುಟ್ಟಣ್ಣ
ಆಗ ಬೆಳಗಿನ ಜಾವದಲಿ ಪೂಜಾರಿ
ಹೂವಿನ ತೋಟಕ್ಕೆ ಹೋದಾನು
ಆಗ ದೇವಲೋಕದ ಬಿಳಿಯ ಆನೆ
ಹೂವಿನ ಗಿಡಕೆ ಮೈಯ ಉಜ್ಜಿ
ಒಂದು ಹುವ್ವನಾದರೆ ಕುಯ್ಯಿಕೊಂಡು
ಬಂದನಲ್ಲ ಪೂಜಾರಿ
ಆಗ ಪೂಜೆ ಹೊತ್ತಗೆ ಬಂದನು
ಮಾಗಡಿಯ ಕೆಂಪೇಗೌಡ
ಆಗ ಪ್ರಸಾದವನ್ನು ಕೊಡುತಾನೆ
ಪೂಜಾರಿ ಪುಟ್ಟಣ್ಣ
ಆಗ ಅಣ್ಣೋಜಿ ತಮ್ಮೋಜಿ
ಹಿಂದುಗಡೆ ನಿಂತವ್ರೆ
ಅಯ್ಯ ಹೂವಿನಲ್ಲಿ ಬಿಳಿಯ ಕೂದಲ
ತೋರಿಸುತಾರೆ ಮಂತ್ರಿಗಳು
ಅಯ್ಯ ನೋಡಿದೇನೊ ಕೆಂಪೇಗೌಡ
ರಂಗಧಾಮ ಮುದುಕನಾದ

ಅಯ್ಯ ಮುದಿಯ ರಂಗಧಾಮ
ಗಂಡು ಮಕ್ಕಳ ವರವನ್ನು
ಅಯ್ಯ ಹ್ಯಾಗೆತಾನೆ ಕೊಡುತಾನೊ
ಮಾಗಡಿ ಕೆಂಪೇಗೌಡ
ಅಯ್ಯ ಸೋಮೇಶ್ವರನ ಗುಡಿಯ ಕಟ್ಟಿಸು
ಗಂಡು ಮಕ್ಕಳಾಗುತಾವೆ
ಆಗ ಅಂಗಂದ ಮಾತು ಕೇಳಿ
ಹೂವನ್ನೆ ನೆಲಕೆ ಹಾಕಿಬಿಟ್ಟ
ಅಯ್ಯ ಕಾಲಿನಿಂದ ಹೊಸಗ್ಯಾನು
ಮಾಗಡಿ ಕೆಂಪೇಗೌಡ
ಅಯ್ಯ ಬಂತಲ್ಲೊ ತಿರುಗಿ
ಕೇಡುಗಾಲ ಕೆಂಪೇಗೌಡಗೆ
ನಾನಾದರೆ ದೊರೆಯಾಗಿ
ಮುದಿ ರಂಗಧಾಮನ ಪೂಜೋದಿಲ್ಲ
ಅಯ್ಯ ಸೋಮನಾಥನ ಗುಡಿಗಾದರೆ
ತಳಹದಿಯ ಮಾಡಿಸ್ಯಾನು
ಆಗ ಸೋಮನಾಥ ಗುಡಿಯ ಕಟ್ಟಿ
ಮನೆಗೆ ಬಂದ ಕೆಂಪೇಗೌಡ
ಅಯ್ಯ ಅರ್ಧರಾತ್ರಿ ಒಳಗೆ
ರಂಗಧಾಮ ದೃಷ್ಟಿ ಬಿತ್ತು
ಅಯ್ಯ ಬೆಳಗಾಗೊಹೊತ್ತಿಗೆ
ಗುಡಿಯೆಲ್ಲ ಬಿದ್ದಿತ್ತು
ನೋಡುತಾನೆ ಕೆಂಪೇಗೌಡ
ಗುಡಿಯೆ ಬಿದ್ದು ಹೋಗ್ಯೆತೆ
ಆಗ ಬಿಮ್ಮನಸೆ ಬಲಿಯನಾದ್ರೆ
ಕೇಳಿತು ಆ ಗುಡಿಯು ಆಗ
ಅಯ್ಯ ಆಲಮೇಲ ಮಂಗಮ್ಮ
ಆರು ತಿಂಗಳ ಬಿಮ್ಮನಸೆ
ಆಗ ಅಂತ ಬಿಮ್ಮನಸೆ
ಬಲಿಯ ಕೊಡಿಸಿದ ಕೆಂಪೇಗೌಡ
ಆಗ ಮಾಗಡಿ ರಂಗಧಾಮ
ಏಳು ವರ್ಷದ ಹುಡುಗನಾಗಿ
ಅಯ್ಯ ವಾರಕೊಂದು ಪೂಜೆನಾರ
ಮಾಡಿಸಪ್ಪ ಕೆಂಪೇಗೌಡ
ಎಂದು ಅವನು ಕೇಳುತಾನೆ
ಅಯ್ಯ ಅಂತ ಮಾತ ಕೇಳಿದಾನು

ಮುಚ್ಚು ಗೋಡೆ ಹಾಕಿಸ್ಯಾನು
ರಂಗಧಾಮನ ಗುಡಿಗಾದರೆ
ಆಗ ಅತ್ತಿಗೆ ಹರಿಯಾಲಮ್ಮ
ಹೋಗುತಾಳೆ ರಾಜಾಲಯಕೆ
ಕಂದ ಸಿರಿತನ ಕೊಟ್ಟ ರಂಗಧಾಮನ
ಮರೆಯಬೇಡ ಕೆಂಪೇಗೌಡ
ಅತ್ತಿಗೆ ಆಡೋ ಮಾತು ಕೇಳಿ
ನಿನ್ನನ್ಯಾರು ಕರೆದೋರು
ಎಂದು ಈಚೆಗೆ ತಳ್ಳಿದಾರು
ಬಾಕಲಲ್ಲಿ ಪ್ರಾಣಬಿಟ್ಲು
ಅಲ್ಲಿಗನ್ನೆರಡು ವರ್ಷ ದೊರೆತನ
ಆದಮೇಲೆ ಅವನಗೆ
ವಿನಾಶಕಾಲ ಬಂದಿತಯ್ಯ
ಮಾಗಡಿ ಕೆಂಪೇಗೌಡ್ಗೆ
ಅಯ್ಯ ಒಂದೊಂದೆ ಲಯಕಾಲ
ಬಂದೀತು ಮಾಗಡಿಗೆ
ಅಯ್ಯ ಸತ್ಯದ ನುಡಿಯ ಲಾಲಿಸಿರಿ
ಸತ್ಯಕೆ ಶಿರವ ಬಾಗಿಸಿರಿ
ಅಯ್ಯ ಹಾಳು ಪಾಪಿ ಹಾರುವರು
ಹೋಳು ಸಂಚು ನಡಿಸ್ಯಾರು
ಅಯ್ಯ ಬೇಕಾದಷ್ಟು ಮದ್ದುಗುಂಡು
ಇಡಿಸ್ಯಾನೆ ಕೆಂಪೇಗೌಡ
ಆಗ ಮಾಗಡಿ ರಂಗಧಾಮ
ಮೈಸೂರು ಚಾಮುಂಡಿ ಬೆಟ್ಟಕ್ಕೆ
ಹೋಗಿ ಚಾಮುಂಡಿ ಬೆಟ್ಟಕ್ಕೆ
ಹೋಗಿ ಚಾಮುಂಡಿ ಮರೆಯನ್ನು
ಬೀಳುತಾನೆ ರಂಗಧಾಮ
ಆಗ ಮಾಗಡಿಯ ಕೆಂಪೇಗೌಡ
ಸೂಳೆ ಚೆನ್ನಕ್ಕನ ಮನೆಯಲವ್ನೆ
ಮಟ್ಟ ಮಂಗಳವಾರ ಗಂಡನಾದ್ರೆ
ಎಬ್ರಿಸವ್ಳೆ ಚಾಮುಂಡಮ್ಮ
ಆಗ ಒಂಬತ್ತು ಜನ ಪಾಳೆಗಾರ್ರು
ಮಾಗಡಿಯಲ್ಲಿಲ್ಲವಯ್ಯ
ಅಯ್ಯ ಚಾಮುಂಡೇಶ್ವರಿ ದಂಡು ಬಂದು
ಮಾಗಡಿಯ ಮುತ್ತಿತಯ್ಯ
ಆಗ ಅಣ್ಣೋಜಿ ತಮ್ಮೋಜಿ

ನೋಡಿದರು ದಂಡನ್ನು
ಅಣ್ಣ ಇದು ಒಳ್ಳೆ ಸಮಯ
ಕೆಂಪೇಗೌಡ್ನ ಕೊಲ್ಲಿಸಕ್ಕೆ
ಅಯ್ಯ ಇದ್ದ ಮದ್ದು ಗುಂಡಿಗೆಲ್ಲ
ಎಳ್ಳುರಾಗಿ ಬೆರಸ್ಯಾರು
ಆಗ ಸೂಳೆಯ ಮನೆಯಲ್ಲಿ
ನೆಲಮಾಳಿಗೆ ಸೇರ್‍ಯಾನು
ಆಗ ಚಾಮುಂಡಿ ದಂಡಾದರೆ
ನುಗ್ಗೈತೆ ಮಾಗಡಿಗೆ
ಆಗ ಸೂಳೆಮನೆ ಸುತ್ತ
ಉಕ್ಕಿನ ದಸಿ ನೆಡಿಸ್ಯಾಳು ಚಾಮುಂಡಿ
ಅಯ್ಯ ಒಂದು ಕ್ಯಾಕ ಹಾಕ್ಯಾನು
ಕೆಂಪೇಗೌಡನಾವಾಗ
ಅಯ್ಯ ಹುಲಿಯೂರು ದುರ್ಗದ
ಬೆಟ್ಟದ ಮೇಲೆ ಹಾಕ್ಯಾನು
ಆಗ ಕನಕದಮಟೆ ಕುಲವಾಡಿ
ಅವನೊಬ್ಬನವನಯ್ಯ
ಚಾಮುಂಡೇಶ್ವರಿ ದಂಡಾದರೆ
ಬೆಟ್ಟಸುತ್ತ ಮುತ್ತಿತಯ್ಯ
ಬೆಟ್ಟದ ಸುತ್ತ ಉಕ್ಕಿನದಸಿ
ಏಳು ಮೈಲಿ ದೂರವು
ಮದ್ದುಗುಂಡಿಗೆ ಕುಲವಾಡಿಯ
ಓಡಿ ಕಳಿಸಿದ ಕೆಂಪೇಗೌಡ
ಆಗ ಎಳ್ಳು ಬೆರಸಿದ ಮದ್ದುಗುಂಡ
ಕೊಟ್ಟು ಕಳಿಸಿದರು ಹಾರುವರು
ಅಣ್ಣ ಇದು ಒಳ್ಳೆ ಸಮಯವು
ಕೆಂಪೇಗೌಡ್ನ ಕೊಲಿಸಾಕೆ
ಆಗ ಚಾಮುಂಡೇಶ್ವರಿ ದಂಡು ಆದ್ರೆ
ಸಂಹಾರ ಮಾಡುತಾನೆ ಕೆಂಪೇಗೌಡ
ಆಗ ಚಾಮುಂಡೇಶ್ವರಿ ತೀರ್ಥಹಾಕಿದಳು
ದಂಡಾದರೆ ಮೇಲಕೇಳುತದೆ
ಅಯ್ಯ ಮದ್ದುಗುಂಡಿನ ಸಹಾಯವಿಲ್ಲದೆ
ಸೋತು ಬಿಟ್ಟ ಕೆಂಪೇಗೌಡ
ಆಗ ಹಿಂದು ಮುಂದು ನೋಡುತಾನೆ
ಮಾಗಡಿಯ ಕೆಂಪೇಗೌಡ
ಅಯ್ಯ ಒಂದು ಕ್ಯಾಕ ಹಾಕುತಾನೆ

ಮಾಗಡಿಯ ಕೆಂಪೇಗೌಡ
ಆಗ ಬೆಟ್ಟದ ಮ್ಯಾಲಿಂದ ನೆಗುದಾನೆ
ಮಾಗಡಿಯ ಕೆಂಪೇಗೌಡ
ಅಯ್ಯ ಒಂದು ಹಿಂಗಣ್ಣು ಹೊಡೆದಾನೆ
ಅಯ್ಯ ಎರಡು ಹಿಂಗಣ್ಣು ಹೊಡೆದಾನೆ
ಅಯ್ಯ ಕೊನೆ ಉಕ್ಕಿನ ದಸಿಗೆ
ನಾಟಿಕೊಂಡ ಕೆಂಪೇಗೌಡ
ಆಗ ಓಡಿ ಹೋದ ರಂಗಧಾಮ
ಕೆಂಪೇಗೌಡನದ್ದ ಬಳಿಗೆ
ಅಯ್ಯ ಈಗಲಾದರು ನನ್ನ ಪೂಜೆ
ಮಾಡಿಸೀಯ ಕೆಂಪೇಗೌಡ
ಆಗ ಹೋಗೊ ಹೋಗೊ ರಂಗಧಾಮ
ನಿನ್ನ ಮಕ ನೋಡೋದಿಲ್ಲ
ಅಲ್ಲಿಗೆ ಚಾಮುಂಡೇಶ್ವರಿ ಓಡಿಹೋಗಿ
ಎರಡು ಕೈಯ್ಯ ಜೋಡಿಸ್ಯಾಳು
ಕೆಂಪೇಗೌಡ್ನ ಕೈಯಿಗೆ
ಹಣತೆ ಆದರೆ ಹಚ್ಚಿಸ್ಯಾಳು
ಆಗ ಕೆಂಪೇಗೌಡ್ನ ದೊರೆತನ
ಹನ್ನೆರಡು ವರ್ಷವು ನಡೆಯಿತು
ಆಗ ಚಾಮುಂಡೇಶ್ವರಿ ಹಿಂದಿರುಗಿ
ಚಾಮುಂಡಿಬೆಟ್ಟ ಸೇರಿಕೊಂಡ್ಲು
ಆಗ ರಂಗಧಾಮ ಬಂದು
ಶ್ರೀರಂಗಪಟ್ಣ ಸೇರಿಕೊಂಡ
ಆಗ ಕೆಂಪೇಗೌಡ್ನ ಹೆಣ್ಣಮಕ್ಳು
ವರ್ಷಕ್ಕೆ ಒಂದು ಸಾರಿ
ಅಯ್ಯ ರಂಗಧಾಮನ ಜಾತ್ರೆಯನ್ನು
ನಡೆಸುತಾರೆ ಹೆಣ್ಣು ಮಕ್ಳು
ಹಾಲಿ ಹಸುಮಕ್ಕಳಿಗೆ
ಹಾಲು ಅಂಬಲಿದಾನ ನಡೆಯುತ್ತೈತೆ
ಅಲ್ಲಿಗೆ ಕೆಂಪೇಗೌಡ್ನ ಕತೆಯೆ
ಅಂಕಿತವಾಯ್ತು ತಂದೆನಾನಿತಾನೆ

ಸಂಗ್ರಹ: ಅಲೆಮಾರಿ ಸಮುದಾಯಗಳ ಅಧ್ಯಯನಮಾಲೆ ದೊಂಬಿದಾಸ, ಕುಪ್ಪೆ ನಾಗರಾಜ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೨೦೦೮.

ಸಂಗೊಳ್ಳಿ ರಾಯಣ್ಣ

ಪುಂಡ ಕಿತ್ತೂರ ನಾಡಿನೊಳಗ ಭಂಡಾಯ ಮಾಡಿದರಾಯಾ ।
ಪಂಡಿತರೆಲ್ಲಾ ಇಟ್ಟ ಕೇಳರಿ ಚಿತ್ತಾ ॥ ಪಲ್ಲ ॥

೧ ನೆಯ ಚೌಕ:

ಅಂವ ಜಾತಿಲೆ ಕುರಬ ಭೀರುನ ಭಕ್ತಾ
ಹಳಬ ಸರಕಾರದ ಚಾಕರಿ ಮಾಡುತಿದ್ದೊ ಸಿಸ್ತಾ
ಕುಲಕರ್ಣಿ ದಶಿಯಿಂದ ಪೈಲೆ ಕದನ ಹುಟ್ಟಿ ಊರಬಿಟ್ಟ
ಸುತ್ತೆಲ್ಲ ಹಾವಳಿ ಮಾಡಿದೋ ವಿಪರೀತಾ
ಬಂಟ ಇದ್ದರ ಇರಬೇಕೋ ಪುಂಡ ರಾಯ ಪ್ರಖ್ಯಾತ
ಮುಂದಿನ ಕೆಡಗಾಲಕ್ಕಿನ್ನ ಅಂದಾನೋ ಬ್ರಾಹ್ಮಣ್ಣ
ಬಂದ ಉಟ್ಟಿರುವ ಧೋತ್ರಾ ಒಗತಾರಾಕೋ ರಾಯಾ ನೀನಾ ।

ಹಳಬನಾದ ಮೇಲೆ ಹೇಳಿದ ಮಾತ ಮೀರುವರೇನಾ ।
ತುಸು ಅಲಕ್ಷ ಮಾಡದೆ ಪಾಲಿಸೆನ್ನ ವಚನಾ
ಸಿಟ್ಟಿಗೆದ್ದ ಅಂತಾನ ರಾಯಾ ಉಟ್ಟಿರುವ ಧೋತ್ರಾ
ಒಗತರಲಾಕು ಬಿಟ್ಟ ಆಳಗಳ ಕೆಲಸ ಮಾಡವಲ್ಲ ನಾನಾ ।
ಎಂಥ ಕೆಟ್ಟ ಮಾತನಾಡಿದೆಪ್ಪ ಬಾಳಣ್ಣ ನೀನಾ
ಕಡಿಯಂದ್ರ ನೂರ ಮಂದೀನ ಹೊಡಿಯಾವ
ಹೊಡಿಯಂದ್ರ ನೂರ ಮಂದೀನ ಕಡಿಯಾವ
ಇಂಥ ಡೊಮ್ಯಾನ ಕೆಲಸ ಮಾಡಲಾಕ ನಾಚಿಕಿಲ್ಲೇನ
ಬಗ್ಗಿ ಒಲಿಯ ಊದಿ ಬಸದ ಬಾಣಾ ಮಾಡಾವಲ್ಲೋನಾ ।
ದೊಡ್ಡ ದೊಡ್ಡ ಮೇಲಮಾಳಿಗಿ ಅಂತ್ರಾಟಿಲೆ ಜಿಗದ ಹೋಗುವಾಂವ ನಾನಾ ।
ಮನಸಿನೊಳಗ ಇಟ್ಟ ಬ್ರಾಹ್ಮಣ್ಣ ಮೈಲಿಗಿ ಧೋತ್ರಾ
ಮನಿಗಿ ತಂದು ಸಿಕ್ಕರ ಸಿಗಲಿ ನನ್ನ ಕೈಯೊಳಗೊಂದಿನಾ
ಬಗ್ಗಿಸಿ ಡುಬ್ಬದ ಮೇಲೆ ಕಲ್ಲು ಹೇರಿ ಕಳಿಯುವೆನು ಮಾನಾ ।
ಇತ್ತ ಎರಡು ಮೂರು ತಿಂಗಳ ಮತ್ತೆ ಹೊತ್ತ ಹೋದ ಮೇಲೆ
ಒತ್ತರಲೆ ಕೊಡೂದು ಸರಕಾರದ ಪಾಳೆವನಾ ।
ಕುಲಕರ್ಣಿ ಅಂತಾನ ಮೀಸೆ ಹುರಿ ಹಾಕಿ ಮಾಡಲಿನ್ನೇನಾ ।
ರಾಯಣ್ಣನ ಮನೆಗೆ ಕಳುಹಿದ ನಾಲ್ಕು ಮಂದಿ ಹಳಬರನಾ ।
ನಾಳೆ ಪಾಳೆ ಕೊಡದಿದ್ರ ಓಳಿ ಆಡಿವಂತ ಹೇಳ್ರಿ ಆಂವದೇನಾ ।
ಬಿಸಾಟ ಮಳ್ಳ ಕುರಬಂದಾ ಜಾಸ್ತಿ ಕಡಿಮೆ ಮಾತಾಡಿದ್ರ ಎಳತರ್‍ರಿ ಅವನಾ ।

ಚಾಲ:

ನಾಲ್ಕ ಮಂದಿ ಹಳಬರಿಗೆ ಕೈಮುಗದ ಹೇಳತಾನ ರಾಯಾ
ಮಾಡಬ್ಯಾಡ್ರಿ ನಮ್ಮನ್ನ ಅಬರುಗೇಡಾ ।
ಮನಿಯಾಗ ಅದಾವ ಚಲೋ ಹೋರಿ ಜೋಡಾ
ನಾಳೆ ಕಿತ್ತೂರ ಸಂತಿಗೆ ಹೋಗಿ ಆತುರದಿಂದಲೆ ಮಾರಿ
ತರತೀವೆಪ್ಪ ಅಣ್ಣ ತೋಡ ಜೋಡಾ ॥

ಇನ್ನ ಬಾಳ ಮಾತಾಡಿದ್ರ ಅಲ್ಲ ಪಾಡಾ
ಕಣ್ಣೀರ ಉದರಸುತೆ ರಾಯಾ ಎರಡು ಹೋರಿ ಕನ್ನಿಬಿಟ್ಟ
ಕೈಯಲ್ಲಿರುವ ಕತ್ತಿ ಕಟ್ಟಿದ ನಡಾ
ನೋಡಿ ತಾಯಿ ಅಂತಾಳ ಮಗನೆ ಹೋಗ ಬೇಡಾs
ಕೂಡ ಸುಮ್ಮನರು ಹಡದವ್ವ ನೀನಾ ।
ಹೆಮ್ಮೆ ಬಹಳ ಕುಲಕರಣಿದು ಪಾಳೆದ ರೂಪಾಯಿ ಹೋರಿ
ಮಾರಿ ಕೊಡುವೆನ ತುರ್ತಾ ।

ಹಿಂದುಗಡೆ ಅವನ ಬನವಿಗೆ ಬೆಂಕಿ ಹಚ್ಚುದು ತುರ್ತಾ
ಇಷ್ಟ ಹೇಳಿ ಸಂತಿಗಿ ಹೊಡಕೊಂಡು ಹೋದ ಸಮರ್ಥ
॥ ಮುಂಡ ಕಿತ್ತೂರ ನಾಡಿನೊಳಗ............. ॥

೨ ನೇ ಚೌಕ:

ಹಳಬರ್ಹೋಗಿ ಕುಲಕರ್ಣಿಗೆ ಹೇಳ್ಯಾರ ರಾಯಣ್ಣಾಡಿದ ಮಾತಗಳೆಲ್ಲಾ ।
ಪಾಳೇದ ರೂಪಾಯಿ ಹೋರಿ ಮಾರಿ ಕೊಡತೀನ ತಂದಾ ।
ನಿಮ್ಮ ಮ್ಯಾಲ ಸಿಟ್ಟಾಗಿ ಕರಕರ ಹಲ್ಲ ತಿಂದಾ ।
ನಮ್ಮ ಹುಜೂರ ಇಷ್ಟೆ ಹೇಳಿ ಕಿತ್ತೂರ ಸಂತಿಗೆ ಹೋದಾ
ಬಿಟ್ಟರ ಕುಲಕರ್ಣಿ ನಿಂದಿಗೆ ಉಟ್ಟಂಗ ಹೆಂಗಸರ ಸೀರಿ
ತೊಟ್ಟಂಗ ಕುಬ್ಬುಸವೆಂದು ನಿಷ್ಟುರ ಹೇಳಿದಾ ।
ಭಂಟ ಭರಮಣ್ಣನ ಹೊಟ್ಟಿಲೆ ಹುಟ್ಟಿ ಇರಬಾರದೆಂದಾ ।
ಊರ ಕುಲಕರ್ಣಿ ಬರದಾನ ವಾರಂಟ ಪತ್ತರಾ ವಾಯಿದೆ ಮೀರಿತೆಂದಾ ।

ರಾಯಣ್ಣನ ಮನೆಗೆ ಸೆಮನಾಸ ಹಚ್ಚಿದಾ
ರಾಯಣ್ಣನ ತಂದಿ ಭರಮಣ್ಣ ನೋಡಿ ಕಣ್ಣಿಗೆ ನೀರತಂದಾ
ನಾಳೆ ಪಾಳೆ ಕೊಡಲೀನ ತಂದ ಕುಲಕಣಿ ಪಾದಹಿಡದಾ
ಕರುಣ ಬರಲಿಲ್ಲ ಹಿಕ್ಕಟ್ಟಿನ ಕುರಿಕುರಿಯಿಂದ
ಜೋರಿಲೆ ನೂಕೂತ ಚಾವಡಿಗೆ ಒಯ್ದಾ ॥

ಚಂಡ ಬಾಗಿಸಿ ಡುಬ್ಬದ ಮ್ಯಾಲ ಕಲ್ಲ ಹೇರಿದಾ
ಎರಡು ಹೋರಿ ಮಾರಿ ರಾಯಾ ಒಡಲೊಳು ತಳಮಳಿಸುತ್ತಾ
ಚಿಂತಿ ಮಾಡುತಲಿ ಕೊಟ್ಟ ಚೀಟಿ ಬರದ ಮುನ್ನೂರಾ
ರೂಪಾಯಿ ತೆಗೆದುಕೊಂಡ ಪದರೊಳಗ ಕಟ್ಟಿದಾ

ಸಂಜಿ ತಾಸೊತ್ತ ಇರತ ತನ್ನ ದಾರಿ ಹಿಡದಾ ।
ದೀಪಾ ಹಚ್ಚಿದ್ದಿಲ್ಲ ಇನ್ನೂ ಸಂಗೊಳ್ಳಿಯ ಸೀಮಿಕಂದಾ ।

ಮನಿಗೆ ಬಂದ ತನ್ನ ತಾಯಿಗೆ ನೀರ ಕೊಡೆಂದಾ ।
ಕೆಂಚವ್ವ ನೀರಕೊಟ್ಟ ಹೇಳ್ಯಾಳ ಕಂತ್ರಾಟ ಆದದ್ದಾ ।
ಕೇಳಲಿಲ್ಲ ಕುಲಕರ್ಣಿ ಹಿರಿಯಾನ ಗೊಳಮಾಡಿ ।
ಒಯ್ದಿದಾರ ಹೇರಿದಾರ ಡುಬ್ಬದ ಮ್ಯಾಲ ಕಲ್ಲ ।

ಚಾಲ:

ಶಿವ ಶಂಕರ ವ್ಯಾಳೆ ತಂದ ನಮ್ಮ ಮ್ಯಾಲಾ
ರೂಪಾಯಿ ತಕ್ಕೊಂಡ ಹೋಗಿ ರಾಯಾ ಉಪಾಯವಿಲ್ಲಾ
ಸರಕಾರ ಮಾಲೆಂದ ಪಾಳೆಕೊಟ್ಟ ಡುಬ್ಬದಮಾಲಿನ ಕಲ್ಲಾ
ಕಡಿಕ ತಗದ ತಿಂದ ಕುಲಕರ್ಣಿ ಮ್ಯಾಲ ಕರಕರ ಹಲ್ಲತಿಂದಾ ।
ತಂದಿನ ಮನಿಗೆ ಕರಕೊಂಡ ಹೋಗಿ ವಂದನೆ ಮಾಡಿ ಹೇಳತಾನ ರಾಯಾ ।

ಇಂದಿಗಿ ಬಿಟ್ಟ ಬಿಡ್ರಿ ನನ್ನ ಹಂಬಲಾ ।
ನಿಮ್ಮ ಹೊಟ್ಟೆಲಿ ಹುಟ್ಟಿದ ಪುತ್ರ ನಾಯೇನಲ್ಲಾ ।
ಮಡದಿ ಕೊರಳಾಗಿನ ಗುಳದಾಳಿ ಹರದ ನಡದಾನ
ಕುಲಕರ್ಣಿ ಹೊಲಕ ಜೋಳ ಚಾಪಿಸಿದ ಅಗಣಿತ
ಲಂಕಾ ಹಾರ್‍ಯಾಡಿದಂಗೋ ವೀರ ಹನುಮಂತ
ವೈರಿ ಮನಗೆ ಬೆಂಕಿ ಹಚ್ಚಿ ನಡದಾನ ಹಿಡಿರಂತ
॥ ಪುಂಡ ಕಿತ್ತೂರ ನಾಡಿನೊಳಗ........................ ॥

೩ನೇ ಚೌಕ:

ಜೀವದ ಗೆಳೆಯ ಬಿಚ್ಚಗತ್ತಿ ಚನಬಸುನ ಹಂತೇಲಿ ಹೋಗಿ ।
ರಾಯಣ್ಣ ಕರದ ಕೇಳತಾನ ಏಕಾಂತ ತಳ್ಳಿಮಾಡಿ ಬಂದಿನ
ಕುಲಕರ್ಣಿ ಬಾಳ್ಯಾನ ಮ್ಯಾಗ ।
ದೇಹ ಜೀವದ ಕಬರ ಇಲ್ಲೋ ಎಳ್ಳಿನಷ್ಟ ನನಗ ।
ಚನಬಸು ಅಂತಾನ ಗೆಳೆಯಾ ಸುಸ್ತಿ ಮಾಡಬ್ಯಾಡ ಸದ್ಯ
ಶಿವಗುತ್ತಿ ಅರಸನ ಹಂತೇಲಿ ಹೋಗಬೇಕ ಬೇಗ
ಒಬ್ಬ ಪುಂಡ ಅದಾನಂತ ಅವನ ದಂಡಿನೊಳಗ

ಸೂರ ರಾಯಾ ಸುದ್ದಿಕೇಳಿ ಯುದ್ಧಮಾಡಿ ಅವನ ಪ್ರಾಣಾಗೆದ್ದ ತರಬೇಕಂತ ।
ಎದ್ದಾನ ಆಗಿಂದಾಗ ಕತ್ತಿ ಡಾಲ ಪೊಶೇಕ ಶಿಸ್ತ ಹಿಡದ ನಡದಾನ ಕೈಯಾಗ ।
ಚನ್ನಬಸವಣ್ಣನವರ ನಿನ್ನ ಕೃಪಾ ಇರಲಿ ನನ್ನ ಮ್ಯಾಗ ।
ಅರಸನ ಹಂತೇಲಿ ನಿಂತಹೋಗಿ ಸರಸದಿಂದ
ಮುಜರಿ ಹೊಡೆದ ಕರಸರಿ ಅಂತಾನ ರಾಯಾ ನಿಮ್ಮ ಬಂಟಗ
ನಾನು ಬಹದ್ದೂರ ಮಲ್ಲಸರ್ಜನ ಹಳಬ ಕಿತ್ತೂರ ನಾಡಾಗ
ಕಣ್ಣಿಲೆ ನೋಡಿ ಕುಸಿಬಂದ ಮನ್ನಿಸಿ ಕರದಕೂಡ್ರಿಸ್ಯಾನ ಅರಸ
ಸಣ್ಣಾಂವ ಕಾಣಸ್ತಿ ಲಡಾಯಿ ಮಾಡುವದ್ಹೆಂಗ
ಅಚನ ಕೈಯಾಗ ಪ್ರಾಣಹೊಂದಿ ಸುಮಾರಮಾಡಿ ನನಗ
ಮಡಿದಂಗ ಆದಿತೋ ಅಭಿಮನ್ಯು ಚಕ್ರಭೀಮರಕೋಟ್ಯಾಗ ।
ಗೊಬ್ಬರಕ್ಕೊಗದಂಗ ಆದೀತೋ ಬೆಂಕಿ
ಅಬ್ಬರಲಿ ಅಂತಾನ ರಾಯಾ ಇಬ್ಬರನು ಕಾದಬಿಟ್ಟ ನೋಡ
ಒಳತಂಗ ಸುಳ್ಳ ಅಬ್ಬರಲಿ ಮಾತಾಡಿದ್ರ ಏನಾತಂದ ॥

ಚಾಲ:

ಬಹದ್ದೂರ ರಾಯಣ್ಣನ ಬದಿಯಲ್ಲಿ ಕೂಡ್ರಿಸಿಕೊಂಡ
ನಟ್ಟಿತೋ ಮನಕ ದಿಟ್ಟಸಿ ಆಡಿದ ಮಾತಾ ।
ತನ್ನ ಪುಂಡನ ಕರಸಿದೋ ತುರತಾ ।
ಬಂಡಾಯದ ಸುದ್ದಿ ಕೇಳಿ ಕೆಂಡದಂಗ ಆದಣ್ಣಾ
ಮದ್ದು ಗುಂಡು ತುಂಬಿ ಮಾಡಿದಾರೋ ಸಿಸ್ತಾ ॥
ಬಂದ ಕಾಲಕೆದರಿ ಮುಂಡಿ ಹೊಡೆಯುತ

ನಿಂತ ಕೂಡಿದ್ಹಂಗ ಆದೀತೋ ದಶರಥನ ಮಿತ್ರ ಲಕ್ಷಣ
ಇಂದ್ರಜೀತ ಅರಸ ಇಟ್ಟ ಇಬ್ಬರ ತೆಲಿಮ್ಯಾಲ ಹಸ್ತ
ನಾಳಿಗೆ ಲಡಾಯಿ ಮಾಡಿರೆಂತ ವೀಳ್ಯಕೊಟ್ಟಾನ ಅರಸ ।
ಜಾಳಿಗೆ ಹೊನ್ನ ಕೊಡುವೆನು ಮಾಣಿಕ ಮುತ್ತು
ಮತ್ತು ಏನಬೇಕು ಬೇಡ್ರಿ ನಮ್ಮ ಸನಮಂತ
ವೀಳ್ಯೆ ಹಿಡದಾರೋ ನಗನಗತ ಏಕಾಗದಲ್ಲಿ ದಂತ ।
॥ ಪುಂಡ ಕಿತ್ತೂರ ನಾಡಿನೊಳಗ .... ॥

೪ನೇ ಚೌಕ:

ಮರುದಿನ ಮಧ್ಯಾಹ್ನದಾಗ ಶಿವಗುತ್ತಿ ಊರ ಹೊರಗ ದಂಡುಕೂಡಿತ್ತೊ ।
ಒಂದು ಅಜಮಾಸ ಏಳು ಎಂಟು ಸಾವಿರಾ ।
ಕರಾರ ಮಾಡ್ಯಾನ ಕತ್ತಿಯ ಮೂರು ಮೂರು ಭಾರಾ ।
ನೋಡಲಾಕ ಕೂಡ್ಯಾರೊ ಸಣ್ಣ ದೊಡ್ಡವರಾ ।
ಬಂದಾನ ಶಿವಗುತ್ತಿ ಪುಂಡ ದುಂಡ ಗ್ಯಾಮಿ ಹಚಿಕೊಂಡಾ ।

ಚಂದದಿಂದಲಿ ತಿರುವ್ಯಾಡುತ ತನ್ನ ಹತಿಯಾರಾ ।
ರಾಯಣ್ಣನ ಒಂದುಗಳಿಗ್ಯಾಗ ಹೊಡೆಯುವೆನೋ ಠಾರಾ ।
ರಾಯಣ್ಣ ರಣಗೂದಲ ಬಿಚ್ಚಿ ನಡಕ ಸುತ್ತಿದ ಬಿಚ್ಚಿ ನಗುನಗುತ ।
ನಿಂತಾನೋ ಶಿವಗುತ್ತೆವನ ಎದುರಾ ।
ಟನ್ ಟನ್ ಜಿಗದ ವಗದ ಅಂತರಲಾಗಾ ।
ಕಣ್ಣಮುಚ್ಚಿ ಕಣ್ಣ ತೆಗೆಯುವುದರೊಳಗ ಶಿವಗುತ್ತಿ
ಮಂಡನ ಚಂಡ ಕಡಿಕ ಮಾಡಿ ಬಿಟ್ಬೋ ರಾಯಾ ।
ಬಾದ್ದೂರ ಅರಸ ಸಾಕ್ಷಾತ ನೋಡಿದೋ ತನ್ನ ಕಣ್ಣಾರಾ
ಅರಸನ ಮನಸ್ಸಿಗೆ ಬಂದ ಸರಸದಿಂದ ರಾಯಣ್ಣನ
ಮೆರಿಸ್ಯಾರೋ ಇಲ್ಲಂತ ಇವನ ಹಂತವರಾ ।
ಆಯಾರ ಮಾಡ್ಯಾರೋ ಕಡೆ, ತೋಡೆ, ಉಂಗರ ಉಡದಾರಾ
ಡಂಗುರ ಹೊಡಿಸ್ಯಾರೋ ಸತ್ತಂತ ಶಿವನಗುತ್ತಿ ಸೂರಾ
ಮುಜರಿ ಹೊಡದ ಮುಗಳನಗಿ ನಗನಗತ ಅಂತಾನ
ತಾಯಣ್ಣ ಬೇಡಿದ್ದ ಕೊಡತಿನಂಬು ಕರಾರಾ
ವಚನದಂತೆ ದಂಡಕೊಡ್ರಿ ನನಗೊಂದು ಸಾವಿರಾ ।

ಚಾಲ:

ಕೊಟ್ಟಾನ ಒಂದು ಸಾವಿರ ದಂಡಾ ದಿಟ್ಟು ರಾಯಣ್ಣ ಮಾಡಿದಂತ
ಶ್ರೇಷ್ಠ ತನ್ನ ಮನಸ್ಸಿಗೆ ಹಿಕ್ಕಟ್ಟ ಮುಕ್ಕಟ್ಟ
ಇವನಂತವನ ನೋಡಿಲ್ಲಂದಾ ।

ಅಪ್ಪಣೆ ತಕ್ಕೊಂಡರಾಯಾ ಶಿವನಗುತ್ತಿ ಊರಬಿಟ್ಟ ಹೊಂಟಾ
ಜೀವದ ಗೆಳೆಯನ ಹಂತೇಲಿ ಬಂದಾ ॥
ನೋಡಿ ಚನಬಸು ಆದಾನೋ ಆನಂದಾ ।
ಒಡ್ಡರ ತಿಮ್ಮಣ್ಣ ಏನಲಡ್ಡಿ ಹುಡುಗನಲ್ಲಾ
ಬಿಗವಲಿ ಚಡ್ಡಿ ತೊಟ್ಟಾನ ಅವಸರದಿಂದ
ಭೇಟಿಯಾದಾನೋ ಮಿತ್ರರಿಗೆ ಪ್ರೀತಿಯಿಂದಾ
ಕಿತ್ತೂರ ಮಲ್ಲಸರ್ಜನ ಮೋಸ ಮಾಡಿದ ಇಂಗ್ರೇಜ ॥
ಚನ್ನಮ್ಮನ ಕೂಡ ಹಾಕಿಕೊಂಡ ಪಂಥಾ ।

ತಾಯಿ ಕುಂತಾಳೋ ಮಗನ ಶೋಕ ಮಾಡುತಾ
ಲಡಾಯಿ ಮಾಡಿ ತಕ್ಕೊಂಡಾನೋ ಆತ ಪಿರಂಗ್ಯಾನಂತ ।
॥ ಮಂಡ ಕಿತ್ತೂರ ನಾಡಿನೊಳಗ.............. ॥

೫ ನೇ ಚೌಕ:

ಗೋದಳ್ಳಿ ಕೆರಿಮ್ಯಾಗ ಇಳದಿತೋ ಸರಕಾರ
ದಂಡಾ ರಾಯಣ್ಣನ ಚಂಡಕಡದ ಜಯಯುದುಕ ಸಾಯ್ಬ
ಡೇರೆ ಹೊಡದ ಕುಂತ ಕೋಪ ತುಂಬಿ ಮನಕ ॥
ಹತಿಯಾರ ಬಂದೂಕನೆಲ್ಲ ಗೂಡಹಚ್ಚಿ ಇಟ್ಟಾರ ನಡಕ
ಕುದರಿ ಸ್ವಾರರು ಮತ್ತು ಚತುರ ಬಲ ಆರಂಭದಿಂದ
ಆಳಕಮಾಡಿ ಕುಂತಾರೋ ।

ಎಲ್ಲರೂ ಉಣಲಾಕ ವರ್ತಮಾನ ಕೇಳಿ ರಾಯಣ್ಣ ಅಂದಾನ
ಗಜವೀರ ರಾಯಣ್ಣ ಸಹಜವಾಗಿ ಹೊಂಟಾರ ಜೋಡಿ
ತಜವಿಜ ಮಾಡಿ ಬರುನು ಸುಮ್ಮಕ ॥
ಹೋದರೋ ಗೂಡ ಹಚ್ಚಿದ ಬಂದೂಕಿನ ಸನೇಕ
ಗಜವೀರ ಮರಿ ಆನೋ ಬಿದರ ಮೆಳೆಯ ಬಲಕ
ಟುಬಾಕ್ಯಾಗ ಗುಂಡಹಾಕಿ ಬಾಯಿಗಿ ಜರಜಾವಿಗಿ
ದಕ್ಕಿಕೊಟ್ಟ ಹೊಡೆದ ಸಾಯ್ಬಗ ಗುಂಡು ತಾಕಿ ಬಿದ್ದೊ ನೆಲಕ
ಹತಿಯಾರ ಬಂದುಕನೆಲ್ಲಾ ವಯದ ಜಿಗಿದಾನೋ ದೊಡ್ಡ ಮಡಕ ।
ಅಲಿಮಾನ ಕತ್ತಿಯ ಹಿರಿದು ಆರ್‍ಯಾರಿಸಿ ಕಡದ
ಅರ್ಧ ಚಂಡರುಂಡ ಆಗಿ ಬಿದ್ದಾವ ತುಣಕ
ಕುರಿ ಹಿಂಡಿನ್ಯಾಗ ಮುರಿದಾಂಗಾತೋ ಹೆಬ್ಬುಲಿ ಹೊಕ್ಕ ॥

ತಿರಿವ್ಯಾಡಿ ಕಡಿದಾನೋ ಕಬರ ಹಾರಿ ತಪ್ಪಿತೋ ದಿಕ್ಕಾ
ಚಾಪಹಾಸಿದ ಲೋಪ ಮಾಡಿದ ಕಲಿದೀಪ ಭೂಪ ರಾಯಣ್ಣನ ಕೌತುಕ ।
ಒಬ್ಬನ ಮಾಪ ಮಾಡಿಸಿ ಇಟ್ಟಾನ ಸುದ್ದಿ ಹೇಳುದಕ

ಚಾಲ:

ಇದರ ಬದರಾ ನಿಂತು ತಾರಾಬಾರಾ ಕಾದುವಾಗ
ಹಾರತಾವ ಗೋರಾಜನರ ತಲಿ ।
ಬಿದ್ದ ಗೋರಾ ತಾ ಬಕ್ಕಬಾರಲಿ ಸಾಯ್ಬ ಕೇಳಿಕೊಂಡ
ತನ್ನ ಮುಂಗೈ ಕಡಕೊಂಡ ।
ಮತ್ತು ದಂಡ ಸಂಹಾರ ಮಾಡ್ಯಾನ ಹುಲಿ ।
ತಾಪಾಸ ಮಾಡಿರಿ ಹಾಕೋಣ ಅದಾನೆಲ್ಲಿ ।
ರಕ್ತದೊಳಗ ಬಟ್ಟಹಾಕಿ ಹಣಿಮ್ಯಾಲ ಇಟಗೊಂಡ
ಚಟ್ಟನ ಹೋದಾನ ಮೈತರ ಬದಿಯಲ್ಲಿ
ರಣರಂಗನೆಲ್ಲಾ ಮಾಡಿದಾನೋ ಖಾಲಿ
ಸಿಂದಿ ಸೆರೆ ತರಸಿ ಬಹಳ ದುಂದದಿಂದಲ್ಲಿ
ಕುಡದಾಡಿ ಚಂದದಿಂದ ಹೊಂಟಾರೋ ತಮ್ಮ ಸೈನ್ಯಸಹಿತ ।

ಬಾಳಿಗುಂದಿ ಗುಡ್ಡದ ದಾರಿ ಹಿಡದ ನಡೆಯುತಾ ।
ಆರ್‍ಯಾಣದಾಗ ಇಳಿದಾರೋ ರಾತ್ರಿ ಇತ್ತೊ ಸರವತ್ತಾ ।
॥ ಮಂಡ ಕಿತ್ತೂರ ನಾಡಿನೊಳಗ............. ॥

೬ನೇ ಚೌಕ:

ಬಹದ್ದೂರ ಇಂಗ್ರೇಜನ ದಂಡ ಬಂದಿತೊ ಮತ್ತೊಂದು
ಕೇಪ ಬಾಳಿಗುಂದಿ ಗುಡ್ಡದ ಹಾಕ್ಯಾರೊ ಮುತ್ತಿಗಿ
ಅದರ ಸೂಚನಾ ಮುಟ್ಟಿತೋ ರಾಯಣ್ಣಗ ಹೋಗಿ
ಅವನ ಕಲ್ಪನಾ ತಿಳಿಯಲಾಕ ಇಲ್ರಿ ಯಾರ್‍ಯಾರಿಗಿ ।
ಗುಡ್ಡದೊಳಗ ಇರುವಂಥ ಕಂಟಿಗಿಡಗಳನ್ನೆಲ್ಲ
ಮಂಡಮಾಡಿ ಅರವಿ ಸುತ್ತಿ ಹಚಾರೋ ಬ್ಯಾಗಿ
ರಾಯಣ್ಣನ ದಂಡ ಇಳದ ಮಾಡತತಿ ಅನ್ನ-ಅಡಗಿ ।
ಉರಿಯ ನೋಡಿ ಅದಾರೆಂದು ಬಿಗಿಲ್ ಮಾಡಿ
ಬಂದಾರೊ ಲಗು ಗುರಿಯ ಹೂಡಿ ಹೊಡೆದಾರ, ಕತಲಗವದೀತಹೋಗಿ ।
ಕೂಗ ಹೊಡದ ರಾಯಣ್ಣನ ದಂಡ ಬಂತ ಮಾರ್‍ಯಾಗಿ
ಎಳೆಎಳದ ಕೊಂದಾರಣ್ಣಾ ಧೀರಾ ।
ತುಳತುಳದ ಒಬ್ಬೊಬ್ಬರನ್ನಾ ಹೊರಹೊರಳಿಸಿ ತರದಾರ
ಕತ್ತಿಮಿಂಚಿನ ಪರಿಯಾಗಿ ತಪ್ಪಿಸಿ ಉಳಉಳದ
ಹೋದಾರೋ ಕಂಟಿಯ ಮರಿಗಿನ
ನಿತ್ತ ಚಿತ್ತ ಬಲ್ಲಾಂಗ ಕತ್ತಿಲಿಕಡದಾನ
ಸುತ್ತ ಕತ್ತಿರಿಸಿ ಬಿದಾವ ರಕ್ತ ಹರದಿತೋ ಧರಿಗಿ ।
ದಿಕ್ಕತಪ್ಪಿ ಕಾಳಗವಾತೋ ಅವರ ಇದರಿಗಿ
ಸುತ್ತಗಟ್ಟಿ ಹೊಡದೋ ಒಬ್ಬರು ಹೋಗಲಿಲ್ಲ ತಿರುಗಿ ।
ಪ್ರಾತಃಕಾಲದಲ್ಲಿ ರಕ್ತ-ಮಾಂಸ ತನ್ನಲಾಕ
ಸುತ್ತುಕಡೆ ಮುತ್ತಿದಾವೋ ಹದ್ದುಕಾಗಿ

ಚಾಲ:

ತೋಟ ಇಲ್ಲದ ಮಾಡಿದಂಗ ಆತೋ ಹಬ್ಬ ಆನಂದವಾಗಿ ।
ಆನಂತ್ರ ಅರಣ್ಯದೊಳು ಸ್ವಾತಂತ್ರ್ಯ ತಪ್ಪಿತು
ಅದಕ್ಕ ತಂತ್ರ ಹೇಳುವಷ್ಟು ಇಲ್ಲ ಶಕ್ತಿ
ಹತಿಯಾರ ಧೈರ್ಯ ಪ್ರಭೂ ಶಕ್ತಿ ಊಟಾಬಸಿ
ಮಾಡಿ ಯುಕ್ತಿಯಿಂದ ಎಲ್ಲರೂ ಕೂಡಿ ದಿನ್ನ ಅಂತ
ಜಯ ಅಂತ ಜಿಗಿದಾರೋ ಸರ್ವ ಎಲ್ಲಾ
ಸರ್ವರೂ ಕಾದಿದಾರೋ ರಣ ಗೂದಲಾ
ಸೃಷ್ಟಿಯೊಳು ಪ್ರಸಿದ್ಧ ಆದ ಹುಟ್ಟಿದಂತ ವೇಳೆ

ಜೀವದ ಆಶೆಬಿಟ್ಟಿದಾರ ಯೆಲ್ಲಾ ಇರ್ಸೆತೊಟ್ಟಿದಾರ ಏರುಣಂತ ಹಲ್ಲಾ
ಬಾಲಿ ಬಾಕ ಕೈಚೂರಿ, ಪಿಸ್ತೂಲಗಳ ಪಟ್ಟಿ ಡಾಲ
ಕೈಯಲ್ಲಿ ಹಿಡಿದ ನಡದಾನೋ ತುರತಾ ॥
ಅಲ್ಲಲ್ಲಿಗೆ ಹಳ್ಳಿ ಸುಲಗಿ ಮಾಡುವವನ ತಗದ ಬಂದಾನೋ ಪೂರ್ವದಲಿ ॥
॥ ಪುಂಡ ಕಿತ್ತೂರ ನಾಡಿನೊಳಗ............. ॥

೭ನೇ ಚೌಕ:

ಕ್ವಾಟೆ ಕಿಲ್ಲೆ ಹಳ್ಳದ ಮ್ಯಾಲೆ ಕಳವ್ಯಾಳೆ ಚೀಟಿ
ರಾಯಣ್ಣಗ ಚನ್ನಮ್ಮಗ ಭೆಟ್ಟಿಯಾಗಿ
ಬರಬೇಕಂತ ಕಿತ್ತೂರಿಗೆ ಹೊಂಟ
ಹೊಲಸಿದ ಬಿಗಿಯಾಗಿ ಕ್ಯಾವಿಯ ಗುಂಡಿಗೆ
ಚನ್ನಾ ತೋಟಾ ಮ್ಯಾಲೆ ಬಂದೂಬಸ್ತಾ ।
ಸುತ್ತಿದಾನ ಸೀಮಿ ನಡಕಟ್ಟಾ
ತನ್ನ ಹಂತೇಲಿ ಸಾವಿರ ದಂಡಿಗೆ ಹಸದಂಗ ಊಟಾ ।
ಮಾಡಿಕ್ಯಾರ ಸ್ವಸ್ತಾ ಇರಬೇಕಂತ ಹೇಳಿ ತಾಕಿತಕೊಟ್ಟಾ ।
ಹೇಳಿ ಚನ್ನವ್ವನ ಬೆಟ್ಟಿಗಿ ಹೊಂಟಾನ ಗೋಪಾಲಾ
ಚನ್ನವ್ವ ರಾಯಣ್ಣನ ಮುಂದ ಇನ್ನೇನು ಅತಿ ಅಂತಾಳ ಮಗನ ।
ಮೊನ್ನೆ ಮಲ್ಲಸರ್ಜ ಹೊದಾನ ಕೈಬಿಟ್ಟ ಘನ್ನಘಾತಕರು
ಕೆಂಪ ಸೋಜರು ಕೆಟ್ಟ ।
ಇಷ್ಟು ಮನ್ನಿಸಿ ಕೇಳಿ ಹಳಬರಾಯಾಗ ಬಂದಿತೋ ಸಿಟ್ಟ
ಹಲ್ಲ ತಿಂದ ಅಂತಾನೋ ದೊರಿ ಮಲ್ಲಸರ್ಜ ಹೋದಬಳಿಕ
ಎಲ್ಲಾನು ಕಚೇರಿ ಬಿಡತೀನಿ ಸುಟ್ಟಾ
ಎಲ್ಲೆಲ್ಲಾ ನಡಿದಾಂಗ ಮಾಡತೀನಿ ಇಂಗ್ರೇಜನ ಆಟ ॥
ಹೊಳ್ಳಿಬಂದ ಸಾವಿರದಂಡ ಸಂಗಾಟ ತಕ್ಕೊಂಡ
ಬೀಡಿ ಸಂಪಗಾಂವ ಕಚೇರಿಗೆ ಬೆಂಕಿ ಹಚ್ಚಿ ಬಿಟ್ಟಾ
ರಾಣಿ ಪೌಜ ಹಿಡಿಲಾಕ ಬಂತೋ ಕಡಿದ ಕೆಡಿವ್ಯಾರೋ ದಿಟ್ಟ ॥
ಇಂಗ್ರೇಜಿ ನಡೆಸಿದಾರೋ ಒಳವರ್ತಿ ಆಗ ಪಿತೂರಿನಾಟಾ
ನೇಗಿನಾಳ ನಿಂಗನಗೌಡ ಖುದಾನಪೂರ ಯಂಕನಗೌಡಾ
ಮಸಲತ್ತು ಮಾಡಿ ತಿಳಿಸ್ಯಾರ ಒಬ್ಬರಿಗೊಬ್ಬಾ

ಚಾಲ:

ಚಿಂತಿ ಬಿಡ್ರಿ ಹಿಡದಕೊಡತೀನಿ ತಿಂಗಳ ಮುದ್ದತ ಕೊಟ್ಟಾ
ಸಾಹೇಬ ಕೊಡತೀನಿ ಅಂತಾ ಸಹಿ ಹಾಕಿದ ಕಾಗದ ಮ್ಯಾಲ
ಕಡೆಗೆ ಕೂತ ಉಣ್ಣುವಂತ ಹೊಲಾ ।
ಯಂಕನಗೌಡ ನಿಂಗನಗೌಡ ಅದಾರೋ ಖಬೂಲಾ
ಜಳಕಮಾಡಿ ರಾಯಣ್ಣ ಕ್ಹಾವಿಗುಂಡಗಿ ತೊಡುವಾಗ

ಬಂದ ಮೋಸಮಾಡಿ ಕರಿಕಂಬಳಿ ಒಗಿದಾರ ದುರಿಮ್ಯಾಲ ಜಾಲ ।
ಪಿತುರಿನ ಸಾಹೇಬರೆಲ್ಲ ಆತುರದಿಂದಲಿ ಹೋಗಿ
ಕಟ್ಟಿ ಬಿಗದ ಒಗದಾರ ಕೈಕಾಲಾ ।
ಆಗ ಶಂಕರ ಮುನದಾನ ರಾಯಣ್ಣನ ಮ್ಯಾಲಾ
ನಂದಗಡದ ಊರಹೊರಗ ಕೂಡಿ ಸರ್ವರೆಲ್ಲಾ
ಆಗ ನಂತ ನೋಡಿ ಮಾತಾಡತಾರೋ ರಾಯಣ್ಣನ ಸೂರತಾ
ಕೇವಲ ವಿಷ್ಣು ಪರಮೇಶ್ವರನ ಮಗ ಇದ್ದಾಂಗ ಮನ್ಮಥಾ
ಮನ ಹೌಸದಿಂದ ಬಂದ ಮೌನವೆರ್ಥಾ

॥ ಪುಂಡ ಕಿತ್ತೂರ ನಾಡಿನೊಳಗ............. ॥

೮ನೇ ಚೌಕ:

ಹೆಬ್ಬುಲಿ ಹಿಡದ ಒಯ್ಯುವಾಗ ಹಬ್ಬಿಸಿ ನೋಡುವ ಮಂದಿ ಭಾಳಾ ।
ಸಾಬ ಸುಬೇದಾರ ಪಾರಾ ಅವರ ಮ್ಯಾಲಾ ।
ಸಬ್ಬ ದಂಡ ಎಲ್ಲಾ ನಿಂತಾರ ಅವನ ಸುತ್ತಮುತ್ತಲೆ ।
ಮೈ ಉಬ್ಬಿಸ್ಯಾನ ಕಟ್ಟಿರುವ ಹಗ್ಗಾ ಕಿತ್ತವ ಮಿಗಿಲಾ
ಹನ್ನೆರಡಾಳ ಉದ್ದಗೋಡಿ ಓಡಿಬಂದ ಜಿಗದ ಹೋದಾ
ಹದಿನೆಂಟು ಮಂದಿ ಪಾರಾ
ಸಿಪಾಯರು ಅವನಮ್ಯಾಲಾ ಮುತ್ತ ಮುತ್ತಗಿ ಹಾಕಿ
ಹಿಡಿದಾರ ಅವನ ಒತ್ತರದಿಂದಲಿ
ಹಿಡಿದವರ ಪೌರುಷ ಬೆಳಸಿ ಪತ್ರಬರದ ಕಳುಹಿಸಿದರಾ ।
ಬಿತ್ತಾರದಲ್ಲಿ ಹೋಗಿ ಮುಟ್ಟಿತ ರಾಣಿಯವರ ಕರದಲ್ಲಿ
ಓದಿ ನೋಡಿ ಆದ್ರ ಬಹಳ ಹರುಷದಲ್ಲಿ ।
ಇಂಥಾ ಒಬ್ಬ ಬಹದ್ದೂರ ಇರಲಿ ನಮ್ಮ ದಂಡಿನಲ್ಲಿ
ತಿರುಗಿ ಉತ್ರಾ ಕಳುಹಿದಾರ ಜಕಮು ಏನೂ ಮಾಡಬಾರದು
ಜೋಕುಮ ಇಲ್ಲದ ತಕ್ಕೊಂಡು ಬರ್ರಿ ॥
ವಿಲಾಯತಿಯಲ್ಲಿ ನಮ್ಮ ಸರಕಾರ ಮರ್ಜಿ ಅತಿ
ರಾಯಣ್ಣನ ನೋಡುದ ಇಲ್ಲಿ
ಹಿಂತಾ ಉತ್ತರ ಓದಿನೋಡಿ ಮತ್ತ ನಮ್ಮ ಜೀವದಸುತ್ತ
ಮುಳವ ಉಳಿದೀತಂತ

ಚಿಂತೆ ಮಾಡುತಲಿ ಯಂಕನಗೌಡ ನಿಂಗನಗೌಡ
ಅಂಜಿದಾರ ಮನಸ್ಸಿನಲ್ಲಿ ಒಳಗಿಂದ ಒಳಗ ।
ಬೇತ ನಡಸಿದಾರ ತಿಳಿಯದಲ್ಲಿ ದಿಕ್ಕುತಪ್ಪಿ
ಓಡ್ಯಾಡುತಾರ ಧಕ್ಕಾ ಅಂತ ಮನಸ್ಸಿನೊಳಗ
ಏಕದಮ್ಮ ಬಿಡಬ್ಯಾಡ್ರಿ ಅಂದಾರ ಹೋಗಿ
ಸಾಹೇಬರಂತೇಲಿ ಎಂದಿದ್ದರ ಒಂದಿನಾ ಹೊಡೆಯುತಾರ ನಮ್ಮತೆಲಿ ॥

ಜೋರ ಹುಕುಂ ನಡಿಸ್ಯಾರ ದೂರ ತನಕ ಜಾಹೀರ ಹೋತು ।
ನೋಡಲಾಕ ಕೂಡಿಸ್ಯಾರ ಜನಾ ।
ಗಲ್ಲಿಗೇರಿಸತಾರ ಸೋಮವಾರ ದಿನಾ ।
ಮುಸುಕಿಲೆ ಹಗ್ಗಾ ಹಿಡದಾ ವೀರರಾಯಾ ।

ಚಾಲ:

ಜಿಗದನಿಂತ– ಹಾರಿಹೋದಿತ ಹೌಸೀನಾ ।
ರಾಯಣ್ಣ ನೆನಸತಾನ ವೀರ ಮಾರೋತನಾ ।
ಮಾರುತಿ ಲೋಕದ ಗಂಡ ಮಂಡ ಅರ್ಜುನಾ ।
ನಂತರ ಹೋದ ಮುಳುಗಿ ಹೋದಿತೋ ರತನಾ ।
ದೇವರಾ ಮಾಡಿ ಪೂಜಿಸತಾರೋ ಆತನ್ನಾ ।

ಶಾಹೀರ ಶಾಮರಾವ ಬಾರೋ ಜಾಹೀರ ಕರ್ನಾಟಕದೊಳು ।
ತಯಾರ ಮಾಡ್ಯಾರೋ ಚಂದ ಚಂದ ಕವಿತಾ
ತಾಯಿ ಕ್ಷೀರ ಕುಡದಂಗ ಆತೋ ಹಸುಗೂಸಿಗೆ ಹಿತಾ
ಬೈಲಹೊಂಗಲ ಶಹರಾ ಬಲಭೀಮನ ದಯಾಪೂರ್ತಾ
ಕುಲಕರ್ಣಿದ ದಶಿಯಿಂದ ಪೈಲೆ ಕದನ ಹುಟ್ಟಿ
ಊರ ಬಿಟ್ಟ ಸುತ್ತೆಲ್ಲಾ ಹಾವಳಿ ಮಾಡಿದ ವಿಪರೀತಾ ।
ಬಂಟನದ್ದರನರಬೇಕ ರಾಯಣ್ಣ ಮಂಡ ಪ್ರಖ್ಯಾತ
॥ ಮಂಡ ಕಿತ್ತೂರ ನಾಡಿನೊಳಗ............. ॥

ಸಂಗ್ರಹ: ಲಾವಣಿ ಸಾಹಿತ್ಯದಲ್ಲಿ ಸಂಗೊಳ್ಳಿ ರಾಯಣ್ಣ, ನಿಂಗಣ್ಣ ಸಣ್ಣಕ್ಕಿ, ವಿದ್ಯಾನಿಧಿ ಪ್ರಕಾಶನ, ಗದಗ, ೧೯೯೭

ಸಿಂಧೂರ ಲಕ್ಷ್ಮಣ

ಪರಗಾಣಿ ಜತ್ತೀ ಉಮರಾಣಿ ದೇಶಕ ವಾಯಿಣಿ
ಆಳುವಂತ ಧಣಿ ಡಪ್ಪಳೆ ಸರಕಾರ ॥ ಪಲ್ಲ ॥
ಜತೆ ಸಂಸ್ಥಾನ ಪೈಕಿ ಸಣ್ಣ ಹಳ್ಳಿ ಸಂಧೂರ ॥ ಗೀ ॥
ಸಿಂಧೂರ್‍ಯಾಗ ಲಕ್ಷ್ಮಣ ಹುಟ್ಯಾನ । ಬಂಟ ಅನಿಸ್ಯಾನ ಕೊಟ್ಟ ವಚನ
ಹುಟ್ಟಿ ತಪ್ಪಲಿಲ್ಲ ಹುಟ್ಟಿ ತಪ್ಪಲಿಲ್ಲ
ಘಟ ಹೋಗುತನಕ ಹಿಡಿದಾ ಹಟ ಬಿಡಲಿಲ್ಲಾ ॥ ಗೀ ॥

ಪಾಂಡವರೊಳಗ ಇದ್ದಂಗ ಭೀಮ
ಚೆಲುವ ಚಂದ್ರಾಮ ಥೇಟ ಹೋಳಿ ಕಾಮ । ರೂಪದಲಿ ಡೌಲ
ಯಾವ ತಾಯಿ ಹೊಟ್ಟೇಲಿ ಹುಟ್ಟ್ಯಾನ ಪ್ರಬಲ ॥ ಗೀ ॥

ಸರಕಾರ ನೌಕರಿ ಮಾಡುತ್ತಿದ್ದ । ದರೋಡೆ ಹಾಕುತ್ತಿದ್ದಾ
ಈಡುವಲ್ಲಿ ಮುಂದ ಹಿಡಿಯುತ್ತಿದ್ದ ಮೊಲ
ಗುರಿಯಿಟ್ಟ ಹೇಳಿದಲ್ಲಿ ತಪ್ಪದೇ । ಒಗೆಯುತ್ತಿದ್ದ ಕಲ್ಲಾ ॥ ಗೀ ॥

ಒಬ್ಬ ಅಯ್ಯನ ಕಾಲಾಗ ಕದನ ಬಿತ್ತಾ
ಮಾಡಿದನು ಶರತಾ । ಆತೋ ವಿಪರೀತಾ
ಒಂದಿನಾ ಲಕ್ಷ್ಮಣಾ ತಳ್ಳಿ ಮಾಡಿದಾ ಅಯ್ಯಾನ ಮ್ಯಾಲ ॥ ಗೀ ॥

ಊರ ಇದ್ದಲ್ಲಿ ಹೊಲಗೇರಿ ಉಂಟಾ
ಬರದಾರ ಪುಟಾ । ಬಂದ ಇನ್ಸಪೇಟಾ
ಆದ ಬೆಂಕಿ ಲಾಲ । ಕರಕರ ಹಲ್ಲ ತಿಂತಾರ ಲಕ್ಷ್ಮಣ ಮ್ಯಾಲ ॥ ಗೀ ॥

ಸರಕಾರದ ಕಡಿಂದ ವಾರಂಟ । ತರಿಸಿ ಇನ್ಸಪೇಟಾ
ಹಿಡಿಲಿಕ ಹೊಂಟಾರ । ಸಿಪಾಯಿ ಹಿಂಬಾಲ

ಕತ್ತಿ ಬಂದೂಕ ಭರ್ಜಿ । ಜೋಡ ಬಾರಿನ ಪಿಸ್ತೂಲ ॥ ಇಳುವು ॥
ಇನ್ಸಪೇಟಾ ಸಿಂಧೂರಿಗೆ ಹ್ವಾದ । ಕರೆ ಕಳಸಿ ಲಕ್ಷ್ಮಣ ಹಿಡಿದಾ

ಬೇಡಿ ಹಾಕಲಿಕ ಹೋಗ್ಯಾನ ಎದ್ದು । ಲಕ್ಷ್ಮಣ ಹೇಳತಾನ ಸರ್‍ದಾ
ಬಾಳಾ ಹುಷಾರಿಲಿಂದ ಬಾರೋ ನೀ ಎದ್ದಾ
ಏನಾರ ಆಗೋದಾ ಆಗಲೆಂದಾ ॥ ಗೀ ॥

ಇನ್ಸಪೇಟಾ ಲಕ್ಷ್ಮಣಕಿಂತ ಹಿಂದಾ । ಅವುಸರ ಮಾಡಿ ಹ್ವಾದಾ
ಭರ್ಜಿಲೇ ಬಗೆದಾ ಅವನ ತೊಡಿಯಾಗ

ರಾಮ ರಾಮ ಅಂತ ಲಕ್ಷ್ಮಣ ಬಿದ್ದಾ । ಭೂಮಿ ಮ್ಯಾಗ
ಒಯ್ದು ಹಾಕ್ಯಾರ ದವಾಖಾನ್ಯಾ
ಅಲ್ಲಿ ದಾಕ್ತರು ಎಂಟು ದಿನದಾಗ । ತಯಾರ ಮಾಡ್ಯಾರ
ಒಯ್ದಿಟ್ಟು ಕಟ್ಲೆ ನಡೆಸ್ಯಾರ । ತುರಂಗದೊಳಗ ॥ ಗೀ ॥

ಸಾಬ್ಯಾ ಗೋಪಾಲ್ಯ ನರಸ್ಯಾ ಮೂವರು ಕೂಡಿ ಮಾತಾಡ್ಯಾರ
ತಮ್ಮ ಮನಯೊಳಗ

ನಾಳಿ ಜೇಲ ಮುರಿದು ತರಬೇಕ ಅಂದ್ರ ಮಾವಗ
ಮರುದಿವಸ ಜತ್ತಿಗೆ ಹೋಗ್ಯಾರ
ತುರಂಗ ಮುರುದಾರ । ಸಾರಿ ಹೊಂಟಾರ ನಡುವಿ ಪ್ಯಾಟ್ಯಾಗ
ಯಾವ ಗಂಡ್ಸ ಮಗ ಇದ್ದರ ಹಿಡಿಯಬೇಕು ನಮಗ ॥ ಗೀ ॥

ಇನ್ಸಪೇಟಾ ಹತ್ತೆಂಟು ಮಂದಿ ಸವಾರ್‍ರ
ಆಗಿ ತಯಾರ ಹಿಡಿಲಿಕ ಹೊಂಟಾರ ಗುಡ್ಡದೊಳಗ

ಅವರು ಮಾರಿ ತಪ್ಪಿಸಿ ಕುಂತರ ಒಂದು ವಾರಿಯಾಗ
ಅವರ್ ಮ್ಯಾಲ ಕುದುರಿ ಹೊಡೆದಾರ । ಗಾಬರಿ ಆಗ್ಯಾರ ಚಿಗರಿ ಬೆದರಿಂಗ
ಸರ್‍ದು ನಿಂತು ಮನುಷ್ಯಗೊಂದ । ಕಲ್ಲು ತಗೊಂಡ್ರಾ ಕೈಯಾಗ ॥ ಗೀ ॥

ಕುದುರೀಗಿ ಹತ್ತಿದವು ಕಲ್ಲಾ । ಒಬ್ಬ ಉಳಿಯಲಿಲ್ಲ
ಹ್ವಾದರು ಸಿಗದಂಗ
ಬೆನ್ನಹತ್ತಿ ಲಕ್ಷ್ಮಣ ತಿರುವ್ಯಾನು ಇನ್ಸಪೇಟಾ ಸಾಹೇಬಗ ॥ ಗೀ ॥

ಇನ್ಸಪೇಟರು ತಿರುಗಿ ಹೇಳತಾನ ನಾಳೆ ಬರತೀನಿ । ಹುಷಾರಿರು ನೀನು
ಚಾವಡಿಯೊಳಗ ಹುಷಾರಿರು ನೀನು
ಈ ಮಾತ ಸುಳ್ಳಂದ್ರ ಗಂಟ್ಹಾಕೊ ಪದರಾಗ ॥ ಇಳುವು ॥

ತಿರುಗಿ ತಿರುಗಿ ಧಣಿದಾರು । ಊಟಮಾಡಿ ಚಾವಡ್ಯಾಗ ಮನಗಿದರು
ಸಾಬ್ಯ ಗೋಪಾಲ್ಯ ನರಸ್ಯಾ । ಮೂವರು ಲಕ್ಷ್ಮಣ ಸಹಿತ

ಚಾವಡಿಗೆ ಬಂದಾರು
ಇನ್ಸಪೇಟರಿಗೆ ಜಗ್ಗಿ ಎಬ್ಬಿಸಿದರು । ಒಬ್ಬ ಶಿಪಾಯೀನ ಮೀಸೆ ಬೋಳಿಶ್ಯಾರು
ವಾಲೀಕಾರನ ಹಲ್ಲು ಮುರಿದಾರು । ಕುದುರೆಯ ಭಾಲ ಕುಯ್ದಾರು ॥ ಅಂತ್ರ ॥

ಕತ್ತಿ ಬಂದೂಕ ಭರ್ಜಿ ತಗೊಂಡಾರ । ಸಿಂಧೂರ ಬಿಟ್ಟಾರ
ಪರಾರಿಯಾಗ್ಯಾರ ನಾಲ್ಕು ಮಂದಿ ಅವರ ॥ ೨ ॥

ನಿಡೋಣಿ ದುಂಡ್ಯಾ ಹೊಲೇರಂವಾ । ಬಾಳ್ಯಾ ರಡ್ಡೆರಟ್ಟೇಂವಾ
ಬಸ್ಸಾ ರೆಡ್ಡೀರಂವಾ । ಒಳ್ಳೆ ಚಲೋ ಜೀಂವಾ
ಬಂದು ಕೂಡಿದರು
ತಿಗಣಿ ಊರು ದರೋಡೆ ಮಾಡಿಕೊಂಡು ಹೊಂಟ್ಯಾರು
ಬಬಲೇಶ್ವರ ಮಾಡಿದರು ಠಾವ್ । ಅಲ್ಲೊಂದು ಚಲೋ ಜೀಂವಾ
ಕರಿವೀರಪ್ಪ ಎಂಬುವ । ಕಾಯಿದೆ ಬಲ್ಲವರು
ಅವನ ಗೆಳೆತನ ಕಟ್ಟ । ಎಂಟ ದಿನ ಅಲ್ಲಿದ್ದರು
ಬಬ್ಬಾಟದಿಂದ ಅಲ್ಲಿರುತಾರ । ಜಾರ ಬಿಟ್ಟಾ ॥ ಗೀ ॥

ಕಾಕಂಡಿಕಿ ಊರ ವಸತಿ ಮಾಡಿದರು
ವಿಜಾಪೂರದಿಂದ ಪೋಲಿಸಿನವರು
ಹಿಡಿಯಲಿಕ ಬಂದಾರು ॥ ಗೀ ॥

ಆ ದಿವಸ ಊರಾಗ ಅಡ್ಡಾಡ್ಯಾರ । ಬೇಕಾದ್ದ ಉಂಡಾರ
ಹಲ್ಲಿಗೆ ಬಂಗಾರ ಬಡಿಸಿಕೊಂಡಾರ
ಲಕ್ಷ್ಮಣನ ಹಲ್ಲ ಮುರಿದಿತ್ತು । ಮನಸ್ಸಿಗಿ ಸಂಶಯ ಅವರ ತಂದಾರ
ತ್ವಾಟದಾಗ ಮನಗಿಕೊಂಡ್ರ ಉಂಡು
ಪೋಲೀಸಿನವರ ದಂಡು । ಹಾರಿಸಿದರು ಗುಂಡು
ಸಪ್ಪಳಕೆ ಎದ್ದಾರ
ಉಳಿಕಿಯವರು ಜಿರಿದು ಹೋದಾರ । ನರಸ್ಯಾನ ಹಿಡಿದಾರು ॥ ಗೀ ॥

ಮಳೆ ಸುರಿದಂಗೆ ಹಾರಸ್ತಾರ ಗುಂಡಾ
ಬಾಳ್ಯಾ ಪಡಾ ಆಯ್ತು ಕೇಡಾ । ನಷ್ಟ ಮಾಡಿದರು
ಪೋಲಿಸಿನವರು ಇಬ್ಬರ್ನ । ಹೊಲೆಯರ್ನ ಹೊಡೆದು ಕೊಂದರು ॥ ಗೀ ॥
ದುಂಡ್ಯಾಗ ಸಿಟ್ಟು ಬಂದಿತ್ತಲ್ಲಾ । ಕವಣೆಗೆ ಹಾಕಿ ಕಲ್ಲಾ
ಒಗೆದು ಮುರಿದಾ ಕಾಲ

ಜೀವನ ಎದರಿದರು । ಕಲ್ಲಿನ ಬಡಿತ್ಕ ಊರಿನ ಜನ ಕದಾ ಹಾಕಿದರು
ನರಸ್ಯಾಗ ತಗೊಂಡು ಹೋಗ್ಯಾರ । ಒಯ್ದು ಬೆಳಗಾಣವಿಯಾಗ
ಚಿಂತಿ ಲಕ್ಷ್ಮಣಗ । ದಿಕ್ಕು ಇಲ್ಲ ಯಾರು
ಅಪ್ಪರೊಳಗ ಸಾಬ್ಯ ಗೋಪಾಲ ಬಂದು ಕೂಡಿದರು ॥ ಗೀ ॥

ಲಕ್ಷ್ಮಣನ ದುಃಖಕ ಅಳತಿಲ್ಲ ॥ ಇಳುವು ॥
ಎತ್ತ ಹೋದಾನ ನರಸ್ಯ ಕೋಮಲ । ನಿತ್ಯ ತಿನ್ನುವಿ ಕೊಬ್ಬರಿ ಬೆಲ್ಲಾ
ನಿನಗ ಯಾರ ಕೊಡುವರಾ ಹಾಲ ॥ ಗೀ ॥

ಸಾಬ್ಯ ಗೋಪಾಲ ಮಾತಾಡಿದರಲ್ಲಾ
ಮಾರ ಮಂದಿ ಉಳಿದೇನು ಫಲಾ । ಹೋಗಬೇಕಂತ ಸಿಕ್ಕಾರಲ್ಲಾ
ಒಯ್ದು ಹಾಕ್ಯಾಗ ಬೆಳಗಾಂವಿ ಜೈಲಾ ॥ ಗೀ ॥

ಎಂಟ ದಿವಸ ಅಲ್ಲಿ ಇರಲಿಲ್ಲ । ತುರಂಗ ಮುರಿದು ಹೊಂಟ ಹ್ವಾದರಲ್ಲ
ಜಮಖಂಡಿ ಪೈಕಿ ಹಾಳಬಾಳಲ್ಲ । ಅಲ್ಲಿ ವಸತಿ ಮಾಡಿದರಲ್ಲಾ ॥ ಗೀ ॥

ಬೆಳಗಾಂವಿಯಿಂದ ಪೋಲಿಸಿನರು । ಹಿಡಿಯಲಿಕ ಬಂದಾರು ॥ ಅಂತ್ರ ॥
ಹುಡುಕಿ ನೋಡಿದರ ಸಿಗಲಿಲ್ಲ ಅವರ ॥ ೩ ॥

ಇನ್ಸಪೇಟಾ ಅಂಕಲಕೋಟಿಯಿಂದಾ । ಜಮಖಂಡಿಗಿ ಬಂದಾ
ಸರಕಾರದ ಕಡಿಯಿಂದ ವೀಳ್ಯ ಹಿಡಿದಾನು
ವೀಳ್ಯ ಹಿಡಿದಾ ಸುದ್ದಿ ಲಕ್ಷ್ಮಣ ಮರುದಿನ ಕೇಳ್ಯಾನು ॥ ಗೀ ॥

ಬಿಟ್ಟ ಕಲ್ಲೋಳಿ ಗುಡ್ಡ್ಯಾಕ ಬಂದಾರ
ಅವರ ಬಂದಿದ್ದು ಲಕ್ಷ್ಮಣ ಇದ್ದಿದ್ದು
ಸುದ್ದಿ ಕೇಳಿದನು ಆಗ ಕೇಳಿದನು
ಒಬ್ಬ ಸಿಪಾಯಿನ ಕರಕೊಂಡು । ಗುಪ್ತದಿಂದ ಹೊಂಟಾನು ॥ ಗೀ ॥

ಅವರು ಬರುವುದಾ ಇವರು ನೋಡ್ಯಾರ । ಅಡಗಿಕೊಂಡಾರ ಗಾಬರ್‍ಯಾಗನು
ಇನ್ಸಪೇಟಾಗ ಅಂತಾನ ಲಕ್ಷ್ಯಾ ಬಂದಾರ ಕುಡಿದೇನು ನೆತ್ತರಾ
ನಿಂತ ಕರಕರ ಹಲ್ಲ ತಿಂತಾನೆ ॥ ಗೀ ॥

ಒಬ್ಬಕೊಬ್ಬ ತೆಕ್ಕಿಮುಕ್ಕಿ ಬಿದ್ದಾ
ಒಬ್ಬರನೊಬ್ಬ ಒಗೆದಾ । ಸಿಪಾಯಿ ಓಡಿ ಹೋದಾ
ಲಕ್ಷ್ಮಣಾ ಬಿದ್ದಾನು । ಎದಿಮ್ಯಾಲ ಕುಂತ ಇನ್ಸಪೇಟಾ
ಪಿಸ್ತೂಲ ಹಿರಿದಾನು ॥ ಗೀ ॥

ಅವಸರಮಾಡಿ ನರಸ್ಯಾ ಓಡಿ ಬಂದಾ
ಕೊಳ್ಳಿಗೆ ಹಗ್ಗ ಒಗೆದಾ । ಜಗ್ಗಿ ಜೋಲಿ ಹೊಡೆದಾ
ನೆಲಕೆ ಕೆಡವಿದನು । ಕುಡುಗೋಲ ತಗೊಂಡು ಕರಕರ ಕತ್ತಿಗೆ ಕಡಿದಾನು ॥ ಗೀ ॥

ತಲೆ ತಗೊಂಡು ಹೋಗ್ಯಾರ । ಕಲ್ಲೋಳ್ಯಾಗ ॥ ಇಳುವು ॥
ಇಟ್ಟುಕೊಂಡ ಕುಂತ ಚಾವಾಡ್ಯಾಗ
ಜಮಖಂಡಿ ಮುಧೋಳ ಸಿಪಾಯಿರಗ
ಹಿಡಿಯಲಿಕ ಬಂದಾರು ಲಕ್ಷ್ಯಾಗ ॥ ಗೀ ॥

ಜತ್ತಿಗಿ ಸಂಸ್ಥಾನಕ ಬಂದರು ಬೆಳಗಾಗುವುದರೊಳಗ
ತಲೆ ಒಯ್ದು ಕಟ್ಟ್ಯಾರ ಅಗಸ್ಯಾಗ ॥ ಗೀ ॥

ಅವರು ಇರುವುದು ಗದ್ದ್ಯಾಳ ತ್ವಾಟಧಾಗ
ಫೌಜು ಹೋತು ಅವರ ಬೆನ್ನಮ್ಯಾಗ ॥ ಗೀ ॥

ಬಂದಾರ ಧನ್ಯಾಳ ದಾಸ್ಯಾಳ । ಹರಣಾಳ ಕ್ವಾಟೆಯಾಳ
ಡೋಣಿ ಬಿದ್ದಾರ ॥ ೪ ॥

ಮುಂಡಿಗಿನೂರ ಹಂಚಿನಾಳ ಕೋಲೂರ
ರಬಕವಿ ಚಾವಡಾಪೂರ ಗಲಗಲಿಗೆ ಬಂದರ । ಫೌಜ ಬೆನ್ನ ಹಿಂದಾ
ಹಲಗಲಿ ಊರ ನೋಡ್ಯಾರ ಗುಡ್ಡದ ಮ್ಯಾಲಿಂದ ॥ ಗೀ ॥

ಬಾಳೂರ ಬ್ಯಾಡಿಗಿ ಬೂದ್ಯಾಳ! ತೆಗ್ಗಿ ಬಿಸಿನಾಳಕ ಬಿದ್ದು ಅಲ್ಲಿ ಬಂದಾ
ಅಲ್ಲಿ ಗೆಳೆತನ ಕಟ್ಟ್ಯಾರ । ಅಲ್ಲಿ ತೆಗ್ಗಿನ ನಾಯಕಂದ ॥ ಗೀ ॥
ಗಲಗಲಿ ಮಸಿ ಮಸಿ ಡೋಣಿ
ದೇಸಾಯರ ಹಳ್ಳಿ । ಹಾಕಿದರು ತಳ್ಳಿ
ಕೇಳ್ರೀ ಅಲ್ಲಿ ಬಂದಾ । ಬಹು ಚೆಂದಾ
ಗುಜ್ಜರ ಮನಿ ಹಗಲಾ ದರೋಡೆ ಮಾಡಿದ ॥ ಗೀ ॥

ರೋಕ ರೂಪಾಯಿ ಐವತ್ತು ಸಾವಿರ
ಗಂಟ ಎಬ್ಬಿಸ್ಯಾರ । ಟಾಂಸ ಹರಿದಾರು
ಸುಟ್ಟರು ಅಲ್ಲೀ ತಂದಾ
ದಾರಿ ದಾರಿಗಿ ರಾಪಾಯಿ ಚೆಲ್ಲಿದಾರು ॥ ಗೀ ॥

ಹೊರಲಾರದ ನಾಯಕಾಗ ತಂದು ಕೊಟ್ಟಾರ
ಬೆಳ್ಳಿ ಬಂಗಾರ ಕಡೇ ಕಂಠಿಸರ
ಹಂತೀಲೆ ಇದ್ದದ್ದು । ಮುರಕ ಸೂಜಿ ಉಳಿಯದೆ
ತುಂಬಿದಾರ ಮನೆ ತಂದು । ಸರಕಾರ ತಪಸಿಟ್ಟಾರು ॥ ಇಳುವು ॥

ನೋಟಿಸು ಬಿಟ್ಟಾಗೌರ್ನರ್ ಸಾಹೇಬರು
ಬೆನ್ನ ಹಿಂದೆ ಹತ್ತಿತಾ ಲಷ್ಕರು
ಬಿಟ್ಟಾ ಅಮೀನಗಡಕ ಬಂದಾರು ॥ ಗೀ ॥

ಗೌರ್ನರ್ ಸಾಹೇಬ ಸುದ್ದಿ ಕೇಳಿ ॥ ಅಂತ್ರ ॥
ಅಲ್ಲಿಗೆ ಬಂದು ಹುಡುಕಿಸಿ ನೋಡಿದರ । ಸಿಗಲಿಲ್ಲ ಅವರ ಸಿಗಲಿಲ್ಲ ॥ ೫ ॥

ಅಮೀನಗಡದಿಂದ ಬಂದರು ತಿರುಗಿ । ಗಂಗೂರ ಚಿತ್ತರಗಿ ಮಾಘಿಯ ಚೌಕಿ
ಆಗ ರೊಟ್ಟಿಯ ತರಿಸಿ ಕೂತರ ಊಟ ಮಾಡುವುದಕಾ
ಸುತ್ತೀನಾ ಸಣ್ಣ ಹಳ್ಳಿಯವರು । ಹೋಳಿಗಿ ಅನ್ನ ಸಾರು
ಕೊಡುವರು ತಂದು ಅವರ ಊಟಕ
ರೊಟ್ಟಿ ಕೊಟ್ಟವರಿಗೆ ಮಸ್ತ್ ಕೊಟ್ಟ ದಿನಾ ಬದುಕಾ ॥ ಗೀ ॥

ಹಳ್ಳೂರ ಬೇವೂರಾ ಮ್ಯಾಲಿಂದ । ಸೀತಿಮನಗಿ ಬಂದಾ
ಯುಕ್ತಿ ತೆಗೆದಾರ । ಕೂತ ಆ ಕ್ಷಣಕ
ಮುನವಳ್ಳೀ ಹೊಸೂರಾಗ । ಹೊಕ್ಕರಾ ದರೋಡಿ ಮಾಡೂದಕ ॥ ಗೀ ॥

ಸಿದ್ಧಪ್ಪ ಸಾಹುಕಾರ ಕುರುಬರಂವಾ । ಆರುಸಾವಿರ ರೂಪಾಯಿ ರೊಕ್ಕ
ಸಿಕ್ಕಪ್ಪ ಬದುಕ ಒಯ್ದಾರ ಹೊಳೆಯಾಚಕ

ಸಂಪಗಾಂವಿ ಸಂಗೊಳ್ಳಿ ರಾಯಣ್ಣಾ । ಮುಂಡರಗಿ ಭೀಮಣ್ಣಾ
ಶೂರ ಅದಾರಣ್ಣ ಆಗಿನ ಕಾಲಕ । ಕಟ್ಟಿ ಚೆನ್ನಪ್ಪ ಸತ್ತು ಹೋದ
ದೇಶದಲ್ಲಿ ಮಾಡಿ ಬೆಳಕಾ ॥ ಗೀ ॥

ಶೀವಾಜಿ ಟೀಪ್ಪುಸುಲ್ತಾನ । ಗಾಯಕವಾಡೆ ನಾನಾ ಪೇಷ್ವೆಯವರು ಆಗಿನ ಕಾಲಕ
ಅವರು ಪ್ರಬಲರಾದರು । ಪೇಷ್ವೆ ಅವರ ಕಾಲಕ ॥ ಗೀ ॥

ಇಂಗ್ರೇಜಿ ದರಬಾರದಾಗ । ಲಕ್ಷ್ಮಣನಂಗ ಆಗೂದು ಯಾವರ
ತಿಳಿಯೇ ಮನಕ
ಇಂಥ ವೀರ ಶೂರಗ ನಾವು । ಬಹದ್ದೂರ ಅನ್ನಬಾರದ ಯಾಕ
ಮಾಡ್ಯಾನ ಧರಮ ಲಗ್ನಾ । ದೇಶದ ಮ್ಯಾಲ ಹೋಯಿತು ವಾಯಿಣಾ

ಸಾಹೇಬಗ ಹತ್ತಿತು ವ್ಯಸನಾ । ಹ್ಯಾಂಗಾರು ಲಕ್ಷ್ಮ ಸಿಕ್ಕಾನ
ಲಕ್ಷ್ಮಣಗ ಅನ್ನ ಕೊಟ್ಟವನ ಹಿಡಿದು । ತರಿಸಿ ಕುಯ್ಯುವೆ ಗೋಣಾ ॥ ಗೀ ॥

ಹತ್ತ್ಯಾರ ಅವರ ಬೆನ್ನ । ಹುಡುಕುತಾ ಅವರ್ನ
ಹೋದರು ಹೊಳಿ ದೂರ ॥ ೬ ॥

ಸಾಹೇಬಗ ತಪ್ಪಿಸಿ ಹೋಗ್ಯಾರ । ಮೊಗಲಾಯಿ ಸೇರ್ಯಾರ
ಶಾಬಾದಿ ಊರ । ಕಲ್ಬುರ್ಗಿ ಸನಹದಾಗ

ಗುಪ್ತಲಿಂದ ಹೋಗಿ । ಕುಂತಾರ ಪೂಜಾರಿ ಮನಿಯಾಗ
ಸರಕಾರ ತಪಸಿಟ್ಟಾರ । ಮ್ಯಾಲಿಂದ ಮ್ಯಾಲ ತಾರ ಮಾಡಿ

ತಿಳಿಸ್ಯಾರ ಫರಂಗಿ ಸಾಹೇಬಗ
ಗುಪ್ತಲಿಂದ ಹೋಗಿ ನಿಂತಾರು । ಪೂಜಾರಿ ಮಾಳಗಿ ಮ್ಯಾಲ
ಮನಿ ಸುತ್ತಾ ಘೇರಾ ಹಾಕ್ಯಾರ । ನಾಯಕ ಅವಲ್ದಾರ
ಒಗೆಯುತಾರ ಗುಂಡಾ । ಸಪ್ಪಳಕ ಎದ್ದಾರು
ಉಳಿಕಿಯವರು ಜಿಗಿದು ಹೋಗ್ಯಾರ । ಬಸ್ಯಾನ ಕೊಂದಾರು ॥ ಗೀ ॥

ಅವರ ಮ್ಯಾಲ ಮುನಿದಾ ಶಂಕರಾ
ಎಲ್ಲಿ ಹ್ವಾದರು ಅವರ ಬೆನ್ನ ಹತ್ತ್ಯಾರ
ಅತ್ತು ಬಿಡದಂಗ ತೊಳಮಟ್ಟ ತುಮರಮಟ್ಟ
ಹೋಗಿ ಬಿದ್ದರು ಗುಡ್ಡದಾಗ
ಗೌರ್ನರ್ ಸಾಹೇಬ ಸುದ್ದಿ ಕೇಳಿ ಅಲ್ಲಿಗೆ ಬಂದಾ

ಗುಡ್ಡ ಒಳ್ಳೇ ದೊಡ್ಡದು । ಬಿಗಿಲ್ ಮ್ಯಾಗ ಮ್ಯಾಗ
ಗಾಬರಾಗಿ ಲಕ್ಷ್ಮಣ ನಿಂತಾನ । ಗುಡ್ಡದ ಮ್ಯಾಗ

ಜಮಖಂಡಿ ಸರಕಾರ ಬಂದೂಕ । ಲಕ್ಷ್ಮಣನ ಹಂತ್ಯಾಕ
ಅನುಮಾನ ಇನ್ಯಾಕ । ತಗೊಂಡ ಕೈಗಾಹ ಹತ್ತಿತ್ತೋ ಲಡಾಯಿ
ಸಾಹೇಬ ಕುಂತಿದ್ದ ಮೋಟಾರ ಮ್ಯಾಲ ।
ಲಕ್ಷ್ಮಣ್ ಒಗೆದರೈಫಲ್ ॥ ಇಳುವು ॥

ಟೊಪ್ಪಿಗಿಗಿ ಗುಂಡಾ ಬಡಿತಿತ್ತಲ್ಲಾ ।
ಟೊಪ್ಪಿಗಿ ಸಿಡಿದಾ ಬಿತ್ತಾ ಭೂಮಿ ಮ್ಯಾಲ ॥ ಗೀ ॥
ಸಾಹೇಬ ತಿಂತಾನ ಕರಕರ ಹಲಾ । ಹಂಗ ಮೋಟಾರ ತಿರುವ್ಯಾನಲ್ಲ ॥ ಗೀ ॥

ಲಕ್ಷ್ಮಣ ಹಿಡಿದರ ವತನಲ್ಲಾ । ಕಾಲಸತ್ತ ಮಾಡೂದು ಬಿಡುದಿಲ್ಲಾ
ಮನಸ್ಸಿನಲ್ಲಿ ತೆಗೆದನು ಆಕಲಾ । ತಗ್ಗಿನ ನಾಯಕಗ ಹಾಕ್ಯಾರ ಚೇಲ ॥ ಅಂತ್ರ ॥

ಬಿರಿಹಚ್ಚಿ ಗೇರಿಗೆ ತಂದಾರು
ತೆಗ್ಗಿನ ನಾಯಕರು । ಹೊಡಿಯಲಿಕ ಠಾರ
ಪಿತೂರ ಮಾಡಿದಾರ ॥ ೭ ॥

ಅವರ ಮೇಲೆ ಮುನದಾ ದೇವರಾ
ನಾಯಕ ಹವಲ್ದಾರ । ಹೊಡಿಯಲಿಕ ಠಾರ
ಫಿತೂರ ಮಾಡಿದರು ॥ ಗೀ ॥

ಸೇಂದಿ ಶೆರೆ ಅಮಲ ಕುರಿಕೋಳಿ । ದಿನಾ ತಿನ್ನಿಸುವರು ಲಕ್ಷ್ಮಣಗ
ಗುಡ್ಡದಾಗ ದೇವರ ಮಾಡ್ಯಾರ । ಕುರಿಯ ಕುಯ್ದಾರ

ತಗೊಂಡು ವಾಲಿಕಾರ । ನಾಯಕ ಬಂದಾನು ॥ ಗೀ ॥
ಊಟ ಉಡಿಗಿ ಉಣಿಸಿ । ಎಲ್ಲಾ ಮಂದಿ ಕಳುವ್ಯಾನು
ನಾಯಕ ಅಲ್ಲೊಬ್ಬ ಉಳಿದ । ಲಾಟೀನ ತಗದ ಲಕ್ಷ್ಮಣನ ಕರದು
ಕೈಯಾಗ ಕೊಟ್ಟಾನು । ಮೊದಲ ಸೂಚನೆ ಇತ್ತು
ವಾಲಿಕಾರ ಸ್ವಾಮಣ್ಣ ಹೊಡದಾನು । ಪಕ್ಕೆಯಾಗ ಗುಂಡಾ ಬಡಿತಲ್ಲಾ
ಅತು ಒಳ್ಳೇ ಕೇಡಾ । ನಾಯಕ ಓಡಿ ಹೋದಾ
ಲಕ್ಷ್ಮಣ ಬಿದ್ದಾನು
ಮೋಸ ಮಾಡಿ ಹೊಡದಂಗಾಯ್ತು । ಅಭಿಮನ್ಯುವಿಗೆ ಕೌರವನು ॥ ಗೀ ॥

ಪೋಲಿಸರು ಬಂದರು ಮರುದಿನಾ । ಒಯ್ದರಾ ಹೆಣಾ
ಬೀಳಿಗಿ ತಂದ ಮಣ್ಣು ಮಾಡಿದರು
ಮುಳ್ಳ ಕಡಿದು ಹೋತಂತ । ಸಾಹೇಬ ಹಾಲ ಕುಡಿದಾನ ॥ ಗೀ ॥

ಸಾಬ್ಯ ಗೋಪಾಲ್ಯನ ಹಿಡಿದಾರು । ಜಮಖಂಡ್ಯಾಗ ಫಾಸೆಕೊಟ್ಟಾರು ॥ ಇಳುವು ॥

ದುಂಡ್ಯಾನ ತಪಸಿಟ್ಟಾರು । ಸೊಲ್ಲಾಪುರದಾಗ ಕಡಿದಾರು
ನರಸೂನ ಹಿಡಿದು ಒಯ್ದಾರು । ಯರವಾಡ ಜೇಲಿನಲ್ಲಿಟ್ಟಾರು ॥ ಗೀ ॥

ಸತ್ತಿಲ್ಲಂತ ಜನಾ ಅನ್ನುವರು । ಅವರ ಮ್ಯಾಲ ಮುನಿದಾ ದೇವರು ॥ ಗೀ ॥

ದೇಶದೊಳಗ ಬಿದರೆಯೂರು । ಬುದ್ಧಿ ಕೊಟ್ಟ ಬಂಡೀರಂಗ ದೇವರು ॥ ಗೀ ॥

ಬಲರಾಮ ದೇವರ ಗುಳಿ । ಲಕ್ಷ್ಮಣನ ಹಾವಳಿ ॥ ಅಂತ್ರ ॥

ಪ್ರಭು ಕವಿಗಾರ ॥ ೮ ॥

ಸಂಗ್ರಹ: ಹರದೇಶಿ ನಾಗೇಶಿ, ಸಂ. ಡಾ. ಬಸವರಾಜ ಪೊಲೀಸ ಪಾಟೀಲ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ೨೦೦೬

ಆದಾಯ ತೆರಿಗೆ

ಪಲ್ಲಾ

ಏನ ಹೇಳಲಿ ಜನ್ಮದ ಗೋಳಾ
ಇಂಗ್ರೇಜಿ ಉಪದರ್ ಆದೀತ ಬಾಳಾ
ಬಡವರ ಅಳತಾರೊ ಗಳಗಳಾ
ಮಾಡತಾರ ಚಿಂತಿ

೧ನೇ ನುಡಿ

ಮದಲಿಂದ ಕೇಳರಿ ಮಜಕೂರಾ
ಬಂದಾರ ಗಾಡಿನ್-ಸಾಹೇಬ ಸರದಾರಾ
ಕುಂತಕೊಂಡ ತಗದ ಒಂದ ಹುನ್ನಾರಾ
ದುಡ್ಡ ಎಳೋ ಈ ಗತಿ

ಗಾಡಿನ್ ಸಾಹೇಬ ಹೇಳತಾನ ತೋರಿ
ಹಸನ ಮಾಡಿಸ್ತೇನ ರಾ-ದಾರಿ
ಇದಕ ನೀವ ಏನ ಅಂತೀರಿ
ಕೆಲಸ ನಿಮದಃ ಅತಿ

ಪಂಚರ್ ಎಲ್ಲಾರು ಆದಾರಾ ಕಬೂಲಾ
ಮುಂದ್ ಹಿಂಗ್ ಆದೀತ ಅನ್ನುದು ತಿಳಿಲಿಲ್ಲಾ
ದುಡ್ಡಿನ ಗರ್ವಿಲಿ ತೆರೆದಾರ ಹಳ್ಳಾ
ಇಲ್ಲ ಕಕಲಾತಿ ॥ ಚಾಲ ॥

ಆಗ ಹಾಕಿದಾರ ಕೇಳ ಕಷ್ಟಪಟ್ಟಿ
ಕಠಿಣ ಬಡವರದ ತುಂಬುದು ಹೊಟ್ಟಿ
ಮಾರಿ ಕೊಟ್ಟಾರೊ ನೂಲುವ ರಾಟಿ

ದುಡ್ಡಿನ್ ಆಸೆ ಹತ್ತಿತ ಸರಕಾರಕ
ಚೌಕಾಶಿ ಬಾಳಾತ ದಿನದಿನಕ
ಸಗಣಿ ಗುಟ್ಟಿ ಮಾಡ್ಯಾರ ಆ ಕ್ಷಣಕ

ಕಟಗಿ ಮಾರತಾರ ಮಾಡಿ ತೂಕ
ಪ್ಯಾಂಡಾರೆರು ಲಮಾಣೆರು ಕಟಗಿ
ಮಾರಿ ತಮ್ಮ ಮಕ್ಕಳ್ನ ಮಾಡತಿದ್ರ ಜೋಕಿ
ಈಗ ಬೇಡುದ ಬಂದತಿಃ ಬಿಕ್ಕಿ
ಕೆಲಸ ಹೀಂಗ್ಃ ಅತಿ

೨ನೇ ನುಡಿ

ಸರಕಾರದ ದೊರಿತ ಮಸಲತ್ತಾ
ಕರಪಟ್ಟಿ ಹಾಕ್ಯಾರ ತುರತಾ-ತುರತಾ
ರೈತರ ದುಡ್ಡ ಎಳುವ ಹಿಕಮತ್ತಾ
ಮಾಡಿದರಾ ಹೀಂಗ

ಸರಕಾರದ ಆತ ಬಲಜೋರಿ
ಲೋಟಿಸ ಕೊಟ್ಟ ವಾಯಿದೆ ಮಾಡಾರಿ
ಕೊಡದಿದ್ರ ಬೆಸಕ ಜೋರಿ
ನಡಸರಿ ಅಂಜಿಲದ್ಹಾಂಗೆ

ಕಲೆಕಟರ ಸಾಹೇಬ ಬಂದ ಆಗ
ಬಂದು ಇಳದಾನ ಬಂಗಲೇದಾಗ
ಜನರೆಲ್ಲ ಹೋಗಿ ಮುತ್ತಿದಾರ್ ಅವಂಗ
ಶಿವಾ ಇಳದ್ಹಾಂಗ

ವಾಯಿದೆ ಮೀರಿದರ್-ಹಚ್‌ಚರಿ ಬಡ್ಡಿ
ಮನಿ ಮಾರ ತಗೋಳ್ರಿ ಲಿಲಾವ ಮಾಡಿ
ಬಾಳ ಮಂದಿ ಕೊಟ್ಟಾರೊ ಗೋಳಿ-ಆಡಿ
ಹೆದರಿ ಮನದಾಗ ॥ ಚಾಲ ॥

ದೈವದವರೆಲ್ಲಾ ಕೂಡಿ ಸಮಸ್ತಾ
ಅರ್ಜಿ ಕೊಟ್ಟಾರೊ ಮಾಡಿ ಮಸಲತ್ತಾ
ಚೌಕಾಶಿ ಮಾಡರಿ ದಣೇರಕುಂಟಾ
ಪಟ್ಟಿ-ಕಂಡೊ ನಮಗ್-ಇಲ್ಲ ತಾಕತ್ತಾ

ಸಾಹೇಬ ಮನಸಿಗೆ ತರಲಿಲ್ಲಾ
ಈ ಮಾತs ನಮ್ಮ ಕಡೆ ಇಲ್ಲಾ
ಓಡಿತಾಡಿ ಹೋದವ ಕೈ-ಕಾಲಾ
ಕುಳ ನೀರ ಬಿಟ್ಟ ಕುಂತರ್-ಅಲ್ಲಾ

ಸೌಕಾರ ವಸ್ತೊಡವಿ ತಗದಿಟ್ಟು
ಹರಕ ದೋತರ ಅಂಗಿಯ ತೊಟ್ಟು
ಬಂಗಲೆಕೆ ಹೋಗುವ ನಾಚಿಕಿ ಬಿಟ್ಟು
ಬಡವರಾ ಗತಿ

೩ನೇ ನುಡಿ

ಹರಪನಳ್ಳಿ ರಾಯಪ್ಪ ಬರಕೊಟ್ಟಾ
ಇವರಿಗಿ ಹುಟಾಜ್ ಐತಿರಿ ಯತ್ತಿಷ್ಟಾ
ಬಡವರ ಸುತ್ತ ತಂದನೊ ಕಷ್ಟಾ
ಉಳೀಲಿಲ ದರಮಾ

ಕಮರಿ ಪ್ಯಾಟೆ ಮುಸಲರ್-ಒಳೆಗಟ್ಟಿ
ಕೊಡುದಿಲ ಹೋಗಂದಾರ ಕರಪಟ್ಟಿ
ಬೇಕಾರ ತಗೋಳ್ರಿ ದಂಡಾ ಕಟ್ಟಿ
ಇದರ ನಿಮ ಹುಕುಮ

ಸುಭೆದಾರ ಸಿಟ್ಟಲಿ ಆದ ಬೆಂಕಿ
ಮನಿ-ಮನಿ ನೋಡ್ಯಾನೊ ಎಲ್ಲಾ ಹುಡಿಕಿ
ತಾಂಬರ-ಚೂರ ಕರವಾಯಿ ಸುಟಕಿ
ವೊದದ್ದ ಕೇಳ್ರಿ ನೇಮಾ ॥ ಚಾಲ ॥

ಮುಸಲರ ಎಲ್ಲಾ ಕುಂತಾರ ಕೂಡಿ
ಮಸೂತಿ ವಳಗ ಮಸಲತಾ ಮಾಡಿ
ಕಾ ಹೈ ಧೂಂಡ್‌ಕರ್ ಲಕಾವ್-ಅರೆ ಲಕಡಿ
ಹಿಂದಕ ಸರಿದಿರಿ ಅನಮಾನ ಮಾಡಿ

ಮಸಲತ್ತ ಹಾಕಿದರ ಹೀಂಗ
ಬೇಸೇಕ ಹೊಡುನು ಬಂದವಂಗ
ಆದ್ರ ಬೀಡಿ ಹಾಕ್ಯಾರ ನಮಗ
ಮತ್ತೇನ ಮಾಡ್ಯಾರ ಇದ್ರ ಮ್ಯಾಗ

ಬಡೆ ಕಟ್ಟೈ ನವೆ ರೆ ದಿವಾನಾ
ಸರಕಾರ್-ಕೆ ಸಾತ್ ಮಸ್ತಿ ನಾ ಕರ್ನಾ
ಮಾ ಬಾಪ್ ಕರಕೋ ಪಾವಾ ಪಡ್ನಾ
ಕಯಿ ತೊ ಮೇರ್ ಆತಿ

೪ನೇ ನುಡಿ

ಎಲಪಾಟ್ ಸಾಹೇಬ ಬಂದ ಸರದಾರಾ
ಬಡವರ ಮ್ಯಾಲ ಇದ್ದ ಬಲ ಫೇರಾ
ಆಗ ಕುಂತ ಮಾಡ್ಯಾನ ವಿಚಾರಾ
ಕೇಳರಿ ಹೀಂಗ

ಆಗ ಮುಸಲರೆಲ್ಲಾರು ಕೂಡ್ಯಾರು
ಮಸಲತ ಮಾಡಿ ಅರ್ಜಿ ಕೊಟ್ಟಾರು
ಬಂಗಲೆಕ ಬಂದ ಎಲ್ಲಾರ ಕೂಡ್ಯಾರು
ಕೇಳರಿ ಆಗ

ತುಮ್ ಖಾವಂದ ಅಜಿ ಯಿ ಸುನ್ನಾ
ಹಮಾರಿ ಪಟ್ಟಿ ಮಾಪ್ ತುಂ ಕರ್ನಾ
ನಿಂತಕೊಂಡ ನೋಡಿದಾನ ಬಡವರನಾ
ಕರುಣ ಹೊಟ್ಯಾಗ

ಸಾಹೇಬ ನೋಡಿದಾನ ಸೋಸಿ
ಲಗುಮಾಡಿ ಅರ್ಜಿ ಕುಡುತಾನ ಬರಸಿ
ಅವನ ಹೊಟ್ಯಾಗ್-ಆತ ಕಸವಿಸಿ
ಬೆಂಕಿ ಬಿದ್ದಾಂಗ

ಹೆಂಗಸರುಟ್ಟಂತ ಹರಕ ಪರಕ ಸೀರಿ
ನಿಂತಕೊಂಡ ನೋಡಿದನ ಐಸ್ವರಿ
ಗರ್‌ಮೆ ನೈ ಕರ್ ಕೋ ಜಾರಿ
ಅಳತಾರ ಆವಾಗ

ಆಗ ಸರದಾರ ಮಾಡ್ಯಾನ ವಿಚಾರಾ
ಕುಂತಿದಾರಣ್ಣಾ ದೊಡ್ಡ ಸಾವಕಾರಾ
ಬಡವರ ಮಾಡ್ಯಾರ ನಮಸ್ಕಾರಾ
ಸಾಹೇಬ ಕೇಳಿದ ಕಿವಿಗೊಟ್ಟಾ
ಇವರಿಗಿ ಹುಟಾಜ್-ಅತಿ ಹೇಳ್ರಿ ಎಷ್ಟಾ
ಹಿಟಾಳಿ ಈರಬದ್ರಪ್ಪಾ ಬರಕೊಟ್ಟಾ
ಐನೂರ ರೂಪಾಯ್ದು ಅಂದಾಜಿಟ್ಟ
ನೀವ ಹೇಳಬ್ಯಾಡ್ರಿ ಕಿರೆ ಸುಟ್ಟಾ
ಪಂಚರ ಕಿವಿಮ್ಯಾಗ್ ಇಟ್ಟಾ

೬ನೇ ನುಡಿ

ಎಲ್ಲಾರ ಕೂಡಿ ಮಾಡತಾರ ಲೆಕ್ಕಾ
ತಮತಮೊಳಗ ಹಾಕತಾರ ತೂಕ
ಎಷ್ಟೂಂತ ಹೇಳಲಿ ಜನರ ದುಕ್ಕ
ಕೆಲಸ ನಡದತಿ

ಪ್ರತಮ್ ಶೆಟ್ಟಿ ಮಾಕಪ್ಪ ಪುಣಿವಂತಾ
ಲೆಕ್ಕಹಾಕಿ ಮಾಡಿದಾ ತಾ ಕುಂತಾ
ಎಲ್ಲರ ಮನಸ ಆತ ಸನಮಂತಾ
ಕೇಳರಿ ಇನ್ನಾ

ಬಡವರ ನಿಂತಾರ ಮಾರಿ ಮಾರಿಗಿ
ನಿಂತ ಬೇಡಿಕೊಂಡಾರೊ ದೊರಿಗಿ
ಕೊಟ್ಟಂತ ಪಟ್ಟಿ ಕೊಡಿಸಿದಾನ ತಿರಿಗಿ
ಸಾಯೇಬ ಪುಣಿವಾನಾ

ಮುಸಲರ ಅಂತಾರ ಅರೆ ಅಲ್ಲಾ
ವರ್ಸಾತ ಗೋದಿ ಅಕ್ಕಿ ಉಂಡಿಲ್ಲಾ
ನಮ್ಮ ಪಡಿಪಾಟ್ಲ ಶಿವನೆ ಬಲ್ಲಾ
ಕೊಡುನು ನಾವ್-ಏನಾ

ಪರಮಧೂತ-ನಾಮ-ಸಂವಚ್ಚರಾ
ಕರಪಟ್ಟಿ ಹಾಕಿತಣ್ಣಾ ಸರಕಾರಾ
ಬಡವರ ಮರಗಿದಾರ ಮರಮರಾ
ಸ್ವಾಮಿ ಭಗವಾನಾ

ಪರಜೋತ್ಪತ್ಯಾ-ಸಂವಚ್ಚರ ತನಕ
ಜನರ ಆದಾರೊ ಬಾಲ ಹಲಾಕ
ಬಡತನ ಬಂತಂಥಾರ ಸರಕಾರಕ
ಹೋಗುನಂತಾರ ಮತ್ತೊಂದ ರಾಜೆಕ
ಭಾಳ ಸರಾಪ್ಯಾರ ಪಂಚರ ಗುಣಕ
ಶೆಟ್ಟಿ ಸುಭೇದಾರ ಕಾಮ್ದಾಜನಕ

ಈ ಪದಾ ಹುಟ್ಟಿತ ಹುಬ್ಬಳ್ಯಾಗ
ಅಂಕುಸ್-ತುರಾಯ ಡಬ್ಬಿನ ಮ್ಯಾಗ
ವಸ್ತಾದ ಹನುಮಂತ್ರಾವನ ಮಗ
ಗುರು ಸಿದ್ದೇಶನ ದಯಾನ ಮ್ಯಾಗ
ಕವಿ ಗುರುಸಿದ್ದ ದಾನ-ಚಾತುರಾ
ಮಾಡಿ ಹೇಳಿದಾನ ಅಕ್ಷರಾ
ಕುಂತ ಕೇಳಾರೆಣ್ಣಾ ಮಜಕೂರಾ
ಆದ ಪಜೀತಿ

ಸಂಗ್ರಹ: ಫ್ಲೀಟರು ಸಂಗ್ರಹಿಸಿದ ಲಾವಣಿಗಳು, ಕ್ಯಾತನಹಳ್ಳಿ ರಾಮಣ್ಣ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೯೧.

ಅನುಬಂಧ – ೨

ರುಕ್ಮಿಣಿ ಗರ್ವಹರಣ

ಹೆಂಗಸರಾದ ಮೇಲ ಯಾರಾದರೇನ
ಮಾಡತಿರತಾರ ಪುರುಷರ ನಿಂದಾ ।
ನರರ ನಡಾವಳಿ ನೋಡಿ ರುಕ್ಮಿಣಿ
ಜಕ್ಸ್ಯಾಳ ಮಾಡಿ ಒಮ್ಮೆ ಹರಿಯ ನಿಂದಾ ।
ಒಂದ ದಿವಸ ರುಕ್ಮಿಣಿ ಮನಸ್ಸಿನಲ್ಲಿ
ಕುಬುದ್ಧಿ ಹುಟ್ಟಿತ ಹರಿವಿಷಯಕ ।
ತೌರ ಮನಿಯ ಐಶ್ವರ್ಯ ನೆನಸಿ ಅಂತಾಳ
ನನಗ ಅತ್ತಿಮನಿ ದೊರಕಲಿಲ್ಲ ನನ್ನ ಲೆಕ್ಕ ।
ನಾ ನೋಡಿದರ ರಸನ ಮಗಳು
ಕಡಿಮಿಲ್ಲ ನಮ್ಮ ತಂದಿ ಸಂಪತಕ್ಕ ।
ಅತ್ತಿ ಮಾನ್ಯಾವ್ರ ಐಶ್ವರ್ಯ ನೋಡಿದರ
ನಾಚಿಕಿ ಬರತತಿ ಹೇಳುದಕ ।
ಜಾತಿ ತೆರೆ ಇವರ ಶ್ರೇಷ್ಠರೆಂದಿನ
ಗೌಳಗೇರ ಕುಲಾ ಇವರದ ಪೈತೀಕ ।
ಹಾಲ ಬೆಣ್ಣೆ ಮಾರಿ ಹೊಟ್ಟಿ ತುಂಬಿ
ಕೊಳ್ಳಾವ್ರ ಹೆಂತಾಮನಗಂಟ ಬಿತ್ತ ನನ್ನ ಪಾಲಕs ।

ಚಾಲ:

ಗಂಡ ಚಲೋ ಅರೆ ಅದಾನಂತ ನೋಡಿ ಸಂತೋಷ ಬಿಡತೀನಾ ।
ಹರಿ ಕಂದ ಮೈದಾಂವ ನೀಲೀ ವರ್ಣಾ ।
ಛತ್ರ ಚಾಮರ ಇವನಗಿಲ್ಲ ಎಲ್ಲಿಂದ ಬಂದೀತ ದೌಳತಾನಾ ।
ದನಾ ಕಾಯಕೋತಾ ತಿರಗಾಂವಾ ವನಾವನಾ ।
ಇವನ ಕೈಕಾಲ ಒತ್ತುದಕ ಸಲ್ಲುದುಲ್ಲ ನನ್ನ ಗಮನಾ ।
ಕಡ್ಡಿ ಮುರದ ಬಿಟ್ಟ ಕೊಡತೀನ ಹರಿನಾ ।

ಕೂಡಪಲ್ಲ:

ಇವನ ಬಿಟ್ಟ ಒಬ್ಬ ಅರಸನ ಮಾಡಿಕೊಂಡ
ಮಾನ ಬಂದಿ ತಂದಾಲ ಅವನಿಂದ ॥ ೧ನೇ ಚೌಕ ॥

ಮದಗಳಿಗಿ ಹಿಂಗ ಕೃಷ್ಣನ ನಿಂದಿಶ್ಯಾಳ
ಮತ್ತೊಂದ ಗಳಿಗ್ಗಿ ಹುಟ್ಟಿತ ಅರವಾ ।
ಸುದ್ಧಿ ಮ್ಯಾಗ ಬಂದ ಅಂತಾಳ ನನ್ನ
ಗಂಡ ತ್ರಿಲೋಕನಾಥ ದೇವಾದಿ ದೇವಾ ।

ಅಂಬರೇಷನ ಸಲುವಾಗಿ ಆಗ ಶ್ರೀಹರಿ
ದಶಾವತಾರ ಧಾರಣ ಮಾಡಿದಾಂವಾ ।
ಹಂತಾ ದೇವಗ ನಾಯಾಕ ನಿಂದಿಸಿನೆಂತ
ಪಶ್ಚಾತ್ತಾಪ ಹುಟ್ಟಿ ಹಿಡಿದಾಳ ನಮ್ರ ಭಾವಾ ।
ಮುಚ್ಚಿನಂತೆ ಪ್ರೇಮ ಹುಟ್ಟಿ ರುಕ್ಮಿಣಿ
ಮಾಡಾಕ ಹ್ವಾದ್ಳ ಕೃಷ್ಣನ ಸೇವಾ ।

ಚಾಲ:

ಅಂತ್ರಸಾಕ್ಷಿ ಹರಿ ಆಂವ ಸರ್ವಂತ್ರಯಾಮಿ ಗೋವಿಂದಾ ।
ಭಕ್ತರ ಹೃದಯ ಅಭಜಮಿನಿಂದಾ ।
ಎಳೆ ಸಾಧಿಸಿದಾಗ ನೋಡೂನು ಅಂದಾ ।
ಸರ್ವ ಶೃಂಗಾರಾಗಿ ರುಕ್ಮಿಣಿ ಸೇವಾ ಮಾಡು ಕಡಸಿಂದಾ ।
ಪತಿ ಮಂಚಕ ಹ್ವಾದ್ಳ ಪ್ರೀತಿಯಿಂದಾ ।

ಕೂಡಪಲ್ಲ:

ಮಂಚದ ಮ್ಯಾಲ ಕೃಷ್ಣ ಮಲಗಿದ್ದ
ರುಕ್ಮಿಣಿ ಅವನ ಎಡಕ ಹೋಗಿ ಕುಂತಾಳ ಒಳೆ ಡೌಲದಿಂದ ॥ ೨ನೇ ಚೌಕ ॥

ಪಂಕೆ ತಗೊಂಡ ವಗ ಗಾಲಿ ಹಾಕಾಕ್ಹತ್ಳ
ಕೃಷ್ಣ ನುಡುದಾನ ಒಳೆ ಮೆಲ್ಲಗೆ ।
ಸಾಕ ರುಕ್ಮಿಣಿ ನನ್ನ ಸೇವಾ ಮಾಡುದು
ಅಬರು ಅಲ್ಲ ಇದ ನಿನಗ ।
ನೀ ನೋಡಿದರ ಅರಸನ ಮಗಳು
ಕಡಿಮಿ ಇಲ್ಲ ನಿಮ್ಮ ತಂದಿ ಸಂಪತ್ತಕ್ಕ ।
ನಿಮ್ಮ ತಂದಿ ಮನ್ಯಾಗ ಇದ್ದ ದ್ರವ್ಯದಷ್ಟ ಹೆಡ್ಡಿದರ
ಮಣ್ಣ ಹೊಂಡಾಕಿಲ್ಲ ನಮ್ಮ ಮನಿಯಾಗ ।
ನೀ ನೋಡಿದರ ಕಾಂಚನ ವರ್ಣ
ನಾ ಅದನ ನೀಲವರ್ಣ ಕರ್‍ರಗ ।
ನಿನ್ನ ರೂಪ ಎತ್ತ ನನ್ನ ಕುರೂಪ ಎತ್ತ
ಗಂಡಂದ್ರ ಒಪ್ಪುದುಲ್ಲ ನಾ ನಿನಗ ।

ಚಾಲ:

ರಾಜ ಪಟ್ಟ ನನಗಿಲ್ಲ ದ್ರವ್ಯದ ಅನಕೂಲಾ ।
ಚಾತಿಲಿ ಗೊಲ್ಲ ಕಾಯಾಂವಾ ಗೋಗಳಾ ।
ರಾಜ ಸುಪುತ್ರಿಯಾಗಿ ನೀ ನನ್ನ ಕೈಕಾಲ ಒತ್ತುದ ಅನ್ಯೆಬಾಳಾ ।
ಜೀವಕ ಬ್ಯಾಸ್ರ ನಿನಗ ಒಣಗೋಳಾ ।

ನಿಮ್ಮ ತಾಯಿ ತಂದಿ ನನಗ ಕೊಟ್ಟ ಕೋದ್ರ ನಿನ್ನ ಕೊರಳಾ ।
ಕಾಗಿ ಕೊಳ್ಳಾಗ ಕಟ್ಟಿದಂಗ ರತ್ನದ ಹರಳಾ ।
ನಿನ್ನ ಮ್ಯಾಲ ನಾ ಯೇನ ದಾವೇ ಮಾಡುದುಲ್ಲ ಕೋರ್ಟನ್ಯಾಗ ಜಗಳಾ ।
ಈಗ ಕಡ್ಡಿ ಮುರದ ಬಿಟ್ಟಕೊಟ್ಟ ಹೋಗ ಸರಳಾ ।

ಕೂಡಪಲ್ಲ:

ನನ್ನ ಬಿಟ್ಟ ಒಬ್ಬ ಅರಸನ ಮಾಡಿಕೊಂಡ
ವಿಷಯಸುಕಾ ಅನುಭವಿಸ ಹೋಗಂದಾ ॥ ೩ನೇ ಚೌಕ ॥

ಕೃಷ್ಣ ನುಡಿದ ಮಾತ ಕೇಳಿ ರುಕ್ಮಿಣಿಗೆ
ತಾ ನಿಂದಾ ಆಡಿದ್ದ ಆದೀತ ಸ್ಮರಣಾ ।
ಕೋಪ ವೇಷದಿಂದ ಕಣ್ಣ ಕೆಂಪಗೆ ಮಾಡಿ
ಎಕ ದೃಷ್ಟಿಯಿಂದ ನೋಡ್ಯಾಳ ಹರಿನಾ ।
ಹುಬ್ಬಗಂಟ ಹಾಕಿ ತುಟಿ ಕಚಕೊಂಡಾಳ
ಗಲ್ಲ ಅದು ರಕ್ತದ ವರ್ಣಾ
ವಜ್ರದಿಂದ ಎಳಿಬಾಳಿ ಕಡದಾ
ಮಂಚದ ಕೆಳಗೆ ಬಿದ್ಧ ಹಾರಿ ಹಳಾನಾ ।
ರನ್ನ ಶಾಂತಳಾಗ ಬಿನ್ನ ತಿಳಕೊಬ್ಯಾಡ
ನನ್ನ ಮ್ಯಾಲಿ ಎರಡಿಲ್ಲ ನಾನಾ ।
ನನ್ನ ವಿಷಯಕ ಒಮ್ಮಿ ನನ್ನ ಮನಸ್ಸಿನಲ್ಲಿ
ಹುಟ್ಟಿದ್ರ ಹುಟ್ಟಿರಬಹುದ ಕುಕಲ್ಪನಾ ।

ಚಾಲ:

ಹಿಂತಾ ಮಮಧ ಬೇದಕ ಮಾತ ಕೇಳಿ ಕೃಷ್ಣನ ಭಾಷಣಾ ।
ರುಕ್ಮಿಣಿ ಗರ್ವ ಆತ ಹರಣಾ ।
ಆಗ ಚಟ್ನ ಎದ್ದ ಹೋಗಿ ಹಿಡದಾಳ ಶ್ರೀಹರಿಚರಣಾ ।
ಹಿಂಗ ಸಾರತಾವ ಮೂಲ ಪುರಾಣಾ ।
ಮಾವ ಇರುವುದು ಥೇಟ ಕರ್ನಾಟಕ ಗೋಕಾವಿ ಠಿಕಾಣಾ ।
ಭಾಳ ರಮ್ಯ ಸ್ಥಳಾ ವಿಸ್ತರಣಾ ।
ಸಾತು ಕ್ಯಾಮಣ್ಣ ಲಾವಣಿ ಮಾಡಿ ಹೇಳ್ಯಾನ ಹೊಸ ಭರಣಾ ।

ಕೂಡಪಲ್ಲ:

ಗಂಡ ಹರಿ ಮುಕ್ಕಂದನ ಮುಂದಾ
ಜಂಬ ನಡಿಲಿಲ್ಲ ನಿಮ್ಮ ಹೆಣ್ಣಿಂದಾ ॥ ೪ನೇ ಚೌಕ ॥

ಸಂಗ್ರಹ: ಸಾತು ಕ್ಯಾಮಣ್ಣನ ಲಾವಣಿಗಳು, ಸಂಪಾದಕರು : ಡಾ. ನಿಂಗಣ್ಣ ಸಣ್ಣಕ್ಕಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೪.

ಏಕಲವ್ಯ

॥ ಪಲ್ಲ ॥

ಚಿತ್ತವಿಟ್ಟ ಕೇಳರೆಣ್ಣಾ ಒತ್ತಿ ಒತ್ತಿ ಹೇಳತೀನ ನಿತ್ಯನಾದ ಏಕಲವ್ಯನ ಕಥೆಯನ್ನಾ ।
ವ್ಯಾಸ ಭಾರತದೊಳಗ ಬಂದಿರುವಂಥ ಘಟನೆಯನಾ ।
ಎಲ್ಲಾರೊಪ್ಪುವಾಂಗ ಆಧಾರಿಟ್ಟ ಹೇಳುವೆನಾ ॥
ವರ್ಣದ್ವೇಷದಿಂದ ದ್ರೋಣ ಶಿಷ್ಯನಾಗಿ ತಗೋಳಿಲ್ಲ ಸ್ವಾರ್ಥಕಾಗಿ ಕೃಷ್ಣ
ಕೊಂದ ಅವನನ್ನಾ ।
ವ್ಯಾಧರಾಜನಾದ ಬಿಲ್ಲಗಾರ ಗುರುಭಕ್ತನ್ನಾ ॥

ಚೌಕ–೧

॥ ನುಡಿ ॥

ಅಸ್ತ್ರವಿದ್ಯಾ ಶಸ್ತ್ರವಿದ್ಯಾ ಶಾಸ್ತ್ರ ವಿಷಯ ಮೊದಲ ಮಾಡಿ ತ್ರಿಷಷ್ಠ ವಿದ್ಯಾದೊಳಗ
ನಿಪುಣ ದ್ರೋಣಾಚಾರಿ ।
ಇದನ ತಿಳದಕೊಂಡ ಕರದ ತಂದ ಭೀಷ್ಮಾಚಾರಿ ।
ಶಿಷ್ಯರಾಗಿ ಮೊಮ್ಮಕ್ಕಳನ್ನ ಇಟ್ಟ ಬರೋಬರಿ ॥
ಪ್ರೀತನಾಗಿ ಭಿಷ್ಮಾಚಾರಿ ಭರದ್ವಾಜ ದ್ರೋಣನಿಗೆ ಮುತ್ತುರತ್ನ ದವಸಧಾನ್ಯ ಜರತಾರಿ ।
ಕೊಟ್ಟ ಭವ್ಯವಾದ ಭವನವನ್ನ ಮನಸಾರಿ ॥ ೧ ॥
ಒಂದು ದಿನಾ ದ್ರೋಣಾಚಾರಿ ಚಂದದಿಂದ ಶಿಷ್ಯರನ್ನೆಲ್ಲಾ ಒಂದ ಮಾಡಿ ಕರೆದ
ತಂದ ಪರಭಾರಿ
ಅವರ ಮನಸಿನೊಳಗ ಆಶೆ ತುಂಬಿದ ಪರಿಪರಿ ।
ಆಗ ಶಿಷ್ಯರೆಲ್ಲ ಹರುಷ ಆದ್ರ ಮಿತಿಮೀರಿ ॥
ಗುಟ್ಟಿನಿಂದ ಒಂದ ಮಾತ ಅಷ್ಟೂರಿಗಿ ಕೇಳತಾನ ನಿಷ್ಠಾದಿಂದ ನನ್ನ ಆಶಾ
ತೀರಿಸುವಿರಿ ।
ನಿಮ್ಮ ವಿಚಾರವನ್ನ ನೀವು ಏನ ಹೇಳುವಿರಿ ॥ ೨ ॥
ಕೇಳಿಮಾತ ಕೌರವರೆಲ್ಲ ಹೇಳಲಿಲ್ಲ ಸುಮ್ಮನಾದ್ರ ತಾಳಹೊಡದಾಂಗ ಎದ್
ನಿಂತ ಧರ್ನುರ್ಧಾರಿ ।
ಗುರು ದ್ರೋಣರಿಗೆ ಭಕ್ತಿಲಿಂದ ಮಾಡಿ ಮುಜುರಿ ।
ತಾನು ಮಾಡುದಾಗಿ ವಚನಕೊಟ್ಟ ಪಾರ್ಥಸಾರಿ ॥
ಹರುಷಗೊಂಡ ದ್ರೋಣಾಚಾರಿ ಪುರುಷವರಗ ಹೃದಯ ತುಂಬಿ ಹರಕಿ
ಕೊಟ್ಟ ಹೇಳತಾನ ನಿನ್ನ ಪರಿ ।
ಯಾರು ಲೋಕದಲ್ಲಿ ಆಗದಂಗ ನಿನ್ನ ಸರಿ ॥ ೩ ॥

ಚಾಲ:

ಗುರು ಅರ್ಜುನನ ಮೆಚ್ಚಿಕೊಂಡ – ಮಾಡಲಾಕ ಅವನಪುಂಡ– ಆತನಿಗೆ
ವಚನ ಕೊಟ್ಟಾನು–ವಚನ ಕೊಟ್ಟಾನು ॥ ೧ ॥

ಅಶ್ವತ್ಥಾಮನ ತೋಡಿಗೆ ತೋಡಿ–ವಿದ್ಯಾ ಕಲಿಸಿದಾನ ಜೋಡಿ–
ಉಳಿಲಿಲ್ಲ ಕಸರ ಏನೇನು–ಕಸರ ಏನೇನು ॥ ೨ ॥
ಧನುರ್ವಿದ್ಯಾದಲ್ಲಿ ಪಾರ್ಥಬಲವಂತ–ಆದ ಅವಶಮರಂತ–
ಖಾಸ ದ್ರೋಣ ಶಿಷ್ಯ ಹೌದ ಅವನು-ಶಿಷ್ಯ ಹೌದ ಅವನು ॥ ೩ ॥

॥ಕೂ.ಪ ॥ ಕತ್ತಲದಾಗ ಒಮ್ಮೆ ಪಾರ್ಥ ತುತ್ತ ಹೋತ ಬಾಯ್ಗೆ ನಿರತ ಗತ್ತಿನಿಂದ
ಘಳದಕೊಂಡ ಅರ್ಜುನಾ ।
ತನ್ನ ಕಣ್ಣ ಕಾಣದ ದೂರವಿರುವ ವಸ್ತುವನಾ ।
ಬೇಕಾದಾಂಗ ಹೊಡಿಯ ಬಹುದ ಬಾಣ ಅಂಬುದನಾ ॥ ವರ್ಣಾ ॥

ಚೌಕ–೨

॥ ನುಡಿ ॥ ಕುರು ಪಾಂಡು ಪುತ್ರರೆಲ್ಲ ಗುರು ಕರುಣಾ ಹೊಂದು ಹಾಂಗ ಬ್ಯಾರೆ
ರಾಜಕುಮಾರರು ಬಂದಾರಲ್ಲಿ ।
ಸೂತಪುತ್ರ ಕರ್ಣ ಕೂಡಿಕೊಂಡ ಅವರಲ್ಲಿ ॥
ಕುರುಪುತ್ರ ದುರ್ಯೋಧನ ಅವಗ ಬೆಂಬಲಿ ॥
ಹಿಂಗ ಆತ ಅವರ ಜೋಡಿ ಅಂಗರಾಜ ಕೌರವಕೂಡಿ ವ್ಯಂಗ್ಯವಾಗಿ
ಪಾರ್ಥನ್ನ ಕಂಡಾರಲ್ಲಿ ॥
ಮುಂದ ಬೆಳದ ಬಂತ ವೈರತನ ಅವರಲ್ಲಿ
ಧನುರ್ವಿದ್ಯಾ ಪ್ರಾಪ್ತಿಗಾಗಿ ವನದರಾಜ ಹಿರಣ್ಯಧನು ತನುಜನಾದ
ಏಕಲವ್ಯ ಬಂದಾನಲ್ಲಿ ।
ಒಳೆ ಹರುಷದಿಂದ ವಿದ್ಯೆಗಾಗಿ ದ್ರೋಣನಲ್ಲಿ ।
ಪಾದಾಮುಟ್ಟಿ ಮಾಡಿ ನಮಸ್ಕಾರ ಕೇಳ್ಯಾನಲ್ಲಿ ॥
ದ್ರೋಣಾಚಾರಿ ಅವನ ನೋಡಿ ಬಾಣವಿದ್ಯಾದೊಳಗ ಇವರ ಕಾಣುದಿಲ್ಲ
ಸರಿಸಮ ಸರ್ವರಲ್ಲಿ ।
ಎಂದು ಪ್ರೀತನಾದ ಗುರುವರ್ಯ ಮನಸಿನಲ್ಲಿ
ಯೋಧನಾದ ಏಕಲವ್ಯ ವ್ಯಾಧರಾಜನೆಂದು ಕೇಳಿ ಭೇದಬುದ್ಧಿ ಬಂದಿತಾಗ
ದ್ರೋಣನಲ್ಲಿ ।
ಅವನ ಶಿಷ್ಯನಾಗಿ ತಗೋಳಿಲ್ಲ ಅವ ತನ್ನಲ್ಲಿ ।
ಇಟ್ಟ ಗುರುಭಕ್ತಿ ಏಕಲವ್ಯ ಆತನಲ್ಲಿ ॥
ವನಕ ಹೋಗಿ ನಿಷಾದಪುತ್ರ ಮನಕ ಒಪ್ಪು ದ್ರೋಣ ಮೂರ್ತಿ
ಮಾಡಿಯಿಟ್ಟ ಒಂದು ಗಿಡದ ಬುಡದಲ್ಲಿ ।
ಒಳೆ ನಿರತನಾದ ಅವ ತನ್ನ ವಿದ್ಯಾದಲ್ಲಿ ॥ ೩ ॥

॥ ಚಾಲ ॥ ಗುರುಶ್ರದ್ಧಾ ಇತ್ತ ಅವಗ ಅಚಲ–ಇಲ್ಲ ಮನದಾಗ ಚಂಚಲ–
ಹೊಡಿಹೊಡಿಯತಿದ್ದ ಬಿಲ್ಲ ಬಾಣ–ಬಿಲ್ಲಬಾಣ ॥ ೧ ॥

ಇಚ್ಛಾಶಕ್ತಿಗಿಲ್ಲ ಏನ ಇದರಾ–ಅದರಾಗ ಅವಂದ ನದರಾ–
ಸತತ ಅಭ್ಯಾಸ ಮಾಡಿದ ಜಾಣ–ಮಾಡಿದ ಜಾಣ ॥೨॥
ಅರಿವೆಂಬುದು ಗುರುವಿದು ಸಿದ್ಧಾ–ಅರಿತವನವನೆ ಸಿದ್ಧಾ–
ಏಕಲವ್ಯಗ ಒಲದಿತ ಬಾಣ–ಒಲದಿತ ಬಾಣ ॥ ೩ ॥

॥ ಕೂ.ಪ. ॥
ಗುರಿಹೂಡಿ ಬಾಣಬಿಡುವ ಮತ್ತ ಅದನ ತಿರುಗಿ ಪಡೆವ ಶರದ ಚಾಕಚಕ್ಯ
ಹತ್ತಿತವನ ಬೆನ್ನಾ ।
ಹೀಂಗ ಅಸ್ತ್ರ–ಶಸ್ತ್ರ ವಿದ್ಯಾದಲಿ ಆದ ಸಂಪನ್ನಾ ।
ಗುರು ದ್ರೋಣರನ್ನ ಮೀರಿನಂತ ವಿದ್ಯಾವನಾ ॥ ವರ್ಣ ॥

ಚೌಕ–೩

॥ ನುಡಿ ॥ ಹಗಲ–ಇರುಳ ಬಿಟ್ಟು ಬಿಡದೆ ಬೇಗು ಬೆಳಗ ಎನ್ನದಲೆ ಜಾಗ್ರದಿಂದ
ಮಾಡತಿದ್ದ ನಿತ್ಯ ಸಾಧನಾ ।
ಅಂಥಾ ಹೊತ್ತಿನ್ಯಾಗ ಒಂದದಿನ ಹೊಕ್ಕವನಾ ।
ಬ್ಯಾಟಿ ನಾಯಿಗಳನ ಕೂಡಿಕೊಂಡ ಬಂದ ಅರ್ಜುನಾ ॥
ಬ್ಯಾಟಿನಾಯಿ ಬೊಗಳಿಕೊಂತ ಕೆಟ್ಟಗುಲ್ಲ ಮಾಡಿಕೊಂತ–ನಟ್ಟ
ಅಡವಿಯಲ್ಲಿ ಬಂದು ಏಕಲವ್ಯನ ।
ಚಿತ್ತ ಕಲಕಿ ಮಾಡಿದಾವ ಅವನ ಬಹಿರ್ಮುಖನ ॥ ೧ ॥
ದಯಾಮಯಿ ಏಕಲವ್ಯ ಮಾಯದಿಂದ ಶಬ್ಧಭೇದಿ ಆಯವಾದ
ಬಾಣಬಿಟ್ಟ ನಾಯಿಮ್ಯಾಗ ।
ಆಗ ಏಳೂಬಾಣ ಬಂದನಟ್ಟು ಬಾಯ ಒಳಗ ।
ನಾಯಿ ಓಡಿಕೊಂತ ಹೋತಬಾಯಿಮಾಡಿ ಮ್ಯಾಗ ॥
ಧನುರ್ಧಾರಿ ಅರ್ಜುನಗ ನೆನೆದರೇನು ತಿಳಿಯಲಿಲ್ಲ ಏನು ಗಾಯವಿಲ್ಲ
ಬಾಣಬಿಟ್ಟ ಹ್ಯಾಂಗ ।
ಇದನ ತಿಳಿಯಬೇಕ ಯಾವ ಅಂವ ಅಂಬುದೀಗ ॥ ೨ ॥
ಮೆತ್ತಗಾಗಿ ನಾಯಿಬೆನ್ನನ ಹತ್ತಿಕೊಂಡ ಅರ್ಜುನಾದಿ ಇತ್ತಬಂದ
ನೋಡತಾರ ಏಕಲವ್ಯನ ।
ಕಪ್ಪುಬಣ್ಣವಿತ್ತ ಹೊಲಸ ಮೆಯ್ಯಮ್ಯಾಲ ಅವನ ।
ಬಿಲ್ಲಬಾಣ ಕಯ್ಯೊಳಗ ಸುತ್ತಿ ಕೃಷ್ಣಾಜಿನ ॥
ಕೇಳತಾನ ಯಾವ ಗುರು ಹೇಳ ನಮಗ ಕಲಿಸಿದಾರ ತಿಳಿಯಲಿಲ್ಲ ಇಲ್ಲಿಯತನ
ಇದರ ಕೂನ ।
ಹೇಳಿದ ಏಕಲವ್ಯ ದ್ರೋಣಾಚಾರಿ ಹೆಸರವನ ॥ ೩ ॥

॥ ಚಾಲ ॥ ಕೇಳಿ ಪಾರ್ಥ ದ್ರೋಣ ಹೆಸರನ್ನ–ಮನದೊಳಗ ಆದ ಅವ ಖಿನ್ನ–
ನನಗರಿಯದ ಕಲಿಸಿದಾನ ಹ್ಯಾಂಗ–ಕಲಿಸಿದಾನ ಹ್ಯಾಂಗ ॥ ೧ ॥

ಬಂದ ಹೇಳ್ಯಾನ ಗುರುವಿಗಿ ವೃತ್ತಾಂತ–ದ್ರೋಣಾಚಾರಿ ಆದಾನ ಭ್ರಾಂತ
ತಿಳಿಯದ ಹಿಡದ ಕುಂತಾನ ಗುಂಗ–ಕುಂತಾನ ಗುಂಗ ॥ ೨ ॥

ಅವನ ಬೆಟ್ಟಿಗಿ ಮಾಡ್ಯಾನ ಆತೂರ–ಪಾರ್ಥನ ಕೂಡಿ ಗುರುವರಾ–
ಬಂದ್ರ ಅಡವಿ ಆರ್ಯಾಣ ಹಿಂಗ–ಆರ್ಯಾಣ ಹಿಂಗ ॥ ೩ ॥

॥ ಕೂ.ಪ ॥ ಗುಡ್ಡ ಗುಡ್ಡ ಹಣ್ಣಿನ ಬನ ಅಡ್ಡ ಅಗಲ ಭ್ರಮರ ಸ್ವನ ಅಡ್ಯಾಡತಾವ
ಚಿಂಕಿ ಭಯ ಇಲ್ಲ ಏನೇನಾ ॥ ೪ ॥

ಎಲ್ಲಿ ನೋಡಿದಲ್ಲಿ ಕಂಡಿತವರಿಗೆ ತಪಸಿನ ವನಾ ।
ಅಂದಾರ ಮನಸಿನ್ಯಾಗ ಏಕಲವ್ಯ ಹ್ಯಾಂತಾ ದೈವಾನಾ ॥ ವರ್ಣ ॥

ಚೌಕ–೪

॥ ನುಡಿ ॥ ಗುರುವಿನ ಕಂಡ ಏಕಲವ್ಯ ಎರಗಿದಾನ ಪಾದಮ್ಯಾಲ ಗುರುವು ನಾನು
ನಿನಗ ಹ್ಯಾಂಗ ಹೇಳ ಇದನ ।
ದ್ರೋಣ ಕೇಳಿದಾಗ ವ್ಯಾಧ ಮೂರ್ತಿ ತೋರಿದಾನ ।
ಹಿಂದ ನಡದ ಘಟನಾ ಎಲ್ಲಾ ಅವಗ ತಿಳಿಸಿದಾನ ।
ಮೂರ್ತಿಕಂಡ ಹರುಷಗೊಂಡ ಪಣಾ ನೆನದ ಕರುಬಗೊಂಡ ಅರ್ಜುನನವನ
ಮೀರುವ ಬಗೆಯ ಮನದಿ ನೆನದಾನು ।
ಬಲಗೈ ಹಿರಿಯ ಬೆರಳ ದಕ್ಷಿಣವಾಗಿ ಬೇಕ ಅಂದಾನು ॥ ೧ ॥
ಅಂದ ಮಾತ ಬಾಯಿಯಿಂದ ಬಂದಿದ್ದಿಲ್ಲ ಇನ್ನ ಹೊರಗ ಒಂದಿನಿತು
ಮರುಗಲಿಲ್ಲ ತನ್ನ ಮನದಾಗ ।
ಬೆರಳ ಕೊಯ್ದು ಇಟ್ಟ ದ್ರೋಣಾಚಾರಿ ಪಾದಮ್ಯಾಗ ।
ಅವನ ಕೀರ್ತಿಹೊತ ಗುರುಭಕ್ತಂತ ನಾಡಿನೊಳಗ ॥
ಹಿರಿಯ ಬೆರಳ ಪಡೆದ ದ್ರೋಣ ಕಿರಿಯನಾದ ಭೂಮಿಮ್ಯಾಗ
ಬಿರುದು ನಷ್ಕಾಮಕರ್ಮಿಯೆಂಬುದಿವನಿಗಿನ್ಹ್ಯಾಂಗ
ಹಿಂಗ ಹಾಡಃಹಗಲ ಮಾಡತೈತಿ ನೋಡ ಹಂಗ ॥ ೨ ॥

ಏಕಲವ್ಯ ಪಾರ್ಥನಂತೆ ಲೊಕತಿಳಿಯೆರಾಯಗುವರ ವರ್ಗಕಲಹವೆಂಬುದಿ ಇಲ್ಲೆ ಇಲ್ಲಾ
ವ್ಯಾಧಾ ಜಾತಿಯಿಂದ ಕಡಿಮೆಯೆಂಬುದೊಂದೆ ಸೊಲ್ಲಾ ।
ಅದೇ ವರ್ಣದ್ವೇಷವೆಂಬುದಾಗಿ ಬಂದಿತಲ್ಲಾ ॥
ಹಿರಿಯ ಬೇರಳು ಹೋದರೇನು ತೋರ ಮಧ್ಯದಿಂದ ವ್ಯಾಧ ಸರಳ
ಹೂಡಿಹೊಡಿಯತಿದ್ದ ಹಿಡದ ಬಿಲ್ಲಾ
ಎಡಗೈ ಸಾಧನ ಮಾಡು ಪ್ರಸಂಗವಗ ಬಂದೆ ಇಲ್ಲಾ ॥ ೩ ॥

" ಚಾಲ " ಏಕಲವ್ಯ ವ್ಯಾಧರಾಜನಾಗಿದ್ದಾ-ಕೈ ಕಾಲಿಗಿ ಸೇವಾಂಕ ಇರಸಿದ್ದಾ
ಕಂಗಾಲಾಗುದಕ ಇಲ್ಲ ಕಾರಣೇನೇನಾ-ಇಲ್ಲ ಕಾರಣೇನೇನಾ "೧ "

ಹಣ್ಣ ಹಂಪಲ ಧ್ಯಾನ ಸರಕಾ-ಹಾಲ ಜೇನನ ಕೊಡಗಳು ನಿರಕಾ-
ಪರಕಿಂಜಲಕಾಶೆ ಮಾಡುದಿನ್ನೇನಾ-ಮಾಡುದಿನ್ನೇನಾ " ೨ "

ತಾಯಿ ಸೇವಾದಲ್ಲಿ ಅವ ನಿರತಾ-ಬೆರಳ ದುಃಖ ಅವ ಮರತಾ-
ಹಿಂಗಂತ ತನ್ನ ಹೆಸರ ಉಳಸಿದಾನ-ಹೆಸರ ಉಳಸಿದಾನ " ೩ "

" ಕೂ.ಪ. " ಅರ್ಜುನನ ಹಿತಕ್ಕಾಗಿ ಹಿರಿಯ ಬೆರಳು ಪಡೆದು ದ್ರೋಣ ಅಜೇಯನಾಗಿ
ಮಾಡಿಬಿಟ್ಟ ಕ್ಷತ್ರಿಯನ್ನಾ
ಇದು ಏಕಲವ್ಯ ಕಥೆಯಲ್ಲಿ ಮೊದಲಿನದಿನ್ನಾ ।
ಕೃಷ್ಣ ಮಾಡಿದಂಥ ಕಪಟವನು ಹೇಳುವೇನಾ " ವರ್ಣ "

ಚೌಕ -೫

" ನುಡಿ " ಪೂಜ್ಯನಾಗಿ ಏಕಲವ್ಯ ರಾಜ್ಯಭಾರ ಮಾಡತಿದ್ದ ಸಾಜವಾಗಿ ಕಳೆದಹೋದ ದಿನಮಾನಾ
ಮುಂದ ಕೇತುಮಂತ ಹುಟ್ಟಿಬಂದ ಬಲವಾನಾ "
ಅವಗ ಕಲಿಂಗರಾಜ ಶ್ರುತಾಯುಧನ ಗೆಳೆತಾನಾ "
ಮಹಾಭಾರತ ಯುದ್ಧದಲಿ ಮಹಾಯೋಧ ಕೇತುಮಂತರ ವಾಹಿನಿಯ
ನಾಯಕನಾಗಿ ಸೆಣಸಿದಾನಾ
ಭೀಮ ಗದಾದಿಂದ ಯುದ್ಧದಲ್ಲಿ ಮರಣಹೊಂದ್ಯಾನಾ " ೧ "
ಬಿಟ್ಟು ಬಿಡದೆ ರಾತ್ರಿ ಹಗಲ ಪಟ್ಟ ಹಿಡದ ಬಿಲ್ಲವಿದ್ಯಾ ನಿಷ್ಠಾದಿಂದ
ಮಾಡುದನ್ನ ಕೃಷ್ಣ ಕಂಡಾನಾ
ಪಾರ್ಥ ಏಕಲವ್ಯನ ಜಯಸುದಕ್ಕ ಆಗದಂದಾನಾ ।
ಅಂತೆ ಭಾರತಯುದ್ಧ ಪೂರ್ವದಲ್ಲಿ ಕೊಂದ ಹಾಕ್ಯಾನಾ "
ಜರಾಸಂದ ಚೇದಿರಾಜ ಪರಾಶಕ್ತಿಯಿಂದ ಕೊಂದ ಮೂರಜನಕ ತನ್ನ
ನಂಟನ್ನುಳಸಿದನಾ ।
ಇದೇ ರಾಜನೀತಿ ಎಂಬುದನ್ನ ಸಾರಿದನಾ " ೨ "
ಸತ್ತರೇನು ಏಕಲವ್ಯ ನಿತ್ಯಕೀರ್ತಿ ಉಳಿಸಿಕೊಂಡ ಮತ್ತ ಹುಟ್ಟಿ ಬರೂದಕ್ಕ ಕಾರಣೇನಾ
ಕೋಪಿ ಅಶ್ವತ್ಥಾಮನ ಸೇಡಿಗಾಗಿ ಜನ್ಮವೇನಾ ।
ಹಿಂಗ ಕಲ್ಪನಾಮಾಡು ಪ್ರಜ್ಞಾವಂತರಿಗ್ಹೇಳುದೇನಾ "
ವ್ಯಾಸ ಬರದ ಭಾರತದಾಗಮೀಸಳಾದ ಏಕಲವ್ಯ ದಾಸನಾಗಿಹುಟ್ಟಿಸುದು ಚಂದವೇನಾ
ನಾಲಿಗಿ ಕುಲಾತಿಳಸು ಮಾತಯಿದು ಸುಳ್ಳಯೇನಾ " ೩ "

" ಚಾಲ " ಏಕಲವ್ಯನ ಕಥೆಯನು ಮನಮುಟ್ಟಿ-ತಿಳಿದಂಗ ಹೇಳೇನಕಟ್ಟಿ
ಮತಿವಂತರು ಕೇಳ್ರಿ ಚಿತ್ತವಿಟ್ಟ-ಕೇಳ್ರಿ ಚಿತ್ತವಿಟ್ಟ " ೧ "

ನಾ ಬಲ್ಲಿನಿ ಅನ್ನುದು ಬರಿಗುಲ್ಲಾ–ತಿಳಿದವರಿಗೆ ಹೇಳುವದಲ್ಲಾ
ತುಂಬಿದ ಕೊಡ ತುಳುಕುದಿಲ್ಲಗಟ್ಟಿ–ತುಳುಕುದಿಲ್ಲಗಟ್ಟಿ ॥ ೨ ॥

॥ ಕೂ.ಪ. ॥ ಅಂದಚಂದ ತುಂಗಳಗ್ರಾಮ ಕುಂದಲದೇವಿ ನಮಗ ಪ್ರಾಣ ವಂದ್ಯ
ಶಿವನಗೌಡ ವಸ್ತಾದನಸಿದನಾ ।
ಕಂದ ಸಂಗಮೇಶ ಕವಿಯಾಗಿ ಜನಿಸಿದನಾ ।
ಲೋಕ ವಂದ್ಯ ಶಿರಬಾಗಿ ನಮಿಸಿದನಾ ॥ ವರ್ಣ ॥

ಸಂಗ್ರಹ: ಗೀಗೀ ಪದಗಳು (ಭಾಗ–೧), ಸಂ. ಡಾ. ಮೃತ್ಯುಂಜಯ ಹೊರಕೇರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೯.

ಟಿಪ್ಪಣಿ: (ಅಂಬಿಗರ ಗಂಗ, ಗೌರಮ್ಮನ ಮದುವೆ, ಹುಟ್ಟಿದಾಳೆ ಗೌರಮ್ಮ, ಗಂಗೆ–ಗೌರಿ, ಲಾವಣಿಗಳು ದೀರ್ಘ ಲಾವಣಿಗಳಾಗಿರುವುದರಿಂದ ವೃಥಾ ಮಹಾಪ್ರಬಂಧದ ಗಾತ್ರ ಹೆಚ್ಚಾಗುವುದರಿಂದ ಅವುಗಳನ್ನು ಸೇರಿಸಿಕೊಂಡಿಲ್ಲ.)

ಹೆಚ್ಚಿನ ಓದಿಗೆ:

ಕರಾಕೃ, ಜಾನಪದ ಕಥನಗೀತೆಗಳು, ೧೯೬೨.
ಜೀ.ಶಂ. ಪರಮಶಿವಯ್ಯ, 'ಜನಪದ ಕಾವ್ಯಕಥೆಗಳು' ೧೯೭೧.
ಎಂ.ಎಸ್. ಸುಂಕಾಪುರ 'ಜೀವನ ಜೋಕಾಲಿ' ಕೋಲುಪದ ಭಾಗ ೮ (ಸಂ) ೧೯೭೬.
ಜೀ.ಶಂ. ಪರಮಶಿವಯ್ಯ, 'ಗಂಗೆ ಗೌರಿ' ಕನ್ನಡ ವೃತ್ತಿಗಾಯಕ ಕಾವ್ಯಗಳು, ೧೯೮೨.
ಕೆ.ವಿ. ಸುಬ್ಬಣ್ಣ 'ಅವರು ನೀಡಿದ ದೀಪ' ೧೯೫೮.
ಬಿ.ಎಸ್. ಗದ್ದಗೀಮಠ, 'ಲೋಕಗೀತೆಗಳು' ೧೯೬೦.
ಜೀ.ಶಂ. ಪರಮಶಿವಯ್ಯ, 'ದೊಂಬಿದಾಸರ ಲಾವಣಿಗಳು' ೧೯೭೪.

ಅನುಬಂಧ – ೩
ಸಂಗ್ಯನ ಅಪರಾಧ ಮತ್ತು ಸಾವು

ಪಲ್ಲಾ

ಬಡತನ ಅಂಬುದು ಬsಳಕೆಟ್ಟ
ಬಡವಗ ಬಂತು ಬಹುಶಿಟ್ಟ
ಸಾವಕಾರ ಸಾಲಾ ಕೊಡಬೇಕಾದರ
ಸಂಗ್ಯಾಗ ಆದಿತೊ ಸಂಕಷ್ಟ

೧ನೇ ನುಡಿ

ಶಹರ್ ಹೊಂಗಲದಾಗ ಸಾವಕಾರ
ದೂರವಜಂತಿ ಅವನ ಹೆಸರ
ಬೆಳ್ಳಿ ಬಂಗಾರ ರೊಕ್ಕ ರುಪಾಯಿ
ಅಳ್ಳಿಯ ವಹಿವಟ ವ್ಯಾಪಾರ
ಚಿನಾಯ ಕುರೇದ ಚಾಕತರ
ರುಪಾಯಿ ವೋಯುತ್ತಾರ ಪತ್ತಾರ
ವಾರವಾರ ಚಲತಿ ಚಾಕಲೆಕ್ಕ ಮಾಡೊದು ಶನವಾರ
ಅಂದಾದುಂದಿ ಅವನ ಕಾರ್ಭಾರ
ಹತ್ತೆಂಟು ಮಂದಿ ಅವನ ಮನುಷ್ಯರ
ಮಾಗಿ ಮಳಿಗಾಲ ಹತ್ತಿ ಅರವುತಾರ ಗೊತ್ತ ಇಲ್ಲದ ಹೆಂಗಸರ ॥ ಚ್ಯೇ ॥

ಯೇನ ಹೇಳಲವನ ಕಾರ್ಬಾರಕಿ
ಅವ ಮಾಡುತ್ತಿದ್ದನೊ ಚಿನವಾರಕಿ
ಅಣ್ಣತಮ್ಮರಿಬ್ಬರು ತಿಳವಳಿಕಿ
ಅವರ ಮಾಡುದಕ ಕಡಿಮಿಲ್ಲ ಗಳಿಕಿ
ಊರಾಗ ಯಾರಿಗಾಗಿಲ್ಲ ಬೇಸರಿಕಿ
ಬಹಳ ಸಾಚೆ ಇಟ್ಟದ ಸಾವಕಾರಿಕಿ ॥ ಇಳವ ॥

ಅವನ ಪೋಷಾಕ ಹೇಳತೇನ ನಿಮಗ
ಕೇಳ ಈಗ
ಅವ ಹಿಡಿದ ತಿರಗತಿದ್ದ ವೋಣಿ
ಚೌಕ ಶಿಖಾಮಣಿ
ಹಾಕಿದ್ದ ಕೊರಳಾಗ
ಜೆರಕಾಟಿ ರುಮಾಲ ತಲಿಮೇಗ
ನೋಡ ಅವಗ
ಹೊತ್ತಿರು ದೋತರ ನಾಕ್ಪುರಿ
ಕೆಮಲಟ ಬೇರೆ

ಅಂಗಿ ಮೈಯಾಗ
ಚಂದ್ರಹಾರ ಗೋಪ ಚಂದ ಹ್ಯಾಂಗ
ಯೆದಿಮೇಗ
ತಳತಳ ಹೊಳುದು ಬಂಗಾರ
ಪವಿತ್ರದುಂಗರಾ
ಇಟ್ಟಿದ್ದ ಬೆರಳಾಗ ॥ಯೇರ ॥

ಮಾತಿಲಿ ಇದ್ದನ ಬಹುದಿಟ್ಟ
ಸುಳ್ಳ ಮಾತ ಇಲ್ಲ ಯಳ್ಳಷ್ಟು

೨ನೇ ನುಡಿ

ಮೊದಲ ಕೇಳ ಮಾತಿನ ಜರಿ
ಖಾತೆದ ಹೊಲ ನೋಡ ಜಾತ ಯೆರಿ
ಐದ ವರಷದ ದಿನ ಮುದ್ದತ ಮಾಡಿದನ ಬರಕೊಟ್ಟ ಕಾಗದ ಬರಾಬರಿ
ನ್ಯಾಯ ಬಂದಿತೊ ಹೋದಬರಿ
ಜೋರಿ ಮಾಡಲಿಲ್ಲ ಕಾಯದೆ ಮೀರಿ
ಮಾಸೀಲಿ ಪ್ರಕಾರ ಫಿರ್ಯಾದಿ ಮಾಡಿದನ ಸವದತ್ತಿ ಕೋರ್ಟಿನ್ಯಾಗ ಬಿತ್ತಮುರಿ

ಬಸಲಿಂಗಣ್ಣನ ಮಾತ ಸರಿ
ಶ್ಯಾಪ ಚೆಲ್ಲಿ ಮಾಡಿದ ಮುಜರಿ
ಮುನ್ಸುಫ ಅಂತನ ಅಫಿಲರ್ಜಿ ಧಾರ್ವಾಡಕೆ ಹೋಗಿ ಮಾಡರಿ ॥ ಚ್ಯೇ॥

ಅಲ್ಲಿಂದ ಬಂದನ ಹೊಂಗಲಕ
ಮಸಲತ್ತ ಮಾಡಿದ ಹೊಗುದಕರಿ
ನೂರ ರೂಪಾಯಿ ತೊಗೊಂಡ ಹಂತೇಕ
ಇಲ್ಲಿಂದ ಹೊಂಟನ ಧಾರ್ವಾಡಕ
ಅಫಿಲರ್ಜಿ ಕೊಟ್ಟನ ಸರಕಾರಕ
ವಕಿಲನಟ್ಟನೊ ಆಗಿನ ಕ್ಷಣಕ ॥ ಇಳವ ॥

ಅರ್ಜಿ ಅಂತ ಮಾಡಿ ಕೊಡ ನಮಗ ನೀ ಈಗರ
ನೂರ ರುಪಾಯಿ ತೊಗೊ ಮಾರಿ ಗಾಡಿ
ಹೇಳ ಲಗು ಮಾಡಿ
ಯೇನಂತಿ ನಮಗ
ವಕೀಲ ತಿಳದ ಮನದಾಗ
ನೋಡ ಆಗ
ಹೀಂಗಂತ ಕೊಟ್ಟ ವಚನ

ಕಟ್ಲೇದ ಸಂದನ
ಚಿಂತಿ ಯಾಕೊ ನಿನಗ
ನೂರ ರೂಪಾಯಿ ಕೊಟ್ಟ ವಕೀಲಗೆ
ಕೈಯಾಗ
ಪಹಿಲಾ ತಾರೀಖ ಮುದ್ದತ ಆದಿತ್ಯವಾರ
ಮುಂದ ಸೋಮವಾರ
ಜಬತಿ ಬಂತ ಬೇಗ ॥ ಯೇರ ॥

ಕಾರ್ಕೂನ ತಂದ ಜಬತಿ ಇಟ್ಟ
ಬಸಲಿಂಗ ನಡಿಸಿದ ತನ್ನ ಹಟ

೩ನೇ ನುಡಿ

ಮುನ್ನೂರ ರುಪಾಯಿದ ಮಾಸೀಲಾ
ನಿನ ಮೇಲಾಯಿತೊ ಫೈಸಲಾ
ಕಾರ್ಕೂನ ಅಂತಹ ಸಂಗೇಣ್ಣ ಕರಸು ನೀ ಯೇನ ಮಾಡತಿ ಸವಾಲಾ
ಸಂಗ್ಯಾಗ ಬಿತ್ತೊ ಮಹಜಾಲಾ
ಹೇಳಿಕೊಂಡ ತನ ಅನಕೂಲಾ
ಫೈಸಲ ಪ್ರಕಾರ ರುಪಾಯಿ ಕೊಡತೆನ ಹೊಲದ ವಳಗ ಬಿಡಸರಿ ಪಾಲಾ
ಸರ್ವ ತಪ್ಪು ನಂದ ಆಯಿತಲ್ಲಾ
ನಿನ್ನಿಂದ ಹೊರತ ಗಟಿಯಿಲ್ಲಾ
ಬಸಲಿಂಗಣ್ಣನ ಮಾತ ಮೀರುದಿಲ್ಲ
ಕೈ ಮುಗದ ಹಿಡಿದನ ಕಾಲಾ ॥ ಚ್ಯೇ॥

ಜಪ್ತಿ ಬಂದ ಬಳಿಕ ಯೇನ ಹೇಳಲಿ
ಇಂದಿಗೆ ನಿನ್ನ ಹೊಲ ಹೋಯಿತಿ
ಬಸಲಿಂಗಣ್ಣ ಮಾಡಿದನ ಜಾತಿ
ಫಕಿರಣ್ಣನ ಜುಮೆಕ ಹೊಲ ಆತಿ
ಸಂಗ್ಯಾ ಮನಗೆ ಹೋಗಿ ಮಾಡ್ಯಾನ ಚಿಂತಿ
ಖಾತೆದ ಹೊಲಾ ಇಂದಿಗೆ ಯಾರವಾತಿ ॥ ಇಳವ॥

ಮತ್ತೊಂದ ಮಾಡ್ಯಾರ ಮಸಲತ್ತ
ನೋಡ ಬೇತ
ಸಂಗ್ಯಾ ಪರಿಷ್ಯಾ ಇಬ್ಬರು ಕೂಡಿ
ನಗತ ಮಾತಾಡಿ
ಯಾರಿಗಿಲ್ಲ ಗೊತ್ತ
ನಮ್ಮ ನಿಮ್ಮರ ವೊಳಗಿನ ಮಾತಾ

ಹೀಂಗಂತಾ ಯಾರ್‌ಯಾರಿಗೆ ತಿಳಿಯಬಾರದ ಹೀಂಗ
ಮಾಡುನು ಬಲ್ಲಾಂಗ ಹೋಗುನು ಹರ್‍ಯಾನ ಹೊತ್ತ
ಅವರ ಮಸದರ ಕುಡಗೋಲ ಕುಂತ
ಕಡುನು ಅಂತ
ಇಂದಿಗೆ ಹೋಗಲಿ ನಮ್ಮ ತಲಿ
ಆಗುವದು ಆಗಲಿ
ಜೀವದಿಂದ ಹೊರತಾ ॥ ಯೇರ ॥

ವಕ್ಕುಂದ ಊರ ಬಸಲಿಂಗ ಬಿಟ್ಟ
ನಾಳೆ ಹಾಕುದು ಮಹನೌಮಿಗಟ್ಟ

೪ನೇ ನುಡಿ

ಮಂಗಳಾರ ಉದಯಕ ತಾ ಯದ್ದ
ತಾಯಿ ಪಾದಕ ಹೋಗಿ ಬಿದ್ದ
ಸಂಗ್ಯಾ ಪರಿಷ್ಯಾ ಇಬ್ಬರು ಅಂತರ ಬಸವಣ್ಣ ನಡಸು ನಮ ಜಿದ್ದ
ಕುಡಗೊಲ ಮಸದ ಅವ ಹಿಡಿದ ಬಗಲಗ ಮುಚ್ಚಿಕೊಂಡ ತಾ ನಡದ
ಮೂರ ತಾಸ ಹೊತ್ತೇರಿತ ಆಗ ಫಕೀರಣ್ಣನ ಮನಿಗೆ ಬಂದ
ಮನಯಾಗ ಕೇಳತಾರ ಯೆಲ್ಲಿ ಹೋದ
ಬಹಳ ಕೆಲಸ ಇತ್ತ ಅವನಿಂದ
ತುಕ್ಕಣ್ಣ ಅಂತನ ಯಾತಕ ಬಂದಿ ಯೇನ ಕೆಲಸ ನನ ಮುಂದ ॥ ಜ್ಯೇ॥

ಇಷ್ಟ ಕೇಳಿ ಹಿಂದಕ ತಿರಿಗಿ ಹೋದ
ಹೊಲದಾಗ ಹೊಳಿಯಾಗಹುಡಿಕಿದಾ
ಅವ ಶಿಕ್ಕರ ಪ್ರಾಣ ಹೋಗುದಾ
ಫಕೀರಣ್ಣನ ಪರಮೇಶ್ವರ ಕಾದ
ಹುಡಿಕಿಯಾಡಿ ಅಂಗಡಿಗೆ ಬಂದ ಕಪ್ಪುರ
ಕಾಯ ತೊಗೊಂಡ ವೊಂದ ॥ ಇಳವ॥

ಬಸವಣ್ಣದೇವರಿಗೆ ನಡದ ಮಾಡಿ ಜಲದ
ಕಾಯಿ ವಡದ ಬೆಳಿಗಿ ಕಪ್ಪರ ಮಾಡಿ ನಮಸ್ಕಾರ ಹೊಂಗಲ ದಾರಿ ಹಿಡಿದ
ಸಂಗಣ್ಣ ಬಂದ ಮುಂದ ಮುಂದ
ಅಲ್ಲಿಂದ
ಮೆಗುಟ ಪರಸ ಯೇನಂದ
ಮುಂಚೆ ಕುಡುನಂದ
ರಾಚಪ್ಪನ ಹಿಡಿದಾ
ಹೀಂಗ ಮಾತಾಡಿ ಪರಿಪರಿದಿಂದ

ವೊಂಡ್-ಖಂಡಾ
ರಾಚಪ್ಪನ ಮನಗೆ ಹೋಗಿ ಕೇಳ್ಯಾರ ಮುದಿಕಿಗಿ ಅಣ್ಣಪ ಯೆಲ್ಲಿ ಹೋದಾ
॥ ಯೇರ॥

ಕೊಲ್ಲವನಕಿಂತ ಕಾಯುವ ಶ್ರೇಷ್ಠ
ಬಹಳ ಚೆಲೊ ಅವರ ಅದರುಷ್ಟ

೫ನೇ ನುಡಿ

ಬಂದದ್ದಾತಿ ಅಂತಾರ ಕಾಲಿ
ಶಿಟ್ಟ ಆದರ ತಮ್ಮ ಮನದಲ್ಲಿ
ಬಸಲಿಂಗಣ್ಣನ ಮನಿಗೆ ಹೋದರೊ ತಿಳಿಯಲಿಲ್ಲ ಇಬ್ಬರ ನೆಲಿ
ವೊಂಬತ್-ತಾಸ ವೇಳೆದ ಮೇಲೆ ಪೂರ್ವಲಿಖಿತ ವದಗಿತ ಅಲ್ಲಿ
ಸಂಗ್ಯಾ ಪರಿಷ್ಯಾ ಮುಜರಿ ಮಾಡಿಕ್ಯಾರ ಹೋಗಿ ನಿಂತರೊ ಅವನ ಬದಿಯಲಿ

ಬಸಲಿಂಗಣ್ಣನ ಚಿತ್ತ ರುಪಾಯಿ ಮೇಲೆ
ಮೂರು ನಾಕು ಮಂದಿ ಅವನ ಬದಿಯಲ್ಲಿ
ಕಡದಾರು ಅಂಬುದು ಅವಗ ತಿಳಿಯಲಿಲ್ಲ
ಶಿವ ತಂದ ಹಾಕಿದ ಮಾಲಿ ॥ ಚ್ಯೇ॥

ಸಂಗ್ಯಾ ಮುಂಗೈಯಂಗಿಯ ತೇಡಿಕೊಂಡ ಬಗಲನ್ನು ಕುಡಗೋಲ ತಕ್ಕೊಂಡ
ನಿಂತ ನೋಡಿ ಕಡದನೊ ಅವನ ಚಂಡ
ಅದರಂತ ಕುಡಗೋಲ ಯಳಕೊಂಡ
ಕಡದವನ ಹಿಂದಕ ಸರಕೊಂಡ
ವೋಡಿ ಹೋದನ ಪರಿಷ್ಯಾನ್ನ ಕರೆಕೊಂಡ ॥ ಇಳವ॥

ಬಸಲಿಂಗಣ್ಣ ಯೆದ್ದ ಸಂಗಟಾಗಿ
ಶಿರ ಬಾಗಿ
ಬಾಯಿಲಿ ಸುರಿತ ನೆತ್ತರಾ
ಬಿದ್ದನ ಜೀವ ಹೋಗಿ
ಕುಂತಿರು ಮಂದಿ ಗಾಬ ಆಗಿ ಹೊರಗ ಹೋಗಿ
ಯೆಲ್ಲರು ಅಂತರ ಹಿಡಿಹಿಡಿ ವೋಡತನ ವೋಡಿ
ಕೋದ ಕುತ್ತಿಗಿ
ಬರುಹಂತ ಮಂದಿ ಇದಿರಿಗಿ ಬದಿಗಾಗಿ
ಅವನ ಹಿಡಿಯಲಿಲ್ಲ ಯಾರ್ ಯಾರಾ
ಬಂದರ ಹಳಬರಾ ಆಗ ಸುದ್ದಿ ಆಗಿ ॥ ಯೇರ॥

ಊರಾಗ ಆದಿತ ಬಬ್ಬಾಟ
ದಾಡಲಿಲ್ಲ ಹೊಂಗಲ ಗೇಟ

೬ನೇ ನುಡಿ

ಶಿಟ್ಟ ತೀರಿತ ಅವರ ಮನದಂದಾ
ಮಂದಿ ಕೂಡಿತೊ ಸುತ್ವರದಾ
ಕೈಯಾನ ಕುಡಗೋಲ ಬಿಸಾಟಿ ವೊಗೆದಾನ ಪಾಪ ಹೋಗಗೊಡಲಿಲ್ಲ
ಮುಂದಾ
ಬಿಕ್ಕಟ್ಟ ಹಾದಿ ವೋಣಿಯ ಸಂದಾ
ಹಳಬರ ಹಿಡಿದರ ಮಾಡಿ ಜಲದಾ
ಹೊಡಕೊಂತ ಚಾವಡಿಗೋದರ ಮರ್ಯಾದೆ ಉಳಿಯಲಿಲ್ಲ ಸಂಗ್ಯಾಂದಾ
ಕುಲಕರ್ಣಿ ಬಂದ ನೋಡಿದಾ
ಪೋಲಿಸಗವಡ ಹೊಡಿ ಅಂದಾ
ಇದರ-ಬದರ ಸಂಗ್ಯಾನ ಪರಿಷ್ಯಾನ ಕಂಬಕೆ ಕಟ್ಯಾರೊ ಬಿಗಬಿಗದ ॥ ಚ್ಯೇ॥

ಸುಳ್ಳ ಬಡಿಯಬೇಡಿರಿ ನವ ನಮಗ
ಕಡದಾಂಗ ಕಬೂಲ್ ಅದೇವ್ ಈಗ
ನಮ್ಮನ ಹಿಡದ ಕಳವರಿ ಸಂಪಗಾಂವ್ಯಾಗ
ಚೌಕಾಸಿ ಆದಿತ ಕಚೇರ್‍ಯಾಗ
ಹೂವಿನ ರಾಮಾ ಇದ್ದನ ಇದರಾಗ
ಅವ ಅಯಿದಾನ ವಕ್ಕುಂದ ಊರಾಗ ॥ ಇಳವ॥

ವಕ್ಕುಂದ ಊರಿಗೆ ಹೊಂಟರೊ ಹಳಬರಾ ತಯಾರಾ
ಅವ ಶಿಕ್ಕ ಹೂವಿನಾ ರಾಮಾ
ಆಗಿ ಬೇಪಾಮ ಜೀವಕ ಬಂತ ಗೋರಾ
ಅದವತಿಗೆ ಹೇಳತಾರ ಅವರ ಇಬ್ಬರಾ
ಅಂಜಿ ನಡಗತಾನ ತರತರಾ
ಇದ್ ಎನ ಆಕಾರ ಕಣ್ಣಿಗೆ ತಂದ ನೀರಾ
ಊರಾಗ ಹೇಳತಾರ ದೀರಾ
ಎಲ್ಲಾರಾ
ಈ ಪಾಪದಾಗ ಜರ್ ಇಲ್ಲ ಯೇನೇನಾಗುದಿಲ್ಲ ಅಂತಾರ
ಗೆಣಿಯರಾ ॥ ಯೇರ॥
ರಾತ್ರೋರಾತ್ರಿಲಿ ಅವ ಹೊಂಟ
ಉಣಗೊಡಲಿಲ್ಲ ಮದೀಟ

೭ನೇ ನುಡಿ

ಪೋಲಿಸ ಕುಲಕರ್ಣಿ ಯೇನಂದ
ಬಹಳ ಹುಷಾರಿ ಇರಬೇಕಂದ
ವೊಳೆ ಸಾವಕಾರನ ಕಡದ ಹಾಕಿದಾರ ಹಿಂತ್ ಆದ ಆಗಕಿಲ್ಲ
ಯೆಂದ್ ಎಂದ

ರಪೋರ್ಟ ಮಾಡೆರ ಕಾಗದ ಬರದ
ಹಳಬ ತೊಗೊಂಡ ಸಂಪಂಗಾಂವಿಗೆ ಹೋದ
ಕಚೇರಿವೊಳಗ ರಪೋರ್ಟ ಚೆಲ್ಯಾನ ಸುಭೇದಾರ ವೋದಿ ನೋಡಿದ
ಫೌಜ್‌ದಾರ ಲಗುಬೇಗ ತಯಾರ ಆದ
ಕುದುರಿಗಿ ತಡಿ ಬೇಗ ಹಾಕಂದ
ಬಿಲ್ಲಿ ಮನುಷ್ಯನ ತೊಗೊಂಡ ಬುಧವಾರ ಚೆಂಜಿವೇಳೆದಲಿ ಅವ
ಬಂದ ॥ ಚೈ॥
ಬಂದ ನಿಂತ ನೋಡಿದ ಫೌಜ್‌ದಾರ
ಕಣ್ಣಿಲಿ ಕಂಡನ ನೆತ್ತರಾ
ಹೆಣ ನೋಡಿ ಮರಗಿದ ಮರಮರಾ
ಯೇನ ಮುನದಾನ ಹರಿಬ್ರಹ್ಮ ದೇವರಾ
ಇವನ ಕಡದಾಗ ಇದ್ದರ ಯಾರ್‌ಯಾರ
ಮಂಟೂರ ಅಯ್ಯಗೋಳ ಪಂಚಪ್ಪ ಮೂವರ ॥ ಇಳವ॥

ಇಷ್ಟ ಕೇಳಿ ಮಣ್ಣ ಕೊಡರೆಂದಾ
ಅರತಿಂದಾ
ತಾಯಿತಂದಿ ಅಳತಾರೊ ಬೋರ್ಯಾಡಿ
ಬಿದ್ದ ಹೊರಳ್ಯಾಡಿ
ಅದರುಷ್ಟಕವರ್ ನಮದಾ
ಯೇನ ಕಡಿಮಿಯಿಲ್ಲ ಆನಂದಾ ದಯದಿಂದಾ
ಯೇನ ಬೇಡಿ ಬಂದನ ಶಿವನಲ್ಲಿ ನಮ್ಮ ಹೊಟ್ಟಿಲಿ ಮಗ ಬಿಟ್ಟ ಹೋದಾ
ನಾನಾಪರಿ ದುಕ್ಕ ಸ್ತ್ರೀಯಳದಾ
ಹಾಕಿದಾ ಗುಂಡ-ಗುಳದಾಳಿ ವೊಗದಾಳ ಹರದ
ಇನ್ನೇನ ಅತಿ ನಂದ
ಮಣ್ಣಿಗೆ ಮರಿ ಆದ ॥ ಯೇರ॥
ದುರ್-ಮಣ ಆದಿತೊ ವೈಕುಂಠ
ಯಾರಿಗೆ ತಿಳಿಯದೊ ಶಿವನಾಟ

೮ನೇ ನುಡಿ

ಮಹನೌಮಿ ಅಮಾಸಿ ಸೋಮವಾರ
ಆಶ್ವೀಜ ಶುದ್ಧ ಪಾಡ್ಯ ಮಂಗಳಾರ
ಸಕೆ ಸತ್ತರಾಸೆ ಪಂಚಾ-ಐಂಶಿ ರುದ್ರೋದ್ಗಾರಿನಾಮ ಸಂವತ್ಸರಾ
ಹೀಂಗ ಮಾಡಿದರ ವಿಚಾರ
ಪೋಲಿಸ ಕುಲಕರ್ಣಿ ಫೌಜ್‌ದಾರಾ
ಸಂಗ್ಯಾನ ಪರಿಷ್ಯಾದ ಕೈದ-ವೊಳಗ ಸಂಗಟ ಹೊಂಟರ ಹಳಬರಾ
ಇದ ಮೇಗ ಬಲ-ಹುಷಾರ

ಕಚೇರಿವೊಳಗ ಹಾಜರಾ
ಯಚ್ಚರ ತಪ್ಪಿ ಯತ್ತರ ಹೋದಿರಿ ಹುಕುಮ ಮಾಡಿದಾನ
ಮಾಮ್ಲೇದಾರಾ ॥ ಚ್ಯೇ॥
ಇಲ್ಲಿ ತಾಲೂಕ ಬಿಟ್ಟರ ಸಂಪಗಾಂವಿ
ವೋದ ಹಾಕ್ಯಾರ ಜಿಲ್ಲೆ ಬೆಳಗಾಂವಿ
ಕರಸಿ ಸಾಹೇಬ ಮಾಡಿದ ನಿರ್ಣಾಯಿ
ಸಂಗ್ಯಾಗ ಬಿದ್ದಾಂಗ ಆದೀತ ಕೆರಿ ಬಾಂವಿ
ಕಟ್ಟ ಬರದ ಕಳಿವ್ಯಾರ ಮಮ್ಯಾಗಿ
ಹುವ್ವಿನ ರಾಮನ ತಂದದ್ದ ಅನ್ಯಾಯಿ ॥ ಇಳವ॥

ಮೂರ ತಿಂಗಳಿಗೆ ಬಂತ ಉತ್ತರಾ ಮಜಕೂರಾ
ವೋದಿ ನೋಡಿದಾನ ಸರದಾರಾ
ಪರಿಷ್ಯಾನ ಕರಿ–ನೀರಾ
ಬಿಡುದು ಅತಿ ಪೂರಾ
ಸಂಗಣ್ಣ ಅವಲ ಕೈದಿದಾರ
ಕರಾರ
ಧಾರ್ವಾಡಕ ಹಾಕಿದರ ತಂದ ಹೂನಾರ
ಮುಂದಿಂದ ತಿಳಿಯಲಿಲ್ಲ ಜರಾ ॥ ಯೇರ॥
ಇಂಗ್ರೇಜಿ ಕಾಯಿದೆ ಬಿಕ್ಕಟ್ಟ
ನಡುವದಿಲ್ಲ ಯಾರ್‌ಯಾರ ಆಟ

೯ನೇ ನುಡಿ

ಧಾರ್ವಾಡ ವೂರ ಬಿಟ್ಟ ಬಂದಾ
ಉಳಸಣ ಆಗಲಿಲ್ಲ ಯಾರಿಂದಾ
ಸಾಹೇಬ ಸುಭೇದಾರ ಫೌಜ್‌ದಾರ ಕಾರ್ಕೂನ ಹೊಂಗಲಕ
ತೊಕೊಂಡ ನಡಿರೆಂದಾ
ಯಚ್ಚರಿಕೆ ಇರಬೇಕ ಯಚ್ಚರದಿಂದ
ಹಿರದ ಕಟಿ ಪಾರಾ ಹಿಂದ ಮುಂದಾ
ಗಲ್ಲಿಗ್ ಹಾಕುದು ಸಾಮಾನ ಯೆಲ್ಲಾ
ಸಂಗ್ಯ ಚೆಕ್ಕಡಿ ಮೇಗ ಕುಂತಿದ್ದ
ಮಾಡಿ ತಂದರೊ ಬಲಿ–ಬಂದ
ಮಾತಾಡತಾನ ದರಜಿಲ್ಲದ
ಬೆಸ್ತಾರ ದಿವಸಾ ಅಣ್ಣತಮ್ಮರನಾ ತನ್ನ ತಾಯಿನಾ ಕರಸಿದಾ ॥ ಚ್ಯೇ॥

ಹಡೆದ ತಾಯವ್ವಗಂತಾನೊ ಯಾಕಳತಿ
ಆಗುಹಂತಾದೆಲ್ಲಾ ಆಗಿ ಹೋತಿ
ರಣ–ಮಂಡಲ ಅಭಿಮಾನ್ಯ ನನಗ್– ಅತಿ

ನನಗ ಯಾರ್‌ಯಾರ ಇಲ್ಲದಾಂಗ ಆತೊ ಸಾರತಿ
ಇಂದಿಗೆ ರಿಣ ಹರದ ಹೋತಿ
ಇನ್ನ ಬಿಟ್ಟ–ಕೊಡ ನನ್ನ ಕಕಲಾತಿ ॥ ಇಳವ॥

ಇಷ್ಟ ಹೇಳಿ ಮಾಡಿದ ಅಲಾಪ
ವಂದ ಸ್ವಲ್ಪ
ನಂದ ಹೀಂಗ ಇತ್ತ–ಪ್ರಮಾಣ ಕೆಟ್ಟ ದಿವಾಣಾ
ಕೇಳಲಿಲ್ಲ ತಪ್ಪ
ಮಾಡಿ ಬಿಟ್ಟಾರಂತಿನಿ ಮಾಪಾ ವರಷ ಟೇಪಾ
ಶಿಕ್ಕಾಂಗ ಆತೊ ಕೈಶೆರಿ ಬ್ರಹ್ಮ ಬರೆದ ಬರಿ ಮಾಡಿದಂತಾ ತಪ್ಪಾ
ಯೆಣ್ಣಿರತ ಹೋದಾಂಗ ದೀಪಾ ಆಕಲ್ಪಾ
ಹಿಂತ್–ಆದ ನನ್ನ ಅದರುಷ್ಟ
ಜಿದ್ದ ಬಲಿ–ಕೆಟ್ಟ ಇರಬಾರದೊ ಕೋಪಾ ॥ ಯೇರ॥

ಮಾತಮಾತಿಗೆ ಮಥನ ಕೆಟ್ಟ
ಚೆಲೋ ಮನುಷ್ಯಗ ಮಾತಿನ ಪೆಟ್ಟಾ

೧೦ನೇ ನುಡಿ

ಸಂತಿ ಶುಕ್ರವಾರ ಅದ ದಿನ ಸುತ್ತಿನ ಮಂದಿ ಕೂಡಿತ ಜನಾ
ಹವ್ವ ಹಾರಿ ಕಬರಿಲ್ಲದ ಮಾತಾಡತಾನ ವೊರ ಹೊರಗ
ತಂದಾರೊ ಅವನಾ
ಸಾಹೇಬಗ ಹೇಳಿಕೊಂಡ ಯೇನೇನ ಕೈಮುಗದ ಮಾಡಿದ ಶರಣ
ಐದ ರೂಪಾಯಿ ಖರ್ಚು ಮಾಡಿಕ್ಯಾರ ಮಠದ ವೊಳಗ
ಕೊಡಸರಿ ಮಣ್ಣ
ಮಾರಿ ಬಾಡಿ ಆದಿತ ಸಣ್ಣ ಕಳೆ ಗುಂದಿ ಹಾರಿತ ಬಣ್ಣಾ
ಹರಹರಾ ಅಂತ ಹಾದಿ ಹಿಡದನೊ ಹತ್ತಿ ನಿಂತ ತನ್ನ ಟಿಕಾಣ ॥ ಚ್ಯೇ॥
ಗಲ್ಲಿಗೆ ಕಾಕ್ಯಾರ ಕೊರಳಿಗೆ ಸರಕಾ
ಸ್ವರ್ಗದ ದಾರಿ ಹಿಡಿದಾನೊ ಕೈಲಾಸಕಾ
ಅಕ್ಕತಂಗೆರ ಅಣ್ಣತಮ್ಮರ ತಾಯಿ ದುಕ್ಖ
ಸುತ್ತಗಟ್ಟಿ ನಂತಿತ ಜನಲೋಕಾ
ನಾಕ ತಿಂಗಳ ಹನ್ನೆರಡ ದಿನಕ
ಅವರಾತ್ರಿ ಅಮಾಸಿ ತಾರೀಖಾ ॥ ಇಳವ॥
ಊರ ಬೈಲ್–ಹೊಂಗಲ ದೊಡ್ಡ ಶಹರ
ಜಾಹೀರಾ
ಸುತ್ತ ರಾಜ್ಯದ ವಳಗ ಹೆಸರಾ
ಹನುಮಂತ–ದೇವರಾ ಅವಗ ನಮಸ್ಕಾರಾ

ತುಕರಾಮ ನಮ್ಮ ವಸ್ತದರಾ
ಶಾಯಿರಾ-ಕವಿ ಆಮು ಮಾಡಿದ ತಯಾರ
ದೇಮಣ್ಣ ನಕ್ಷರ ಇಲ್ಲದಾಂಗ ಕಸರ
ಅವರ ಡಬ್ಬಿನ ಮೇಗ ಮುತ್ತಿನ ತೂರಾ
ಜರ್ತರಾ
ಸಂತು ಬಸಣ್ಣ ಜೀವದ ಗೆಣೆಯರಾ
ವೈರಿಗೆ ಮಾಡ್ಯಾರ ಜೇರ
ಇಳಿತ ಕಲಿಗಿಗಿ ನೀರಾ ॥ ಯೇರ॥

ಮಾದುರಾವ ಕಲಿಗಿಗೆ ಬಿದ್ದಾನೆ ಗಂಟಾ
ಹಾಡಿನ ವಳಗ ಮುಕಪಾಟ

ಸಂಗ್ರಹ: ಫ್ಲೀಟರು ಸಂಗ್ರಹಿಸಿದ ಲಾವಣಿಗಳು, ಸಂ. ಕ್ಯಾತನಹಳ್ಳಿ ರಾಮಣ್ಣ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೯೧.

ಬಪ್ಪಿಂಗ-ಬಮ್ಮಿಂಗ

ಬಪ್ಪಿಂಗ್ನೋ ಬಂಮ್ಮಿಂಗ್ನೋ
ಏನೆಂದ ಪಂತ ಮಾಡಿದರು
ಪಗಡೆ ಆಟ ಆಡಬೇಕು
ನೀ ಸೋತರೆ ನಿನ ತಂಗಿ
ನನಗೆ ಆದರೆ ಕೊಡಬೇಕು
ನಾ ಸೋತರೆ ನನ ತಂಗಿ
ನಿನಗೆ ಆದರೆ ಕೊಡತೇನೆ
ಅಂದೇಳಿ ಪಂತ ಮಾಡಿಕೊಂಡು
ಪಗಡಿ ಆಟ ಹೂಡಿದರು
ಬಪ್ಪಿಂಗ್ನೋ ಬ್ರಾಹ್ಮಣ
ಬಮ್ಮಿಂಗ್ನೋ ಹೊಲೆಯನು
ಬಮ್ಮಿಂಗ ಪಗಡೆಲೂಡಿದ
ಬಪ್ಪಿಂಗ್ನ ಕೈಯಲಿ
ಗೆಲಲಿಕ್ಕೆ ಆಗಲಿಲ್ಲ
ಯೆರಡಂಬು ಪಗಡೆ ಹೂಡಿದ
ಗೆಲಲಿಕ್ಕೆ ಆಗಲಿಲ್ಲ
ಮೂರಂಬು ಪಗಡೆ ಹೂಡಿದ
ಬಪ್ಪಿಂಗ್ನ ಕೈಯಲಿ
ಗೆಲಲಿಕ್ಕೆ ಆಗಲಿಲ್ಲ
ಬಪ್ಪಿಂಗ್ನ ಹೂಡಿದ(ಆಟ)
ಬಮ್ಮಿಂಗು ಗೆದ್ದಿದಾಲೊ
ಎರಡಂಬು ಪಗಡೆ ಹೂಡಿದ
ಬಮ್ಮಿಂಗ್ನು ಗೆದ್ದಿದಾಲೊ
ಮೂರಂಬು ಪಗಡೆ ಹೂಡಿದ
ಬಮ್ಮಿಂಗ್ನು ಗೆದ್ದಿದಾಲೊ
ನೀ ಆಡಿದ ಮಾತಿನ ಪರಕಾರ
ಲಗ್ನಕೆ ಯಾವಾಗ ಬರಬೇಕೊ?
ಮೇಲೆ ಬರುವ ಸುಕ್ರವಾರ
ದಿಬ್ಬಣತಕ್ಕಡ್ಂ ಬಾರಪ್ಪ
ನನ್ನsಲು ತಂಗಿನ
ಲಗ್ನಮಾಡಿ ಕೊಡುತೇನೆ
ಅಂದೇಳಿ ಬಪ್ಪಿಂಗ್ನು
ಮನೆಗೆಂದು ನಡೆದಾನ
ಕೋಣೆಯ ವಳಗೋಗಿ

ಕರಿಯ ಕಂಬಳಿ ಮುಸುಕಿಟ್ಟ
ಮಂಚದ ಮೇಲೆ ಮಲಗಿದ
ತಾಯಿಯು ಅಂಬೋಳು
ಒಳಗೋಗಿ ನೋಡಿತು
ಕೇಳಲ್ಲೊ ನನ್ನ ಮಗನೆ
ಯಾಕಿನ್ನು ಮಲಗಿದೆ?
ಊಟಕ್ಕಾದರು ಏಳಪ್ಪ
ಯಾರು ನಿನಗೆ ಬೈದಾರು?
ಯಾರು ನಿನಗೆ ಹೊಡೆದಾರು?
ಊಟಕ್ಕಾದರು ಏಳು ಮಗನೆ,
ಯಾರು ನನಗೆ ಹೊಡಿಲಿಲ್ಲ
ಯಾರು ನನಗೆ ಬೈಯಲಿಲ್ಲ
ಪಗಡೆ ಆಟಕೆ ಕುಂತಿದೆ
ಗೆಲಲಿಕ್ಕೆ ಆಗಲಿಲ್ಲ
ಬಮ್ಮಿಂಗ ಅಂಬೊನಿಗೆ
ಬಾಶೆಯ ಕೊಟ್ಟಿದೆ
ತಂಗಿಯ ಕೊಡುತೇಳಿ
ಕೇಳಲ್ಲೆ ನನ್ನ ತಾಯಿ
ಅಷ್ಟಂಬು ಮಾತಿಗೆ
"ಚಿಂತೆಯ ಮಾಡಬೇಡ
ಲಗ್ನಮಾಡಿ ಕೊಡುತೆನ್ನು
ಊಟಕ್ಕಾದರು ಏಳಪ್ಪ"
ಅಷ್ಟಂಬು ಮಾತು ಕೇಳಿ
ಸ್ನಾನಕ್ಕೆ ಮಡೆದಾನು
ಸಾನವ ಮಾಡಿದ
ಊಟಕ್ಕೆ ನಡೆದಿದ
ತಾಯಿ ಮಗನು ಇಬ್ಬರು
ಊಟವ ಮಾಡಿದರು
ಸುಕ್ರವಾರ ದಿನದಲ್ಲಿ
ಬಮ್ಮಿಂಗ ಅಂಬವನು
ದಿಬ್ಬಣ ತಕ್ಕಂಡ್ ಬಂದಿದ
ದಿಬ್ಬಣ ಬಂದದು ನೋಡಿದನು
ತಂಗಿನಾದರು ಕರೆದಿದಾನು
ಸೃಂಗಾರವ ಮಾಡಿದ
ಲಗ್ನಮಾಡಿ ಕೊಡುವನು
"ಕರಕಂಡ ಹೋಗಪ್ಪ"

ಅಂದೇಳಿ ನುಡಿದಾನು
ದಿಬ್ಬಣಾರು ಹೋಗಿತು
ಅತ್ತೆಯು ಅಂಬೋಳು
ಸೊಸೆಯ ಕೂಡಿನ್ನೆ
"ಊಟನಾದರೂ ಮಾಡಂತು"
ಊಟಕಾದರೂ ಹೋಗಿತು
ವಂದಂಬು ತುತ್ತು ಕಲಸಿತು
ಕೈತಪ್ಪಿ ಬಿದ್ದಿತು
ಎರಡಂಬು ತುತ್ತು ಕಲಸಿತು
ಬಾಯಿಗೆ ಹೋಗಲಿಲ್ಲ
ಮೂರಂಬು ತುತು ಕಲಸಿತು
ಉಣಲಿಕ್ಕೆ ಆಗಲಿಲ್ಲ
ಕೈ ಬಾಯಿ ತೊಳದಿತು
ಅಪ್ಪನ ಮನೆಗೀಗೆ
ಹಿಂತುರುಗಿ ಬಂದಾಳು
"ಕೇಳಕೆ ನನ ತಾಯಿ,
ಹೊಟ್ಟೆ ಹಸು ಆಗತದೆ
ಊಟಕಾದರು ಬಡಸವ್ವ"
ಅಂದೇಳಿ ನುಡಿದಾಳು
"ಹೊಟ್ಟೆ ಹಸು ಆದರೆ
ಹಾದಿ ಮಣ್ಣು ತಿನ್ನವ್ವ
ಕೊಟ್ಟವನ ಮನೆಗೆ ತಾಯಿ ನುಡಿದಾಳು
ಕದವನ್ನೆ ಹಾಕಿತು
ಒಳಗೇಯ ಕುಂತಾಳು
ಮಗಳೀಗೆ ಏನ ಮಾಡಿತು?
ತಾಯಿ ಬೇಡದಿದ ಮಗಳೀಗೆ
ಜೀವಿದ್ದು ಪಲವೇನು?
ಅಂದೇಳಿ ಬಾವಿಲಿ ಬಿದ್ದಿತ್ತು
ಪ್ರಾಣವು ಹೋಗಿತು

ಸಂಗ್ರಹ: ಮುಕರಿ ಮತ್ತು ಹೊಲೆಯರ ಪದಗಳು, ಸಂ. ಎಲ್.ಆರ್. ಹೆಗಡೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೪

ಬಯಲುಸೀಮೆಯ ಗೌಡನ ಮಗಳು

ಜಗಂಜ್ಯೋತಿ ಮಾವಿನ ಮರವೆ ತಂದೆನಾನ
ಬಯಲುಸೀಮೆಯ ಗೌಡನ ಮಗಳೆ ತಂದೆನಾನ' ಹಿಮ್ಮೇಳ ॥
ಯಾವ ಸೀಮೆ ಗೊಲ್ಲಾರ್ಳುಡುಗ
ಏಳು ಸಾವಿರ ಹುಂಡಿ ದನವ
ಹೊಡಕೊಂಡಿ ಗೊಲ್ಲರುಡುಗ
ಸುರಹೊನ್ನೆ ಮತಕ್ಕೆ
ಸುರಹೊನ್ನೆ ಮತಕ್ಕೆ ಬಂದು
ಕಾಯೆ ಕಂಬಳಿಯ
ತಿರುಗಿ ಗದ್ದಿಗೆ ಹೂಡಿ

ಕರಿಯ ಕಂಬಳಿಯ
ಬೀಸಿ ಗದ್ದಿಗೆ ಹೂಡಿ
ಕಾಳು ನಾಯಿ ಜೂಲು ನಾಯಿ
ಏಳು ಸಾವಿರ ಹುಂಡಿದನವ
ಮಯ್ಯಾಕೆ ಹೊಡೆದು ಬುಟ್ಟು
ಚಿನ್ನದ ಕೊರಳ ಬೆಳ್ಳಿ ಕೊರಳ
ಲಾಲೇಸಿನುಡಿತಾನೆ
ಬಯಲು ಸೀಮೆಯ ಗೌಡನ ಮಗಳು
ಬಿಂದಿಗೆಯ ತಕ್ಕೊಂಡು
ನೀರಿಗೆ ಬರುತಾಳೆ
ನೀರಿಗೆ ಬರುವಾಗ
ಅವನು ಲಾಲೇಸಿ ನುಡುತಾನೆ
ಅವಳು ಗ್ಯಾನೇಸಿ ಕೇಳ್ತಾಳೆ
ಬಿಂದಿಗೆಯ ಇಟ್ಟುಬುಟ್ಟು
ಸುರ ಹೊನ್ನೆ ಮರತಾಕೆ
ಹೋದಾಳೆ ಗೌಡನ ಮಗಳು
ಯಾವ ಸೀಮೆ ಚೆಲುವಾನೊ
ಯಾವ ನಾಡ ದೊರೆಮಗನೊ
ನಾವು ಇನವಂದ ಆಡೂನ ಬಾರೊ
ಕೇಳವ್ವನ ತಾಯಿ
ನಾನೋಡಿದರೆ ಗೌಡನ ಮಗಳು
ನಿನ್ನೊಂದಿಗೆ ಇನವಂದ
ನಾನಾಡೋದಿಲ್ಲ ತಾಯಿ
ಅಂಜಬ್ಯಾಡ ಅಳುಕಬ್ಯಾಡ

ನಾವಿನವಂದ ಆಡೂನಬಾ
ನಿನ್ನೊಂದಿಗೆ ಇನವಂದ
ನಾನಾಡೋದಿಲ್ಲ
ಏನೇನ್ಹೇಳಿದ ರೂವೆ
ಕೇಳಳಲೆ ಗೌಡನ ಮಗಳು
ನಿನ್ನೊಂದಿಗೆ ಇನವಂದ
ಆಡಿದರೆ ಸರಿಹೋಯ್ತು
ಇನವಂದ ಆಡದೆ ಹೋದ್ರೆ
ನಿನ್ನ ಶಿರವ ಕಡಿಸೂವೆ
ನಿನ್ನ ಶಿರವಾನೆ ಮೆಟ್ಟಿಕೊಂಡು
ನಾ ತಣ್ಣೀರ ಮೀಯುತೀನಿ
ಅವಳೇನೇನ್ಹೇಳಿದರೂವೆ
ಕೇಳಾನಲ್ಲೆ ಗೊಲ್ಲರ್ಹುಡುಗ
ತೊಟ್ಟಿದ ಬಳೆಗಳ
ಲಗ್ಗಾನೆ ನರಕಾಳೆ
ಇಕ್ಕಿದ್ದ ಸೀರೆ ರವಕೆ
ಪರಪರನೆ ಹರುದಾಳೆ
ಬಳೆಯಗಾಜ ತಕ್ಕೊಂಡವಳು
ಮೈ ಕೈಯ್ಯ ಗಂಜುಕೊಂಡು
ಊರಿಗೆ ಹೋಗುತಾಳೆ
ಬಿಂದಿಗೆಯ ನಟ್ಟುಬಿಟ್ಟು
ಊರಿಗೆ ಹೋಗುತಾಳೆ
ಮಂಚಾಕೆ ಮೊಕಾಡೆಯಾಗಿ
ಮಲಗಾಳೆ ಗೌಡನ ಮಗಳು
ಬಯಲು ಸೀಮೆ ಗೌಡನ ಹೆಡ್ತಿ
ಮಗಳಿದ್ದ ಮಂಚಕೆ ಬಂದಳು
ಯಾಕವ್ ನನಕಂದ
ಊಟಾವ ಮಾಡುಬಾರೆ
ನಿನ ಊಟ ಯಾರಿಗೆ ಬೇಕು
ಹೋಗವ್ವ ಅಂಗಂದು
ಅವರ ತಾಯಿಯ ಕಳುಗಾಳೊ
ಬಯಸುಸೀಮೆ ಗೌಡನ ಹೆಂಡ್ತಿ
ತನ್ನ ಗಂಡನಿಗೆ ಹೇಳಿದಳೆ
ಬಯಲುಸೀಮೆ ಗೌಡ ಬಂದಿ
ಏನೆಂದು ಕೇಳುತಾನೆ
ಯಾಕವ್ವ ನನ ಕಂದ

ನಿನ್ನ ಕಷ್ಟವೇನೆ ಸುಖವೇನೆ
ಹೇಳವ್ವ ನನ್ನೊಂದಿಗೆ
ಕೇಳಪ್ಪ ನನ ತಂದೆ
ಅಂಜಿ ಬಿನ್ನ ಮಾಡಲೊ
ನಾನಂಜದೆ ಬಿನ್ನ ಮಾಡಲೊ
ಅಂಜಬ್ಯಾಡ ಅಳುಕಬ್ಯಾಡ
ಹೇಳವ್ವ ನನ್ನೊಂದಿಗೆ
ಕೇಳವ್ವ ನನ ತಂದೆ
ಅವನ್ಯಾವ ಸೀಮೆಯ ಗೊಲ್ಲರ್ಹುಡುಗ
ಅವನು ಏಳು ಸಾವಿರ ಹುಂಡಿದನವ
ಅಟ್ಟಿಕೊಂಡು ಗೊಲ್ಲರ್ಹುಡುಗ
ಸುರಹೊನ್ನೆ ಮರತಾಕೆ ಬಂದಿ
ಕರಿಯ ಕಂಬಳಿಯ
ತಿರುಗಿ ಗದ್ದಿಗೆ ಹೂಡಿ
ಕಾಳು ನಾಯಿ ಜೂಲುನಾಯಿ
ಏಳು ಸಾವಿರ ಹುಂಡಿದನವ
ಮೆಯ್ಯೊಕೆ ಹೊಡುಕಾನೆ
ಚಿನ್ನದ ಕೊರಳ ಬೆಳ್ಳಿಕೊರಳ
ಲಾಲೇಸಿ ನುಡುತಾನೆ
ಬಿಂದೀಗೆ ತಕ್ಕೊಂಡು
ನಾ ನೀರಿಗೆ ಹೋಗುವಾಗ
ಕಂಡನಲ್ಲೊ ಗೊಲ್ಲರ್ಹುಡುಗ
ಕೈ ಗುದ್ದೀಗೆ ಮೈಗುದ್ದೀಗೆ
ಬಂದಾನೆ ಗೊಲ್ಲರ್ಹುಡುಗ
ಬ್ಯಾಡ ಅಂದು ನಾನು
ಸಾರಿ ಹೇಳುತ ಬಂದೆ
ಕೇಳಲಿಲ್ಲ ಗೊಲ್ಲರ್ಹುಡುಗ
ಅವನ ಶಿರವ ಮೆಟ್ಟಿಲು ಕೊಂಡು
ನಾ ತಣ್ಣೀರು ಮೀಯಬೇಕು
ಬಂದಾನೆ ಬಯಲುಸೀಮೆ ಗೌಡ
ದಂಡನಾದರೆ ಕರಕೊಂಡು
ಸುರಹೊನ್ನೆ ಮರತಾಕೆ ಹೋಗಿ
ತಪ್ಪು ಲಾಣದೆ ತಾಗುಕಾಣದೆ
ಅವನ ಶಿರವನ್ನು ಕಡುತಾನೆ
ಮಗಳಿಗೆ ತಂದು ಕೊಡುತಾನೆ
ಅವನ ಶಿರವ ಮೆಟ್ಟಿಲುಗೊಂಡು

ತಣ್ಣೀರ ಮೀಯುತಾಳೆ

ಎಲ್ಲಿ ಕಂಡವೊ ಯಾತಾವು ಕಂಡವೊ
ಬಂದವಲ್ಲೆ ಕಾಳುನಾಯಿ ಜೂಲುನಾಯಿ
ಕಾಳು ನಾಯಿ ಜೂಲು ನಾಯಿ
ಆಕಾಶ ಕಾರುತಾವೆ
ಭೂಮಿಗೆ ಬೀಳುತಾವೆ
ಏಳು ಸಾವಿರ ಹುಂಡಿದನ
ಬಂದಿನ್ನು ನೋಡುತಾವೆ
ಜೂಜು ಕೊಂಬಿನ ಹೋರಿ
ಬಟ್ಟು ಕೊಂಬಿನ ಬಸವ
ಕಾಮ ಜೇನು ಅನ್ನುವ ಹಸ
ನವಿಲು ಅನ್ನುವ ಹೋರಿ
ಕಾಳು ನಾಯಿ ಜೂಲುನಾಯಿ
ಅವ ಕರಕೊಂಡು ಹೋಗುತಾವೆ
ಏಳು ಸಾವಿರ ಹುಂಡಿದನ
ಅವನ ಪಟ್ಟಣಕೆ ಹೋಗುತಾವೆ
ಬಯಲು ಸೀಮೆ ಗೌಡನ
ಹಟ್ಟಿಗೆ ಸೀಮೆ ಗೌಡನ ಮಗಳ
ಒದ್ದಿ ಜೀವನ ತಗದಿ
ಬಯಲು ಸೀಮೆ ಗೌಡನ
ತುಳದಿ ಜೀವವ ತಗದಿ
ಅವನ ಶಿರವನ್ನು ತಗುದಾವೆ
ಈಚೆಗೆ ಮಡಗೀದೊ
ಕಾಮಜೇನು ಅಂಬುವ ಹಸ
ಕೊಂಬಿನೆಡೆಯಲು ಮಡಗಿಕೊಂಡು
ಸುರಹೊನ್ನೆ ಮರತಕ್ಕೆ ಬಂದು
ಮಂಡಕ್ಕೆ ಶಿರವನ್ನು ಮಡಗಿ
ಮರುಜವಳಿ ಕಡ್ಡಿಯ ತಂದು
ಮಂತ್ರಿಸಿ ಜೀವವತಂದಿ
ಏಳಯ್ಯ ನನ ತಂದೆ
ನಾನು ಪಟ್ಟಣಕ್ಕೆ ಹೋಗನಂದು
ಕರಕೊಂಡು ಹೋಗುವಾಗ
ಜಗಂಜ್ಯೋತಿ ಮಾವಿನ ಮರವೆ
ಬಯಲುಸೀಮೆಯ ಗೌಡನ ಮಗಳೆ

ಸಂಗ್ರಹ: ಜನಪದ ಸಾಮಾಜಿಕ ಕಥನಗೀತೆಗಳು, ಸಂ.ಡಾ.ಶಾಲಿನಿ ರಘುನಾಥ, ಕನ್ನಡ ಮತ್ತು ಸಂಸ್ಕೃತಿ, ಬೆಂಗಳೂರು, ೨೦೦೯.

ಕೂಪನ

ಕೂಪನ ತಗೊಂಡು ಬಾರವ್ವ ತಂಗೀ ಹೋಗೂನು ಕಂಟ್ರೋಲಕ ।
ಅಕ್ಕಿ ಗೋದಿ ಸಕ್ಕರಿ ಕೊಡತಾರ । ಇವತ್ತ ಮದ್ಯಾಹ್ನಕ ॥ ಪಲ್ಲ ॥

ಆಡು ಹುಡುಗರು ಕೂಪಾನ ಕಳದಾರ ನಾವೇನ ಮಾಡಬೇಕ ।
ಹೊಸ ಕೂಪನ ತರಿಸಿ ಕೊಡಬೇಕ ಇವತ್ತ ಮಧ್ಯಾಹ್ನಕ ॥ ೧ ॥

ಕಂಟ್ರೋಲ್ದಾಗ ಪಾಳೀ ಹತ್ತ್ಯಾದ ನಾವೇನ ಮಾಡಬೇಕ ।
ಚಾ ಸೋಸಾಕ ಸಕ್ಕರಿ ಇಲ್ಲ ಇವತ್ತ ಸದ್ಯೇಕ ॥ ೨ ॥

ಚಲೋ ಚಲೋ ಅರಿಬಿ ತಗದ ಇಡತಾರ । ಮಕ್ಕಳಿಗ್ಹೊಲಸಾಕ
ಮಂಜರಪಟ ಬಡವರಿಗಿ ಕಡತಾರ ಅವನೇನ ಸುಡಬೇಕ ॥ ೩ ॥

ನಾಯಿ ಹಲ್ಲಿನಂತ ಗೋದಿ ಕೊಡತಾರು ಅವನೇನ ಸುಡಬೇಕ ।
ಕೆಂಪ ಜ್ವಾಳ ತಿಂದ ನಾವು ಕೆಲಸಕ ಹೋಗಬೇಕ ॥ ೪ ॥

ಈಗಿನ ಪಂಚರು ಲಂಚಾ ತಿಂತಾರ । ಇಲ್ಲಿಂದ ದಿಲ್ಲಿ ತನಕ
ಪಂಚರ ಪರಿಸ್ಥಿತಿ ಮುಂದ ಹೇಳ್ತೇನ ಇಲೆಕ್ಷನ ಕಾಲಕ ॥ ೫ ॥

ಸಂಗ್ರಹ: ಹಳೆಯ ಲಾವಣಿಗಳು, ಸಂ. ಡಾ. ವೀರೇಶ ಬಡಿಗೇರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

ಕಬೀರ ದಾಸ ಲಾವಣಿ

ಸಂತ ಸಜ್ಜನರ ಪುರುಷರಗಣಾ
ಭಕ್ತಿ ಲಕ್ಷಣಾ ಕೇಳ್ರಿ ಇನ್ನಲೀಲಾ ।
ಕಬೀರ ಸತ್ವದಿ ಪ್ರಭಲಾ ।
ಅವನ್ಹಂಗ ಭಕ್ತಿಗ್ಯಾರಿಲ್ಲಾ ।
ಪರ ಹಿತಕ ಹತಾ ಮಾಡಿದಾ ।
ಸತಿಯ ಶಿರ ಕಮಲಾ ॥ ಪಲ್ಲವಿ ॥

ಕೂತ ಕೇಳ್ರಿ ಅವನ ವೃತಾನೇಮ ನಿತ್ಯದಾನ ಧರ್ಮ ।
ಮಾಡುವ ಸಂಪ್ರಸಾ ವಿಠೋಬಾವ ಭಜನಿಯ ಲುಬ್ದಾ ।
ಅಷ್ಟ ಬಕ್ತರೊಳಗ ಪ್ರಸಿದ್ದಾ ।
ಹೋರಾತ್ರಿ ಅತಿಥಿಗಳ ಸೇವಕಾ ।
ತತ್ಪರ ಇದ್ದಾ । ತತ್ಪರ ಇದ್ದಾ
ಹೀಗ ನಡಸಿದ್ದ ಅಲ್ಲಿ ಪ್ರತಿದಿನಾ ।
ಬಂದವರಿಗೆ ಅನ್ನ ನೀರ ಹಾಕಿದ್ದಾ ।
ಕೇಳಿ ದೂರಿನ ಜನಾ ಬರುವುದಾ ।
ದಾಂವ ತಿರುಗಿ ಹೋಗಿದ್ದಿಲ್ಲ ಹಸದಾ ।
ಉಂಟುಟ್ಟ ಜನ ಆವಗ ಹರಕಿ ಕೊಟ್ಟ ಹೋಗುದಾ ।
ನಾಳಿ ನಾಡದಕ ಬೇಕ ಅಂಬುದು
ಸಕ ಕಾಳಕಡ್ಡಿ ಶಿಲ್ಲಕ ಇಡತಿದ್ದಲ್ಲಾ ಎಂದಾ ।
ದಿನಾ ಹುಟ್ಟಿದಪ್ಪ ಖರ್ಚ ಮಾಡತಿದ್ದಾ ।
ಬಳೆ ಹರಿಶ್ಚಂದ್ರ ಅಲ್ಲ ಅವನ ಮುಂದಾ ।
ಅವನ ಭಕ್ತಿಗೊಲಿದ ಶ್ರೀಹರಿ ಸತ್ವ ಕಾಯತಿದ್ದ ।

ಚಾಲ:

ಹಿಂಗ ನಡಸಿ ಕೊಟ್ಟಿದ್ದ ಭಗವಂತ ।
ಕೀರ್ತಿ ಮೆರಿತಿತ್ತ ಸುತ್ತ ರಾಜೇದ ಮ್ಯಾಗ ।
ಅದ್ಭುತ ಆತ ಒಂದ ದಿವಸ ।
ಭಲೆ ಆರ ತಾಸ ರಾತ್ರಿ ವೆಳೆದಾಗ ।
ಸಾಧೂರ ಬಂದ್ರ ಅವನ ಚಿತ್ತ ಕಬೀರನ ಅಂತ ನೋಡುಕಾಲಾಗ ।

ಏರಚಾಲ:

ನಿದ್ದಿ ಹತ್ತಿ ಕಬೀರ ಮಲಗಿದ್ದಾ ।
ಹೋಗಿ ಎಬಸತಾನ ಅವನ ಜಲ್ದಾ ।
ಮೂರು ದಿವಸ ಅತ್ರಿ ರಾತ್ರಿ ಅನ್ನ ಇಲ್ದಾ ।

ಕೂಡಪಲ್ಲ:

ಹಸದ ಸಾಯತೇವ ನೂರ ಜನಾ ।
ಎಲ್ಲಾರಿಗೂ ಅನ್ನಾ ಕಾಣಿಸೋ ಪುಣ್ಯಶೀಲಾ ।
ಅನ್ನ ಇಲ್ದಿದ್ರ ಒಬ್ಬರೂ ಉಳಿದುಲ್ಲಾ !
ಹಿಂಗ ಎಬಿಸಿದಾರ ದಾಂದಲಾ ॥ ೧ನೇ ಚಾಕ ॥

ಕೈ ಮುಗದ ನಿಂತ ಕಬೀರದಾಸ ಅಂತಾನ
ಇನ್ನ ತಾಸ ಮಾಡ್ರಿ ಸಮಾಧಾನಾ ।
ಈಗ ತಯಾರ ಆಗತದ ಅನ್ನಾ ।
ಸುಖದಿಂದ ಮಾಡರಿ ಭೋಜನಾ ।
ಪಾಕಸಿದ್ಧ ಆಗಗೊಡದ ಮಾಡಿ ಬರ್ರಿ ಸ್ನಾನಾ ।
ಸ್ನಾನಕ ಹೋದಾರ ಋಷಿಗಳಾ ।
ಮನ್ಯಾಗ ಶೆರಿಕಾಳ ಇದ್ದಿದ್ದಿಲ್ಲ ಪುನಾಃ ।
ಸತಿ ಕೇಳತಾಳ ಕಬೀರರನಾ ।
ಎಲ್ಲೈತ್ರಿ ಅಡಿಗಿ ಸಾಮಾನಾ ।
ಇನ್ನು ಸಧೂರ ಬಂದ್ರ ನೀಡಬೇಕ ಏನಾ ।
ಕಬೀರ ಅಂತಾನ ಕೇಳ ಪತಿವೃತಿ ।
ಸತ್ವದ ರೀತಿ ಬಹಳ ಕಠಿಣಾ ।
ನಮ್ಮನ್ನ ಕಾಯಾವ ಸ್ವಾಮಿ ಜನಾರ್ದನಾ ।
ಮಾನ ಅಪಮಾನ ಅವನ ಸ್ವಾಧೀನಾ ।
ಪ್ರಾಣ ಹ್ವಾದ್ರು ಚಿಂತಿ ಇಲ್ಲ
ತಿರಗಿಸ ಬಾರ್ದ ಕೊಟ್ಟ ವಚನಾ ।

ಚಾಲ:

ನನಗಿಲ್ಲ ಪ್ರಪಂಚದ ದಾದ
ಅಂಗಡ್ಯಾಗ ನಿನ್ನೋದ ಒತ್ತಿ ಇಡತೇನ ।
ಇಷ್ಟ ತಿಳದಾರ ಪೂರ್ಣ ಪತಿವೃತಿ ।
ಅಂದಾಳ ಪ್ರಾಣಪತಿ ವಚನ ನಡಿಸೇನ ।
ಇದರಿಂದ ಪ್ರಾಣ ಹೋಗಲಿ
ಕೀರ್ತಿ ಆಗಲಿ ಸತ್ವ ನಡಿಸೋಣ ।

ಏರಚಾಲ:

ಇಷ್ಟ ನಿಶ್ಚಯ ಮಾಡ್ಯಾಂರ ಮನದಾಗ ।
ಹೋಗಿ ಅಂಗಡ್ಯಾವನ ಎಬ್ಬಿಸಿದಾರ ಆಗ ।
ಕಬೀರದಾಸ ಅಂತಾನ ಅಂಗಡಿಕಾರಗ ।

ಕೂಡಪಲ್ಲ:

ನನ್ನ ಹೆಣತೀನ ಒತ್ತಿ ಇಟಕೊರ‍್ರಿ
ಹೆಸರ ಬರಕೊರ‍್ರಿ ಸೀದಾಕೊಡ್ರಿ ಮೊದಲಾ ।
ಹಿಟ್ಟ ಅಕ್ಕಿ, ಉಪ್ಪ ಬ್ಯಾಳಿ ಬೆಲ್ಲಾ ।
ನೂರ ಮಂದಿ ಭರತಿ ಕೊಡ್ರಿ ಎಲ್ಲಾ ।
ಪರರ ಹಿತಕ ಹತಾ ಮಾಡಿದ ಸತಿಯ ಶಿರಕಮಲಾ ॥ ೨ನೇ ಚೌಕ ॥
ಸಾವುಗಾರ ಅಂತಾನ ಆ ಕ್ಷಣಾ
ಇದಕ ಎಂಟದಿನಾ ಇಡತೀವ ಮುದ್ದತ್ತಾ ।
ನೀವ ಸೈಯ್ಯ ಹಾಕಬೇಕ ಮತ್ತಾ ।
ದೌಡ ಲೆಕ್ಕ ತೀರಿಸಿದರ ಶಿಸ್ತಾ ।
ವಾಯದೆ ಮೀರಿ ಬಂದ್ರ ನಿಮ್ಮ ಹೆಣ್ಣ ಹಳಸಾಕಿಲ್ಲ ಪರತಾ ।
ಹೀಗಂದ ಮುಂದ ಒಗದ ವೈಯ್ಯ ಕಬೀರ
ಆಗ ಸೈಯ್ಯ ಹಾಕಿದ ಪುಣ್ಯವಂತಾ ।
ತಕ್ಕೊಂಡ ಹೋದಾನ ಹಿಟ್ಟಕ್ಕಿ ಸಹಿತಾ ।
ಅಡಗಿ ಮಾಡಸ್ಯಾನ ಪಂಚ ಅಮರೂತಾ ।
ಸಾಧೂರು ಬಂದ ಕೂತಾರು, ಬಂದ ಅನ್ನಾ ನೀಡಂತಾ ।
ಎಡಿ ಬಡಿಸಿ ಅವರ ಮುಂದಿಟ್ಟ
ಬೇಡಿ ಬೇಡಿದ್ದಂಗ ಕೊಟ್ಟ
ಶಿಂವಿ ಶಿಂವಿ ಪದಾರ್ಥ ಊಟದ್ದಾ ನಡಿತ ಗಮ್ಮತಾ ।
ಉಟ್ರಾ ಸರಿಸಿ ಕುಂತ್ರ ಅಮಾತಾ ।
ಚಂಡಿಕಿ ಮ್ಯಾಗ ಕೈಯ ಆಡಿಶ್ಯಾಡಿಕೋತಾರ ತುತ್ತಾ ।

ಚಾಲ:

ಉಂಡ ಆನಂದ ಆದಾರು
ಹರಕಿ ಕೊಟ್ಟಾರು ಕಬೀರದಾಸಗ ।
ಇತ್ತ ರಾತ್ರಿ ಉಳಿತ ಐದಗಳಿಗಿ ।
ವಿಠಬಾನ ಗುಡಿಗಿ ಹೋದಾರ ಆವರಾಗ ।
ಇತ್ತ ಕಬೀರದಾಸನ ಹೆಣತಿ ಮಲಗಿಳ್ಳ
ನಿದ್ದಿ ಹತ್ತಿ ಸಾವಕಾರನ ಮನಿಯಾಗ ।

ಏರಚಾಲ:

ಸಾವಕಾರ ತಗದ ಮಸಲತ್ ।
ಆಕಿ ಸಂಗ ಮಾಡಬೇಕಂತಾ ।
ಹೋಗಿ ಹಾಸಿಗಿ ಬದಿಯಲಿ ನಿಂತಾ ।

ಕೂಡಪಲ್ಲ:

ಇಷ್ಟೆಲ್ಲ ನೋಡಿದ ಮುಕ್ಕಂದ ।
ಧಾವಿಸಿ ಅಲ್ಲಿ ಬಂದ ಪಂಡರಿನಾಥ ವಿಠಲಾ ।
ಸ್ತ್ರೀರೂಪ ಧರಿಸ್ಯಾನ ತಾತ್ಕಾಲಾ ।
ವಿಚಿತ್ರ ಕೇಳಿರಿ ಇನ್ನ ಮ್ಯಾಲಾ ॥ ೩ನೇ ಚೌಕ ॥

ಸಾವಕಾರನ ತಂಗಿಯಂಗ ಸುದ್ದ ಶ್ರೀಹರಿಯಾದ ।
ಮಾಯಾರೂಪದ ಹೆಣ್ಣ ದೂರ ಸರಿಸ್ಯಾರ ಕಬೀರ ಸತಿಯನ್ನಾ ।
ಆಕಿ ಹಾಸಿಗಿ ಮ್ಯಾಲ ಮಲಿಗ್ಯಾನ ತಾನ ।
ನಿದ್ದಿ ಹತ್ತಿದಂಗ ಮುಸುಕ ಹಾಕಿ ಮುಚ್ಚಿದಾನ ಕಣ್ಣಾ ।
ಸಾವಕಾರ ಅಂತಾನ ತನ್ನ ಮನಕ
ಕತ್ಲಾಗ ಮಾಡಾಕ ನಾಯೇನ ತುಡುಗೇನಾ
ನನ್ನ ದಾಸಿ ಖರೇ ಈ ಹೆಣ್ಣಾ ।
ಹಿಂಗಂದ ನೆಗಿವಿದ ಕಣಾ ಕಣಾ
ತಾ ಮಲಗುವ ಮಂಚಕ ವೈದಾನು ಮಾಯಾದೇವಿನಾ ।
ಅಲ್ಲಿ ತಯಾರ ಇತ್ತ ಆರಾಸೆ
ಕಾಜಿನ ಹಂಡೆ ಗ್ಲಾಸ ದೀವಿಗಿಗಳ ಕ್ಷಣಾ ।
ಸುತ್ತಮುತ್ತ ಬೆಳಕ ಧುಮಶ್ಯಾನಾ ।
ಮಾಯಾದೇವಿ ತಗದಾಳ ಮುಸಕವನಾ ।
ಮಾರಿ ನೋಡಿ ಅಂತಾಳ ಅಣ್ಣಾ ।
ಇಲ್ಲ್ಯಾಕ ತಂದಿರೆಪ್ಪಾ ನನ್ನಾ ।
ನಾನು ತಂಗಿ ನೀನು ಹಿರಿ ಅಣ್ಣಾ ।
ನೋಡೋ ನನ್ನ ಖೂನಾ, ಪೂರ್ಣ ದೃಷ್ಟಿಲಿ
ಹಿಂಗ ಮಾಡುದು ಇದ್ರ ನಿನ್ನ ಮನಾ ।
ಕೊಡಬಾರದಿತ್ತ ನನ್ನಾ ಗಂಡನ ಕೈಯಲಿ ।
ನನ್ನ ಮಂಚಕ ತರೋದು ಅಲ್ಲ ಧರ್ಮ
ಹಿಂತಾದ ನಿನ್ನ ಮರ್ಮ ಏನ ನನ್ನ ಮ್ಯಾಲಿ ।

ಏರಚಾಲ:

ಇಷ್ಟ ಮಾತ ಸಾವಕಾರ ಕೇಳಿದಾ ।
ಅಂಜಿ ನಡಗಿದಾನ ಗದಾಗದಾ ।
ಮಾರಿ ಗುರುತ ಹತ್ತಿತ ತಂಗಿದಾ ।

ಕೂಡಪಲ್ಲ:

ನನ್ನ ಸೊಕ್ಕ ನನ್ನ ಮೈಯತಿತ್ತ ।
ತಪ್ಪ ಆತಂತ ಬಡಕೊಂಡ ಗಲ್ಲಾ ಗಲ್ಲಾ ।
ಹೋಗಿ ಹಿಡಿದಾನ ತಂಗಿಯ ಕಾಲ
ಮಾಯಾರೂಪ ಅಂಬುದು ತಿಳಿಯಲಿಲ್ಲಾ ॥ ೪ನೇ ಚೌಕ ॥

ಸಾವಕಾರ ಅಂತಾನ ನನ್ನಿಂದ ಆತ ತಪ್ಪ ।
ತಂಗಿ ನೀ ಕೋಪ ಹಿಡಿಯಬ್ಯಾಡ ಚೂರಾ ।
ಅನರ್ಥ ಆಗೋದಿತ್ತು ಪೂರಾ ।
ಮತ್ತ ಮಾನಕಾದ ಶಂಕರಾ ।
ನಮ್ಮ ನಿಮ್ಮ ಮೇಲಿನ ವಿಷ ಎಳಿ ಆಗಿ ಹೋತ ದೂರಾ ।
ಹಿಂಗಿಂತ ಯಾರ ಮುಂದ ಹೇಳಬ್ಯಾಡ
ಜನದಾಗ ಮಾಡಬ್ಯಾಡ ನೀನು ಜಾಹೀರಾ ।
ಊರಾಗ ನಾವು ದೊಡ್ಡ ಶಟ್ಟರಾ ।
ಮಂದಿಗಿ ಬುದ್ಧಿ ಹೇಳವರಾ ।
ಈ ಸುದ್ದಿ ತಿಳದರ ನಮ್ಮ ಮಾರಿ ನೋಡಾಕಿಲ್ಲಾಯಾರಾ ।
ಹಿಂಗ ಹೇಳಿ ಆಕಿನ ಭಾಳ ರಮಿಸಿ
ಹಾಸಿಗಿ ತನಕ ಕಳಿಸಿ ಕೊಟ್ಟ ಸಾವಕಾರಾ ।
ತಾ ಹೋಗಿ ಮಲಿಗ್ಯಾನ ಪರಭರಾ ।
ಆಗ ನಕ್ಕ ಕೃಷ್ಣ ದೇವರಾ ।
ಮಾಯಾರೂಪ ಬಿಟ್ಟ ತಗದಾನ ಮತ್ತೊಂದು ವಿಚಾರಾ ।

ಚಾಲ:

ಕಬೀರನ ಹೆಣತಿನ ಮುಚ್ಚಿನ್ನಾಂಗ
ಹಾಸಿಗಿ ಮ್ಯಾಲ ಮಲಗಿಸ್ಯಾನ ಲಗು ಬೇಗ ।
ತಾನ ಕಬೀರನ ರೂಪಾ ತೊಟ್ಟ ।
ರೂಪಾಯದ ಗಂಟ ಹೊತ್ತಾನ ಹೆಗಲಮ್ಯಾಲ ।
ಸಾವಕಾರನ ಎಬಿಸಿದ ಜಲದಿಂದಾ ।
ಲೆಕ್ಕಾ ತಗಿ ಅಂದಾ ಈಗಿನ ಕ್ಷಣದಾಗ ।

ಏರಚಾಲ:

ಸಾವಕಾರನ ಗಂಟ ಹೊಂಟಪ್ಪಾ ।
ಬಡ್ಡಿ ಸಹಿತ ರೂಪಾಯಿ ಎಣಿಸಿ ಕೊಟ್ಟಾ ।
ಮಗತಾ ಮಗತಾ ರುಜು ಮಾಡಿಬಿಟ್ಟಾ ।

ಕೂಡಪಲ್ಲ:

ಕಬೀರನ ಹೆಣತಿಯ ಕರದ ಲಗು ಮಾಡಿ ।
ಮನಿಗಿ ಇನ್ನ ನಡಿ ।
ಅಂತ ಕುಶಿಯಾಲಾ ಆಕಿ ಹಾದಿ ಹಿಡದಾಳ ತಾತ್ಕಾಲಾ
ಆಗ ಗುಪ್ತ ಆದ ಗೋಪಾಲಾ ॥ ೫ನೇ ಚೌಕ ॥

ಆಕಿ ಮನಿಗಿ ಹೋದಾಳ ರಾಸಾ ರೋಷಾ ।
ಒಳಗ ಕಬೀರದಾಸ ಕುಂತಿದ್ದಾ ಮುಕ್ಕಟ್ಟಾ ।
ಆಕಿ ಮಾರಿ ನೋಡಿ ಆದ ಶಿಟ್ಟಾ ।
ಚಂಡ ಹಿಡದ ಹೊರಗ ನುಗಿಸಿಕೊಟ್ಟಾ ।
ಯಾರ ಅಪ್ಪಣಿ ಮ್ಯಾಗ ಮನಿಗಿ ಬಂದಿ ಹೇಳ ಅಂದ ಇಷ್ಟಾ ।
ಲುಚ್ಚಾಪತಿ ಲೆಕ್ಕಾ ಕೊಟ್ಟಿಲ್ಲಾ ಸಾಲ
ಮುಟ್ಟಿಲ್ಲ ಸಾಹುಕಾರ ಹ್ಯಾಂಗ ಬಿಟ್ಟಾ ।
ಅವಗ ಏನ ಹೇಳಿ ಬಂದಿ ಪಂಟಾ
ನನ್ನ ಸತ್ವಕ್ಕ ಹಚ್ಚಿದಿ ಬಟ್ಟಾ ।
ಕೂಡ್ಯಾಡಿದ ಮಾತ ಎಲ್ಲಿ ಉಳಿತ ಆಯಕಟ್ಟಾ ।
ಆಕಿ ಅಂತಾಳ ಎಲೋ ಪ್ರಾಣನಾಥ
ಇಂಥಾ ಅನ್ನಯದ ಮಾತ ಆಡಬ್ಯಾಡ್ರಿ ಧರ್ಮಾಸುಟ್ಟ ।
ನೀವ ಕೊಟ್ಟವರ ಸಾವಕಾರನ ಗಂಟಾ ।
ನನ್ನ ಕರಕೊಂಡ ಬಂದೀರಿ ಸಂಗಾಟಾ ।
ಮುಂದ ಬಂದ ಕುಂತ ಇದೇನ ಹಚ್ಚಿದಿರಿ ಹುಡುಗಾಟಾ ।

ಚಾಲ:

ಇಷ್ಟ ಹೇಳಿ ಆದ ಕಬೀರ ಸಿಟ್ಟ ।
ಅಂತಾನ ಮನಿಬಿಟ್ಟ ನಾ ಎಲ್ಲಿ ಹೋಗಿಲ್ಲಾ ।
ಯಾಕ ಕರಿಲಾಕ ಬಂದಿದ್ರ ನಿನ್ನಾ ।
ಸುಳ್ಳ ತುಫಾನ ತಗೋರಿ ನನ್ನ ಮ್ಯಾಲಾ ।
ನನ್ನ ಹಾಂತಾಂವ ಮಾಡಿದಾರೆ ಖೊಟ್ಟಿ ।
ಮುಂದೀನ ಹ್ಯಾಂಗ ಬಿಟ್ಟಿ ತಿಳಿತ ನಿಂದೆಲ್ಲಾ ।

ಏರಚಾಲ:

ಸಾವಕಾರ ಹೇಳಿದ್ದಾನ ತೂತ ಗಟ್ಟಾ ।
ಕೆಲಸ ನಾಜೂಕ ಇದ್ದೀತ ಬಿಕ್ಕಟ್ಟಾ ।
ಮಾಡಲಾರಕ ಬಂದೀದೀ ನೀ ಹೊಂಟಾ ।

ಕೂಡಪಲ್ಲ:

ಇಂಥಾ ಹೆಣ್ಣ ನನಗ ಅಲ್ಲ ತರಾ ಅಂದ ಕಬೀರಾ ।
ತಗೊಂಡ ಕುಡಗೋಲಾ
ಹಿಂದ ಮುಂದ ವಿಚಾರ ಮಾಡಲಿಲ್ಲಾ ।
ಆಕಿ ಶಿರಾ ಕೋದ ತಾತ್ಕಾಲಾ ॥ ೬ನೇ ಚೌಕ ॥

ಶಿರಾ ದಡಾ ಊರ ಹೊರಗ ಓದ
ಸೂಲಕ ಹಾಕಿ ಬಂದ ।
ತೀರಿ ಹೋತ ಜಟ್ಟಾ ।
ಆಗ ಬೆಳಕ ಆದೀತು ಥೇಟಾ ।
ಸಾಧೂರ ಹೊಂಟ್ಟ ಊರ ಬಿಟ್ಟಾ ।
ಅವರ ಹೋಗು ಹಾದಿ ಮ್ಯಾಲ
ಸೂಲ ಇತ್ತ ಮುಕ್ಕಟ್ಟಾ ।
ಅವರನ ನೋಡಿ ಹೆಣಾ ಆತ ಖುಷಿ ।
ಕೈಯ ಜೋಡಿಸಿ ಬಾಗಿತ ಒಳೆ ಲಗೂಟಾ ।
ಕಾಲ ಒದ್ಯಾಡತಾವ ಲಟಪಟಾ ।
ಶಿರಾ ನಗಾಕ್ಹತ್ತಿತ ಹುಚ್ಚಾಟಾ ।
ನೋಡಿ ಸಾಧೂರ ಅಂತಾರ
ಇದ ಏನ ಬಂತ ಗೋಳಾಟ ।
ವರ ಹೆಣದ ಸನೇಕ ಹೋದಾರು
ಯಾರ ಕೊಂದಾರು ಹೇಳು ಅಂದಾರ ಇಷ್ಟಾ ।
ದಡಾ ಊರ ಕಡೆ ಮಾಡಿತ ಬಟ್ಟಾ ।
ಬರಿಚರಣಕ ಇಟ್ಟೀತ ನಿಟ್ಟಾ ।
ಶಿರಾ ಅಂತತಿ ತರಿಸಿ ನೋಡರಿ
ಸಾವಕಾರನ ವೈಯದ ಗಂಟಾ ।

ಚಾಲ:

ನಿನ್ನೆ ಅರ್ಧ ರಾತ್ರಿ ಕಾಲಕ
ನಿಮ್ಮನ್ನ ಉಣಸಲಾಕ ಇದ್ದಿದ್ದಿಲ್ಲ ಗತಿ ।
ಅಂಗಡ್ಯಾಗ ಓದ ಒತ್ತೆ ಇಟ್ಟ ನನ್ನಾ
ಹಿಟ್ಟಕ್ಕಿ ಸಾಮಾನ ತಂದ ನನ್ನ ಪತಿ ।
ತಾನ ಒಂದ ಸಾವಕಾರನ ಲೆಕ್ಕಾ ಕೊಟ್ಟ
ಪತಿಯ ಸಂಗಾಟಾ ಬಂದೀನಿ ಬೆನ್ನಹತ್ತಿ ।

ಏರಚಾಲ:

ನನ್ನ ಮನಿತನಕ ಕರಕೊಂಡ ಹೋದಾ ।
ಗಂಟ ಮುನಗಿಸಿದಿ ಅಂದ ಸಾವಕಾರಂದಾ ।
ಏಕಾ ಏಕಿ ಬಂದ ಕೊರಳ ಕೋದಾ ।

ಕೂಡಪಲ್ಲ:

ಯಾರಕಡೆ ತಪ್ಪ ತಿಳದ ನೋಡಿ
ಚೌಕಸಿ ಮಾಡಿ ಹೋಗರಿ ನೀವು ಎಲ್ಲಾ ।
ನನ್ನ ದುಃಖ ಕೇಳವರ‍್ಯಾರಿಲ್ಲ ಅಂತ
ಅರ್ಜ ಮಾಡಿತ ಶಿರಕಮಲಾ

ಸಾಧೂರ ಮಾಡಲಿಲ್ಲ ಅನುಮಾನಾ।
ಕಬೀರದಾಸನ್ನ ಕರಿಯ ಕಳುಹಿದರು ।
ಸಾವಕಾರನ ಖಾತೆ ತರಿಸಿದರು ।
ಕಬೀರದಾಸಗ ಜಮಾ ತೋರಿಸಿದರು ।
ಓದಿ ನೋಡ್ರಿ ಲೆಕ್ಕಾ ಅಂತಾರ ಎರಿಸಿದವರ್‍ಯಾರು ।
ಕಬೀರ ಅಂತಾನ ಇದೇನ ಘಾತ ಬಂತು ।
ನಮಗೆ ಈ ಮಾತು ಠಾವಕಿಲ್ಲ ಚೂರು ।
ಆಕಿನ ಬಿಡಿಸಿಕೊಂಡ ಬಂದವರು ।
ತಾವ ಬಂದ ಪ್ರಾಣ ಪಡದಾರು।
ಅದರ ಚಿಂತಿ ನಮಗ ನಿಮಗ್ಯಾಕ ಸುಳ್ಳ ಇಷ್ಟ ಘೋರು ।
ಇಷ್ಟ ಹೇಳಿ ಸಾಧೂರಿಗಿ ಬಿತ್ತಬಲಿ ಜ್ಞಾನ ದೃಷ್ಟಿಲಿ ।
ತಿಳಿದ ನೋಡಿದಾರು ಇದು ಹರಿಕೃತ ಅಂದಾರು ।
ಸೂಲದ ಮ್ಯಾಲಿನ ಹೆಣ ತಗದಾರು ।
ಸಿರಾ ಧಡ ಹೊಂದಿಸಿಟ್ಟ ಹರಿ ಭಜನಿ ಮಾಡ್ಯಾರು ।

ಚಾಲ:

ತನ್ನ ಭಕ್ತರ ದೀನ ಸ್ತುತಿ ಕೇಳಿ ।
ಬಂದ ವನಮಾಳಿ ಕಾಮಿತ ಫಲಧೂಮಾ ।
ಕಬೀರ ಹೊಂದ್ಯನ ಹರಿಯ ಚರಣಕ ।
ಅಂತಾನ ನಿವ್ಯಾಕ ಮಾಡಿಕೊಂಡ್ರಿ ಇಷ್ಟ ಶ್ರಮಾ ।
ಆಗ ನಗತ ಅಂದಾನ ಭಗವಾನಾ ।
ಭಕ್ತರ ಅಭಿಮಾನಾ ಕಾಯುದು ನಮ್ಮ ಕ್ರಮಾ ।

ಏರಚಾಲ:

ಪತಿವ್ರತಾ ಪ್ರಾಣಹರಿಪಡತಾ ।
ಸತಿ ಪತಿಗೆ ಅಭಯ ಕೊಟ್ಟ ನಡದಾ ।
ಖರೇ ಮಾಡಿ ತೋರಿಸಿದ ತನ್ನ ಬಿರದಾ ।
ಗೋಕಾವಿ ಶ್ಯಾರ ಮೋಜಿಂದಾ ।

ಕೂಡಪಲ್ಲ:

ಸಾತು ಕ್ಯಾಮಣ್ಣ ಅಂತಾನ ಹಿಂಗ ಭಕ್ತಿ
ಇಟ್ಟಂವಗ ಮುಂದ ಮುಕ್ತಿಗೇನ ಚಿಂತಿಲ್ಲಾ ।
ಭಕ್ತ ಬಂಗಾರ ಗುರುವರಿಗೆಲ್ಲಾ
ನಿಜ ತಿಳಿದಿಂದ ಆಗೂದು ಬೈಲಾ   ॥ ೬ನೇ ಚೌಕ ॥

ಸಂಗ್ರಹ: ಸಾತು ಕ್ಯಾಮಣ್ಣನ ಲಾವಣಿಗಳು, ಸಂ. ಡಾ. ನಿಂಗಣ್ಣ ಸಣ್ಣಕ್ಕಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೪.

ಲಾಲಾಗುಜ್ಜನ ಹಾಡು

ಕಥಿ ಹೇಳತೀನಿ ನಾ ಇಂದಾ ದೈವದಾ ಮುಂದಾ ತಿಳಿರಿಸರವೆಲ್ಲಾ ।
ಇದು ದಂತ ಕತಿ ಏನ ಅಲ್ಲಾ । ಸುದ್ದಿ ಆದಿತ ಸುತ್ತ ನಾಡ ಮೇಲಾ ।
ಬಾಬಜಿಗಿ ದೇವ್ರ ವೆಂಕಟಪತಿ ಆದ ಅನುಕೂಲಾ । ಆದಾನ ಅನುಕೂಲ
॥ ಪಲ್ಲ ॥

ವಿಶ್ವಾಸ ನಂಬಿಕೆ ಜೋಡಿ ಇರೋರು ಅವರು ಕೂಡಿ ಜೋಡಿ ಮೈತರಾ ।
ಲಾಲಾಗುಜ್ಜ ಅನ್ನಾವ ಸಾವುಕಾರಾ । ಬಾಬಜ್ಜಿ ಅನ್ನಾವ ಬಡವರಾ ।
ಲಾಲಾಗುಜ್ಜನಲ್ಲಿ ಸಾಲಾತಂದಿದ್ದ ರೂಪಾಯಿ ಮೂರು ಸಾವಿರಾ । ಮೂರು ಸಾವಿರಾ ॥

ಲಾಲಗುಜ್ಜರೂಪಾಯಿ ಎಣಿಸಿ ಕೊಟ್ಟ ಇಲ್ಲ ಅಂವಗ ಕಪಟ ಜೋಡಿ ಮೈತರಾ।
ಮುಂದೆ ಬಂತ ಕಾಡು ಹೂನಾರಾ । ಕೆಟ್ಟ ಮಂದಿ ಕೂಡ್ಯಾರ ನಾಲ್ಕಾರಾ ।
ಲಾಲಾಗುಜ್ಜನ ಕರದ ಕೇಳತಾರ ಅದರ ವಿಚಾರಾ । ಅದರ ವಿಚಾರಾ ॥
ದಸ್ತ ಇಲ್ಲದ ರೂಪಾಯಿ ಹೇಗೆ ಕೊಟ್ಟಿ ಎಂಥಾದ ಎದೆ ಗಟ್ಟಿ ಅಂತ
ಕೇಳಿದಾರವರಾ ।
ನಿನ್ನ ರೂಪಾಯಿಗೇನು ಆಧಾರಾ । ಎಂಥಮಳ್ಳ ಮಂದಿ ಗುಜ್ಜರಾ ।
ದಸ್ತಬರೆಯಿಸಿ ಕೊಳ್ಳಬೇಕಂತ ಹೇಳಿದಾರವರಾ । ಹೇಳಿದಾರವರಾ ॥

"ಚಾಲ"

ಅವರ ಮಾತು ಕೇಳಿದ ಆ ಕ್ಷಣಾ ಬಾರೊ ಬಾಬಜ್ಜಣ್ಣಾ ಅಂತ ಕರದಾನು ।
ಕರದಾನು ॥
ದಸ್ತ ತರಬೇಕ ಈಗಿಂದಿಗ ಬರಕೊಡು ಲಗುಬೇಗ ಅವರಿಗೆ ಹೇಳಿದಾನು ।
ಹೇಳಿದಾನು ॥
ಬಾಬಜ್ಜಿತಂದ ಕಾಗದಾ ಇಲ್ಲ ಅಗಾಧಾ ಅವಗ ಬರಕೊಟ್ಟಾನು । ಬರಕೊಟ್ಟಾನು ॥

"ಏರಚಾಲ"

ಒಂದ ವರ್ಷಹೋತ ಈ ಮಾತಾ ।
ಒಬ್ಬರದೊಬ್ಬರಿಗಿ ತಿಳಿಯುವದಿಲ್ಲ ಅಂತಾ ।
ಕೆಟ್ಟ ಹೋದಾವ ಇದ್ದಂಥ ದೋಸ್ತಾ ॥

"ಕೂಡಪಲ್ಲ"

ಲಾಲಗುಜ್ಜ ರೂಪಾಯಿ ಬೇಕಂದಾ ತರೋಗ ಹೋಗಂದ ನಮಗೆ
ನಿರ್ವಾವಿಲ್ಲಾ ।
ಬಾಬಜ್ಜಿ ಹಿಡಿದ ಮಂದಿ ಕಾಲಾ । ಅವನ ರೂಪಾಯಿ ಜೋಡಣಿ ಮಾಡಿದೆಲ್ಲಾ
॥ ೧ ॥

ಜೋಡಣೆ ಮಾಡಿ ರೂಪಾಯಿ ಒಯ್ದು ಕೊಟ್ಟ ಲಾಲಾಗ ಹೇಳಿ ಬಿಟ್ಟ
ಮುಟ್ಟಿದು ನಿನ್ನ ಎಲ್ಲಾ ।
ಆ ವೇಳೆಗೆ ಸಾಕ್ಷಿಯಾರಿಲ್ಲಾ । ತನ್ನ ದಸ್ತ ಸಹ ಬೇಡಲಿಲ್ಲಾ।
ಹೊರಟ ಮನೆಗೆ ಒಂದಾನೊ ಮುಂದಿನ ಭವಿಷ್ಯ ತಿಳಿಲಿಲ್ಲ । ಭವಿಷ್ಯ ತಿಳಿಲಿಲ್ಲ ॥
ಕೊಟ್ಟ ಕೂಡಲೆ ಗುಜ್ಜ ಬರಕೊಂಡ ವಹಿಮೇಲೆ ಹಚ್ಚಿಕೊಂಡ ಮುಟ್ಟಿದು ನಿನ್ನು
ಎಲ್ಲಾ ।
ಅವನ ದಸ್ತ ಅವಗೆ ಕೊಡಲಿಲ್ಲಾ । ಕೂತ ಜನಾ ಕೇಳಿರಿನ್ನ ಮೇಲಾ ।
ಸರಕಾರ ಕಾಯ್ದೆ ಮಾಡಿಸಿದ ಬಾಬಜ್ಜಿಯ ಮೇಲಾ। ಬಾಬಜ್ಜಿಯ ಮೇಲಾ ॥

ಸರಕಾರ ಕಾಯ್ದೆ ದುರಸ ಮೇಲಿಂದ ಮೇಲೆ ಕರಸ ಇರುವದು ದೊಡ್ಡ ಅಮಲಾ ।
ಶಮನಾಸ ಆದಿತ ಬಾಬಜ್ಜಿಯ ಮೇಲಾ । ಬಾಬಜ್ಜಿನ ಕರಕೊಂಡ್ಹೋದಾರಲ್ಲಾ ।
ಮುನಸುಪ ಕೇಳಿದಾರ ರೂಪಾಯಿ ಯಾಕ ಕೊಡಲಿಲ್ಲಾ । ಯಾಕ ಕೊಡಲಿಲ್ಲಾ ॥

"ಚಾಲ "

ಬಾಬಜ್ಜಿ ಹೇಳಿದ ಆ ಕ್ಷಣಾ ಹೀಗೇಕರೆಣ್ಣಾ ಕೊಟ್ಟಿದೇನಂದಾ । ಕೇಳ ಅಂದಾ ।
ನೀ ಕೊಟ್ಟಾಗ ಸಾಕ್ಷಿ ಯಾರಂದಾ । ಕರತಾ ಹೋಗಂದಾ ಮುನಸುಫ ಹೇಳಿದಾ ।
ಹೇಳಿದಾ ॥
ಧ್ಯಾನ ಮಾಡಿದ ಬಾಬಜ್ಜಿ ಆವಾಗ ವೆಂಕಟರಣಾಗ ನೀನೆ ಆಗಾವಂದಾ ।
ಆಗಾವಂದಾ ॥

" ಏರಚಾಲ "

ವೆಂಕಟಪತಿಯ ಹೇಳಿದ ಹೆಸರಾ । ನಾನು ಕೊಡುವಾಗ ಇದ್ದಾರವರಾ ।
ಅವರ ಹೊರ್ತ ನಮಗ ಯಾರಿಲ್ಲಾ ॥

" ಕೂಡಪಲ್ಲ "

ಇಷ್ಟ ಹೇಳಿ ಬಾಬಜ್ಜಿ ಹೊರಗೊಂಟ ಮುನುಸುಫಗ ಹೇಳಿಬಿಟ್ಟ
ಮಾತಾಗಲಿಲ್ಲಾ ।
ಆಶ್ಚರ್ಯ ಆಧಾರಾ ಜನರೆಲ್ಲಾ । ಕೂತ ಜನಾ ಕೇಳಿರಿನ್ನ ಮೇಲಾ ॥ ೨ ॥

ಅವರು ಮಾಡಿದ್ರ ಕಾಯ್ದೆ ಪ್ರಕಾರ ಹೆಚ್ಚಿನ ಸರಕಾರ ದರಜಿಲ್ಲ ಅವರಿಗಿ ।
ಶಮನಾಸ ಕಳಿಸ್ಯಾರ ವೆಂಕಟಗಿರಿಗಿ । ಬೇಲಿಪ ಹೋದಾನ ದೇವರಗುಡಿಗಿ ।
ಬಾಗಿಲಿಗೆ ಕೀಲಿ ಹಾಕಿ ಪೂಜೇರಿ ಹೋಗಿದ್ದ ತನ್ನ ಮನಿಗೆ । ತನ್ನ ಮನಿಗಿ ॥
ಬೇಲೀಪ ತಿಳಿದ ಆ ಕ್ಷಣಾ ತೆಗೆದ ಕಲ್ಪನಾ ತನ್ನ ಮನಸಿಗಿ ।
ಎರಡು ಕಿಡಕಿ ಇದ್ದಾವ ಬಾಗಿಲಿಗಿ । ಕಾಗದಾ ಒಗೆದ ಕಿಡಿಕ್ಯಾಗ ಹೋಗಿ ।
ಆ ಕ್ಷಣಾ ಸಹಿ ಮಾಡಿ ಬಿಟ್ಟ ದೇವ್ರಲಗುಬಗಿ । ದೇವರು ಲಗುಬಗಿ ॥
ಊಟಾ ಮಾಡಿ ಪೂಜೇರಿ ಬಂದ ಬೇಲಿಪಗ ಅಂದ ಬಂದೇರಿ ಯಾಕ ಇಲ್ಲಿಗಿ ।
ಶಮನಾಸ ತಂದೆವ ಅಂದಾನ ದೇವರಿಗಿ । ಬಾಗಿಲಾತಗೆದಾನ ಪೂಜೇರಿ ಹೋಗಿ।
ಆ ಕಾಗದಾ ತಕ್ಕೊಂಡ ಬೇಲೀಪ ಬಂದಾನ ಕಚೇರಿಗಿ । ಬಂದಾನ ಕಚೇರಿಗಿ ॥

॥ **ಚಾಲ** ॥

ಆಗ ಓದಿದಾರ ಪತ್ತರಾ ಮುನ ಸುಫಮಾಮಲೇದಾರ ಆದಾರಾ ಗಾಬರಿ ।
ಗಾಬರಿ ॥
ದೇವರ ಬರೆದ ಅಕ್ಷರ ಛಾಪಖಾನೆ ಆಕಾರ ಇದ್ದಾವ ಕೇಳರಿ । ಕೇಳರಿ ॥
ನಾಲ್ಕು ದಿವಸ ಬರಿದಿದ್ರ ಮುದ್ದತಾ ಹೇಳಿದ್ರ ಬರತೇವಂತಾ ದೈವಕೇಳರಿ ।
ಕೇಳರಿ ॥

॥ **ಏರಚಾಲ** ॥

ದೇವ್ರ ಬರೋದ ಆದಿತ ಕರಾರಾ । ಸುತ್ತೆಲ್ಲಾ ಮಾಡಿದಾರ ತಾರಾ ।
ಕೂಡಿದಾರ ದೊಡ್ಡ ದೊಡ್ಡ ಜಹಗೀರ ದಾರಾ ॥

॥ **ಕೂಡಪಲ್ಲ** ॥

ಜನಾ ಬಂತ ನೋಡು ದೆಶೆಯಿಂದ ಬಹಳ ದೂರಿಂದ ಮಂದಿ ಕಲ್ಬಲಾ ।
ಬಹಳ ಮಂದಿ ಕೂಡಿದಾರಲ್ಲಾ । ಕಚೇರ್‍ಯಾಗ ಜಾಗ ಸಿಗಲಿಲ್ಲಾ ॥ ೩ ॥

ಬಹಳ ಮಂದಿ ಕೂಡಿದಾರಲ್ಲಾ ಆದಿತ ಗದ್ದಲಾ ದಾರಿ ಸಿಗಲಿಲ್ಲಾ ।
ಸಿಪಾಯಿ ಗೋಳ್ದ ಇತ್ತ ಕಾವಲಾ । ಯಾರ್‍ಯಾರ ಇವರನ್ನ ಕೇಳಲಿಲ್ಲಾ ।
ಸೂರ್ಯನ ಕಿರಣ ಮೂಡಿದ್ದಾಂಗ ಕೇಳರಿನ್ನ ಮೇಲಾ । ಕೇಳಿರಿ ಇನ್ನ ಮೇಲಾ ॥
ಸಿಡಿಲ ಹೊಡೆದಂತೆ ಆತ ಖಡಡಾಡಾ ಮುಂಗಾರಿಯ ಮೋಡ ಅವಾಜ ಸುತ್ತೆಲ್ಲಾ ।
ಬೆಳಕ ಬಿದ್ದಿತ ಕಚೇರೆಲ್ಲಾ । ಕೂತ ಜನಾ ಕೇಳಿರಿನ್ನ ಮ್ಯಾಲಾ ।
ವೆಂಕಟಪತಿ ದೇವ್ರ ಬಂದದ್ದು ಯಾರಿಗು ಕಾಣಲಿಲ್ಲಾ । ಯಾರಿಗೂ ಕಾಣಲಿಲ್ಲಾ ॥

ವೆಂಕಟಪತಿ ದೇವರ ಬಂದ ಲಾಲಾಗುಜ್ಜಗಂದ ಮಾತುನಿಂದ ಅಲ್ಲಾ ।
ಹಣ ಮುಟ್ಟಿದೆ ನಿನ್ನದು ಎಲ್ಲಾ । ಮೇಲೆ ಬರೆದದ್ದು ಸುಳ್ಳಲ್ಲಾ ।
ಇಗಿಂದೀಗ ತರಿಸಿ ನೋಡಿರಿ ದೈವ ನೀವೆಲ್ಲಾ । ದೈವ ನೀವೆಲ್ಲಾ ॥

॥ **ಚಾಲ** ॥

ಆಗತರಸಿ ನೋಡತಾರ ವಹಿ ಮಾಡಿಕೊಂಡು ಬಿಟ್ರ ಸಹಿ ಮುಟ್ಟಿದಾವಾಗ ।
ಕೇಳ ಆಗ ॥
ದಸ್ತ ಹರದ ಬಿಟ್ಟಾರ ಆವಾಗ ಕೊಟ್ಟಾರ ಲಗುಬೇಗ ಬಾಬಜ್ಜಿ ಕೈಯಾಗ ।
ಕೈಯಾಗ ॥
ನೋಡೇನಂದ್ರೆ ಸಿಗಲಿಲ್ಲ ಯಾವಗ ವೆಂಕಟರಮಣಗ ಗುಪ್ತ ಆದ ಆಗ ।
ಆದ ಆಗ ॥

॥ ಏರಚಾಲ ॥

ಖಟ್ಲೆ ಹರಿದು ಆದಿತ ಖುಲಾಸಾ । ಒಬ್ಬರೊಬ್ಬರಿಗಿ ಉಳಿಲಿಲ್ಲ ವಿಶ್ವಾಸಾ ।
ಕೇಳಿದವರಿಗೆ ಬಹಳ ಇದ ಹೌಸಾ ।

॥ ಕೂಡಪಲ್ಲ ॥

ಮಾಮಲೇದಾರ ಮುನಸುಫ ಕೆಲಸ ಬಿಟ್ಟ ಯೋಗಿರೂಪಾ ತೊಟ್ಟ
ಹೋದಾರ ಗಿರಿಮೇಲಾ ।
ಯಾರ್‍ಯಾರದ ಈಗ ವಿಶ್ವಾಸಿಲ್ಲಾ । ಕಬ್ಬೂರಪ್ಪಣ್ಣ ಹೇಳಿದ್ದ ಸುಳ್ಳಲ್ಲಾ ॥ ೪ ॥

ಸಂಗ್ರಹ: ಲಾವಣಿ ಹಾಡುಗಳು, ಸಂ. ಶಂಕರ ಶಿ. ಕುಂಬಾರ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೬.

ಅನುಬಂಧ – ೪
ಹಾರುವಯ್ಯ ಮಾದಗಿತ್ತಿ ಹಾಡು

ಅಚ್ಚ ಮಾದಿಗರ ಹೆಣ್ಣು ನಿಚ್ಚಳದ ನಿಜಗೊಂಬೆ
ನಿಚ್ಚಳದ ನಿಜಗೊಂಬೆ ನೀರಿಗೊರಟಾಳು
ಚಿನ್ನದ ಸಿವಡಿಕ್ಕಿ ರನ್ನದ ಕೊಡನೊತ್ತು
ಮುತ್ತಿನಷ್ಟೆ ಬೊಟ್ಟಿಕ್ಕಿ ನೀರಿಗೊರಟಾಳು

ನೀರಿಗ್ಹೋಗೋ ಹಾದಿವಳಗೆ ಅಲ್ಲೊಬ್ಬ ಹಾರವಯ್ಯ
ಅಲ್ಲೊಬ್ಬ ಹಾರುವಯ್ಯ ಜಪಮಾಡುತ್ತಿದ್ದ
ಜಪವ ಮಾಡೋದು ಬಿಟ್ಟು ಕಣ್ಣೆತ್ತಿ ನೋಡುತಾನೆ
ಅತ್ತ ಬುಡದೆ ಇತ್ತ ಬುಡದೆ ಅಡ್ಡಾಕಿಕೊಂಡ
ಹರಿವಿನ್ನ ತೊಳಿಲೀಸ ನೀರನ್ನ ಮಗಿಲೀಸ
ನೀರನ್ನು ಮಗಿಲೀಸ ದಾರೀಗೆ ಬರಲೀಸ

ಮಾದಗಿತ್ತಿ:

ಬ್ಯಾಡ ಬ್ಯಾಡಾರುವಯ್ಯ ಬ್ಯಾಡ ನನ್ನ ಗುರುವೆ
ಇದುವೇನು ಹಾರುವಯ್ಯ ಈ ಕರುಮ ಈಗ
ಮಾದಗಿತ್ತಿ ನಾನು ಹಾರುವಯ್ಯ ನೀನು
ಮಾದಗಿತ್ತಿ ಸಂಗಾವು ನಿನಗೆ ಬ್ಯಾಡಾರುವಾ
ಬ್ಯಾಡಕಾಣಾರುವಾ ಬೇಡಿಕೊಂಬೆನು ನಿನ್ನ
ಮಾದಗಿತ್ತಿ ಅಂಬೋದ ಅರಿಯೇನೊ ಹಾರುವಾ?

ಹಾರುವಯ್ಯ:

ಮಾತು ಮಾತಿಗೆ ನೀನು ಮಾದಗಿತ್ತಿ ಅನ್ನಲುಬೇಡ
ಮಾದಗಿತ್ತಿ ಅಂಬೋಳು ಮದನಗೋಪಾಲದೆಣ್ಣು
ಮಾದಗಿತ್ತೆನ್ನಲುಬೇಡ ಮದನಗೋಪಾಲದೆಣ್ಣು
ಸುರುಜ ಚಂದುರರಿಗಿಂತ ನೀನು ಹೆಚ್ಚು ಕಾಣೆ
ಮಾದಗಿತ್ತಿ ನೀನಲ್ಲ ಮಾಯ್ಕಾರಿ ಹೆಣ್ಣು
ಮಾದಗಿತ್ತಿ ಆದಾರೆ ಮತ್ತೆ ಒಳ್ಳೇದಾಯ್ತು
ಮಾದಗಿತ್ತಿ ಸಂಗಾವು ಮಧ್ಯಾಹ್ನ ಸಾಕು

ಮಾದಗಿತ್ತೆಲುಬ್ಯಾಡ ಮದನಗೋಪಾಲದೆಣ್ಣೆ
ನಿನ್ನೆಡಪಾದದಡಿಯೆ ಎನ್ನ ಸಿರಸ ಕಡಿವೇ

ಮಾದಗಿತ್ತಿ:

ನನ್ನಿಂದ ನೀ ಬಂದರೆ ಹೆಂಡ ಕುಡಿಯಲು ಬೇಕು
ಹೆಂಡ ಕುಡಿಯಲುಬೇಕು ಕಂಡ ಕಚ್ಚಲುಬೇಕು
ಬ್ಯಾಡಯ್ಯ ಹಾರುವಯ್ಯ ಮಾದಗಿತ್ತಿ ಸಂಗಾವು

ಹಾರುವಯ್ಯ:

ಮಾತು ಮಾತಿಗೆ ನೀನು ಮಾದಗಿತ್ತೆನ್ನಲು ಬ್ಯಾಡ
ಮಾದಗಿತ್ತಿ ಅಂಬೋಳು ಮದನಗೋಪಾಲದೆಣ್ಣು
ನೀ ಕುಡಿಯೋ ಹೆಂಡ ನಾನು ಕುಡಿದೇನು
ನೀ ಕಚ್ಚೋ ಕಂಡ ನಾನು ಕಚ್ಚೇನು
ಮಾದಗಿತ್ತೆನ್ನಲು ಬ್ಯಾಡ ಮದನಗೋಪಾಲದೆಣ್ಣೆ
ನಿನ್ನ ಪಾದದ ಮೇಲೆ ಬಿದ್ದು ಪ್ರಾಣ ಬಿಟ್ಟೇನು
(ಹೀಗೆಂದು ಹೇಳಿ ಹಾರುವಯ್ಯ ಆಕೆಯ ಸೆರಗು ಹಿಡಿಯುತ್ತಾನೆ)

ಮಾದಗಿತ್ತಿ:

ಬ್ಯಾಡ ಬ್ಯಾಡ ಹಾರುವಯ್ಯ ಬೇಡಿಕೊಂಬೆನು ನಿನ್ನ
ನಮ್ಮಣ್ಣೋರು ಕಂಡಾರೆ ಏನ ಮಾಡಿಸ್ಯಾರು?
ನಮ್ಮಪ್ಪೋರು ಕಂಡಾರೆ ಹೇಗೆ ಬಿಟ್ಟಾರು?
ಕುಲವಲ್ಲದ ಕುಲವಲ್ಲದ ಕುಲವ ಜಾತಿ ಕೆಡಿಸ್ಯಾರು
ಜಾತಿನ್ನ ಕೆಡಿಸ್ಯಾರು ರೀತಿ ಕೆಡಿಸ್ಯಾರು

ಹಾರುವಯ್ಯ:

ನಾ ಜಾತಿ ಕೆಟ್ಟರೂ ಸರಿಯೆ ರೀತಿಗೆಟ್ಟರೂ ಸರಿಯೆ
ನಿನ್ನಿಂದ ನಾನು ಬರುವುದೇ ಸರಿಯೇ
ಹಿಡಿದಿರುವ ಸೆರಗ ನಾ ಬಿಡಲಾರೆ ಇನ್ನು
ತಲೆ ನೋಡೆ ನಿನ್ನ ತಲೆ ಬುಗರಿಯ ಚಂಡು
ಕಣ್ಣು ನೋಡೆ ನಿನ್ನ ಕಣ್ಣು ಕಾಡಿಗೆ ಭರಣಿ
ಮೂಗು ನೋಡೆ ನಿನ್ನ ಮೂಗು ಸಂಪಿಗೆ ಎಸಳು
ಬಾಯಿ ನೋಡೆ ನಿನ್ನ ಬಾಯಿ ಬಚ್ಚರಣೆ ಭರಣಿ
ಹಲ್ಲು ನೋಡೆ ನಿನ್ನ ಹಲ್ಲು ದಾಳಿಂಬೆ ಬೀಜ
ತುಟಿ ನೋಡಿ ನಿನ್ನ ತುಟಿ ತೊಂಡೆಯ ಹಣ್ಣು
ತೋಳು ನೋಡೆ ತೋಳು ಬಾಳೆಯ ದಿಂಡು
ತೊಡೆ ನೋಡೆ ನಿನ್ನ ತೊಡೆ ಕದಳೀಯ ಕಂಬ
ಬೆನ್ನು ನೋಡೆ ನಿನ್ನ ಬೆನ್ನು ಬೆತ್ತದ ಹಲಿಗೆ
ಸೊಂಟ ನೋಡೆ ನಿನ್ನ ಸೊಂಟ ನಾಗಾರಾವಿನ ಸೊಂಟ
ಸುರಜ ಚಂದುರರಗಿಂತ ಹೆಚ್ಚು ಕಾಣೆ ನೀನು
ಬಿಳಿಯಾಲೆ ಕಳಿಯಡಕೆ ಮೆಲುಬಾರೆ ಹೆಣ್ಣೇ
ತೊಡೆ ಮ್ಯಾಲೆ ತೊಡೆಹಾಕಿ ಮಾತಾಡು ಬಾರೆ

ಮಾದಗಿತ್ತಿ ಮುಂದುಗಡೆ ಹಾರುವಯ್ಯ ಹಿಂದುಗಡೆ
ಅವರು ಹಿಂದು ಮುಂದುಗಡೆ ಹೋಗುತಾರೆ ಆಗ

ಅವಳ ತಾಯಿ:

ಏನಪ್ಪ ಎಲೆ ಮಗನೆ ಏನಪ್ಪ ಇದು ಕರುಮ?
ಮಾದಗಿತ್ತಿ ಅಂಬೋದ ಅರಿಯೇನೊ ಮಗನೆ?
ಇದುವೇನೊ ಎಲೆ ಮಗನೆ ಈ ಕರುಮ ಈಗ?

ಹಾರುವಯ್ಯ:

ಮಾತುಮಾತಿಗೆ ನೀನು ಮಾದಗಿತ್ತೆನ್ನಲು ಬ್ಯಾಡ
ಮಾದಗಿತ್ತಿ ಅಂಬೋಳು ಮದನಗೋಪಾಲದೆಣ್ಣು
ಸುರಜ ಚಂದುರರಿಗಿಂತ ಹೆಚ್ಚು ಕಾಣೇ ಇವಳು

ಅವಳ ತಾಯಿ:

ಬಾಡೀನ ಮಡಿಕ್ಯಾಗೆ ನೀರಾನೆ ಕಾಸೀವಿ
ಜನಿವಾರ ತಗುದಾಕಿ ತಾನ ಮಾಡುಬಾರೊ
ಅತ್ತಿ ಆಲದ ಮರದಡಿ ಎತ್ತು ಕರ ಸತ್ತಾವೆ
ಕತ್ತಿ ಚೂರಿ ತಕ್ಕೊಂಡು ಕುಯ್ಬಾರೊ ಹಾರುವ
ರಕ್ತ ಕುಸುವಿದ ಗಡಿಗ್ಯಾಗೆ ನೀರಾವ ಕಾಸೀವಿ
ಜನಿವಾರ ಬಿಚ್ಚಿಟ್ಟು ಜಪಮಾಡು ಬಾರೊ

ಎಣ್ಣೆ ಹಚ್ಚಿ ಮಾಡೀವಿ ಹನ್ನೊಂದು ಬಾರುಕೋಲಾ?
ಅಣ್ಣಾನೋರ ಸಂತಿಗ್ಹೋಗಿ ಮಾರಿಕಂಬಾರೊ ಹಾರುವಯ್ಯ
ತುಪ್ಪ ಹಚ್ಚಿ ಮಾಡೀವಿ ಇಪ್ಪತ್ತು ಬಾರಕೋಲ
ಅಪ್ಪನೋರ ಸಂತಿಗ್ಹೋಗಿ ಮಾರಿಕಂಬಾರೊ ಹಾರುವಯ್ಯ
ಹಣ್ಣಿನಂತ ಹಾರುವಯ್ಯ, ಕುಲಗೆಟ್ಟ ನನ್ನಾರುವಯ್ಯ
ಅಣ್ಣನೋರ ಸಂತಿಗ್ಹೋಗಿ ಮಾರಿಕಂಬಾರೊ ಹಾರುವಯ್ಯ

ಹಾರುವಯ್ಯ ಆಮೇಲೆ ಏನು ಮಾಡಿದ? ಮಾದಿಗರ ಜಾತಿಯ ಕಸಬನ್ನು ಮಾಡಿದನೆ? ಆಕೆಯನ್ನು ಕೂಡಿದನೆ? ಮದುವೆಯಾದನೇ? ಈ ಪ್ರಶ್ನೆಗಳಿಗೆ ಸ್ಪಷ್ಟ ಉತ್ತರ ಸಿಕ್ಕುವುದಿಲ್ಲ. ಮುದ್ದೇಬಿಹಾಳ್ ತಾಲ್ಲೂಕು ಮೂಕಿಹಾಳದ ಭಜನಾ ಮಂಡಲಿಯವರು ಭಜನೆ ಮಟ್ಟಿನಲ್ಲಿ ಹೀಗೆ ಹಾಡುತ್ತಾರೆ.

ಏನ್ ಸೋತಿನಪ್ಪ ಮಾದ್ರಾಕಿಗೆ
ನಾ ಎಂತ ಮನಸು ಕೊಟ್ಟಿನಪ್ಪ ಮಾನ್ಗೇಡಿಗೆ ॥ ಪ ॥

ಬಾಡ್ಬೇಸಿದ ಮಡಿಕ್ಯಾಗೆ ನೀರನ್ನು ಕಾಸ್ಯಾಳ
ಕೂಡಿ ಜಳ್ಕ ಮಾಡಾವಂದ್ರೆ ಕುಲದಲ್ಲಿ ಮಾದ್ರಾಕಿ ॥ ೧ ॥

ಹೆಂಡದ ಗಡಿಗ್ಯಾಗ ದುಂಡಗಡ್ಡ ಮ್ಯಾಡ್ಯಾಳ
ಕೂಡಿ ಊಟ ಮಾಡಾಣಾಂದ್ರೆ ಕುಲದಲ್ಲಿ ಮಾದ್ರಾಕಿ ॥ ೨ ॥

ಎಲವಿನಂದರ ತೊಗಲಿನ ಚಪ್ಪರ ಬಿಗುದು
ಕೂಡಿ ಮಲಿಕೊಳನಾಂದ್ರೆ ಕುಲದಲ್ಲಿ ಮಾದ್ರಾಕಿ ॥ ೩ ॥

ಸಣ್ಣಹಳ್ಳಿ ಬೂದಿಬಸ್ವ ರಾಮಾಪುರದ ಚಿಕ್ಕ
ತನ್ನೊಳು ತಾ ತಿಳದು ಕವಿಮಾಡಿ ನಕ್ಕ ॥ ೪ ॥

ಈ ಹೊಯ್ದಾಟದಲ್ಲಿಯೇ ಇದ್ದಿರಲಾರ.ಅಂಥ ಮನಮೋಹಿಸುವ ಬಿಡಲಾದರೆ ಹೋಗಿರಬೇಕು. ಅತ್ತ ಮಾದಿಗರ ಬಾಳಿಗೆ ಹೊಂದಿಕೊಂಡು ಹೋಗಲೂ ಅಸಾಧ್ಯವಾಗಿರಬೇಕು. ನಂಟು ಗಂಟು ಎರಡನ್ನೂ ಉಳಿಸಿಕೊಳ್ಳುವ ಆಲೋಚನೆ ಮಾಡಿ ಮಾದಿಗರವಳೊಡನೆ ತನ್ನ ಮನೆಗೆ ಬಂದವನು–

ಅಮ್ಮಮ್ಮ ನನ್ನೆತ್ತ ತಾಯೆ ಸೊಸೆಯ ತಂದಿವಿನಿ
ಸೊಸೆಯ ತಂದಿವಿನಿ ನೀರುಕೊಡು ತಾಯಿ

ಎನ್ನುತ್ತಾನೆ. ತಾಯಿ ಕೊಟ್ಟ ನೀರು ಈಸಿಕೊಂಡು ಇಬ್ಬರೂ ಕೈಕಾಲು ಮುಖ ತೊಳೆದುಕೊಂಡರು. ಸೊಸೆಯ ಅಂದ ಚೆಂದವನ್ನು ತಾಯಿ ತಂದೆ ಮೆಚ್ಚಿಕೊಂಡರು. ಮದುವೆ ಮಾಡಿದರು.
ಹಾರುವಯ್ಯನ ತಾಯಿ ತಂದೆ ಕುಂತು ನಿಂತು ಮಾತಾಡಿ

ನಿನ್ನಿಣೆಯಲಿ ಬರೆದ ಬರಣೀಕೆ
ನಾನು ಬರೆದಿದ್ದಲ್ಲ ನೀನು ಬರದಿದ್ದಲ್ಲ.

ಇದು ಮಂಡೆಮ್ಯಾಲೆ ಬರದ ಬರಣೀಕ
ಆಕಾಶದಷ್ಟೆ ಹಸೆ ಬರೆದು ಭೂಮಿಯಷ್ಟೆ ಚಪ್ಪರಾಕಿ
ಹಾರುವಯ್ಯಗು ಮಾದಗಿತ್ತಿಗೂ ಮದುವೆಯ ಮಾಡ್ಯಾರೆ.

ಆಕೆ ಮಾದಗಿತ್ತಿ ಎಂದು ತಿಳಿದೂ ಮದುವೆ ಮಾಡಿದರೆ? ಇರಲಾರದು. ಹಾರುವಯ್ಯ ಸುಳ್ಳು ಹೇಳಿರಬೇಕು. ಆಕೆಯ ರೂಪಿಗೆ ಮಾರುಹೋಗಿ, ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡು ಎಂದು ನಮ್ಮ ನಾಣ್ಣುಡಿಯೇ ಇರುವಾಗ ಒಂದೇ ಒಂದು ಸುಳ್ಳು ಹೇಳಿದರೆ ಏನಾಯಿತು?

ಸಂಗ್ರಹ: ಕನ್ನಡ ಜನಪದ ಕಥನಕಾವ್ಯಗಳು, ಎಚ್.ಎಲ್.ನಾಗೇಗೌಡ, ಕರ್ನಾಟಕ ಜಾನಪದ ಪರಿಷತ್ತು, ೨೦೦೭.

ವೀರದಿಮ್ಮವ್ವ

ತಂದನಾನು ತಾನ ॥ ಪಲ್ಲವಿ ॥
ಅಯ್ಯ ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕು ತಂದನಾನು ತಾನೆ
ದಬ್ಬೆಘಟ್ಟ ಗ್ರಾಮದಲ್ಲಿ ಹೋರಿ ನಂಜೇಗೌಡನಂತೆ. ತಂದನಾನು ತಾನೆ
ಹೋರಿ ನಂಜೇಗೌಡನಿಗೆ ಆರು ಜನ ಗಂಡು ಮಕ್ಕಳು ತಂದನಾನು ತಾನೆ
ಆರು ಜನ ಗಂಡುಮಕ್ಕಳ್ಹಿಂದೆ ಒಬ್ಬಾಳೆ ಹೆಣ್ಣು ಮಗಳಂತೆ ತಂದನಾನು ತಾನೆ
ಒಬ್ಬಾಳೆ ಮಗಳಂತೆ ಅವಳ್ಹೆಸರು ತಿಮ್ಮವ್ವ ತಂದನಾನು ತಾನೆ
ಅವಳ ವೀರುದಿಮ್ಮಮ್ಮನಂಥ ಕರದಾರು ಅವಳನ್ನು ತಂದನಾನು ತಾನೆ
ಬಾಲೆ ತಿಮ್ಮಮ್ಮನಾದರೂ ನೀರಿಗೇ ಹೊರಟಾಳು ತಂದನಾನು ತಾನೆ
ಚಿನ್ನಾದ ಕೊಡಕಿನ್ನು ರನ್ನಾದ ಸಿವುಡ್ಹೂಡಿ ತಂದನಾನು ತಾನೆ
ಬಾವಿ ಹಾದೀಲಿ ಹೊರುಟಾಳೆ ಬಾಲೆ ತಿಮ್ಮವ್ವ ತಂದನಾನು ತಾನೆ

ಬಾವಿ ಏರಿಮೇಲೆ ಬೇಡರ ಬಮ್ಮಣ್ಣ ತಂದನಾನು ತಾನೆ
ಕಾರೆ ಕೆಂಗನು ತಿಂದು ಎದೆಸೊಕ್ಕಿ ಬಿದ್ದಾನೆ ತಂದನಾನು ತಾನೆ
ಬಾಲೆ ತಿಮ್ಮವ್ವನಾದರೂ ನೋಡುತಾಳೆ ಬಮ್ಮಣ್ಣನ ತಂದನಾನು ತಾನೆ
ಬಾವಿ ಕಲ್ಲಿನ ಮೇಲೆ ಕೊಡನಾದರು ಇರಿಸಾಳೆ ತಂದನಾನು ತಾನೆ
ಹರಿಯುವ ಜಲಧೀಗೆ ಬೇಗದಿಂದ ಹೋಗುತಾಳೆ ತಂದನಾನು ತಾನೆ
ಹರಿಯುವ ಜಲಧೀಗೆ ಮುಂಜೆರಗಜ್ಜಿಕೊಂಡು ತಂದನಾನು ತಾನೆ
ಮುಂಜೆರಗ ಅಜ್ಜಿಕೊಂಡು ಓಡಿಓಡಿ ಬರುತಾಳೆ ತಂದನಾನು ತಾನೆ
ಬಾಯಿಗಾದರು ಹಿಂಡುತಾಳೆ ಎದೆಗಾದರು ಒತ್ತುತ್ತಾಳೆ ತಂದನಾನು ತಾನೆ
ಎದಿಗಾದ್ರು ಒತುತ್ತಾಳೆ ತಲಿಗಾದರು ತಟ್ಟುತಾಳೆ ತಂದನಾನು ತಾನೆ
ಬೇಡರ ಬಮ್ಮಣ್ಣ ಧಕ್ಕನೆ ಮೇಲೆದ್ದು ತಂದನಾನು ತಾನೆ
ಸುತ್ತಾಲು ತಿರುಗ್ಯಾನೆ ಏಸತ್ತು ಮಲಗಿದ್ದೆ ತಂದನಾನು ತಾನೆ
ಬಾಲೆ ತಿಮ್ಮವ್ವನಾದರು ಏನಂತ ಹೇಳುತಾಳೆ ತಂದನಾನು ತಾನೆ
ಹೊಟ್ಟೆಗೂಟ ಇಲ್ಲವೇನು ಕಾರೆ ಕೆಂಗನು ತಿಂದು ತಂದನಾನು ತಾನೆ
ಎದೆಸೊಕ್ಕಿ ಬಿದ್ದಲ್ಲೊ ಬೇಡರ ಬಮ್ಮಣ್ಣ ತಂದನಾನು ತಾನೆ
ನಮ್ಮೂರಿಗೆ ಬಂದರೀಗ ಹೊಟ್ಟೆಗ್ಹಿಟ್ಟು ಕೊಡುತೀವಿ ತಂದನಾನು ತಾನೆ
ಹೊಟ್ಟೆಗ್ಹಿಟ್ಟು ಕೊಡುತೀವಿ ಉಡುವ ಬಟ್ಟೆ ಕೊಡುತೀವಿ ತಂದನಾನು ತಾನೆ
ದನವನಾದರು ಕಾಯುತೀಯ ಕಸವನಾದರು ಗುಡುಸುತೀಯ? ತಂದನಾನು ತಾನೆ
ಹಂಗಂದ ಮಾತೀಗೆ ಒಪ್ಪಿದಾನೆ ಬಮ್ಮಣ್ಣ ತಂದನಾನು ತಾನೆ

ಬಾಲೆ ತಿಮ್ಮವ್ವನಾದರೂ ಕೊಡನಾದ್ರು ಎತ್ತುತಾಳೆ ತಂದನಾನು ತಾನೆ
ಮುಂದೆ ತಿಮ್ಮವ್ವನಂತೆ ಹಿಂದೆ ಬಮ್ಮಣ್ಣನಂತೆ ತಂದನಾನು ತಾನೆ
ಕರಕೊಂಡೆ ಬರುತಾಳೆ ಅವರ ಮನಿಗಿನ್ನು ತಂದನಾನು ತಾನೆ
ಹೊರ ಬಾಗಿಲಲ್ಲಿ ನಿಲ್ಲಿಸ್ಯಾಳೆ ಏನಂತ ಹೇಳುತಾಳೆ ತಂದನಾನು ತಾನೆ

ತಾಯಿ ತಂದೆಯನಾದರು ಕೇಳಿಕೊಂಡು ಬರುತೀನಿ ತಂದನಾನು ತಾನೆ
ಹೊರಬಾಗಿಲಲ್ಲಿ ನಿಲ್ಲಯ್ಯ ಎನುತಾಳೆ ತಿಮ್ಮವ್ವ ತಂದನಾನು ತಾನೆ
ಏಳು ಬಾಗಿಲ ದಾಟುತಾಳೆ ಕೋಣೆ ಬಾಗಿಲು ದಾಟುತಾಳೆ ತಂದನಾನು ತಾನೆ
ಕೋಣೆ ಬಾಗಿಲು ದಾಟುತಾಳೆ ಕೊಡುವನಾದರು ಇಳಿಸಾಳೆ ತಂದನಾನು ತಾನೆ
ತಂದೆಯ ಬಳಿಗಾದರು ಬೇಗದಿಂದ ಹೋಗತಾಳೆ ತಂದನಾನು ತಾನೆ

ತಂದೆ ತಂದೆ ಕೇಳು ನನು ಮಾತ ನೀನೀಗ ತಂದನಾನು ತಾನೆ
ಇಲ್ಲೊಬ್ಬನಾಳವನೆ ಹೊಟ್ಟೆಗಿಟ್ಟು ಕೊಟ್ಟಾನೆ ತಂದನಾನು ತಾನೆ
ದನವನಾದರು ಕಾಯುತಾನೆ, ಕಸವನಾದರೂ ಗುಡಿಸುತಾನೆ ತಂದನಾನು ತಾನೆ
ಹಂಗಂದ ಮಾತೀಗೆ ಒಪ್ಪಿದಾನೆ ಅವರಪ್ಪ ತಂದನಾನು ತಾನೆ
ನಿನಿಗೊಪ್ಪೀಗೆ ಆದ ಮೇಲೆ ನನಿಗೊಪ್ಪು ತಿಮ್ಮವ್ವ ತಂದನಾನು ತಾನೆ
ತಾಯವ್ವನ ಬಳಿಗಾದರೂ ಬೇಗದಿಂದ ಹೋಗುತಾಳೆ ತಂದನಾನು ತಾನೆ
ತಾಯಿತಾಯಿ ಕೇಳೇ ನಮ ತಾಯಿ ನನು ಮಾತ ತಂದನಾನು ತಾನೆ
ಮಗಳೆ ನಿನಗೊಪ್ಪಿದ ಮೇಲೆ ನನಿಗೊಪ್ಪು ತಿಮ್ಮವ್ವ ತಂದನಾನು ತಾನೆ
ಬಮ್ಮಣ್ಣ ಬಮ್ಮಣ್ಣ ಕೊಳ್ಳೊ ಕಾಲಿಗು ನೀರ ತಂದನಾನು ತಾನೆ
ನೀರಾದರು ಕೊಡುತಾಳೆ ಊಟಕಾದರು ಬಡಿಸುತಾಳೆ ತಂದನಾನು ತಾನೆ
ಊಟಕಾದರು ಬಡಿಸುತಾಳೆ ಏನಂತ ಹೇಳುತಾಳೆ ತಂದನಾನು ತಾನೆ
ಬಮ್ಮಣ್ಣ ಬಮ್ಮಣ್ಣ ನಾನೊಂದ ಹೇಳುವೆನು ಕೇಳು ತಂದನಾನು ತಾನೆ
ದನಕರ ಒಂಬತ್ತು ರಾಸು ಒಡಕೊಂಡೆ ಹೋಗಬೇಕು ತಂದನಾನು ತಾನೆ
ಬೆಳಕಲ್ಲ ಬೆಟ್ಟದ ಕವಲಿಗೆ ಹೊಡೆಯಬೇಕು ತಂದನಾನು ತಾನೆ
ಹಂಗಂದ ಮಾತೀಗೆ ಒಪ್ಪಿದಾನೆ ಬಮ್ಮಣ್ಣ ತಂದನಾನು ತಾನೆ
ಕರು ದನ ಒಂಬತ್ತು ರಾಸು ಹೊಡಿಕೊಂಡೇ ಹೋಗುತಾನೆ ತಂದನಾನು ತಾನೆ
ಕವಲಿಗು ವಡುದಾನೆ ಬೆಟ್ಟಕಾದರು ಅಟ್ಟುತಾನೆ ತಂದನಾನು ತಾನೆ

ವೀರದಿಮ್ಮವ್ವನಾದ್ರು ಏನಾದರು ಮಾಡುತಾಳೆ? ತಂದನಾನು ತಾನೆ
ಆರು ಜನ ಅಣುದಿರಗೂ ಊಟನಾದರು ಹೊತ್ತುಕೊಂಡು ತಂದನಾನು ತಾನೆ
ವೀರುದಿಮ್ಮವನಾದರು ಊಟನಾದರು ಹೊತ್ತುಕೊಂಡು ತಂದನಾನು ತಾನೆ
ತಿಮ್ಮವ್ವ ಬರುವದನು ಬಮ್ಮಣ್ಣ ನೋಡುತಾನೆ ತಂದನಾನು ತಾನೆ
ಬೆಳಕಲ್ಲು ಬೆಟ್ಟದಿಂದ ದಡ್ಡನೆ ನೆಗುತಾನೆ ತಂದನಾನು ತಾನೆ
ದಡ್ಡನೆ ನೆಗುದಾನೆ ದುಬ್ಬಾನೆ ಧುಮುಕಾನೆ ತಂದನಾನು ತಾನೆ
ಬೇಡರ ಬಮ್ಮಣ್ಣ ಬೇಲಿ ಸಂದಿಲು ಬಂದಾ ತಂದನಾನು ತಾನೆ

ಅಡ್ಡಬಳಸಿ ಬರುತಾನೆ ಹಿಂಬಾಲಿಸಿ ಬರುತಾನೆ ತಂದನಾನು ತಾನೆ
ತಿಮ್ಮವ್ವನ ಮುಂಜೆರುಗ ಹಿಡುದಾನೆ ಬಮ್ಮಣ್ಣ ತಂದನಾನು ತಾನೆ
ನನಗಿಂತ ಚೆಲುವೆಯ ತಂದು ಮದುವೆಯ್ಯ ಮಾಡಿಸೇನು ತಂದನಾನು ತಾನೆ
ಮದುವೆಯ ಮಾಡಿಸೇನು ಸೋಬನುವ ಮಾಡಿಸೇನು ತಂದನಾನು ತಾನೆ

ನನ್ನ ಮುಂಜೆರಗ ಬಿಡಯ್ಯ ಎನುತಾಳೆ ತಿಮ್ಮವ್ವ ತಂದನಾನು ತಾನೆ
ಪಟ್ಟೆಸೆರಗೊಂದ ನೆಟ್ಟಾನೆ ಹರಿದಾನು ತಂದನಾನು ತಾನೆ
ಪುಟ್ಟಾಣಿ ಕುಪುಸಾವ ಪಟ್ಟಾನೆ ಕಿತ್ತಾನೆ ತಂದನಾನು ತಾನೆ
ಗೋಳು ಗೋಳೆನ್ನುತಾಳೆ, ಸಿವಲೋಕ ಮಾಡುತಾಳೆ ತಂದನಾನು ತಾನೆ
ಗೋಳೆಂದು ಹೊರಟಾಳೆ ಹೊಲದ ದಡಕ್ಕಾಗ ತಂದನಾನು ತಾನೆ

ಅಣ್ಣಯ್ಯ ಅಣ್ಣಯ್ಯ ಊಟ ಇಳುಗಲಿ ಬನ್ನಿ ತಂದನಾನು ತಾನೆ
ಅವರೆಲ್ಲರಿಗೂ ಕಿರಿಯಣ್ಣ ಊಟ ಇಳುಕಲು ಬಂದ ತಂದನಾನು ತಾನೆ
ಇದು ಏನು ತಿಮ್ಮವ್ವ ತಿಮ್ಮವ್ವ ಮುಂಜೆರಗ ಹರಿದಾವು? ತಂದನಾನು ತಾನೆ
ಪುಟ್ಟಾಣಿ ಕುಪುಸಾವು ಪಟ್ಟುಣ್ಣೆ ಕಿತ್ತಾದು? ತಂದನಾನು ತಾನೆ
ಅಣ್ಣಯ್ಯ ಅಣ್ಣಯ್ಯ ನಾನು ಬರುವಂಥ ದಾರಿಲ್ಲಿ ತಂದನಾನು ತಾನೆ
ಸೀಗೆಮೆಳೆಗೆ ಸಿಕ್ಕಿ ಹರಿದೋಯ್ತು ಅಣ್ಣಯ್ಯ ತಂದನಾನು ತಾನೆ
ಬಿದುರು ಮೆಳೆಗೆ ಸಿಕ್ಕಿ ಹರಿದೋಯ್ತು ಅಣ್ಣಯ್ಯ ತಂದನಾನು ತಾನೆ
ಹಂಗಂದ ಮಾತೀಗೆ ಆರು ಜನ ಅಣ್ಣಾದಿರು ತಂದನಾನು ತಾನೆ
ಆರು ಜನ ಅಣ್ಣಾದಿರು ಕುಂತುನಿಂತು ಮಾತನಾಡಿ ತಂದನಾನು ತಾನೆ
ನಮ್ಮ ತಂಗಿ ತಿಮ್ಮವ್ವನ್ನ ಮಡುಗೋದು ಸರಿಯಲ್ಲಾ ತಂದನಾನು ತಾನೆ
ಆರು ಜನ ಅಣದೀರು ಆರೆತ್ತುನ ಬಿಟ್ಟು ತಂದನಾನು ತಾನೆ
ತಂಗಿ ತಿಮ್ಮವ್ವನಿಗೆ ಏನಂತ ಹೇಳುತಾರೆ ತಂದನಾನು ತಾನೆ
ಬೇಗುದಿಂದ ಮನಿಗಾದರೂ ನಡಿಯವ್ವ ಎನ್ನುತಾರೆ ತಂದನಾನು ತಾನೆ
ಬರುವಂತ ಹಾದೀಲಿ ದೊಡ್ಡಮನುಸೆನಾಗವಳೆ ತಂದನಾನು ತಾನೆ
ದೊಡ್ಡಮನಸೆನಾಗವಳೆ ರುತುಮನುಸೆನಾಗವಳೆ ತಂದನಾನು ತಾನೆ
ಮನಿಗಾದರು ಬಂದಾಳೆ ಹೊರಬಾಗಲಲ್ಲಿ ನಿಂತಾಳೆ ತಂದನಾನು ತಾನೆ
ಆರು ಜನ ಅತ್ತಿಗೇರು ನೋಡಾರು ನಾದುನೀಯ ತಂದನಾನು ತಾನೆ
ನಮಗೆ ಇರುವಳೊಬ್ಬಳು ನಾದನಿಯ ಗುಡಲೀಗೆ ಕೂಡಬೇಕು ತಂದನಾನು ತಾನೆ
ಗುಡಲೀಗೆ ಕೂಡಬೇಕು ಒಸಿಗೇಯ ಮಾಡಬೇಕು ತಂದನಾನು ತಾನೆ
ಆರು ಜನ ಅತ್ತಿಗೆರು ಸಂತೋಷದಿಂದಾಲಿ ತಂದನಾನು ತಾನೆ
ಎಲ್ಲರಿಗು ಹಿರಿಯಣ್ಣ ಸೋದರಮಾವನ ಕರಸಿ ತಂದನಾನು ತಾನೆ
ತಿಮ್ಮವನ ಗುಡಲೀಗೆ ಕೊನಿಗೋಳ ತರಿಸಾನು ತಂದನಾನು ತಾನೆ
ಅಡಿಯೊಂದು ಹತ್ತಿಯ ಕೊನೆ, ಮೇಲೊಂದು ಹಲಸಿನ ಕೊನೆ ತಂದನಾನು ತಾನೆ
ಮಾವನ ಮಗನಾದರು ಕಡುತಂದು ಕೊನೆಯನ್ನು ತಂದನಾನು ತಾನೆ
ಮಾಳಿಗ್ಗೆ ಇದಿರಾಗಿ ಇರುಸಾನೆ ಕೊನೆಗೋಳ ತಂದನಾನು ತಾನೆ

ಅಡಿಯೊಂದು ಹಲಸಿನ ಕೊನೆ, ಮೇಲೊಂದು ಹತ್ತಿಯ ಕೊನೆ ತಂದನಾನು ತಾನೆ
ಅವರತ್ತೇಯ ಮಗನಾದರು ಕಡುತಂದ ಕೊನೆಯನ್ನಾ ತಂದನಾನು ತಾನೆ
ತೊಟ್ಟಿಮನೆಗೆದುರಾಗಿ ನಿಲ್ಲಿಸಾನೆ ಕೊನೆಯನ್ನಾ ತಂದನಾನು ತಾನೆ
ಅವರಾರುಜನ ಅಣ್ಣದೀರು ಗುಡಲೀಗೆ ಕಾವಲು ತಂದನಾನು ತಾನೆ

ಹೊಕ್ಕೋದನಿವನ್ಯಾರು ಹೊಸಬಂಟ ಈ ಮನೇ? ತಂದನಾನು ತಾನೆ
ಅವರ ಮಾವ್ನ ಮಗನಲ್ಲದೆ ಬದಲಲ್ಲಾ ಕಾಣೆಯಾ ತಂದನಾನು ತಾನೆ
ಆರು ಜನ ಅತ್ತಿಗೇರು ಗುಡಲೀಗೆ ಕೂಡುತಾರೆ ತಂದನಾನು ತಾನೆ
ಗುಡಲೀಗೆ ಕೂಡುತಾರೆ, ಮಡುಲೀಗೆ ತುಂಬುತಾರೆ ತಂದನಾನು ತಾನೆ
ಆರು ಜನ ಅಣ್ಣದೀರು ಕಾದುಕೊಂಡು ಮನಿಗ್ಯಾರೆ ತಂದನಾನು ತಾನೆ

ಬೇಡರ ಬೊಮ್ಮಣ್ಣ ಕರುದನ ಎಂಬತ್ತುರಾಸು ತಂದನಾನು ತಾನೆ
ಹೊಡಕೊಂಡು ಹೋಗುತಾನೆ ತರುಕೊಂಡೆ ಹೋಗುತಾನೆ ತಂದನಾನು ತಾನೆ
ಕರುದನ ಎಂಬತ್ತು ರಾಸು ತಂದು ದೊಡ್ಡೀಗೆ ಕೂಡಿ ತಂದನಾನು ತಾನೆ
ತಿಮ್ಮವ್ವನ ಗುಡಲನ್ನು ವಾರೀಗಣ್ಣಿನಲ್ಲಿ ನೋಡುತಾನೆ ತಂದನಾನು ತಾನೆ
ವಾರಿಗಣ್ಣಿನಲ್ಲಿ ನೋಡುತಾನೆ ಕಿರುಗಣ್ಣಿನಲ್ಲಿ ನೋಡುತಾನೆ ತಂದನಾನು ತಾನೆ
ಹರಿಯುವ ಜಲಧೀಗೆ ಬೇಗದಿಂದ ಹೋಗುತಾನೆ ತಂದನಾನು ತಾನೆ
ಎಮ್ಮೆ ಸಗಣಿ ತುಂಬೆ ಸೊಪ್ಪು ಬೇಗದಿಂದ ತೆಗೆದುಕೊಂಡು ತಂದನಾನು ತಾನೆ
ಹರಿಯುವ ಜಲದಲ್ಲಿ ಕಜ್ಜಿನೆಲ್ಲುಜ್ಜಿಕೊಂಡಾ ತಂದನಾನು ತಾನೆ
ಕಜ್ಜಿನೆಲ್ಲಾ ಉಜ್ಜಿಕೊಂಡು ಪ್ಯಾಟೆಬೀದಿಗು ಬಂದಾ ತಂದನಾನು ತಾನೆ
ಪ್ಯಾಟೆ ಬೀದಿಗು ಬಂದ ಅಂಗಡಿ ಸಾಲಿಗು ಬಂದಾ ತಂದನಾನು ತಾನೆ
ಕಡಲೆ ಬೆಲ್ಲವನ್ನು ತೆಗೆದು ಪಟುಣಾವ ಕಟ್ಟಿಸಾನೇ ತಂದನಾನು ತಾನೆ
ಹರುಕಲ ಜೇಬಿಗೆ ಹುರುಗಡಲೆ ತುಂಬಿಕೊಂಡು ತಂದನಾನು ತಾನೆ
ತಿಮ್ಮವ್ವನ ಗುಡಲೀಗೆ ನುಗ್ಗುತಾನೆ ಬಮ್ಮಣ್ಣ ತಂದನಾನು ತಾನೆ

ಆರು ಜನ ಅಣ್ಣದೀರು ಕಾದಿಕೊಂಡೆ ಮನಿಗ್ಯಾರೆ ತಂದನಾನು ತಾನೆ
ಗುಡಲೀಗೆ ನುಗುತಾನೆ ಬೇಡರ ಬಮ್ಮಣ್ಣತಂದನಾನು ತಾನೆ
ದಡ್ಡನೆ ಒದ್ದಾಳೆ ತುಪ್ಪಾನೆ ಬಿದ್ದಾನೆ ತಂದನಾನು ತಾನೆ
ಏನೆ ತಿಮ್ಮವ್ವ ದಡ್ಡನೆ ಒದ್ಯಲೆ? ತಂದನಾನು ತಾನೆ
ದಡ್ಡಾನೆ ಒದ್ದ್ಯೆಲ್ಲೆ ದುಪ್ಪಾನೆ ಬಿತ್ತಲ್ಲೆ? ತಂದನಾನು ತಾನೆ
ಅಣ್ಣಯ್ಯ ಅಣ್ಣಯ್ಯ ಅಗಸಾರ ಕತ್ಯಪ್ಪಾ ತಂದನಾನು ತಾನೆ
ಅಣ್ಣ ಗುಡಲ ಸೊಪ್ಪಿಗು ಬಂತು ದಡ್ಡಾನೆ ಒದೇನು ತಂದನಾನು ತಾನೆ
ದಡ್ಡಾನೆ ಒದ್ದೇನು ದುಪ್ಪಾನೆ ಬಿದ್ದೀತು ತಂದನಾನು ತಾನೆ

ಆರು ಜನ ಅಣ್ಣದೀರು ಹುಡಿಕ್ಯಾದರು ನೋಡುತಾರೆ ತಂದನಾನು ತಾನೆ
ಹುಡಿಕ್ಯಾದರು ನೋಡುತಾರೆ ತಡಿಕ್ಯಾದರು ನೋಡುತಾರೆ ತಂದನಾನು ತಾನೆ
ತಂದೇಯ ಬಳಿಗಾದರು ಬೇಗುದಿಂದ ಬರುತಾರೆ ತಂದನಾನು ತಾನೆ

ತಂದೆ ತಂದೇ ಕೇಳು ನಮ ತಂದೆ ನಮ ಮಾತಾ ತಂದನಾನು ತಾನೆ
ನಮ ತಂಗಿ ತಿಮ್ಮವ್ವ ಮಡಗೋದು ಸರಿಯಲ್ಲಾ ತಂದನಾನು ತಾನೆ
ನಮ್ಮ ಪಟ್ಟುಣಕ್ಕೆ ಕೆಟ್ಟೆಸರು ಬರುತ್ಯೆತೆ ಎನ್ನುತಾರೆ ತಂದನಾನು ತಾನೆ

ಹಂಗಂದ ಮಾತೀಗೆ ಹೋರಿ ನಂಜೇಗೌಡರಾಗ ತಂದನಾನು ತಾನೆ
ಮಾವನ ಪಟ್ಟಣಕೆ ಕೆಟ್ಟೆಸರು ಬರುತ್ತೈತೆ ಎನ್ನುತಾರೆ ತಂದನಾನು ತಾನೆ
ನಿಮ್ಮ ಮಗನನ್ನು ಕರಕೊಂಡು ಬರಬೇಕು ಬರುದಾರು ತಂದನಾನು ತಾನೆ
ನಮ್ಮ ಮಗಳನ್ನೆ ಕೊಡುತೀವಿ ಎಂದೀಗ ಬರುದಾರು ತಂದನಾನು ತಾನೆ
ಮಾವಾನ ಮಗನನ್ನು ಕರಕೊಂಡು ಬರಬೇಕು ಬರುತಾರೆ ತಂದನಾನು ತಾನೆ
ದಂಡು ದಳವಾಯಿ ಕಟ್ಟಿಕೊಂಡೆ ಬರುತಾರೆ ತಂದನಾನು ತಾನೆ
ಮಂದಿ ಮಾರಬಲ ಕಟ್ಟಿಕೊಂಡೆ ಬರುತಾರೆ ತಂದನಾನು ತಾನೆ
ಆನೆ ಕುದುರೆಸಾಲು, ಒಂಟೆ ಒಡಿಸಾಲು ತಂದನಾನು ತಾನೆ
ಕಟ್ಟಿಕೊಂಡೆ ಬರುತಾರೆ ಅವರ ಪಟ್ಟಣಕಿನ್ನು ತಂದನಾನು ತಾನೆ
ಹೋರಿ ನಂಜೇಗೌಡರಾಗ ಪಟ್ಟಣವ ಸಾರಿಸಾರು ತಂದನಾನು ತಾನೆ
ಆಕಾಶ ಮೇಲ್ಕಟ್ಟು ಚಪ್ಪರವ ಹಾಕಿಸಾರು ತಂದನಾನು ತಾನೆ
ಭೂಮಿ ಅಡ್ಡಗಲದಷ್ಟು ಹಸೆ ಜಗಲಿ ಬರಿದಾರು ತಂದನಾನು ತಾನೆ
ಮದುವೆಯ್ಯ ಮಾಡಿಸಾರು ಸೋಬನಾವ ಮಾಡಿಸ್ಯಾರು ತಂದನಾನು ತಾನೆ

ತಿಮ್ಮವ್ವನ ಅತ್ತೆಮಾವದಿರು ಏನಂತ ಹೇಳುತಾರೆ ತಂದನಾನು ತಾನೆ
ನನ್ನ ಮಗನನ್ನ ಸೊಸೆಯನ್ನ ಕಳಿಗಾದರು ಕೊಡಬೇಕು ತಂದನಾನು ತಾನೆ
ಹಂಗಂದ ಮಾತೀಗೆ ಏನಂತ ಹೇಳುತಾರೆ ತಂದನಾನು ತಾನೆ
ನಮಗೆ ಇರುವಾಳೊಬ್ಬಳೆ ಮಗಳು ತಂದನಾನು ತಾನೆ
ನಮ್ಮ ಮಗಳನ್ನು ಅಳಿಯನ್ನ ತಿಂಗಾಳು ಮಡಿಕೊಂಡು ತಂದನಾನು ತಾನೆ
ನಿಮ್ಮ ಪಟ್ಟಣಕೆ ನೀವಿನ್ನ ಹೋಗಬೇಕು ಎನ್ನುತಾರೆ ತಂದನಾನು ತಾನೆ
ಹಂಗಂದ ಮಾತೀಗೆ ಬೇಗುದಿಂದ ಹೋಗುತಾರೆ ತಂದನಾನು ತಾನೆ
ದಂಡು ದಳವಾಯಿನೆಲ್ಲ ಕಟ್ಟಿಕೊಂಡೆ ಹೋಗುತಾರೆ ತಂದನಾನು ತಾನೆ
ಒಂದುವಾರ ತುಂಬಿದಾವು ಎರಡುವಾರ ತುಂಬಿದಾವು ತಂದನಾನು ತಾನೆ
ಮೂರುವಾರ ತುಂಬಿದಾವು ನಾಲ್ಕುವಾರ ತುಂಬಿದಾವು ತಂದನಾನು ತಾನೆ
ತಿಂಗಾಳೆ ತುಂಬಿದಾವು ಕಳಿಗಾದರು ಕೊಡಬೇಕು ತಂದನಾನು ತಾನೆ
ನಮಗೆ ಇರುವಾಳೊಬ್ಬಳೆ ಮಗಳು ಕಳಿಸ್ದೆಂಗೆ ಇರುವಾದು ತಂದನಾನು ತಾನೆ
ತುಪ್ಪ ಅನ್ನವನ್ನಿಕ್ಕಿ ಮುತ್ತುಮಡಲಿಗೆ ಕಟ್ಟಿ ತಂದನಾನು ತಾನೆ
ತಂದೆಯ ಪಾದಕ್ಕೆ ಶರಣೆಂದಾಳು ತಿಮ್ಮವ್ವ ತಂದನಾನು ತಾನೆ
ಹಾಲು ಅನ್ನವನ್ನಿಕ್ಕಿ ಮುತ್ತು ಮಡಲಿಗೆ ಕಟ್ಟಿ ತಂದನಾನು ತಾನೆ
ಅಣ್ಣಂದಿರ ಪಾದಕ್ಕೆ ಶರಣೆಂದಾಳು ತಿಮ್ಮವ್ವ ತಂದನಾನು ತಾನೆ
ಮಸರು ಅನ್ನವನ್ನಿಕ್ಕಿ ಮುತ್ತ ಮಡಲಿಗೆ ಕಟ್ಟಿ ತಂದನಾನು ತಾನೆ
ಅವರ ಅತ್ತಿಗೆಯರ ಪಾದಕ್ಕೆ ಶರಣೆಂದಾಳು ತಿಮ್ಮವ್ವ ತಂದನಾನು ತಾನೆ
ಗೋಳುಗೋಳೆನ್ನುತಾಳೆ ಶಿವಶೋಕ ಮಾಡುತಾಳೆ ತಂದನಾನು ತಾನೆ

ಮಟ್ಟ ಮಂಗಳವಾರ, ನಿಚ್ಚ ಮಧ್ಯಾನುದಲ್ಲಿ ತಂದನಾನು ತಾನೆ
ಬಾಲೆ ತಿಮ್ಮವ್ವನಾದ್ರು ಹೊರುಟಾಳೆ ಬೇಗುದಿಂದ ತಂದನಾನು ತಾನೆ

ಗಂಡಹೆಂಡಿರು ಕೂಡಿ, ನಡುಕಾಡಲ್ಲಿ ಹೋಗುತಾರೆ ತಂದನಾನು ತಾನೆ
ತಿಟ್ಟತ್ತಿ ತಿರುಗ್ಯಾಳು ತವರೂರ ನೋಡುತಾಳೆ ತಂದನಾನು ತಾನೆ

ಬೇಡಾರ ಬಮ್ಮಣ್ಣ ಬೆನ್ನತ್ತಿ ಹೋಗುತಾನೆ ತಂದನಾನು ತಾನೆ
ನಡುಕಾಡಲ್ಲಿ ಹೋಗುತಾಳೆ ಬಾಲೆ ತಿಮ್ಮವ್ವನಾದರು ತಂದನಾನು ತಾನೆ
ತಿಮ್ಮವ್ವನ ಗಂಡಾನ ತಲೆ ಹಾರಿಸಿ ಹೊಡೆದಾನು ತಂದನಾನು ತಾನೆ
ಹಾರೀಸಿ ಹೊಡುದಾನು ಬೀಸಾದರು ಹೊಡುದಾನು ತಂದನಾನು ತಾನೆ
ತಿರುಗ್ಯಾದರು ನೋಡುತಾಳೆ ಸತ್ಯವಂತೆ ತಿಮ್ಮವ್ವ ತಂದನಾನು ತಾನೆ
ಬಮ್ಮಣ್ಣ ಬಮ್ಮಣ್ಣ ನಾನೊಂದು ಹೇಳುವೆ ಕೇಳು ತಂದನಾನು ತಾನೆ
ಗಾಳಿಯಾಗಿ, ಪೀಡಾಗಿ ಬಾಳುಗೊಡೋದಿಲ್ಲಾ ತಂದನಾನು ತಾನೆ
ಚುಳ್ಳುಗರ ಕಡಿಯಯ್ಯ ಬೇಗುದಿಂದ ಎನುತಾಳೆ ತಂದನಾನು ತಾನೆ
ಹಂಗಂದ ಮಾತೀಗೆ ಬಗ್ಗಿದಾನೆ ಬಮ್ಮಣ್ಣ ತಂದನಾನು ತಾನೆ
ಮನೆದೇವರು ನೆನೇದಾಳು ಮನದಲ್ಲಿ ತಿಮ್ಮವ್ವ ತಂದನಾನು ತಾನೆ
ದುರುಗೀಯ ನೆನೆದಾಳು ಮನದಲ್ಲಿ ತಿಮ್ಮವ್ವ ತಂದನಾನು ತಾನೆ
ಬಮ್ಮಣ್ಣನ ತಲೆಯನ್ನ ಹಾರೀಸಿ ಹೊಡೆದಾಳೂ ತಂದನಾನು ತಾನೆ
ಹಾರೀಸಿ ಹೊಡೆದಾಳು ಬೀಸಾದರು ಹೊಡೆದಾಳು ತಂದನಾನು ತಾನೆ
ಗೋಳುಗೋಳೆನ್ನುತಾಳೆ ಶಿವಸೋಕಮಾಡುತಾಳೆ ತಂದನಾನು ತಾನೆ
ಗಂಡನ ತಲೆಯನ್ನು ಮಡಲಲ್ಲಿ ಕಟ್ಟಿಕೊಂಡು ತಂದನಾನು ತಾನೆ
ಬಮ್ಮಣ್ಣನ ತಲೆಯನ್ನು ಎಡಗೈಯಲ್ಲಿ ಹಿಡುಕೊಂಡು ತಂದನಾನು ತಾನೆ
ಹೋಗಂತ ಹೋಗುತಾಳೆ ನಡುಕಾಡಲ್ಲಿ ಹೋಗುತಾಳೆ ತಂದನಾನು ತಾನೆ
ಹೋಗಂತ ಹಾದೀಲಿ ಹೆಬ್ಬಾಲದ ಮರದಡಿಯ ಮೆವುಂಟೂ ತಂದನಾನು ತಾನೆ
ಹೆಬ್ಬಾಲದ ಮರದಡಿಯ ಕುಂತುಕೊಂಡ ತಿಮ್ಮವ್ವ ತಂದನಾನು ತಾನೆ
ಗೋಳುಗೋಳೆನ್ನುತಾಳೆ ಶಿವಶೋಕಮಾಡುತಾಳೆ ತಂದನಾನು ತಾನೆ
ಇವಳ ಗಂಡನ ತಲೆಯನ್ನು ತೊಡೆಯಮೇಲೆ ಮಡಿಕೊಂಡು ತಂದನಾನು ತಾನೆ
ಬಮ್ಮಣ್ಣನ ತಲೆಯನ್ನು ಎಡಗಾಲಲ್ಲಿ ಒದ್ದುಕೊಂಡು ತಂದನಾನು ತಾನೆ
ಗೋಳುಗೋಳೆನ್ನುತಾಳೆ ಶಿವಸೋಕಮಾಡುತಾಳೆ ತಂದನಾನು ತಾನೆ

ತಂದೆ ತಾಯಿಗಾದ್ರು ದುರುಸಪನ ಬಡುದಾವು ತಂದನಾನು ತಾನೆ
ಅತ್ತೆಮಾವದಿರುಗು ದುರುಸಪನ ಬಡುದಾವು ತಂದನಾನು ತಾನೆ
ದುರುಸಪನ ಬಡುದಾವು ಬರಸಪುನ ಬಡುದಾವು ತಂದನಾನು ತಾನೆ
ನಮ್ಮ ಮಗಳ್ನಾದರು ನೋಡಬೇಕು ಕರದಾರು ಬರಬೇಕು ತಂದನಾನು ತಾನೆ
ಹೋರಿನಂಜೇಗೌಡರಾದರು ಬೇಗದಿಂದ ಹೊರುಟಾರೆ ತಂದನಾನು ತಾನೆ
ತಿಮ್ಮವ್ವನ ಅತ್ತೆಮಾವದಿರು ಬೇಗುದಿಂದ ಬರುತಾರೆ ತಂದನಾನು ತಾನೆ

ತಿಮ್ಮವನ ತಾಯಿ ತಂದೆ ಬೇಗುದಿಂದ ಬಂದಾರು ತಂದನಾನು ತಾನೆ
ಇದು ಏನೆ ತಿಮ್ಮವ್ವ ಅರಬಾಳು ತಿರಿಬಾಳು? ತಂದನಾನು ತಾನೆ

ಸಾಲ ಕೇಳಲಿಲ್ಲ ಸಕುನ ನುಡಿಯಲಿಲ್ಲ ತಂದನಾನು ತಾನೆ
ಅತ್ತಲಿಂದ ಬಂದವರಿಗೆ ಇತ್ತಲಿಂದ ಕೊಟ್ಟಿರಲ್ಲ ತಂದನಾನು ತಾನೆ
ನನ್ನ ಅರಬಾಳು ತಿರಿಬಾಳು ಗತಿಯಾತು ನನ ಶಿವನೆ ತಂದನಾನು ತಾನೆ

ಹಂಗಂದ ಮಾತೀಗೆ ಹೋರಿನಂಜೇಗೌಡಾರು ತಂದನಾನು ತಾನೆ
ಬಾರಾಲ ತಿಮ್ಮವ್ವ ಮನಿಗಾದರೆನ್ನುತಾರೆ ತಂದನಾನು ತಾನೆ
ಹಂಗಂದ ಮಾತೀಗೆ ಸತಿವಂತೆ ತಿಮ್ಮವ್ವ ತಂದನಾನು ತಾನೆ
ಶಿವಲೋಕದಿಂದಾಲಿ ಸಿರಿಗಂಧಾದ ಕೊರಡು ಬಂದೊ ತಂದನಾನು ತಾನೆ
ಅಂಬಾರದಿಂದಾಲಿ ಧೂಪಾದ ಕೊಡ ಬಂದೊ ತಂದನಾನು ತಾನೆ
ತಿಮ್ಮವ್ವನ ಕೊಂಡಕ್ಕೆ ಸಿರಿಗಂಧ ಅಣಿಯಾದೊ ತಂದನಾನು ತಾನೆ
ಅವಳ ಗಂಡಾನ ತಲೆಯನ್ನು ಮಡಿಲಲ್ಲಿ ಕಟ್ಟಿಕೊಂಡು ತಂದನಾನು ತಾನೆ
ಬಮ್ಮಣ್ಣನ ತಲೆಯನ್ನು ಎಡಗಯ್ಯಲ್ಲಿ ಹಿಡಿದುಕೊಂಡೂ ತಂದನಾನು ತಾನೆ
ಸತಿವಂತೆ ತಿಮ್ಮವ್ವ ಕೊಂಡನಾದರೂ ಬಳುಸಾಳು ತಂದನಾನು ತಾನೆ
ಬಮ್ಮಣ್ಣನ ತಲೆಯನ್ನು ಕೊಂಡಾಕೆ ಎಸೆದಳು ತಂದನಾನು ತಾನೆ
ಅವಳ ಗಂಡನ ತಲೆಯನ್ನು ಮಡಿಲಿಗೆ ಕಟ್ಟಿಕೊಂಡು ತಂದನಾನು ತಾನೆ
ಸತಿವಂತೆ ತಿಮ್ಮವ್ವ ಕೊಂಡನಾದರೂ ಏರುತಾಳೆ ತಂದನಾನು ತಾನೆ
ಶಿವಶಿವ ಎಂದೇಳಿ ಶಿವಲೋಕ ಸೇರಿದಳು ತಂದನಾನು ತಾನೆ
ಹರಹರ ಎಂದೇಳಿ ಹರಲೋಕ ಸೇರಿದಳು ತಂದನಾನು ತಾನೆ

ಸಂಗ್ರಹ: ಕನ್ನಡ ಜನಪದ ಕಥನ ಕಾವ್ಯಗಳು, ಸಂ. ನಾಡೋಜ ಎಚ್. ಎಲ್. ನಾಗೇಗೌಡ, ಕರ್ನಾಟಕ ಜಾನಪದ ಪರಿಷತ್ತು, ೨೦೦೭

ಬತಿಗೇಡಿ ರಾಜ

(ಪ್ರತಿಯೊಂದು ನುಡಿಗೆ 'ರನ್ನದ ಕೋಲ' ಎಂದು ಹೇಳಬೇಕು)

ಎಂದಿಲ್ಲೊಂದಿನ ಭಾವಿ ನೀರಿಗೆ ಹೋಗಿ
ಬತಿಗೇಡಿ ರಾಜ ಮನಸಿಟ್ಟ ॥ ೧ ॥

ಬತಿಗೇಡಿ ರಾಜ ಮನಸಿಟ್ಟ ಕೇಳ್ಯಾನ
ವಸ್ತಾವ ಕೊಡತೇನಿ ಒಳಗಾಗ ॥ ೨ ॥

ವಸ್ತಾವ ಒಡವಿ ಕೊಡುವೆ ಸೀರಿ ಕುಬ್ಬಸ ಕೊಡುವೆ
ಇರನಡಿಯ ನನ್ನ ರಂಗಮಾಲೊಳು ॥ ೩ ॥

ವಸ್ತಾ ಒಡವಿಯನೊಲ್ಲೆ ಸೀರಿ ಕುಬ್ಬುಸವನೊಲ್ಲೆ
ನನ ಬಡತನ ನನಗಿರಲೆ ॥ ೪ ॥

ಕುಂತಿರುನಿ ರಾಜ ಚಟ್ಟನ ಎದ್ದಾನ
ದೇವರ ಕ್ವಾಣ್ಯಾಗ ಮಲಗ್ಯಾನ ॥ ೫ ॥

ಅವರವ್ವ ಬಂದಾಲ ತೆಲಿಗುಂಬಿಲಿ ನಿಂತಾಳ
ಯಾಕ ನಮ ರಾಜ ಮನಗ್ಯಾನ ॥ ೬ ॥

ಊರ ಒಳಗೊಂದು ಹೆಣ್ಣ ಕಂಡೇನಿ ತಾಯಿ
ನೀಡಿ ನಮ್ಮ ಕಣ್ಣ ಕಲಕ್ಯಾವ ॥ ೭ ॥

ಅವರಪ್ಪಾದರ ಬಂದಾನ ಬಾಗಿಲಿಗೆ ನಿಂತಾನ
ಯಾಕ ನಮ್ಮ ರಾಜ ಮನಗ್ಯಾನ ॥ ೮ ॥

ಊರ ಒಳಗೊಂದು ಹೊಣ್ಣಕಂಡೇನಿ ತಂದೆ
ನೋಡಿ ನಮ್ಮ ಕಣ್ಣ ಕಲಕ್ಯಾವ ॥ ೯ ॥

ನೋಡಿ ನಮ್ಮ ಕಣ್ಣ ಗವದಾವ
ಬೇಗ ಮಂತ್ರಿನ್ನ ಕರಸೀರಿ ॥ ೧೦ ॥

ಮಂತ್ರಿನೂ ಬಂದಾನ ಬಾಗಿಲಿಗೆ ನಿಂತಾನ
ರಾಜರು ಪಾದಕ ನಮಸ್ಕಾರರಿ ॥ ೧೧ ॥

ರಾಜರು ಪಾದಕ ನಮಸ್ಕಾರ ರಾಜೇಂದ್ರ
ನಮ್ಮನ್ನು ಯಾಕ ಕರಿಸಿರಿ ॥ ೧೨ ॥

ಊರ ಒಳಗೊಂದು ಹೆಣ್ಣ ಕಂಡೇನಿ ಮಂತ್ರಿ
ನೋಡಿ ನಮ್ಮ ಕಣ್ಣ ಕಲಕ್ಯಾವ ॥ ೧೩ ॥

ನೋಡಿ ನಮ್ಮ ಕಣ್ಣ ಗವದಾವ
ಬೇಗ ದಾಸಿನ್ನ ಕರಸೀರಿ ॥ ೧೪ ॥

ದಾಸೀನೂ ಬಂದಾಲ ಬಾಗಿಲಿಗೆ ನಿಂತಾಳ
ರಾಜರು ಪಾದಕ ನಮಸ್ಕಾರರಿ ॥ ೧೫ ॥

ರಾಜರು ಪಾದಕ ನಮಸ್ಕಾರ ರಾಜೇಂದ್ರ
ಯಾಕ ಕರಸಿದಿರಿ ನಮ್ಮನ್ನ ॥ ೧೬ ॥

ಊರ ಒಳಗೊಂದು ಹೆಣ್ಣ ಕಂಡೇನಿ ದಾಸಿ
ನೋಡಿ ನಮ್ಮ ಕಣ್ಣ ಕಲಕ್ಯಾವ ॥ ೧೭ ॥

ಕುಂತಿರು ನೀ ದಾಸಿ ಚಟ್ಟನ ಎದ್ದಾಳ
ಹ್ವಾದಾಳ 'ಚೆಂಬುಳಿ' ಅರಮನಿಗೆ ॥ ೧೮ ॥

ಏನ ಚಂದ್ಯೆತಿ ಮನಿ ಮಾರ ॥ ೧೯ ॥

ಬಾರವ್ವ ಒಳಯಾಕ ಕುಂದ್ರವ್ವಾ ಮ್ಯಾಲಕ
ಅದು ಏನ ಹೇಳ ನಾಜುಕ ॥ ೨೦ ॥

ಮರತ ಮನಗ್ಯಾನ ನಮ್ಮ ರಾಜ
ನನ್ನ ಗಂಡನ ಕರಸಿ ಬಾಯಾನ ಹಲ್ಲ ಮುರಸಿ
ಆಗ ಹೋಗ ಬ್ಯಾಡ ಅವಮಾನ ॥ ೨೨ ॥

ಕುಂತಿರು ನೀ ದಾಸಿ ಚಟ್ಟನ ಎದ್ದಾಳ
ಬಂದಾಲ ರಾಜರರಮನಿಗೆ ॥ ೨೩ ॥

ಆ ಹೆಣ್ಣ ನಿಮಗೆ ಒಲಿಯದರಿ
ಆ ಹೆಣ್ಣ ನಮಗ ದೊರಿಯದರಿ ॥ ೨೪ ॥

ಕುದರಿ ಹಾಕರಿ ಹಾರ ಸುತ್ತ ಬಗರಿ ಜಾಲ
ನಡುವೆ ಇಡರಿ ನನ ಜಾಲ ॥ ೨೫ ॥

ನಡುವೆ ಇಡರಿ ನನ ಜಾಳ ರನ್ನದ
ಭಾವೀಯ ನೀರಿಗೆ ಬರತಾಳ್ರಿ ॥ ೨೬ ॥

ಓಣ್ಯಾನ ಅವ್ವಗಳಿರಾ ಓಣ್ಯಾನ ಅಕ್ಕಗಳಿರಾ
ಹೋಗಿಬರಿತೇನ್ರಿ ದೇವ್ರಗಿರಿಗೆ ॥ ೨೭ ॥

ಕುಂತಿರು ನೀ ರಾಜ ದಕ್ಕಂತ ಇಳದಾನ
ಚೆಂಬುಳಿ ಮುಂಗೈ ಹಿಡಿದಾನ ॥ ೨೮ ॥

ಏಳೇಳ ರಾಮಣ್ಣ ಎಷ್ಟೊತ್ತ ಮಲಗೀದ
ಚೆಂಬುಳಿಗೆ ಬಾಳ ಕಷ್ಟವ ॥ ೨೯ ॥

ಮನಗಿದ ರಾಮಣ್ಣ ಚಟ್ಟಂತ ಎದ್ದಾನ
ಕಣ್ಣೆರೆಡು ಕಾಲ ತೆಗೆದಾನ ॥ ೩೦ ॥

ಮುತ್ತೈದಿಯರ ಈ ಹಾಡ ಕಿವಿಗೊಟ್ಟ ಕೇಳಿರಿ
ಮುತ್ತೈದಿತನ ಕಡಿಯಾಸ್ ॥ ೩೧ ॥

ಸಂಗ್ರಹ: ಜನಪದ ಕಥನಗೀತ ಸಂಚಯ, ಸಂ. ಚೆನ್ನಬಸವ ನಾವಲಗಿ, ಶಕುಂತಲ ಚೆನ್ನಬಸವ, ಕನಕ ಸಾಹಿತ್ಯ ಪ್ರತಿಷ್ಠಾನ, ೨೦೦೨

ಟಿಪ್ಪಣಿ: ಕಡ್ಲಿಮಟ್ಟಿ ಕಾಶೀಬಾಯಿ ಲಾವಣಿಯು ಹೆಚ್ಚು ಕಡೆ ಸಿಗುವುದರಿಂದ ಮತ್ತು ವೃಥಾ ಮಹಾಪ್ರಬಂಧದ ಗಾತ್ರ ಹೆಚ್ಚಾಗುವುದರಿಂದ ಈ ಮಹಾಪ್ರಬಂದದಲ್ಲಿ ಅದನ್ನು ಸೇರಿಸಿರುವುದಿಲ್ಲ.

ಹೆಚ್ಚಿನ ಓದಿಗೆ: ಆಯ್ದ ಜನಪದ ಕಥನ ಗೀತೆಗಳು, ಸಂ. ಡಾ. ಬಿ.ಬಿ ಹೆಂಡಿ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮

ಅಧ್ಯಾಯ ೪

ಲಾವಣಿ ಮತ್ತು ಕಥನಗೀತೆಗಳಲ್ಲಿ ಮೌನ ವರ್ಗಸಂಘರ್ಷ

ಅಧ್ಯಾಯ ೪
ಲಾವಣಿ ಮತ್ತು ಕಥನಗೀತೆಗಳಲ್ಲಿ ಮೌನ ವರ್ಗಸಂಘರ್ಷ

ಮೌನ ಸಂಘರ್ಷ

ಸಂಘರ್ಷವಿರದ ಸಮಾಜವನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಆದಿಯಿಂದ ಇಲ್ಲಿಯವರೆಗೂ ಒಂದಲ್ಲ ಒಂದು ರೀತಿಯಲ್ಲಿ ಸಮಾಜದಲ್ಲಿ ಉಳ್ಳವರು ಮತ್ತು ಇಲ್ಲದವರ ನಡುವೆ ಸಂಘರ್ಷ ನಡೆಯುತ್ತಲೇ ಇದೆ. ಸಂಘರ್ಷದಲ್ಲಿ ವ್ಯಕ್ತಸಂಘರ್ಷ, ಮತ್ತು ಅವ್ಯಕ್ತ ಸಂಘರ್ಷವೆಂಬ ಎರಡು ವಿಧದ ಸಂಘರ್ಷಗಳನ್ನು ನಾವು ಕಾಣಬಹುದು. ವ್ಯಕ್ತಸಂಘರ್ಷ ಎಲ್ಲರಿಗೂ ಗೊತ್ತಾಗುವ ಹಾಗೆ ನಡೆಯುವುದಾಗಿದ್ದು, ಅವ್ಯಕ್ತ ಸಂಘರ್ಷ ಎಷ್ಟೇ ನೋವು, ಸಂಕಟ, ತೊಳಲಾಟಗಳು ಇದ್ದಾಗಲೂ ಅದನ್ನು ಆಂತರ್ಯದಲ್ಲಿಯೇ ನುಂಗಿಕೊಂಡು ಹೊರಪ್ರಪಂಚದ ಅರಿವಿಗೆ ಬರದ ಹಾಗೆ ತಮ್ಮ ಮೇಲೆ ಆಗುತ್ತಿರುವ ಶೋಷಣೆಯನ್ನು ಪ್ರತಿಭಟಿಸುವುದು. ವ್ಯಕ್ತ ಸಂಘರ್ಷಕ್ಕೆ ಹೋಲಿಸಿಕೊಂಡರೆ ಅವ್ಯಕ್ತ ಸಂಘರ್ಷವೇ ಹೆಚ್ಚು ಎನ್ನಬಹುದು. ಅವ್ಯಕ್ತ ಸಂಘರ್ಷವೇ ಹೆಚ್ಚಾಗಿ ಕಾಣಿಸಿಕೊಳ್ಳಲು ಮುಖ್ಯಕಾರಣ ಕೆಳವರ್ಗದ ಜನರ ಅಸಹಾಯಕತೆ. "ಒಂದು ಇಂದ್ರಿಯ ಗಮ್ಯ ಅನುಭವವಾಗಿ ನೋವು ಅದನ್ನು ಅನುಭವಿಸುತ್ತಿರುವವರ ಹೊರತು ಬೇರೆ ಯಾರಿಗೂ ತಲುಪುವುದು ಸಾಧ್ಯವಿಲ್ಲ. ನೋವನ್ನು ಮತ್ತೊಬ್ಬರಿಗೆ ಸಂವಹನ ಮಾಡುವುದು ಅಸಾಧ್ಯವೆನಿಸುವಷ್ಟು ಕಷ್ಟ. ಏಕೆಂದರೆ ನೋವಿನ ವರ್ಣನೆಗೆ ಅದನ್ನು ಹಿಡಿದುಕೊಡುವ ಶಕ್ತಿ ಇರುವುದಿಲ್ಲ. ನೋವು ಜಾಸ್ತಿಯಾದಂತೆ 'ಮಾತು' ಕಡಿಮೆಯಾಗುತ್ತಾ ಹೋಗುವುದು ಗಮನಿಸಬೇಕಾದ ಸಂಗತಿ. ನಿಜವಾದ ನೋವು ಮಾತನ್ನು ನಿರಾಕರಿಸುವುದಷ್ಟೇ ಅಲ್ಲ. ಆ ಸಾಮರ್ಥ್ಯವನ್ನೇ ನಾಶ ಮಾಡಿ ಬಿಡುತ್ತದೆ.[೧] ನೋವುಗಳು ಪ್ರಕಟಗೊಳ್ಳುವ ಐದು ಆಯಾಮಗಳನ್ನು ಗುರುತಿಸಿ ಅದರ ವಿವರಗಳನ್ನು ರಾಘವೇಂದ್ರರಾವ್ ಅವರು ಹೀಗೆ ನೀಡುತ್ತಾರೆ.

ಅ) **ಶಾರೀರಿಕನೆಲೆ:** ಹಸಿವು, ರೋಗ, ಅತಿಲೈಂಗಿಕತೆ, ಹಿಂಸೆ, ಅಂಗವಿಕಲತೆ ಹಾಗೂ ಮತಿವಿಕಲತೆಗಳ ಫಲವಾದ ದೇಹದ ನೋವುಗಳು

ಆ) **ಮಾನಸಿಕ ನೆಲೆ:** ಭಾವನಾತ್ಮಕವಾದ ನೋವು, ಸ್ಪರ್ಧೆ, ಈರ್ಷೆ, ನಿರಾಶೆ, ಮರಣ, ಭಯ ಇತ್ಯಾದಿ

ಇ) **ಕೌಂಟುಬಿಕ ನೆಲೆ:** ದೇಶ, ಕಾಲ, ಸಮಾಜಗಳ ಹಿನ್ನೆಲೆಯಲ್ಲಿ ಆದರೆ ಕುಟುಂಬದ ಚೌಕಟ್ಟಿನೊಳಗೆ, ಅಂತರ್ ಮಾನುಷ್ಯ ಸಂಬಂಧಗಳಲ್ಲಿ ಹುಟ್ಟಿಕೊಳ್ಳುವ ನೋವುಗಳು (ಸ್ತ್ರೀ-ಪುರುಷ ಸಂಬಂಧದ ಸಂಕೀರ್ಣದ ನೆಲೆಗಳೂ ಸೇರಿದಂತೆ)

ಈ) **ಆರ್ಥಿಕ ಹಾಗೂ ಸಾಮಾಜಿಕ ನೆಲೆ:** ವರ್ಗ, ವರ್ಣ, ವ್ಯವಸ್ಥೆಗಳಿಂದಲೂ ಉಂಟಾದ ನಿಯಂತ್ರಿತವಾದ ಹಲವು ಬಗೆಯ ನೋವುಗಳು, ಎಲ್ಲಾ ರೀತಿಯ ಅಸಮಾನತೆ ಇದರ ಮುಖ್ಯ ಕಾರಣ

ಉ) **ತಾತ್ವಿಕ ನೆಲೆ:** "ಮನುಷ್ಯ ತನ್ನ ಬದುಕಿನ ಬಗೆಗೆ ಕೆಲವು ಮಹತ್ವದ ಪ್ರಶ್ನೆಗಳನ್ನು ಕೇಳಿಕೊಂಡು, ದೊರೆಯುವ ಉತ್ತರಗಳ ಫಲವಾಗಿ ಅನುಭವಿಸುವ ನೋವು, ಮನುಷ್ಯ ಸಂಬಂಧಗಳ ಅರ್ಥಶೂನ್ಯತೆ, ಜೀವನದ ಅರ್ಥಶೂನ್ಯತೆ, ಬದಲಾವಣೆಯ ಬಗೆಗಿನ ಭ್ರಮನಿರಸನದ ಫಲವಾಗಿ ಯಾತನೆಗಳು ಇಲ್ಲಿ ಸೇರಿಕೊಳ್ಳುತ್ತವೆ. ಒಂದು ರೀತಿಯ ಅಸಹಾಯಕತೆ ಇಂಥಾ ನೋವಿಗೆ ಮುಖ್ಯ ಕಾರಣ"[೨] ಮೇಲ್ವರ್ಗದ ಜನರ ವಿರುದ್ಧವಾಗಿ ಸಿಡಿದೆದ್ದು ನಿಂತು ಪ್ರತಿಭಟಿಸಲು ಪೂರಕವಾದ ವಾತಾವರಣ ಬಹಳಷ್ಟು ಸಂದರ್ಭಗಳಲ್ಲಿ ಇರುವುದಿಲ್ಲ. ಮೇಲ್ವರ್ಗದ ಜನರ ದರ್ಪ, ದಬ್ಬಾಳಿಕೆಗಳಿಗೆ ಪ್ರಾರಂಭದಿಂದಲೂ ಒಳಗಾದ ಜನ ಅವರ ಅಡಿಯಾಳಾಗಿಯೇ ದುಡಿಯುತ್ತಾ ಅವರ ವಿರುದ್ಧವೇ ತಿರುಗಿಬೀಳಬೇಕಾದಂತಹ ಸಂದರ್ಭ ಬಂದಾಗ ಎಷ್ಟೋ ಸಂದರ್ಭಗಳಲ್ಲಿ ಅಸಹಾಯಕರಾಗಿರುತ್ತಾರೆ. ಕೆಳವರ್ಗದ ಕೂಲಿಕಾರರು, ಕಾರ್ಮಿಕರು ತಮಗಾಗುತ್ತಿರುವ ಅನ್ಯಾಯ, ಶೋಷಣೆಗಳನ್ನು ವ್ಯಕ್ತಪಡಿಸಲು ಹೋಗುವುದಿಲ್ಲ. ಇಂತಹ ಅವ್ಯಕ್ತ ಸಂಘರ್ಷಗಳೇ ಎಲ್ಲಾ ಕ್ಷೇತ್ರಗಳಲ್ಲಿಯೂ ಹೆಚ್ಚಾಗಿ ಕಂಡುಬರುತ್ತದೆ. ಅದರಲ್ಲೂ ಜನಪದ ಸಾಹಿತ್ಯದಲ್ಲಿ ಇಂತಹ ಸಂಘರ್ಷಗಳೂ ಹಾಸುಹೊಕ್ಕಾಗಿವೆ.

ಜನಪದ ಸಾಹಿತ್ಯದಲ್ಲಿ ಅದರಲ್ಲೂ ಲಾವಣಿಗಳಲ್ಲಿ ಕಥನಗೀತೆಗಳಲ್ಲಿ ಕಂಡುಬರುವ ಮೌನಸಂಘರ್ಷವನ್ನು ಕೆಳಗಿನ ಕೆಲವು ಭಾಗಗಳಿಂದ ಗಮನಸೋಣ.

೪.೧ ಕೆರೆಗೆ ಹಾರ:

ಜನಪದ ಸಾಹಿತ್ಯದಲ್ಲಿ 'ಕೆರೆಗೆ ಹಾರ' ಬಹಳ ಪ್ರಮುಖವಾದ ಮತ್ತು ವಿಶಿಷ್ಟವಾದ ಕಥನಗೀತೆ ಮಳೆಬೆಳೆಗಳ ಅನಿಶ್ಚಿತತೆ, ಕೃಷಿವ್ಯವಸ್ಥೆಯ ಅಸ್ತವ್ಯಸ್ತತೆಗಳಿಂದಾಗಿ ಅಂದಿನ ಜನಸಮುದಾಯಗಳ ಬದುಕಿನಲ್ಲಿ ಕೆರೆ ಎನ್ನುವುದು ಗಂಗೆಗೆ ಸಂಕೇತವಾಗಿ ಪೂಜೆಗೊಳ್ಳುವಷ್ಟು, ಬಲಿ ತೆಗೆದುಕೊಳ್ಳುವಷ್ಟು, ಬಲಿ ತೆಗೆದುಕೊಳ್ಳುವಷ್ಟು ವಿಶಿಷ್ಟ ಸ್ಥಾನ ಪಡೆಯಿತು. ಕೆರೆಗೆ ನೀರು ಇಲ್ಲದಿದ್ದರೆ ತಮಗೆ ತೊಂದರೆಯಾಯಿತೆಂದು

ಜನ ಅರಸರನ್ನು ಕೆರೆ ಕಟ್ಟಿಸಲು ಅಥವಾ ಕೆರೆ ದುರಸ್ಥಿ ಮಾಡಿಸಲು ಕೇಳುತ್ತಿದ್ದಂತೆ ಶಾಸನದಲ್ಲಿ ಉಲ್ಲೇಖಗಳು ದೊರಕುತ್ತವೆ.

ಕೆರೆಗೆ ಹಾರ ಕಥನಗೀತೆ ಕಲ್ಲನಕೇರಿಯ ಮಲ್ಲನಗೌಡ ಒಂದು ಕೆರೆಯನ್ನು ಕಟ್ಟಿಸಿದ. ಎನ್ನುವ ವಿವರಣೆಯೊಂದಿಗೆ ಪ್ರಾರಂಭವಾಗುತ್ತದೆ. ಕೆರೆ ಕಟ್ಟಿಸಿದ್ದಾಯಿತು. ಆದರೆ ಅದಕ್ಕೆ 'ಸೆರೆಮುಕ್ಕು' ನೀರಿಲ್ಲ. ಸಂಪ್ರದಾಯದಂತೆ ಹೊತ್ತಿಗಿ ತಗಿಸಿ ಕೇಳುತ್ತಾರೆ. ಜೋಯಿಸರು ನೀರು ಬಾರದೆ ಇರುವುದಕ್ಕೆ ದೇವರು ದಿಂಡರು ದೆವ್ವ ಭೂತಗಳ ಕಾಟವೇನೂ ಇಲ್ಲ. ಕೆರೆ 'ಹಾರ' ಬೇಡುತ್ತದೆ. ಅಂದರೆ 'ಬಲಿ' ಕೇಳುತ್ತದೆ. ಹಿರಿಸೊಸೆ ಮಲ್ಲವ್ವನನ್ನು ಕೆರೆಗೆ ಹಾರವಾಗಿ ಕೊಡಬೇಕೆಂದು ಜೋಯಿಸರ ಜೊತೆ ಚರ್ಚಿಸಿ ಮಲ್ಲನಗೌಡರು ಮನೆಗೆ ಬರುತ್ತಾರೆ. ಮನೆಯಲ್ಲಿ ಈ ವಿಷಯದ ಬಗ್ಗೆ ಚರ್ಚೆಯಾಗುತ್ತದೆ. 'ಹಿರಿಸೊಸಿನ್ನ ಕೊಟ್ಟರ ಹಿರಿತನಕ ಯಾರಿಲ್ಲ. ಆದ್ದರಿಂದ ಕಡೆಸೊಸಿ ಭಾಗೀರತಿಯನ್ನು ಹಾರಕೊಡುವುದು ಎಂದು ನಿರ್ಣಯವಾಗುತ್ತದೆ. ಆದರೆ ಆಗ ಮನೆಯಲ್ಲಿಯೇ ಇದ್ದ ಭಾಗೀರತಿಯ ಅಭಿಪ್ರಾಯವನ್ನು ಕೇಳುವುದಿಲ್ಲ. ಆರ್ಥಿಕ ಹಿನ್ನಲೆಯಲ್ಲಿ ಭಾಗೀರತಿಯು ಆ ಮನೆಯಲ್ಲಿ ಕೆಳವರ್ಗಕ್ಕೆ ಸೇರಿದವಳಾಗಿರುತ್ತಾಳೆ. ಯಾವುದೇ ರೀತಿಯ ಆರ್ಥಿಕ ಜವಾಬ್ದಾರಿ ಅಥವಾ ಆರ್ಥಿಕ ಯಜಮಾನಿಕೆ ಆಕೆಯ ಬಳಿಯಿರುವುದಿಲ್ಲ. ಏಕೆಂದರೆ ಅತ್ತೆಯ ಮನೆಯಲ್ಲಿ ಅತ್ತೆ ಆರ್ಥಿಕ ಯಜಮಾನಿಕೆಯನ್ನು ಹೊಂದಿರುತ್ತಾಳೆ. ನಂತರ ಅದು ಹಿರಿಯ ಸೊಸೆಗೆ ವರ್ಗವಾಗುತ್ತದೆ. ಸಣ್ಣಸೊಸಿ ಭಾಗೀರತಿಗೆ ಕೆರೆಗೆ ಹಾರವಾಗಿ ತನ್ನನ್ನು ಕೊಡುವುದು ಗೊತ್ತಾಗುತ್ತದೆ. ಒಂದು ನಿರ್ಧಾರವನ್ನು ಆಕೆಯ ಮೇಲೆ ಹೇರಲಾಗುತ್ತದೆ. ಆಕೆಯ ಒಪ್ಪಿಗೆಯನ್ನು ಪಡೆದುಕೊಳ್ಳುವ ಸೌಜನ್ಯವನ್ನು ಕೂಡ ಯಾರೂ ಪ್ರದರ್ಶಿಸುವುದಿಲ್ಲ. ಭಾಗೀರತಿಗೆ ನೋವು, ದುಃಖ, ಈ ನಿರ್ಧಾರದ ವಿರುದ್ಧ ಬಂಡೇಳಬೇಕೆಂಬ ಇಂಗಿತವಿದ್ದರೂ ಆ ಕಾಲಘಟ್ಟದ ಹೆಣ್ಣಿನ ಸ್ಥಾನಮಾನಗಳನ್ನು ಗಮನಿಸಿ ನೋವನ್ನು ನುಂಗಿಕೊಂಡು ಸುಮ್ಮನಿರಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿರುತ್ತದೆ. ಯಾವುದೇ ಆರ್ಥಿಕ ಮಾಲಿಕತ್ವವನ್ನು ಹೊಂದಿಲ್ಲದ ಭಾಗೀರತಿಯಂತಹ ಅಮಾಯಕ ಹೆಣ್ಣು ಅದನ್ನು ನೇರವಾಗಿ ಪ್ರತಿಭಟಿಸಲು ಸಾಧ್ಯವಾಗದೇ, ಅತ್ತೆಯಿಂದ ಅನುಮತಿಪಡೆದು ತವರು ಮನೆಗೆ ಹೋಗುತ್ತಾಳೆ.

'ಎಂದಿಲ್ಲದ ಭಾಗೀರತಿ ಇಂದ್ಯಾಕ ಬಂದೆವ್ವ?
ಬಾಡಿದ ಮಾರ್‍ಯಾಕ ಕಣ್ಣಾಗ ನೀರ್‍ಯಾಕ?

ಇದು ತವರುಮನೆಗೆ ಹೋದ ಭಾಗೀರತಿಗೆ ತಂದೆ ಕೇಳಿದ ಪ್ರಶ್ನೆ. ತನಗೆ ತಿಳಿದ ವಿಷಯ ಮರೆಮಾಚಿ 'ನಮ್ಮ ಅತ್ತೆ ಮಾವ ಬ್ಯಾರೆ ಇಡುತಾರಂತೆ' ಎನ್ನತ್ತಾಳೆ. 'ಹೊಲಮನಿ ಕೊಡತೇನು ಚಿಂತಿಸಬೇಡ' ಎಂದು ಅದಕ್ಕೆ ಪ್ರತ್ಯುತ್ತರವಾಗಿ ತಂದೆ ಹೇಳುತ್ತಾರೆ. ಭಾಗೀರತಿಗೆ ತಂದೆಯ ಮನೆಯಲ್ಲಿ ಸಿಕ್ಕಷ್ಟು ಸಾಮಾಜಿಕ ಸ್ವಾತಂತ್ರ್ಯ, ಆರ್ಥಿಕ ಸ್ವಾತಂತ್ರ್ಯ, ಮಾವನ ಮನೆಯಲ್ಲಿ ಸಿಗುತ್ತಿಲ್ಲವೆಂದು ಸಹಜವಾಗಿ ತಂದೆಗೆ ಅನಿಸಿದ್ದರಿಂದ ಹೊಲಮನೆ ಕೊಡುತ್ತೇನೆಂದು ಹೇಳಿ, ಸಂತೈಸಲು ಪ್ರಯತ್ನಿಸುತ್ತಾರೆ. 'ಹೊಲಮನಿ ಒಯ್ದು ಹೊಳಿದಂಡ್ಯಾಗ್ಹಾಕಪ್ಪ' ಎಂದು ಮಗಳು ಉತ್ತರಿಸಿ ಸ್ವಲ್ಪ ಮುಂದೆ ಬರುವಷ್ಟರಲ್ಲಿ ತಾಯಿ

ಕಾಣುತ್ತಾಳೆ. ತಾಯಿಗೆ ಮಗಳ ಕಣ್ಣೀರು ಕಾಣುತ್ತದೆ. ದುಃಖಕ್ಕೆ ಕಾರಣ ಕೇಳಿದಾಗ ತಮ್ಮನ್ನು ಬೇರೆ ಇಡುವ ವಿಚಾರ ಹೇಳುತ್ತಾಳೆ. ಅದಕ್ಕೆ 'ವಾಲಿ ಜೋಡು ಕೊಡುತ್ತೇನೆ ಚಿಂತಿಸಬೇಡ' ಎಂದು ತಾಯಿಯ ಸಮಾಧಾನ 'ವಾಲೀಯ ಜೋಡೋಯ್ದು ವಲಿಯಾಗ ಹಾಕವ್ವ' ಎಂದು ಮಾತು ಮುರಿದ ಭಾಗೀರತಿ, ಅಕ್ಕನ ಬಳಿ ಬಂದಾಗ ಅಕ್ಕ 'ಬ್ಯಾರೆ ಇಟ್ಟರೆ ಇಡಲಿ ಮಕ್ಕಳನ್ನು ಜೋಡಿಗೆ ಕಳಿಸುತ್ತೇನೆ' ಎಂದು ಧೈರ್ಯ ಹೇಳುತ್ತಾಳೆ. ಅದಕ್ಕೆ ಭಾಗೀರತಿ 'ಮಕ್ಕಳಿದ್ದರೇನಕ್ಕ ದುಕ್ಕ ಕಳದಾವೇನ? ಎಂದು ತವರು ಮನೆ ಬಿಟ್ಟು ತನ್ನ ಗೆಳತೀಯ ಮನೆಗೆ ಬರುತ್ತಾಳೆ. ಅಳುವ ಭಾಗೀರತಿಯನ್ನು ಕಂಡ ಗೆಳತಿಯು 'ಎಂದಿಲ್ಲದ ಭಾಗೀರತಿ ಇಂದ್ಯಾಕ ಅಳುವು' ಎನ್ನುವ ಪ್ರಶ್ನೆಗೆ ಅಂಜಿ, ಅಳುಕಿ ಹೇಳಲೇ ಗೆಳತಿ ಹೇಳಲೆ' ಎಂದು ಒಂದು ಕ್ಷಣ ಹಿಂಜರಿಯುತ್ತಾಳೆ. 'ಗೆಳತಿ ಅಂಜಬ್ಯಾಡ ಗೆಳತಿ ಅಳುಕಬ್ಯಾಡ ಗೆಳತಿ' ಎಂದು ಧೈರ್ಯ ಕೊಡುತ್ತಾಳೆ.

ಆಂತರ್ಯದ ಆತಂಕಗಳನ್ನು, ನೋವುಗಳನ್ನು, ಭಾವನೆಗಳನ್ನು ಯಾರ ಜೊತೆಯಲ್ಲಿ ಹಂಚಿಕೊಳ್ಳದೇ ಹೋದರೂ ಗೆಳೆಯ-ಗೆಳತಿಯರ ಜೊತೆಯಲ್ಲಿ ಹಂಚಿಕೊಳ್ಳುವುದಿದೆ. ಹಾಗೆಯೇ ಇಲ್ಲಿ ಭಾಗೀರತಿ ತನ್ನ ನೋವು, ತಲ್ಲಣಗಳನ್ನು ತನ್ನ ಗೆಳತಿಯ ಜೊತೆಯಲ್ಲಿ ಹಂಚಿಕೊಳ್ಳುತ್ತಾಳೆ. 'ನಮ್ಮತ್ತೆ ನಮ್ಮಾವ ಕೆರೆಗ್ಹಾರ ಕೊಡತಾರಂತ' ಎನ್ನುವ ವಾಸ್ತವ ಸಂಗತಿಯನ್ನು ಹೇಳುತ್ತಾಳೆ. ಇದಕ್ಕೆ ಉತ್ತರವಾಗಿ 'ಕೊಟ್ಟಾರೆ ಕೊಡಲ್ಹೇಳು ಇಟ್ಹಾಂಗ ಇರಬೇಕು' ಎಂದು ಸಮಾಧಾನಪಡಿಸುತ್ತಾಳೆ. ಆ ಮೂಲಕ ಆ ಕಾಲಘಟ್ಟದ ಸಾಂಪ್ರದಾಯಿಕ ಹೆಣ್ಣಿನ ಕರ್ತವ್ಯವೇನು? ಎನ್ನುವುದನ್ನು ಮನವರಿಕೆ ಮಾಡಿಕೊಡುತ್ತಾಳೆ. ಭಾರತೀಯ ಸಂಸ್ಕೃತಿಯ ಹಿನ್ನಲೆಯಲ್ಲಿ ನೋಡುವುದಾದರೆ ಹೆಣ್ಣಿನ ಸ್ಥಾನಮಾನಗಳನ್ನು ನಗಧಿಗೊಳಿಸುವುದು ತವರುಮನೆಯಾಗಿರದೆ ಅತ್ತೆ-ಮಾವರ ಮನೆಯಾಗಿರುತ್ತದೆ. ಹೀಗೆ ಉತ್ತರವನ್ನು ಪಡೆದುಕೊಂಡು ಹೊರಟ ಭಾಗೀರತಿ ಅತ್ತೆಯ ಅಣತಿಯಂತೆ ಸರ್ರನೆ ಹೋಗಿ ಭರ್ರನೆ ಬಂದುಬಿಡುತ್ತಾಳೆ.

ಬೇಳೆ ಹಸನುಮಾಡುತ್ತಾ ಕುಳಿತ ಸೊಸೆಯ ಕಣ್ಣೀರು ಕಂಡ ಮಾವ ಕಾರಣ ಕೇಳುತ್ತಾನೆ. 'ಬ್ಯಾಳಾಗಿನ ಹಳ್ಳು ಬಂದು ಕಣ್ಣಾಗೆರಚಿದವು' ಎನ್ನುತ್ತಾಳೆ. ಅಕ್ಕಿ ಹಸನು ಮಾಡುವಾಗ ಇದೇ ಪ್ರಶ್ನೆ ಕೇಳಿದರೆ ಅತ್ತೆಗೂ 'ಅಕ್ಕ್ಯಾಗಿನ ಹಳ್ಳೊಂದ ಕಣ್ಣಾಗ ಬಿತ್ತತ್ತಿ' ಎಂದು ಉತ್ತರಿಸುತ್ತಾಳೆ. ಅಂದರೆ ತನಗೆ ಆಗುತ್ತಿರುವ, ವೇದನೆಯನ್ನು ಹೊರಗೆಡಹದೆ ಆಂತರ್ಯದಲ್ಲೇ ಇಟ್ಟುಕೊಂಡು ಕೊರಗುತ್ತಾಳೆ. ಅತ್ತೆ-ಮಾವರಿಗೆ ಆಕೆಯ ಮಾನಸಿಕ ವೇದನೆಯ ಅರಿವು ಇದ್ದರೂ ಪ್ರಶ್ನಿಸುವ ಔಚಿತ್ಯವನ್ನು ಇಲ್ಲಿ ಗಮನಸಬೇಕಾಗುತ್ತದೆ. ಭಾಗೀರತಿ ಮಾನಸಿಕವಾಗಿ ಜರ್ಜರಿತಳಾಗಿರುತ್ತಾಳೆ. ಒಂದು ಹೆಣ್ಣಿನ ಜೀವ ಬಲಿಯಾಗಿ ಹೋಗುತ್ತಿರುವ ಸಂದರ್ಭದಲ್ಲಿ ಜೀವಕ್ಕೆ ಬೆಲೆಯಿಲ್ಲದ ಹಾಗೆ ಮನೆಯಲ್ಲಿ ಸಂಭ್ರಮ ಮನೆಮಾಡಿರುತ್ತದೆ. ಶ್ಯಾವಿಗೆ ಪಾಯಸ, ಅನ್ನ ಎಲ್ಲಾ ಸಿದ್ಧವಾಗಿರುತ್ತದೆ. 'ಹತ್ತು ಕೊಪ್ಪರಿಕೆ ನೀರು ಉಕ್ಕಿ ಮಳ್ಳತ್ತಿತ್ತು' ನಿಂಗವ್ವ, ನೀಲವ್ವ, ಗಂಗವ್ವ, ಗೌರವ್ವ, ಜಳಕಮಾಡಿ ಗಂಗವ್ವನ ಪೂಜೆಗೆ ಹೋಗಬೇಕು. 'ನಿಂಗವ್ವ ನೀ ಬಾರಾ, ನೀಲವ್ವ ನೀ ಬಾರಾ, ಗಂಗವ್ವ ನೀ ಬಾರಾ, ಗೌರವ್ವ ನೀ ಬಾರಾ' ಎಂದು

ಭಾಗೀರತಿಯನ್ನು ಹೊರತುಪಡಿಸಿ ಇನ್ನುಳಿದ ಸೊಸೆಯರನ್ನು ಅತ್ತೆ ಕರೆದಾಗ ಇವರು ಹಿಂದೆ ಮುಂದೆ ನೋಡುತ್ತಾರೆ. ಇಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆ. ಭಾಗೀರತಿಯನ್ನು ಜಳಕ ಮಾಡಲು ಕರೆಯದೆ ಮೊದಲು ಇನ್ನುಳಿದ ಸೊಸೆಯಂದಿರನ್ನು ಅತ್ತೆ ಕರೆಯಲು ಕಾರಣವೇನು? ಅತ್ತೆ-ಭಾಗೀರತಿಯ ನಡುವೆ ಏನಾದರೂ ಘರ್ಷಣೆ ನಡೆದಿರುತ್ತದೆಯೇ? ಈ ಮೊದಲೆ ನಿರ್ಧಾರವಾಗಿರುವ ಹಾಗೆ ಭಾಗೀರತಿ ಕೆರೆಗೆ ಹಾರವಾಗಲು ನಿರಾಕರಿಸುತ್ತಾಳೆಯೇ? ಈ ಎಲ್ಲಾ ಪ್ರಶ್ನೆಗಳು ಉದ್ಭವವಾದರೂ ಕೂಡ ಕೊನೆಗೆ ಅತ್ತೆಯ ಸೂಚನೆಯ ಮೇರೆಗೆ ಭಾಗೀರತಿಯೇ ಮೊದಲು ಜಳಕಮಾಡಿ ಸಿದ್ಧಳಾಗುತ್ತಾಳೆ. 'ಬಂಗಾರ ಬುಟ್ಟಿ ಸಿಂಗಾರ ಸಿಂಬಿ' ಮಾಡಿಕೊಂಡು ಹೊತ್ತು, ಭಾಗೀರತಿ ಮುಂದೆ ಹಿಂದೆ ಹಿಂದೆ ಉಳಿದವರು ಕೆರೆಗೆ ಬಂದು 'ಗಂಗಿಪೂಜೆ' ಮಾಡುತ್ತಾರೆ. ವಿಭೂತಿ ಧರಿಸುವುದು, ಬಿಲ್ವಪತ್ರಿ ಏರಿಸುವುದು, ಸೀರಿಕುಬಸಾ, ಹೂದಂಡಿ ಎಲ್ಲಕ್ರಮ ಮುಗಿದ ಬಳಿಕ ನೈವೇದ್ಯವಾಯಿತು. ಎಲ್ಲರೂ ಕೂತು ಊಟಮಾಡುತ್ತಾರೆ. ಉಳಿದ ಅಡಿಕೆಯನ್ನು ಬುಟ್ಟಿಯಲ್ಲಿ ತುಂಬಿಕೊಂಡು ಕೆರೆದಂಡೆ ಮೇಲೆ ಬರುವಷ್ಟರಲ್ಲಿ ಕೆರೆಯ ಒಳಗೆ 'ಬಂಗಾರಬಟ್ಟಲ' ಮರೆತು ಬಂದಿರುತ್ತಾರೆ. ಅದನ್ನು ತರಲು ಗಂಗವ್ವ, ಗೌರವ್ವ, ನಿಂಗವ್ವ, ನೀಲವ್ವ, ಯಾರೂ ಒಪ್ಪುವುದಿಲ್ಲ. ಉದ್ದೇಶಪೂರ್ವಕವಾಗಿಯೇ ಬಂಗಾರದ ಬಟ್ಟಲನ್ನು ಕೆರೆಯಲ್ಲಿ ಬಿಟ್ಟು ಬಂದಿರಲಾಗಿರುತ್ತದೆ. ಇದರ ಹಿಂದೆ ಇದ್ದ ಉದ್ದೇಶ ಭಾಗೀರತಿಯನ್ನು ಒಬ್ಬಂಟಿಯಾಗಿ ಪುನಃ ಕೆರೆಗೆ ಕಳುಹಿಸುದಾಗಿರುತ್ತದೆ. ಯಾವಾಗ ಯಾರು ಪುನಃ ಕೆರೆಗೆ ಹೋಗಲು ಒಪ್ಪಿಕೊಳ್ಳುವುದಿಲ್ಲವೋ ಆಗ ಅತ್ತೆಯ ಆದೇಶದಂತೆ ಸಣ್ಣ ಸೊಸಿ ಭಾಗೀರತಿಯೇ ಹೋಗಬೇಕಾಗುತ್ತದೆ. ಒಂದು ನಿರ್ಧಾರವನ್ನು ಭಾಗೀರತಿಯ ಮೇಲೆ ಒತ್ತಾಯಪೂರ್ವಕವಾಗಿ ಹೇರಲಾಗಿರುತ್ತದೆ. ಈ ರೀತಿಯಲ್ಲಿ ತನ್ನ ಮೇಲೆ ಆಗುತ್ತಿರುವ ಶೋಷಣೆಯನ್ನು ಅಸಹಾಯಕವಾಗಿ ಒಪ್ಪಿಕೊಂಡು ತನ್ನ ಮನಸ್ಸಿನಲ್ಲಿ ಆಗುತ್ತಿರುವ ತುಮುಲಗಳನ್ನು ಅದುಮಿಟ್ಟು ಬಿರಿಬಿರಿ ಹೋಗುತ್ತಾಳೆ. ಬಂಗಾರದ ಬಟ್ಟಲನ್ನು ತಗೊಂಡು ಕೆರೆಯ ಪಾವಟಿಗೆ ಏರಬೇಕು. ಒಂದೊಂದೇ ಮೆಟ್ಟಿಲು ಏರಿದಷ್ಟು ಅಷ್ಟಷ್ಟು ನೀರಿನ ಸೆಲಿ ಪುಟಿಯುತ್ತದೆ. ತುಂಬುತ್ತ ಬಂದ 'ಗಂಗಿ' ಭಾಗೀರತಿಯ ಪಾದ, ಮೊಣಕಾಲು, ನಡು, ಒಂದೊಂದೇ ಮುಳುಗಿಸುತ್ತ ಬರುತ್ತಾಳೆ. ಐದನೇ ಮೆಟ್ಟಿಲಿಗೆ ಬಂದಾಗ ಗಂಗಿ ತುಂಬಿ ಹರಿಯುತ್ತಾಳೆ. 'ಸಣ್ಣಸೊಸಿ ಭಾಗೀರತಿ ಕೆರೆಗ್ಹಾರ' ವಾಗುತ್ತಾಳೆ. ಹೀಗೆ ಅಸಹಾಯಕ ಹೆಣ್ಣಿನ ಅಂತ್ಯವಾಗುತ್ತದೆ. ತನ್ನ ಮೇಲಿನ ಶೋಷಣೆಯನ್ನು ಪ್ರತಿಭಟಿಸಲು ಸಾಧ್ಯವಾಗದ ವ್ಯವಸ್ಥೆಯಲ್ಲಿ ಭಾಗೀರತಿ ಬದುಕಿ, ಅಸಹಾಯಕ ಸ್ಥಿತಿಯಲ್ಲಿ ತನ್ನ ಜೀವ ಕಳೆದುಕೊಳ್ಳುತ್ತಾಳೆ.

ಭಾಗೀರತಿಗೆ ಕೆರೆಗೆ ಹಾರವಾಗಿ ಕೊಡಬೇಕೆಂದು ನಿರ್ಧಾರವನ್ನು ಕೈಗೊಳ್ಳಬೇಕಾದ ಸಂದರ್ಭದಲ್ಲಿ ಭಾಗೀರತಿಯ ಗಂಡ ಮಾದೇವರಾಯ ಮನೆಯಲ್ಲಿರುವುದಿಲ್ಲ. ದಂಡಿಗೆ ಹೋಗಿರುತ್ತಾನೆ. ದಂಡಿನಲ್ಲಿದ್ದ ಭಾಗೀರತಿಯ ಗಂಡ ಮಾದೇವರಾಯನಗೆ ಕೆಟ್ಟ ಕನಸುಬೀಳುತ್ತದೆ. 'ಸೆಲ್ಯ ಸುಟ್ಟಂಗಾತು ಕೋಲು ಮುರಿದ್ಹಂಗಾತು ಕಟ್ಟಿಸಿದ ಮಾಲೆಲ್ಲ ತಟ್ಟನೆ ಬಿದ್ದಂಗಾತು' ಅವನು ಬತ್ತಲುಗುದರೆಯನ್ನೇರಿ ಲಗುಬಗೆಯಿಂದ

'ಕಲ್ಲನಕೇರಿ'ಗೆ ಬರುತ್ತಾನೆ. ತಂದೆತಾಯಿ ಮಗನಿಗೆ ನೀರುತಂದುಕೊಡಲು ಇತರ ಸೊಸೆಯರಿಗೆ ಹೇಳುತ್ತಾರೆ. ಅದಕ್ಕೆ ಮಾದೇವರಾಯ

ಗಂಗವ್ವ ನೀರ ಕೊಡದ್ಯಾಕ ಗವರವ್ವ ನೀರಕೊಡುದ್ಯಾಕ

ನನ್ನ ಮಡದಿ ಭಾಗೀರತಿ ಎಲ್ಲಿಗ್ಹೋಗ್ಯಾಳವ್ವ

ಎಂದು ತಾಯಿಯನ್ನು ಕೇಳುತ್ತಾನೆ. ಆಕೆ 'ನಿನಮಡದಿ ಭಾಗೀರತಿ ತವರಿಗೆ ಹೋಗ್ಯಾಳಪ್ಪ' ಎಂದು ಉತ್ತರಿಸುತ್ತಾಳೆ. ತಮ್ಮ ತಪ್ಪಿನ ಅರಿವು ಅವರಿಗಾಗಿರುತ್ತದೆ. ಮತ್ತೆ ಮಾದೇವರಾಯ ಕುದುರೆ ಏರುತ್ತಾನೆ. ಕುದುರೆ ಏರಿ ಬಂದ ಅಳಿಯನನ್ನು ಕಂಡ ಅತ್ತೆ ತನ್ನ ಮಕ್ಕಳನ್ನು ಕುರಿತು 'ನಿಂಬೆವ್ವ ನೀರ್ ಕೊಡ ನೀಲವ್ವ ನೀರ್ ಕೊಡ' ಎನ್ನುತ್ತಾಳೆ. ಅದಕ್ಕೆ ಮಾದೇವರಾಯ ಅವರಿವರು ನೀರು ಕೊಡೋದು ಯಾಕೆ? 'ನನಮಡದಿ ಭಾಗೀರತಿ ಎಲ್ಲಿಗ್ಹೋಗ್ಯಾಳತ್ತಿ? ಎಂದು ಕೇಳುತ್ತಾನೆ. ಆಕೆ ತನ್ನ ಗೆಳತಿಯ ಮನೆಗೆ ಹೋಗಿರುವಳೆಂಬುದನ್ನು ತಿಳಿದ ಮಾದೇವರಾಯ ಅಲ್ಲಿಗೆ ತನ್ನ ಸವಾರಿ ಬಿಡುತ್ತಾನೆ. ತನ್ನ ಮಡದಿಯ ಗೆಳತಿಯನ್ನು ಕಂಡಾಗ ಅವಳು ನಿಜ ಸಂಗತಿ ಹೇಳುತ್ತಾಳೆ.

ನನಮಡದಿ ಭಾಗೀರತಿ ಎಲ್ಲಿಗ್ಹೋಳ್ಯಾಳಕ್ಕ

ನಿನ ಮಡದಿ ಭಾಗೀರತಿದು ಏನು ಹೇಳಲಿ ಸೂರಿ

ನಿಮ್ಮಪ್ಪ ನಿಮ್ಮವ್ವ ಕೆರೆಗ್ಹಾರ ಕೊಟ್ಟರಂತ

ಮಾದೇವರಾಯ ಹೌಹಾರಿದ. ಅಲ್ಲಿಂದ ನೇರ ಕೆರೆಯ ದಂಡೆಗೆ ಬಂದು ಗೋಗರೆಯುತ್ತಾನೆ. ಸಹಿಸಲಾಗದ ಸಂಕಟ. ತನ್ನ ಹೆಂಡತಿಯನ್ನು ನೆನಸಿಕೊಂಡು ದುಃಖಿಸುತ್ತಾನೆ.

ಸಾವಿರ ವರಹ ಕೊಟ್ಟರು ಸಿಗಲಾರದ ಸತಿ ನೀನು

ಸಿಗಲಾರದ ಸತಿ ನೀನು ನನ್ನ ಬಿಟ್ಟು ಎಲ್ಲಿ ಹೋದೆ

ಹೀಗೆ ತಾನು ಅವಳಿಗಾಗಿ ಮಾಡಿಸಿಟ್ಟ ಮುತ್ತಿನೋಲೆ ಮುಂತಾದ ವಸ್ತ್ರ ಒಡವೆಗಳನ್ನು ಹೇಳಿಕೊಳ್ಳುತ್ತ 'ಮುತ್ತಿನೋಲೆ ಇಟ್ಟುಗೊಳ್ಳೊ ಮುತ್ತೈದೆ ಎಲ್ಲಿಗ್ಹೋದೆ' ಎಂದು ನಾನಾ ರೀತಿ ತನ್ನ ಅಳಲು ತೋಡಿಕೊಳ್ಳುತ್ತ ಆಘಾತ ಸಹಿಸಲಾಗದೆ ತಾನೂ ಕೆರೆ ನೀರಲ್ಲಿ ಹಾರಿ ಬಲಿಯಾಗುತ್ತಾನೆ. 'ಸತಿಸಹಗಮನ' ಪದ್ಧತಿ ಜಾರಿಯಲ್ಲಿದ್ದ ಸಮಾಜದಲ್ಲಿ ಇದು ವಿಭಿನ್ನವಾದ ಕಥನಗೀತೆ ಎನ್ನಿಸಿಕೊಳ್ಳುತ್ತದೆ. ಈ ಕಥನಗೀತೆಯಲ್ಲಿ ಒಂದು ಅಸಹಾಯಕ ಹೆಣ್ಣಿನ ತುಮುಲ, ಅಸಹಾಯಕ 'ಮೌನಸಂಘರ್ಷ'ವನ್ನು ವಿಶೇಷವಾಗಿ ಇಲ್ಲಿ ಕಾಣಬಹುದು.

೪.೨ ಪತಿವ್ರತಾ ನೀಲಾವತಿ ಲಾವಣಿ:

ಕೆರೆಗೆ ಹಾರ ಕಥನಗೀತೆ ಬಲಿದಾನದ ಕಥೆಯಾದರೆ ಪತಿವ್ರತಾ ನೀಲಾವತಿ ಲಾವಣಿ, 'ನೀಲಾವತಿ' ಎನ್ನುವ ಹೆಣ್ಣು ಯಾವುದೇ ತಪ್ಪು ಮಾಡದೇ ಅತ್ತೆಯ ಗಂಡನ ರಾಗ ದ್ವೇಷಗಳಿಗೆ ತುತ್ತಾಗುವ

ಲಾವಣಿ. ಸಹಜವಾಗಿ ನಾವು ಕಾಣುವ ಹಾಗೆ ಸೊಸೆಯಾದವಳ ಭಾವನೆಗೆ ಅತ್ತೆ ಸ್ಪಂದಿಸದೆ ಇರುವುದು, ಸೊಸೆಯಾದವಳು ತಾನು ಹೇಳಿದ ಹಾಗೆ ಕೇಳಬೇಕು, ಹಾಗೆಯೇ ಅವಳ ಕಷ್ಟ ನಷ್ಟಗಳನ್ನು ಕೈಹಿಡಿದ ಗಂಡನಿಗೆ ಮಕ್ಕಳಿಗೆ, ತೌರಿಗೆ ಹೇಳಲು ಅವಕಾಶ ಕೊಡುವುದಿಲ್ಲ. ಹಣಕಾಸಿನ ವ್ಯವಹಾರ, ಯಜಮಾನಿಕೆಯೆಲ್ಲವೂ ಅತ್ತೆಯ ಬಳಿ ಇರುತ್ತದೆ. ಸೊಸೆಯು ಆರ್ಥಿಕವಾಗಿ ದುರ್ಬಲಳಾಗಿರುತ್ತಾಳೆ. ಆದ್ದರಿಂದ ಅತ್ತೆಯ ಮನೆಯಲ್ಲಿ ಅತ್ತೆಯ ಹಂಗಿನಲ್ಲಿ ಬದುಕಬೇಕಾದ ಅನಿವಾರ್ಯ ಪರಿಸ್ಥಿತಿ ಇರುತ್ತದೆ. ಪ್ರಸ್ತುತ ನೀಲಾವತಿ ಲಾವಣಿಯ ಪ್ರಾರಂಭದಲ್ಲಿ 'ಅತ್ತಿ ಹೊರಸಿದಾಳ ಹಾದರ ದೋಷಾ' ಎಂಬ ವಾಕ್ಯ ಬರುತ್ತದೆ. ನೀಲಾವತಿಯ ಮೇಲೆ ಅತ್ತೆಯಾದವಳು ಹಾದರ ದೋಷವನ್ನು ಹೊರೆಸುತ್ತಾಳೆ. ನೀಲಾವತಿ, ತನ್ನ ಪತಿಯ ಸೇವೆಯನ್ನು ಮಾಡಿಕೊಂಡು ಬಹಳ ಪ್ರೀತಿಯಿಂದ ಜೀವನವನ್ನು ನಡೆಸುತ್ತಿರುತ್ತಾಳೆ. ಇದು ಅತ್ತೆಗೆ ಸಹಿಸಲಸಾಧ್ಯವಾಗುತ್ತದೆ. ಏನಾದರೂ ಮಾಡಿ ತನ್ನ ಮಗ ಮತ್ತು ಸೊಸೆಯ ಸಂಬಂಧದಲ್ಲಿ ಬಿರುಕನ್ನು ಉಂಟುಮಾಡಬೇಕೆಂದು ಯೋಚಿಸಿರುತ್ತಾಳೆ. ಹೀಗಿರುತ್ತಿರಲು

ಒಂದ ದಿವಸ ಅವರ ಮನಿಗಿ ಬಂದ
ಒಬ್ಬ ಸಾಧು ಬಾವಾ ಭಿಕ್ಷಾಂದೇಹಿ
ಅಂತನಿಂತ ಬಾಗಿಲ್ಹೊದರಗ
ಪುಣ್ಯವಂತಿ ನೀಲಾವತಿ ಉಣ್ಣೂದ
ಬಿಟ್ಟ ಓಡಿ ಹೋಗಿ ಅನ್ನಾ
ನೀಡಿದಾಳ ಆ ಸಾಧುಬಾವಾಗ
ಕಣ್ಣ ನೂವ ಆಗಿ ಬಾವಾ ಅನ್ನೆವಿನ್ನೆ
ತಳಮಳಿಸ್ತಿದ್ದ ಸಣ್ಣರವದಿ
ಹಾರಿ ಬಿದ್ದಿತವನ ಕಣ್ಣಾಗ
ನೀಲಾವತಿ ನಾಲಿಗಿ ಹಾಕಿ ತಗದಾಳವಗ

ಒಂದು ದಿವಸ ಆಕಸ್ಮಿಕವಾಗಿ ಒಬ್ಬ ಸಾಧುಬಾವಾ ಬಂದು ನೀಲಾವತಿಯ ಮನೆಯ ಮುಂದೆ ಭಿಕ್ಷೆ ಬೇಡುತ್ತಿರುವ ಸಂದರ್ಭದಲ್ಲಿ ಕಣ್ಣಿನಲ್ಲಿ ಕಸರು ಬಿದ್ದು ತಳಮಳಿಸುತ್ತಿರುತ್ತಾನೆ. ಆಗ ಆ ಕಸರನ್ನು ನೀಲಾವತಿ ನಾಲಿಗಿ ಹಾಕಿ ತೆಗೆಯುತ್ತಾಳೆ. ಇದು ಆಕಸ್ಮಿಕವಾಗಿ ಸಂಭವಿಸುವ ಘಟನೆ. ಈ ಘಟನೆ ಸಂಭವಿಸುತ್ತಿರಬೇಕಾದ ಸಂದರ್ಭದಲ್ಲಿ ನೀಲಾವತಿಯ ಹಣೆಯ ಮೇಲಿನ ಕುಂಕುಮ ಬಾವಾನ ಹಣೆಯ ಮೇಲೆ ಮೂಡುತ್ತದೆ.

ಅಷ್ಟರೊಳಗ ಕೆಟ್ಟಗಣ್ಣಿಲಿ
ನೋಡುತ ನಿಷ್ಟುರತ್ತಿ ಬಂದಾಳ
ಅದ ಹೊತ್ತಿಗಿ
ಕಣಗೇಡಿ ಬಾವಾ ನಿನ್ನ ಹಣಿಮ್ಯಾಲ
ಕುಂಕುಮ್ಯಾಕೊ ಹಣದೇನ ಹೋಗ

ಅಂದಾಳ ಮುಂದಿನ ಓಣಿಗಿ!

ಈ ದೃಶ್ಯವನ್ನು ಅಂದರೆ ಒಬ್ಬ ಭಿಕ್ಷೆ ಬೇಡಲು ಬಂದ ಕೆಳವರ್ಗದ ಬಾವಾನ ಹಣೆಯ ಮೇಲೆ ಕುಂಕುಮ ಮೂಡಿರುವ ದೃಶ್ಯವನ್ನು ತೋರಿಸುತ್ತಾಳೆ.

ಭಾವಾರ್ತನಕ ಬಿದ್ದ ಇವಳು
ಬಾವಾನ ಸಂಗ ಮಾಡ್ಯಾಳಂತ
ನೀಲಾವತಿ ಮ್ಯಾಲೆ ಹೊರಶ್ಯಾಳ ಹಾದರ ದೋಷಾ

ಭಿಕ್ಷೆ ಬೇಡಲು ಬಂದ ಬಾವಾನ ಜೊತೆಯಲ್ಲಿ ನೀಲಾವತಿಯ ಅಕ್ರಮ ಸಂಬಂಧವಿದೆಯೆಂದು ಹಾದರದ ದೋಷವನ್ನು ಹೊರೆಸುತ್ತಾಳೆ. ಇಲ್ಲ ಸಲ್ಲದ ಆರೋಪಗಳನ್ನು ಹೊರೆಸುತ್ತಾಳೆ. ಇಷ್ಟಕ್ಕೆ ತೃಪ್ತಿಪಟ್ಟುಕೊಳ್ಳದೇ ತನ್ನ ಮಗನಿಗೂ ದೂರನ್ನು ಕೊಡುತ್ತಾಳೆ. ನಿನ್ನ ಹೆದರಿಕೆ ಆಕೆಗಿಲ್ಲ. ಆಕೆ ಬಾವಾನ ಜೊತೆಯಲ್ಲಿ ಅಕ್ರಮ ಸಂಬಂಧವನ್ನು ಹೊಂದಿದ್ದಾಳೆ. ಇವಳನ್ನು ಬಿಟ್ಟು ಬಿಡು

ರೊಕ್ಕ ಇದ್ರ ಹಿಂತಾ ಹೆಂಡ್ರ
ಲಾಖೋ ಮಂದಿ ಸಿಗತಾರ

ಬಹುಶಃ ಆಕೆ ಶ್ರೀಮಂತಳು. ನೀಲಾವತಿ ಬಡವೆ ಇದ್ದಿರಬಹುದು. ದುಡ್ಡಿದ್ದರೆ ನೀಲಾವತಿಯಂತಹ ಲಕ್ಷಮಂದಿ ಬಡ ಹೆಣ್ಣುಮಕ್ಕಳು ಸಿಗುತ್ತಾರೆ ಎಂದು ಹೇಳುತ್ತಾಳೆ. ಹೀಗೆ ಹೇಳುವುದರ ಮೂಲಕ ಸಮಾಜದಲ್ಲಿ ಶ್ರೀಮಂತರ ಪ್ರಭುತ್ವ ಯಜಮಾನಿಕೆ ಎಷ್ಟರಮಟ್ಟಿಗಿತ್ತು ಎನ್ನುವುದನ್ನು ಸಾಬೀತುಮಾಡುತ್ತಾಳೆ. ತನ್ನ ಮಗನ ತಲೆ ಕೆಡಿಸುವುದರಲ್ಲಿ ಯಶಸ್ವಿಯಾಗುತ್ತಾಳೆ.

ಪತ್ತೆ ಇಲ್ಲದ ಸನ್ಯಾಸಿಬಾವಾ ಹೆಂಗ ಕೆಟ್ಟಾಳು

ತಮ್ಮ ಬಳಿಯಲ್ಲಿ ಇಷ್ಟೆಲ್ಲಾ ಹಣ, ಅಂತಸ್ತು ಇದ್ದರೂ ಗೊತ್ತುಗುರಿಯಿಲ್ಲದ ಆ ಸನ್ಯಾಸಿಯ ಬಲೆಗೆ ಹೇಗೆ ಬಿದ್ದಳು? ಎಂದು ಪ್ರಶ್ನಿಸುತ್ತಾಳೆ. ಹೀಗೆ ಮಗ ಮತ್ತು ತಾಯಿಯ ಸಂಭಾಷಣೆ ನಡೆಯುತ್ತಿರುವಾಗ ಎಲ್ಲವನ್ನು ಕೇಳಿಸಿಕೊಳ್ಳುತ್ತಿದ್ದ ನೀಲಾವತಿ ಆಪಾದನೆ ಅತಿರೇಕಕ್ಕೆ ಹೋದಾಗ

ನಾರಿ ಮೂರ್ಛಿತ ಆಗಿ ಧರಣಿಗಿ ಹೊರಳಿದಳು
ತನ್ನ ಮೂರ್ಛವನ್ನು ತಾನೆ
ಚೆನ್ನಾಗಿ ಸವರಿಕೊಂಡು ಸಂನ್ಯಾಸಿ
ವೃತ್ತಾಂತ ಅವರಿಗೆ ಅರುಹಿದಳು

ನೀಲಾವತಿ ಮೂರ್ಛೆ ಹೋಗುತ್ತಾಳೆ. ಆ ಸಂದರ್ಭದಲ್ಲಿ ಆಕೆ ಅಸಹಾಯಕಳಾಗಿರುತ್ತಾಳೆ. ತನ್ನನ್ನು ತಾನು ಸಮರ್ಥಿಸಿಕೊಳ್ಳಬೇಕಾಗುತ್ತದೆ. ಪೂರ್ವಗ್ರಹಪೀಡಿತಳಾಗಿ ಅತ್ತೆ ಹೊರಿಸಿದ ಆಪಾದನೆಯಿಂದ ಹೊರಬರಬೇಕಾಗಿರುತ್ತದೆ. ಸಮಾಜದಲ್ಲಿ ನಿರಂತರ ಶೋಷಣೆಗೆ ಒಳಗಾಗಿರುವ ಸ್ತ್ರೀ ಸಮುದಾಯದ ಪ್ರತಿನಿಧಿ ನೀಲಾವತಿ, ಅದರಲ್ಲೂ ಕೆಳವರ್ಗಕ್ಕೆ ಸೇರಿದವಳು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ನಡೆದ ನೈಜ ಘಟನೆಯನ್ನು ವಿವರಿಸಿಹೇಳುತ್ತಾಳೆ. ಆದರೆ ಕೇಳುವ ಪರಿಸ್ಥಿತಿಯಲ್ಲಿ ಗಂಡ ಮತ್ತು ಅತ್ತೆ ಇರುವುದಿಲ್ಲ.

'ಮನಸ್ಸಿಗೆ ಇದೊಮ್ಮೆ ಕ್ಷಮಾ ತಾಳಿರಿ ಅಂದಾಳು' ಈ ರೀತಿ ನೀಲಾವತಿ ಬೇಡಿಕೊಂಡರೂ ಯಾವ ಪ್ರಯೋಜನವೂ ಆಗುವುದಿಲ್ಲ.

ನೀಲಾವತಿ ಎಷ್ಟ ಹೇಳಿದ್ರ
ಸುದ್ದಾ ಕಾಲಿಲ ಒದ್ದಾಳ
ಅವರ ಅತ್ತೆಯು

ನೀಲಾವತಿಗೆ ಅತ್ತೆಯು ಕರುಣೆ, ದಯೆ ಯಾವುದನ್ನು ತೋರಿಸದೆ ಕಾಲಿನಿಂದ ಒದೆಯುತ್ತಾಳೆ. ಇಂಥ ಸಂದರ್ಭದಲ್ಲಿ ನೀಲಾವತಿಯು ಏಳುದಿನ ಉಪವಾಸವಿದ್ದು ನೀರನ್ನೂ ಸಹ ಕುಡಿಯದೇ ಶಿವನ ಸ್ತುತಿಯನ್ನು ಮಾಡುತ್ತಾಳೆ. ಹೀಗಿರುತ್ತಿರಲು ಏಕಾಏಕಿ ಆ ಊರಿನಲ್ಲಿ ಬರಗಾಲ ಬರುತ್ತದೆ. ಬಂಕಪುರ ಎಂಬ ಊರಿನ ನಾಲ್ಕು ಬಾಗಿಲುಗಳು ಏಕಾಏಕಿ ಮುಚ್ಚಿಕೊಳ್ಳುತ್ತವೆ. ಸಿಪಾಯಿಗಳೆಲ್ಲ ಎಷ್ಟೇ ಪ್ರಯತ್ನಪಟ್ಟರೂ ಆ ಬಾಗಿಲುಗಳನ್ನು ತೆರೆಯಲು ಸಾಧ್ಯವಾಗುವುದಿಲ್ಲ. ಆಗ ಈ ವಿಚಾರವನ್ನು ರಾಜನ ಬಳಿ ಸಿಪಾಯಿಗಳು ಹೇಳುತ್ತಾರೆ. ಹಾರಿ ಹಾಕಿ ಬಾಗಿಲನ್ನು ತೆಗೆಯಿರಿ ಎಂದು ರಾಜ ಅಪ್ಪಣೆ ಕೊಟ್ಟ, ಎಷ್ಟು ಮಂದಿ ಪ್ರಯತ್ನಿಸಿದರೂ ಆ ಬಾಗಿಲುಗಳನ್ನು ತೆರೆಯಲು ಸಾಧ್ಯವಾಗುವುದಿಲ್ಲ. ಕರಗಸ, ಕೊಡ್ಲಿ, ಬಾಚಿಗೋಳ, ಎಲ್ಲವೂ ಮುರಿದುಹೋದವು. ಆದರೂ ಆ ಬಾಗಿಲುಗಳೂ ತೆರೆಯಲಿಲ್ಲ.

ಅರಸನ ಮಗಳ ಮದಿವಿ ಇತ್ತ
ಹರಷದಿಂದ ನಿಬ್ಬಣ ಊರಹೊರಗ

ಈ ಸಂದರ್ಭದಲ್ಲಿಯೇ ಅರಸನ ಮಗಳ ಮದುವೆ ಇರುತ್ತದೆ. ನಿಬ್ಬಣ ಊರ ಹೊರಗೆ ಇರುತ್ತದೆ. ಬೀಗರ ಭೇಟಿ ಬೀಗರಿಗೆ ಸಾಧ್ಯವಾಗುವುದಿಲ್ಲ. ಲಗ್ನ ನೆರವೇರುವುದಕ್ಕೆ ಬಾಗಿಲುಗಳು ಮುಚ್ಚಿಕೊಂಡಿದ್ದದ್ದು ಸಮಸ್ಯೆಯಾಗಿರುತ್ತದೆ. ರಾಜ ಜ್ಯೋತಿಷಿಯ ಬಳಿ ಜ್ಯೋತಿಷ್ಯ ಕೇಳುತ್ತಾನೆ. ಏನು ಮಾಡಿದರೆ ಅಗಸೀ ಬಾಗಿಲುಗಳು ತೆರೆದುಕೊಳ್ಳುತ್ತವೆ ಎಂದು ಕೇಳುತ್ತಾನೆ.

ಪತಿವೃತಿಯರ ಕೈಸೊಂಕಿದ
ಮಾತ್ರವೆ ಅತಿ ಬೇಗದಿಂದಾ
ತೆರೆಯುವವು ಪುರದ್ವಾರವು

ಹೀಗೆ ಜ್ಯೋತಿಷಿ ಪತಿವೃತೆಯರ ಕೈಸೋಕಿದರೆ ಮಾತ್ರ ಪುರದ್ವಾರ ತೆರೆದುಕೊಳ್ಳುತ್ತವೆ ಎಂದು ಹೇಳುತ್ತಾನೆ. ತತ್‌ಕ್ಷಣವೇ ರಾಜ ಡಂಗುರ ಹೊಡೆಸುತ್ತಾನೆ.

ಆನಿವಜ್ಜೆ ಭಂಗಾರ ಹೇರಿಸಿ
ಓಣಿಓಣಿ ತಿರಗಿಸಿ ಮಾನಕೊಡ
ಕೊಡತೀನಂದ ಅಗಸಿ ತೆಗೆಸಿದರಿಗಿ

ಹೀಗೆ ಯಾರು ದ್ವಾರಗಳನ್ನು ತೆಗೆಯುತ್ತಾರೋ ಅವರಿಗೆ ಆನೆಯಷ್ಟು ಭಾರವಾದ ಬಂಗಾರವನ್ನು ಕೊಡುತ್ತೇನೆಂದಾದ ಮೇಲೂ ಆ ಊರಿನ ಹೆಂಗಸರ್‍ಯಾರು ಆ ಕಡೆ ಸುಳಿಯಲಿಲ್ಲ. ಒಬ್ಬೊಬ್ಬರು ಒಂದೊಂದು ನೆಪಹೇಳಿ ಮನೆ ಸೇರಿಕೊಳ್ಳುತ್ತಾರೆ. ಯಾರೂ ಮನೆಯಿಂದ ಹೊರಬರಲು ಇಚ್ಚಿಸುವುದಿಲ್ಲ. ಹೊಟ್ಟೆ ನೋಯುತ್ತಿದೆ ಎಂದು, ಚಿಕ್ಕವರಾಗಿದ್ದಾಗ ಹುಡುಗರ ಜೊತೆ ಆಟ ಆಡುವಾಗ ಕೈಗೆ ಕೈ ಸೋಕಿರುವುದಾಗಿ ಹೇಳಿ ಜಾರಿಕೊಳ್ಳುತ್ತಾರೆ.ಕೆಲವರು ಮುಟ್ಟಿನ ನೆಪ ಹೇಳುತ್ತಾರೆ. ಕೆಲವರು ವೈದ್ಯರು ನಮ್ಮ ಮೈಮುಟ್ಟಿರುತ್ತಾರೆಂಬ ನೆಪ ಹೇಳುತ್ತಾರೆ. ಹೀಗಿರುತ್ತಿರಲು ನೀಲಾವತಿಯ ಕನಸಿನಲ್ಲಿ ಶಿವ ಬಂದು 'ನಾಳೆಗೆ ಹೋಗಿ ಪುರದ್ವಾರಗಳನ್ನು ತೆಗೆ' ಎಂದು ಅಪ್ಪಣೆ ಕೊಡುತ್ತಾನೆ. ಅಪ್ಪಣೆ ಕೊಟ್ಟು ಶಿವ ಮಾಯವಾಗುತ್ತಾನೆ. ಸೂರ್ಯೋದಯದ ನಂತರದಲ್ಲಿ ನೀಲಾವತಿ ಸ್ನಾನ ಮಾಡಿ ಪಂಚಾಕ್ಷರಿ ಜಪಿಸಿ, ತನ್ನ ಪತಿಪಾದಾ ಪೂಜೆ ಮಾಡಿ ನಮಸ್ಕರಿಸುತ್ತಾಳೆ. ನಂತರ ಆಕೆ ಮನೆಯಿಂದ ಪುರದ್ವಾರದ ಕಡೆಗೆ ಹೆಜ್ಜೆ ಹಾಕುತ್ತಾಳೆ.

ಓಣಿ ಹಿಡದ ನೀಲಾವತಿ ಹೊರಟಾಳು
ಗೌರಿ ಪೂಜೆಗೆ ಹೋದಂಗಾತು ಬಾನನ ಮಗಳು
ಊರಜನರು ಹೋಗಿ ಆಕಿನ
ಅದರ ಬಿಟ್ಟ ನೋಡಾಕತ್ರ
ಹರದೇರ ನಿಂತಿದ್ರ ಎಡಬಲದೊಳು
ಸೊಗಸಿನಿಂದ ಹೋಗಿ ನಾಲ್ಕೂ
ಅಗಸಿಬಾಗಿಲ ಪೂಜಾಮಾಡಿ
ಭಕ್ತಿಯಿಂದ ಪತಿತೀರ್ಥ ಸಿಡಿಸಿದಳು
ಷಡಕ್ಷರಿ ನುಡಿದಾಕ್ಷಣಕ್ಕ
ಖಥಥಥಾ ತಗದಾವು ಪುರದ್ವಾರಗಳು

ಹೀಗೆ ಪತಿವ್ರತೆ ನೀಲಾವತಿ ಪುರದ್ವಾರಗಳನ್ನು ತೆಗೆಯುತ್ತಾಳೆ. ಆಗ ಅರಸ ಖುಷಿಯಿಂದ ಅವನು ಹೇಳಿದಷ್ಟು ಬಂಗಾರ, ಹತ್ತೂರು ದಾನವಾಗಿ ಕೊಡುತ್ತಾನೆ. ಹೀಗೆ ಅತ್ತೆ, ಗಂಡನಿಂದ ತಿರಸ್ಕೃತಳಾಗಿ ಮಾನಸಿಕ ಹಿಂಸೆಯನ್ನು ಅನುಭವಿಸುತ್ತಿದ್ದ ಅಸಹಾಯಕ ಹೆಣ್ಣು ದೇವರ ಕೃಪಾಕಟಾಕ್ಷದಿಂದ ದೋಷಮುಕ್ತಳಾಗುತ್ತಾಳೆ. ಹೀಗೆ ಅತ್ತೆ ಗಂಡ ಇಲ್ಲಸಲ್ಲದ ಆರೋಪಗಳನ್ನು ಹೊರಿಸಿದಾಗ ಶೋಷಣೆಗೆ ಒಳಗಾದ ನೀಲಾವತಿ ಆಂತರಿಕವಾಗಿ ಬಹಳಷ್ಟು ತೊಳಲಾಟಕ್ಕೆ ಒಳಗಾಗುತ್ತಾಳೆ. ಕೊನೆಗೆ ಶಿವನ ಕೃಪೆಯಿಂದ ದೋಷಮುಕ್ತಳಾಗಿದ್ದರೂ ಸಮಾಜದಲ್ಲಿ ಹಾಸುಹೊಕ್ಕಾಗಿದ್ದ ವರ್ಗಸಂಘರ್ಷವನ್ನು ಈ ಲಾವಣಿಯ ಮೂಲಕ ಕಾಣಬಹುದಾಗಿದೆ.

ಅಡಿಟಿಪ್ಪಣಿ:

೧. ರಾಘವೇಂದ್ರರಾವ್. ಎಚ್.ಎಸ್, ಕನ್ನಡ ಸಾಹಿತ್ಯದಲ್ಲಿ ನೋವಿನ ನೆಲೆಗಳು, ೧೯೯೭, ಪು.೨-೩.
೨. ರಾಘವೇಂದ್ರರಾವ್ ಎಚ್.ಎಸ್, ಕನ್ನಡ ಸಾಹಿತ್ಯದಲ್ಲಿ ನೋವಿನ ನೆಲೆಗಳು,೧೯೯೩,ಪು.೨೦-೨೧.

ಅನುಬಂಧ – ೫

ಪತಿವ್ರತಾ ನೀಲಾವತಿ ಲಾವಣಿ

ಮೃತ್ಯದೊಳಗ ಎಷ್ಟೋ ಮಂದಿ ಪತಿವ್ರತಿಯರು
ತಮ್ಮ ಪತಿ ಮಾಡಿ ಪಡದಾರ ಏಸಾ ।
ಅವರ ಪೈಕಿ ನೀಲಾವತಿ ದಿವ್ಯಚರಿತ್ರೆ ಹೇಳುವೆನು
ಸಾವಧಾನದಿಂದ ಕೇಳ್ರಿ ಸಾವಕಾಶಾ ।
ಮೇಲಗರ್ತಿ ನೀಲಾವತಿ ತೆಲಿ ಮೇಲೆ ವಾಳಿ
ಅತ್ತಿ ಹೊರಸಿದಾಳ ಹಾದರ ದೋಷಾ ।
ನೀಲಕಂಠನಿಂದ ಆದಾಳ ನಿರ್ದೋಷಾ ॥ ಪಲ್ಲವಿ ॥

ಗಂಡ–ಹೆಣತಿ ಭಾಳ ಪ್ರೀತಿ
ಉಂಡತಿಂದ ನೆಟ್ಟಗಿದ್ರ ಕಂಡಾಪಟ
ಬದುಕಿತ್ತ ಮನಿ ಒಳಗ

ಸತಿ ನೀಲಾವತಿ ತನ್ನ ಪತಿ ಪಾದ
ಪೂಜಾ ಮಾಡಿ ತೀರ್ಥಾ ತಗೋತಿಳ್ಳ
ಎರಡೂ ವ್ಯಾಳೆದಾಗ ।
ರಂಡಿ ಮುಂಡಿ ಅತ್ತಿ ಒಂದ
ತುಂಡನಂಗ ತಿರಗತಿತ್ತ ಕಂಡ ಮಂದಿ
ಕಿಲಾಪ ತಕ್ಕೊತ ಬೇಗು ಬೆಳಗ ।
ಉಂಡ್ರ ಸೇರಾಕಿಲ್ಲ ನೆರಮನೆವು ಕಮ್ಮಗ ॥
ಒಂದ ದಿವಸ ಅವರ ಮನಿಗಿ ಬಂದ
ಒಬ್ಬ ಸಾಧು ಬಾವಾ ಭಿಕ್ಷಾಂ ದೇಹಿ
ಅಂತ ನಿಂತ ಬಾಗಿಲ್ಹೊದರಗ ।
ಪುಣ್ಯೆವಂತಿ ನೀಲಾವತಿ ಉಣ್ಣೂದ
ಬಿಟ್ಟ ಓಡಿ ಹೋಗಿ ಅನ್ನಾ
ನೀಡಿದಾಳ ಆ ಸಾಧು ಬಾವಾಗ ।
ಕಣ್ಣ ನೂವ ಆಗಿ ಬಾವಾ ಅನ್ನೆವಿನ್ನೆ
ತಳಮಳಸ್ತಿದ್ದ ಸಣ್ಣರವದಿ
ಹಾರಿ ಬಿದ್ದಿತವನ ಕಣ್ಣಾಗ ।
ನೀಲಾವತಿ ನಾಲಿಗಿ ಹಾಕಿ ತಗದಾಳವಗ ॥

ಚಾಲ:

ಪಂಚಜಾಕ್ಷಿಯ ಹಣಿ ಸೊಂಕಿ
ಮಾತ್ರದಿ ಕುಂಕಮ ಮೂಡಿತ
ಬಾವಾನ ಹಣೆಗಿ ।
ಅಪ್ಪರೊಳಗ ಕೆಟ್ಟಗಣ್ಣಿಲಿ

ನೋಡುತ ನಿಷ್ಠುರತ್ತಿ ಬಂದಾಳ
ಅದ ಹೊತ್ತಿಗಿ ।
ಕಣಗೇಡಿ ಬಾವಾ ನಿನ್ನ ಹಣಿಮ್ಯಾಲ
ಕುಂಕುಮ್ಯಾಕೊ ಹಣದೇನ ಹೋಗ
ಅಂದಾಳ ಮುಂದಿನ ಓಣಿಗಿ ।

ಏರು:

ಭಾವಾರ್ತನಕ ಬಿದ್ದ ಇವಳು
ಬಾವಾನ ಸಂಗ ಮಾಡ್ಯಾಳಂತ
ನೀಲಾವತಿ ಮ್ಯಾಲೆ ಹೊರಶ್ಯಾಳ ಹಾದರ ದೋಷಾ ।
ನೀಲಕಂಠನಂದ ಆದಾಳ ನಿರ್ದೋಷಾ ॥ ೧ನೇ ಚೌಕ ॥

ಸಿಟ್ಟಿಗೆದ್ದ ತನ್ನ ಮಗ್ಗ ಹೇಳಿದಾಳ
ಬಿಟ್ಟ ಬಿಡೋ ನಿನ್ನ
ಹೆಣತಿ ಭಾಳ ಕೆಟ್ಟಾಳು ।

ಖಬರದಾರ ಅಂತ ಮದಲ ಜಬರದಸ್ತಿ
ಇಡಲಿಲ್ಲ ಖಬರಗೇಡಿ
ರಂಡಿ ನಿನ್ನ ಅಬ್ರು ಕಳದಾಳು ।
ಹೆಂಡತಿ ಒಳ್ಳೆಕ್ಕಿ ಅಂತ ಆಕಿ
ಕುಂಡಿ ಸುತ್ತ ತಿರಗತಿದ್ಯೋs
ಬಂಡ ಮಾಡಿ ಅವಳ ಇದಬಾವಾನ ಹ್ವಾದಳು ।
ಗಂಡನ ಅಂಜಕಿ ಇಲ್ದ ತೀರ ಗಂಡ ಮಿರ‍್ಯಾಳು ॥
ತಾಯಿ ಮಾತ ಕೇಳ ಮಗಾ
ಕೈಮುಗದ ಹೇಳಿಕೊಂಡ ಸಾಯುವಳ್ಳ
ಬಿಡ ಕುಂದ್ರ ದೀರ ಮನದೊಳು ।
ರೊಕ್ಕ ಇದ್ರ ಹಿಂತಾ ಹೆಂಡ್ರ
ಲಾಖೋ ಮಂದಿ ಸಿಗತಾರ ಸೊಕ್ಕ
ಮುರಿಲಿ ಪಡಕಿ ಆಗಿ ಬಿಳಲಿವಳು ।
ಪತಿವೃತೇರಂಗ ನನ್ನ ಪಾದಾ
ತೊಳದ ಪೂಜಾ ಮಾಡಿ ಸೀತಾ
ದ್ರೌಪತಿಯರ ಡೌಲ ತೋರಸತಿದ್ದಾಳು ।
ಪತ್ತೆ ಇಲ್ಲದ ಸನಾಯಾಸಿ ಬಾವಾ ಹೆಂಗ ಕೆಟ್ಟಾಳು ॥
ಪುರುಷ ಅತ್ತಿ ಆಡಿದ ಮಾತ
ಉದರದಲಿ ಭೇದಿಸಿ ನಾರಿ
ಮೂರ್ಛಿಸಿ ಆಗಿ ಧರಣಿಗಿ ಹೊರಳಿದಳು ।
ತನ್ನ ಮೂರ್ಛವನ್ನು ತಾನೆ
ಚೆನ್ನಾಗಿ ಸವರಿಕೊಂಡು ಸಂನ್ಯಾಸಿ

ವೃತ್ತಾಂತ ಅವರಿಗೆ ಅರುಹಿದಳು ।
ಕಣ್ಣಾಗಿನ ಕಸರ ತಗದ ಅನ್ನಾ
ನೀಡಿದೇನ ಅವಗ ಅನ್ಯಾಯ
ನಂದೇನ ಹೇಳ್ರಿ ಇದರಾಗ ಹೇಳ್ರಿ ಅಂದಾಳು ।
ಮನಿಸ್ಸಿಗೆ ಇದೊಮ್ಮೆ ಕ್ಷಮಾ ತಾಳಿರಿ ಅಂದಾಳು ॥

ಚಾಲ:

ನೀಲಾವತಿ ಎಷ್ಟ ಹೇಳಿದ್ರ
ಸುದ್ದಾ ಕಾಲಿಲ ಒದ್ದಾಳ
ಅವರ ಅತ್ತೆಯು ।
ಉಪ ಮುಖ ಮೀರಿದ ಉಪಕಾರ
ಮಡದಿಗೆ ಅಪರಾಧ
ಹೊರಿಶ್ಯಾನ ಆಕಿ ಪತಿಯು ।
ಯೋಳ ದಿವಸ ಕೂಳ ಇಲ್ಲದ
ನೀರ ಇಲ್ಲದ ನಡಿಸ್ಯಾಳ
ಶಿವನ ಸ್ತುತಿಯು ।

ಏರು:

ಅಕಿ ಪತಿವೃತಾ ಲೀಲಾ
ಸೀಲ ಮಾಡಿ ತೋರಸಬೇಕಂತ
ಪರಮೇಶ್ವರಗ ಹುಟ್ಟಿತ ಅಭಿಲಾಷಾ ।
ನೀಲಕಂಠನಿಂದ ಆದಾಳ ನಿರ್ದೋಷಾ ॥ ೨ನೇ ಚೌಕ ॥

ಏಕಾಏಕಿ ಆದ ಊರಿಗಿ ಭೂಕಾಲ
ಬಂಕ ಪುರದ ನಾಲ್ಕು ಅಗಸಿ
ಕದಗೋಳ ಇಕ್ಕಿ ಆದು ಬಂದಾ ।
ಸಿಫಾಯಿ ಹಳಬರ ಭಾಳ ಉಪಾಯ
ಮಾಡಿ ನೋಡಿದಾರ ಸಪಾಯ
ಅವೇನ ಬಿಡಲಿಲ್ಲಾ ಸಂದಾ ।
ಊರ ಅರಸಗ ವರದಿ ಹೋತ
ಮೂರು ಅಪ್ಪಣಿ ಒಮಗೀಲೆ
ಕೊಟ್ಟ ಹಾರಿಹಾಕಿ ಮೇಟಿ ಕಳಾಸ ಬಿಡಸರೆಂದಾ ।
ಮೀರಿದ ಕಾಲಕ ಮೂರು ಫಡಕ ಕಡಸರೆಂದಾ ॥
ಸಿಟ್ಟಿಗೆದ್ದ ಹೋಗಿ ಎಷ್ಟೋ ಮಂದಿ
ಅಷ್ಟು ಪಡಕಾ ಕಡೀದಿದಾರ
ರೆಟ್ಟಿ ಸೋತ ಶಕ್ಕಿ ಏಳಲಿಲ್ಲಾ ವಂದಾ ।
ಕರಗಸ ಕೊಡ್ಲಿ ಬಾಚಿಗೋಳ
ಮುರಮುರದ ಪುಡಿ ಆಗಿ ಬಿದ್ದು

ಧರಣೀಪತಿ ಅರಸ ನೋಡಿ ಹುಚ್ಚು ಆದಾ ।
ಬ್ಯಾಡಗೊಲಿದ ಸಾಂಬನ ಮಹಿಮಾ
ಮೂಢ ಅರಸಗ ಏನ ಗೊತ್ತ
ಗುಟ್ಟ ಯಾರಿಗೂ ತಿಳದಿದ್ದಿಲ್ಲ ಭಕ್ತಿದಾ ।
ಲೀಲಾ ತೋರಿಸಿದಾನ ಲೀಲಾವತಿ ಕಡಸಿಂದಾ ॥
ಅರಸನ ಮಗಳ ಮದಿವಿ ಇತ್ತ
ಹರಷದಿಂದ ನಿಬ್ಬಣ ಊರ ಹೊರಗ
ಇಳಕೊಂಡಿತ್ತ ಅಗಸ್ಯಾಗ ಬಂದಾ ।
ಭೀಗರ ಬೆಟ್ಟಿ ಭೀಗರಿಗಿಲ್ಲಾ
ಅಗಸಿ ಬಾಗಿಲ ತಗದಿದ್ದಿಲ್ಲ
ಲಗ್ನಕ್ಕ ಹಕತ್ತ ಆತ ಪ್ರತಿಬಂಧಾ ॥
ಆತುರದಿಂದ ಅರಸ ಹೋಗಿ ಜ್ಯೋತಿಷ್ಯ ಹೇಳುವರನ ಕರೆದ
ಪ್ರೀತಿಯಿಂದ ಪ್ರಶ್ನ ಮಾಡಿದ ಅವರಿಗೆ ಛಂದಾ ।
ಏನ ಮಾಡಿದ್ರ ಅಗಸೀ ಬಾಗಿಲ ತಗಿತಾವಂದಾ ॥

ಚಾಲ:

ಸಂಭಟ್ಟರ ಅಂದಾರ ಕುಂಭಕ
ಗುರು ಬಂದಾ ರಂಭರಿಂದಲಿ
ಪಿಡಾ ಪರಿಹಾರವು ।
ಪತಿವ್ರತೆಯರ ಕೈಸೋಂಕಿದ
ಮಾತ್ರವೆ ಅತಿ ಬೇಗದಿಂದಾ
ತೆರೆಯುವವು ಪುರದ್ವಾರವು
ಧರಿಸುರರ ನುಡಿಕೇಳಿ ಹರುಷದಿಂದ
ಅರಸನು ಪುರದೊಳಗ
ಹೊಡಿಸಿದ ಡಂಗುರವು ।

ಏರು:

ಖರೆ ಪತಿವೃತೆಯರು ನಮ್ಮ
ಪುರದ್ವಾರ ತಗಿಸಿದರ ದೂರ
ಮಾಡುವೆನೆದಾ ಅವರ ದರೀದ್ರ ದೋಷಾ ।
ನೀಲಕಂಠನಿಂದ ಆದಾಳ ನಿರ್ದೋಷಾ ॥ ಇನೇ ಚೌಕ ॥

ಆನಿ ವಜ್ಜೆ ಭಂಗಾರ ಹೇರಿಸಿ
ಓಣಿಓಣಿ ತಿರಗಿಸಿ ಮಾನಕೊಡ
ಕೊಡತೀನಂದ ಅಗಸಿ ತೆಗೆಸಿದವರಿಗಿ ।
ಊರ ಒಳಗ ಹೆಂಗಸರಿದ್ದ ದ್ವಾರಗಳ
ತೆಗಿಲಿಲ್ಲ ಯಾರೂ ಒಬ್ಬರೂ
ಸುಳಿವಲ್ಲರ ಅಗಸೀ ಕಡಿಗಿ ।

ಕಂಡ ರಾಜಾ ಮಂತ್ರಿ ತಮ್ಮ ಹೆಂಡರಿಗಿ
ಹೇಳಿದಾರ ಬಂಡಿ ವಜ್ಜೆ
ಭಂಗಾರ ಕೊಡತೇವ ನಿಮ್ಮ ಪಾಲಿಗಿ ।
ನಾಲ್ಕು ಅಗಸಿ ತೆಗಿ ಬರ್ರೆಂದ್ರ ನಾಳಿಗಿ
ಆರಾಣೇರ ಅಂತಾರ ನಮ್ಮ
ಶ್ಯಾಣೆತನಕ್ಕ ಬೆಂಕಿ ಹಚ್ಚಲಿ
ಜಾಣೆಯರನ್ನು ಯಾಕ ಹಾಕತೀರ ಬೈಲಿಗಿ ।
ಮರಾ ಏರಿದವರ ಕಾಲ ಊರುರ
ಒಮ್ಮೆ ಧರಣಿಗಿ ನಾರೆರನ್ನ
ಯಾಕ ಹಚ್ಚತೇರಿ ವರಿಗಿ ।
ಕಣ್ಣು ಮುಚ್ಚಣಿಕಿ ಆಡೂವಾಗ
ಮಣ್ಣಿಗಿ ಮಣ್ಣ ಕಲಿಸೀದೆವು
ಸಣ್ಣ ಹುಡುಗೋರದಿತ್ತೊ ನಮಗ ಸಲಿಗಿ ।

ಆಡಿದೇವ ಅಂದ್ರ ಗಂಡಾಹೆಣತಿ ಆಗಿ ॥
ಎಷ್ಟೋ ಮಂದಿ ಹೆಂಗಸರೆಲ್ಲಾ
ಖೊಟ್ಟಿ ಹೇಳಿ ಉಳಕೊಂಡಾರ
ಹೊಟ್ಟಿ ಕಡಿತಾವಂತ ಹಾಕ್ಯಾರ ಹಾಸಿಗಿ ।
ಶೆಟ್ಟಿ ಸಾವಕಾರ ಹೆಂಡ್ರ ತಮ್ಮ
ಗುಟ್ಟ ತಿಳಿಗೊಡಲಿಲ್ಲ ಮುಟ್ಟಾಗಿ
ಕುಂತೇವ ಅಂದ್ರ ಮೂಲಿಗಿ ।
ಆಗುಲ್ಲಾ ಗಂಟೇರ ಅಂದ್ರ ನಮಗ
ಗುಳ್ಳಿಬ್ಯಾನಿ ಬಂದಿದ್ದು ಆಗ
ಎಲ್ಲೆಲ್ಲಿ ವೈದ್ಯರ ಬಂದ ಕೈ ಹಚ್ಚಿದಾರ ನಮ್ಮ ಮೈಗಿ ।
ಪತಿವೃತಾ ನಮ್ಮ ಹಾಳಾಗಿ ॥

ಚಾಲ:

ಅರಸೇರ ಆಡಿದಂಥಾ ಬಿರುಸು
ಭಾಷಣ ಕೇಳಿ ದೊರೆಮಂತ್ರಿ
ಗಳಿಗಾತ ಉಪರತಿಯು ।
ವನಜಾಕ್ಷಿ ನೀಲಾವತಿ ಕನಸಿನಲ್ಲಿ
ಪರಮೇಶ್ವರ ಬಂದ
ಘನ ಯುಕ್ತಿ ತಿಳಿಸ್ಯಾನ ಪಶುಪತಿಯು ।
ನಾಳಿಗಿ ಹೋಗಿ ನಾಳಿಗಿ
ನಾಲ್ಕೂ ಅಗಸೀ ತಗಸಿ ಬಾರವ್ವ ।

ಏರು:

ಜಗದೊಳಗ ಅನಿಸಿತು ಪತಿವೃತೆಯು ।
ಇಷ್ಟ ಕೇಳಿ ಚಟ್ಟನೆದ್ದ
ನೋಡಿದಾಳ ಮಟಾಮಯ ಆಗಿದ್ದ ಸರ್ವೇಶಾ ।
ನೀಲಕಂಠನಿಂದ ಆದಾಳ ನಿರ್ದೋಷಾ ॥ ೪ನೇ ಚೌಕ ॥

ಸುರ್ಯೋದಯಕ್ಕ ಸ್ನಾನಾ ಮಾಡಿ
ಗುರು ಕೊಟ್ಟ ವಿಭೂತಿ ಧರಿಸಿ
ಪರಿಶುದ್ಧಾದ ಪಂಚಾಕ್ಷರಿ ಜಪಿಸಿದಳು ।
ನಿತ್ಯದಂತೆ ಹೋಗಿ ತನ್ನ
ಪತಿಪಾದ ಪೂಜಾ ಮಾಡಿ
ಭಕ್ತಿಯಿಂದ ನಮಸ್ಕಾರ ಮಾಡಿದಳು ।
ಆ ಪ್ರಾಣೇಶನ ಪಾದ ತೀರ್ಥ
ಚಾಣಿಗಿಯೊಳಗ ತುಂಬಿಕೊಂಡ
ಓಣಿ ಹಿಡದ ನೀಲಾವತಿ ಹೊರಟಾಳು ।
ಗೌರಿಪೂಜೆಗೆ ಹೋದಂಗಾತು ಬಾನನ ಮಗಳು ॥

ಊರ ಜನರು ಹೋಗಿ ಆಕಿನ
ಅದರ ಬಿಟ್ಟ ನೋಡಾಕತ್ರ
ಹರದೇರ ನಿಂತಿದ್ರ ಎಡಬಲದೊಳು ।
ಸೊಗಸಿನಿಂದ ಹೋಗಿ ನಾಲ್ಕೂ
ಅಗಸಿ ಬಾಗಿಲ ಪೂಜಾ ಮಾಡಿ
ಭಕ್ತಿಯಿಂದ ಪತಿತೀರ್ಥ ಸಿಡಿಸಿದಳು ।
ಷಡಕ್ಷರಿ ನುಡಿದಾಕ್ಷಣಕ್ಕ
ಖಢಢಾ ತಗದಾವು ಪುರದ್ವಾರಗಳು ।
ತಡಾ ಇಲ್ದ ವೃತ್ತಾಂತ ಹೋತ ರಾಜನ ಸಭೆಯೊಳು ॥
ಪ್ರೀತಿಯಿಂದ ಅರಸಕೀಗಿ ಹತ್ತೂರ
ಭಕ್ಷೀಸ ಕೊಟ್ಟ ಮುತ್ತಿನ
ಉಡಕ್ಕಿ ಹಾಕಿಸಿದ ಉಡಿಯೊಳು ।
ಆನಿ ವಜ್ಜೆ ಭಂಗಾರ ಹೇರಿಸಿ
ಮಾವಪಾನ ಕಲುಹೀದಾನ
ಹೀನ ಅತ್ತಿ ನೋಡಿ ಹಿಗ್ಯಾಳ ತನ್ನ ಮನದೊಳು ।
ಗಂಡನ ಸಂಶೆ ತೊಳದ ಹೋತ
ಮಂಡಲದೊಳಗ ಕೀರ್ತಿ ಉಳಿತ
ಹೆಂಡತಿ ಇದ್ರ ಇರಬೇಕೆಂದ ಇಂಥವಳು ।
ಪತಿವೃತಾ ಕುಲ ಉದ್ಧರಿಶಾಳು ॥

ಚಾಲ:

ನೀಲಾವತಿ ಪದ ಕೇಳಿದವರಿಗಿ
ಭಾಳ ಪುಣ್ಯೇವು ಭಾಳ ಪುಣ್ಯೇವು
ಶಿವ ಕೊಡುವನು ಆಶ್ರಯವು ।
ಸತಿಯರು ಅಕಿಯಂತೆ ಪತಿ
ಸೇವಾ ಮಾಡಿದರ ಅತೀಭಾಗ್ಯ–
ದಿಂದ ಪುಣ್ಯ ದೊರೆಯವವು ।

ಧರೆಯೊಳು ಪುರದ ಗೋಕಾವಿ
ಶಾಹೀರಗಳು ಸರ್ವ-
ಪಂಡಿತರಿಗೆ ಅತಿ ಪರಿಚಯವು ।

ಏರು:

ಸಾತು ಕ್ಯಾಮಣ್ಣಂತಾರ ಹಿಂತಾ
ಪತಿವೃತಾ ಸತಿ ಇದ್ರ ಅತಿ
ಭಾಗ್ಯದಿಂದ ದೊರೆಯುವದು ಮುಕ್ತಿ ದೋಷಾ ।
ನೀಲಕಂಠನಿಂದ ಆಗಿದಾಳ ನಿರ್ದೋಷಾ ॥ ಹಿನೇ ಚೌಕ ॥

ಸಾತು ಕ್ಯಾಮಣ್ಣನ ಲಾವಣಿಗಳು: ಸಂ. ಡಾ. ನಿಂಗಣ್ಣ ಸಣ್ಣಕ್ಕಿ , ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೪.

ಟಿಪ್ಪಣಿ: 'ಕೆರೆಗೆ ಹಾರ' ಕಥನಗೀತೆ ಅನೇಕ ಕಡೆಗಳಲ್ಲಿ ಸಿಗುವುದರಿಂದ ಈ ಮಹಾಪ್ರಬಂಧದಲ್ಲಿ ಅನುಬಂಧದ ರೂಪದಲ್ಲಿ ಅದನ್ನು ಸೇರಿಸಿರುವುದಿಲ್ಲ. ಮಹಾಪ್ರಬಂಧದ ಗಾತ್ರ ವೃಥಾ ಹೆಚ್ಚಾಗುವುದರಿಂದ ಈ ರೀತಿ ಮಾಡಲಾಗಿದೆ.

ಅಧ್ಯಾಯ ೫

ಸಮಕಾಲಿನ ಸಂದರ್ಭ ಮತ್ತು ವರ್ಗಸಂಘರ್ಷ

ಅಧ್ಯಾಯ ೫

ಸಮಕಾಲೀನ ಸಂದರ್ಭ ಮತ್ತು ವರ್ಗಸಂಘರ್ಷ

ಈಗಾಗಲೇ ತಿಳಿಸಿರುವಂತೆ ವರ್ಗಸಂಘರ್ಷ ಎನ್ನುವುದು ಎಲ್ಲಾ ಕಾಲಕ್ಕೂ ಪ್ರಸ್ತುತ. ಅದು ವ್ಯಕ್ತವಾಗುವ ಬಗೆ ಆಯಾ ಕಾಲಘಟ್ಟದ ಸಾಮಾಜಿಕ ವ್ಯವಸ್ಥೆಯ ಮೇಲೆ ಅವಲಂಬಿತವಾಗಿರುತ್ತದೆ. ಹಾಗೂ ಬೇರೆ ರೂಪದಲ್ಲಿ ಎಲ್ಲಾ ಕಾಲಘಟ್ಟದಲ್ಲೂ ಕಾಣಿಸಿಕೊಳ್ಳುತ್ತದೆ. ಪ್ರಾಚೀನ ಕಾಲದಲ್ಲಿ ಭೂಮಾಲೀಕ ಮತ್ತು ಕೂಲಿಕಾರರ ನಡುವಿನ ಸಂಘರ್ಷ ಹೆಚ್ಚಾಗಿ ಕಾಣಸಿಗುತ್ತಿತ್ತು. ಕಾಲನಂತರದಲ್ಲಿ ಬಂಡವಾಳಶಾಹಿ ಕಾರ್ಮಿಕ, ರೈತ–ಪ್ರಭುತ್ವ, ಇವರ ನಡುವಿನ ಸಂಘರ್ಷ ಹೆಚ್ಚಾಗಿ ಕಂಡುಬಂತು. ಸಮಕಾಲೀನ ಸಂದರ್ಭದಲ್ಲಿ ವರ್ಗಸಂಘರ್ಷ ಬೇರೆ ಬೇರೆ ರೂಪಗಳಲ್ಲಿ ವ್ಯಕ್ತವಾಗುತ್ತಿದೆ.

ಮಹಿಳೆ ಯಾವ ಜಾತಿಯವಳಾಗಿದ್ದಿರಲಿ, ಯಾವಧರ್ಮದವಳಾಗಿರಲಿ ಅವಳು ಅಸ್ಪೃಶ್ಯಳೇ ಹಾಗೂ ಶೋಷಿತಳೇ. ಬ್ರಾಹ್ಮಣ ಮಹಿಳೆ ಕೂಡ ಹೀಗೆ. ಶೋಷಿತ ಎಂಬ ಪದಕ್ಕೆ 'ದಲಿತ' ಎಂಬ ಪರಿಕಲ್ಪನೆ ಕೂಡಾ ಉಂಟು. ಇದು ಮಾರ್ಕ್ಸ್‌ವಾದಿ ಪರಿಕಲ್ಪನೆ. ಈ ಪರಿಕಲ್ಪನೆ ದೊಡ್ಡ ಕೈಗಾರಿಕಾ ಸಂದರ್ಭದಲ್ಲಿ ಬೆಳೆದು ಬಂದುದಾಗಿದೆ. ಹಾಗೆಯೇ ಅದು ವರ್ಗ (ಕ್ಲಾಸ್) ಸಂಬಂಧದಲ್ಲಿ ಬೆಳೆದಿದೆ. ಹಾಗಂತ ಭಾರತದ ಸಂದರ್ಭದಲ್ಲಿ ಅದು ನಿಷ್ಪ್ರಯೋಜಕ ಎಂದಲ್ಲ. ಕೆಲವರು ಹಾಗೆ ಪ್ರತಿಪಾದಿಸುತ್ತಾರೆ. ಆಳುವ ವರ್ಗಕ್ಕೆ ಜಾತಿಯಲ್ಲಿ ಒಡೆದುಹೋದ ದುರ್ಬಲ ಸಮಾಜವನ್ನು ಆಳುವುದು ಸುಲಭ. ಈ ಹಿನ್ನಲೆಯಲ್ಲಿ ನೋಡುವುದಾದರೆ ಹೆಣ್ಣು ಕೆಳವರ್ಗಕ್ಕೆ ಸೇರಿದವಳೇ ಆಗಿದ್ದಾಳೆ. ಏಕೆಂದರೆ ಸಮಾಜದ ಯಾವುದೇ ಧರ್ಮ, ಜಾತಿಯಲ್ಲಿಯೂ ಮಹಿಳೆಗೆ ಆರ್ಥಿಕ ಯಜಮಾನಿಕೆಯನ್ನು ಕೊಟ್ಟಿಲ್ಲ. ಶೋಷಣೆಯ ಆಧಾರದ ಮೇಲೆ ನಿಂತಿರುವ ಸಮಾಜ ಶೋಷಣಾತ್ಮಕ ಸಂಸ್ಕೃತಿಯನ್ನು ರೂಪಿಸಿ ತನ್ನ ವ್ಯವಸ್ಥೆಯನ್ನು

ಮುಂದುವರೆಸುತ್ತದೆ. ಶೋಷಣೆಯನ್ನೇ ಕೇಂದ್ರವಾಗಿರಿಸಿಕೊಂಡಿರುವ ಸಮಾಜ ಊಳಿಗಮಾನ್ಯ ಪೂರ್ವ, ಊಳಿಗಮಾನ್ಯ, ಬಂಡವಾಳಶಾಹಿ ಸಾಮಾಜಿಕ ಚೌಕಟ್ಟುಗಳಲ್ಲಿ ಶೋಷಣೆಯನ್ನು ರಕ್ಷಿಸಲು ಹಾಗೂ ಮುಂದುವರೆಸಲೂ ಉಪಯೋಗಿಸಲ್ಪಟ್ಟ ಮೌಲ್ಯಗಳನ್ನು ಯಾವ ಲಂಗುಲಗಾಮುಗಳಿಲ್ಲದೇ ಧಾರ್ಮಿಕ, ಸಾಂಸ್ಕೃತಿಕ ಚೌಕಟ್ಟುಗಳಲ್ಲಿ ಇಂದಿಗೂ ಉಪಯೋಗಿಸಿ ಶೋಷಣೆಯನ್ನು ದೃಢಪಡಿಸುತ್ತದೆ. ಶೋಷಣೆಯನ್ನು ಸಾರ್ವತ್ರಿಕ ದೃಷ್ಟಿಕೋನದೊಳಗೆ ಚಿಂತಿಸುವಾಗ ಮೊದಲು ಗೌಣವಾಗುತ್ತದೆ. ಲಿಂಗಭೇದವೇ ಪ್ರಧಾನವಾದರೆ, ಪುರುಷನು ಮೊದಲ ಶ್ರೇಯಾಂಕದಲ್ಲಿರುತ್ತಾನೆ. ಇಂಥ ಸಂದರ್ಭಗಳಲ್ಲಿ ಕೌಟುಂಬಿಕ ಚೌಕಟ್ಟಿನೊಳಗಡೆಯೇ ಮಹಿಳೆಯ ಮೇಲೆ ದೌರ್ಜನ್ಯ ನಡೆಯುತ್ತಿರುತ್ತದೆ. ಕುಟುಂಬವನ್ನು ಖಾಸಗಿಯಾಗಿ ಗುರುತಿಸಿದ್ದರಿಂದ ಇದರೊಳಗಡೆ ಮಹಿಳೆ ಅನುಭವಿಸುವ ನೋವು ಖಾಸಗಿಯೆಂದೇ ಪರಿಗಣಿಸಲ್ಪಡುತ್ತವೆ. ಖಾಸಗಿ ಸಂಗತಿಗಳನ್ನು ಬಹಿರಂಗಗೊಳಿಸಿಬಾರದೆಂಬ ಸಾಮಾಜಿಕ ನಿಯಮ ಭಾರತದಲ್ಲಿದೆ. ಹೀಗಾಗಿ ತನ್ನ ಮೇಲೆ ದೌರ್ಜನ್ಯ ನಡೆಯುತ್ತಿದೆ ಎನ್ನುವುದೂ ಗೊತ್ತಿದ್ದರೂ ಅದನ್ನು ಯಾರೊಂದಿಗೂ ಹಂಚಿಕೆಕೊಳ್ಳಲಾರದ ಸಂಕಷ್ಟದಲ್ಲಿರುತ್ತಾಳೆ. ಹೀಗಾಗಿ ಬಹಳಷ್ಟು ಸಂದರ್ಭಗಳಲ್ಲಿ ಮಹಿಳೆ ತನ್ನ ನೋವುಗಳನ್ನು ಅಭಿವ್ಯಕ್ತಗೊಳಿಸುವುದಿಲ್ಲ. ಅವುಗಳನ್ನು ಅದುಮಿಡುತ್ತಾಳೆ. ಗಂಡನಂದ ದೈಹಿಕ ಮತ್ತು ಮಾನಸಿಕ ಹಲ್ಲೆಗೊಳಗಾಗುತ್ತಿರುವ ಎಷ್ಟೋ ಮಹಿಳೆಯರಿಗೆ ತಾವು ಹಲ್ಲೆಗೊಳಗಾಗುತ್ತಿದ್ದೇವೆ ಎನ್ನುವ ಅರಿವು ಇರುವುದಿಲ್ಲ. ಗಂಡನು ಹೆಂಡತಿಯ ಮೇಲೆ ನಡೆಸುವ ಹೊಡೆತ, ಬಡೆತಗಳು ಬೈಗುಳಗಳು ಆತನ ಹಕ್ಕಾಗಿ, ಅವಳ ಮೇಲಿನ ಪ್ರೀತಿಯ ದ್ಯೋತಕಗಳಾಗಿ ನಿರೂಪಿಸಲ್ಪಡುತ್ತವೆ. 'ನಿನ್ನ ಗಂಡ ಅನ್ಯ ಹೆಣ್ಣಿನೊಂದಿಗೆ ಸಂಬಂಧ ಬೆಳೆಸಿದ್ದಾನೆ' ಎಂದು ಹೇಳಿದರೂ 'ನಾ ಮುಡಿಯುವ ಮಲ್ಲಿಗೆ ಅವಳೊಂದು ಗಳಿಗೆ ಮುಡಿಯಲಿ' ಎಂದು ನುಡಿಯುತ್ತಾಳೆ. ಈ ಎಲ್ಲಾ ಸಂದರ್ಭಗಳಲ್ಲಿ ಹೆಂಡತಿಯಾದವಳು ಅವಮಾನವನ್ನು ಎದುರಿಸಿದ್ದರೂ ಅವಳು ಅದನ್ನು ಅವಮಾನ ಎಂದು ಗ್ರಹಿಸದ ಸಾಮಾಜಿಕ ಸ್ಥಿತಿಯಲ್ಲಿರುತ್ತಾಳೆ. ಅಂದರೆ ಅವಳ ನೋವುಗಳು ನಿರ್ಲಕ್ಷಿಸಲ್ಪಟ್ಟಿರುತ್ತವೆ. ಹೆಣ್ಣಿನ ನೋವುಗಳನ್ನು ಕರ್ಮಫಲವಾಗಿಯೇ ನಿರ್ವಚಿಸಲ್ಪಟ್ಟಿರುವುದರಿಂದ ನೋವುಗಳನ್ನು ಅವಳು ಸ್ವೀಕರಿಸುತ್ತಾಳೆ. ಯಾಕೆಂದರೆ ನೋವುಗಳನ್ನು ತಿರಸ್ಕರಿಸಿದರೂ, ಅವುಗಳಿಂದ ಆಕೆಗೆ ಮುಕ್ತಿ ಸಿಗುವುದಿಲ್ಲ. ಅವುಗಳನ್ನು ಮೀರಲು ಪ್ರಯತ್ನಿಸಿದರೂ ಪರ್ಯಾಯ ಬದುಕು ಇಲ್ಲವಾದ್ದರಿಂದ ಅವಳಲ್ಲಿ ಪ್ರತಿಭಟನಾ ಅಂಶ ಕಡಿಮೆ. ಕೆಲವು ವಿಶಿಷ್ಟ ಸಂದರ್ಭದಲ್ಲಿ ಸ್ತ್ರೀಯರೂ ಸಹ ಪುರುಷರನ್ನೇ ಮೀರಿಸಿ ನಿಲ್ಲಬಲ್ಲರು. ಶೋಷಣೆಯನ್ನು ಜಾತಿ ಧರ್ಮಗಳಾಚೆ ಚಿಂತಿಸಿದರೂ ಸಾರ್ವತ್ರಿಕತೆಯನ್ನು ಪ್ರತಿಬಿಂಬಿಸುತ್ತದೆ. ಅಂತಹ ಸಂದರ್ಭದಲ್ಲಿ ಜನಾಂಗಗಳೆಲ್ಲವೂ ಒಂದೇ ಎಂಬ ಭಾವನೆಗೆ ಇಂಬು ನೀಡುತ್ತದೆ. ಆದರೆ ನೈಜತೆಯೊಳಗೆ ಹಾಗೆ ಕಾಣಿಸಿಕೊಳ್ಳುವುದಿಲ್ಲ. ಜಾತಿ, ಜನಾಂಗ, ಮತ್ತು ಬುಡಕಟ್ಟು ಸಂಸ್ಕೃತಿಯ ಪ್ರಭೇದಗಳು ಸಹ ಅಷ್ಟೇ ವ್ಯತ್ಯಾಸಗಳನ್ನು ಹೊಂದಿವೆ. ಇತ್ತೀಚಿನ ದಿನಗಳಲ್ಲಿ ಕಂಡುಬರುವ ಗಾರ್ಮೆಂಟ್ಸ್ ಸಂಸ್ಕೃತಿ (ಸಿದ್ಧ ಉಡುಪುಗಳನ್ನು ತಯಾರಿಸುವ ಕಾರ್ಖಾನೆ)ಯಲ್ಲಿ ಹೆಚ್ಚಾಗಿ ಶೋಷಣೆಯೆನ್ನುವುದು ಕಂಡುಬರುತ್ತದೆ. ಸಮಾಜದ ತೀರ ಕೆಳಹಂತದಲ್ಲಿರುವ ಬಡವರು ತಮ್ಮ ಸಂಸಾರದ ಹಸಿವನ್ನು ನೀಗಿಸಿಕೊಳ್ಳಲು

ಶ್ರೀಮಂತರು ನಡೆಸುವ ಗಾರ್ಮೆಂಟ್ಸ್‌ಗಳಲ್ಲಿ ಕೆಲಸಕ್ಕೆ ಸೇರಿಕೊಳ್ಳುತ್ತಾರೆ. ಇಂತಹ ಗಾರ್ಮೆಂಟ್ಸ್‌ಗಳಲ್ಲಿ ಹೆಚ್ಚಾಗಿ ಮಹಿಳೆಯರು, ಹದಿಹರೆಯದ ಹುಡುಗಿಯರು ಉದ್ಯೋಗಸ್ಥರಾಗಿರುತ್ತಾರೆ. ಗಾರ್ಮೆಂಟ್ಸ್ ಮಾಲೀಕರು ಇವರಿಗೆ ಕನಿಷ್ಠಮಟ್ಟದ ಸಂಬಳವನ್ನು ಕೊಟ್ಟು ಗರಿಷ್ಠ ಕೆಲಸವನ್ನು ತೆಗೆಯುತ್ತಾರೆ. ಎಷ್ಟೋ ಸಂಸಾರಗಳು ಈ ಗಾರ್ಮೆಂಟ್ಸ್‌ಗಳಲ್ಲಿ ದುಡಿಯುವ ಮಹಿಳೆಯರ ಮತ್ತು ಹುಡುಗಿಯರ ಸಂಬಳದ ಆಧಾರದ ಮೇಲೆ ನಿಂತಿರುತ್ತವೆ. ಇಂತಹ ಸಂದರ್ಭಗಳಲ್ಲಿ ಶ್ರೀಮಂತರು ಅಂದರೆ ಈ ಸಂದರ್ಭದಲ್ಲಿ ಗಾರ್ಮೆಂಟ್ಸ್‌ನ ಮಾಲೀಕರು ತಮ್ಮಲ್ಲಿ ದುಡಿಯಲು ಬಂದ ಹೆಂಗಸರಿಗೆ, ಹುಡುಗಿಯರಿಗೆ ಆಸೆ, ಆಮಿಷಗಳನ್ನು ಒಡ್ಡಿ ತಮ್ಮ ಕಾಮತೃಷೆಗೆ ಬಳಸಿಕೊಳ್ಳಲು ಪ್ರಯತ್ನಿಸುತ್ತಾರೆ. ಕೆಲವು ಮಂದಿ ಇಂತಹ ಆಸೆ, ಆಮಿಷಗಳಿಗೆ ಅನಿವಾರ್ಯವಾಗಿ ಬಲಿಯಾಗಬೇಕಾದ ಸಂದರ್ಭ ಒದಗಿಬರುತ್ತದೆ. ಇನ್ನೂ ಕೆಲವರು ಇಂತಹ ಆಸೆ, ಆಮಿಷಗಳಿಗೆ ಬಲಿಯಾಗದೇ ಪ್ರತಿಭಟಿಸುವುದುಂಟು. ಆದರೆ ಈ ರೀತಿಯ ಪ್ರತಿಭಟನೆಗಳಿಗೆ ಸಮಾಜದಲ್ಲಿ ಯಾವ ರೀತಿಯ ಮನ್ನಣೆ ಸಿಗುತ್ತದೆನ್ನುವುದು ಕೂಡ ಬಹಳ ಮುಖ್ಯವಾದ ವಿಷಯವಾಗಿದೆ. ಶೋಷಣೆಯನ್ನು ಪ್ರತಿಭಟಿಸಿದ ಹೆಣ್ಣಿಗೆ ಪ್ರತಿಭಟಿಸಿದ ಸಂದರ್ಭದಲ್ಲಿ ಇತ್ತೀಚಿನ ದಿನಗಳಲ್ಲಿ ಬಹಳ ಶಕ್ತಿಶಾಲಿಯಾಗಿ ಕೆಲಸಮಾಡುತ್ತಿರುವ ಮಾಧ್ಯಮಗಳ ಮೂಲಕ ವ್ಯಾಪಕವಾದ ಪ್ರಚಾರ ಸಿಗಬಹುದು. ಆಕೆಯ ಶೌರ್ಯವನ್ನು ಮೆಚ್ಚಿ ಆಕೆಯ ಪ್ರಶಂಸೆಯನ್ನು ಸಮಾಜ ಮಾಡಬಹುದು. ಆದರೆ ಆಕೆಗೆ ಆರ್ಥಿಕ ಭದ್ರತೆಯನ್ನು ಒದಗಿಸುವ ನಿಟ್ಟಿನಲ್ಲಿ ಯಾರೂ ಕೂಡ ಮುಂದೆ ಬರುವುದಿಲ್ಲ. ಶೋಷಣೆಯ ವಿರುದ್ಧವಾಗಿ ಧ್ವನಿಯೆತ್ತಿದ್ದ ಹೆಣ್ಣಿನ ಕುಟುಂಬ ಬೀದಿಗೆ ಬೀಳಬೇಕಾದ ಪ್ರಸಂಗ ಒದಗಿಬರುತ್ತದೆ. ಇಂತಹ ಸಂದರ್ಭಗಳಲ್ಲಿ ಗಾರ್ಮೆಂಟ್ಸ್ ಮಾಲೀಕರಿಗೆ ತಾತ್ಕಾಲಿಕ ಹಿನ್ನಡೆಯಾದರೂ ಅಧಿಕಾರಶಾಹಿವರ್ಗ ಯಾವತ್ತಿಗೂ ಇವರ ರಕ್ಷಣೆಗೆ ನಿಂತಿರುತ್ತದೆ.

ಇನ್ನು ಬೇರೆ ಬೇರೆ ರೂಪಗಳಲ್ಲಿ ರೀತಿಯಲ್ಲಿ ಸ್ತ್ರೀ ಶೋಷಣೆ ನಡೆಯುತ್ತಿದೆ. ಸ್ತ್ರೀಯನ್ನು ಅದರಲ್ಲೂ ಅಸ್ಪೃಶ್ಯ ಸ್ತ್ರೀಯರನ್ನು ದೇವರ ಧರ್ಮದ ಹಾಗೂ ಸಂಪ್ರದಾಯದ ಹೆಸರಿನಲ್ಲಿ ದೇವದಾಸಿ, ಜೋಗತಿ, ಬಸವಿ, ಎನ್ನುವ ಅನಿಷ್ಟ ಸಂಕೋಲೆಯ ಸಂಸ್ಕೃತಿಗಳ ಮೂಲಕ ಅಮಾನವೀಯ ಶೋಷಣೆ ಮಾಡುವುದು, ಇಂದಿಗೂ ಸರ್ವೇಸಾಮಾನ್ಯವಾಗಿದೆ. ಆದರೆ ಹಿಂದಿನಂತೆ ಇಂದು ತೀವ್ರತರವಾಗಿಲ್ಲದೇ ಇದ್ದರೂ ಗ್ರಾಮೀಣಭಾಗದಲ್ಲಿ ಅಲ್ಲಲ್ಲಿ ಕಂಡುಬರುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಸ್ತ್ರೀಯ ಶೋಷಣೆ ಬೇರೆಯ ರೂಪದಲ್ಲಿ ಆಗುತ್ತಿದೆ. ಸ್ತ್ರೀಯನ್ನು ಜಾಹೀರಾತಿನಲ್ಲಿ ಅರೆನಗ್ನಳಾಗಿ ತೋರಿಸುವುದು. ಆ ರೀತಿ ತೋರಿಸಿದರೆ ಮಾರಾಟಕ್ಕಿರುವ ಸರಕನ್ನು ಸುಲಭವಾಗಿ ಮಾರಬಹುದೆಂಬ ಭ್ರಮೆಯನ್ನು ಹುಟ್ಟಿಸುವುದು. ಭ್ರಮೆಯಲ್ಲಿಯೇ ಸ್ತ್ರೀಯ ಶೋಷಣೆ ಮಾಡುತ್ತಾ ಸ್ತ್ರೀಯ ಮಾನ ಹರಾಜಾಗುವಂತೆ ಬಿಂಬಿಸುವುದು. ಇದು ಪುರುಷ ಪ್ರಧಾನ ಸಮಾಜದಲ್ಲಿ ದಿನನಿತ್ಯ ನಡೆಯುತ್ತಿರುವ ವಿದ್ಯಮಾನ. ಇದಕ್ಕೆ ಪ್ರತಿಭಟಿಸುವ ಸ್ಥಿತಿಯಲ್ಲಿ ಸ್ತ್ರೀವರ್ಗವಿಲ್ಲ. ಜಾಗತೀಕರಣದ ಹಿನ್ನಲೆಯಲ್ಲಿ ಪಾಶ್ಚಾತ್ಯ ಸಂಸ್ಕೃತಿಯನ್ನು ಅಪ್ಪಿಕೊಂಡಿರುವ ಭಾರತೀಯ ಸ್ತ್ರೀಯರು ಪುರುಷರಿಗಿಂತ ತಾವೇನೂ ಕಡಿಮೆಯಿಲ್ಲ ಎನ್ನುವುದನ್ನು

ಸಮಾಜದಲ್ಲಿ ಸಾಬೀತುಪಡಿಸಬೇಕಾಗಿದೆ. ಆದ್ದರಿಂದ ಇಂಥ ಎಲ್ಲಾ ಶೋಷಣೆಗಳನ್ನು ಸಹಿಸಿಕೊಂಡು ಅದರಲ್ಲೇ ಸಮಾಜದಲ್ಲಿ ತಮ್ಮದೇ ಆದ ಹೆಸರನ್ನು ಮಾಡಲು ಮುಂದಾಗುತ್ತಾರೆ. ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಯರು ಸಾವಿರ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿಕೊಂಡಿರುವುದು ಹಾಗೂ ಇದನ್ನು ಉಳಿಸಿಕೊಳ್ಳಲು ಪುರುಷ ಹೆಣೆದ ಶೋಷಣೆಯ ಬಲೆಯಲ್ಲಿ ಮುಕ್ತಗೊಳ್ಳಲು ಶತ-ಶತಮಾನಗಳಿಂದಲೂ ಸಾಧ್ಯವಾಗದಿರುವುದು ಅಕ್ಷರಶಃ ಸತ್ಯ.

ಹಿಂದಿನಕಾಲದಲ್ಲಿ ಕಂಡುಬರುವ ಊಳಿಗಮಾನ್ಯ ಪದ್ಧತಿಯ ಶೋಷಣಾ ಕ್ರಮಗಳು ಪ್ರಸ್ತುತ ಕಾಲಘಟ್ಟದಲ್ಲಿ ಬೇರೆ ಬೇರೆ ರೂಪಗಳಲ್ಲಿ ಕಾಣಿಸಿಕೊಳ್ಳುತ್ತವೆ. ಆದರ್ಶ ಮತ್ತು ಮೌಲ್ಯಗಳ ಮುಸುಕು ಹಾಕಿಕೊಳ್ಳುತ್ತವೆ. ಸಾಮಾನ್ಯವಾಗಿ ಆದರ್ಶಮಯತೆ ಮತ್ತು ಮೌಲ್ಯ ನಿಷ್ಠೆಯನ್ನು ಪ್ರಕಟಿಸುವ ಸಾಮಾನ್ಯ ಜನ ಸಮುದಾಯ ಒಳಸಂಚನ್ನು ಅರ್ಥಮಾಡಿಕೊಳ್ಳದೇ ಹೇರಿದ್ದನ್ನೆಲ್ಲ ತನ್ನದೆಂದೇ ಒಪ್ಪಿಕೊಳ್ಳುತ್ತದೆ. ತನ್ನ ಶ್ರಮದ ಉತ್ಪಾದನೆಯೇ ತನ್ನದಾಗದೆ ಬೇರೆಯವರ ಸ್ವತ್ತಾಗುವ ಬಂಡವಾಳ ಶಾಹಿ ವ್ಯವಸ್ಥೆಯಲ್ಲಿ ಇಂಥ ಮಾನಸಿಕ ಸ್ಥಿತಿ ಸ್ವಾಭಾವಿಕ. ಭೂಮಿಯಲ್ಲಿ ದುಡಿಯುವ ರೈತ-ಕೂಲಿಕಾರರಿಗಾಗಲಿ, ಬೆವರು ಸುರಿಸುವ ಕಾರ್ಮಿಕರಿಗಾಗಲಿ ತಾವೇ ಉತ್ಪಾದಿಸುವ ಸರಕಿಗೆ ಒಡೆಯರಾಗುವ ಅಥವಾ ಒಡೆತನದಲ್ಲಿ ಪಾಲುಪಡೆಯುವ ಅವಕಾಶವಿಲ್ಲ. ನಿಗಧಿತ ವೇತನ ಮಾತ್ರವುಂಟು. ತಮ್ಮ ಕ್ರಿಯಾಶೀಲ ಕ್ಷಣಗಳನ್ನೇ ಕದಿಯುತ್ತಿರುವ ಪದ್ಧತಿಯಲ್ಲಿ ಅವರು ತಮ್ಮದೆಂದು ಭಾವಿಸುವ ಶ್ರಮದ ಪಾಲನ್ನು ಪಡೆಯುತ್ತಿಲ್ಲ. ಆದ್ದರಿಂದ ಅವರು ಇದ್ದಲ್ಲೇ ಪರಕೀಯರು. ಈ ಪರಕೀಯತೆಯನ್ನು ಸಾಮಾನ್ಯ ಸ್ಥಿತಿಯೆಂಬಂತೆ ಒಪ್ಪಿಕೊಂಡಿರುವ ಅವರು ಇದಕ್ಕೆ ಮೂಲವಾದ ಮೌಲ್ಯ ವ್ಯವಸ್ಥೆಗೆ ಸೂಕ್ಷ್ಮಗಳಿಗೆ ಶರಣಾಗುವುದು ಸಹಜ. ಆದ್ದರಿಂದಲೇ ತ್ಯಾಗ, ದಾನ, ಬಲಿದಾನಗಳು ಬೇರೆಯವರ ಸ್ವಾರ್ಥಕ್ಕೆ ಸಾಧನವಾಗುವ ಸಂಚು ಇವರಿಗೆ ಸ್ಪಷ್ಟವಾಗುವುದಿಲ್ಲ. ಅವು ತಮ್ಮವೇ ಮೌಲ್ಯಗಳೆಂದು ಪರಿಪಾಲಿಸುವ ಜನ ಜಾಸ್ತಿಯಾಗುತ್ತಾರೆ. ತಮ್ಮ ಲಾಭಕ್ಕಾಗಿ ಸಮೂಹವನ್ನೇ ನಂಬಿರುವ ಮಾಧ್ಯಮಗಳು ಪ್ರತಿಷ್ಠಿತ ಮೌಲ್ಯಗಳ ಪರಿಶೀಲನೆಗಿಂತ, ಪ್ರತಿಪಾದನೆಯನ್ನು ಬಯಸುತ್ತವೆ. ಹೀಗಾಗಿ ವರ್ಗಸಮಾಜದಲ್ಲಿರುವ ಶೋಷಣೆಯ ಸೂಕ್ಷ್ಮಸ್ತರಗಳು ಮುಖ್ಯವಾಗದೆ ಅಥವಾ ಮನದಟ್ಟಾಗದೇ ಬಹುಜನ ಮನ್ನಣೆಯ ಮೌಲ್ಯ- ಆದರ್ಶಗಳ ಮಾದರಿಗಳನ್ನು ಮುಂದಿಡುತ್ತವೆ. ಏಕೆಂದರೆ ಮಾಧ್ಯಮಗಳಿಗೆ ಹೆಚ್ಚು ಜನರನ್ನು ತಲುಪುವುದೇ ಮುಖ್ಯವಾಗುತ್ತದೆ. ಬಂಡವಾಳಶಾಹಿ ಮತ್ತು ಅದಕ್ಕೆ ಪೂರಕವಾಗುವ ಪುರೋಹಿತಶಾಹಿಗಳಿಂದ ಕೂಡಿದ ಶೋಷಕ ಶಕ್ತಿಯೇ ಇಂದಿನ ಉಚ್ಚವರ್ಗ, ಈ ವರ್ಗ ಬಡವರನ್ನು ಭದ್ರವಾಗಿ ಹಿಡಿದುಕೊಂಡಿದೆ. ಈಗ ಆರ್ಥಿಕ ಶಕ್ತರು, ಪುರೋಹಿತರು ವಿಶಾಲಾರ್ಥದಲ್ಲಿ ಯಾವುದೋ ಒಂದು ಕೋಮಿಗೆ ಸೀಮಿತವಾಗಿಲ್ಲ. ಎಲ್ಲಾ ಕೋಮುಗಳಲ್ಲೂ ತೀರಾ ಹಿಂದುಳಿದ ಕೋಮುಗಳಲ್ಲೂ, ಈ ಗುಣ, ಸ್ವಭಾವ ಶಕ್ತಿಗಳ ವ್ಯಕ್ತಿಗಳಿದ್ದಾರೆ. ಹೀಗಾಗಿ ಅವರೇ ಒಂದು ವರ್ಗವಾಗುತ್ತಾರೆ. ಇವರೆಲ್ಲ ಸೇರಿಯೇ ಧಾರ್ಮಿಕ ವ್ಯವಸ್ಥೆ ರೂಪಗೊಂಡಿರುವುದರಿಂದ ಎಲ್ಲಾ ಹಂತಗಳಲ್ಲಿ ಶೋಷಣೆಯ ಮಾರ್ಗ ಸುಗಮವಾಗಿದೆ.

ಕೃಷಿಕ್ಷೇತ್ರದಲ್ಲಿಯ ವರ್ಗಸಂಘರ್ಷ ಪ್ರಸ್ತುತ ಕಾಲಘಟ್ಟದಲ್ಲಿ ಬೇರೆಬೇರೆ ಆಯಾಮಗಳಲ್ಲಿ ಕಂಡುಬರುತ್ತಿದೆ. ಹಿಂದಿನ ಕಾಲದಲ್ಲಿ ರೈತರು ತಮಗಾಗುತ್ತಿದ್ದ ಅನ್ಯಾಯವನ್ನು ಪ್ರತಿಭಟಿಸಲು ಒಗ್ಗಟ್ಟಾಗುತ್ತಿರಲಿಲ್ಲ. ಅದಕ್ಕೆ ಅವಕಾಶವು ಇರಲಿಲ್ಲ. ಶ್ರೀಮಂತ ವರ್ಗ ಒಗ್ಗಟ್ಟಾಗುವ ಪ್ರಕ್ರಿಯೆಗೆ ಆಸ್ಪದ ಕೊಡುತ್ತಿರಲಿಲ್ಲ. ರೈತರು ಕೂಡ ಅಸಂಘಟಿತರಾಗಿದ್ದರಿಂದ ತಮ್ಮ ಇತಿಮಿತಿಯೊಳಗೆ ಸಹನಾಶೀಲರಾಗಿ ಬಾಳಬೇಕಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ರೈತರಿಗೆ ವರ್ಗಪ್ರಜ್ಞೆ ಬಂದು ಜಾಗೃತರಾಗಿ ಆಳುವವರ್ಗದ ವಿರುದ್ಧವಾಗಿ ಸಂಘಟಿತರಾಗಿ ಧ್ವನಿ ಎತ್ತುತ್ತಿದ್ದಾರೆ. ರೈತರ ಬವಣೆಗಳಿಗೆ ಸೀಮಿತಗಡಿ ಎನ್ನುವುದಿಲ್ಲ. ಡಾ. ಮುಜಾಫರ್ ಅಸ್ಸಾದಿಯವರು[೧] "ಕೃಷಿಯಲ್ಲಿ ಬಂಡವಾಳಶಾಹಿ ಬೆಳವಣಿಗೆಯ ಪ್ರವೃತ್ತಿಯು ಗ್ರಾಮೀಣ ಪ್ರದೇಶದಲ್ಲಿ ಗ್ರಾಮೀಣ ಬಂಡವಾಳಶಾಹಿ ಅಥವಾ ಶ್ರೀಮಂತ ಹಾಗೂ ಗ್ರಾಮೀಣ ಶ್ರಮಿಕ ಅಥವಾ ಕಾರ್ಮಿಕ ಎಂಬ ವಿರುದ್ಧ ವರ್ಗಗಳನ್ನು ಸ್ಥಾಪಿಸುವ ಗುಣಗಳನ್ನು ಹೊಂದಿದೆ. ಈ ಎರಡು ವರ್ಗಗಳ ನಡುವೆ ಮಧ್ಯಮ ಅಂಚಿನಲ್ಲಿರುವ ಸಣ್ಣ ಹಾಗೂ ಅರೆಶ್ರಮಿಕ ಕಾರ್ಮಿಕ ವರ್ಗಗಳೂ ಇವೆ" ಕೃಷಿಯಲ್ಲಿ ಕಂಡುಬಂದ ವ್ಯತ್ಯಾಸಗಳನ್ನು ಸರಿದೂಗಿಸುವ ಸಲುವಾಗಿ ಸಣ್ಣರೈತ ಸಾಲಮಾಡಿ ಕೃಷಿಕ್ಷೇತ್ರದಲ್ಲಿ ಲಗ್ಗೆ ಇಟ್ಟ ಹೊಸಹೊಸ ಸಲಕರಣೆಗಳನ್ನು ಕೊಂಡುಕೊಂಡ ಇದಕ್ಕೆ ಸಂಬಂಧಿಸಿದಂತೆ ಕೃಷಿಯಲ್ಲಾದ ಬದಲಾವಣೆಯನ್ನು ಮೆಹ್ತಾ ಈ ರೀತಿ ಗುರುತಿಸುತ್ತಾರೆ. "ಕಬ್ಬಿಣದ ನೇಗಿಲು ನಿಧಾನವಾಗಿ ಹಳೆಯ ನೇಗಿಲನ್ನು ಬದಲಾಯಿಸುತ್ತದೆ. ಟ್ರಾಕ್ಟರುಗಳು ಹೆಚ್ಚು ಜನಪ್ರಿಯವಾಗುತ್ತಿವೆ. ಮತ್ತು ಬಾವಿಗಳಿಂದ ಎತ್ತುಗಳ ಸಹಾಯದಿಂದ ನೀರೆತ್ತುವ ಬದಲು ಪಂಪನ್ನು ಉಪಯೋಗಿಸುತ್ತಿದ್ದಾರೆ. ರಾಸಾಯನಿಕ ಗೊಬ್ಬರದ ಉಪಯೋಗ ಹೆಚ್ಚಾಗುತ್ತಿದೆ. ಒಕ್ಕುವ ಮತ್ತು ಬಿತ್ತುವ ಯಂತ್ರಗಳ ಉಪಯೋಗ ಗಣನೀಯವಾಗಿ ಹೆಚ್ಚಾಗುತ್ತಿದೆ"[೨] ಈ ರೀತಿಯಾಗಿ ಹೊಸ ಸಲಕರಣೆ ಮತ್ತು ಹೊಸವಿಧಾನವನ್ನು ರೈತರು ಅನುಸರಿಸಿದ್ದರಿಂದಾಗಿ ಒಂದು ದೃಷ್ಟಿಕೋನದಿಂದ ರೈತರಿಗೆ ಶ್ರಮ, ದಣಿವು, ಕಡಿಮೆಯಾಗಿ ಒಳ್ಳೆಯದಾದರೂ ಕೃಷಿ ಮಳೆಯಾಧಾರಿತವಾದ್ದರಿಂದ ಮಳೆಯ ಕೊರತೆಯಿಂದುಂಟಾಗಿ ಬೆಳೆ ಬರದೆ ರೈತರು ಕಂಗಲಾಗಿ ಶ್ರೀಮಂತರಿಂದ ಪಡೆದುಕೊಂಡ ಸಾಲ ಮತ್ತು ಸಾಲದ ಮೇಲಿನ ಬಡ್ಡಿ ತೀರಿಸಲು ಸಾಧ್ಯವಾಗದೇ ಎಷ್ಟೋ ಸಂದರ್ಭಗಳಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹೊಸ ತಂತ್ರಜ್ಞಾನ ಗ್ರಾಮೀಣ ಬಡ ರೈತರಿಗೆ ಉಪಯುಕ್ತಕಾರಿಯಾಗಿದೆಯೇ? ಎಂದರೆ ಅದು ಅವರ ಹಿತಾಸಕ್ತಿಗೆ ವಿರುದ್ದವಾಗಿ ಬಂದಿದೆ ಅನ್ನಬಹುದು. ಹೊಸ ತಂತ್ರಜ್ಞಾನವು ಬೃಹತ್ ಕಾರ್ಮಿಕ ಶಕ್ತಿಯನ್ನೂ ಬದಲಾಯಿಸಿದೆಯಲ್ಲದೇ ಆ ಮೂಲಕ ಗ್ರಾಮೀಣ ಪ್ರದೇಶದಲ್ಲಿ ತೀವ್ರ ನಿರುದ್ಯೋಗವನ್ನು ಸೃಷ್ಟಿಸಿದೆ ಮತ್ತು ಕೊನೆಯದಾಗಿ ವರ್ಗಧ್ರುವೀಕರಣವನ್ನು ಮಾಡಿ ವರ್ಗಸಂಘರ್ಷಕ್ಕೆ ಕಾರಣವೂ ಆಗಿದೆ. ಮಳೆಯನ್ನು ಅವಲಂಬಿಸಿರುವ ಭಾರತದ ಕೃಷಿಯಲ್ಲಿ ಬಂಡವಾಳಶಾಹಿವರ್ಗ ಬಹಳಷ್ಟು ಬದಲಾವಣೆಗಳನ್ನು ತರಲು ಬಯಸಿತು. ಕೃಷಿಕರಲ್ಲಿಯೇ ಬಂಡವಾಳಶಾಹಿ ಕೃಷಿಕರು ಮತ್ತು ಶ್ರಮಿಕ ಕಾರ್ಮಿಕ ರೈತವರ್ಗವಿರುವುದರಿಂದ ಅನೇಕ ರೀತಿಯ ವ್ಯತ್ಯಾಸಗಳು ಈ ಎರಡು ವರ್ಗಗಳ ಕೃಷಿಯಲ್ಲಿ ಕಂಡುಬಂದವು.

ಈ ಪ್ರಸ್ತುತ ಕಾಲಮಾನದಲ್ಲಿ ಗಮನಿಸಬೇಕಾದ ಮತ್ತೊಂದು ಪ್ರಮುಖ ಅಂಶವೆಂದರೆ ರೈತರಲ್ಲಿ ವರ್ಗಪ್ರಜ್ಞೆ ಮೂಡಿರುವುದು ಅತುಲ್ ಕೊಹ್ಲಿಯವರು ರೈತರಲ್ಲಿ ವರ್ಗಪ್ರಜ್ಞೆಯನ್ನು ಗುರುತಿಸುತ್ತಾರೆ.[೩] ಈ ಪ್ರಜ್ಞೆಗೆ ಜಾತಿ, ಧರ್ಮ, ಹಾಗೂ ಮೌಲ್ಯ ಮುಂತಾದ ವಾಸ್ತವಗಳೇ ಕಾರಣ ಎಂದೂ ಅವರು ವಾದಿಸುತ್ತಾರೆ. ಈ ರೀತಿಯ ವರ್ಗಪ್ರಜ್ಞೆ ರೈತರಲ್ಲಿ ಮೂಡಿದ್ದರಿಂದಲೇ ರೈತರೂ ಬಂಡವಾಳಶಾಹಿಗಳ ಶೋಷಣೆಯನ್ನು ಪ್ರತಿಭಟಿಸಲು ಸಂಘಟಿತರಾಗಲು ಸಾಧ್ಯವಾಯಿತೆನ್ನಬಹುದು. ತಲೆತಲಾಂತರಗಳಲ್ಲಿ ಜಮೀನ್ದಾರ ವರ್ಗವು ಬಡರೈತರ ಮೇಲೆ ಶೋಷಿಸುತ್ತಲೇ ಬಂದಿತ್ತು. ಇದಕ್ಕೆ ತಾರ್ಕಿಕವಾದ ಅಂತ್ಯ ಕಾಣಿಸಲು ರೈತಾಪಿ ವರ್ಗ ಸಂಘಟಿತರಾಗಿದ್ದು ಇತ್ತೀಚಿನ ದಿನಗಳಲ್ಲಿ ಒಂದು ಮಹತ್ತರ ಬೆಳವಣಿಗೆ ಎಂತಲೇ ಪರಿಗಣಿಸಬೇಕು. ಏಕೆಂದರೆ ಭಾರತದ ರೈತವರ್ಗವನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ರೈತರನ್ನು ಪಾಶ್ಚಾತ್ಯ ದೇಶಗಳಲ್ಲಿ ಗುರುತಿಸಿದ ಲಕ್ಷಣಗಳಲ್ಲಿಯೆ ಗುರುತಿಸಲಾಗುತ್ತಿತ್ತು. ಅವೆಂದರೆ ಅವರು ನಿಷ್ಕ್ರೀಯರು, ನಮ್ರರು, ಪ್ರತಿಗಾಮಿಗಳು, ಸಾಂಪ್ರದಾಯಿಕರು, ಮೌಲ್ಯನಿಷ್ಠರು, ಅಲ್ಲದೇ ರೈತರು ಮೂಲತಃವಾಗಿ ಸಾಮಾಜಿಕ ವ್ಯವಸ್ಥೆಯನ್ನು ಪ್ರಶ್ನಿಸಲಾರರು. ಸಾಮಾಜಿಕ ಸಂಬಂಧಗಳಲ್ಲಿ ಯಾವುದೇ ಬದಲಾವಣೆಯನ್ನು ಬಯಸಲಾರರು ಎಂಬ ಪೂರ್ವಗ್ರಹದಿಂದ ಅವರನ್ನು ಶಕ್ತಿಹೀನ ವರ್ಗವೆಂದೂ ಗುರುತಿಸಲಾಗುತ್ತಿತ್ತು. ಇಂಥ ಗ್ರಹಿಕೆಗಳಿಂದಾಗಿ ವಿದ್ವಾಂಸರು ರೈತವರ್ಗವು ಸಮಗ್ರ ಭಾರತದಲ್ಲಿ ಏಕರೂಪದ ಪ್ರತಿಭಟನೆಯನ್ನು ನಡೆಸುವ ಶಕ್ತಿ ಹೊಂದಿಲ್ಲ ಎಂಬ ತೀರ್ಮಾನಕ್ಕೂ ಕೂಡ ಬಂದಿದ್ದರು. ಇಂತಹ ಸಾಂಪ್ರದಾಯಿಕ ಮೌಲ್ಯಗಳು ರೈತರ ಹೋರಾಟದ ಚೈತನ್ಯವನ್ನು ಕುಂದಿಸಿದೆ ಎಂದು ಕೂಡ ವಿದ್ವಾಂಸರು ವಾದಿಸಿದ್ದಾರೆ. ಈ ಸಾಂಪ್ರದಾಯಿಕ ಮೌಲ್ಯಗಳನ್ನು ಮೆಟ್ಟಿನಿಲ್ಲುವ ಶಕ್ತಿಯನ್ನು ರೈತ ಸಂಘಟಿತನಾಗುವುದರ ಮೂಲಕ ಪಡೆದುಕೊಂಡಿದ್ದಾನೆ. ತನ್ಮೂಲಕ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ, ಹಿಂದುಳಿದವರನ್ನು ಶೋಷಿಸುವ ಅಥವಾ ದಮನಿಸುವ ಸಾಮಾಜಿಕ ಸಂಬಂಧ ಹಾಗೂ ನಂಬಿಕೆಗಳನ್ನು ಪ್ರತಿಭಟಿಸಲು ಯತ್ನಿಸುತ್ತಾನೆ.

ಗ್ರಾಮೀಣ ಶ್ರಮಿಕವರ್ಗ ಶ್ರಮದಿಂದ ಬಂದ ಆದಾಯವನ್ನು ಅವಲಂಬಿಸಿ, ಮಾರುಕಟ್ಟೆಗಳ ಪೈಪೋಟಿಯಿಂದ ದೂರವಿದ್ದು ತಮಗಾಗಿ ಸ್ವಲ್ಪ ಭೂಮಿಯನ್ನು ಹೊಂದಿರುವುದಿಲ್ಲ. ಆದರೆ ಗ್ರಾಮೀಣ ಭೂರ್ಜ್ವಶ್ರೀಮಂತ ಬಂಡವಾಳಶಾಹಿ ರೈತವರ್ಗ ವ್ಯಾಪಕವಾಗಿ ಇತರರ ಶ್ರಮದ ಶೋಷಣೆಯ ಅವಲಂಬನೆ, ಉದ್ದಿಮೆ ಮತ್ತು ಕೃಷಿಗಳ ಸಂಯೋಜನೆಯೊಂದಿಗೆ ಮಾರುಕಟ್ಟೆಯ ಪೈಪೋಟಿಯಲ್ಲಿ ಭಾಗಿಯಾಗಿರುತ್ತದೆ. ಭಾರತದ ಇತಿಹಾಸದುದ್ದಕ್ಕೂ ಊಳಿಗಮಾನ್ಯ ಪದ್ಧತಿ ಮತ್ತು ಬಂಡವಾಳಶಾಹಿ ಜೊತೆಜೊತೆಯಾಗಿಯೇ ಉಳಿದು ಬಿಟ್ಟಿರುವುದು ವಿಶೇಷ. ಹಿಂದಿನಕಾಲದಲ್ಲಿ ಬಂಡವಾಳಶಾಹಿ ರೈತವರ್ಗ ಶ್ರಮಿಕ ರೈತರ ಮತ್ತು ಗೇಣಿದಾರರ ಮೇಲೆ ಸವಾರಿ ಮಾಡಲು ವಿವಿಧ ತೆರಿಗೆ ಹಾಗೂ ಕೃತಕ ಲೆಕ್ಕಪತ್ರಗಳಿಂದ ರೈತರ ಆಸ್ತಿಯನ್ನು ಕಬಳಿಸಿ ಅವರನ್ನು ನಿರ್ಗತಿಕರನ್ನಾಗಿ ಮಾಡುತ್ತಿದ್ದರು. ಅದು ಈಗಲೂ ಕೂಡ ಮುಂದುವರೆಯುತ್ತಿರುವುದನ್ನು ಕೆಲವು ಕಡೆ ನಾವು ಕಾಣಬಹುದು. ರೈತ ಬೆಳೆದ

ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಅಗ್ಗದ ಬೆಲೆ ಇದೆ. ಇದರ ಜೊತೆಗೆ ಮಧ್ಯವರ್ತಿಗಳನ್ನು ಆತ ಸಾಕಬೇಕಿದೆ. ಹೊರಗಿನಿಂದ ಅವನು ಕೊಳ್ಳುವ ಪದಾರ್ಥಗಳ ಬೆಲೆ ಬಹಳ ದುಬಾರಿಯಾಗಿದೆ. ಒಂದು ಕೆಜಿ ಬೀನ್ಸ್ ಬೆಳೆಯುವ ಶ್ರಮ ಹೆಚ್ಚಿನದು. ಒಂದು ಮೀಟರ್ ಬಟ್ಟೆಯ ಬೆಲೆ ಸಾಧರಣ ಹನ್ನೆರಡರಿಂದ ಇಪ್ಪತ್ತೈದು ರೂಪಾಯಿಗಳವರೆಗೆ ಇರುತ್ತದೆ. ಒಂದು ಕೆಜಿ ಬೀನ್ಸ್ ಬೆಲೆ ಎಂಟರಿಂದ ಹತ್ತು ರೂಪಾಯಿಯವರೆಗಿರುತ್ತದೆ. ಇದು ರೈತನಿಗೆ ಸಿಗುವ ಬೆಲೆ. ಇದರಿಂದ ರೈತನ ಶ್ರಮ ಕಡಿಮೆ ಬೆಲೆಗೆ ಹರಾಜಾಗುತ್ತಿದೆ. ಕಾರ್ಖಾನೆಯ ವಸ್ತುಗಳಿಗೆ ಉತ್ಪಾದನಾ ವೆಚ್ಚಕ್ಕಿಂತ ಮೂರುಪಟ್ಟು ಬೆಲೆ ಇಟ್ಟಿರುತ್ತಾರೆ. ಅದರ ಬೆಲೆ ಮಧ್ಯವರ್ತಿಗಳ ಲಾಭ ಹೆಚ್ಚುತ್ತಾ ಹೋಗುತ್ತಿದೆ. ರೈತನಿಗೆ ತನ್ನ ಪದಾರ್ಥಗಳ ಬೆಲೆಯನ್ನು ನಿಗದಿ ಮಾಡಿಕೊಳ್ಳುವ ಹಕ್ಕು ಇಲ್ಲ. ಲಾಭದ ಬೆಲೆ ಬಂದಾಗ ಮಾರಿಕೊಳ್ಳುವ ವ್ಯವಸ್ಥೆಯೂ ಇಲ್ಲ. ಪ್ರದೇಶದಿಂದ ಪ್ರದೇಶಕ್ಕೆ ಕೊಂಡು ಹೋಗಿ ಬೆಲೆ ಇರುವ ಕಡೆ ಮಾರಿಕೊಂಡು ಹೆಚ್ಚು ಬೆಲೆ ಪಡೆಯುವಂತೆಯೂ ಇಲ್ಲ. ವ್ಯವಸಾಯ ಎರಡನೆಯ ದರ್ಜೆಯ ವೃತ್ತಿ ಮತ್ತು ವ್ಯವಸಾಯದಲ್ಲಿ ತೊಡಗಿಕೊಳ್ಳುವವರೆಲ್ಲರೂ ಕೆಳವರ್ಗದವರಾಗಿರುವುದರಿಂದ ಸರ್ಕಾರ ಇವರ ಕಡೆ ಲಕ್ಷ್ಯ ಕೊಡುವುದಿಲ್ಲ. ರೈತ ಮತ್ತು ಅವನ ಉತ್ಪತ್ತಿಗೆ ರಕ್ಷಣೆ ಮತ್ತು ಲಾಭ ಸಿಗದಂತೆ ಮಾಡಿದೆ. ಅಧಿಕಾರ ವರ್ಗವೇ ಕಾನೂನು ಮಾಡಿರುವುದು ಮತ್ತು ಬಹುಸಂಖ್ಯಾತರಾದ ರೈತರಿಗೆ ನಿಜವಾದ ಪ್ರಜಾಪ್ರಭುತ್ವದ ಅಧಿಕಾರ ಸಿಗದಿರುವುದು. ಕೆಳವರ್ಗ ಮತ್ತು ಮೇಲ್ವರ್ಗದವರ ನಡುವಿನ ಸಂಘರ್ಷಕ್ಕೆ ಮತ್ತು ಅನೇಕ ಸಮಸ್ಯೆಗಳಿಗೆ ಕಾರಣವಾಗಿದೆ. ಕೃಷಿ ಉತ್ಪಾದನೆಯ ಇನ್ನೊಂದು ತುದಿಯಲ್ಲಿ ದೈಹಿಕ ಶ್ರಮಿಕರಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಕೆಲವು ಪ್ರದೇಶಗಳಲ್ಲಿ ಬೆಳೆ ವೈವಿಧ್ಯತೆ ಅನುಸರಿಸುತ್ತಿರುವುದರಿಂದಾಗಿ ಕೆಲವು ವಿಶಿಷ್ಟ ಕೌಶಲ್ಯಗಳಲ್ಲಿ ಪರಿಣಿತಿ ಹೊಂದಿದ ಕೃಷಿ ಕೂಲಿಕಾರರ ಗುಂಪುಗಳು ಹೊರಹೊಮ್ಮುತ್ತವೆ. ಈ ವಿಶೇಷ ಪರಿಣತಿ ಹೊಂದಿದ ಕೃಷಿ ಕೂಲಿಕಾರರು. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗಿ ಕೆಲಸ ಮಾಡುತ್ತಾರೆ. ಅವರು ವಿಶಿಷ್ಟ ಕೌಶಲ್ಯವನ್ನು ಹೊಂದಿದ್ದರೂ ಕೃಷಿ ಕೆಲಸಗಾರರು 'ದೈಹಿಕ ಕೆಲಸಗಾರ' ರಾಗಿಯೇ 'ಭೂಮಾಲೀಕರ' ಬಳಿ ಕೆಲಸ ನಿರ್ವಹಿಸಬೇಕಾಗುತ್ತದೆ. ಈ ರೀತಿ ದೈಹಿಕ ಕೆಲಸರಾರರಾಗಿರುವವರಲ್ಲಿ ಬಹುಪಾಲು ದಲಿತ ಮತ್ತು ಇತರ ಶೋಷಿತ ಜಾತಿಗಳ ಜನರೇ ಇರುತ್ತಾರೆ. ಇಂತಹ ಬಹುತೇಕ ಕೆಲಸಗಾರರು ಭೂರಹಿತರಾಗಿರುತ್ತಾರೆ. ಜಮೀನು ಮಾಲೀಕತ್ವದಿಂದ ಹೊರಹಾಕುವಿಕೆ ಮತ್ತು ಇಂದಿನ ಆಧುನಿಕ ಭೇದ ಭಾವದ ಪರಿಣಾಮ ಇದು. ಈ ರೀತಿ ಕೆಲಸ ಮಾಡುವ ಇತ್ತೀಚಿನ ದಿನಗಳ ಕೆಲಸಗಾರ ತನ್ನ ಕೂಲಿಯನ್ನು ತನ್ನ ಆಯ್ಕೆಯ ಮಾಲೀಕನಿಗೆ ಮಾರಿಕೊಳ್ಳುವ ಸ್ವಾತಂತ್ರ್ಯವನ್ನು ಹೊಂದಿರುತ್ತಾನೆ. ಆದರೆ ಹಿಂದಿನ ಕಾಲದ ಜೀತದಾಳಿಗೆ ಈ ಆಯ್ಕೆ ಇರಲಿಲ್ಲ. ಸಮಕಾಲೀನ ಕೂಲಿಕಾರ್ಮಿಕನಿಗೆ ತನ್ನ ಆಯ್ಕೆಯ ಮಾಲೀಕನನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯವಿರುವುದರಿಂದ ಶೋಷಣೆಯನ್ನು ವಿರೋಧಿಸುವ ಶೋಷಣೆಯಿಂದ ತಪ್ಪಿಸಿಕೊಂಡು ಬರುವ ಮತ್ತು ಶೋಷಣೆಯಿಂದ ಮುಕ್ತಿಯನ್ನು ಪಡೆದುಕೊಳ್ಳವ ಅವಕಾಶವನ್ನು ಪಡೆದು ಕೊಂಡಿದ್ದಾನೆ. ಇತ್ತೀಚಿನ ದಿನಗಳಲ್ಲಿ 'ರಿಯಲ್ ಎಸ್ಟೇಟ್'ನಂತಹ ದಂಧೆಗಳು ಪ್ರಾರಂಭವಾಗಿ ರೈತರ ಫಲವತ್ತಾದ

ಭೂಮಿಯನ್ನು ಕಡಿಮೆ ಬೆಲೆಗೆ ಕೊಂಡುಕೊಂಡು ಅಲ್ಲಿ 'ಲೇಔಟ್'ಗಳನ್ನು ನಿರ್ಮಿಸಿ ಶ್ರೀಮಂತರು ಇನ್ನೂ ಶ್ರೀಮಂತರಾಗುತ್ತಲೇ ಇದ್ದಾರೆ. ಈ ರೀತಿ ಜಮೀನನ್ನು ಕಳೆದುಕೊಂಡ ರೈತಾಪಿ ವರ್ಗ ಬಂದ ಹಣದಿಂದ ತಾತ್ಕಾಲಿಕವಾಗಿ ಶ್ರೀಮಂತಿಕೆಯನ್ನು ಅನುಭವಿಸಿ ಶಾಶ್ವತವಾಗಿ ಬಡವರಾಗಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆ. ಮುಂದೆ ಈ ರೀತಿ ಜಮೀನನ್ನು ಕಳೆದುಕೊಂಡ ರೈತರು ಬೇರೆ ಯಾವ ಕೆಲಸಗಳನ್ನು ಮಾಡಲು ಸಾಧ್ಯವಾಗದೆ ನಿರ್ಗತಿಕರಾಗಿ ಹಸಿವಿನಿಂದ ನರಳಾಡಬೇಕಾಗುತ್ತದೆ. ಅಷ್ಟೇ ಅಲ್ಲದೇ ಜಾಗತೀಕರಣದ ಪ್ರಭಾವದಿಂದಾಗಿ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳು ಭಾರತಕ್ಕೆ ಲಗ್ಗೆ ಇಡುತ್ತಿವೆ. ಆಳುವ ವರ್ಗ ಬಂಡವಾಳಶಾಹಿಗಳ ಪರವಾಗಿದ್ದು, ಬಹುರಾಷ್ಟ್ರೀಯ ಕಂಪನಿಗಳು ಯಾವ ಸರಕನ್ನು ಉತ್ಪಾದಿಸುತ್ತದೆಂದು ಪ್ರಶ್ನಿಸಲು ಹೋಗುವುದಿಲ್ಲ. ಬದಲಾಗಿ ವಿದೇಶಿ ಕಂಪನಿ ಉತ್ಪಾದಿಸುವ ವಸ್ತುವಿಗೆ ಒಂದು ಬೆಲೆಯನ್ನು ನಿಗದಿಮಾಡಿ ಮಾರುಕಟ್ಟೆಯಲ್ಲಿ ಅದು ಮಾರಾಟವಾಗುವಂತೆ ವ್ಯವಸ್ಥೆ ಮಾಡಲಾಗುತ್ತದೆ. ಆದರೆ ರೈತ ಬೆಳೆಯುವ ಬೆಳೆಗೆ ಒಂದು ಯೋಗ್ಯ ಬೆಲೆಯನ್ನು ನಿಗದಿ ಮಾಡಲು ಸರ್ಕಾರ ಮುಂದಾಗುವುದಿಲ್ಲ. ಕೈಗಾರಿಕಾ ಬಂಡವಾಳವು ಸ್ವಾತಂತ್ರ್ಯೋತ್ತರ ದಶಕದಲ್ಲಿ ಭಾರತದ ಪ್ರಭುತ್ವದ ಮೇಲೆ ತನ್ನ ಹಿಡಿತವನ್ನು ಸಾಧಿಸಿದೆ. ಇದು ರೈತರಿಗೆ ಇರುಸುಮುರುಸಿನ ವಿಷಯವಾಗಿದೆ. ರೈತರನ್ನು ಜೀತದಾಳುಗಳಂತೆ ಬಂಡವಾಳಶಾಹಿಯು ಹಿಡಿದಿಟ್ಟಿರುವ ರೀತಿ ನೀತಿಯು ವಿಶಿಷ್ಟವಾದುದು. ಜಾಗತೀಕರಣದ ಹಿನ್ನಲೆಯಲ್ಲಿ ಭಾರತಕ್ಕೆ ಕಾಲಿಟ್ಟ ಬಹುರಾಷ್ಟ್ರೀಯ ಕಂಪನಿಗಳಿಂದ ನಮ್ಮ ದೇಶದಲ್ಲಿ ಬೆಳೆದು ಬಂದಿರುವ ಗುಡಿಕೈಗಾರಿಕೆಗಳು ದೇಶೀಯ ಕಸುಬುಗಳು ನಾಶವಾಗತೊಡಗಿವೆ. ಇವುಗಳನ್ನೇ ಆಶ್ರಯಿಸಕೊಂಡಿದ್ದ ಕೆಳವರ್ಗದ ಕೋಟ್ಯಾಂತರ ಜನ ಬೀದಿಪಾಲಾಗಿದ್ದಾರೆ. ಮೇಲ್ನೋಟಕ್ಕೆ ಉತ್ತಮವೆಂದು ಕಾಣುವ ಬಹುರಾಷ್ಟ್ರೀಯ ಕಂಪನಿಗಳ ಸರಕುಗಳು ಬೇರೆ ದೇಶಗಳಲ್ಲಿ ತಿರಸ್ಕರಿಸಲ್ಪಟ್ಟವುಗಳು ಎಂಬುದು ಈಗಾಗಲೇ ಸಾಬೀತಾಗಿದೆ.

ಭಾರತದಲ್ಲಿ ಕೈಗಾರಿಕೆಗಳು ಮಾಡುತ್ತಿರುವ ಲೂಟಿಗೆ ಪೂರಕವಾಗುವಂತೆ ಅವುಗಳಿಗೆ ಬೇಕಾಗುವ ಕಚ್ಚಾವಸ್ತುಗಳನ್ನು ಬೆಳೆದ ರೈತನ ಬೆಲೆಗಳಿಗೆ ಮಾತ್ರ ಬೆಲೆ ನಿಗದಿ ಮಾಡುವ ಮತ್ತು ಆಹಾರ ಧಾನ್ಯಗಳಿಗೆ ಮಾತ್ರ ನಿಕೃಷ್ಟ ಬೆಲೆ ನಿಗದಿ ಮಾಡಿ ರೈತರನ್ನು ಉತ್ಪಾದಕ ಜೀತದಾಳುಗಳಂತೆ ಹಿಡಿದಿಟ್ಟುಕೊಂಡಿದೆ.[೪] ಹಾಗೆಯೇ ರೈತರ ಫಲವತ್ತಾದ ಭೂಮಿಯನ್ನು ಸರ್ಕಾರ ಕಡಿಮೆ ಬೆಲೆಗೆ ಕೊಂಡುಕೊಂಡು ವಿದೇಶಿ ಕಂಪನಿಗಳಿಗೆ ಮಾರಾಟ ಮಾಡುತ್ತಿದೆ. ಇದರಿಂದ ಅನಿವಾರ್ಯವಾಗಿ ಭೂಮಿಯನ್ನು ಕಳೆದುಕೊಳ್ಳಬೇಕಾದ ಪ್ರಸಂಗ ಒದಗಿಬಂದಾಗ ಶ್ರೀಮಂತ ರೈತವರ್ಗ (ಮತ್ತೊಂದು ಕಡೆ ಜಮೀನನ್ನು ಹೊಂದಿರುವ) ಭೂಮಿ ಕೊಡಲು ಮುಂದಾಗುತ್ತದೆ. ಆದರೆ ಕಡಿಮೆ ಭೂಮಿ ಇರುವ ರೈತರು ಭೂಮಿ ಕೊಡಲು ಒಪ್ಪದೇ, ಆಳುವ ವರ್ಗದ ವಿರುದ್ಧ ಹೋರಾಟವನ್ನು ಮಾಡುತ್ತಾರೆ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಕೆಲವು ಹಳ್ಳಿಗಳ ರೈತರು 'ಪೋಸ್ಕೋ' ಕಂಪನಿಯ ವಿರುದ್ಧ ಹೋರಾಟ ಮಾಡಿ ಸರ್ಕಾರದ ವಿರುದ್ದ ಗೆಲುವು ಸಾಧಿಸಿದ್ದು. ಸ್ವತಂತ್ರ ಭಾರತದಲ್ಲಿ ಹಲವಾರು

ಹಗರಣಗಳು ಜರುಗಿಹೋಗಿವೆ. ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ಹೆಸರಲ್ಲಿ ನಮ್ಮ ರಾಷ್ಟ್ರದ ನೈಸರ್ಗಿಕ ಸಂಪನ್ಮೂಲಗಳನ್ನು ದೇಶೀಯ ಬಂಡವಾಳಗಾರರು, ವಿದೇಶಿ ಬಹುರಾಷ್ಟ್ರೀಯ ಕಂಪನಿಗಳು ಲೂಟಿ ಮಾಡಲು ನಮ್ಮ ಆಳುವ ವರ್ಗಗಳು ಅನುವು ಮಾಡಿಕೊಡುತ್ತಿರುವುದಕ್ಕೆ ದಕ್ಷಿಣ ಪೊಹಾಂಗ್ ಸ್ಟೀಲ್ ಕಂಪನಿಗೆ (ಪೋಸ್ಕೋ) ಒರಿಸ್ಸಾದ ಜಗತ್ ಸಿಂಗ್‌ಪುರ ಜಿಲ್ಲೆಯಲ್ಲಿ ಉಕ್ಕು ಕಾರ್ಖಾನೆಯನ್ನು ಸ್ಥಾಪಿಸಲು ಅನುಮತಿ ನೀಡಿದ್ದು ಒಂದು ಸೂಕ್ತ ಉದಾಹರಣೆ. ಆದರೆ ಈ ವಿದೇಶಿ ಬಂಡವಾಳ ಬರಮಾಡಿಕೊಳ್ಳುವ ತರಾತುರಿಯಲ್ಲಿ ನಡೆದಿರುವ ಪೋಸ್ಕೋ ಹಗರಣದ ಆಯಾಮವೇ ಬೇರೆ. ವಿದೇಶಿ ಬಂಡವಾಳ ಹೂಡಿಕೆಯೊಂದೇ ನಮ್ಮ ಮುಂದಿರುವ ಆಯ್ಕೆ ಎಂಬ ಭ್ರಮೆ ಹುಟ್ಟಿಸುವ ಮಾಯಾಜಿಂಕೆ ಇದು. ಆದರೆ ಅದು ನಮ್ಮ ರಾಜ್ಯಕ್ಕೆ ಬಂದಾಗ ಎಲ್ಲರೂ ಒಕ್ಕೊರಲಿನಿಂದ ಅದರ ವಿರುದ್ಧ ಹೋರಾಟ ಮಾಡಿ ಅದು ನಮ್ಮ ರಾಜ್ಯಕ್ಕೆ ಬಾರದ ಹಾಗೆ ನೋಡಿಕೊಂಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ಇಂತಹ ಹೋರಾಟಗಳು ಹೆಚ್ಚುಹೆಚ್ಚಾಗಿ ಆಗುತ್ತಿರುವುದನ್ನು ನಾವು ಗಮನಿಸಬಹುದು. ಬಂಡವಾಳಶಾಹಿಗಳ ಅಸಮರ್ಪಕ ಬೆಳವಣಿಗೆ ಒಂದೆಡೆ ವರ್ಗಗಳ ಧ್ರುವಿಕರಣಕ್ಕೂ ಇನ್ನೊಂದೆಡೆ ಗ್ರಾಮೀಣ ಮತ್ತು ಪಟ್ಟಣದ ನಡುವೆ ಸಂಘರ್ಷಕ್ಕೂ, ವೈರುಧ್ಯದ ಬೆಳವಣಿಗೆಗೂ ಅವಕಾಶವನ್ನು ಮಾಡಿಕೊಟ್ಟಿರುವುದನ್ನು ನಾವು ಕಾಣಬಹುದು.[೫] ಇತ್ತೀಚಿನ ದಿನಗಳಲ್ಲಿ ರೈತರಿಗೆ ಮತ್ತೊಂದು ಕಂಟಪ್ರಾಯವಾಗಿರುವುದು ಉಳ್ಳವರ ಮೋಜು ಮಸ್ತಿಗಾಗಿ ಅನಗತ್ಯವಾಗಿರುವ ವಿಮಾನನಿಲ್ದಾಣ, ರಸ್ತೆಗಳು ನಿರ್ಮಾಣವಾಗುತ್ತಿರುವುದು. ಇವುಗಳ ಅಗತ್ಯತೆ ಇಲ್ಲದಿದ್ದರೂ ಉಳ್ಳವರು, ಅಧಿಕಾರಿಗಳ ಮನವೊಲಿಸಿ ಇವುಗಳ ನಿರ್ಮಾಣಕ್ಕೆ ಬಳಸಿಕೊಳ್ಳುತ್ತಿರುವ ಜಾಗ ಬಡವರಿಗೆ ಸೇರಿದ್ದು. ಬಡರೈತರಿಗೆ ಆಸೆ–ಆಮಿಷಗಳನ್ನು ತೋರಿಸಿ ಅವರ ಜಾಗಗಳನ್ನು ಕಬಳಿಸುವ ಕಾರ್ಯಕ್ಕೆ ಉಳ್ಳವರು ಮುಂದಾಗುತ್ತಿದ್ದಾರೆ. ಆದರೆ ಎಲ್ಲಾ ಸಂದರ್ಭಗಳಲ್ಲಿ ಭೂಮಿ ಉಳ್ಳವರಿಗೆ ಸಿಗುವುದಿಲ್ಲ. ರೈತರಲ್ಲಿ ವರ್ಗಪ್ರಜ್ಞೆ ಮೂಡಿರುವುದರಿಂದ ಪ್ರತಿಭಟನೆಗಳು, ಹೋರಾಟಗಳು ನಡೆಯುತ್ತಿರುತ್ತವೆ. ಹೀಗೆ ಎಷ್ಟೇ ಪ್ರತಿಭಟನೆಗಳು, ಹೋರಾಟಗಳಾದರೂ ಉಳ್ಳವರು ಮಧ್ಯವರ್ತಿಗಳ ಮೂಲಕ ಜಮೀನನ್ನು ಖರೀದಿಸಲು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಿ ಅದರಲ್ಲಿ ಯಶಸ್ಸನ್ನು ಕಂಡಿದ್ದು ಇದೆ.

ಸಮಕಾಲೀನ ಸಂದರ್ಭದ ಬಂಡವಾಳಶಾಹಿ ಸಂಸ್ಕೃತಿಯು ಊಳಿಗಮಾನ್ಯ ಸಂಸ್ಕೃತಿಯ ಅಂಶಗಳನ್ನೂ ಮತ್ತು ಸಮಕಾಲೀನ ಸಂದರ್ಭದ ಸಿದ್ಧರೂಪಗಳನ್ನೂ ಏಕಕಾಲದಲ್ಲಿ ವೈಭವೀಕರಿಸುತ್ತ, ಲಾಭದತ್ತ ಹೆಜ್ಜೆ ಹಾಕುವ ಪ್ರಯತ್ನದತ್ತ ಸಾಗಿದೆ ಹಾಗೂ ಬಂಡವಾಳಶಾಹಿ ಸಂಸ್ಕೃತಿಯಲ್ಲಿ 'ವೈಭವೀಕರಣ ಕ್ರಿಯೆ'ಯ ಪಾಲು ದೊಡ್ಡದು. ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ಆಳುವವರ್ಗವು ಬಂಡವಾಳಶಾಹಿ ವರ್ಗಕ್ಕೆ ವಿರುದ್ಧವಾದ ಆಶಯಗಳನ್ನು ಬಿತ್ತಿ ಬೆಳೆಯುತ್ತಿಲ್ಲ. ಅದರ ಬದಲು ಬಂಡವಾಳಶಾಹಿ ವರ್ಗದ ವಿಸ್ತರಣೆಯಂತೆ ಅಥವಾ ಅದನ್ನು ಒಳಗೊಂಡ ಶಕ್ತಿ ಪ್ರತೀಕದಂತೆ ಪ್ರವರ್ತಿಸುತ್ತದೆ. ಆದ್ದರಿಂದ ಆಳುವ ವರ್ಗದ ಹಿಡಿತದಲ್ಲಿರುವ ರೇಡಿಯೋ ಮತ್ತು ದೂರದರ್ಶನಗಳು ಕೇವಲ ಆಳುವವರ

ವಕಾಲತ್ತು ವಹಿಸುತ್ತಿಲ್ಲ. ಆಳುವ ವರ್ಗವನ್ನೂ ಆಳಬಲ್ಲ ಬಂಡವಾಳಶಾಹಿಯ ಸಾಧನವೂ ಆಗುತ್ತಿದೆ. ಸಿನಿಮಾ ಮತ್ತು ಪತ್ರಿಕೆಗಳ ಅಭಿವ್ಯಕ್ತಿ ವಿನ್ಯಾಸಗಳು, ಪ್ರಚಾರದ ಮಾದರಿಗಳು, ದೂರದರ್ಶನ ಮತ್ತು ರೇಡಿಯೋದಲ್ಲಿ ಅಗಾಧ ಪ್ರಮಾಣದಲ್ಲಿ ಕಾಣಿಸುತ್ತವೆ. ಹೀಗಾಗಿ ಕೆಳವರ್ಗದ 'ಬೆವರಧ್ವನಿ' ಮತ್ತು 'ಬೆವರ ಚಹರೆ' ಸಮೂಹ ಮಾಧ್ಯಮಗಳಲ್ಲಿ ಕಂಡುಬರುವುದಿಲ್ಲ. ಉದಾಹರಣೆಗೆ ಕೆಳವರ್ಗದ ಮಹಿಳೆ ತನ್ನೆಲ್ಲ ದುಃಖ ದುಮ್ಮಾನಗಳೊಂದಿಗೆ ಚಿತ್ರಿತಗೊಂಡಿರುವುದು ತೀರಾ ಕಡಿಮೆ. ಪತ್ರಿಕೆಗಳಲ್ಲಿ ಕೆಲವು ಲೇಖನಗಳು ಬಂದಿವೆ. ಸಿನಿಮಾಗಳಲ್ಲಿ ಕೆಲವು ಪಾತ್ರಗಳು ಕಡೆಯಲ್ಪಟ್ಟಿವೆ. ದೂರದರ್ಶನದಲ್ಲಿಯೇ ಕೆಳವರ್ಗದ ಮತ್ತು ಆದಿವಾಸಿ ಮಹಿಳೆಯರ ಮುಖ ನೋಡಬೇಕಾದರೆ 'ಪ್ರಭುಶಕ್ತಿ' ಅವರಲ್ಲಿಗೆ ಹೋಗಬೇಕು. ಆಗ ಮಾತ್ರ ದೂರದರ್ಶನಕ್ಕೆ ಈ ವರ್ಗದ ಮಹಿಳೆಯರು ಮುಖ್ಯವಾಗುತ್ತಾರೆ. ಸಮಾಜದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಕೆಳವರ್ಗದ ಹೆಣ್ಣು, ಸಮೂಹ ಮಾಧ್ಯಮಗಳಲ್ಲಿ ಅದೇ ಸ್ಥಿತಿಯಲ್ಲಿರುವುದು ಸ್ವಾಭಾವಿಕ. ಸಿನಿಮಾಗಳಲ್ಲಿ ಕೆಳವರ್ಗದ ಹೆಣ್ಣು ಪಾತ್ರಗಳು ಬಂದಿದ್ದರೂ ಅವು ಮುಗ್ಧತೆಯ ಮಾದರಿಗಳಾಗಿವೆ. ಇಲ್ಲವೆ ಅತ್ಯಾಚಾರಕ್ಕಾಗಿಯೇ ಸೃಷ್ಟಿಯಾದ ಕೂಲಿ ಹೆಂಗಸಾಗಿವೆ. ನಮ್ಮ ಸಮೂಹಮಾಧ್ಯಮಗಳು ಆದಿವಾಸಿ ಮಹಿಳೆಯರನ್ನು ಒಳಗೊಳ್ಳಲು ಸಾಧ್ಯವೇ ಆಗಿಲ್ಲ. ಇದಕ್ಕೆ ಅಭಿವ್ಯಕ್ತಿ ಮಾಧ್ಯಮಗಳಿಗೆ ಬೇಕಾದ ಅನುಭವ ಪ್ರಾಮಾಣ್ಯದ ಪ್ರಶ್ನೆ ಎದುರಾಗಬಹುದಾದರೂ ಇದು ಎಲ್ಲಾ ಮಾಧ್ಯಮಗಳಿಗೂ ಅನ್ವಯಿಸುವುದಿಲ್ಲ. ಅತ್ಯಂತ ಆಧುನಿಕವೆಂದು ಕರೆಸಿಕೊಳ್ಳುವ ಈ ಕಾಲಘಟ್ಟದಲ್ಲಿ ನಾವು ನಮ್ಮ ಪ್ರಾಚೀನ ಸಂಸ್ಕೃತಿಯ ಹಲವು ಪಳೆಯುಳಿಕೆಗಳನ್ನು ಹಾಗೇ ಬಿಟ್ಟು ಮುನ್ನಡೆಯುತ್ತಿವೆ. ಅಂದರೆ ಕೆಳವರ್ಗದ ಜನ ವಾಸಿಸುವ ಪ್ರದೇಶದ ಬಗ್ಗೆ ಕಾಳಜಿ ವಹಿಸದೆ ಅವರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸದೆ, ಬಂಡವಾಳಶಾಹಿ ವರ್ಗಕ್ಕೆ ಮಣೆಹಾಕಿ ಆಳುವವರ್ಗ, ಮೇಲ್ವರ್ಗದ ಪರವಾಗಿ ನಿಂತಿದೆ. ಇತ್ತೀಚಿನ ದಿನಗಳಲ್ಲಿ ಮತ್ತೊಂದು ದುರಂತವೆಂದರೆ ಸಮಾಜದಲ್ಲಿ ಬಹಳ ಪ್ರಭಾವಶಾಲಿಯಾಗಿರುವ ಸಮೂಹ ಮಾಧ್ಯಮಗಳಲ್ಲೂ ಕೂಡ ವರ್ಗತಾರತಮ್ಯ ಮತ್ತು ವರ್ಗ ಸಂಘರ್ಷವಿರುವುದನ್ನು ನಾವು ಗಮನಿಸಬಹುದು. ಇದು ಸಮಾಜದ ಬೆಳವಣಿಗೆಗೆ ಮಾರಕವೆಂದು ವಿಶ್ಲೇಶಿಸಬಹುದಾಗಿದೆ. ಭಾರತಾದ್ಯಂತ ಸಮೂಹಮಾಧ್ಯಮಗಳು ಒಂದು ಜಾತಿಯ ಪರವಾಗಿವೆ. ಬೇರೆಯವರು ಒಂದಾಗಲು ಬಿಡುವುದಿಲ್ಲ. ಒಳ್ಳೆಯದು ಬರಲು ಬಿಡುವುದಿಲ್ಲ. ಸಮಾಜದಲ್ಲಿ ಸ್ಪಷ್ಟತೆ ಮೂಡಲು ಬಿಡುವುದಿಲ್ಲ. ಭಾರತದ ನಾಯಕತ್ವ ಬೇರೆ ಜಾತಿಗೆ ಹೋಗುವುದನ್ನು ಸಹಿಸುವುದಿಲ್ಲ. ಇವರ ತೀರ್ಮಾನ ಜನಸಾಮಾನ್ಯರ ಮುಖದ ಮೇಲೆ ಎಳೆದ ಬರೆಯಂತಾಗಿದೆ. ಸಮುಹ ಮಾಧ್ಯಮದ ಒಡೆಯ ಕೆಳವರ್ಗದವನಾಗಿದ್ದರೂ ಅದನ್ನು ನಡೆಸುವವರು ಮೇಲು ಜಾತಿಯವರೇ ಆಗಿದ್ದಾರೆ. ಅವರು ತಮ್ಮ ಹಿತಾಸಕ್ತಿಯನ್ನು ಎಂದೂ ಬಿಡುವುದಿಲ್ಲ. ಆ ಮಾಧ್ಯಮದಿಂದ ತಮ್ಮ ಹಿತಾಸಕ್ತಿಗೆ ಧಕ್ಕೆ ಬರುತ್ತಿದೆ ಎಂದರೆ ಅದನ್ನು ಮುಚ್ಚಿ ಬೇರೊಬ್ಬನನ್ನು ಅವರು ಹಿಡಿಯುತ್ತಾರೆ. ಈ ಚಾಣಕ್ಯರ ಭಯ ಎಲ್ಲರನ್ನೂ ಬೂತವಾಗಿ ಕಾಡುತ್ತಿದೆ. ಮಾಧ್ಯಮಗಳಲ್ಲಿ ಸಮಾನತೆ ಬರಬೇಕು. ಒಂದು ಮಾಧ್ಯಮದ ತೀರ್ಮಾನದಲ್ಲಿ ಎಲ್ಲಾ ಜಾತಿ ಜನಗಳ ಮನಸ್ಸು ಇರಬೇಕು. ಆ ಮಾಧ್ಯಮದಲ್ಲಿ ಕೆಲಸ ಮಾಡುವವರು

ಕೂಡ ಎಲ್ಲಾ ಜಾತಿ ವರ್ಗದವರೂ ಇರಬೇಕು. ನಾನು ಇನ್ನೊಂದು ಜಾತಿ ಪರವಾಗಿ ಮಾತನಾಡುತ್ತೇನೆ ಎಂದರೆ ಅದನ್ನು ನಂಬಬಾರದು. ಇನ್ನೊಬ್ಬ ಜಾತಿಯವನ ಜೊತೆಗೆ ದುಡಿಮೆಯನ್ನು ಸಮನಾಗಿ ಹಂಚಿಕೊಳ್ಳುತ್ತೇನೆ ಎಂದಾಗ ಮಾತ್ರ ನಂಬಬಹುದು. ಈಗ ಯಾರೂ ಯಾರ ಪರವಾಗಿ ಮಾತನಾಡುವುದಕ್ಕಿಂತ ಮಾನಸಿಕ ಮತ್ತು ಆರ್ಥಿಕ ಸಂಪಾದನೆಯನ್ನು ಸಮನಾಗಿ ಹಂಚಿಕೊಳ್ಳುವುದಕ್ಕೆ ಸಿದ್ಧವಾಗುವುದೇ ಸರಿಯಾದ ಮಾರ್ಗ. ನಮ್ಮ ಮಾಧ್ಯಮದ ಧ್ವನಿ ಈ ಬಗೆಯದಾದಾಗ ಮಾತ್ರ ನಂಬಬಹುದು. ಇಲ್ಲದಿದ್ದರೆ ಮಾಧ್ಯಮಗಳು ಕೂಡ ವರ್ಗಸಂಘರ್ಷಕ್ಕೆ ಕಾರಣವಾಗುತ್ತವೆ.

ಬಡ ಕೆಳವರ್ಗದವರ ಬದುಕು ಹೇಗಿರುತ್ತದೆಂಬುದಕ್ಕೆ ಬೆಳಗಾವಿ ಜಿಲ್ಲೆಯ ಬಯಲು ಪ್ರದೇಶಗಳಲ್ಲಿ ಓಡಾಡಿದರೆ ಕೋಳಿ ಗೂಡಿನ ಆಕಾರದ ರಚನೆಗಳು ಕಾಣಿಸಿಕೊಳ್ಳುತ್ತವೆ. ಈ ಗೂಡುಗಳಲ್ಲಿ ಬದುಕುತ್ತ, ಕಬ್ಬು ಕಡಿಯುವ ಕೆಲಸ ಮಾಡುವವರಿಗೆ ಸಮಾಜ ನೀಡಿರುವ ಹೆಸರು 'ಗಬಾಳಿಗರು' ಗಾಣಕ್ಕೆ ಒದಗುವ ಕಬ್ಬು ಕಡಿಯುವ ಇವರ ಬದುಕು, ವ್ಯವಸ್ಥೆಯ ಗಾಣಕ್ಕೆ ಸಿಲುಕಿದಂತಿದೆ. ಗಾಣಗಳಿಗೆ ಸಿಕ್ಕ ಕಬ್ಬಿನಂತೆ ಕಾಣಿಸುವ ಗಬಾಳಿಗರು ಕೂಲಿಕಾರ್ಮಿಕರಾಗಿ ಬಂದವರು. ಅದರಲ್ಲೂ ಗ್ರಾಮೀಣ ತಳಸಮುದಾಯದವರು ಇರಲು ಮನೆಯಿಲ್ಲದೆ ಜೋಪಡಿಗಳಲ್ಲಿ ವಾಸಮಾಡುತ್ತಲೇ ಸಿಕ್ಕ ಕೆಲಸ ಮಾಡುತ್ತಿದ್ದವರಿಗೆ, ಕೆಲಸಗಳೂ ಸಿಗದೆ ಬದುಕು ದುಸ್ತರವಾದಾಗ ಹೀಗೆ ಗಬಾಳಿಗರಾಗಿ ಬಂದು ದಿನ ದೂಡುತ್ತಾರೆ. ಊರಿನ ಸಾಮಾಜಿಕ ದೌರ್ಜನ್ಯಗಳು, ಅವಮಾನಗಳು, ಕೊನೆಗೆ ಮನುಷ್ಯರಾಗಿ ನೋಡುವ ಕಣ್ಣಿಲ್ಲದ ಮೇಲ್ಜಾತಿಗಳ ಅಮಾನವೀಯತೆಗೆ ಬೇಸತ್ತು ಊರುತೊರೆದು ಬಂದಿರುತ್ತಾರೆ. ೬

ಮೇಲ್ವರ್ಗ ಮತ್ತು ಕೆಳವರ್ಗದ ಮಧ್ಯೆ ಕಂದಕವನ್ನು ಉಂಟುಮಾಡುತ್ತಿದ್ದ ಅಸ್ಪೃಶ್ಯತೆಯನ್ನು ಕಾನೂನಿನ ಪ್ರಕಾರ ನಿಷೇಧಿಸಿದೆ. ಆದರೆ ಬೇರೆ ಬೇರೆ ರೂಪಗಳಲ್ಲಿ ಅಥವಾ ನೇರವಾಗಿ ಇಂದಿಗೂ ಈ ಕಳಂಕಿತ ಆಚರಣೆ ಭಾರತದ ಹೆಚ್ಚು ಕಡಿಮೆ ಎಲ್ಲಾ ಭಾಗಗಳಲ್ಲೂ ಚಾಲ್ತಿಯಲ್ಲಿದೆ. ಆದರೆ ಭಾರತದ ಮುಸ್ಲಿಮರಲ್ಲಿ ಪರಿಸ್ಥಿತಿ ಬೇರೆಯೇ ತೆರನಾದದ್ದು. ಮುಸ್ಲಿಮರಲ್ಲಿ ಕೆಳವರ್ಗದ ಮತ್ತು ಮೇಲ್ವರ್ಗದ ಜನರಿದ್ದರೂ ಪ್ರಾರ್ಥನೆಯನ್ನು ಒಟ್ಟಿಗೆ ಸಲ್ಲಿಸುತ್ತಾರೆ. ಅಲ್ಲಿ ವರ್ಗತಾರತಮ್ಯ, ಜಾತಿತಾರತಮ್ಯವಿರುವುದಿಲ್ಲ. ಬಡವರಿಗೆ-ಪರಂಪರೆಯಿಂದ ಜೀತದಾಳಾದವರು ಮತ್ತು ವೃತ್ತಿಗಳನ್ನು ನಿರ್ವಹಿಸುವವರು ತಮ್ಮ ದುರದೃಷ್ಟ ಪರಿಸ್ಥಿತಿಯಿಂದ ಬಿಡುಗಡೆ ಪಡೆಯಲು ಕೆಲವು ದಾರಿಗಳೇನೊ ಇವೆ. ಜೀತಪದ್ಧತಿಯ ರದ್ಧತಿಯಿಂದ ಯಾವುದೇ ರೀತಿಯ ಪ್ರಯೋಜನವಾಗಿಲ್ಲ. ಒಂದು ಬಗೆಯ ಜೀತದಿಂದ ಇನ್ನೊಂದು ಬಗೆಯ ಜೀತಕ್ಕೆ ವರ್ಗಾವಣೆಗೊಂಡಂತಾಗಿದೆ. ವರ್ಣ, ಜಾತಿ, ವರ್ಗಗಳನ್ನು ರಾಜಕೀಯಗೊಳಿಸಿದ್ದರಿಂದ ಕೆಳಜಾತಿಗಳ ಮೇಲೆ ವಿವಿಧ ರೀತಿಯ ಅನ್ಯಾಯಗಳನ್ನು ಹೇರಲು, ಅವರನ್ನು ಶೋಷಿಸಲು ಅವಕಾಶವುಂಟಾಗಿದೆ. "ತುಳಿಯಲ್ಪಟ್ಟವರಿಗಾಗಿ" ದುರ್ಬಲರಿಗಾಗಿ, ಅಸಹಾಯಕರಿಗಾಗಿ, ಭಾರತದ ಸಮಾಜ, ಅರ್ಥವ್ಯವಸ್ಥೆ ಮತ್ತು ರಾಜ್ಯವ್ಯವಸ್ಥೆಗಳು ಕೇವಲ ಬಾಯಿ ಮಾತಿನ ಸಹಾನುಭೂತಿ ತೋರಿಸಿವೆ. ಅವರ ಸಮಸ್ಯೆಗಳಿಗೆ ನಿಜವಾದ ಪರಿಹಾರವನ್ನು ತೋರಿಸಲು

ಶಕ್ತವಾಗಲಿಲ್ಲ. ಇದರಿಂದ ಸ್ಪಷ್ಟವಾಗಿ ಕಾಣುತ್ತಿರುವ ಫಲಿತಾಂಶವೆಂದರೆ ವಿರೋಧ, ಪ್ರತಿಭಟನೆ ಮತ್ತು ಸಂಘರ್ಷ. ಸಮಾಜದಲ್ಲಿ ಸಂಪ್ರದಾಯವನ್ನು ಶೋಷಣೆ, ಅಸಮಾನತೆ, ಅನ್ಯಾಯಗಳನ್ನು ಮುಂದುವರಿಸಿಕೊಂಡು ಹೋಗಲು ಬಳಸಿಕೊಳ್ಳಲಾಗುತ್ತಿದೆ.

ಅಡಿಟಿಪ್ಪಣಿ:

೧. ಕರ್ನಾಟಕ ಐಡೆಂಟಿಟಿ ರಾಜಕೀಯ ರೈತ, ರೈತ ಹೋರಾಟ ಹಾಗೂ ಸಾಮಾಜಿಕ ಚಳುವಳಿ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, ೨೦೦೯, ಪು. ಸಂ. ೧೯.

೨. ಜೆ.ಎಮ್. ಮೆಹ್ತಾ ಎ ಸ್ಟಡಿ ಆಫ್ ರೂರಲ್ ಎಕನಾಮಿ ಆಫ್ ಗುಜರಾತ್, ಕಂಟೈನಿಂಗ್ ಪಾಸಿಬಿಲಿಟಿಸ್ ಆಫ್ ರಿಕಸ್ಟ್ರಕ್ಷನ್ ಬರೋಡಾಸ್ಟೇಟ್ ಪ್ರೆಸ್, ಬರೋಡಾ ೧೯೩೦.

೩. ಅತುಲ್ ಕೊಹ್ಲಿ, ದಿ ಸ್ಟೇಟ್ ಅಂಡ್ ಪವರ್ಟಿ ಇನ್ ಇಂಡಿಯಾ ದಿ ಪೊಲಿಟಿಕ್ಸ್ ಆಫ್ ಪಿಫಾಮ್ ಕ್ಯಾಂಬ್ರಿಜ್ ಯೂನಿವರ್ಸಿಟಿಪ್ರೆಸ್, ಕ್ಯಾಂಬ್ರಿಜ್ ೧೯೮೭, ಪು.೧೭೨-೧೭೩.

೪. ಕರ್ನಾಟಕ ರಾಜ್ಯ ರೈತ ಸಂಘ, ರೈತ ಹೋರಾಟ ಏಕೆ? ೧೯೮೦.

೫. ಕರ್ನಾಟಕದಲ್ಲಿ ಐಡೆಂಟಿಟಿ ರಾಜಕೀಯರೈತ, ರೈತಹೋರಾಟ ಹಾಗೂ ಸಾಮಾಜಿಕ ಚಳುವಳಿ, ಡಾ. ಮುಜಾಫರ್ ಅಸ್ಸಾದಿ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, ೨೦೦೯.

೬. ಪ್ರಜಾವಾಣಿ, ಸಾಪ್ತಾಹಿಕ ಪುರವಣಿ, ವೀರಣ್ಣ ಮಡಿವಾಳರ, ೨೯.೪.೨೦೧೨.

ಅಧ್ಯಾಯ ೬

ತಳೆದ ನಿಲುವುಗಳು

ಉಪಸಂಹಾರ

ಅಧ್ಯಾಯ ೬

ತಳೆದ ನಿಲುವುಗಳು ಮತ್ತು ಉಪಸಂಹಾರ

ನಾಗರೀಕ ಸಮಾಜ ಒಂದು ಸ್ವತಂತ್ರವಲ್ಲದ, ಯಾವಾಗಲೂ ಪಟ್ಟಭದ್ರ ಹಿತಾಸಕ್ತಿಗಳನ್ನು ಮೈಗೂಡಿಸಿಕೊಂಡ ಪ್ರಭುತ್ವದ ದಳ್ಳಾಳಿ ಮಾತ್ರವೇ ಎಂಬ ಪ್ರಶ್ನೆ ನಿಜವಾಗಿಯೇ ಏಳುತ್ತದೆ. ನಾಗರೀಕ ಸಮಾಜವೆನ್ನವುದು ಒಂದು ಸ್ವತಂತ್ರ ಮುಕ್ತಚಿಂತನೆಗಳ ಚಾವಡಿಯೇನಲ್ಲ. ಪಟ್ಟಭದ್ರ ವ್ಯವಸ್ಥೆಯ ಬುನಾದಿಯಾದ ಆರ್ಥಿಕ ಸಂಬಂಧಗಳನ್ನೂ, ಅವು ಸೃಷ್ಟಿಸುವ ತಾತ್ವಿಕತೆಯನ್ನೂ ವಿರೋಧಿಸುವ ಕ್ರಿಯೆ ಮೊದಲು ಸಫಲವಾಗಬೇಕಾಗಿರುವುದು ನಾಗರೀಕ ಸಮಾಜದ ಒಳಗಡೆಯೇ ಎಂಬುದನ್ನು ಗ್ರಾಂಶಿ ತೋರಿಸಿಕೊಡುತ್ತಾನೆ. ಆಳುವವರ್ಗಗಳ ಹಿಡಿತ, ಯಜಮಾನತ್ವ ಮತ್ತು ಅವುಗಳ ಸಾಮಿಪ್ಯದಲ್ಲೇ ಸುಖಿಸುವ ಮಧ್ಯಮವರ್ಗ, ಕೆಳವರ್ಗದ ಹಿತಾಸಕ್ತಿಗಳಿಂದ ಬಿಡುಗಡೆ ಪಡೆಯಲು ನಾಗರೀಕ ಸಮಾಜದೊಳಗಡೆಯೇ ನಡೆಯುವ ಸಂಘರ್ಷ ಅತ್ಯಗತ್ಯ. ದಮನಿತ ವರ್ಗ ತನ್ನ ಕಾರ್ಯ ಚಟುವಟಿಕೆಗಳನ್ನು ಜೀವಂತವಾಗಿ ಕಾಪಾಡಲು ತನಗೆ ರಾಜಕೀಯ ಅಧಿಕಾರ ಸಿಗುವವರೆಗೂ ಕಾಯದೆ ನಾಗರೀಕ ಸಮಾಜದೊಳಗಡೆ ಕಾರ್ಯನಿರತನಾಗುವುದೇ ನಿಜವಾದ ವಿಮೋಚನಾ ಹೋರಾಟದ ಮಾರ್ಗ ಮತ್ತು ಕ್ರಿಯಾಶೀಲ ನೆಲೆ ಎನ್ನುವುದು ಗ್ರಾಂಶಿಯ ಅಭಿಮತ.

ಪ್ರಸ್ತುತ ಮಹಾಪ್ರಬಂಧಕ್ಕೆ ಪ್ರಾತಿನಿಧಿಕವಾಗಿ ಆಯ್ಕೆ ಮಾಡಿಕೊಂಡಿರುವ ಲಾವಣಿಗಳು ಮತ್ತು ಕಥನಗೀತೆಗಳಲ್ಲಿ ಕಂಡುಬಂದ ವರ್ಗಸಂಘರ್ಷ ಮತ್ತು ಅದಕ್ಕೆ ಪರಿಹಾರದ ಕುರಿತು ಚರ್ಚಿಸುವುದು ಅತ್ಯವಶ್ಯ. ಚಾರಿತ್ರಿಕ ಲಾವಣಿಯಾಗಿ ಕಂಡುಬರುವ 'ಹಲಗಲಿಯ ಬೇಡರು' ಎಂಬ ಲಾವಣಿ ವಿಶಿಷ್ಟವಾದ ಲಾವಣಿ. ಬ್ರಿಟೀಷರ ದಾಸರಾಗಿ ಅವರ ಅಣತಿಯಂತೆ ನಡೆಯುತ್ತಿದ್ದ ಭಾರತೀಯರಲ್ಲಿ ಹಲಗಲಿಯ

ಬೇಡರು ವಿಶಿಷ್ಟವಾಗಿ ಕಂಡುಬರುತ್ತಾರೆ. ತಮ್ಮ ಸರ್ವಸ್ವವೇ ಆಯುಧಗಳಾಗಿದ್ದಂತಹ ಸಂದರ್ಭದಲ್ಲಿ ಆಯುಧಗಳನ್ನು ಬ್ರಿಟೀಷರು ತಮಗೆ ಒಪ್ಪಿಸಬೇಕೆಂದಾಗ ಅದರ ವಿರುದ್ಧ ಧ್ವನಿ ಎತ್ತಿ ಸಂಘರ್ಷಕ್ಕಿಳಿಯುತ್ತಾರೆ. ಇಂತಹ ಧೈರ್ಯ ಎಲ್ಲಾ ಸಂದರ್ಭಗಳಲ್ಲೂ ಕೆಳವರ್ಗದ ಜನರಲ್ಲಿ ಮೂಡಬೇಕು. ಆಗ ಮಾತ್ರ ವರ್ಗತಾರತಮ್ಯ ಕಡಿಮೆಯಾಗಲು ಸಾಧ್ಯ. 'ಸಂಗೊಳ್ಳಿ ರಾಯಣ್ಣ' ಲಾವಣಿಯು ವ್ಯಕ್ತಿಗತವಾಗಿ ಆಗುತ್ತಿದ್ದ ಅವಮರ್ಯಾದೆಯನ್ನು ರಾಯಣ್ಣ ಸವಾಲಾಗಿ ಸ್ವೀಕರಿಸಿ ಅದರ ವಿರುದ್ಧ ಸಿಡಿದೇಳುವುದು ಮತ್ತು ಅದನ್ನು ವ್ಯಕ್ತಿಗತವಾಗಿ ಮುಂದುವರಿಸದೆ ಬ್ರಿಟೀಷರ ವಿರುದ್ಧದ ಹೋರಾಟಕ್ಕೆ ಪರಿವರ್ತಿಸಿಕೊಳ್ಳುವುದು ಬಹಳ ವಿಶೇಷವಾಗಿರುವಂತಹದ್ದು. ಹೀಗೆ ಕೆಳವರ್ಗದ ಜನರ ಮೇಲೆ ಆಗುವ ಶೋಷಣೆ, ದಬ್ಬಾಳಿಕೆ, ದೌರ್ಜನ್ಯಗಳನ್ನು ವ್ಯಕ್ತಿಗತವಾಗಿ ಸ್ವೀಕರಿಸಿದರೂ ಮುಂದೆ ಅದನ್ನು ಕೆಳವರ್ಗದವರ ಏಳಿಗೆಯ ದೃಷ್ಟಿಯಿಂದ ವ್ಯಕ್ತಿಗತವಾಗಿ ಮುಂದುವರಿಸದೆ ಒಟ್ಟಾರೆ ಕೆಳವರ್ಗದವರ ಪರವಾದ ಧ್ವನಿಯಾಗಿ ಕೆಲಸ ನಿರ್ವಹಿಸಬೇಕು.

'ಮಾಗಡಿ ಕೆಂಪೇಗೌಡ' ಲಾವಣಿಯಲ್ಲಿ ಮೇಲ್ವರ್ಗದವರ ಸ್ವಾರ್ಥ ಮತ್ತು ಅವಕಾಶವಾದಿತನ ಎದ್ದುಕಾಣುತ್ತದೆ. ಮುಗ್ಧಬಾಲಕ ಕೆಂಪೇಗೌಡನಿಂದ ಒಂದು ಒಪ್ಪಂದಕ್ಕೆ ಸಹಿ ಮಾಡಿಸಿಕೊಂಡು ತೋಟದ ಕೆಲಸಕ್ಕೆ ನೇಮಿಸಿಕೊಳ್ಳುತ್ತಾರೆ. ಈ ಮೂಲಕ ಕೆಂಪೇಗೌಡನನ್ನು ಅವನ ಕುಟುಂಬ ವರ್ಗದವರಿಂದ ಮಾಲೀಕ ಬ್ರಾಹ್ಮಣ ದೂರ ಮಾಡುತ್ತಾನೆ. ಹೀಗೆ ದೂರವಾದ ಕೆಂಪೇಗೌಡನ ತಾಯಿ ಕೊರಗಿ ಕೊರಗಿ ಸಾಯುತ್ತಾರೆ. ಕೆಳವರ್ಗದವರ ಕುಟುಂಬದ ಅನ್ಯೋನ್ಯತೆ ಕೂಡಿ ಸುಖದಿಂದ ಬಾಳುವುದನ್ನು ಕೂಡ ಮೇಲ್ವರ್ಗದವರು ದೂರ ಮಾಡುತ್ತಾರೆ ಎಂಬುದಕ್ಕೆ ಉತ್ತಮ ಉದಾಹರಣೆ 'ಮಾಗಡಿ ಕೆಂಪೇಗೌಡ'. ಹೀಗೆ ಕೆಂಪೇಗೌಡನ ರೀತಿಯಲ್ಲಿ ಮೇಲ್ವರ್ಗದವರ ಪಿತೂರಿಗೆ ಬಲಿಯಾಗದಿರಲು ಇರುವ ಒಂದು ಉಪಾಯವೆಂದರೆ ಅವರ ಆಸೆ ಆಮಿಷಗಳನ್ನು ತಿರಸ್ಕರಿಸುವುದು. ಹಾಗೆಯೇ 'ಸಿಂಧೂರಲಕ್ಷ್ಮಣ' ಲಾವಣಿಯು ಒಬ್ಬ ವೀರ ಬೇಡನ ಕಥೆಯಾಗಿದ್ದು, ಆತ ನಿರ್ಗತಿಕರಿಗೆ ಉದಾರಿ, ಬಂಡವಾಳಶಾಹಿಗಳಿಗೆ ಸಿಂಹಸ್ವಪ್ನನಾಗಿದ್ದನು. ಆತ ಬ್ರಿಟೀಷರ ವಿರುದ್ಧ ಮತ್ತು ಅಧಿಕಾರಿಗಳ ವಿರುದ್ಧ ವೀರಾವೇಷದಿಂದ ಹೋರಾಡುತ್ತಾನೆ. ಕೊನೆಗೆ ಕೆಳವರ್ಗದವರ ಹಿತವನ್ನು ಕಾಪಾಡುತ್ತಾ ಕಾಪಾಡುತ್ತಲೇ ಬ್ರಿಟೀಷರ ಪಿತೂರಿಗೆ ಬಲಿಯಾಗುತ್ತಾನೆ. ಹೀಗೆ ಬಲಿಯಾದ ಯುವಕರು ಮೇಲ್ವರ್ಗದವರ ದಬ್ಬಾಳಿಕೆಯ ವಿರುದ್ಧದ ಹೋರಾಟಕ್ಕೆ ಮಾದರಿಯಾಗಬೇಕು.

ಪೌರಾಣಿಕ ಲಾವಣಿಗಳಲ್ಲಿ ಪ್ರಾತಿನಿಧಿಕವಾಗಿ ತೆಗೆದುಕೊಂಡಿರುವ 'ಗೌರಮ್ಮನ ಮದುವೆ' ಹುಟ್ಟಿದಾಳೆ ಗೌರಮ್ಮ' 'ಅಂಬಿಗರಗಂಗ' ಲಾವಣಿಗಳಲ್ಲಿ ಸ್ತ್ರೀಸಮುದಾಯದ ಬಗ್ಗೆ ಭಾರತೀಯಶಿಷ್ಟ, ಅಶಿಷ್ಟ ಪರಂಪರೆಗಳೆರಡೂ ಪಕ್ಷಪಾತವನ್ನು ಮಾಡಿಕೊಂಡು ಬಂದಿರುವುದನ್ನು ನಾವು ಕಾಣಬಹುದು. ಲಿಂಗಬೇಧದ ಕ್ರೌರ್ಯವನ್ನು ಮುಂದೆ ಮಾಡಿಕೊಂಡು ಹೆಣ್ಣಿನ ಸ್ಥಾನಮಾನವನ್ನು ನಿಕೃಷ್ಟಗೈದಿದೆ. ಜನಸಂಖ್ಯೆಯ ಅರ್ಧಭಾಗದಂತಿರುವ ಸ್ತ್ರೀವರ್ಗದ ಹಕ್ಕನ್ನು ನಿರಾಕರಿಸುತ್ತಲೇ ಬಂದಿದ್ದಾರೆ. ಈ ಲಾವಣಿಗಳಲ್ಲಿ 'ಗಂಗೆ' ಅಂಬಿಗರ ಮಗಳಾಗಿ ಶಿವನನ್ನು ವರಿಸಿಕೊಳ್ಳುವುದು, ಶಿವ ಗಂಗೆಗೆ ಅವಳೊಬ್ಬಳೇ

ಹೆಂಡತಿಯೆಂದು ಸುಳ್ಳು ಹೇಳುವುದು, ಸಮಾಜದಲ್ಲಿ ತಳಸಮುದಾಯದ ಜನರ ಭಾವನೆಗಳ ಜೊತೆ ಆಟವಾಡಿ ಜನ ಹೇಗೆ ನಂಬಿಕೆ ಹುಟ್ಟಿಸಿ ಮೋಸಗೊಳಿಸುತ್ತಿದ್ದರು ಎಂಬುದಕ್ಕೆ ಇದೊಂದು ಉತ್ತಮ ನಿದರ್ಶನವಾಗಿದೆ. ಶಿವನ ಉದ್ದೇಶ ಮೋಸಗೊಳಿಸುವುದಾಗಿಲ್ಲದೇ ಇರುವುದಾದರೂ ಅಂದಿನ ಸಾಮಾಜಿಕ ಸ್ಥಿತಿಗತಿಗೆ ಹಿಡಿದ ಕನ್ನಡಿಯಂತೆ ಈ ಲಾವಣಿಗಳು ಗೋಚರಿಸುತ್ತವೆ. ಗಂಡನಿಂದ ದೈಹಿಕ ಮತ್ತು ಮಾನಸಿಕ ಹಲ್ಲೆಗೊಳಗಾಗುತ್ತಿರುವ ಎಷ್ಟೋ ಮಹಿಳೆಯರಿಗೆ ತಾವು ಹಲ್ಲೆಗೊಳಗಾಗುತ್ತಿದ್ದೇವೆ ಎನ್ನುವ ಅರಿವು ಇರುವುದಿಲ್ಲ. ಇಂಥ ಅರಿವು ಮಹಿಳೆಯರಲ್ಲಿ ಮೂಡಬೇಕು ಆಗ ಮಾತ್ರ ಗಂಡಸರಿಂದಾಗುತ್ತಿರುವ ಹಿಂಸೆಗೆ ತಾರ್ಕಿಕವಾದ ಅಂತ್ಯವನ್ನು ಕಾಣಿಸಲು ಸಾಧ್ಯ.

'ರುಕ್ಮಿಣಿ ಗರ್ವಭಂಗ' ಲಾವಣಿಯು ರುಕ್ಮಿಣಿಯ ಅಹಂಕಾರವನ್ನು ಕೃಷ್ಣ ಮುರಿಯುವುದನ್ನು ಪ್ರತಿಬಿಂಬಿಸುವ ಕಥೆಯಾದರೂ ಗಂಡ-ಹೆಂಡತಿಯ ಪವಿತ್ರ ಸಂಬಂಧದ ಮಧ್ಯೆ ರುಕ್ಮಿಣಿ ತಾನು ಶ್ರೀಮಂತೆ, ತನಗೆ ಸರಿಸಮಾನವಾದ ಮನೆ ಸಿಗಲಿಲ್ಲವೆಂದು ಪರಿತಪಿಸುವುದು ಮತ್ತು ಅತ್ತೆಯ ಮನೆತನವನ್ನು ಹೀಗಳೆಯುವುದು, ಹಾಗೂ ತಂದೆಯ ಆಸ್ತಿ-ಅಂತಸ್ತಿಗೆ ಅತ್ತೆಯ ಮನೆಯವರು ಸರಿಸಾಟಿಯಲ್ಲವೆಂದು ಪಶ್ಚಾತ್ತಾಪಪಡುವುದು, ಅದಕ್ಕೆ ಕೃಷ್ಣನ ಸಮಜಾಯಿಶಿ ಹಾಗೂ ಕೃಷ್ಣನಿಂದ ಮುಕ್ತಳಾಗಿ ಆಕೆ ಹೋಗಲು ಯಾವುದೇ ತಂಟೆ-ತಕರಾರು ತನ್ನದಿಲ್ಲವೆಂದು ಹೇಳುವುದು, ಇದೆಲ್ಲದರ ಮಧ್ಯೆ ಆಕೆಗೆ ತಾನು ಮಾಡಿದ್ದು ತಪ್ಪಾಯಿತೆಂದೆನಿಸುವುದು. ಹೀಗೆ ಲಾವಣಿಯು ರುಕ್ಮಿಣಿಯ ಗರ್ವಹರಣವಾಗಿದ್ದನ್ನು ಪ್ರತಿಪಾದಿಸಿದ್ದರೂ, ಲಾವಣಿಯಲ್ಲಿ ಕಂಡುಬರುವ ವರ್ಗ, ವರ್ಣತಾರತಮ್ಯವನ್ನು ಗಮನಿಸಬಹುದು. ಶ್ರೀಮಂತ ಹೆಣ್ಣು, ಬಡಗಂಡನ ಮನೆಗೆ ಬಂದು ಅಲ್ಲಿ ಹೊಂದಾಣಿಕೆಯಾಗದೇ ಚಡಪಡಿಸುವುದು ಕೇವಲ ಈ ಲಾವಣಿಗಷ್ಟೇ ಸೀಮಿತವಾಗಿರದೇ ಇದು ಸಾರ್ವತ್ರಿಕ ಸತ್ಯವಾಗಿ ಕಂಡುಬರುತ್ತದೆ. ಸಮಾಜದಲ್ಲಿ ಇಂತಹ ತಾರತಮ್ಯ ನಿಲ್ಲಬೇಕಾದರೆ ಎಲ್ಲರಲ್ಲೂ ಸಮಾನ ಆರ್ಥಿಕ ಪರಿಸ್ಥಿತಿ ನಿರ್ಮಾಣವಾಗಬೇಕು. ಆ ನಿಟ್ಟಿನಲ್ಲಿ ಸರ್ಕಾರ ಪ್ರಯತ್ನಿಸಬೇಕು.

'ಏಕಲವ್ಯ' ಲಾವಣಿಯು ಕೆಳವರ್ಗದ ಏಕಲವ್ಯ ಗುರುವಿನಿಂದ ತಿರಸ್ಕೃತನಾಗಿ ಗುರುವಿನ ಮೂರ್ತಿಯನ್ನು ಪ್ರತಿಷ್ಠಾಪಿಸಿಕೊಂಡು ಬಿಲ್ವಿದ್ಯೆಯನ್ನು ಕಲಿತು ಅದರಲ್ಲಿ ವಿಶಿಷ್ಟ ವಿದ್ಯೆಯಾದ 'ಶಬ್ದವೇದಿ' ಯನ್ನು ಕಲಿತು ವಿಶೇಷ ಬಿಲ್ವಿದ್ಯೆ ಪ್ರವೀಣರ ಸಾಲಿಗೆ ಒಬ್ಬ ಬೇಡ ಸೇರಿಕೊಳ್ಳುವುದು ಅಪರೂಪವಾಗಿರುವ ವಿಚಾರ. ಶಬ್ದವೇದಿ ವಿದ್ಯೆ ಕೇವಲ ಅರ್ಜುನನಿಗೆ ಮಾತ್ರ ಒಲಿದಿರುತ್ತದೆ. ದ್ರೋಣಾಚಾರ್ಯರು ಮುತುವರ್ಜಿ ವಹಿಸಿ ಅರ್ಜುನನಿಗೆ ಶಬ್ದವೇದಿ ವಿದ್ಯೆಯನ್ನು ಹೇಳಿಕೊಟ್ಟಿರುತ್ತಾರೆ. ಆದರೆ ಕೆಳವರ್ಗದವನಾದ ಏಕಲವ್ಯನಿಗೆ ಗುರುಗಳ್ಯಾರು ಇರುವುದಿಲ್ಲ. ನಿಷಾಧನಿಗೆ ವಿದ್ಯೆ ನಿಷಿದ್ಧವೆಂದು ದ್ರೋಣಾಚಾರ್ಯರಿಂದ ತಿರಸ್ಕೃತನಾಗಿ ಕಾಡಿಗೆ ಬಂದು ತನ್ನ ಸ್ವಂತ ಕಾಳಜಿ ಮತ್ತು ಶಕ್ತಿಯಿಂದ ಬಿಲ್ವಿದ್ಯೆಯನ್ನು ಕಲಿತಿರುತ್ತಾನೆ. ಒಂದು ದಿನ ದ್ರೋಣಾಚಾರ್ಯರು ಮತ್ತು ಅರ್ಜುನರು ಏಕಲವ್ಯನಿದ್ದ ಕಾಡಿನ ಕಡೆಗೆ ಹೋದಾಗ ಏಕಲವ್ಯ ಶಬ್ದವೇದಿ ವಿದ್ಯೆ ಕಲಿತಿರುವುದು ಗೊತ್ತಾಗುತ್ತದೆ. ಶಬ್ದವೇಧಿ ವಿದ್ಯೆ

ಹೇಳಿಕೊಟ್ಟ ಗುರುಗಳ ಬಗ್ಗೆ ಏಕಲವ್ಯನಲ್ಲಿ ಪ್ರಶ್ನಿಸಿದಾಗ ದ್ರೋಣಾಚಾರ್ಯರೇ ತನ್ನ ಗುರುಗಳೆಂದು ಅವರ ಮೂರ್ತಿ ಪ್ರತಿಷ್ಠಾಪನೆ ಮಾಡಿಕೊಂಡು ಬಿಲ್ವಿದ್ಯೆ ಕಲಿತಿರುವುದಾಗಿ ಹೇಳುತ್ತಾನೆ. ಶಬ್ದವೇಧಿ ವಿದ್ಯೆ ಕಲಿತ ಕಲಿ ತಾನೊಬ್ಬನೇ ಇರಬೇಕೆಂದು ಬಗೆದು ಅರ್ಜುನ ಗುರುದಕ್ಷಿಣೆಯಾಗಿ ಏಕಲವ್ಯನ ಹೆಬ್ಬೆರಳನ್ನು ಕೇಳಬೇಕೆಂದು ದ್ರೋಣಾಚಾರ್ಯರಿಗೆ ಹೇಳುತ್ತಾನೆ. ಏಕಲವ್ಯನಿಗೆ 'ಹೆಬ್ಬೆರಳ'ನ್ನು ದ್ರೋಣಾಚಾರ್ಯರು ಗುರುದಕ್ಷಿಣೆಯಾಗಿ ಕೇಳಿದಾಗ ಸಂತೋಷದಿಂದ ಒಪ್ಪಿ ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ಕೊಡುತ್ತಾನೆ. ಈ ರೀತಿ ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ಕೇಳುವುದರ ಹಿಂದೆ ಮೇಲ್ವರ್ಗದವರ ಪಿತೂರಿ ಗೋಚರಿಸುತ್ತದೆ ಹಾಗೂ ಕೆಳವರ್ಗದವರನ್ನು, ಮೇಲ್ವರ್ಗದವರು ಹೇಗೆ ಬಳಸಿಕೊಳ್ಳುತ್ತಿದ್ದರು ಎಂಬುದನ್ನು ಮನಗಾಣಬಹುದು. ಇದನ್ನು ಏಕಲವ್ಯ ಪ್ರತಿಭಟಿಸಿದ್ದರೆ ಇಂತಹ ಬೇರೆ ಪ್ರಕರಣಗಳು ಮುಂದೆ ಸಮಾಜದಲ್ಲಿ ನಡೆಯುತ್ತಿರಲಿಲ್ಲವೇನೋ? ಎಂದೆನಿಸುತ್ತದೆ.

'ಕೊಂತ್ಯಮ್ಮ' ಲಾವಣಿಯಲ್ಲಿ ಸಾರ್ವತ್ರಿಕಹಸಿವು, ಬಡತನದ ದಾರುಣ ಚಿತ್ರವನ್ನು ಕಾಣಬಹುದು. ಪಾಂಡವರಂತಹ ಕ್ಷತ್ರಿಯರೂ ಕೂಡ ಕಾಲದ ವಶಕ್ಕೆ ಸಿಕ್ಕಿ ಬಡತನದ ಬೇಗೆಯಲ್ಲಿ ಬೇಯುತ್ತಿರಬೇಕಾದ ಸಂದರ್ಭದಲ್ಲಿ ಮೇಲ್ವರ್ಗದವರ ಶೋಷಣೆಗೆ ಒಳಗಾಗುವ ಚಿತ್ರ, ಕೊಂತಿ ಒಂದು ಪ್ರಾತಿನಿಧಿಕ ಪಾತ್ರ ಮಾತ್ರವಾಗಿ ಸಮಷ್ಠಿ ನೋವಿಗೆ ಮುಖವಾಣಿಯಾಗಿ ನಿಂತಂತೆ ಕಾಣಿಸುತ್ತದೆ. ತಾತ್ಕಾಲಿಕವಾಗಿ ಬಡತನವನ್ನು ಅನುಭವಿಸಿದ ಪಾಂಡವರಿಗೆ ಇಂತಹ ಪರಿಸ್ಥಿತಿ ನಿರ್ಮಾಣವಾಗಿರುತ್ತದೆಂದರೆ ಇನ್ನು ಶಾಶ್ವತ ಬಡವರ ಸ್ಥಿತಿ ಹೇಗಿರಬಹುದೆಂದು ನಾವು ಕಲ್ಪಿಸಿಕೊಳ್ಳಬಹುದಾಗಿದೆ. ಇಂತಹ ಪರಿಸ್ಥಿತಿಗಳಿಂದ ಹೊರಬರಲು ಇರುವ ಒಂದೇ ಮಾರ್ಗವೆಂದರೆ ಬಡವರು ಸ್ವಾವಲಂಬಿಗಳಾಗುವುದು.

ಸಾಮಾಜಿಕ ಲಾವಣಿಗಳಲ್ಲಿ ಪ್ರಾತಿನಧಿಕವಾಗಿ ತೆಗೆದುಕೊಂಡಿರುವ 'ಸಂಗ್ಯನ ಅಪರಾಧ ಮತ್ತು ಸಾವು' ಲಾವಣಿ ಬಡವರಿಗೆ ಸಾಲಕೊಟ್ಟು ಶ್ರೀಮಂತರು ಬಡ್ಡಿ, ಚಕ್ರಬಡ್ಡಿ ಹಾಕಿ ಹೇಗೆ ಸುಲಿಯುತ್ತಿದ್ದರು ಎಂಬುದಕ್ಕೆ ಒಂದು ಉತ್ತಮ ಉದಾಹರಣೆ. ಸಂಗ್ಯನಿಗೆ ಸಾಲ ತೀರಿಸಲು ಸಾಧ್ಯವಾಗದ ಸ್ಥಿತಿಯಲ್ಲಿ ಸಾಹುಕಾರ ಬಸವಲಿಂಗಣ್ಣ ಕೋರ್ಟಿಗೆ ಫಿರ್ಯಾದಿಯನ್ನು ಕೊಟ್ಟು ಸಂಗ್ಯನನ್ನು ಕೋರ್ಟಿಗೆ ಎಳೆಯುವಂತಹದ್ದು. ಅದರಲ್ಲಿ ಬಡವನಾದ ಸಂಗ್ಯ ಸೋಲುವಂತಹದ್ದು, ಅದಾದಬಳಿಕ ಎಲ್ಲವನ್ನು ಕಳೆದುಕೊಂಡ ಸಂಗ್ಯ ಕ್ರೋದ ಹೆಚ್ಚಾಗಿ ಬಸವಲಿಂಗಣ್ಣನನ್ನು ಸಾಯಿಸುವುದು. ಸಹನೆಯ ಕಟ್ಟೆಯೊಡೆದಾಗ ಪ್ರತಿಭಟಿಸಿ ಸಾಹುಕಾರನನ್ನು ಸಾಯಿಸಲು ಮುಂದಾಗುವುದು, ಶೋಷಣೆಯನ್ನು ಪ್ರತಿಭಟಿಸುವುದಕ್ಕೆ ಉತ್ತಮ ನಿದರ್ಶನವಾಗಿದೆ.

'ಬಪ್ಪಿಂಗ-ಬಮ್ಮಿಂಗ' ಒಂದು ಅಪೂರ್ವ ಕಥನಗೀತೆ. ಜಾತಿವ್ಯವಸ್ಥೆಯಲ್ಲಿನ ತಾರತಮ್ಯ, ಬಡವ-ಬಲ್ಲಿದರ ನಡುವಿನ ವಿವಾಹನಿಷೇಧಕ ಸಾಂಪ್ರದಾಯಿಕ ದೃಷ್ಟಿಯ ಮೂಲಕ ಜರುಗಿದ ದುಃಖಗಳ ಸವೇಗವಾದ ಕಥನದ ರೀತಿಯಿದೆ. ಬಪ್ಪಿಂಗ ಬ್ರಾಹ್ಮಣ, ಬಮ್ಮಿಂಗ ಹೊಲೆಯವನು. ಇಬ್ಬರು ವಿಚಿತ್ರವಾದ ಪಂತವನ್ನು ಕಟ್ಟುತ್ತಾರೆ. ಪಗಡೆಯಾಟವಾಡಿ ಯಾರು ಸೋಲುತ್ತಾರೋ ಅವರು ತಮ್ಮ ತಂಗಿಯನ್ನು

ಗೆದ್ದವರಿಗೆ ಮದುವೆ ಮಾಡಿಕೊಡಬೇಕೆಂದು ವಿಚಿತ್ರವಾದ ಪಂತದಲ್ಲಿ ಬ್ರಾಹ್ಮಣ ಬಪ್ಪಿಂಗನಿಗೆ ಸೋಲಾಗುತ್ತದೆ. ಅನಿವಾರ್ಯವಾಗಿ ಬಪ್ಪಿಂಗ ತನ್ನ ತಂಗಿಯನ್ನು ಬಮ್ಮಿಂಗ ಕೊಟ್ಟು ಮದುವೆ ಮಾಡಿಕೊಡಬೇಕಾದ ಪ್ರಸಂಗ ಬರುತ್ತದೆ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಬ್ರಾಹ್ಮಣನ ಹುಡುಗಿ ಮದುವೆಯಾಗಿ ಬಮ್ಮಿಂಗನ ಮನೆಗೆ ಹೋದಾಗ ಕೆಳವರ್ಗದ ಬಡಗಂಡನ ಮನೆಯಲ್ಲಿ ಬಾಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಆಕೆ ಬಾವಿಗೆ ಬಿದ್ದು ಸಾಯುತ್ತಾಳೆ. ಆದರೆ ಸಮಾಜದಲ್ಲಿ ವರ್ಗತಾರತಮ್ಯ ನಿವಾರಣೆಯಾಗಲು ಇಂಥ ಅಂತರ್-ಜಾತಿ ವಿವಾಹಗಳು ಹೆಚ್ಚಾಗಿ ಅನ್ಯೋನ್ಯತೆಯಿಂದ ಗಂಡ-ಹೆಂಡತಿ ಬಾಳಬೇಕು.

'ಬಯಲುಸೀಮೆಯ ಗೌಡನಮಗಳು' ಶೀರ್ಷಿಕೆಯೇ ಹೇಳುವಂತೆ ಬಯಲುಸೀಮೆಯ ಗೌಡನ ಮಗಳು ಲಾವಣಿಯ ನಾಯಕಿ. ಅಹಂಕಾರ ಮತ್ತು ಪಾರಂಪಾರಿಕವಾದ ಗತ್ತಿನ ವ್ಯಕ್ತಿತ್ವವನ್ನು ಹೊಂದಿದ್ದ ಗೌಡನ ಮಗಳು. ಕೆಳವರ್ಗದ, ಬಡವನಾದ ಗೊಲ್ಲನ ಹುಡುಗನನ್ನು 'ಇನವಂದ' ಆಡಲು ಕರೆಯುವುದು. ಆತ ಒಪ್ಪದಿದ್ದಾಗ ಬಡ ಗೊಲ್ಲನ ಸಾವಿಗೆ ಕಾರಣವಾಗುವುದು ಬಯಲುಸೀಮೆಯ ಗೌಡನ ಮಗಳು ಲಾವಣಿಯ ತಿರುಳು. ಇಲ್ಲಿ ಗಮನಿಸಬೇಕಾದ ಒಂದು ಮುಖ್ಯ ವಿಷಯವೆಂದರೆ ಸಾಮಾನ್ಯವಾಗಿ ರಾಜಮಹಾರಾಜರು ಬಡ ಹೆಣ್ಣುಮಕ್ಕಳನ್ನು ನೆಚ್ಚಿ ಮದುವೆಯಾಗುತ್ತಿದ್ದರು. ಮದುವೆಯಾಗಲು ನಿರಾಕರಿಸಿದರೆ ಹೊತ್ತುಕೊಂಡು ಹೋಗಿ ಮದುವೆಯಾಗುವುದನ್ನು ಚರಿತ್ರೆಗುಂಟ ಕಾಣುತ್ತೇವೆ. ಆದರೆ ಇಲ್ಲಿ ಗೌಡನ ಮಗಳು ಶ್ರೀಮಂತೆ, ಬಡಹುಡುಗನನ್ನು ಬಯಸುವುದು, ವಿಭಿನ್ನವಾದಂತಹದ್ದು. ಆ ರೀತಿ ಬಯಸಿದ ಶ್ರೀಮಂತ ಗೌಡನ ಮಗಳಿಗೆ ಬಡಗೊಲ್ಲನ ಹುಡುಗ ಬಯಸದೆ ಇರಲು ವರ್ಗತಾರತಮ್ಯನೀತಿ ಕಾರಣವಿರಬಹುದು. ಆಕೆಯನ್ನು ಮೆಚ್ಚಿದ ನಂತರ ಆತನಿಗೆ ಸರಿಯಾದ ಮರ್ಯಾದೆ ಸಿಗುವುದು ಅನುಮಾನವಿದ್ದದ್ದರಿಂದ ಆತ ನಿರಾಕರಿಸುತ್ತಾನೆ. ಆದರೆ ಸಮಾಜದಲ್ಲಿ ವರ್ಗತಾರತಮ್ಯ ನಿವಾರಣೆಯಾಗಲು ಬಡವ ಶ್ರೀಮಂತನ ಮನೆಯಿಂದ ಹೆಣ್ಣು ತರುವುದು, ಶ್ರೀಮಂತ-ಬಡವನ ಮನೆಯಿಂದ ಹೆಣ್ಣು ತರುವುದು ನಿರಂತರವಾಗಿ ನಡೆಯಬೇಕಾಗುತ್ತದೆ. ಆಗ ಮಾತ್ರ ವರ್ಗತಾರತಮ್ಯ ನಿವಾರಣೆಯಾಗಿ ವರ್ಗಸಂಘರ್ಷವಿರುವುದಿಲ್ಲ.

'ಕೂಪನ' ಲಾವಣಿಯು ಬಡವರ ಸ್ಥಿತಿಗತಿಗಳನ್ನು ತಿಳಿಸುವ ಒಂದು ಉತ್ತಮ ಲಾವಣಿ. ಈ ಲಾವಣಿಯಲ್ಲಿ ಬಡವರಿಗೆ ಸಿಗಬೇಕಾದ ಸವಲತ್ತುಗಳು ಹೇಗೆ ಶ್ರೀಮಂತರ ಪಾಲಾಗುತ್ತಿದೆ ಎಂಬುದನ್ನು ಜನಪದಕಾರ ಬಹಳ ಮನೋಜ್ಞವಾಗಿ ಚಿತ್ರಿಸಿದ್ದಾನೆ. ಆರ್ಥಿಕವಾಗಿ ಹಿಂದುಳಿದ ಕೆಳವರ್ಗದ ಬಡವರಿಗೆ ಸರ್ಕಾರದ ವತಿಯಿಂದ ಕಡಿಮೆ ದರದಲ್ಲಿ ಆಹಾರಪದಾರ್ಥಗಳನ್ನು 'ನ್ಯಾಯಬೆಲೆ ಅಂಗಡಿ' ಗಳಲ್ಲಿ ಕೊಡಲಾಗುತ್ತದೆ. ಇದು ಬಡವರಿಗೆ ವರದಾನವಾಗಿ ಪರಿಣಮಿಸಿದೆ. ಆದರೆ ಶ್ರೀಮಂತರು ಇದನ್ನು ಕೂಡ ಬಡವರಿಂದ ಕಿತ್ತುಕೊಳ್ಳುತ್ತಿರುವುದನ್ನು ನಾವು ಕಾಣುತ್ತೇವೆ. ಮುಗ್ಧರು, ಅಸಹಾಯಕರು ಆಗಿರುವ ಬಡಕೆಳವರ್ಗದ ಜನರಿಗೆ ಆಹಾರಪದಾರ್ಥಗಳು ಅಂಗಡಿಗೆ ಯಾವಾಗ ಬರುತ್ತವೆ? ಎಷ್ಟು ಬರುತ್ತವೆ? ಎನ್ನುವುದು ಗೊತ್ತಾಗುವುದಿಲ್ಲ. ಆದ್ದರಿಂದ ಬಡವರ ಪಾಲಿನ ಆಹಾರಪದಾರ್ಥಗಳನ್ನು ಉಳ್ಳವರು,

ಅಧಿಕಾರಿಗಳು ಅಕ್ರಮವಾಗಿ ಮಾರಿಕೊಂಡು ಬಂದ ಲಾಭವನ್ನು ಹಂಚಿಕೊಳ್ಳುವುದನ್ನು ಸಮಾಜದಲ್ಲಿ ಸಾಮಾನ್ಯವಾಗಿ ಕಾಣಬಬುದು. ಇದನ್ನು ಕೂಪನ ಲಾವಣಿಯಲ್ಲಿ ಬಡಹೆಂಗಸು ಆಕ್ರೋಶಭರಿತವಾಗಿ ವಿರೋಧಿಸುವುದನ್ನು ಮತ್ತು ಸಮಾಜದಲ್ಲಿ ನಡೆಯುತ್ತಿರುವ ಅಕ್ರಮವನ್ನು ಕನ್ನಡಿಯಂತೆ ತೋರಿಸಿ ಕೊಟ್ಟಿರುವುದನ್ನು ನಾವು ಕಾಣಬಹುದು. ಇಂತಹ ಅಕ್ರಮಗಳು, ಅನೈತಿಕವಾದ ಕ್ರಿಯೆಗಳು ಸಮಾಜದಲ್ಲಿ ನಡೆಯದೇ ಹೋದರೇ ಖಂಡಿತವಾಗಿಯೂ ಸಮಾಜದಲ್ಲಿ ವರ್ಗ ಸಂಘರ್ಷವಿರುವುದಿಲ್ಲ.

'ಸಂತಕಬೀರ' ಲಾವಣಿಯಲ್ಲಿ ಬಡವನಾದ ಕಬೀರ ಅನಿವಾರ್ಯವಾದ ಪರಿಸ್ಥಿತಿಯಲ್ಲಿ ಒಬ್ಬ ಶ್ರೀಮಂತನ ಬಳಿಯಲ್ಲಿ ಸಾಲ ಮಾಡಬೇಕಾಗುತ್ತದೆ. ಆಗ ಆ ಶ್ರೀಮಂತ ಸಾಲ ಹಿಂತಿರುಗಿಸಲು ಒಂದು ಕಾಲಮಿತಿಯನ್ನು ನಿಗದಿಗೊಳಿಸುತ್ತಾನೆ. ಆ ಕಾಲಮಿತಿಯೊಳಗಡೆ ಕಬೀರ ಸಾಲ ಒದಗಿಸಲು ಸಾಧ್ಯವಾಗುವುದಿಲ್ಲ. ಇಂತಹ ಸಂದರ್ಭದಲ್ಲಿ ಕಬೀರನ ಹೆಂಡತಿಯನ್ನು ತನ್ನ ಕಾಮತೃಷೆಗೆ ಬಳಸಿಕೊಳ್ಳಲು ಪ್ರಯತ್ನಿಸುತ್ತಾನೆ. ಇಲ್ಲಿ ದೇವರು ಅಡ್ಡಬಂದು ಆಗಬಹುದಾದಂತಹ ಅಚಾತುರ್ಯವನ್ನು ತಪ್ಪಿಸುತ್ತಾನೆ. ಆದರೆ ಬಹಳಷ್ಟು ಸಂದರ್ಭಗಳಲ್ಲಿ ಬಡವರು ಇಂತಹ ಘಟನೆಗಳಿಗೆ ಬಲಿಯಾಗಬೇಕಾಗುತ್ತದೆ. ಈ ರೀತಿಯ ಬಡವ–ಶ್ರೀಮಂತರ ನಡುವಿನ ಅಸಮಾನ್ಯತೆ ದೂರವಾಗಬೇಕಾದರೆ ಬಡವರಿಗೂ ಸಮಾಜದಲ್ಲಿ 'ಶ್ರಮಕ್ಕೆ ತಕ್ಕ ಪ್ರತಿಫಲ' ಸಿಗಬೇಕಾಗುತ್ತದೆ.

'ಕಡ್ಲಿಮಟ್ಟಿ ಕಾಶೀಬಾಯಿ' ಲಾವಣಿ ಪುರುಷಪ್ರಧಾನ ಸಮಾಜ ಅದರಲ್ಲೂ ಅಧಿಕಾರಶಾಹಿ ಪುರುಷವರ್ಗದ ಹಿಡಿತಕ್ಕೆ ಸಿಕ್ಕಿದ ಬಡ, ಅಸಹಾಯಕ, ಮುಗ್ಧ, ಅಮಾಯಕ ಹೆಣ್ಣು, ಸಂದಿಗ್ಧ ಪರಿಸ್ಥಿತಿಯಲ್ಲಿ ಸಂದರ್ಭದ ಬಲಿಪಶುವಾಗದೇ, ಧೈರ್ಯದಿಂದ ಎದುರಿಸುವುದು. ಹೆಣ್ಣು ಕುಲಕ್ಕೆ ಮಾದರಿಯ ರೂಪದಲ್ಲಿ ಕಂಡುಬರುವಳು. ಹೀಗೆ ಎಲ್ಲಾ ಸಂದರ್ಭಗಳಲ್ಲೂ ಹೆಣ್ಣು ತನ್ನ ಸ್ವಾಭಿಮಾನಕ್ಕೆ ಧಕ್ಕೆಯುಂಟಾದಾಗ ಸಿಡಿದೇಳಬೇಕು. ಆಗ ಮಾತ್ರ ಶೋಷಣೆಯಿಂದ ಮುಕ್ತಿಯನ್ನು ಪಡೆದುಕೊಳ್ಳಲು ಸಾಧ್ಯ.

ಕನ್ನಡ ಜನಪದ ಕಥನಕಾವ್ಯಗಳಲ್ಲಿ ಪ್ರಾತಿನಿಧಿಕವಾಗಿ ತೆಗೆದುಕೊಂಡಿರುವ 'ವೀರದಿಮ್ಮವ್ವ' 'ಲಾಲಾಗುಜ್ಜನ ಹಾಡು' 'ಬತಿಗೇಡಿರಾಜ' ಈ ಲಾವಣಿಗಳಲ್ಲಿ ವರ್ಗಸಂಘರ್ಷವನ್ನು ಕಾಣಬಹುದು. ವೀರದಿಮ್ಮವ್ವ ಲಾವಣಿಯಲ್ಲಿ, ದಿಮ್ಮವ್ವ ಶ್ರೀಮಂತಳ ಮಗಳಾಗಿದ್ದು ಗತಿಯಿಲ್ಲದ ಬೇಡರ ಬಮ್ಮಣ್ಣನನ್ನು ತಂದು ಕೆಲಸಕ್ಕೆ ನೇಮಿಸುತ್ತಾಳೆ. ಆದರೆ ವಿಕೃತ ಮನಸ್ಸಿನವನಾದ ಬಮ್ಮಣ್ಣ ದಿಮ್ಮವ್ವಳ ಮೇಲೆ ಒಂದು ಬಾರಿ ಅತ್ಯಾಚಾರವೆಸಗಲು ಪ್ರಯತ್ನಿಸುತ್ತಾನೆ. ಆಗ ದಿಮ್ಮವ್ವ ನಯವಾಗಿ ಬಮ್ಮಣ್ಣನಿಗೆ ಬುದ್ಧಿವಾದ ಹೇಳುತ್ತಾಳೆ. ನಂತರ ದಿಮ್ಮವ್ವಳ ಅಣ್ಣಂದಿರಿಗೆ ತಂದೆ–ತಾಯಿಯರಿಗೆ ಗೊತ್ತಾಗಿ ದಿಮ್ಮವ್ವಳ ಮದುವೆಯನ್ನು ಬೇರೆ ಕಡೆ ನಿಶ್ಚಯಿಸುತ್ತಾರೆ. ಆನಂತರದಲ್ಲೂ ಬಮ್ಮಣ್ಣ, ದಿಮ್ಮವ್ವಳನ್ನು ಬಯಸುತ್ತಾನೆ. ಒಂದು ದಿನ ದಿಮ್ಮವ್ವ ಆಕೆಯ ಗಂಡನನ್ನು ಕೂಡಿಕೊಂಡು ತವರು ಮನೆಯಿಂದ ಅತ್ತೆಯ ಮನೆಗೆ

ಹೋಗುತ್ತಿರಬೇಕಾದಂತಹ ಸಂದರ್ಭದಲ್ಲಿ ಬಮ್ಮಣ್ಣ ಅವರನ್ನು ಹಿಂಬಾಲಿಸಿ ದಿಮ್ಮವ್ವಳ ಗಂಡನನ್ನು ಕೊಂದು ಹಾಕುತ್ತಾನೆ. ನಂತರ ದಿಮ್ಮವ್ವ ಬಮ್ಮಣ್ಣನನ್ನು ಕೊಲ್ಲುತ್ತಾಳೆ. ನಂತರ ಕೊನೆಗೆ ದಿಮ್ಮವ್ವ ಕೂಡ ತನ್ನ ಪ್ರಾಣವನ್ನು ಕಳೆದುಕೊಳ್ಳುತ್ತಾಳೆ. ಹೀಗೆ ವರ್ಗಸಂಘರ್ಷ ಸಾವಿನಲ್ಲಿ ಅಂತ್ಯವಾಗುತ್ತದೆ. ಈ ರೀತಿಯ ವಿಕೃತಿಯ ಮನೋಭಾವನೆ ಮನುಷ್ಯನಿಂದ ದೂರವಾದರೆ ಮಾತ್ರ ವರ್ಗಸಂಘರ್ಷ ಸಮಾಜದಲ್ಲಿ ಕಡಿಮೆಯಾಗಲು ಸಾಧ್ಯ.

'ಲಾಲಾಗುಜ್ಜನ ಹಾಡು' ಕಥನಗೀತೆಯಲ್ಲಿ ಲಾಲಾಗುಜ್ಜ ಎಂಬ ಸಾಹುಕಾರ. ಬಡವನಾದ ಬಾಬಜ್ಜಿಯನ್ನು ಹೇಗೆ ಶೋಷಿಸಲು ಮುಂದಾಗುತ್ತಾನೆ ಎಂಬುದನ್ನು ಕಾಣಬಹುದು. ಲಾಲಾಗುಜ್ಜ ಮತ್ತು ಬಾಬಜ್ಜಿ ಆತ್ಮೀಯ ಸ್ನೇಹಿತರಾಗಿದ್ದರೂ ಕೂಡ ಲಾಲಾಗುಜ್ಜ, ನಾಲ್ಕು ಕೆಟ್ಟಮಂದಿಯ ಮಾತುಗಳನ್ನು ಕೇಳಿಕೊಂಡು ಬಾಬಜ್ಜಿಗೆ ಮೋಸಮಾಡುತ್ತಾನೆ. ಅನಿವಾರ್ಯವಾದ ಸಂದರ್ಭದಲ್ಲಿ ಬಾಬಜ್ಜಿ, ಲಾಲಾಗುಜ್ಜನ ಬಳಿ ಸಾಲ ಮಾಡುತ್ತಾನೆ. ಆದರೆ ಸಾಲಕೊಡಬೇಕಾದ ಸಂದರ್ಭದಲ್ಲಿ ಆತ್ಮೀಯತೆ ಇದ್ದದ್ದರಿಂದ ಲಾಲಾಗುಜ್ಜ ಒಪ್ಪಂದ ಅಥವಾ ದಸ್ತ ಬರೆಸಿಕೊಂಡಿರುವುದಿಲ್ಲ. ಆದರೆ ಕೆಟ್ಟವರ ಮಾತು ಕೇಳಿ ದಸ್ತ ಬರೆಯಿಸಿಕೊಂಡು ಸ್ವಲ್ಪದಿನಗಳ ನಂತರ ತನಗೆ ಹಣ ಹಿಂತಿರುಗಿಸಬೇಕೆಂದು ಕೇಳಿ ಪಡೆದುಕೊಂಡು 'ಸಾಲ ವಾಪಸ್ಸು ಮಾಡಿಲ್ಲ' ವೆಂದು ಕೋರ್ಟಿನಲ್ಲಿ ಮೊಕದ್ದಮೆ ಹುಡುತ್ತಾನೆ. ಇದಕ್ಕೆ ಪ್ರತಿಯಾಗಿ ಬಾಬಜ್ಜಿಯ ಪರವಾಗಿ ಸಾಕ್ಷಿ ಹೇಳಲು ಯಾರೂ ಇಲ್ಲದ ಕಾರಣ ದೇವರನ್ನು ಸಾಕ್ಷಿಯಾಗಿ ಬಾಬಜ್ಜಿ ಇಟ್ಟುಕೊಳ್ಳುತ್ತಾನೆ. ಕೊನೆಗೆ ಬಾಬಜ್ಜಿಗೆ ಕೋರ್ಟಿನಲ್ಲಿ ನ್ಯಾಯ ಸಿಗುತ್ತದೆ. ಆದರೆ ಎಲ್ಲಾ ಸಂದರ್ಭಗಳಲ್ಲೂ ಈ ರೀತಿಯಾಗಲು ಸಾಧ್ಯವಿಲ್ಲ. ಬಹಳಷ್ಟು ಸಂದರ್ಭಗಳಲ್ಲಿ ನ್ಯಾಯಾಲಯಗಳಲ್ಲಿ ತೀರ್ಪು ಶ್ರೀಮಂತರ ಪರವಾಗಿಯೇ ಬರುತ್ತದೆ. ಏಕೆಂದರೆ ನ್ಯಾಯಾಲಯಗಳಲ್ಲಿ ಬಡವರು ಗೆಲ್ಲಲು ಒಳ್ಳೆಯ ವಕೀಲರನ್ನು ನೇಮಿಸಲು ಸಾಧ್ಯವಾಗುವುದಿಲ್ಲ. ಪ್ರಸ್ತುತ ಕಥನಗೀತೆಯಲ್ಲಿ ಸ್ನೇಹಿತರಲ್ಲಿದ್ದ ಆತ್ಮೀಯತೆ ಹಣದ ವ್ಯವಹಾರರಾಗಿರಲಿ ಅಥವಾ ಬೇರೆಯವರಾಗಿರಲಿ ಹಣದ ವ್ಯವಹಾರ ಮಾಡಬೇಕಾದಂತಹ ಸಂದರ್ಭದಲ್ಲಿ, ವ್ಯವಹಾರ ಬರವಣಿಗೆಯ ರೂಪದಲ್ಲಿರಬೇಕಾಗಿರುವುದು ಅವಶ್ಯಕ.

'ಬತಿಗೇಡಿ ರಾಜ' ಈ ಲಾವಣಿಯಲ್ಲಿ ಬರುವ ರಾಜ ಶೀರ್ಷಿಕೆ ಸೂಚಿಸುವಂತೆ ಕೈಲಾಗದ ಹೇಡಿ. ಆದರೂ ಹೆಣ್ಣುಬಾಕ ರಾಜ. ಒಂದು ದಿನ ಒಬ್ಬಳು ಬಡ ಹುಡುಗಿಯನ್ನು ನೋಡಿ ಆಕೆಯನ್ನು ಪುಸಲಾಯಿಸಲು ಯತ್ನಿಸುತ್ತಾನೆ. ಒಡವೆವಸ್ತ್ರ ಕೊಡುತ್ತೇನೆಂದು ಹೇಳಿ ಆಕೆಯ ಮನಸನ್ನು ತನ್ನ ಕಡೆ ಸೆಳೆಯಲು ಪ್ರಯತ್ನಿಸುತ್ತಾನೆ. ಭಾರತೀಯ ಸಮಾಜದಲ್ಲಿ ಹೆಣ್ಣನ್ನು ಭೋಗದ ವಸ್ತುವಾಗಿಯೇ ಪರಿಗಣಿಸಿರುವುದನ್ನು ನಾವು ಕಾಣುತ್ತೇವೆ. ಇಲ್ಲಿ ರಾಜ ಬಡಹೆಣ್ಣನ್ನು ಬಯಸುವುದು ಒಂದಾದರೆ, ಅದಕ್ಕೆ ಪ್ರೋತ್ಸಾಹವನ್ನು ಕೊಡುವ ತಂದೆತಾಯಿಯರು ಮತ್ತೊಂದು ಕಡೆಯಿರುವುದು ಆಶ್ಚರ್ಯವನ್ನುಂಟು ಮಾಡುತ್ತದೆ. ಸಮಾಜದಲ್ಲಿ ಈ ರೀತಿಯ ಶೋಷಣೆ ಬೇರೆ ಬೇರೆ ರೂಪದಲ್ಲಿ ಸಮಾಜದಲ್ಲಿ ಈಗಲೂ ಕೂಡ ಕಾಣಿಸಿಕೊಳ್ಳುತ್ತಿರುವುದು ವಿಷಾಧನೀಯ ಸಂಗತಿ. ಇದು ನಿಲ್ಲಬೇಕು. ಸಮಾಜದಲ್ಲಿ ಎಲ್ಲರನ್ನೂ ಸಮಾನವಾಗಿ ಕಾಣುವುದಾಗಬೇಕು.

ಮೌನಸಂಘರ್ಷದ ಅಧ್ಯಾಯದಲ್ಲಿ ಪ್ರಾತಿನಿಧಿಕವಾಗಿ ತೆಗೆದುಕೊಂಡಿರುವ 'ಕೆರೆಗೆ ಹಾರ' ಮತ್ತು 'ಪತಿವ್ರತಾ ನೀಲಾವತಿ ಲಾವಣಿ' ಹೆಣ್ಣಿನ ಶೋಷಣೆಯನ್ನು ಎತ್ತಿ ತೋರಿಸುವ ಕಥನಗೀತೆಗಳು. ಕೆರೆಗೆಹಾರ ಕಥನಗೀತೆಯ ಹಾರವಾಗಿ 'ಹಾರ'ವಾಗಿ ಕೊಡುವ ಅನಿಷ್ಠ ಪದ್ಧತಿಗೆ ಒಬ್ಬ ಮುಗ್ಧ ಮಹಿಳೆ ಬಲಿಯಾಗುವುದನ್ನು ಚಿತ್ರಿಸಿದೆ. ಆರ್ಥಿಕ ಅಸಮಾನತೆ ಇರುವ ಈ ಸಮಾಜದಲ್ಲಿ ಹೆಣ್ಣಿಗೆ ಆರ್ಥಿಕ ಯಜಮಾನಿಕೆ ಸಿಗುವುದು ಬಹಳ ಕಷ್ಟಕರವಾದ ಸಂಗತಿ ಅದರಲ್ಲೂ ಮದುವೆಯಾಗಿ ಅತ್ತೆಯ ಮನೆಗೆ ಹೋಗುವ ಭಾಗೀರತಿಯಂತಹ ಕಿರಿಯ ಸೊಸೆಗೆ ಆರ್ಥಿಕ ಯಜಮಾನಿಕೆ ಸಿಗುವುದಿಲ್ಲ. ತನ್ನ ತವರು ಮನೆಯಲ್ಲಿ ಎಲ್ಲಾ ರೀತಿಯ ಸವಲತ್ತುಗಳನ್ನು ಅನುಭವಿಸಿ ಅತ್ತೆಯ ಮನೆಗೆ ಹೋಗಿ ಅಲ್ಲಿ ಇಂತಹ ಸವಲತ್ತುಗಳಿಂದ ವಂಚಿತಳಾದಾಗ ಸಹಜವಾಗಿ ತವರು ಮನೆ ಜ್ಞಾಪಕಕ್ಕೆ ಬರುವುದು, ಅತ್ತೆಯ ಮನೆಯಲ್ಲಿ ನಡೆಯುತ್ತಿರುವ ಶೋಷಣೆಯನ್ನು ವಿರೋಧಿಸುವುದು ಸಹಜವಾದ ಪ್ರಕ್ರಿಯೆ. ಆದರೆ ಕೆರೆಗೆ ಹಾರ ಕಥನಗೀತೆಯಲ್ಲಿ ತನ್ನ ಅನುಮತಿಯನ್ನು ಪಡೆದುಕೊಳ್ಳದೇ ತನಗೆ 'ಕೆರೆಗೆಹಾರ' ವಾಗಿ ಕೊಡುತ್ತಾರೆಂದು ಗೊತ್ತಿದ್ದರೂ ಭಾಗೀರತಿ ಅದನ್ನು ಪ್ರಶ್ನಿಸಲು ಹೋಗುವುದಿಲ್ಲ. ತನಗೆ ಆಗುತ್ತಿದ್ದ ದುಃಖ, ದುಮ್ಮಾನಗಳನ್ನು ಮನಸ್ಸಿನಲ್ಲಿಯೇ ಅದುಮಿಟ್ಟುಕೊಂಡು ಮಾನಸಿಕವಾಗಿ 'ಕೆರೆಗೆಹಾರ' ವಾಗಲು ಸಿದ್ಧವಾಗುತ್ತಾಳೆ. ಭಾಗೀರತಿಯು ಗಂಡನ ಅನುಪಸ್ಥಿತಿಯಲ್ಲಿ ಮಾನಸಿಕವಾಗಿ ನೊಂದಿದ್ದರೂ ಯಾರ ಬಳಿಯೂ ಅದನ್ನು ತೋರ್ಪಡಿಸಿಕೊಳ್ಳುವುದಿಲ್ಲ. ಕೇವಲ ತನ್ನ ಗೆಳತಿಯ ಬಳಿ ಮಾತ್ರ ತನ್ನನ್ನು ಕೆರೆಗೆ ಹಾರವಾಗಿ ಕೊಡುತ್ತಾರೆಂದು ಹೇಳುತ್ತಾಳೆ. ಅಲ್ಲಿ ತನ್ನ ತುಮುಲಗಳಿಗೆ ಉತ್ತರ ಸಿಕ್ಕ ನಂತರ ಅತ್ತೆಯ ಮನೆಗೆ ಬಂದು ಮಾನಸಿಕವಾಗಿ ಕೆರೆಗೆ ಹಾರವಾಗಲು ತಯಾರಾಗುತ್ತಾಳೆ. ಹೀಗೆ ಒಬ್ಬ ಮುಗ್ಧ ಹೆಣ್ಣಿನ ಶೋಷಣೆ ನಡೆಯುತ್ತದೆ. ಆದರೆ ಸಮಾಜದಲ್ಲಿ ಸಮಾನತೆ ಮೂಡಬೇಕಾದರೆ ಹೆಣ್ಣಿನ ಶೋಷಣೆ ನಿಲ್ಲಬೇಕು.

'ಪತಿವ್ರತಾ ನೀಲಾವತಿ ಲಾವಣಿ' ಯು ಸಾಮಾನ್ಯವಾಗಿ ಪ್ರತಿ ಅತ್ತೆ-ಸೊಸೆಯ ನಡುವೆ ನಡೆಯುವ ಜಗಳದ ರೀತಿಯಲ್ಲಿ ಕಂಡುಬಂದರೂ ಇಲ್ಲಿ ಅತ್ತೆ ಸೊಸೆಗೆ ಹಾದರದ ದೋಷ ಹೊರಿಸುವುದರ ಮೂಲಕ ಅತಿರೇಕಕ್ಕೆ ಹೋಗಿರುವುದು ಗೋಚರಿಸುತ್ತದೆ. ಹಾದರದ ದೋಷದಿಂದ ನಿರ್ದೋಷಿಯಾಗಲು ನೀಲಾವತಿ ದೇವರ ಸಹಾಯವನ್ನು ಪಡೆದುಕೊಳ್ಳಬೇಕಾಗಿ ಬರುತ್ತದೆ. ದೇವರು ಸಹಾಯ ಮಾಡಿದ್ದರಿಂದ ನೀಲಾವತಿ ನಿರ್ದೋಷಿಯಾಗಿ ಹೊರಹೊಮ್ಮುತ್ತಾಳೆ. ಆದರೆ ಎಲ್ಲಾ ಸೊಸೆಯಂದಿರರಿಗೂ ದೇವರು ಸಹಾಯ ಮಾಡಲು ಬರಲು ಸಾಧ್ಯವಿಲ್ಲ. ನೀಲಾವತಿಯ ಮೇಲೆ ಹಾದರದ ದೋಷವನ್ನು ಹೊರಿಸಿದರೂ ಕೂಡ ಆಕೆ ಅತ್ತೆ-ಗಂಡನ ಧೋರಣೆಯ ಬಗ್ಗೆ ಪ್ರತಿಭಟಿಸಲು ಹೋಗುವುದಿಲ್ಲ. ಬದಲಾಗಿ ಮೌನವಾಗಿ ಎಲ್ಲವನ್ನು ಸಹಿಸಿಕೊಂಡು ಅದರಿಂದ ಹೊರಬರಲು ಪ್ರಯತ್ನಿಸಿ ಸಫಲವಾಗುತ್ತಾಳೆ. ಎಲ್ಲಿಯವರೆಗೂ ಒಂದು ಹೆಣ್ಣು ಮತ್ತೊಂದು ಹೆಣ್ಣನ್ನು ಶೋಷಿಸುವುದನ್ನು ನಿಲ್ಲಿಸುವುದಿಲ್ಲವೋ ಅಲ್ಲಿಯವರೆಗೂ ಮಹಿಳೆಯರ ಸ್ಥಿತಿಗತಿ ಉತ್ತಮಗೊಳ್ಳುವುದಿಲ್ಲ.

ಜಾತಿ, ವರ್ಗ ಮತ್ತು ಲಿಂಗ ಭೇದಗಳೆಲ್ಲವೂ ಸನಾತನ ಕಾಲದಿಂದಲೂ ಶೋಷಣೆಯ ಸಂಕೇತವೆಂಬಂತೆ ನಮ್ಮೊಳಗೆ ರೂಢಿಗತವಾಗಿ ಬಂದಿದೆ. ಇವುಗಳೊಳಗಿನ ದಾಡಸಿತನ ಗುಣಗಳಿಂದ ಅನಿವಾರ್ಯವಾಗಿ ಅಲ್ಲೇ ಬದುಕುವ ಪರಿಸ್ಥಿತಿ ಇಂದಿಗೂ ಹಾಗೆ ಇದೆ. ಶೋಷಣೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಕೆಳವರ್ಗದ ಜನ ಮತಾಂತರವಾಗುತ್ತಾರೆ. ಮತಾಂತರವಾದ ಮೇಲಾದರೂ ಅವರಿಗೆ ಅಲ್ಲಿನ ನಿಜವಾದ ಅರಿವಾಗದೇ ಹೋದರೆ ಏನನ್ನು ಸಾಧಿಸಲಾರರು. ಮತಾಂತರ ಯಾವ ಕಾರಣಕ್ಕೂ ಭ್ರಮೆಯ ನಿರಸನಗಳನ್ನು ನೀಡಬಾರದು. ಅದರಿಂದ ಸಮಾಜದೊಳಗೆ ಮತ್ತಷ್ಟು ಗೊಂದಲ ಏರ್ಪಡುತ್ತವೆ. ಇತ್ತೀಚಿನ ಉದಾರೀಕರಣ, ಖಾಸಗೀಕರಣ, ಜಾಗತೀಕರಣ ಇತ್ಯಾದಿ ಅಕ್ಟೋಪಸ್ ಸ್ವರೂಪದ ಚಟುವಟಿಕೆಗಳೆಲ್ಲವೂ ಅತ್ಯಂತ ಕೆಳವರ್ಗಗಳ ಮೇಲೆ ಗದಾಪ್ರಹಾರ ಮಾಡುತ್ತಿವೆ. ಮತಾಂತರಕ್ಕೆ ತೋರುವ ಜಾಣ್ಮೆ ಮತ್ತು ಹಕ್ಕುಗಳ ಪ್ರತಿಪಾದನೆ ಮಾಡುವಾಗ ಇಂತಹ ಶಕ್ತಿಗಳನ್ನು ದಲಿತರು ಮೊದಲು ನಿಯಂತ್ರಿಸಬೇಕು.

ಮತಾಂತರಗೊಳ್ಳಲೇಬೇಕಾದ ಅನಿವಾರ್ಯತೆ ಸಮಾಜದಲ್ಲಿ ತಲೆದೋರಿದ್ದು ಏಕೆ? ಎಂಬ ಪ್ರಶ್ನೆಯನ್ನು ಹಾಕಿಕೊಂಡಾಗ ಈ ಸಮಾಜದಲ್ಲಿರುವ ಎಲ್ಲಾ ಜಾತಿಗಳ ಸ್ಥಾನಮಾನಗಳು ಒಂದೇ ತೆರನಾಗಿಲ್ಲ. ಅದರಲ್ಲೂ ಬ್ರಾಹ್ಮಣ ಅಥವಾ ಉತ್ತಮ ಜಾತಿಗಳ ಸಾಮಾಜಿಕ ಸ್ಥಾನವನ್ನು ಅನ್ಯ ಹಿಂದೂ ಜಾತಿಗಳಿಗೆ ಹಿಂದೂ ಧರ್ಮದೊಳಗೆ ದಯಪಾಲಿಸಿದ್ದರೆ ಖಂಡಿತ ಈ ನಾಡಿನೊಳಗೆ ಜಾತಿಪದ್ಧತಿ ಇರುತ್ತಿರಲಿಲ್ಲ. ತನ್ಮೂಲಕ ನಡೆಯುವ ವರ್ಗತಾರತಮ್ಯವು ಕೂಡ ಇರುತ್ತಿರಲಿಲ್ಲ. ಮತ್ತು ಯಾವುದೇ ಕಾರಣಕ್ಕೂ ವರ್ಗಸಂಘರ್ಷ ಆಗುತ್ತಿರಲಿಲ್ಲ. ಅಕ್ಷರಕಲಿಕೆ, ಹೆಚ್ಚಿನ ವಿದ್ಯಾಭ್ಯಾಸ, ಸರಕಾರಿ ಸೇವೆಯಲ್ಲೇ ಮುಖ್ಯಸ್ಥಾನ ಹಿಡಿಯುವುದು ಸಂಘರ್ಷದ ಒಂದು ವಿಧಾನವಾಗುತ್ತದೆ. ವರ್ಣತರತಮತೆ, ಜಾತಿತರತಮತೆ ಹಾಗೆಯೇ ವರ್ಗತರತಮತೆಯ ಮಧ್ಯೆ ಈ ರೀತಿ ಮುಖ್ಯಸ್ಥಾನವನ್ನು ಹಿಡಿಯುವುದಕ್ಕೆ ಹೋರಾಟದ ಮಾರ್ಗವನ್ನೇ ಅನುಸರಿಸಬೇಕಾಗುತ್ತದೆ.

ಕಲಿತ ಯುವಶಕ್ತಿ ಕೇವಲ ನೌಕರಿಗಾಗಿ ಹಂಬಲಿಸದೆ ಸಮಾಜದಲ್ಲಿ ಬೇರೂರಿರುವ ತಾರತಮ್ಯವನ್ನು ನಿವಾರಿಸುವ ನಿಟ್ಟಿನಲ್ಲಿ ಹಿಂದುಳಿದ ಜಾತಿ–ವರ್ಗಗಳ ಪ್ರಗತಿಗೆ ಹೋರಾಡಲು ವಿಧಾಯಕ ಮತ್ತು ರಚನಾತ್ಮಕ ಕಾರ್ಯದಲ್ಲಿ ತೊಡಗಬೇಕು. ಇತ್ತೀಚಿನ ದಿನಗಳಲ್ಲಿ ರಚನೆಯಾಗುತ್ತಿರುವ ಸಾಹಿತ್ಯ ಜನತೆಯ ಹೋರಾಟಕ್ಕೆ ಪೂರಕವಾಗಿರಬೇಕು. ಹೆಚ್ಚಾಗಿ ಕಾವ್ಯಗಳು ಜನರಿಗೆ ಹೆಚ್ಚುಹೆಚ್ಚು ಹತ್ತಿರವಾಗುವುದರಿಂದ ಅವು ಹೋರಾಟಕ್ಕೆ ಪ್ರೇರಕಶಕ್ತಿಯಾಗಿ ಕೆಲಸ ಮಾಡಬೇಕು. ಸಮಾಜದ ಬುದ್ಧಿಜೀವಿಗಳು ಧಾರ್ಮಿಕ ಮುಖಂಡರು ತಮ್ಮತಮ್ಮ ಜಾತಿಯಲ್ಲಿನ ಕೊಳೆಯನ್ನು ತೊಳೆಯಲು ಪ್ರಯತ್ನಿಸಬೇಕು. ತನ್ಮೂಲಕ ಜಾತಿ, ಧರ್ಮದಿಂದ ದೂರ ಉಳಿದು ಲೋಕದ ಒಳಿತಿಗಾಗಿ ಶ್ರಮಿಸಬೇಕು.

ಸರ್ವರಿಗೂ ಶಿಕ್ಷಣ ಸಾಧ್ಯವಾಗುವ ಹಿಂದುಳಿದವರ ಶಿಕ್ಷಣ ಸೌಲಭ್ಯಕ್ಕೆ ವಿಶಿಷ್ಟವಾದ ವ್ಯವಸ್ಥೆಯನ್ನು ಹೊಂದುವ ರಾಜಕೀಯ ನೀತಿ ಸಾಧ್ಯವಾಗಬೇಕು. ಕೆಲವು ರಾಜಕೀಯ ಪಕ್ಷಗಳು ಹೆಚ್ಚು ಸಕ್ರಿಯವಾಗಿ

ವರ್ಗಹೋರಾಟದಲ್ಲೇ ನೇತೃತ್ವ ವಹಿಸುತ್ತವೆ. ಆದರೆ ಅದರಲ್ಲಿಯೂ ಕೆಲವರು ಪಕ್ಷದ ಹೆಸರನ್ನು ಹೇಳಿಕೊಂಡು ತಮ್ಮ ಬೇಳೆಯನ್ನು ಬೇಯಿಸಿಕೊಳ್ಳುವವರಿದ್ದಾರೆ. ಅಂತಹವರನ್ನು ಪಕ್ಷದಿಂದ ಹೊರಗಟ್ಟಿ ಪಕ್ಷದ ತತ್ವ ಸಿದ್ಧಾಂತವನ್ನು ಅನುಸರಿಸುವಂತಹವರನ್ನು ಇಟ್ಟುಕೊಳ್ಳಬೇಕು. ಬಂಡವಾಳಶಾಹಿಯ ಖಾಸಗಿ ಸೊತ್ತಿನ ಒಡೆತನವನ್ನು ರದ್ದುಗೊಳಿಸಿದಾಗ ಕೂಲಿಕಾರ ವರ್ಗದ ಶೋಷಣೆ ಅಂತ್ಯವಾಗುತ್ತದೆ. ಅದರೊಂದಿಗೆ ಸಮಾಜದೊಳಗಿನ ಮಾನವ ಸಂಬಂಧಗಳಲ್ಲಿರುವ ವಿಷಮತೆ ಅಥವಾ ಸಂಘರ್ಷಾವಸ್ಥೆ ಕೊನೆಗಾಣುತ್ತದೆ. ದುಡಿಮೆಗಾರ ಅನುಭವಿಸುವ ಪರಕೀಯತೆಯ ಭಾವನೆ ತೊಲಗುತ್ತದೆ. ತಾನು ಸಮಾಜದಲ್ಲಿ ಜಾಗವಿಲ್ಲವೆಂಬ ಮನೋವೈಕಲ್ಯದಿಂದ ಯಾವ ಮನುಷ್ಯನಾದರೂ ನೊಂದುಕೊಳ್ಳುವ ಸ್ಥಿತಿ ದೂರವಾಗುತ್ತದೆ. ಹಾಗಾದಾಗ ಮಾತ್ರ ಮಾನವನ ವ್ಯಕ್ತಿತ್ವ ಮತ್ತು ಸಾಮರ್ಥ್ಯ ಅಭಾದಿತವಾಗಿಯೂ, ಪರಿಪೂರ್ಣವಾಗಿಯೂ ವಿಕಾಸಹೊಂದುತ್ತವೆ. ಸಮಾಜದಲ್ಲಿ ಶೋಷಣೆಗೆ ಒಳಗಾಗಿರುವ ಹೆಣ್ಣು ಆರ್ಥಿಕವಾಗಿ ಸಧೃಡವಾಗಲು ಎಲ್ಲಾ ಕ್ಷೇತ್ರಗಳಲ್ಲೂ ಗಂಡಿಗೆ ಸಮನಾಗಿ ಕೆಲಸಗಳನ್ನು ಗಳಿಸುವ ಹಾಗಾಗಬೇಕು ಶೇಕಡಾ ೫೦:೫೦ ಅನುಪಾತದಲ್ಲಿ ಸರ್ಕಾರಿ ಕೆಲಸಗಳಲ್ಲಿ ಮಹಿಳೆಗೆ ಅವಕಾಶಮಾಡಿಕೊಡಬೇಕು.

ಸಮಾಜದಲ್ಲಿ ಕೆಳವರ್ಗದ ಜನರಲ್ಲಿ ವರ್ಗಪ್ರಜ್ಞೆ ಮುಖ್ಯವಾಗಿ ಮೂಡಬೇಕು. ವರ್ಗಪ್ರಜ್ಞೆ ಮೂಡದ ಹೊರತಾಗಿ ಸಮಾಜದಲ್ಲಿ ಕೆಳವರ್ಗದ ಜನ ಹೋರಾಟ ಮಾಡಲು ಸಾಧ್ಯವಿಲ್ಲ. ಸಮಾಜದಲ್ಲಿ ಸಂಪತ್ತು ಸಮಸ್ತರಿಗೆ ಹಂಚಿಹೋಗುವಂತೆ ನಖರವಾದ ಕಾರ್ಯಕ್ರಮ ಆಳುವ ಸರ್ಕಾರ ಹಾಕಿಕೊಳ್ಳಬೇಕು. ಅಮರ್ತ್ಯಸೇನ್‌ರವರ ಪ್ರಕಾರ ಸಂಪತ್ತಿನ ಸಂಗ್ರಹ ಒಂದೇ ಕಡೆ ಅಪಾರವಾದಾಗ, ಆ ಹೆಚ್ಚುವರಿ ಸಂಪತ್ತಿನಿಂದ ಆ ವ್ಯಕ್ತಿಗೆ ಒದಗುವ ತುಷ್ಟಿಗುಣ ಕಡಿಮೆಯಾಗುತ್ತದೆ. ಅಂದಮೇಲೆ ತುಷ್ಟಿಗುಣ ಕಡಿಮೆಯಿರುವ ಸಂಪತ್ತಿನ ಭಾಗವನ್ನು ಸದರಿ ವ್ಯಕ್ತಿಯಿಂದ ಪಡೆದುಕೊಂಡು ಸಂಪತ್ತು ಕಡಿಮೆ ಇರುವ ವ್ಯಕ್ತಿಗಳಿಗೆ ಹಂಚುವುದರಿಂದ ತುಷ್ಟಿಗುಣವನ್ನು ಗರಿಷ್ಟೀಕರಿಸಿಕೊಳ್ಳಬಹುದು. ಈ ಬಗೆಯ ಸಂಪತ್ತಿನ ವರ್ಗಾವಣೆಯಿಂದ ಸಂಪತ್ತನ್ನು ಕಳೆದುಕೊಂಡ ವ್ಯಕ್ತಿಯ ತುಷ್ಟಿಗುಣ ಕಡಿಮೆಯಾಗುವುದಿಲ್ಲ. ಈ ದೇಶದ ಶೋಷಿತರು ಸಾಮಾನ್ಯವಾಗಿ ಅಜ್ಞಾನವೇ ಹಡೆದಂತೆ ಇರುವವರು. ಆದ್ದರಿಂದ ಅವರು ತಮ್ಮ ದುಸ್ಥಿಗೆ ನಿಜಕ್ಕೂ ಶೋಷಣೆ ಮಾಡಿರುವವನನ್ನು ಬಿಟ್ಟು ದೇವರನ್ನೇ ಆರೋಪಿಸುತ್ತಾರೆ. ವಿಧಿಯ ಕೈವಾಡ ಎನ್ನುತ್ತಾರೆ. ಶೋಷಣೆ ಮಾಡಿದವನು ಪಾರಾಗುತ್ತಾನೆ. ಸುಖವಾಗಿರುತ್ತಾನೆ. ಮತ್ತಷ್ಟು ಭದ್ರವಾಗುತ್ತಾನೆ. ಶೋಷಿತರು ಮತ್ತಷ್ಟು ಶೋಷಣೆಗೆ ಈಡಾಗುತ್ತಾ ಅದೇ ಬದುಕಾಗುತ್ತಾ, ಕಾಲ ತಳ್ಳಬೇಕಾಗುತ್ತದೆ. ಇದರಿಂದ ಶೋಷಿತರು ತಮ್ಮ ನಿಜವಾದ ಶೋಷಕನನ್ನು ಗುರುತಿಸಿಕೊಳ್ಳದೆ ಹೋಗುವ ಸಂಭವ ಹೆಚ್ಚು. ಆಗ ಈ ಪರಿಸ್ಥಿತಿ ಶೋಷಕರಿಗೆ ಅನುಕೂಲವಾಗಿ ಪರಿಣಮಿಸುತ್ತದೆ. ಆದ್ದರಿಂದ ಸರ್ವಶಿಕ್ಷಣ ಅಭಿಯಾನ ಪ್ರಾರಂಭವಾಗಿ ಧಾರ್ಮಿಕ ವ್ಯವಸ್ಥೆ ಗೌಣವಾಗುವಂತೆ ಮಾಡುವುದು ಅವಶ್ಯವಾಗಿದೆ. ಶೋಷಣೆ ತಪ್ಪಿಸುವ ಹೊಸ ರಾಜಕೀಯ ಸ್ವರೂಪದ ಹುಟ್ಟುವಿಕೆಯಲ್ಲಿ ಶೋಷಿತರೇ

ಪ್ರಮುಖ ಪಾತ್ರವಾಗಬೇಕು. ಬಡಸಮುದಾಯವನ್ನು ಪ್ರತಿನಿಧಿಸುವ ಸಂಘಟನೆ, ಆ ಮುಖಾಂತರ ರೂಪುಗೊಳ್ಳುವ ನಾಯಕತ್ವಗಳು ಇಂಥ ಪಾತ್ರ ನಿರ್ವಹಣೆಯ ಪ್ರಮುಖ ಅಂಗ. ಒಟ್ಟಿನಲ್ಲಿ ಶೋಷಣೆಯನ್ನು ಮೆಟ್ಟುವ ಸಮಾಜದ ಸ್ವರೂಪಕ್ಕಾಗಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು.

ಸಮಾಜದಲ್ಲಿ ಪ್ರಭಾವಶಾಲಿಯಾಗಿರುವ ಸಮೂಹ ಮಾಧ್ಯಮಗಳು ಸಮಾನತೆಯನ್ನು ಸಾರುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ತನ್ಮೂಲಕ ಆರ್ಥಿಕ ಸಂಪಾದನೆಯನ್ನು ಸಮನಾಗಿ ಹಂಚಿಕೊಳ್ಳಲು ಸಿದ್ಧವಾಗಬೇಕು. ದಡ್ಡನೊಬ್ಬನನ್ನು, ದುರ್ಬಲನೊಬ್ಬನನ್ನು, ಅಸಂಘಟಿತನೊಬ್ಬನನ್ನು ಭೂಮಿಗೆ ಒಡೆಯನಾದ ದೇವರು ರಕ್ಷಿಸಲಾರ. ರಕ್ಷಣೆ ಮಾಡಿಕೊಳ್ಳುವವನಿಗೆ ತನ್ನತನ, ಅಂದರೆ ತನ್ನ ಶಕ್ತಿ ಮತ್ತು ವ್ಯಕ್ತಿತ್ವದ ಬಗ್ಗೆ ದೃಢವಾದ ನಂಬಿಕೆ ಇರಬೇಕು ತಮ್ಮನ್ನು ಸುಲಿಯುವವರನ್ನು ದೂರ ಇಡಬೇಕು. ಸಮಾಜದ ಕೆಳಸ್ಥರದಲ್ಲಿರುವ ದಲಿತರು ತಮ್ಮ ಮೇಲೆ ನಡೆಯುವ ದೌರ್ಜನ್ಯವನ್ನು ತೆಗೆದೊಗೆಯಲು ಶಕ್ತವಾದರೆ ಸಮಾಜದ ವಿಮೋಚನೆಗೆ ಕಾರಣನಾಗುವರು.

ಎಲ್ಲ ಜಾತಿಯಲ್ಲಿಯ ಬಡವರನ್ನು ಒಂದೆಡೆ ತರುವ ವ್ಯಾಪಕವಾದ ಕಾರ್ಯಕ್ರಮ ಜಾರಿಗೆ ತರಬೇಕು. ಅಂದರೆ ಜಾತಿ ಹೋರಾಟದ ಸ್ಥಾನವನ್ನು ವರ್ಗಹೋರಾಟ ಆಶ್ರಯಿಸಬೇಕು. ವರ್ಗಹೋರಾಟದಲ್ಲಿ ಎಲ್ಲ ಜಾತಿಯ ಬಡವರು ತಾವು ಒಂದೆಂಬ ಭಾವನೆಯಿಂದ ಒಂದು ನೆಲೆಗೆ ಬರಬೇಕು. ಈ ಹೋರಾಟ ಐತಿಹಾಸಿಕದ ಬೆಳವಣಿಗೆಯ ಮೂರ್ತರೂಪವಾಗುತ್ತದೆ. ಚರಿತ್ರೆಯಲ್ಲಿ ನಡೆದ ಜಾತಿಹೋರಾಟ ಸಹ ಆಂತರಂಗಿಕವಾಗಿ ವರ್ಗ ಹೋರಾಟವೇ ಆಗಿದೆ.

ಆಕರ ಗ್ರಂಥಗಳು

ಆಕರ ಗ್ರಂಥಗಳು

೧. ಅಮೃತ ಮತ್ತು ಗರುಡ, **ಡಿ.ಆರ್. ನಾಗರಾಜ್**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೩.

೨. ಐತಿಹಾಸಿಕ ಕಥನಗೀತೆಗಳು, ಸಂ. **ಡಾ. ಕೃಷ್ಣಮೂರ್ತಿ ಹನೂರು**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೬

೩. ಅಂಬೇಡ್ಕರೋತ್ತರ ದಲಿತ ಸಂಘರ್ಷ ದಾರಿ–ದಿಕ್ಕು, **ಆನಂದ ತೇಲ್‌ತುಂಬ್ಡೆ**, ಅನುವಾದ: ರಾಹು, ೨೦೦೯.

೪. ಕನ್ನಡ ಕಾದಂಬರಿಗಳಲ್ಲಿ ವರ್ಣ ಮತ್ತು ವರ್ಗ ಸಂಘರ್ಷ, **ಆರ್.ವಿ.ಭಂಡಾರಿ**, ಮಂಗಳೂರು ವಿಶ್ವವಿದ್ಯಾಲಯ, ಮಂಗಳಗಂಗೋತ್ರಿ, ೧೯೯೩.

೫. ಕನ್ನಡ ಜಾನಪದಸಾಹಿತ್ಯ, **ಬೆಟಗೇರಿ ಕೃಷ್ಣಶರ್ಮ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬.

೬. ಕನ್ನಡ ಲಾವಣಿಗಳು, **ಡಾ. ಶ್ರೀಕಂಠ ಕೂಡಿಗೆ**, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು, ೧೯೯೯.

೭. ಕನ್ನಡ ಸಾಹಿತ್ಯದಲ್ಲಿ ಪುರಾಣಪ್ರಜ್ಞೆ, **ಡಾ.ಕೆ.ಎಲ್.ಗೋಪಾಲಕೃಷ್ಣಯ್ಯ**, ಕನ್ನಡ ಸಾಹಿತ್ಯ–ಪರಿಷತ್ತು, ಬೆಂಗಳೂರು, ೧೯೮೮.

೮. ಕನ್ನಡಿಗರ ಬ್ರಿಟೀಷ್ ವಿರೋಧಿ ಸಶಸ್ತ್ರ ಬಂಡಾಯಗಳು, **ಡಾ.ಡಿ.ಎನ್. ಯೋಗೀಶ್ವರಪ್ಪ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೦.

೯. ಕರ್ನಾಟಕದ ಸಾಂಸ್ಕೃತಿಕ ಸಂಘರ್ಷ ಒಂದು ಅಧ್ಯಯನ, **ಡಾ. ಬಿ.ಎಸ್.ಗೀತಾ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೫.

೧೦. ಕರ್ನಾಟಕದ ಸೂಫಿಗಳು, **ರಹಮತ್ ತರೀಕೆರೆ**, ಕನ್ನಡ ವಿಶ್ವವಿದ್ಯಾಲಯ,ಹಂಪಿ, ೨೦೦೮.

೧೧. ಕರ್ನಾಟಕದಲ್ಲಿ ಐಡೆಂಟಿಟಿ ರಾಜಕೀಯ ರೈತ, ರೈತ ಹೋರಾಟ ಹಾಗೂ ಸಾಮಾಜಿಕ ಚಳುವಳಿ, **ಡಾ. ಮುಜಾಫರ್ ಅಸ್ಸಾದಿ**, ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್, ೨೦೦೯

೧೨. ಕಾರ್ಲ್‌ಮಾರ್ಕ್ಸ್ ಬದುಕು–ಬರಹ, **ಬಿ.ವಿ.ಕಕ್ಕಿಲ್ಲಾಯ**, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು, ೧೯೮೫.

೧೩. ಕೆಲವು ಲಾವಣಿಗಳು, ಸಂ.**ಎಲ್.ಆರ್.ಹೆಗಡೆ**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೭೩.

೧೪. ಕೆಳವರ್ಗದ ಪ್ರತಿಭಟನೆ ಸಬಾಲ್ಟರ್ನ್ ಚರಿತ್ರೆ, **ವಿಜಯ್ ಪೂಣಚ್ಚ ತಂಬಂಡ**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೧೫. ಗಿರಿಜನ ಕಾವ್ಯ, ಸಂ.**ಪ್ರೊ.ಕಾಳೇಗೌಡ ನಾಗವಾರ, ಪ್ರೊ. ಹಿ. ಚಿ. ಬೋರಲಿಂಗಯ್ಯ,** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೦.

೧೬. ಗೀಗೀ ಪದಗಳು (ಭಾಗ-೧), ಸಂ.**ಡಾ.ಮೃತ್ಯುಂಜಯ ಹೊರಕೇರಿ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೯.

೧೭. ಗೀಗೀ ಪದಗಳು (ಭಾಗ-೨), ಸಂ.**ಡಾ.ಮೃತ್ಯುಂಜಯ ಹೊರಕೇರಿ,** ಕನ್ನಡ ಮತ್ತು ಸಂಸ್ಕೃತಿಇಲಾಖೆ, ಬೆಂಗಳೂರು, ೨೦೦೯.

೧೮. ಚಾರಿತ್ರಿಕ ಜನಪದ ಕಥನ ಕಾವ್ಯಗಳು, ಸಂ. **ನಾಡೋಜ ಎಚ್.ಎಲ್. ನಾಗೇಗೌಡ,** ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು, ೨೦೦೮.

೧೯. ಚಾರಿತ್ರಿಕ ಲಾವಣಿಗಳು, ಸಂ. **ಡಾ.ಹರಿಶ್ಚಂದ್ರ ದಿಗ್ಸಂಗಿಕರ್,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೨೦. ಜನಪದ ಕಥನಗೀತೆಗಳಲ್ಲಿ ಮಹಿಳೆ ಒಂದು ಸಾಂಸ್ಕೃತಿಕ ಅಧ್ಯಯನ, **ಡಾ.ಎಂ.ಕೆ. ರುಕ್ಮಿಣಿ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೮.

೨೧. ಜನಪದ ಕಥನಗೀತ ಸಂಚಯ, **ಸಂ.ಚೆನ್ನಬಸವ ನಾವಲಗಿ, ಶಕುಂತಲ ಚೆನ್ನಬಸವ,** ಕನಕ ಸಾಹಿತ್ಯ ಪ್ರತಿಷ್ಠಾನ, ೨೦೦೨.

೨೨. ಜನಪದ ಸಾಹಿತ್ಯದಲ್ಲಿ ಸ್ವಾತಂತ್ರ್ಯದ ಪರಿಕಲ್ಪನೆಗಳು, **ಡಾ. ನಿಂಗಣ್ಣ ಸಣ್ಣಕ್ಕಿ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩.

೨೩. ಜನಪದ ಸಂಸ್ಕೃತಿ, **ಡಾ.ರಂಗಾರೆಡ್ಡಿ ಕೋಡಿರಾಂಪುರ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೦.

೨೪. ಜಾಗತೀಕರಣ ಒಂದು ಸಮಗ್ರ ಮಂಥನ, ಸಂ.**ಡಾ.ರಾಜೇಂದ್ರಚೆನ್ನಿ, ಎಸ್.ಸಿರಾಜ್ ಅಹಮದ್,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪.

೨೫. ಜಾತಿ ವಿಶ್ಲೇಷಣೆಯ ಸಮಸ್ಯೆ, **ಡಾ.ಬಿ.ಎಂ. ಪುಟ್ಟಯ್ಯ,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೨೬. ಜಾನಪದ: ಕೆಲವು ಅಧ್ಯಯನಗಳು, **ಡಾ.ಅಂಬಳಿಕೆ ಹಿರಿಯಣ್ಣ,** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೪.

೨೭. ಜಾನಪದ ವಿಹಾರ, **ಕ್ಯಾತನಹಳ್ಳಿ ರಾಮಣ್ಣ,** ದಿನಕರ ಪ್ರಕಾಶನ ಬೆಂಗಳೂರು, ೧೯೮೫.

೨೮. ಜಾನಪದ ಸಾಮಾಜಿಕ ಕಥನಗೀತೆಗಳು, ಸಂ.**ಡಾ.ಶಾಲಿನಿ ರಘುನಾಥ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೯

೨೯. ಜಾನಪದ ಸಾಮಾಜಿಕ ಕಥನಗೀತೆಗಳಲ್ಲಿ ದುಃಖಾಂತ ನಿರೂಪಣೆ, **ಡಾ. ದೇವೇಂದ್ರಕುಮಾರ ಪಿ. ಹಕಾರಿ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೫

೩೦. ಜಾನಪದ ಸ್ವರೂಪ, **ಹಾ.ಮಾ. ನಾಯಕ**, ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು ೧೯೭೧.

೩೧. ಟಿಪ್ಪು ಸುಲ್ತಾನ್, **ಬಿ.ಷೇಕ್ ಅಲಿ,** ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ.

೩೨. ಡಾ.ಬಿ.ಆರ್.ಅಂಬೇಡ್ಕರ ಅಸ್ಪೃಶ್ಯತೆಯ ವಿಮೋಚನೆ, **ಡಾ.ಜಿ.ಬಿ.ನಂದನ,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೬.

೩೩. ತ್ರಿಪದಿ ರಗಳೆ ಮತ್ತು ಜನಪದ ಸಾಹಿತ್ಯ, **ಕಾಳೇಗೌಡ ನಾಗವಾರ,** ಬೆಂಗಳೂರು ವಿಶ್ವವಿದ್ಯಾಲಯ, ೧೯೭೫.

೩೪. ದೈವದ ಎರಡು ಲಾವಣಿಗಳು, ಸಂ.**ನಿಂಗಣ್ಣ ಸಣ್ಣಕ್ಕಿ,** ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೫.

೩೫. ದೊಂಬಿದಾಸ, **ಕುಪ್ಪೆ ನಾಗರಾಜ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮.

೩೬. ಧೀರ ಟೀಪುವಿನ ಲಾವಣಿಗಳು, ಸಂ.**ಲಿಂಗದೇವರು ಹಳೆಮನೆ,** ವಿಸ್ಮಯ ಪ್ರಕಾಶನ, ಮೈಸೂರು, ೨೦೦೯.

೩೭. ನಾಡಪ್ರಭು ಕೆಂಪೇಗೌಡ, ಸಂ.**ಕರಾಕೃ,** ಜನಪದ ಅಕ್ಯಾಡೆಮಿ, ಬೆಂಗಳೂರು, ೧೯೮೬.

೩೮. ಪಿರಿಯಾ ಪಟ್ಟಣದ ಜಗಳ, ಸಂ. **ಡಿ.ಲಿಂಗಯ್ಯ,** ದಿನಕರ ಪ್ರಕಾಶನ, ಬೆಂಗಳೂರು, ೧೯೮೯.

೩೯. ಪೂರ್ವ ಕರ್ನಾಟಕದ ಪಾಳೆಯಗಾರರು ಒಂದು ಅಧ್ಯಯನ, **ಡಾ.ಸಿ.ಆರ್. ಶ್ಯಾಮಲ** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೮.

೪೦. ಪೌರಾಣಿಕ ಕಥನಗೀತೆಗಳು, ಸಂ.**ಅಂಬಳಿಕೆ ಹಿರಿಯಣ್ಣ,** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು,೨೦೦೬.

೪೧. ಪ್ರಾಚೀನ ಕನ್ನಡ ಕಾವ್ಯದಲ್ಲಿ ಮತ ಪ್ರಚಾರ ಮತ್ತು ಸಂಘರ್ಷ, **ಡಾ.ಎಂ.ಶಂಕರ,** ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೯.

೪೨. ಫ್ಲೀಟರು ಸಂಗ್ರಹಿಸಿದ ಲಾವಣಿಗಳು, (ಸಂ) **ಕ್ಯಾತನಹಳ್ಳಿ ರಾಮಣ್ಣ,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೯೧.

೪೩. ಬಸವಣ್ಣ ಮತ್ತು ಕಾರ್ಲ್‌ಮಾರ್ಕ್ಸ್, **ಪ್ರೊ.ಕೆ.ಎಸ್.ಪಾಟೀಲ,** ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ೨೦೧೧.

೪೪. ಬಹಿಷ್ಕೃತರ ಸಂಘರ್ಷ ಹಾಗೂ ಪರಿವರ್ತನೆ, **ದಾಸನೂರು ಕೂಸಣ್ಣ,** ಮಾತಂಗ ಪ್ರಕಾಶನ, ಮೈಸೂರು, ೧೯೯೯.

೪೫. ಭಾರತದಲ್ಲಿ ಸಾಮಾಜಿಕ ನ್ಯಾಯ ಹಾಗೂ ಡಾ. ಬಿ.ಆರ್. ಅಂಬೇಡ್ಕರ ಕೊಡುಗೆ, **ಪ್ರೊ.ಎಚ್.ವಿ. ನಾಗೇಶ್,** ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೯.

೪೬. ಭಾರತೀಯ ಸಮಾಜ ಮತ್ತು ದಲಿತರು, ಸಂ. **ಡಾ.ಎಸ್.ಚಿನ್ನಸ್ವಾಮಿ ಸೋಸಲೆ**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೪೭. ಮಧ್ಯಯುಗೀನ ಭಾರತ: ಅಂತ್ಯಜರ ತತ್ವಚಿಂತನೆ, ಇಂಗ್ಲೀಷ್ ಮೂಲ: **ಶಂಕರ್ ಮೊಕಾಶಿ ಪುಣೇಕರ್**, ಕನ್ನಡಕ್ಕೆ: **ಡಾ. ಬಂಜಗೆರೆ ಜಯಪ್ರಕಾಶ**, ಚಾರುಪ್ರಕಾಶನ, ೨೦೧೧.

೪೮. ಮಹಿಳೆ ಶೋಷಣೆ-ಸವಾಲುಗಳು, ಸಂ.**ಡಾ.ವಿಜಯಶ್ರೀ ಸಬರದ**, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೫.

೪೯. ಮಾರ್ಕ್ಸ್ ಎಂಗೆಲ್ಸ್, ಅನು.**ಕೆ.ಎಲ್.ಗೋಪಾಲಕೃಷ್ಣರಾವ್**, ಪ್ರಗತಿ ಪ್ರಕಾಶನ, ೧೯೮೦.

೫೦. ಮುಕರಿ ಮತ್ತು ಹೊಲೆಯರ ಪದಗಳು, (ಸಂ) **ಎಲ್.ಆರ್. ಹೆಗಡೆ**, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೯.

೫೧. ಮೌಖಿಕ ಕಥನ, **ಮೊಗಳ್ಳಿ ಗಣೇಶ**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೫೨. ಮೌಖಿಕ ಪರಂಪರೆ ಮತ್ತು ಚರಿತ್ರೆ, **ಡಾ.ಇಸ್ಮಾಯಿಲ್ ಜಬೀರ್ ಬಾವಾಜಿ**, ಮಾತಾ ಪ್ರಿಂಟರ್ಸ್, ಮೈಸೂರು, ೨೦೧೦

೫೩. ರೈತ ಚಳುವಳಿ ಸುಮ್ಮನೆ, **ಡಾ. ಹಿ. ಶಿ. ರಾಮಚಂದ್ರೇಗೌಡ**, ದಾರಿದೀಪ ಪ್ರಕಾಶನ, ಮೈಸೂರು,೨೦೧೦.

೫೪. ಲಾವಣಿ ಸವಾಲ್-ಜವಾಬ್ ಪದಗಳು, **ಡಾ. ಹರಿಶ್ಚಂದ್ರ ದಿಗ್ಸಂಗಿಕರ್**, ಪ್ರಸಾರಾಂಗ ಕನ್ನಡ- ವಿಶ್ವವಿದ್ಯಾಲಯ, ಹಂಪಿ, ೨೦೦೫.

೫೫. ಲಾವಣಿಸಾಹಿತ್ಯದಲ್ಲಿ ಸಂಗೊಳ್ಳಿ ರಾಯಣ್ಣ, **ಸಂ. ನಿಂಗಣ್ಣ ಸಣ್ಣಕ್ಕಿ**, ವಿದ್ಯಾನಿಧಿ ಪ್ರಕಾಶನ, ಗದಗ, ೧೯೯೭.

೫೬. ಲಾವಣಿ, **ಶ್ರೀರಾಮ ಇಟ್ಟಣ್ಣವರ, ಶ್ರೀಮತಿ ಸರೋಜ ಎಸ್. ಇಟ್ಟಣ್ಣವರ**, ಬೀಳಗಿ ೧೯೮೫.

೫೭. ಲಾವಣಿ ಹಾಡುಗಳು, (ಸಂ) **ಶಂಕರ ಶಿ. ಕುಂಬಾರ**, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೬.

೫೮. ವಚನ ಸಾಹಿತ್ಯದಲ್ಲಿ ಕೆಳವರ್ಗದ ಆಶಯ ಮತ್ತು ಅಭಿವ್ಯಕ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೫೯. ವರ್ಣದಿಂದ ವರ್ಗದ ಕಡೆಗೆ, **ಆರ್.ವಿ.ಭಂಡಾರಿ**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩

೬೦. ವಿಜಾಪುರ ಜಿಲ್ಲೆಯ ಲಾವಣಿಮೇಳಗಳು, **ಡಾ. ನಿಜಲಿಂಗಪ್ಪ ಮಟ್ಟಿಹಾಳ**, ಬೆಳಗು ಪ್ರಕಾಶನ, ಬಸವನ ಬಾಗೇವಾಡಿ, ೨೦೦೧

೬೧. ವೇದಗಳಲ್ಲಿ ಜನಸಾಮಾನ್ಯರು, **ಬಿ.ವಿ.ವೀರಭದ್ರಪ್ಪ**, ನವಕರ್ನಾಟಕ ಪ್ರಕಾಶನ, ೨೦೦೩.

೬೨. ಶೃಂಗಾರ ಲಾವಣಿಗಳು, ಸಂ.**ಡಾ.ಬಿರಾದಾರ**, ಜ್ಯೋತಿ ಪ್ರಕಾಶನ, ಧಾರವಾಡ, ೧೯೯೮.

೬೩. ಸಮಕಾಲೀನ ಭಾರತ, ಕ್ರಿಯಾ, ಬೆಂಗಳೂರು, ೨೦೧೧.

೬೪. ಸಮಾಜಶಾಸ್ತ್ರ ಕೈಪಿಡಿ, ಮೂಲ: ವಿಲಿಯಂ ಇ. ಆಗ್ಬರ್ನ್, ಮೆಯರ್ ಎಫ್. ನಿಮ್ಕಾಫ್ ಕನ್ನಡಕ್ಕೆ: **ಡಿ.ಎಚ್. ಮಲ್ಲಿನಾಥಯ್ಯ,** ೧೯೮೪.

೬೫. ಸಾತು ಕ್ಯಾಮಣ್ಣನ ಲಾವಣಿಗಳು, ಸಂ. **ಡಾ. ನಿಂಗಣ್ಣ ಸಣ್ಣಕ್ಕಿ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೪.

೬೬. ಸಾಮಾಜಿಕ ಬದಲಾವಣೆ ಮತ್ತು ಪರಿಣಾಮಗಳು, **ಡಾ.ಕೋಮಲಾ ಎಮ್.ಭಟ್ಟ** ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ,ಧಾರವಾಡ, ೨೦೦೯.

೬೭. ಸಾಹಿತ್ಯ ಸಂವಾದ-೨, ಸಂ. **ಬಸವರಾಜಕಲ್ಗುಡಿ,** ಬೆಂಗಳೂರು ವಿಶ್ವವಿದ್ಯಾಲಯ, ೨೦೦೮.

೬೮. ಸುವರ್ಣ ಜನಪದ ಕಾವ್ಯ, ಸಂ.**ಎಸ್.ಜಿ.ಸಿದ್ಧರಾಮಯ್ಯ, ಕೆ.ಆರ್.ಸಂಧ್ಯಾರೆಡ್ಡಿ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೬೯. ಸ್ವಾತಂತ್ರ್ಯ ಸಮರದ ಲಾವಣಿಗಳು, ಸಂ.**ಎನ್.ವಿಷಕಂಠರಾವ್,** ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು, ೨೦೦೮.

೭೦. ಸ್ವಾತಂತ್ರ್ಯ ಸಂಗ್ರಾಮದ ಲಾವಣಿಗಳು, ಸಂ.**ಬಿ. ನೀಲಕಂಠಯ್ಯ,** ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು, ೨೦೦೮.

೭೧. ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ, **ಬರಗೂರು ರಾಮಚಂದ್ರಪ್ಪ,** ಅಂಕಿತ ಪುಸ್ತಕ, ಬೆಂಗಳೂರು, ೨೦೦೫.

೭೨. ಹರದೇಶಿ ನಾಗೇಶಿ, ಸಂ **ಬಸವರಾಜ ಪೋಲೀಸ ಪಾಟೀಲ,** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೬.

೭೩. ಹರದೇಶಿ-ನಾಗೇಶಿ ಕಲೆ ಮತ್ತು ಕಲಾವಿದರು ಲಿಂಗಸಂಬಂಧಿ ಅದ್ಯಯನ, **ಡಾ.ಶೈಲಜ ಹಿರೇಮಠ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧.

೭೪. ಹಳೆಯ ಲಾವಣಿಗಳು, **ಡಾ.ವೀರೇಶ ಬಡಿಗೇರ,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೭೫. ಹಳ್ಳೇರ ಜಾನಪದ ಸಾಹಿತ್ಯ, **ಡಾ.ಎನ್.ಆರ್. ನಾಯಕ್,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೦.

೭೬. ಹುಲಕುಂದದ ಲಾವಣಿ ಸಂಪ್ರದಾಯ ಒಂದು ಅಧ್ಯಯನ, **ಡಾ.ಬಿ.ಎಸ್.ಭಜಂತ್ರಿ,** ಚೈತನ್ಯ ಪ್ರಕಾಶನ, ಪಂಚಗಾಂವ, ೨೦೦೨.

೭೭. ಹೈದರಾಬಾದ ರಜಾಕಾರ ಲಾವಣಿ, ಸಂ. **ನಲವಡಿ ಶ್ರೀಕಂಠಶಾಸ್ತ್ರಿ,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮.

೭೮. Caste Census Towards an Inclusive India, S.Japhet Chandan Gowda, CSSEIP, NLSIU, 2010.

೭೯. Dr.Ambedkar, Acritical Study by W.N. Kuber, Peoples Publishing House, New Delhi, 1979.

೮೦. The British Paramountery and Indian Renaissance II, BY: R.C. Mujumdar, Bharatiya Vidya Bhavan Bombay, 1981.

೮೧. History of Freedom Movement Vol. II, By: Tarachand, Pub: Ministry of Information and Broad Casting Govt.of India, Patiale House, New Delhi, 1974.